ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹಮಾಲಿಕೆ

# ಆರ್. ಗುಂಡೂರಾವ್

ಈಶ್ವರ ದೈತೋಟ

923.209 54 DAI
KLS - EL
C-6141
KLS - EL

ಪ್ರಕಾಶನ:

ಗ್ರಂಥಾಲಯ ಉಪ ಸಮಿತಿ

ಕರ್ನಾಟಕ ವಿಧಾನ ಸಭೆ ಸಚಿವಾಲಯ

ವಿಧಾನಸೌಧ, ಬೆಂಗಳೂರು.

R. GUNDU RAO: Prathibhavantha samsadiya Patugala Baduku Baraha Malike (Eminent Parliamentarian Series) Written by Eshwar Daithota published by Karnataka Legislative Assembly Secretariat, Vidhana Soudha, Bangalore-01.

Pages - 221 +7

Rupees - 20/-

C. The Secretary,
Karnataka Legislative Assembly Secretariat,
Vidhana Soudha,
Bangalore-01.

128.2954 DAI

STOCK No. C-6141 22/08/03

First Edition: December, 2002.

Number of Copies: 1,500

Printed and Designed by: Government Printing Press, Bangalore-01.

ಆರ್. ಗುಂಡೂರಾವ್: ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹಮಾಲಿಕೆ ಮೂಲ ಕೃತಿ: ಈಶ್ವರ ದೈತ್ತೋಟ, ಪ್ರಕಟಣೆ: ಕರ್ನಾಟಕ ವಿಧಾನಸಭೆ ಸಚಿವಾಲಯ, ವಿಧಾನ ಸೌಧ, ಬೆಂಗಳೂರು.

ಪುಟ ಸಂಖ್ಯೆ: 221 +7

ಬೆಲೆ: ರೂ: 20/-

C. ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು.

ಮೊದಲನೆ ಮುದ್ರಣ: ಡಿಸೆಂಬರ್ 2002

ಪ್ರತಿಗಳು: 1,500

ಮುಖ ಪುಟ ವಿನ್ಯಾಸ ಮತ್ತು ಮುದ್ರಣ: ಸರ್ಕಾರಿ ಮುದ್ರಣಾಲಯ,
ಬೆಂಗಳೂರು-560 001

# ಪೀಠಿಕೆ

ದೇಶದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಈ ದೇಶಕ್ಕಾಗಿ ದುಡಿದ ಅಗ್ರಮಾನ್ಯ ಸಂಸದೀಯ ಪಟುಗಳಾಗಿ ಕೊಡುಗೆಯನ್ನು ನೀಡಿರುವ ಮಹನೀಯರನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಈಗಾಗಲೇ ಲೋಕಸಭಾ ಕಾರ್ಯಾಲಯದವರು ಇಂತಹ ಪ್ರತಿಭಾವಂತ ಸಂಸದೀಯ ಪಟುಗಳ ಬಗ್ಗೆ ಅನೇಕ ಕಿರುಹೊತ್ತಿಗೆಗಳನ್ನು ಹಿಂದಿ ಹಾಗೂ ಆಂಗ್ಲ ಭಾಷೆಯಲ್ಲಿ ಹೊರ ತಂದಿರುತ್ತಾರೆ. ಅವುಗಳಲ್ಲಿ ರಾಂಮನೋಹರ ಲೋಹಿಯಾ, ಡಾ॥ ಬಿ. ಆರ್. ಅಂಬೇಡ್ಕರ್, ಡಾ॥ ಶಾಂಪ್ರಸಾದ್ ಮುಖರ್ಜಿ, ಡಾ॥ ರಾಜೇಂದ್ರ ಪ್ರಸಾದ್ ಮೊದಲಾದ ಗಣ್ಯರ ಕಿರುಹೊತ್ತಿಗೆಯನ್ನು ನಾವು ಕನ್ನಡದಲ್ಲಿ ಹೊರತಂದಿರುವ ಸಂತೋಷಕರ ವಿಷಯವನ್ನು ಉಲ್ಲೇಖಿಸಬಯಸುತ್ತೇವೆ.

ಹಾಗೆಯೇ, ರಾಜ್ಯದ ಸಂಸದೀಯ ಪಟುಗಳಾದ ಅನೇಕ ಮಹನೀಯರ ಕುರಿತು ಕಿರುಹೊತ್ತಿಗೆಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಯೋಜನೆಯನ್ನು ಕರ್ನಾಟಕ ವಿಧಾನ ಮಂಡಲವು ಹಮ್ಮಿಕೊಂಡಿದ್ದು, ಈ ಕಾರ್ಯವನ್ನು ವಿಧಾನ ಸಭೆಯ ಸದಸ್ಯರಾದ ಶ್ರೀ ಬಿ.ಬಿ. ಶಿವಪ್ಪನವರ ಅಧ್ಯಕ್ಷತೆಯಲ್ಲಿ ರಚಿತವಾದ ವಿಧಾನ ಮಂಡಲದ ಗ್ರಂಥಾಲಯ ಉಪ ಸಮಿತಿಗೆ ವಹಿಸಲಾಗಿತ್ತು. ಈ ಉಪ ಸಮಿತಿಯು ಕಾರ್ಯ ಪ್ರವೃತ್ತವಾಗಿ ರಾಜ್ಯದ ವಿಶ್ವವಿದ್ಯಾಲಯಗಳ ವಿದ್ವಾಂಸರ ಸಹಕಾರದಿಂದ ಈ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಿತು.

ಈ ಪ್ರತಿಭಾವಂತ ಸಂಸದೀಯ ಪಟುಗಳ ಮಾಲಿಕೆಯಲ್ಲಿ ಈಗಾಗಲೇ ಶ್ರೀ ಕೆಂಗಲ್ ಹನುಮಂತಯ್ಯ, ಶ್ರೀ ಶಾಂತವೇರಿಗೋಪಾಲಗೌಡ, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಕೆ.ಸಿ. ರೆಡ್ಡಿ, ಶ್ರೀ ದೇವರಾಜಅರಸು ಹಾಗೂ ಇನ್ನೂ ಹಲವು ಗಣ್ಯರ ಬಗೆಗಿನ ಪುಸ್ತಕಗಳನ್ನು ಹೊರತರಲಾಗಿದೆ.

ಈಗ ಶ್ರೀ ಈಶ್ವರ ದೈ ತೋಟ, ಪತ್ರಕರ್ತರು ಇವರು ರಚಿಸಿರುವ ರಾಜ್ಯದ ಹಿರಿಯ ಸಂಸದೀಯ ಪಟುವಾಗಿದ್ದ ಶ್ರೀ ಆರ್. ಗುಂಡೂರಾವ್ ಇವರ ಬಗೆಗಿನ ಪುಸ್ತಕವನ್ನು ತಮ್ಮ ಮುಂದಿಡಲು ಹೆಮ್ಮೆ ಎನ್ನಿಸುತ್ತದೆ. ಈ ಪುಸ್ತಕವನ್ನು ರಚಿಸಿದ ಲೇಖಕರಿಗೆ ಹಾಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸರ್ಕಾರಿ ಮುದ್ರಣಾಲಯದ ನಿರ್ದೇಶಕರಿಗೂ ಹಾಗೂ ಉಪ ಸಮಿತಿಯ ಸದಸ್ಯರುಗಳಿಗೂ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ರಾಜ್ಯದ ಪ್ರತಿಭಾವಂತ ಸಂಸದೀಯ ಪಟುಗಳ ಬಗೆಗಿನ ಈ ಕಿರುಹೊತ್ತಿಗೆಯು ಮಾನ್ಯ ಸದಸ್ಯರುಗಳಿಗೆ ಮತ್ತು ಸಂಶೋಧಕರಿಗೆ ಹಾಗೂ ಸಾಮಾನ್ಯ ಓದುಗರಿಗೆ ಸಂಸದೀಯ ವಿಷಯಗಳಲ್ಲಿ ಹೆಚ್ಚಿನ ಅನುಭವ ನೀಡುತ್ತವೆ ಮತ್ತು ಉಪಯುಕ್ತವಾಗುತ್ತವೆಂದು ಭಾವಿಸುತ್ತೇವೆ.

ಬಿ.ಎಲ್. ಶಂಕರ್
*ಸಭಾಪತಿ*
ಕರ್ನಾಟಕ ವಿಧಾನ ಪರಿಷತ್ತು

ಎಂ. ವಿ. ವೆಂಕಟಪ್ಪ
*ಸಭಾಧ್ಯಕ್ಷರು*
ಕರ್ನಾಟಕ ವಿಧಾನ ಸಭೆ

# ಲೇಖಕರ ಮಾತು

ದಿ|| ಆರ್. ಗುಂಡೂರಾವ್ ಕರ್ನಾಟಕದ ಅತ್ಯಂತ ಕಿರಿಯ ವಯಸ್ಸಿನ ಮುಖ್ಯಮಂತ್ರಿಗಳಾಗಿದ್ದವರು. ಅಬ್ಬರದ ಆಡಳಿತದೊಂದಿಗೆ ಸಮಯ ಪರಿಪಾಲನೆಗೆ ಮನ್ನಣೆ ಇತ್ತವರು. ಎರಡು ದಶಕಗಳ ಹಿಂದೆ ರಾಜ್ಯಾಡಳಿತದಲ್ಲಿ ಅವರು ಅಳವಡಿಸಿಕೊಂಡ ಹಲವು ಕ್ರಮಗಳು, ಇಂದು ಮಹತ್ವಪೂರ್ಣ ಎನಿಸಿಕೊಳ್ಳುತ್ತವೆ.

ಅವಸರದಲ್ಲಿಯೇ ನಮ್ಮನ್ನು ಬಿಟ್ಟು ದೂರ ತೆರಳಿದ ಅವರ ವ್ಯಕ್ತಿತ್ವದ ಮೋಡಿಯಿಂದ ಆಕರ್ಷಣೆಗೊಳಗಾದವರಲ್ಲಿ ನಾನೂ ಒಬ್ಬ. ಅವರು ಕಿರಿಯ ಮಂತ್ರಿಯಾಗಿದ್ದ ಕಾಲದಿಂದ ಮುಖ್ಯಮಂತ್ರಿ ಗದ್ದುಗೆಗೇರಿ, ಆ ಬಳಿಕ ಅಧಿಕಾರ ಕಳೆದುಕೊಂಡು ರಾಜಕೀಯದಲ್ಲಿ ಏಕಾಂಗಿಯಾಗಿದ್ದ ಕಾಲದವರೆಗೂ ಪತ್ರಕರ್ತನಾಗಿ ನನಗೆ ಅವರ ಸಂಪರ್ಕವಿತ್ತು.

ಉದಯವಾಣಿ ಪತ್ರಿಕೆಯ ಸಂಪಾದಕನಾಗಿ, ಬೆಂಗಳೂರು ಆವೃತ್ತಿಯ ಪ್ರಾರಂಭೋತ್ಸವಕ್ಕೆ ಆಹ್ವಾನಿಸಲು ತೆರಳಿದ್ದಾಗ ಅವರು “ನೋಡಿ, ನಾನು ಬರೋದು ಮಾಜಿ ಮುಖ್ಯಮಂತ್ರಿಯಾಗಿ; ಸುಮ್ಮನೆಯಲ್ಲ, ಆ ತರಹದಲ್ಲಿ ಕಾರ್ಯಕ್ರಮ ಇರಬೇಕು” ಎಂದಿದ್ದರು. ಕೊಟ್ಟ ಮಾತಿನಂತೆ ಸಮಾರಂಭಕ್ಕೆ ಬಂದು ಶುಭ ಹಾರೈಸಿದರು.

ಪರಿಣಿತ ಚಿಕಿತ್ಸೆಗಾಗಿ ಲಂಡನ್‌ಗೆ ತೆರಳುವ ಮುನ್ನಾದಿನಗಳಲ್ಲಿ ಅವರ ಮನೆಗೆ ತೆರಳಿ ಕೆಲವು ಗಂಟೆಗಳನ್ನು ಕಳೆದು ಬಂದೆ.

ಆ ಕೊನೆಯ ಭೇಟಿ ಸಂದರ್ಭದಲ್ಲಿ ಅವರು “ನಾನು ಯಾರಿಗೂ ಹೆದರೋದಿಲ್ಲ. ಸಾವು ಕೂಡಾ ನನ್ನನ್ನು ಕರೆದೊಯ್ಯಲು ಕಳ್ಳನಂತೆ ಕತ್ತಲಲ್ಲಿ ಬರಬೇಕು” ಎಂದು ಲೋಕಾಭಿರಾಮವಾಗಿ ನುಡಿದಿದ್ದರು. ಕೊನೆಗೂ ಸಾವು ಅದೇ ರೀತಿ ಸೂರ್ಯೋದಯದ ಮುಂಚಿನ ಕಗ್ಗತ್ತಲಿನ ವೇಳೆಯಲ್ಲಿ ಅವರನ್ನು ಕರೆದೊಯ್ಯಿತು.

ತುಷಾರಕ್ಕಾಗಿ ಅವರು ಮತ್ತು ನನ್ನ ನಡುವೆ ನಡೆದ ಕೊನೆಯ ಮಾತುಕತೆಯ ತುಣುಕೊಂದು ಹೀಗಿತ್ತು.

ಏನ್ರೀ ನಾನು ಮುಖ್ಯಮಂತ್ರಿಯಾಗಿದ್ದಾಗ ನೀವು ಯಾವ ಕೆಲಸಕ್ಕೂ ಬಂದಿರಲಿಲ್ಲ. ಎಲ್ಲರೂ ಬರ್ತಾ ಇದ್ರು. ಈಗ ಲಂಡನ್‌ಗೆ ಹೋಗಿ ಗುಣವಾಗಿ ಬಂದು, ಮತ್ತೆ ನೋಡಿ, ನಾನು ಮುಖ್ಯಮಂತ್ರಿಯಾಗ್ತೇನೆ. ಆಗ ನೀವು ಏನು ಕೇಳ್ತೀರಾ, ಅದನ್ನು ಮಾಡಿಕೊಡುತ್ತೇನೆ.

ನಿಜ, ಆಗ ಕೇಳಿಲ್ಲ. ಈಗಲೇ ಕೇಳ್ತೀನಿ.

ಏನು ಹೇಳಿ

ನೀವು ಮತ್ತೆ ಮುಖ್ಯಮಂತ್ರಿಯಾದಾಗ ನಿಮ್ಮ ಬಗ್ಗೆ ಪುಸ್ತಕ ಬರೆಯಲು ನನಗೊಂದು ಅವಕಾಶ ಮಾಡಿಕೊಡಬೇಕು.

ಹಹ್ಹಾ ... ಅವರ ಎಂದಿನ ನಗೆ ಚಿಮ್ಮಿತು.

ಲಂಡನ್‌ನಿಂದ ಗುಂಡೂರಾವ್ ದಿವಂಗತರಾಗಿ ಬಂದರು. ಸುಮಾರು ಒಂದು ದಶಕವಾಗುವಷ್ಟರಲ್ಲಿ ಕರ್ನಾಟಕ ವಿಧಾನಮಂಡಲದಿಂದ ಪ್ರತಿಭಾವಂತ ಸಂಸದೀಯ ಪಟು ಮಾಲಿಕೆಯಲ್ಲಿ ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾಯರ ಸಾಧನೆಯನ್ನು ದಾಖಲಿಸುವ ಸದಾವಕಾಶ ನನಗೆ ಬಂತು.

ಈ ಹೊಣೆಯನ್ನು ನನಗೆ ನಿರ್ವಹಿಸಲು ಕಾರಣರಾದ ವಿಧಾನ ಮಂಡಲ ಮುಖ್ಯಸ್ಥರುಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಈಶ್ವರ ದೈ ತೋಟ

# ಪರಿವಿಡಿ

## ಅಧ್ಯಾಯಗಳು

### ಭಾಗ - 1

ಪುಟ ಸಂಖ್ಯೆ


1. ವ್ಯಕ್ತಿ ಪರಿಚಯ 2


### ಭಾಗ - 2

### ಶಾಸನ ಸಭೆಯಲ್ಲಿ ಆರ್. ಗುಂಡೂರಾವ್


1. 1972-73ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ 11
2. ಬೇಡಿಕೆಗಳ ಮೇಲಿನ ಚರ್ಚೆಗೆ ವಾರ್ತಾ ಸಚಿವರಾಗಿ ನೀಡಿರುವ ಉತ್ತರ .................................. 15
3. ಚಿತ್ರಮಂದಿರಗಳ ರಾಷ್ಟ್ರೀಕರಣ ಕುರಿತ ಖಾಸಗಿ ನಿರ್ಣಯಕ್ಕೆ ವಾರ್ತಾ ಸಚಿವರಾಗಿ ನೀಡಿದ ಉತ್ತರ .................. 25
4. 1977-78ನೇ ಸಾಲಿನ ಬೇಡಿಕೆ ಮೇಲಿನ ಚರ್ಚೆ ......... 31
5. 1978-79ನೇ ಸಾಲಿನ ಬೇಡಿಕೆ ಮೇಲಿನ ಚರ್ಚೆ ......... 41
6. ಕಾಂಗ್ರೆಸ್ ಸರ್ಕಾರದ ಸಿಂಧುತ್ವದ ಬಗ್ಗೆ ನಡೆದ ಚರ್ಚೆ .... 61
7. ಲೋಕನಾಯಕನಿಗೆ ಶ್ರದ್ಧಾಂಜಲಿ ....................... 75
8. ಬೇಡಿಕೆಗಳ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯಾಗಿ ..... ನೀಡಿದ ಉತ್ತರ 80
9. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ ...................................... 94
10. ಕಳ್ಳಭಟ್ಟಿ ದುರಂತದ ಕುರಿತು ನಡೆದ ಚರ್ಚೆಗೆ ಮುಖ್ಯಮಂತ್ರಿಗಳಾಗಿ ನೀಡಿದ ಉತ್ತರ .................. 115
11. ಪ್ರತಿಪಕ್ಷ ಇಲ್ಲದ ಶಾಸನ ಸಭೆಯಲ್ಲಿ ಮಾಡಿದ ಭಾಷಣ 129
12. ರಾಜಕೀಯ ಗುರುವಿಗೆ ಅಂತಿಮ ನಮನ ................. 147
13. ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯಾಗಿ ನೀಡಿದ ಉತ್ತರ .................. 155

## ಭಾಗ - 3

14. ಸಂಸತ್ ಸದಸ್ಯರಾಗಿ ಗುಂಡೂರಾವ್ .................... 185

## ಭಾಗ - 4

## ಗಣ್ಯರ ದೃಷ್ಟಿಯಲ್ಲಿ ಆರ್. ಗುಂಡೂರಾವ್

1. ವಿಧಾನಸಭೆಯಲ್ಲಿ ಗಣ್ಯರು ಸಲ್ಲಿಸಿದ ಶ್ರದ್ಧಾಂಜಲಿ ......... 187

2. ವಿಧಾನ ಪರಿಷತ್ತಿನಲ್ಲಿ ಗಣ್ಯರು ಸಲ್ಲಿಸಿದ ಶ್ರದ್ಧಾಂಜಲಿ ..... 205

# ಭಾಗ - 1

## ವ್ಯಕ್ತಿ ಪರಿಚಯ

## ವ್ಯಕ್ತಿ ಪರಿಚಯ

ರಾಜಕೀಯದಲ್ಲಿ ಇನ್ನೂ ಪೂರ್ತಿ ಅನುಭವ ಆಗಿಲ್ಲ ಎಂದು ಪರಿಗಣಿಸುವ ವಯಸ್ಸಿಗೇ, ಕರ್ನಾಟಕದ ಮುಖ್ಯಮಂತ್ರಿ ಸ್ಥಾನದ ಹೊಣೆಗಾರಿಕೆ ಹೊತ್ತವರು ಆರ್. ಗುಂಡೂರಾವ್. ಕೊಡಗಿನಲ್ಲಿ ಹುಟ್ಟಿ ಬೆಳೆದು, ಬೆಂಗಳೂರನ್ನು ತನ್ನ ಕಾರ್ಯಕ್ಷೇತ್ರ ಮಾಡಿಕೊಂಡ ಅವರು 1981 ಜನವರಿ 12 ರಿಂದ ಒಂದು ಸಾವಿರ ದಿನಗಳ ಕಾಲ ವಿಧಾನಸೌಧದಿಂದ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿದ್ದರು.

ಗುಂಡೂರಾವ್ ಕಣ್ಮರೆಯಾಗಿದ್ದರೂ ವಿಶಿಷ್ಟ ವರ್ಣರಂಜಿತ ವ್ಯಕ್ತಿತ್ವದ ಅವರ ಛಾಪು ರಾಜ್ಯ ರಾಜಕೀಯದಲ್ಲಿ ಮತ್ತು ಆಡಳಿತದಲ್ಲಿ ಅಚ್ಚೊತ್ತಿದೆ. ಭರ್ಜರಿ ದೇಹಿಯಾದರೂ ಕ್ಷಣಾರ್ಧದಲ್ಲಿ ಕರಗುವ ಹೃದಯದ ಅವರ ವ್ಯಕ್ತಿತ್ವದ ನೆನಪು ಜನಮನದಲ್ಲಿ ಹಸಿರಾಗಿದೆ.

ಸಹ್ಯಾದ್ರಿ ಶ್ರೇಣಿಯ ದಕ್ಷಿಣ ತುದಿಯಲ್ಲಿ, ಕೇರಳ ರಾಜ್ಯಕ್ಕೆ ಹೊಂದಿಕೊಂಡಂತಿರುವ ಪ್ರಕೃತಿ ಸಂಪತ್ಭರಿತ ಪುಟ್ಟಜಿಲ್ಲೆ ಕೊಡಗಿನ ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರದಲ್ಲಿ 1937ರ ಏಪ್ರಿಲ್ 8 ರಂದು ಬಡ ಬ್ರಾಹ್ಮಣ ಕುಟುಂಬದಲ್ಲಿ ಗುಂಡೂರಾವ್ ಜನಿಸಿದರು. ತಂದೆ ಕೆ. ರಾಮರಾವ್ ಸರಳ, ಸಜ್ಜನಿಕೆ ಮತ್ತು ಪ್ರಾಮಾಣಿಕತೆಗೆ ಗುರುತಿಸಲ್ಪಟ್ಟವರು; ತಾಯಿ ಚಿನ್ನಮ್ಮ. ಧೈವಭಕ್ತಿ, ಸಂಪ್ರದಾಯ ಶರಣ ತಂದೆತಾಯಂದಿರಿಗೆ ತಮ್ಮ ಪುತ್ರ ಗುಂಡ ಮುಂದೊಂದು ದಿನ ದೊಡ್ಡ ಅಧಿಕಾರ ಸ್ಥಾನದಲ್ಲಿ ಮೆರೆಯಲಿದ್ದಾನೆ ಎಂಬ ಜಾತಕ ಫಲದಲ್ಲಿ ಅಪಾರ ನಂಬಿಕೆಯಿತ್ತು.

ಅದೃಷ್ಟದ ಆಟ ಹಾಗೂ ಸ್ವಪ್ರಯತ್ನದಿಂದ ಕರ್ನಾಟಕದ ಅತ್ಯುನ್ನತ ಪದವಿಗೆ ಏರಿ, ಉತ್ತಮ ಸಂಸದೀಯ ಪಟು, ಮುಂದಾಲೋಚನೆಯ ಆಡಳಿತಗಾರ ಎಂದೆಲ್ಲಾ ಹೆಸರು ಮಾಡಿದವರು ಗುಂಡೂರಾವ್. ಇಂಟರ್‌ವರೆಗೆ ಓದಿ ಔಪಚಾರಿಕ ಶಿಕ್ಷಣಕ್ಕೆ ಶರಣು ಹೊಡೆದ ಯುವಕ ಸಾರ್ವಜನಿಕ ಬದುಕನ್ನೇ ತಮ್ಮ ಜೀವನ ಪಾಠಶಾಲೆಯನ್ನಾಗಿ ಪರಿವರ್ತಿಸಿಕೊಂಡರು. ಮೊದಲು ಪ್ರವೇಶಿಸಿದ್ದು ಸಹಕಾರ ಕ್ಷೇತ್ರವಾದರೂ ಆಸಕ್ತಿ ಮತ್ತು ಪ್ರಭಾವ ಅವರನ್ನು ರಾಜಕೀಯಕ್ಕೆ ಎಳೆದು ತಂದಿತು. ಮುಂದೆ ದೇವರಾಜ್ ಅರಸ್ ಹಾಗೂ ಇಂದಿರಾ ಗಾಂಧಿಯವರನ್ನು ತಮ್ಮ ರಾಜಕೀಯ ಮಾರ್ಗದರ್ಶಕರೆಂದು ಸ್ವತಃ ಗುಂಡೂರಾಯರೇ ಹೇಳಿಕೊಂಡಿದ್ದರೂ, ರಾಜಕೀಯದ ಓನಾಮಕ್ಕೆ ಯಾವುದೇ ಗುರುಗಳನ್ನು 24ರ ಹುರಿಮೀಸೆ ತರುಣ ಕಾದಿರಲಿಲ್ಲ. ಮಾರ್ಗದರ್ಶನ ಇಲ್ಲವೆಂದು ತಡವರಿಸಲಿಲ್ಲ. ತಮ್ಮದೇ ಆದ "ಗುಂಡೂರಾವ್ ಪಾರ್ಟಿ" ರಚಿಸಿಕೊಂಡು ಕುಶಾಲನಗರ ಪುರಸಭೆ ಚುನಾವಣೆಗೆ ಯುವ ಅಭ್ಯರ್ಥಿಗಳನ್ನು, ಅವಿಭಕ್ತ ಕಾಂಗ್ರೆಸ್ಸಿನ ವಿರುದ್ಧ ಕಣಕ್ಕಿಳಿಸಿ, ಅಧಿಕಾರ ಗ್ರಹಣ ಮಾಡಿದರು. ಭಯವೆಂಬುದನ್ನರಿಯದ ಈ ತರುಣನ ಸಾಮರ್ಥ್ಯ ಗುರುತಿಸದೆ ಕಾಂಗ್ರೆಸ್ ಪಕ್ಷ ಅವರನ್ನು ತನ್ನೆಡೆಗೆ ಸೆಳೆಯಿತು. 1965ರಲ್ಲಿ ಗುಂಡೂರಾವ್ ಕೊಡಗು ಜಿಲ್ಲೆ ಕಾಂಗ್ರೆಸ್ ಸದಸ್ಯರಾದರು.

ಮುಂದಿನ ಎರಡು ದಶಕಗಳ ಕಾಲ, ಎಳವೆಯಲ್ಲೇ ಮೊಳೆದ, ಮುನ್ನುಗ್ಗು ನಾಯಕತ್ವ ಗುಣ ಅವರನ್ನು ಮೆರೆಸಿತು.

ಕೊಡಗು ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯದರ್ಶಿಯಾದ ಬಳಿಕ, ಹೊಸದಿಲ್ಲಿಯಲ್ಲಿ ತರಬೇತಿ ಶಿಬಿರ ಮತ್ತು ಅಖಿಲ ಭಾರತ ಯುವ ಕಾಂಗ್ರೆಸ್ಸಿನ ಸಮ್ಮೇಳನದಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಆ ಬಳಿಕ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಅಧ್ಯಕ್ಷರಾದರು, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸದಸ್ಯರೂ ಆದರು. ಕಾರ್ಮಿಕರಂಗದಲ್ಲಿಯೂ ಕೈಯಾಡಿಸಿ ದಕ್ಷಿಣ ಭಾರತ ಎಸ್ಟೇಟ್ ಕಾರ್ಮಿಕರ ಸಂಘದ ಕೊಡಗು ಶಾಖೆಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು. 1969ರಲ್ಲಿ ಬೆಂಗಳೂರು ಲಾಲ್‌ಬಾಗ್‌ನ ಐತಿಹಾಸಿಕ ಕಾಂಗ್ರೆಸ್ ಸಮಾವೇಶದಲ್ಲಿ ಎಸ್. ನಿಜಲಿಂಗಪ್ಪ ಮತ್ತವರ ಜೊತೆಗಾರರ ಸಿಂಡಿಕೇಟನ್ನು ಕಟುವಾಗಿ ಟೀಕಿಸಿ, ಏರುಧ್ವನಿಯಲ್ಲಿ ಭಾಷಣ ಮಾಡಿದಾಗ - ಯಾರೀ ಹುಡುಗ-ಎಂದು ಇಂದಿರಾಗಾಂಧಿಯವರು ಕುತೂಹಲಿಸಿದರು. ಮುಂದೆ ವಾತ್ಸಲ್ಯದಿಂದ ಕಂಡರು.

ಕಾಂಗ್ರೆಸ್ ಇಬ್ಭಾಗವಾಗಿ, ಕರ್ನಾಟಕದಲ್ಲಿ ವೀರೇಂದ್ರ ಪಾಟೀಲರ ಸರ್ಕಾರ ಪತನಗೊಂಡು, ರಾಷ್ಟ್ರಪತಿ ಆಳ್ವಿಕೆ ನಡೆದು 1972 ರಲ್ಲಿ ವಿಧಾನಸಭಾ ಚುನಾವಣೆ ನಡೆಯಿತು. ಇಂದಿರಾ ಕಾಂಗ್ರೆಸ್ ಜಯಭೇರಿ ಬಾರಿಸಿತು. ಮುಖ್ಯಮಂತ್ರಿಯಾದ ಡಿ. ದೇವರಾಜ ಅರಸ್ ಮುಂದಿನ ಏಳು ವರ್ಷ ಕಾಲ ಆಡಳಿತ ನಡೆಸಿ, ರಾಜಕೀಯ ಸ್ಥಿತ್ಯಂತರವನ್ನು ಸಾಧಿಸಿದರು. ಅದುವರೆಗೆ ಒಂದಲ್ಲ ಒಂದು ರೀತಿಯಲ್ಲಿ ಮೇಲ್ವರ್ಗಗಳ ಜಹಗೀರಿನಂತಿದ್ದ ರಾಜ್ಯ ರಾಜಕಾರಣದಲ್ಲಿ ಮೊದಲ ಬಾರಿಗೆ ಬಹುಸಂಖ್ಯಾತ ಮತದಾರರಾದ ದಲಿತರ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಹೆಜ್ಜೆಗಳನ್ನು ಮೂಡಿಸುವಲ್ಲಿ ಅರಸ್‌ರು ಸಫಲರಾದರು. ಈ ವರ್ಗಗಳನ್ನು ಪ್ರಭಾವಶಾಲಿಗಳನ್ನಾಗಿಸಿದ್ದು, ಅವರ ಸೂಕ್ಷ್ಮ ಮೇಧಾವಿ ರಾಜಕಾರಣವಾಗಿತ್ತು. ಅಂತಹ ವಿಭಿನ್ನ ಪರಿಸ್ಥಿತಿಯಲ್ಲಿ ಬ್ರಾಹ್ಮಣ ತರುಣನೊಬ್ಬ ದಿಢೀರ್ ಆಗಿ ಮೇಲೇರಿ ಬಂದು, ರಾಜ್ಯದ ಮುಖ್ಯಮಂತ್ರಿ ಪದವಿಯನ್ನೇ ಪಡೆಯುವುದೆಂದರೆ ಅಸಾಧಾರಣ ಬೆಳವಣಿಗೆಯೇ ಹೌದು. ಅದಕ್ಕೆ ಕಾಂಗ್ರೆಸ್ಸಿನ ಮಹಾ ನಾಯಕಿ ಶ್ರೀಮತಿ ಇಂದಿರಾಗಾಂಧಿಯವರ ಆಶೀರ್ವಾದ ಹಾಗೂ ಅದೃಷ್ಟದೊಂದಿಗೆ ಮೇಳೈಸಿ ಬಂದ ಗುಂಡೂರಾಯರ ರಾಜಕೀಯ ಜಾಣ್ಮೆಯೇ ಕಾರಣವೆನ್ನಬಹುದು. ಅವರ ಸ್ನೇಹಪರತೆ ಹಾಗೂ ವಿಶಾಲ ಹೃದಯವೂ ಅವರಿಗೆ ನೆರವಾಯಿತು.

ಕರ್ನಾಟಕ ರಾಜ್ಯದ ಅತ್ಯಂತ ತರುಣ ಮುಖ್ಯಮಂತ್ರಿ ಎಂಬ ಗೌರವಕ್ಕೆ ಪಾತ್ರರಾದ ಗುಂಡೂರಾಯರನ್ನು, ಅತ್ಯಂತ ಅಬ್ಬರದ ಮುಖ್ಯ ಮಂತ್ರಿ ಎಂದೂ ಇತಿಹಾಸ ದಾಖಲಿಸುತ್ತದೆ. ಪತ್ರಿಕೆಗಳ ಟೀಕೆ, ಪ್ರತಿಪಕ್ಷದವರ ಖಂಡನೆ, ಆರ್ಭಟಗಳ ನಡುವೆಯೇ, ಆಡಳಿತದಲ್ಲಿ ಹಲವಾರು ಹೊಸ ದಾಖಲೆಗಳನ್ನು ಸಾಧಿಸಿದ, ಜನಕಲ್ಯಾಣಕ್ಕಾಗಿ ಹಳೆ ಸಂಪ್ರದಾಯಗಳನ್ನು ಮುರಿದ ಕೀರ್ತಿ ಅವರಿಗೆ ಸಂದಿದೆ.

ವೀರ ಸೈನಿಕರಿಗೆ ಹಾಗೂ ಹುಲಿಗಳಿಗೆ ಹೆಸರಾದ ಕೊಡಗಿನ ಈ ಪುತ್ರನಲ್ಲಿ ಅಭಿಮಾನಿಗಳು ವ್ಯಾಘ್ರಶಕ್ತಿ ಮತ್ತು ಸಿಪಾಯಿಯ ದೃಢ ಮನಸ್ಸು ಕಂಡದ್ದರಲ್ಲಿ ಅತಿಶಯವೇನಿಲ್ಲ. ರಾಜಕೀಯದ ಗೊಂಡಾರಣ್ಯದಲ್ಲಿ ಕೇವಲ ಒಂದೂವರೆ ದಶಕದಲ್ಲಿ, ಪುಟ್ಟ ಪುರಸಭೆಯ ಅಧ್ಯಕ್ಷ ಸ್ಥಾನದಿಂದ ದೊಡ್ಡ ರಾಜ್ಯದ ಮುಖ್ಯಮಂತ್ರಿಗಿರಿಯವರೆಗೆ ತಲುಪಲು ಅವರಿಗೆ ಈ ಶಕ್ತಿಸಾಮರ್ಥ್ಯ, ಧೈರ್ಯಗಳು ನೆರವಾದವು. ಹಾಗೆಯೇ ಅವರ ಮುನ್ನುಗ್ಗುವ ಛಲ, ನಿಷ್ಠೆ, ಕಾರ್ಯಶೀಲತೆಗಳು ಚೇತನ ನೀಡಿತು ಎಂದು ಗುಂಡೂರಾಯರ ನಿಕಟವರ್ತಿಗಳು ವ್ಯಾಖ್ಯಾನಿಸುತ್ತಾರೆ.

1972 ರಲ್ಲಿ ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆರಿಸಿ ಬಂದಾಗ ಗುಂಡೂರಾಯರಿಗೆ 35 ವರ್ಷ. ಕಾಂಗ್ರೆ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಸ್ಥಾನ ಅವರ ಪಾಲಿಗೆ ಬಂತು. ಒಂದು ವರ್ಷದಲ್ಲಿ ವಾರ್ತೆ, ಕ್ರೀಡೆ ಮತ್ತು ಯುವಜನ ಖಾತೆ ಹೊಣೆ ಹೊತ್ತು ಅರಸ್ ಸಂಪುಟದಲ್ಲಿ ರಾಜ್ಯ ಸಚಿವರಾದರು. 1976ರಲ್ಲಿ ವಸತಿ ಮತ್ತು ಯುವಜನ ಸೇವೆ ಖಾತೆಗೆ ಪೂರ್ಣ ಪ್ರಮಾಣದ ಸಚಿವರಾದರು. ಈ ನಡುವೆ ತುರ್ತು ಪರಿಸ್ಥಿತಿ ನಡೆದಿತ್ತು. ಗುಂಡೂರಾಯರು ಗಾಂಧಿ ಕುಟುಂಬಕ್ಕೆ ಹತ್ತಿರದವರಾಗುತ್ತಾ ಹೋದರು. 1977ರಲ್ಲಿ ತುರ್ತು ಪರಿಸ್ಥಿತಿ ಹಿಂತೆಗೆಯಲ್ಪಟ್ಟು, ಲೋಕಸಭೆ ಚುನಾವಣೆ ಘೋಷಿಸಲ್ಪಟ್ಟಿತು. ಇಂದಿರಾಗಾಂಧಿಯವರು ಸೋತು, ಜನತಾಪಕ್ಷದ ಸರಕಾರ ಅಧಿಕಾರಕ್ಕೆ ಬಂತು. ಭ್ರಷ್ಟಾಚಾರದ ಆಪಾದನೆ ಮೇಲೆ ಕರ್ನಾಟಕದ ದೇವರಾಜ್ ಅರಸ್ ಸರಕಾರವನ್ನು ಕೇಂದ್ರ ಸರಕಾರ ವಜಾಗೊಳಿಸಿತು. 1978 ರಲ್ಲಿ ವಿಧಾನಸಭೆಗೆ ಚುನಾವಣೆ ನಡೆದಾಗ ಗುಂಡೂರಾವ್ ಸೋಮವಾರಪೇಟೆಯಿಂದ ಮರು ಆಯ್ಕೆಗೊಂಡರು. ಅರಸ್‌ರ ಆಡಳಿತದಲ್ಲಿ ಅವರು ಮತ್ತೆ ಸಚಿವರಾಗಿ ಸಾರಿಗೆ ಮತ್ತು ಪ್ರವಾಸೋದ್ಯಮ ಖಾತೆ ವಹಿಸಿಕೊಂಡರು.

ಸಾಕಷ್ಟು ದೀರ್ಘಕಾಲ ಮಂತ್ರಿಯಾಗಿದ್ದಾಗ, ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಗುಂಡೂರಾವ್ ವರ್ಣರಂಜಿತವಾಗಿ ಕಂಗೊಳಿಸುತ್ತಿದ್ದರು. ಸಾಮಾನ್ಯವಾಗಿರುವ ನೀರಸ ಏಕತಾನದ ಕಲಾಪ ಮತ್ತು ಚರ್ಚೆಗೆ ಚುರುಕು ವಾತಾವರಣವನ್ನು ಅವರ ಹಾಜರಾತಿ ಕೊಡುತ್ತಿತ್ತು. ಅನೇಕ ಬಾರಿ ಅವರ ಮಾತುಗಳು, ವರ್ತನೆಗಳು ಸದನದಲ್ಲಿ ನಗೆಯಲೆ ಎಬ್ಬಿಸಿದ್ದು ಇದೆ. ಅಂತಹ ಸಂದರ್ಭಗಳಲ್ಲಿ ತಾನೂ ಜೊತೆಯಾಗಿ ಮನಸಾರೆ ಗಹಗಹಿಸಿ ನಕ್ಕು ರಂಜಿಸುವುದು ಅವರ ಸ್ವಭಾವವಾಗಿತ್ತು. ಪ್ರತಿಪಕ್ಷದವರು ಅವರ ಮೇಲೆ ಮುಗಿಬಿದ್ದಾಗ ಉಂಟಾಗುತ್ತಿದ್ದ ಹಾಸ್ಯ, ಕುಚೋದ್ಯ, ವಿನೋದದ ವಾತಾವರಣ ಸದಸ್ಯರಿಗೆಂದೂ ಮರೆತು ಹೋಗದು.

1979ರಲ್ಲಿ ಕೇಂದ್ರ ಜನತಾ ಸರ್ಕಾರ ಪತನಗೊಂಡು, ಚರಣ್ ಸಿಂಗ್ ನೇತೃತ್ವದ ಹೊಸ ಸರ್ಕಾರ ಆಳತೊಡಗಿತು. ಅಖಿಲ ಭಾರತ ಕಾಂಗ್ರೆಸ್ ಮತ್ತೊಮ್ಮೆ ಹೋಳಾಯಿತು. ಆ ವೇಳೆಗಾಗಲೇ ಅರಸರಿಂದ ದೂರ ಸರಿದಿದ್ದ ಗುಂಡೂರಾವ್ ಸಚಿವ ಸ್ಥಾನಕ್ಕೆ ರಾಜೀನಾಮೆ ಇತ್ತು ಹೊರಬಂದು, ಇಂದಿರಾಗಾಂಧಿ ಕಾಂಗ್ರೆಸ್ಸಿನ ಆಧಾರ ಸ್ಥಂಭವಾದರು. ವಿಧಾನ ಸಭೆಯಲ್ಲಿ

ಕಾಂಗ್ರೆಸ್ (ಇಂದಿರಾ) ಪಕ್ಷದ ಶಾಸಕಾಂಗ ಪಕ್ಷದ ನಾಯಕನಾದರು, ವಿರೋಧ ಪಕ್ಷ ನಾಯಕನಾಗಿ ಕೆಲವು ತಿಂಗಳು ಕಾಲ ಕಾರ್ಯ ನಿರ್ವಹಿಸಿದರು. ಕೇಂದ್ರದಲ್ಲಿ ಚರಣ್‌ಸಿಂಗ್ ಸರ್ಕಾರ ಪತನವಾಗಿ, 1980 ಜನವರಿಯಲ್ಲಿ ಲೋಕಸಭೆಗೆ ಮಧ್ಯಂತರ ಚುನಾವಣೆ ಅನಿವಾರ್ಯವಾಯಿತು. ಕರ್ನಾಟಕದಲ್ಲಿ ಅರಸ್‌ರ ಕಾಂಗ್ರೆಸ್ ಠೇವಣಿ ಕಳೆದುಕೊಂಡಿತು. 28 ಲೋಕಸಭೆ ಕ್ಷೇತ್ರಗಳಲ್ಲಿ 27 ಇಂದಿರಾ ಕಾಂಗ್ರೆಸ್ ಪಾಲಿಗೆ ಹೋಯಿತು. ಆಘಾತದಿಂದ ತತ್ತರಿಸಿದ ಅರಸ್ ಮಂತ್ರಿಮಂಡಲ ರಾಜೀನಾಮೆ ಸಲ್ಲಿಸಿತು. ಬಹುತೇಕ ಕಾಂಗ್ರೆಸ್ ಶಾಸಕರು ಮತ್ತು ಕೆಲವು ಜನತಾ ಪಕ್ಷ ಶಾಸಕರು ಬೆಂಬಲಿಸಿ ಇಂದಿರಾ ಕಾಂಗ್ರೆಸ್ಸಿಗೆ ಬಹುಮತ ಬಂದಿತು.

ನೀವು ಸರ್ಕಾರ ರಚಿಸುತ್ತೀರಾ ಎಂದು ರಾಜ್ಯಾಂಗಬದ್ಧವಾಗಿ ರಾಜ್ಯಪಾಲರು ವಿರೋಧಪಕ್ಷ ನಾಯಕರಾಗಿದ್ದ ಗುಂಡೂರಾಯರನ್ನು ಕೇಳಿ, ನಿರ್ಧಾರ ತಳೆಯಲು ಜನವರಿ 12 ವರೆಗೆ ಕಾಲಾವಕಾಶವನ್ನಿತ್ತರು. ಸರ್ಕಾರ ರಚಿಸುವ ಸಾಮರ್ಥ್ಯ ಇರುವುದಾಗಿ, ಗಡುವಿನ ಒಂದು ದಿನ ಮುಂಚಿತವಾಗಿಯೇ ರಾಜ್ಯಪಾಲರಿಗೆ ಗುಂಡೂರಾವ್ ತಿಳಿಸಿದರು. ಶಾಸಕ ಬಲದ ಪಟ್ಟಿಯನ್ನು ಒಪ್ಪಿಸಿದರು. ಜನವರಿ 12 ರಂದು ಪೂರ್ವಾಹ್ನ ರಾಜಭವನದ ಹುಲ್ಲು ಹಾಸಿನಲ್ಲಿ, ಏಕೀಕೃತ ಕರ್ನಾಟಕದ ಎಂಟನೇ ಮುಖ್ಯಮಂತ್ರಿಯಾಗಿ, ಇಬ್ಬರು ಸಹೋದ್ಯೋಗಿಗಳೊಂದಿಗೆ ಗುಂಡೂರಾವ್ ಪ್ರಮಾಣವಚನ ಸ್ವೀಕರಿಸಿದರು.

"ಕರ್ನಾಟಕದಲ್ಲಿ ಆಗಿ ಹೋಗಿರುವ ಮುಖ್ಯಮಂತ್ರಿಗಳಲ್ಲಿ ಕೆಲವರು ದಕ್ಷರು, ಸಮರ್ಥ ಆಡಳಿತಗಾರರೂ ಆಗಿದ್ದಿರಬಹುದು. ದಕ್ಷ ಆಡಳಿತ ನಡೆಸುವುದರಲ್ಲಿ ನಾನು ಆ ಪ್ರತಿಯೊಬ್ಬರಿಗಿಂತಲೂ ಹೆಚ್ಚು ಸಮರ್ಥನೆಂದು ಹೇಳಿಕೊಳ್ಳುವ ಸಾಹಸ ಮಾಡಲು ಇಚ್ಚಿಸುವುದಿಲ್ಲವಾದರೂ, ಕರ್ನಾಟಕವನ್ನು ಭಾರತದ ರಾಜ್ಯಗಳ ಪೈಕಿ ಒಂದು ಮಾದರಿ ರಾಜ್ಯವನ್ನಾಗಿ ಮಾಡಬೇಕೆಂಬ ಆಶಯದಲ್ಲಿ ಹಿಂದಿನ ಯಾವ ಮುಖ್ಯಮಂತ್ರಿಗಿಂತಲೂ ಕಡಿಮೆಯವನಾಗುವುದಿಲ್ಲ," ಎಂದು ಪ್ರಥಮ ಬಾರಿಗೆ ಆಕಾಶವಾಣಿ ಮುಖಾಂತರ ರಾಜ್ಯದ ಪ್ರಜೆಗಳಿಗೆ ಕೊಟ್ಟ ಈ ಮಾತಿನಂತೆಯೇ ಹೊಸ ಮುಖ್ಯಮಂತ್ರಿ ನಡೆದುಕೊಂಡರು.

ಮೊದಲ ಬಾರಿಗೆ ಜಿಲ್ಲಾಧಿಕಾರಿಗಳ ಹಾಗೂ ಇಲಾಖಾ ಮುಖ್ಯಸ್ಥ ಅಧಿಕಾರಿಗಳ ಸಮ್ಮೇಳನದಲ್ಲಿ ಅವರು ಆಡಿದ ಮಾತುಗಳು ಅವರ ವ್ಯಕ್ತಿತ್ವ ತೋರಿಸುವಂತಿತ್ತು.

"ಸೂಟುಬೂಟು ಹಾಕಿದವರನ್ನು, ಮುಖ್ಯಮಂತ್ರಿ ಮನೆಗೆ ಊಟಕ್ಕೆ ಹೋಗುವವರನ್ನು, ಪುಢಾರಿಗಳನ್ನು ಹತ್ತಿರ ಸೇರಿಸುತ್ತೀರಿ. ನಿಮ್ಮ ಸಂದರ್ಶನಕ್ಕೆ ಅವರಿಗೆ ಸೀದಾ ದಾರಿಯಿರುತ್ತದೆ. ಜನಸಾಮಾನ್ಯರಿಗೆ ನಿಮ್ಮನ್ನು ಕಂಡು ಸುಖದುಃಖ ಹೇಳಿಕೊಳ್ಳಲು ಅವಕಾಶವಿಲ್ಲ. ಅವರಿಗೆ ಏನಾದರೂ ಹೇಳಬೇಕಾದರೆ ಏಜೆಂಟರ ಮೂಲಕ ಹೋಗಬೇಕು. ನನಗೆ ಇದೆಲ್ಲ ಚೆನ್ನಾಗಿ ಗೊತ್ತಿದೆ. ಕಾನೂನು ಮೂಲಕ ನಿಮ್ಮನ್ನು ಮಟ್ಟ ಹಾಕುತ್ತೇನೆ. ಅದಾಗದಿದ್ದರೆ ಸಾರ್ವಜನಿಕ ಅಭಿಪ್ರಾಯದ ಒತ್ತಡ ತಂದು ನಿಮ್ಮನ್ನು ಬಲಿ ಹಾಕ್ತೇವೆ" ಎಂದು ಬಡಜನ ಪರವಾದ ನಿಲುವು ತಳೆಯಲು ಅವರು ಅಧಿಕಾರಿಗಳಿಗೆ ನಿಷ್ಠುರ ಮಾತುಗಳಲ್ಲಿ ಹೇಳಿದರು.

ಮುಖ್ಯಮಂತ್ರಿ ಪದವಿಗೇರಿದ ತರುಣದಲ್ಲೇ ಮೈಸೂರು ಜಿಲ್ಲೆಯಲ್ಲಿ ತಮ್ಮ ಸನ್ಮಾನ ಸಮಾರಂಭದಲ್ಲಿ ಅವರು ಆಡಿದ ಮಾತುಗಳು ಅವರೆಷ್ಟು ಪ್ರಾಮಾಣಿಕರಾಗಿದ್ದರೆಂದು ಸೂಚಿಸುವಂತಿತ್ತು. ಎಷ್ಟು ಜನ ರಾಜಕಾರಣಿಗಳು ಈ ರೀತಿ ಹೇಳಬಲ್ಲರು!

"ನಾನೊಬ್ಬ ಮಹಾಬುದ್ದಿವಂತ ವ್ಯಕ್ತಿ ಎಂದು ನಾನಂದುಕೊಂಡಿಲ್ಲ. ಕಳೆದ ಹತ್ತು ವರ್ಷಗಳಿಂದ ಜನ ಸೇವೆ ಮಾಡುತ್ತಾ ಬಂದಿದ್ದೇನೆ. ಇಂದು ಕೂತಿರುವ ಅಧಿಕಾರ ಸ್ಥಾನಕ್ಕಾಗಿ ನಾನೆಂದೂ ಹೊಡೆದಾಡಿದವನಲ್ಲ. ಅಧಿಕಾರಕ್ಕೆ ಜೋತು ಬೀಳುವ ಜಾಯಮಾನವೂ ನನ್ನದಲ್ಲ. ಇಂದಿರಾ ಗಾಂಧಿಯವರು ವಹಿಸಿಕೊಟ್ಟ ಯಾವುದೇ ಹೊಣೆಯನ್ನು ಸಂತೋಷದಿಂದ ಒಪ್ಪಿ ನಡೆಸುವ ಶಿಸ್ತಿನ ಸಿಪಾಯಿ ನಾನು."

ಇಂದಿರಾಗಾಂಧಿಯವರ ಆಶೀರ್ವಾದ, ರಕ್ಷಣೆ ಅವರದಾಗಿತ್ತು. ಮಂತ್ರಿಗಳ ಆಯ್ಕೆ ಸ್ವಾತಂತ್ರ್ಯವೂ ಅವರದೇ ಆಗಿತ್ತು. ದೇಶದ ಉಳಿದೆಲ್ಲ ಕಾಂಗ್ರೆಸ್ ಮುಖ್ಯಮಂತ್ರಿಗಳಿಗಿಂತ ಹೆಚ್ಚಿನ ಮುಕ್ತ ಅಧಿಕಾರ ಮತ್ತು ತೀರ್ಮಾನ ಅವರಿಗಿತ್ತು. ಅವರು ಮುಖ್ಯಮಂತ್ರಿಯಾದುದು ವಿವಾದ, ವಿರೋಧಗಳಿಲ್ಲದೆ, ಅದೃಷ್ಟದ ಬೆನ್ನೇರಿ. ಆದರೆ, ಮುಖ್ಯಮಂತ್ರಿಯಾದ ಮೇಲೆ ಒಂದಾದ ಮೇಲೆ ಒಂದರಂತೆ ವಿವಾದಗಳ ಸುಳಿಯಲ್ಲಿ ಸಿಲುಕುತ್ತಾ ಹೋದರು. ತ್ವರಿತ ಗತಿಯಲ್ಲಿ ಬಂದ ಸನ್ನಿವೇಶಗಳ ಅಧಿಪತಿಯಾಗಿ ಮಹತ್ವದ ಜವಾಬ್ದಾರಿ ಹೊತ್ತ ಅವರು, ಟೀಕಾಸ್ತ್ರಗಳನ್ನು, ವಿವಾದಗಳನ್ನು ಅಗಲವಾದ ಮುಖದಲ್ಲಿ ಮೂಡುವ ಸಂತಸ-ಧೈರ್ಯಗಳ ನಗುವಿನೊಂದಿಗೆ ಲೆಕ್ಕಿಸದೆ ಹೋದರು. ಯುದ್ಧದ ಕುದುರೆಯಂತೆ ದೌಡಾಯಿಸಿದರು. ಸಂಪುಟಕ್ಕೆ ಒಂದು ವರ್ಷ ತುಂಬುವ ಮೊದಲೇ ಪ್ರಮುಖ ಸಚಿವರಾಗಿದ್ದ ಎಸ್. ಬಂಗಾರಪ್ಪ ಸಂಪುಟ ತ್ಯಜಿಸಿದರು, ಕಾಂಗ್ರೆಸ್ಸಿನಿಂದಲೂ ದೂರ ಹೋದರು. ಕಾಂಗ್ರೆಸ್ಸಿನೊಳಗೆ 'ನಿಷ್ಠಾವಂತರು' 'ಪಕ್ಷಾಂತರಿಗಳು' ಎಂದು ಗುಂಪು ಜಗಳವೂ ನಡೆಯುತ್ತಲಿತ್ತು.

ಸಚಿವರುಗಳಾಗಿದ್ದ ಸಿ.ಎಂ. ಇಬ್ರಾಹಿಂ ಹಾಗೂ ಶ್ರೀಮತಿ ರೇಣುಕಾ ರಾಜೇಂದ್ರನ್ ಹಗರಣಗಳು, ರೋಲರ್ ಫ್ಲೋರ್ ಮಿಲ್ ಲೈಸೆನ್ಸ್ ಭ್ರಷ್ಟಾಚಾರದ ಆಪಾದನೆಗಳು ನಡೆದವು. ಮುಖ್ಯಮಂತ್ರಿ ಹಾಗೂ ಪತ್ರಿಕಾ ಮಾಧ್ಯಮ ನಡುವೆ ಬಿರುಕುಂಟಾಯಿತು. ಬೆಂಗಳೂರಿನಲ್ಲಿ ಸಾರ್ವಜನಿಕ ರಂಗದ ಕೈಗಾರಿಕೆಗಳ 77 ದಿನಗಳ ಅತಿದೀರ್ಘ ಮುಷ್ಕರ ನಡೆಯಿತು. ನಿಪ್ಪಾಣಿ, ನರಗುಂದ, ನವಲಗುಂದ, ಮಲಪ್ರಭ, ಮಂಡ್ಯ, ಶಿವಮೊಗ್ಗ, ಬಳ್ಳಾರಿಗಳಲ್ಲಿ ರೈತ ಚಳವಳಿಗಳು ತೀವ್ರಗೊಂಡವು. ಕನ್ನಡಕ್ಕೆ ಆದ್ಯತೆ ಸಿಗಬೇಕೆಂಬ ಆಗ್ರಹದ ಗೋಕಾಕ್ ವರದಿ ಜ್ಯಾರಿ ಒತ್ತಾಯದ ಚಳವಳಿ ಭುಗಿಲೆದ್ದು, ವರನಟ ಡಾ|| ರಾಜ್‌ಕುಮಾರ್ ಹೋರಾಟ ಕಣಕ್ಕೆ ಧುಮುಕಿದರು. ಜನ ಪ್ರತಿಭಟನೆಗಳು, ಪೊಲೀಸ್ ಗೋಲಿಬಾರ್‌ಗಳು ಅಲ್ಲಲ್ಲಿ ನಡೆದವು. ಇಡೀ ರಾಜ್ಯದ ಪರಿಸ್ಥಿತಿ ಪ್ರಕ್ಷುಬ್ಧ ಎನಿಸಿದರೂ, ಮುಖ್ಯಮಂತ್ರಿ ಮಾತ್ರ ವಿಚಲಿತರಾಗಲಿಲ್ಲ ಅಚಲ ಬಂಡೆಗಲ್ಲಾಗಿ ನಿಂತು ಬೀಗಿದರು.

ಗುಂಡೂರಾಯರ ಆಡಳಿತ ಒಂದು ಸಾವಿರಕ್ಕಿಂತಲೂ ಸ್ವಲ್ಪ ಹೆಚ್ಚು ದಿನಗಳ ಕಾಲ ನಡೆಯಿತು. "ಅದೊಂದು ನಕ್ಕು ನಗಿಸಿದ ಕಾಲ, ಹರ್ಷೋತ್ಕರ್ಷದ ಅವಧಿ, (ಹಿಲೇರಿಯಸ್ ಪೀರಿಯಡ್) ಸದ್ದುಗದ್ದಲ, ಚಟುವಟಿಕೆಗಳ ವರ್ಣರಂಜಿತ ಕಾಲ" ಎಂದು ವರ್ಣಿಸಿದವರಿದ್ದಾರೆ. ಆದರೆ, ಇಂದಿರಾಯುಗದ ಅಸಾಮಾನ್ಯ ವ್ಯಕ್ತಿ ಎನಿಸಿಕೊಂಡ ಗುಂಡೂರಾಯರ ಅಸಾಮಾನ್ಯ ಸಾಧನೆಗಳೂ ಅನೇಕ ಇವೆ.

ಪ್ರಧಾನಿ ಇಂದಿರಾಗಾಂಧಿ ಬೆಂಗಳೂರಿಗೆ ಬಂದಿದ್ದಾಗಲೊಮ್ಮೆ, ತಮ್ಮ ಈ ಕಿರಿಯ ಸಹೋದ್ಯೋಗಿಯ ಆಡಳಿತ ಪರಾಮರ್ಶಿಸಿ ಬಹಿರಂಗ ಪ್ರಶಂಸೆ ನೀಡಿದರು. ಅವರ ಅಧಿಕಾರಾವಧಿಯಲ್ಲಿ ಸರ್ಕಾರಿ ಆಡಳಿತದಲ್ಲಿ ಸ್ಥಳೀಯ ಮಟ್ಟದ ರಾಜಕಾರಣಿಗಳ ಹಸ್ತಕ್ಷೇಪ ಸಂಪೂರ್ಣ ಸ್ಥಗಿತಗೊಂಡಿತ್ತು ಎಂದು ಅವರ ವಿರೋಧಿಗಳೂ ಒಪ್ಪಿಕೊಂಡಿದ್ದರು. ಅಧಿಕಾರಿಗಳ ವರ್ಗಾವಣೆ ಎಂಬ ದಂಧೆ ಹೆಚ್ಚೂ ಕಮ್ಮಿ ಇಲ್ಲವಾಗಿತ್ತು. ರಾಜ್ಯಾದ್ಯಂತ ಕೃಷಿಕ ವರ್ಗಗಳಿಗೆ ಭಾರೀ ರಿಯಾಯಿತಿಗಳನ್ನು ನೀಡಲಾಯಿತು. ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ದರದಲ್ಲಿ ಅಳವಡಿಸಲ್ಪಟ್ಟ ಸ್ಟಾಂಡಾರ್ಡ್ ರೇಟ್‌ಗಾಗಿ ರೈತರು ಅವರನ್ನೆಂದೂ ಮರೆಯುವಂತಿಲ್ಲ.

ಸಮಯ ಪರಿಪಾಲನೆ ಗುಂಡೂರಾಯರ ಹೆಗ್ಗಳಿಕೆ. ಅವರಂತಹ ಸಮಯ ಪ್ರಜ್ಞೆ ಹಿಂದೆ ಇರಲಿಲ್ಲ. ಹಾಗೆಯೇ ತಡವಿಲ್ಲದೆ ನಿರ್ಧಾರ ತೆಗೆದುಕೊಳ್ಳುವ ಛಾತಿ ಅವರ ಮತ್ತೊಂದು ಹಿರಿಮೆ. ಬೆಂಗಳೂರು ನಗರದಲ್ಲಿ ಕಳ್ಳಭಟ್ಟಿ ಸಾರಾಯಿ ಕುಡಿದು ನೂರಾರು ಜನ ತೀರಿಕೊಂಡಾಗ, ಮತ್ತು ವೀನಸ್ ಸರ್ಕಸ್ ಡೇರೆಗೆ ಬೆಂಕಿ ಬಿದ್ದು ಅನೇಕ ಮಕ್ಕಳು ಜೀವಂತ ಬೆಂದಾಗ ನಿಂತ ಕಾಲಲ್ಲೇ ತನಿಖಾ ಆಯೋಗಗಳನ್ನು ನೇಮಿಸಿದ ಕ್ರಮ ಅವರ ಸಾಧನೆಯ ಹೆಗ್ಗುರುತುಗಳು. ಕರ್ನಾಟಕ ಮುಖ್ಯಮಂತ್ರಿಗಳ ಅಧಿಕೃತ ನಿವಾಸ 'ಕೃಷ್ಣಾ' ರಚನೆ ಹಾಗೂ ಬೆಂಗಳೂರಿನ ಸುಭಾಷನಗರದ ಬೃಹತ್‌ಬಸ್ ನಿಲ್ದಾಣ ಅವರ ಕೊಡುಗೆಗಳು. ಬೆಂಗಳೂರಿನಲ್ಲಿ ಸಂಸತ್ ಅಧಿವೇಶನ ವರ್ಷಕ್ಕೊಮ್ಮೆ ನಡೆಯಬೇಕೆಂದು ಅವರು ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಆದರೆ, ವಿಭಾಗಮಟ್ಟದಲ್ಲಿ ಸಂಪುಟ ಸಭೆ ನಡೆಸುವ ಹೊಸ ಕ್ರಮ, ಜನರ ಬಳಿ ಸರ್ಕಾರ ತೆರಳುವುದಕ್ಕೆ ಮಾದರಿಯಾಯಿತು. ವಿಧಾನಸೌಧದ ಮುಂದಣ ರಸ್ತೆಗೆ ಡಾ|| ಅಂಬೇಡ್ಕರ್ ವೀಧಿ ಎಂದು ಹೆಸರಿಟ್ಟ ಮಹಾನುಭಾವರು ಅವರು. ಹೊಸ ಮೆಡಿಕಲ್ ಕಾಲೇಜು, ಎಂಜನಿಯರಿಂಗ್ ಕಾಲೇಜುಗಳಿಗೆ ಅವರು ನೀಡಿದ ಅನುಮತಿ ಅಂದು ವಿವಾದಕ್ಕೆ ಸಿಕ್ಕಿಸಿತ್ತು. ಇಂದು, ಅದೊಂದು ದೂರದರ್ಶಿತ್ವದ ನಿರ್ಧಾರ ಎನಿಸಿದೆ. ಕನ್ನಡ ಬೆಳವಣಿಗೆಗೆ ಅವರು ಉತ್ತೇಜನ ನೀಡಿದರು.

ಪ್ರತಿಪಕ್ಷಗಳ, ಪತ್ರಿಕೆಗಳ ಪ್ರಹಾರ, ಕೃಷಿಕರು, ಕನ್ನಡಪರರ ಚಳವಳಿ, ಪ್ರತಿಭಟನೆಗಳನ್ನು ಲೆಕ್ಕಿಸದೆ ಹುಮ್ಮಸ್ಸಿನಿಂದ ಮುನ್ನುಗ್ಗುತ್ತಿದ್ದ ರಾಯರ ಆಡಳಿತಕ್ಕೆ ಬಡಿದ ಸಿಡಿಲು ಸಂಜಯಗಾಂಧಿಯವರ ವಿಮಾನಾಪಘಾತದ ಅಂತ್ಯ. 1982 ರಲ್ಲಿ ರಾಯರ ರಾಜಕೀಯ

ಗುರುವಾಗಿದ್ದರೂ ವಿರೋಧ ಪಕ್ಷದ ನಾಯಕರಾಗಿದ್ದ ಮಾಜಿ ಮುಖ್ಯಮಂತ್ರಿ ದೇವರಾಜ ಅರಸರು ಅಸ್ತಂಗತರಾದರು. ಜನತಾ ಪಕ್ಷ ಹಾಗೂ ಕ್ರಾಂತಿರಂಗಗಳು ಹೊಂದಾಣಿಕೆ ಮಾಡಿಕೊಂಡವು. ವಿಧಾನಸಭಾ ಸಾರ್ವತ್ರಿಕ ಚುನಾವಣೆ ಬಂದಿತು. ಜನವರಿ 5, 1983 ರಂದು ಮತದಾನ ನಡೆಯಿತು. ಸ್ವಕ್ಷೇತ್ರ ಕುಶಾಲನಗರವೂ ಸೇರಿದ ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ರಾಯರು ಪರಾಭವ ಅನುಭವಿಸಿದರು. ಮೊದಲ ಬಾರಿಗೆ ಕರ್ನಾಟಕದಲ್ಲಿ ಕಾಂಗ್ರೆಸ್ಸೇತರ ಸರಕಾರ ರಾಮಕೃಷ್ಣ ಹೆಗಡೆ ನೇತೃತ್ವದಲ್ಲಿ ಅಧಿಕಾರಕ್ಕೆ ಏರಿತು. ಅಧಿಕಾರ ಕಳೆದುಕೊಂಡ ರಾಯರು ರಾಜಕೀಯ ಹಿನ್ನೆಲೆಗೆ ಸರಿದರು. 1984 ಅಕ್ಟೋಬರ್ 31 ರಂದು ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ಅವರ ಹಿರಿಯ ಪುತ್ರ ರಾಜೀವಗಾಂಧಿ ಪ್ರಧಾನಿಪಟ್ಟ ವಹಿಸಿಕೊಂಡು, ಲೋಕಸಭೆ ಮಧ್ಯಾವಧಿ ಚುನಾವಣೆ ಘೋಷಿಸಿ, ಭರ್ಜರಿ ಬಹುಮತ ಸ್ಥಾನಗಳೊಂದಿಗೆ ತಮ್ಮ ಅಧಿಕಾರ ಪದಕ್ಕೆ ಜನ ಮನ್ನಣೆ ಪಡೆದರು. 1985 ಮಾರ್ಚಿನಲ್ಲಿ ಕರ್ನಾಟಕ ವಿಧಾನಸಭೆಗೂ ಮಧ್ಯಾವಧಿ ಚುನಾವಣೆ ನಡೆಯಿತು. ಗುಂಡೂರಾಯರಿಗೆ ಕುಶಾಲನಗರ ವಿಧಾನಸಭಾಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಲ್ಪಟ್ಟಿತು. ಇಂದಿರಾ ನಿಧನದಿಂದ ಜರ್ಜರಿತರಾಗಿದ್ದ ಮಾಜಿ ಮುಖ್ಯಮಂತ್ರಿ ಚುನಾವಣಾ ಪ್ರಚಾರಕ್ಕೂ ತೆರಳಲು ಅವಕಾಶವಾಗಲಿಲ್ಲ. ಗುಂಡೂರಾಯರು ಸಂಯಮದಿಂದಿದ್ದರು. ಆ ಬಳಿಕ ನೊಂದುಕೊಂಡು, ಪ್ರಣಾಬ್ ಮುಖರ್ಜಿಯವರು, 1986ರಲ್ಲಿ ಸ್ಥಾಪಿಸಿದ ಅಖಿಲಭಾರತ ಇಂದಿರಾ ಗಾಂಧಿ ಕಾಂಗ್ರೆಸಿಗೆ ಸೇರಿದರೂ, ಆ ಪಕ್ಷದ ಪ್ರಭಾವ ನಡೆಯದೆ ರಾಜಕೀಯ ಕೇಂದ್ರಕ್ಕೆ ಬರಲಾಗಲಿಲ್ಲ. 1989ರಲ್ಲಿ ರಾಜೀವ್‌ಗಾಂಧಿಯವರು, ಅವರನ್ನು ಪುನಃ ಕಾಂಗ್ರೆಸ್ಸಿಗೆ ಸೇರಿಸಿಕೊಂಡು, ಬೆಂಗಳೂರು (ದಕ್ಷಿಣ) ಲೋಕಸಭಾ ಕ್ಷೇತ್ರದಿಂದ ಸಾರ್ವತ್ರಿಕ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಇತ್ತರು. ಹಿಂದಿನ ಮೂರು ಚುನಾವಣೆಗಳಲ್ಲಿ ಪ್ರತಿಪಕ್ಷದ ಪಾಲಾಗಿದ್ದ ಈ ಕ್ಷೇತ್ರವನ್ನು ಎರಡೂವರೆ ಲಕ್ಷ ಬಹುಮತದಿಂದ ಕಾಂಗ್ರೆಸ್ಸಿಗೆ ಮತ್ತೆ ಒದಗಿಸಿಕೊಡಲು ಅವರು ಶಕ್ತರಾದರು. ಆದರೆ, ಕಾಂಗ್ರೆಸ್ ಪಕ್ಷ ದೇಶದಲ್ಲಿ ಸೋತಿತು. ರಾಜೀವ್‌ಗಾಂಧಿ ಪ್ರತಿಪಕ್ಷ ನಾಯಕರಾಗಿ ಕೂರಬೇಕಾಯಿತು; ಅವರ ಹಳೆಯ ಸಹೋದ್ಯೋಗಿ ವಿಶ್ವನಾಥ್ ಪ್ರತಾಪ್ ಸಿಂಗ್ ಪ್ರಧಾನಿಯಾದರು. ಆ ಬಳಿಕ ಕೇಂದ್ರದಲ್ಲಿನ ರಾಜಕೀಯ ಬೆಳವಣಿಗೆಗಳು ಗುಂಡೂರಾಯರಿಗೆ ಹೊಸ ಅವಕಾಶ ಕಲ್ಪಿಸಲಿಲ್ಲ. ವಿ.ಪಿ. ಸಿಂಗ್ ಸರ್ಕಾರ ಜನತಾ ಪಕ್ಷದ ಒಳಜಗಳದಲ್ಲಿ ಅಧಿಕಾರ ಕಳೆದುಕೊಂಡಿತು. ಯಂಗ್‌ಟರ್ಕ್ ಚಂದ್ರಶೇಖರ್ ಬಣದ ಅಲ್ಪಸಂಖ್ಯಾತ ಜನತಾದಳ, ಕಾಂಗ್ರೆಸ್ ಬೆಂಬಲದಿಂದ ಅಧಿಕಾರದ ಚುಕ್ಕಾಣಿ ಹಿಡಿಯಿತು. 1991ರ ಮೇ-ಜೂನ್ ನಲ್ಲಿ ಲೋಕಸಭೆಗೆ ಮಧ್ಯಾವಧಿ ಚುನಾವಣೆ ಅನಿವಾರ್ಯವಾಯಿತು. ಮೇ 21 ರಂದು ಶ್ರೀಪೆರಂಬದೂರು ಎಂಬಲ್ಲಿ ರಾಜೀವ್ ಗಾಂಧಿ ಶ್ರೀಲಂಕಾದ ತಮಿಳು ಉಗ್ರಗಾಮಿಗಳ ಮಾನವ ಬಾಂಬ್‌ಗೆ ಅಮಾನುಷವಾಗಿ ಬಲಿಯಾದರು. ಆ ಬಳಿಕದ ಚುನಾವಣೆಯಲ್ಲಿ ರಾಜೀವ್ ರಹಿತ ಕಾಂಗ್ರೆಸ್ ಪಕ್ಷ ಅಧಿಕ ಸ್ಥಾನ ಪಡೆದು, ಆಳುವ ಪಕ್ಷ

ಸ್ಥಾನಕ್ಕೇರಿತು. ಆದರೆ, ಅನಿರೀಕ್ಷಿತವಾಗಿ ಬೆಂಗಳೂರು (ದಕ್ಷಿಣ) ಲೋಕಸಭಾ ಕ್ಷೇತ್ರ ಗುಂಡೂರಾಯರಿಗೆ ಕೈಕೊಟ್ಟಿತು. ದ್ವಿತೀಯ ಬಾರಿಗೆ ಲೋಕಸಭೆ ಪ್ರವೇಶಿಸಲು ವಿಫಲರಾದ ಅವರು ನಿರಾಶೆಗೊಂಡರು.

ರಾಜಕೀಯ ಚಟುವಟಿಕೆಯ ಕೇಂದ್ರದಿಂದ ದೂರ ಸರಿದ ಗುಂಡೂರಾಯರನ್ನು ಕ್ಯಾನ್ಸರ್ ಖಾಯಿಲೆ ಮುನ್ನಾಲ್ಕು ತಿಂಗಳು ಬಳಲಿಸಿತು. ಕೊನೆಗೆ ಚಿಕಿತ್ಸೆಗಾಗಿ ಲಂಡನ್‌ನ ರಾಯಲ್ ಫ್ರೀ ಆಸ್ಪತ್ರೆಗೆ ತೆರಳುವ ಮುನ್ನ, ಈ ಲೇಖಕನಿಗೆ ನೀಡಿದ ಸಂದರ್ಶನದಲ್ಲಿ ಅವರೊಂದು ಮಾತು ಹೇಳಿದ್ದರು. "ನಾನು ಯಾರಿಗೂ ಹೆದರುವುದಿಲ್ಲ. ಸಾವಿಗೂ ಹೆದರುವುದಿಲ್ಲ. ಸಾವು ನನ್ನನ್ನು ಕೊಂಡೊಯ್ಯಬೇಕಾದರೆ, ಕಳ್ಳನಂತೆ ಕತ್ತಲಲ್ಲಿ ಬಂದು ನನ್ನನ್ನು ಕೊಂಡೊಯ್ಯಬೇಕು".

1993 ರ ಆಗಸ್ಟ್ 22ರ ಮುಂಜಾವು ಮೂಡುವ ಮುನ್ನದ ಕಗ್ಗತ್ತಲಿನಲ್ಲಿ, ಸಾವು ಬಂದ. ನಿದ್ದೆಯಲ್ಲಿ ಮಲಗಿದ್ದ ಕರ್ನಾಟಕ ಮಾಜಿ ಮುಖ್ಯಮಂತ್ರಿ 57ರ ಹರೆಯದ ರಾಮರಾವ್ ಗುಂಡೂರಾವ್ ಅವರನ್ನು ಕೊಂಡೊಯ್ದೇ ಬಿಟ್ಟ. ಮರಳಿ ಬಂದು ಕರ್ನಾಟಕದ ಮುಖ್ಯಮಂತ್ರಿಯಾಗಬೇಕೆಂದಿದ್ದ ಅವರು ಕನಸು ಕಮರಿತು.

ಜನಪ್ರಿಯ, ಧೀಮಂತ ನಾಯಕನ ಅಕಾಲಿಕ ಮೃತ್ಯುವಿನಿಂದಾಗಿ ಕರ್ನಾಟಕವೇ ಕಣ್ಣೀರು ಹರಿಸಿತು.

1996ರಲ್ಲಿ ಗುಂಡೂರಾವ್ ಅವರ ಪತ್ನಿ ಶ್ರೀಮತಿ ವರಲಕ್ಷ್ಮಿ ಗುಂಡೂರಾವ್ ಅವರು ಪತಿಯ ಬದಲಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ, ಬೆಂಗಳೂರು (ದಕ್ಷಿಣ) ಲೋಕಸಭಾ ಕ್ಷೇತ್ರದಿಂದ, ಅಲ್ಪ ಅಂತರದಿಂದ ವಿಜಯ ವಂಚಿತರಾದರು. ಆದರೆ, ರಾಯರ ಮೂವರು ಪುತ್ರರಲ್ಲೊಬ್ಬರಾದ ದಿನೇಶ್ ಗುಂಡೂರಾವ್ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಅಧ್ಯಕ್ಷರಾದುದಲ್ಲದೆ, ಗಾಂಧಿನಗರ ವಿಧಾನಸಭಾ ಕ್ಷೇತ್ರದಿಂದ 1999 ರ ಸಾರ್ವತ್ರಿಕ ಚುನಾವಣೆಗೆ ಸ್ಪರ್ಧಿಸಿ, ಗೆದ್ದು, ಶಾಸಕರಾದರು.

# ಭಾಗ - 2

## ಶಾಸನಸಭೆಯಲ್ಲಿ ಗುಂಡೂರಾವ್

### 1972-73ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

1972 ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದು ಬಂದ ಶ್ರೀ ಆರ್. ಗುಂಡೂರಾವ್ ಶಾಸಕರಾದ ಕೂಡಲೇ ಶಾಸಕಾಂಗ ಪಕ್ಷದ ಕಾರ್ಯದರ್ಶಿಯಾಗಿ ಮತ್ತು ಸಾರ್ವಜನಿಕ ಲೆಕ್ಕ ಸಮಿತಿಗೆ ನೇಮಕಗೊಂಡರು. ಈ ಸ್ಥಾನಮಾನಗಳನ್ನು ಅವರು ಸಮರ್ಥವಾಗಿಯೇ ಬಳಸಿಕೊಂಡರು. ಮಾತನಾಡಲು ಹಿಂಜರಿಯುತ್ತಿದ್ದ ಶಾಸಕರ ಧ್ವನಿಯಾಗಿ ಮುಖ್ಯಮಂತ್ರಿ ಹಾಗೂ ಶಾಸಕರುಗಳ ವಿಶ್ವಾಸಕ್ಕೆ ಪಾತ್ರರಾದರು. ತಮ್ಮ ವರ್ಚಸ್ಸನ್ನು ಬೆಳೆಸಿಕೊಂಡರು.

ಜೂನ್ 28-1-1972 ಬಡ್ಜೆಟ್ ಮೇಲಣ ಸಾಮಾನ್ಯ ಚರ್ಚೆಯಲ್ಲಿ ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದ ಹೊಸ ಯುವ ಶಾಸಕ ಶ್ರೀ ಆರ್. ಗುಂಡೂರಾವ್ ಶಾಸನ ಸಭೆಯಲ್ಲಿ ತಮ್ಮ ಚೊಚ್ಚಲ ಭಾಷಣ ಮಾಡಿದರು.

**ಆರ್. ಗುಂಡೂರಾವ್ (ಸೋಮವಾರಪೇಟೆ)** : ಸನ್ಮಾನ್ಯ ಅಧ್ಯಕ್ಷರೇ, ಪ್ರಥಮವಾಗಿ ನಮ್ಮ ರಾಜ್ಯದ ಅರ್ಥ ಮಂತ್ರಿಗಳು ಬಹಳ ಪರಿಣಾಮಕಾರಿಯಾದ ಹಾಗೂ ಉತ್ತಮವಾದ ಆಯವ್ಯಯ ಪತ್ರವನ್ನು ಮಂಡಿಸಿದ್ದಕ್ಕಾಗಿ ಅದನ್ನು ಸ್ವಾಗತಿಸುತ್ತಾ ನಾನು ಅವರಿಗೆ ವಂದನೆಯನ್ನರ್ಪಿಸುತ್ತೇನೆ.

ಪ್ರಥಮವಾಗಿ ಕೇಂದ್ರ ಸರಕಾರದವರು ನಮ್ಮ ರಾಜ್ಯದ ಓವರ್ ಡ್ರಾಫ್ಟ್ ಸಹಾಯ ಮಾಡಲು ಮುಂದೆ ಬಂದು ನಮ್ಮ ರಾಜ್ಯವನ್ನು ಓವರ್ ಡ್ರಾಫ್ಟ್ ನಿಂದ ಮುಕ್ತಿಗೊಳಿಸಿದ್ದಕ್ಕಾಗಿ ನಾನು ಹಣಕಾಸಿನ ಮಂತ್ರಿಗಳನ್ನು ಬಹಳವಾಗಿ ವಂದಿಸಬೇಕಾಗಿದೆ. ಹಿಂದುಳಿದ ವರ್ಗದ ಜನಾಂಗಕ್ಕೆ ಬಡ್ಜೆಟ್ಟಲ್ಲಿ ಅವರು ಇಟ್ಟಿರುವಂತಹ ಹಣ ಸಾಲದು ಎಂದು ಹೇಳಿ ಅದನ್ನು ಹೆಚ್ಚಿಸಬೇಕೆಂದು ಹಣಕಾಸಿನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಏಕೆಂದರೇ ಮುಖ್ಯವಾಗಿ ಹರಿಜನ ಗಿರಿಜನರ ಮತ್ತು ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಹೆಚ್ಚಿನ ಹಣವನ್ನು ಅವರು ಮುಂದೆಯಾದರೂ ಬಡ್ಜೆಟ್ಟಲ್ಲಿ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಯುವಜನ ಕಲ್ಯಾಣಕ್ಕಾಗಿ ಕೇವಲ 54 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಯುವಜನ ಕಲ್ಯಾಣ ದೇಶದಲ್ಲಿ ಬಹಳ ಮುಖ್ಯವಾದುದ್ದು. ಅದೂ ಅಲ್ಲದೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯುವಜನ ಕಲ್ಯಾಣ ಯೋಜನೆಯಲ್ಲಿ ಒಳ್ಳೆಯ ಅವಕಾಶವಿದೆ. ಈ ದಿಸೆಯಿಂದ 54 ಲಕ್ಷ ರೂಪಾಯಿಗಳು ಯಾವುದೇ ರೀತಿಯಲ್ಲಿಯೂ ಸಾಲದು. ಅದನ್ನು 1 ಕೋಟಿ ರೂಪಾಯಿಗಳಿಗಾದರು ಹೆಚ್ಚಿಸಬೇಕು ಎಂದು ಅರ್ಥ ಮಂತ್ರಿಗಳಿಗೆ ಆ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

---

ವಿ.ಸ.ನ. ದಿನಾಂಕ: 28-1-1972

ಮುಖ್ಯವಾಗಿ ಬಸ್ಸುಗಳ ಮೇಲೆ ಹಾಕಿರುವಂಥಹ ಟ್ಯಾಕ್ಸ್ ಸ್ವಾಗತಾರ್ಹವಾದುದು. ಇದನ್ನು 100 ರೂಪಾಯಿಗಳಿಂದ 150 ಕ್ಕೆ ಹೆಚ್ಚಿಸಿದರೂ ತೊಂದರೆಯಿಲ್ಲ. ಏಕೆಂದರೇ ಅನೇಕ ಟೂರಿಸ್ಟ್ ಬಸ್ ಮಾಲೀಕರೂ ಸರ್ಕಾರಕ್ಕೆ ಮೋಸ ಮಾಡುತ್ತಾ ಜನತೆಗೂ ಮೋಸಮಾಡುತ್ತಾ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದಾರೆ. ನೂರು ರೂಪಾಯಿಗಳಿಗೆ ಏರಿಸಿರುವುದು ಪ್ರಶಂಸನೀಯವಾದುದು. ಅದನ್ನು 150 ರೂಪಾಯಿಗಳಿಗೆ ಏರಿಸುವುದಕ್ಕೆ ಅರ್ಥ ಮಂತ್ರಿಗಳು ಗಮನ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಕುದುರೆ ಜೂಜು ಬಗ್ಗೆ ಒಂದು ದೂರು ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಹಣಕಾಸಿನ ಕೊರತೆ ಇದೆ. ನಮ್ಮದು ಬಡತನದ ದೇಶ ಎಂದು ಒಂದು ಕಡೆ ಹೇಳುತ್ತಿದ್ದೇವೆ. ಬಹುಶಃ ಲಕ್ಷಾಂತರ ಅಥವಾ ಕೋಟ್ಯಾಂತರ ರೂಪಾಯಿಗಳನ್ನು ಕುದುರೆ ಜೂಜಿನ ಆಟದಲ್ಲಿ ಕಳೆಯುತ್ತಿರುವುದು ಕಂಡು ಬರುತ್ತಿದೆ. ಈ ರೇಸಿನ ಆಡಳಿತದ ಮೇಲೆ ಸರ್ಕಾರಕ್ಕೆ ಹಿಡಿತ ಕಡಿಮೆ ಇದೆ. ಈ ಒಂದು ರೇಸಿನ ಮೇಲೆ ಸರ್ಕಾರದವರು ಬೇರೆ ಯಾವುದಾದರು ಒಂದು ರೀತಿಯಲ್ಲಿ ಹೆಚ್ಚಿನ ಹಿಡಿತವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಇಲ್ಲದೆ ಹೋದರೆ ಅದನ್ನು ನಿಲ್ಲಿಸುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಅರ್ಥ ಮಂತ್ರಿಗಳು ಇದನ್ನು ಚೆನ್ನಾಗಿ ಪರಿಶೀಲಿಸಬೇಕು. ಏಕೆಂದರೆ ಇದರಿಂದ ಸಾಧಾರಣವಾಗಿ ಸರಕಾರಕ್ಕೆ ಹೆಚ್ಚಿನ ಲಾಭ ಬಾರದೆ ಮಧ್ಯವರ್ತಿ ವರ್ಗದ ಜನ ಹೆಚ್ಚಿನ ಲಾಭವನ್ನು ಪಡೆಯುತ್ತಿದ್ದಾರೆ. ಬುಕ್ಕೀಸ್ ಅಥವಾ ಮಧ್ಯ ಏಜೆಂಟರುಗಳಿಗೆ ಹಣ ಸಂಪಾದನೆ ಆಗುವ ದೆಸೆಯಿಂದ ಸರ್ಕಾರದವರು ಈ ಒಂದು ಕಾನೂನನ್ನು ಬದಲಾವಣೆ ಮಾಡಿ ಸರ್ಕಾರಕ್ಕೇ ಹಣಕಾಸಿನ ಸ್ಥಿತಿ ಹೆಚ್ಚಾಗಿ ಅನುಕೂಲವಾಗುವ ರೀತಿಯಲ್ಲಿ ಅರ್ಥಮಂತ್ರಿಗಳು ಪ್ರಯತ್ನಪಡಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ಹಾರಂಗಿ ಯೋಜನೆಗೆ ಹೆಚ್ಚಿನ ಹಣವನ್ನು ಒದಗಿಸಬೇಕಾಗಿತ್ತು. ಈ ಹಾರಂಗಿ ಯೋಜನೆ ಆಗಬೇಕೆಂದು 50 ವರ್ಷಗಳಿಂದ ಕಂಡು ಬರುತ್ತಿದೆ. ಆದರೆ ಇಲ್ಲಿಯ ಕೆಲಸಗಳು ಬಹಳ ನಿಧಾನವಾಗಿ ನಡೆದು ಬರುತ್ತಿದೆ. ಬಡ್ಜೆಟ್ಟಿನಲ್ಲಿ ಇಟ್ಟಿರುವ ಹಣ ಸಾಲದು. ಹಾಗಾಗಿ ಯೋಜನೆಯನ್ನು ಪೂರ್ತಿಗೊಳಿಸುವುದಕ್ಕೆ ಹೆಚ್ಚಿನ ಹಣ ಒದಗಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕಾಳಿ ನದಿ ಯೋಜನೆಗೆ ಕೇಂದ್ರ ಸರಕಾರ ಪೂರ್ತಿ ಸಹಾಯ ಮಾಡುತ್ತದೆ. ಕಾಳೀ ನದಿ ಯೋಜನೆಯಿಂದ ಇಡೀ ಮೈಸೂರಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ ಎಂದು ಕೇಳಿ ನನಗೆ ಸಂತೋಷವಾಗಿದೆ. ಈ ಕಾರ್ಯಕ್ರಮಗಳನ್ನು ಅರ್ಥಮಂತ್ರಿಗಳು ಹಾಕಿರುವುದು ನಿಜವಾಗಿಯೂ ಸ್ವಾಗತಾರ್ಹವಾದುದು. ನಮ್ಮ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ನಮ್ಮ ಅರ್ಥಮಂತ್ರಿಗಳು ಎಷ್ಟು ಉತ್ತಮವಾದ ಬಡ್ಜೆಟ್ಟನ್ನು ಮಂಡಿಸಿದ್ದಾರೆ ಎಂಬುದಕ್ಕೆ ಕಾಳೀನದಿ ಯೋಜನೆ ಮತ್ತು ಓವರ್‌ಡ್ರಾಫ್ಟ್ ಇವೆರಡು ಸಾಕ್ಷಿಯಾಗಿವೆ.

ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಹೇಳುತ್ತಿದ್ದರು ಈ ಬಡ್ಜೆಟ್ ಸ್ವಾಗತಾರ್ಹವಲ್ಲ ಎಂದು. ಸರ್ಕಾರ ಕಳೆದ ಐದು ವರ್ಷಗಳಿಂದ ಎಷ್ಟು ಓವರ್‌ಡ್ರಾಫ್ಟ್ ಪಡೆದಿತ್ತು, ನಮ್ಮ ಸರ್ಕಾರ ಎಂಥ ಪರಿಸ್ಥಿತಿಯಲ್ಲಿತ್ತು ಎನ್ನುವುದನ್ನು ನೋಡಿದರೆ ನಿಜವಾಗಿಯೂ ಈಗಿನ ಸರ್ಕಾರ ಬಹಳ ಹೆಚ್ಚಿನ ರೀತಿಯಲ್ಲಿ ನಮ್ಮ ದೇಶವನ್ನು ಅಭಿವೃದ್ಧಿ ಮಾಡುವುದರಲ್ಲಿ ಯಾವುದೇ ಸಂದೇಹ ಇಲ್ಲ.

**ಹೆಚ್.ಡಿ. ದೇವೇಗೌಡ:** ಈ ಓವರ್ ಡ್ರಾಫ್ಟನ್ನು ರೈಟ್ ಆಫ್ ಮಾಡಿಸಿ

**ಶ್ರೀ ಆರ್. ಗುಂಡೂರಾವ್:** ಮಾಡಿಸುತ್ತೇವೆ, ಬಿಡುವುದಿಲ್ಲ. ಇನ್ನು ಶರಾವತಿಯ ಯೋಜನೆಯ ವಿಷಯದಲ್ಲಿ ನಮ್ಮ ಲೋಕೋಪಯೋಗಿ ಮಂತ್ರಿಗಳು, ವಿರೋಧಪಕ್ಷದವರು ಕೇಳಿದ್ದಕ್ಕೆ ತಕ್ಷಣ ನಿಜಸ್ಥಿತಿ ಏನು, ಏನು ಏನು ಅನ್ಯಾಯವಾಗಿದೆ ಕಂಟ್ರಾಕ್ಟ್‌ದಾರರಿಂದ ಎಲ್ಲೆಲ್ಲಿ ಮೋಸವಾಗಿದೆ, ಎನ್ನುವುದನ್ನು ಪರಿಶೀಲಿಸಿ ಕೇವಲ ಮೂರು ದಿವಸದಲ್ಲಿ ನಿಜಸ್ಥಿತಿಯನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಅನೇಕ ಲೋಪದೋಷಗಳು ಹತ್ತಾರು ವರ್ಷಗಳ ಕಾಲ ನಡೆದುದು ಸರ್ಕಾರದ ಗಮನಕ್ಕೆ ಬಂದಿದೆ. ಅವರು ಮೊನ್ನೆ ಈ ಮನೆಯಲ್ಲಿ ಮಾತನಾಡುತ್ತಾ ಇದರ ಬಗ್ಗೆ ನ್ಯಾಯಾಂಗ ವಿಚಾರಣೆ ಮಾಡುವುದಿಲ್ಲಾ ಎಂದೂ ಹೇಳಲಿಲ್ಲ, ಮಾಡಬೇಕು ಎಂದೂ ಹೇಳಲಿಲ್ಲ. ಅದನ್ನು ಲೋಕೋಪಯೋಗಿ ಮಂತ್ರಿಗಳು ಸಮಗ್ರವಾಗಿ ಪರಿಶೀಲಿಸುತ್ತೇನೆ ಎಂದು ಭರವಸೆ ಕೊಟ್ಟಿರುವುದು ಸ್ವಾಗತಾರ್ಹವಾದುದು ಎಂದು ತಿಳಿದುಕೊಂಡಿದ್ದೇನೆ.

ಕೊನೆಯದಾಗಿ ವಿದ್ಯಾ ಇಲಾಖೆ ಬಹಳ ಮುಖ್ಯವಾದ ಇಲಾಖೆ, ಈ ಇಲಾಖೆಗೆ 55 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಅದು ಸಾಲದು. ಏಕೆಂದರೆ ಬಡ ಜನರ ಮಕ್ಕಳಿಗೆ ವಿದ್ಯೆ ಸಿಕ್ಕಲಿಕ್ಕೆ ಮತ್ತು ಬಡಜನರಿಗೆ ಅನುಕೂಲವಾಗುವುದಕ್ಕೆ 55 ಕೋಟಿ ರೂಪಾಯಿಗಳಿಂಬ 80 ಕೋಟಿ ರೂಪಾಯಿಗಳವರೆಗೆ ಏರಿಸಬೇಕು ಎಂದು ಹಣಕಾಸಿನ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಖಾಸಗೀ ಶಾಲೆಗಳನ್ನು ರಾಷ್ಟ್ರೀಕರಣ ಮಾಡಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು. ಅದರಿಂದ ಬಡವರಿಗೆ ಹೆಚ್ಚು ಪ್ರಯೋಜನವಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಹಾಗೆಯೇ ಅನೇಕ ಸರ್ಕಾರಿ ಜಾಗಗಳನ್ನು ದೊಡ್ಡ ದೊಡ್ಡ ಹಣವಂತರು ಮತ್ತು ಅಧಿಕಾರಿ ವರ್ಗದವರು ಆಕ್ರಮಿಸಿಕೊಂಡು ಆ ಜಾಗದ ಪೂರ್ತಿ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಸರ್ಕಾರಕ್ಕೆ ಅದರಿಂದ ಯಾವ ತರಹದ ಪ್ರಯೋಜನವೂ ಬಂದಿಲ್ಲ. ಈ ದಿಸೆಯಿಂದ ಸರ್ಕಾರದವರು ಕೂಡಲೇ ಪರಿಶೀಲಿಸಿ ಆ ಜಾಗಗಳನ್ನು ಸರ್ಕಾರಕ್ಕೆ ವಾಪಸ್ ತೆಗೆದುಕೊಳ್ಳಬೇಕು. ಇಲ್ಲದೆ ಹೋದರೆ ಹೆಚ್ಚಿನ ಪೆನಾಲ್ಟಿಯನ್ನು ಹಾಕಿ ಆ ಮೂಲಕ ಜನತೆಗೆ ಹೆಚ್ಚಿನ ಪ್ರಯೋಜನವಾಗುವ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಮಯದಲ್ಲಿ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇಷ್ಟೊಂದು ಸಲಹೆಗಳನ್ನು ಕೊಟ್ಟು, ಈ ಕುದುರೆ ಜೂಜಿನ ಬಗ್ಗೆ ನಮ್ಮ ಅರ್ಥ ಮಂತ್ರಿಗಳು

ಹೆಚ್ಚಿನ ಗಮನ ಕೊಡಬೇಕು ಎಂದು ಒತ್ತಾಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ, ಮತ್ತು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ."

## ಬೇಡಿಕೆಗಳ ಮೇಲಿನ ಚರ್ಚೆಗೆ ವಾರ್ತಾ, ಹಾಗೂ ಯುವಜನ ಸೇವಾ ಸಚಿವರಾಗಿ ನೀಡಿರುವ ಉತ್ತರ

ಶಾಸಕರಾಗಿ ಎರಡು ವರ್ಷ ತುಂಬುವ ಮೊದಲೇ ಶ್ರೀ ಗುಂಡೂರಾವ್ ರಾಜ್ಯ ಸಚಿವರಾದರೂ ಅವರ ಹೆಗಲ ಮೇಲೆ ವಾರ್ತೆ, ಯುವಜನ ಸೇವಾ ಶಾಖೆಗಳ ಹೊಣೆ ಹೊರಿಸಲ್ಪಟ್ಟಿತು.

ಕರ್ನಾಟಕ ವಿಧಾನ ಸಭೆಯಲ್ಲಿ 27ನೇ ಮೇ 1975 ರಂದು ಈ ಯುವ ಸಚಿವ ಬಜೆಟ್ ಬೇಡಿಕೆಗಳ ಚರ್ಚೆಗೆ ಮೊದಲ ಬಾರಿಗೆ ಉತ್ತರ ಕೊಟ್ಟ ರೀತಿ ಗಮನ ಸೆಳೆಯಿತು.

**ಆರ್. ಗುಂಡೂರಾವ್ (ವಾರ್ತಾ ಮತ್ತು ಯುವಜನ ಸೇವಾ ಶಾಖೆಗಳ ರಾಜ್ಯ ಮಂತ್ರಿಗಳು)** : ಮಾನ್ಯ ಅಧ್ಯಕ್ಷರೇ ಮೊಟ್ಟ ಮೊದಲನೆಯದಾಗಿ ನಮ್ಮ ಸನ್ಮಾನ್ಯ ಸದಸ್ಯರೆಲ್ಲರನ್ನೂ ನಾನು ಅಭಿನಂದಿಸಬೇಕಾಗಿದೆ. ಏತಕ್ಕೆಂದರೇ ಮಾತನಾಡಿದಂಥ ಎಲ್ಲ ಸದಸ್ಯರು ಸಹಕಾರ ಇಲಾಖೆಯ ಮೇಲೆ ಮಾತನಾಡುತ್ತಾ ನನ್ನ ಕ್ಷೇತ್ರವಾದ ಈ ಯುವಜನ ಸೇವೆ ಮತ್ತು ವಾರ್ತಾ ಇಲಾಖೆಯ ಬಗ್ಗೆ ಯಾರೂ ಟೀಕೆ ಮಾಡಲಿಲ್ಲ ಎರಡನೆಯದಾಗಿ ಕೆಲವು ಸದಸ್ಯರು ಕೆಲವೊಂದು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ.

ಯುವಜನ ಸೇವೆಯ ಬಗ್ಗೆ ಎರಡು ಮಾತುಗಳನ್ನಾಡಿ ಆಮೇಲೆ ವಾರ್ತೆ ಇಲಾಖೆಗೆ ಬರುತ್ತೇನೆ. ಈ ಯುವಜನ ಸೇವೆಯ ವಿಷಯದಲ್ಲಿ ಹೇಳುವುದಾದರೆ ಎಲ್ಲಾ ಸಂಪತ್ತುಗಳಿಗಿಂತಲೂ ಹೆಚ್ಚಿನ ಸಂಪತ್ತು ಎಂದರೆ ಈ ಯುವಜನ ಸೇವೆ. ಅದರಲ್ಲೂ ಯುವಕರು ಎಂದರೇ ಅವರು ಮುಂದೆ ಈ ದೇಶದ ಹೆಚ್ಚಿನ ಜವಾಬ್ದಾರಿಯನ್ನು ಹೊರುವಂಥವರು, ಅವರಿಗೆ ನಾವು ಸಾಕಷ್ಟು ಸಹಾಯ ಮಾಡಬೇಕಾಗಿದೆ. ಹಾಗೂ ಸರ್ಕಾರ ಎಲ್ಲಾ ತರಹದ ಬೆಂಬಲವೂ ನೀಡಬೇಕಾಗಿದೆ.

**ಶ್ರೀ ಕೊಣಂದೂರು ಲಿಂಗಪ್ಪ** - ಅದೇ ಕೈಯಲ್ಲಿ ಸೈಕಲ್ ಚೈನು, ಚಾಕು ಚೂರಿ ....

**ಶ್ರೀ ಆರ್. ಗುಂಡೂರಾವ್** - ಅದೇನು ನೀವು ಮಾಡಿಸಿದ್ದೀರಿ, ಅದನ್ನು ತಪ್ಪಿಸಬೇಕು ಎಂದು ಈ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಕೈಯಲ್ಲಿ ಚಾಕು, ಚೂರಿ, ಸೈಕಲ್ ಚೈನ್, ಹಿಡಿದಿದ್ದಂಥವರ ಕೈಗೆ ಹಾಕಿ, ಕ್ರಿಕೆಟ್, ವಾಲಿಬಾಲ್, ಬ್ಯಾಡ್ಮಿಂಟನ್ ಕೊಟ್ಟು ಅವರ ಮನಸ್ಸನ್ನು ಬೇರೆ ಕಡೆಗೆ ಒಂದು ರಚನಾತ್ಮಕವಾದ ಕಡೆಗೆ ತೆಗೆದುಕೊಂಡು ಹೋಗುವುದೇ ಈ ಯುವಜನ ಸೇವಾದ ಮುಖ್ಯ ಉದ್ದೇಶ.

ಕಳೆದ ಒಂದು ವರ್ಷದಿಂದ ಬಹುಶಃ ಹಿಂದಿನ ಎಲ್ಲಾ ವರ್ಗಗಳಿಗಿಂತಲೂ ಸಾಕಷ್ಟು ಸಾಧಿಸಿದ್ದೇವೆಂದು ಬಹಳ ಹೆಮ್ಮೆಯಿಂದ ತಮ್ಮ ಮುಂದೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಜೊತೆಗೆ ಇನ್ನೊಂದು ಸಂತೋಷದ ಸಂಗತಿ ಅದನ್ನು ತಾವು ಒಪ್ಪಿಕೊಳ್ಳುತ್ತೀರಿ. ಅದರಲ್ಲಿ

---

ವಿ.ಸ.ನ. ದಿನಾಂಕ: 27-5-1975

ಯಾರಾದರೂ ಭಿನ್ನಾಭಿಪ್ರಾಯವಿರಲಾರದೆಂದು ಕಾಣುತ್ತದೆ. ಮೊನ್ನೆ ತಾನೆ ನಡೆದಂತಹ ನಮ್ಮ ಅಖಿಲ ಭಾರತ ಕುಸ್ತಿ ಪಂದ್ಯದಲ್ಲಿ ಗೆದ್ದಂಥ ನಮ್ಮ ಬೆಳಗಾಂನ ಶ್ರೀ ಚಂಬಾ ಮುತ್ತನಾಳ್ ಅವರ ತಂದೆತಾಯಿಗಳಿಗೆ 5000 ನಗದು ಬಹುಮಾನದ ಜೊತೆಗೆ 20 ಎಕರೆ ಜಮೀನು ಬೆಳಗಾಂನಲ್ಲಿ ಕೊಡಬೇಕೆಂದು ಸರ್ಕಾರ ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದೆ.

ಇದರ ಜೊತೆಗೆ ಈ ದಿನ ನಿಮಗೆ ಇನ್ನೊಂದು ಸಂತೋಷದ ವಿಷಯವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ಭಾರತದ ಹಾಕಿ ಚಾಂಪಿಯನ್ಸ್ ವಿಶ್ವದಲ್ಲಿಯೇ ಹಾಕಿ ಪಂದ್ಯದಲ್ಲಿ ಗೆದ್ದು ಬಂದಿದ್ದಾರೆ, ಆ ಟೀಮಿನಲ್ಲಿ ಇರತಕ್ಕಂಥ ಆಟಗಾರರ ತಂದೆತಾಯಿಗಳಿಗೆಲ್ಲ 2000 ಬಹುಮಾನವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರ ಜೊತೆಗೆ ವಿಶ್ವದ ಹಾಕಿ ಪಂದ್ಯದಲ್ಲಿ ಆಡಿದಂಥವರು ಯಾರಿದ್ದಾರೆ ಅವರನ್ನು ಬೆಂಗಳೂರಿಗೂ ಕರೆಸಿ ಇಲ್ಲಿ ಒಂದು ಟೆಸ್ಟ್ ಮ್ಯಾಚನ್ನು ಆಡಿಸಿ ನಮ್ಮ ಕರ್ನಾಟಕದವರೂ ಆ ಒಂದು ಆಟವನ್ನು ನೋಡುವಂತಹ ಅವಕಾಶವನ್ನು ಕಲ್ಪಿಸಿಕೊಟ್ಟು ಆ ಒಂದು ಸಮಯದಲ್ಲಿಯೇ ಆ ಬಹುಮಾನವನ್ನು ಅವರಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಅಧ್ಯಕ್ಷರೇ, ನಗರಗಳಲ್ಲಿ ಆಟಗಳ ಪ್ರಗತಿ ಮಾಡುವುದಕ್ಕಿಂಥ ಹೆಚ್ಚಾಗಿ ಗ್ರಾಮಗಳಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಈ ಆಟೋಟಗಳು ಹೆಚ್ಚಾಗಿ ಆಗಬೇಕಾಗಿದೆ. ಅದರಲ್ಲೂ ನಾವು ನಿರೀಕ್ಷಿಸಿದಷ್ಟು ಮಟ್ಟದ ಪ್ರಗತಿಯನ್ನು ನಿಧಾನವಾಗಿ ಸಾಧಿಸುತ್ತಿದ್ದೇವೆ. ಹೆಚ್ಚಿನ ಮಟ್ಟದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಸಹ ಜಿಲ್ಲಾ ಮಟ್ಟದಲ್ಲಿ ಯುವಜನ ಮಂಡಲಿಯ ಜಿಲ್ಲಾ ಅಧಿಕಾರಿಗಳು, ಅಧ್ಯಕ್ಷರಾಗಿದ್ದಾರೆ, ಅವರಿಗೆ ಅಲ್ಲಿ ಯುವಜನ ಕ್ಲಬ್‌ಗಳಿಗೆ ಸಾಕಷ್ಟು ಧನಸಹಾಯವನ್ನು, ಅವರಿಗೆ ಅಲ್ಲಿಯ ಯಾವುದೇ ತರಹದ ಆಟವಾಡಲೀ, ವಾಲಿಬಾಲ್, ಬ್ಯಾಡ್ಮಿಂಟನ್, ಕ್ರಿಕೆಟ್ ಯಾವುದೇ ಆಟವಾಡಲಿ ಅವರಿಗೆ ಹೆಚ್ಚಿನ ಸಹಾಯ ಮಾಡಬೇಕಾಗಿದೆ. ಮತ್ತು ಆಟೋಟಗಳ ಸಾಮುಗ್ರಿಗಳನ್ನು ಸಹ ಒದಗಿಸಿ ಕೊಡಬೇಕಾಗಿದೆಯೆಂದು ಹೇಳುವಂಥ ಯೋಜನೆಗಳನ್ನು ಈಗಗಾಲೇ ಹಾಕಿಕೊಂಡಿದ್ದೇವೆ. ಸಾಧಾರಣವಾಗಿ 6000 ಈ ತರಹದ ಕ್ಲಬ್ಬುಗಳು ನಮ್ಮ ರಾಜ್ಯದಲ್ಲಿವೆ. ನಮಗೆ ನಿಮಗೆ ಗೊತ್ತಿರುವ ಹಾಗೆ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಕಷ್ಟದ ಪರಿಸ್ಥಿತಿ ಇದೆ. ನಾವು ಏನು ಯೋಜನೆಗಳನ್ನು ಮಾಡಿದ್ದೇವೆ ಆ ರೀತಿಯಲ್ಲಿ ಮಾಡುವುದಕ್ಕೆ ಆಗದೇ ಹೋದರೂ ಅವರಿಗೆ ಕಟ್ಟಡವನ್ನು ಕಟ್ಟುವುದಕ್ಕೋಸ್ಕರ ನಾಲ್ಕು ನೂರು ರೂಪಾಯಿಗಳನ್ನು ಕೊಡುವುದರ ಜೊತೆಗೆ ಆಟದ ಸಾಮಗ್ರಿಗಳನ್ನು ಕೂಡ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಒದಗಿಸಿಕೊಡಲು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈಗಾಗಲೇ ಬೇಕಾದಷ್ಟು ಸಹಾಯವನ್ನು ಮಾಡುತ್ತಿದ್ದೇವೆ ಜೊತೆಗೆ ಈ ಯುವಜನರು ಯಾರೇ ಆಗಲಿ ಕರ್ನಾಟಕದಲ್ಲಿ ಅವರು ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿಯಾಗಲಿ ಒಳ್ಳೆಯ ಹೆಸರನ್ನು ಪಡೆದು ಕರ್ನಾಟಕಕ್ಕೆ ಕೀರ್ತಿಯನ್ನು ತರುತ್ತಾರೆ ಅಂಥ ಆಟಗಾರರಿಗೂ ಸಹ ಒಂದು ಸಾವಿರ ರೂಪಾಯಿಗಳ ಬಹುಮಾನವನ್ನು ರಾಜ್ಯ ಸರಕಾರದವರು ಕೊಡಬೇಕೆಂದು ಮಾಡಿದೆ. ಅದರ ಉದ್ದೇಶ ಯಾವುದೇ ಒಂದು ದೇಶ

ಐಶ್ವರ್ಯವಂತ ರಾಷ್ಟ್ರವಾಗಿರಲಿ, ಎಷ್ಟೇ ಕಾರ್ಖಾನೆಗಳು ಎಷ್ಟೇ ಅಭಿವೃದ್ಧಿ ಹೊಂದಿದರು ಆ ದೇಹಾರೋಗ್ಯ ದಿಶೆಯಲ್ಲಿ, ಆಟ ಪಾಠಗಳಲ್ಲಿ ಹೇಗೆ ಮುಂದುವರೆದಿದೆ ಎನ್ನುವುದನ್ನು ನೋಡಬೇಕಾಗುತ್ತದೆ. ಅಮೇರಿಕಾ ದೇಶದವರು ಎಷ್ಟೇ ಮುಂದುವರೆದಿದ್ದರೂ ಸ್ಪೋರ್ಟ್ಸ್‌ಗಳಲ್ಲಿ ಅವರ ಕಣ್ಣು ರಷ್ಯಾ, ಜಪಾನ್ ಮತ್ತಿತರ ದೇಶಗಳ ಮೇಲೆ ಇರುತ್ತದೆ. ಏತಕ್ಕೆಂದರೆ ಹೆಚ್ಚಿನ ರೀತಿಯಲ್ಲಿ ಈ ದೇಶಗಳು ಆಟಗಳಲ್ಲಿ ಭಾಗವಹಿಸುತ್ತಾರೆ ಮತ್ತು ಅತಿ ಹೆಚ್ಚಿನ ಬಹುಮಾನಗಳನ್ನು ಪಡೆಯುತ್ತಿದ್ದಾರೆ. ಇದರಿಂದ ಅವರು ಶಕ್ತಿವಂತರಾಗಿ, ಆರೋಗ್ಯವಂತರಾಗಿ 100-150 ವರ್ಷಗಳ ಕಾಲ ಬದುಕಿರುತ್ತಾರೆ. ಆದರೆ ನಾವು 50 ವರ್ಷಗಳ ಕಾಲ ಕಳೆದ ಮೇಲೆ ಯಾವುದಾದರೂ ವಿಧಾನಸಭೆಯಲ್ಲಿ, ಅಂಗಡಿಯಲ್ಲಿ, ಮಾರ್ಕೆಟ್‌ನ ಹತ್ತಿರ ಹೋಗಿ ಆರೋಗ್ಯವನ್ನು ಸಂಪಾದನೆ ಮಾಡಿಕೊಂಡು ಬರುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ.

ಆರೋಗ್ಯವನ್ನು ಸಂಪಾದನೆ ಮಾಡಬೇಕಾದರೆ ಅದು ಯುವಕರ ವಯಸ್ಸಿನಲ್ಲಿ ಮಾತ್ರ ಸಾಧ್ಯ. ಯುವಕರಿಗೆ ಆರೋಗ್ಯ ಚೆನ್ನಾಗಿರುತ್ತದೆ. ಅವರು ಯಾವ ಕೆಲಸಗಳನ್ನು ಮಾಡಲಿ, ಯಾವ ಕೆಲಸಗಳನ್ನು ಮಾಡುವಂಥ ಧೈರ್ಯ, ಶಕ್ತಿ ಅವರಲ್ಲಿ ಇರುತ್ತದೆ. ಇಂಥ ಒಂದು ಆರೋಗ್ಯ ಬರಬೇಕೆಂದರೆ ಅದು ಚಿಕ್ಕ ವಯಸ್ಸಿನಲ್ಲಿ, ವಿದ್ಯಾರ್ಥಿ ದೆಸೆಯಲ್ಲಿ ಬರಬೇಕೆ ಹೊರತು ಯಾವುದೇ ಒಂದು ಸಮಯದಲ್ಲಿ ನಾನು ಆರೋಗ್ಯವನ್ನು ಸಂಪಾದನೆ ಮಾಡುತ್ತೇನೆ ಎಂದರೆ ಸಾಧ್ಯವಿಲ್ಲ. ಅದರಿಂದಲೇ ಇಂಥಾ ಒಂದು ಆರೋಗ್ಯವನ್ನು ಸಂಪಾದನೆ ಮಾಡಬೇಕೆಂದರೆ ಯುವಕರಿಗೆ ಹೆಚ್ಚಿನ ಬೆಂಬಲ, ಸ್ಫೂರ್ತಿಯನ್ನು ನಾವು ಕೊಡಬೇಕು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಹೇಳಿರುವುದು ಹೇಳಿದರೆ ತಪ್ಪಾಗಲಾರದು. "When wealth is lost nothing is lost, when health is lost something is lost, when character is lost everything is lost. ಅಂತ ಹೇಳಿದ್ದಾರೆ. ಆದರೆ ನನ್ನ ದೃಷ್ಟಿಯಲ್ಲಿ ಅದನ್ನು ತಿದ್ದಿಕೊಳ್ಳಬಹುದು. ಏನೋ ಒಂದು ಸಮಯದಲ್ಲಿ ಗೊತ್ತಿಲ್ಲದೆ ತಪ್ಪು ಮಾಡಿದರೆ ಅದನ್ನು ನಾವು ತಿದ್ದಿಕೊಳ್ಳಬಹುದು. ಆದರೆ, ಯಾವ ಮನುಷ್ಯನ ಆರೋಗ್ಯ ಕೆಟ್ಟು ಹೋಯಿತು, ಆತನಿಗೆ ಮಗ ಬೇಕಿಲ್ಲ, ಹೆಂಡತಿಗೆ, ಗಂಡ ಬೇಕಿಲ್ಲ, ಗಂಡನಿಗೆ ಹೆಂಡತಿ ಬೇಕಿಲ್ಲ. ಏಕೆಂದರೆ ಹೆಲ್ತ್ ಈಸ್ ಮೋರ್ ಇಂಪಾರ್ಟೆಂಟ್. ಆರೋಗ್ಯವನ್ನು ಸಂಪಾದಿಸಬೇಕಾದರೆ ಯೂತ್ ಮೂವ್ಮೆಂಟ್ ಬಹಳ ಮುಖ್ಯವಾದುದ್ದು. ಯುವಕರಿಗೆ ಚಾಕು ಚೈನು ಮುಂತಾದವುಗಳನ್ನು ಕೊಡುವುದು ಅಲ್ಲ, ಕ್ರಿಕೆಟ್, ಫುಟ್ಬಾಲ್ ಕುಸ್ತಿ ಮುಂತಾದ ಆಟಗಳನ್ನು ಆಡಿಸಿ ಒಳ್ಳೆಯ ಯುವಕರನ್ನು ತಯಾರು ಮಾಡಿದರೆ ಯುವಕರಲ್ಲಿ ಒಂದು ಶಿಸ್ತು ಬರುತ್ತದೆ, ಆಗ ದೇಶವು ಸುಭದ್ರವಾಗಿರುತ್ತದೆ. ನಾಳೆ ಮಾನ್ಯ ಲಿಂಗಪ್ಪನವರ ಮಕ್ಕಳು ಆಟದಲ್ಲಿ ಗೆದ್ದರೆ ಎಷ್ಟು ಸಂತೋಷ ಪಡುತ್ತಾರೆ? ಆದುದರಿಂದಲೆ ಆರೋಗ್ಯವನ್ನು ಚೆನ್ನಾಗಿ ಬೆಳೆಸಿಕೊಳ್ಳುವುದಕ್ಕೋಸ್ಕರ ಯುವಜನ ಸೇವೆಯ ಮೂಲಕ ಯುವಜನರಿಗೆ ಸ್ಫೂರ್ತಿಯನ್ನು ಒದಗಿಸಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ನಮ್ಮ ಸರ್ಕಾರದವರು ಬಡ್ಜೆಟ್ಟಿನಲ್ಲಿ ಈ ಒಂದು ಬಾಬಿಗೆ ಎಷ್ಟು ಹಣವನ್ನು ಒದಗಿಸಿದ್ದಾರೆ, ಅದು

ಶೀರ ಕಡಿಮೆ. ಎಲ್ಲ ಇಲಾಖೆಗಳಿಗಿಂತ ಹೆಚ್ಚಾಗಿ ಇದಕ್ಕೆ ಹಣ ಒದಗಿಸಬೇಕು. ವಿದ್ಯಾ ಇಲಾಖೆಗೆ ಸರಕಾರದವರು 80 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಜನರಲ್ ಅಡ್ಮಿನಿಸ್ಟ್ರೇಷನ್ ಇಲಾಖೆಗೆ ಹಲವಾರು ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ದೇಶದ ಭವಿಷ್ಯದ ದೃಷ್ಟಿಯಿಂದ ರಾಜ ಮಹಾರಾಜರುಗಳ ಕಾಲದಿಂದಲೂ ಈ ಆಟಪಾಠಗಳಿಗೆ ಪ್ರೋತ್ಸಾಹ ಕೊಟ್ಟು ಕುಸ್ತಿ ಆಟ, ಪಂದ್ಯಗಳನ್ನು ಏರ್ಪಾಡು ಮಾಡುತ್ತಿದ್ದರು. ಅನೇಕ ಜನರನ್ನು ಆಹ್ವಾನ ಮಾಡುತ್ತಿದ್ದರು. ಅವರಿಗೆ ಸಾಕಷ್ಟು ಬಹುಮಾನಗಳನ್ನು, ಉಂಬಳಿಗಳನ್ನು ಕೊಡುತ್ತಿದ್ದರು. ಇದರ ಉದ್ದೇಶ, ದೇಶದಲ್ಲಿ ಒಳ್ಳೆಯ ಶಕ್ತಿಯುತವಾದ ಜನರು ಹೆಚ್ಚಾಗಬೇಕು, ಯುವಕರು ಆರೋಗ್ಯವಂತರಾಗಿರಬೇಕು. ಅವರು ಎಲ್ಲಾ ತರಹದ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಾಗುವುದು. ಈ ಬಗ್ಗೆ ಮಾನ್ಯ ಸದಸ್ಯರುಗಳು ಏನು ಸಲಹೆಗಳನ್ನು ಕೊಟ್ಟಿದ್ದಾರೆ ಅದನ್ನು ಈಗಾಗಲೆ ನಮ್ಮ ಕಾರ್ಯಕ್ರಮಗಳಲ್ಲಿ ಹಾಕಿಕೊಂಡಿದ್ದೇವೆ. ಕರ್ನಾಟಕಕ್ಕೆ ಒಳ್ಳೆಯ ಹೆಸರು ಬರಬೇಕು. ಕರ್ನಾಟಕದವರು ಈಗ ತಾನೆ ರಾಷ್ಟ್ರೀಯ ಕಬಡ್ಡಿ ಪಂದ್ಯದಲ್ಲಿ ಗೆದ್ದು ಬಂದಿದ್ದಾರೆ. ಈ ಎಲ್ಲಾ ಆಟಗಳು ನಮ್ಮ ದೇಶದಲ್ಲಿ, ಗ್ರಾಮಾಂತರ ಪ್ರದೇಶದ ಜನ ಆಡುತ್ತಿದ್ದಂಥ ಆಟಗಳು. ಕ್ರಿಕೆಟ್ ಆಟ, ಇದನ್ನು ಹಿಂದೆ ನಮ್ಮ ಜನ ಲಗ್ಗೆ ಆಟವೆಂದು ಆಡುತ್ತಿದ್ದರು. ಹಾಕಿ ಇಂದು ಕೂಡ ಗ್ರಾಮಾಂತರದಲ್ಲಿ ಕೋಲನ್ನು ಹಿಡಿದುಕೊಂಡು ಜನರ ಆಟವಾಡುತ್ತಿದ್ದರು. ಜನರಲ್ಲಿ ಆರ್ಥಿಕ ಪರಿಸ್ಥಿತಿ ಮುಂದುವರಿದ ಹಾಗೆ ಪರದೇಶದ ಮಾದರಿಯಲ್ಲಿ ನಮ್ಮ ಆಟಗಳನ್ನು ಆಡುತ್ತಿದ್ದೇವೆ. ಹಾಕಿ ಚಾಂಪಿಯನ್‌ಶಿಪ್ ಭಾರತಕ್ಕೆ ಇಲ್ಲವೇ ಪಾಕಿಸ್ಥಾನಕ್ಕೆ ಹೋಗುತ್ತಿದೆ. ಬೇರೆ ಯಾವ ರಾಷ್ಟ್ರದವರು ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇಂಥ ಆಟಗಳಿಗೆ ನಾವು ಬೆಂಬಲ ಕೊಟ್ಟು ಯುವಕರನ್ನು ಬಲಿಷ್ಠರನ್ನಾಗಿ ಮಾಡಬೇಕಾಗಿದೆ. ಮಾನ್ಯ ಹನುಮೇಗೌಡರಿಗೆ ಗೊತ್ತು. ಹಾಸನ ಜಿಲ್ಲೆಯಲ್ಲಿ ವಾಲಿಬಾಲನ್ನು ಎಷ್ಟರ ಮಟ್ಟಿಗೆ ಆಡುತ್ತಿದ್ದಾರೆಯೆಂದು, ನಿಜವಾಗಿಯೂ ಅವರಿಗೆ ಸರಿಯಾದ ತರಬೇತಿ ಕೊಟ್ಟು ಬೆಂಬಲ ನೀಡುವುದು ಒಳ್ಳೆಯದು. ಇಲ್ಲದೆ ಹೋದರೆ ಅವರು ರಾಜ್ಯಮಟ್ಟದಲ್ಲಿ ರಾಷ್ಟ್ರಮಟ್ಟದಲ್ಲಿ ಈ ಆಟದಲ್ಲಿ ಭಾಗವಹಿಸಲು ಸಾಧ್ಯವಾಗಲಿಕ್ಕಿಲ್ಲ. ಶಕ್ತಿಯುತವಾಗಿ ಬಾಲನ್ನು ಒದ್ದರೆ ಬಾಲು ಬರ್ಸ್ಟ್ ಆಗತಕ್ಕ ರೀತಿಯಲ್ಲಿ ಒದೆಯುವಂಥ ಯುವಕರು ಇದ್ದಾರೆ. ಅವರಿಗೆ ತರಬೇತಿ ಮುಖ್ಯವಾಗಿ ಬೇಕು. ಗ್ರಾಮಾಂತರಗಳಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ಪಂದ್ಯಗಳನ್ನು ಏರ್ಪಡಿಸಬೇಕು. ಬೆಂಗಳೂರಿನಲ್ಲಿ ಪಂದ್ಯಗಳನ್ನು ಏರ್ಪಡಿಸಿದರೆ ಹಳ್ಳಿಯ ಜನರು ಅಲ್ಲಿಂದ ಇಲ್ಲಿಗೆ ಬಂದು ನೋಡಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಪಂದ್ಯಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಏರ್ಪಡಿಸುವುದು ಸೂಕ್ತ ಎಂದು ತಿಳಿದಿದ್ದೇವೆ. ಇದರಿಂದ ಅಲ್ಲಿಯ ತರುಣರಿಗೆ ಬೆಂಬಲವನ್ನು ಕೊಡುವುದಲ್ಲದೆ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಟಗಳಿಗೆ ಭಾಗವಹಿಸುವುದಕ್ಕಾಗಿ ಅವಕಾಶವಾಗುತ್ತದೆ. ನಾನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯತಕ್ಕ ಕುಸ್ತಿ ಪಂದ್ಯವನ್ನು ನೋಡುವುದಕ್ಕೆ ಹೊರದೇಶಕ್ಕೆ ಹೋಗಿದ್ದಾಗ ಅಲ್ಲಿ ಎಷ್ಟು ಜನರು ಭಾಗವಹಿಸುತ್ತಾರೆ ಎನ್ನುವುದನ್ನು ನೋಡಬೇಕು. ನಮ್ಮಲ್ಲಿ ಒಂದು

ಸ್ಟೇಡಿಯಂ ಅನ್ನು ಕಟ್ಟಬೇಕಾದರೆ ಸುಮಾರು 20-30 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಕೆಲವು ಸಂದರ್ಭಗಳಲ್ಲಿ ಅಷ್ಟು ಖರ್ಚುಮಾಡುವುದಕ್ಕಾಗುವುದಿಲ್ಲ. ಆದರೆ ಅಲ್ಲಿ ಒಂದು ಸ್ಟೇಡಿಯಂಗೆ ಸುಮಾರು 250 ಕೋಟಿಗಳಷ್ಟು ಖರ್ಚು ಮಾಡುತ್ತಾರೆ. ಅಂಥ ಒಂದು ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಗೆ ಖರ್ಚು ಮಾಡುವಷ್ಟು ಹಣ ನಮ್ಮ ದೇಶದ ಒಟ್ಟು ಬಡ್ಜೆಟ್ ಹಣದಷ್ಟು ಆಗಬಹುದು. ಇನ್ನು ಒಂದು ಅಂತರರಾಷ್ಟ್ರೀಯ ಪಂದ್ಯದಲ್ಲಿ ಯಾವ ದೇಶದವರು ಸ್ಪರ್ಧಿಗಳನ್ನು ಕಳುಹಿಸುತ್ತಾರೋ ಮತ್ತು ಯಾರು ಗೆಲ್ಲುತ್ತಾರೋ ಅವರನ್ನು ಆ ದೇಶದ ಹತ್ತು ಜನ ಇರಾನ್ ಯುವತಿಯರೊಂದಿಗೆ ನಿಲ್ಲಿಸಿ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಯಾರು ಮೊದಲನೆ ಸ್ಥಾನ ಪಡೆಯುತ್ತಾರೊ ಮತ್ತು ಎರಡು, ಮೂರನೆಯ ಸ್ಥಾನ ಪಡೆಯುತ್ತಾರೊ, ಅವರು ಯಾವ ದೇಶದವರೆ ಆಗಿರಲಿ ಆ ರಾಷ್ಟ್ರದ ಧ್ವಜವನ್ನು ತಮ್ಮ ದೇಶದ ರಾಷ್ಟ್ರದ ಧ್ವಜದೊಂದಿಗೆ ಮೇಲೆ ಏರಿಸಿ ಅಲ್ಲಿ ನಾವೆಲ್ಲರು ಗೌರವವನ್ನು ಸಲ್ಲಿಸಬೇಕು. ಇಂಥ ಒಂದು ಸಮಯದಲ್ಲಿ ನಮ್ಮ ದೇಶದ ಧ್ವಜ ಹೋಗದೆ ಚೈನಾ ದೇಶಧ್ವಜ ಮೇಲೆ ಹೋಗುತ್ತದೆ, ರಷ್ಯಾ ದೇಶದ ಧ್ವಜ ಮೇಲೆ ಹೋಗುತ್ತದೆ ಎಂದರೆ ನಾವು ನಿಜವಾಗಿಯೂ ತಲೆ ತಗ್ಗಿಸಬೇಕಾದಂತಹ ಒಂದು ಸನ್ನಿವೇಶ ಬರುತ್ತದೆ. ಆದ್ದರಿಂದ ನಾವು ಆಟಕ್ಕೋಸ್ಕರ ಹೆಚ್ಚಿನ ಬೆಂಬಲ ಕೊಡಬೇಕು. ನಾವೆಲ್ಲರೂ ಇದನ್ನು ಸರಿಯಾದ ರೀತಿಯಲ್ಲಿ ಯೋಚನೆ ಮಾಡಬೇಕು. ಮಾನ್ಯ ಸದಸ್ಯರೆಲ್ಲರು ನನ್ನ ಖಾತೆಯ ಬಗ್ಗೆ ಯಾವ ಒಂದು ಟೀಕೆಯನ್ನು ಮಾಡದೇ ಬೆಂಬಲ ಕೊಟ್ಟಿದ್ದೀರಿ. ಆದ್ದರಿಂದ ಈ ಒಂದು ಡಿಮ್ಯಾಂಡನ್ನು ಸರ್ವಾನುಮತದಿಂದ ಸಭೆಯವರು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇದರ ಜೊತೆಯಲ್ಲಿ ನಾವು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತವಾದ ಸ್ಟೇಡಿಯಂ ಅನ್ನು ನಿರ್ಮಾಣ ಮಾಡಬೇಕೆಂದು ಮಾಡಿದ್ದೇವೆ. ಇಡೀ ಭಾರತದಲ್ಲಿಯೇ ಮೈಸೂರಿನ ಫುಟ್ಬಾಲ್ ಆಟಗಾರರು ಹೆಸರುವಾಸಿಯಾಗಿದ್ದಾರೆ. ಆದರೆ ಅವರಿಗೆ ಸರಿಯಾದಂಥ ಒಂದು ಆಟದ ಮೈದಾನ ಇಲ್ಲ, ಒಂದು ಕ್ರೀಡಾಂಗಣ ಇಲ್ಲ. ಕಳೆದ ಎರಡು ತಿಂಗಳ ಹಿಂದೆ ನಾನು ಮಹಾರಾಜ ಫುಟ್ಬಾಲ್ ಸ್ಪರ್ಧೆಯನ್ನು ನೋಡುವುದಕ್ಕೆ ಮೈಸೂರಿಗೆ ಹೋದಾಗ ಅಲ್ಲಿಗೆ ಬಂದಂತಹ ಆಟಗಾರರು ಮೈದಾನವನ್ನು ನೋಡಿ ಆಟ ಆಡುವುದಿಲ್ಲ ಎಂದು ಹೇಳಿದರು. ಉತ್ತಮವಾದ ಆಟಗಾರರು ಇಂಥ ಮೈದಾನಗಳಲ್ಲಿ ಆಡಲಿಕ್ಕೆ ಒಪ್ಪುವುದಿಲ್ಲ. ಆಡುವುದಕ್ಕೆ ಇಷ್ಟ ಪಡುವುದಿಲ್ಲ. ಇದು ನಿಜವಾಗಲೂ ನಾವೆಲ್ಲರೂ ವ್ಯಸನಪಡುವಂಥಾದ್ದು. ಆದುದರಿಂದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಒಂದು ಸ್ಟೇಡಿಯಂ ಅನ್ನು ನಿರ್ಮಾಣ ಮಾಡಲೇಬೇಕು. ಅದಕ್ಕಾಗಿ ಸರಕಾರದವರು ಒಂದೊಂದು ಸ್ಟೇಡಿಯಂಗೆ 5 ಲಕ್ಷ ರೂಪಾಯಿಗಳನ್ನು ಈಗಾಗಲೇ ಹಾಸನ, ಬೆಳಗಾಂ, ಬಿಜಾಪುರ ಮತ್ತು ಮಂಡ್ಯ ಮತ್ತು ಇನ್ನು ಎಷ್ಟೋ ಭಾಗಗಳಲ್ಲಿ ಸ್ಟೇಡಿಯಂ ಕೆಲಸ ಪ್ರಾರಂಭವಾಗಿದೆ. ಹಾಸನದಲ್ಲಿ ಈಗಾಗಲೇ 2 ತಿಂಗಳ ಹಿಂದೆ ಈ ಕಾರ್ಯ ಆರಂಭ ಮಾಡಿದೆ. ಇದಕ್ಕೆ ಸರಕಾರದವರು 5 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇನ್ನು 50 ಭಾಗ ಮುನಿಸಿಪಾಲಿಟಿಯವರು, 50 ಭಾಗ ಸಾರ್ವಜನಿಕರು ಕೊಡಬೇಕು.

ಕಡಿಮೆ ಎಂದರೂ ಒಂದು ಸ್ಟೇಡಿಯಂಗೆ 13-14 ಲಕ್ಷ ರೂಪಾಯಿ ಖರ್ಚು ಮಾಡಿ ಉತ್ತಮ ಕ್ರೀಡಾಂಗಣವನ್ನು ಮಾಡಬೇಕು ಎನ್ನುವ ಉದ್ದೇಶ ಇದೆ. ಈಗಾಗಲೇ 9 ಜಿಲ್ಲೆಗಳಲ್ಲಿ ಕೆಲಸ ಆರಂಭವಾಗಿದೆ. ಇದನ್ನು 2 ತಿಂಗಳೊಳಗೆ ಇನ್ನು 4-5 ಜಿಲ್ಲೆಗಳಲ್ಲಿ ಕೆಲಸ ಆಗಲಿದೆ. ಒಟ್ಟಿನಲ್ಲಿ 1975 ಇಸವಿಯೊಳಗೆ ನಮ್ಮ ರಾಜ್ಯದ 19 ಜಿಲ್ಲೆಗಳಲ್ಲೂ ಕೂಡ ಸ್ಟೇಡಿಯಂ ಕಾರ್ಯ ಮುಗಿಸಬೇಕು ಅಂತ ಆಸಕ್ತಿ ವಹಿಸಿದ್ದೇನೆ. ಬಹುಶಃ ತಮ್ಮೆಲ್ಲರ ಸಹಕಾರದಿಂದ ಬಹಳ ಬೇಗ ಪೂರ್ಣಗೊಳ್ಳುತ್ತದೆ ಎನ್ನುವ ಆಸೆ ಇದೆ. ಇದಕ್ಕಾಗಿ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ. ಇನ್ನು ಯುವಜನ ಸೇವೆ ಬಗ್ಗೆ ಎಲ್ಲಾ ಸದಸ್ಯರು ಇದಕ್ಕೆ ಹೆಚ್ಚಿನ ಹಣ ಇಡಬೇಕು ಅಂತ ಹೇಳಿದರು. ಇದರ ಬಗ್ಗೆ ಎಲ್ಲ ಸದಸ್ಯರು ಮಾತನಾಡುತ್ತಾರೆಂದು ಯೋಚನೆ ಮಾಡಿದ್ದೆ ಆದರೆ ಹೆಚ್ಚಿಗೆ ಯಾರು ಮಾತನಾಡಲಿಲ್ಲ, ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶ್ರೀ ಹೆಚ್.ಡಿ. ದೇವೇಗೌಡರ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಎಷ್ಟೋ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಕೂಡ ಅವರ ಜೊತೆಯಲ್ಲಿದ್ದೆ. ಆದರೆ ಅವರು ಈ ಇಲಾಖೆಯ ಬಗ್ಗೆ ಹೆಚ್ಚು ಗಮನ ಇಡಲಿಲ್ಲ. ಅವರ ಗಮನವೆಲ್ಲ ಶ್ರೀಮಾನ್ ಹೆಚ್. ಎಂ. ಚೆನ್ನಬಸಪ್ಪನವರ ಇಲಾಖೆಯಾದ ಪಿ ಡಬ್ಲ್ಯೂ ಡಿ ಮೇಲೆ ಮತ್ತು ಪೋಲೀಸ್ ಇಲಾಖೆ ಮೇಲೆ. ಆದುದರಿಂದ ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಇದಕ್ಕು ಪೂರ್ಣ ಬೆಂಬಲ ಕೊಡಬೇಕು ಎಂದು.

ಇನ್ನು ಇನ್ಫರ್ಮೇಷನ್ ಅಂಡ್ ಪಬ್ಲಿಸಿಟಿ ಬಗ್ಗೆ ಕೆಲವು ಸದಸ್ಯರು ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚು ಟೀಕೆಗಳು ಇಲ್ಲ. ಶ್ರೀಮಾನ್ ಮಂಜುನಾಥರವರು ಒಂದು ಸಲಹೆ ಹೇಳಿದರು. ಎಲ್ಲ ರಾಜಕೀಯ ಮುಖಂಡರ ಫೋಟೋವನ್ನು ಸರ್ಕಾರಿ ಪತ್ರಿಕೆಯಲ್ಲಿ ಹಾಕಿಸಬೇಕೆಂದು ಹೇಳಿದರು. ಮತ್ತು ಧರ್ಮದ ಕೆಲಸ ಯಾರು ಮಾಡುತ್ತಾರೊ ಅವರ ಹೆಸರನ್ನು ಕೂಡ ಹಾಕಿಸಬೇಕೆಂದು ಹೇಳಿದರು. ಅದು ಒಳ್ಳೆಯ ಸಲಹೆ. ಆದರಂತೆ ಇವಾಗ ಡಾ. ಮೋದಿಯವರ ಹೆಸರು ಹಾಕಿಸಿದ್ದೇವೆ. ಅಂತವರ ಫೋಟೋ ಹಾಕುವುದು ಒಳ್ಳೆಯ ಸಲಹೆ. ದೇಶದಲ್ಲಿ ಅಂಥಹ ಫೋಟೋವನ್ನು ಹಾಕಿಸುವುದಕ್ಕೆ ಖಂಡಿತಾ ಪ್ರಯತ್ನ ಪಡುತ್ತೇನೆ.

ಇನ್ನು ಪತ್ರಿಕೆಗಳ ಬಗ್ಗೆ ಎಲ್ಲಾ ಸದಸ್ಯರು ಮಾತನಾಡಿದ್ದಾರೆ. ಶ್ರೀಮಾನ್ ರುದ್ರಪ್ಪನವರು, ಶ್ರೀಮಾನ್ ನಾಯ್ಡು ಅವರು ಮತ್ತು ಶ್ರೀಮಾನ್ ಬಂಗಾರಪ್ಪನವರು, ಈ ಮೂರು ಜನರು ಈ ವಾರ್ತಾ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ. ಈ ಸಣ್ಣ ಪತ್ರಿಕೆಗಳಿಗೆ ಸಾಕಷ್ಟು ಬೆಂಬಲ ಕೊಡಬೇಕೆಂದು. ಈಗಾಗಲೇ ನನ್ನ ಅಭಿಪ್ರಾಯವನ್ನು ಕೂಡ ತಿಳಿಸಿದ್ದೇನೆ. ಆದಷ್ಟು ಮಟ್ಟಿಗೆ ಜಿಲ್ಲಾ ಮಟ್ಟದಲ್ಲಿರುವ ಸಣ್ಣ ಪತ್ರಿಕೆಗಳಿಗೆ ಸಹಾಯವನ್ನು ಕೊಡಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ ಮತ್ತು ಅದಕ್ಕೆ ನನ್ನ ಬೆಂಬಲ ಇದ್ದೇ ಇದೆ. ನಿಜವಾಗಿಯೂ ಪತ್ರಿಕೆಗಳಲ್ಲಿ 2-3 ತರಹ ಪತ್ರಿಕೆಗಳು ಇವೆ. ಈ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದ ದೊಡ್ಡ ದೊಡ್ಡ ಪತ್ರಿಕೆಗಳು ಏನು ಇವೆ, ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ ಈ ಪೇಪರುಗಳು

ಏನು ಇವೆ ಇವುಗಳಿಗೆ ಗ್ರಾಮಾಂತರ ಪ್ರದೇಶಗಳ ಬಗ್ಗೆ ನ್ಯೂಸ್ ಪ್ರಿಂಟ್ ಮಾಡುವುದಕ್ಕೆ ಸಾಕಷ್ಟು ಜಾಗ ಇರುವುದಿಲ್ಲ ಕಾರಣ ಪೇಪರ್ನ ತೊಂದರೆ ಇರುವುದರಿಂದ ಅನೇಕ ವಿಷಯಗಳು ಈ ದೊಡ್ಡ ಪತ್ರಿಕೆಗಳಲ್ಲಿ ಬರುವುದಿಲ್ಲ. ಯಾವ ಪೇಪರ್ ಬೆಂಗಳೂರಿನಲ್ಲಿ ಪ್ರಿಂಟ್ ಆಗುತ್ತದೆಯೋ ಆ ಪೇಪರ್ನಲ್ಲಿ ಕೊಡಗಿನ ವಿಷಯವೆ ಆಗಲಿ, ಶಿವಮೊಗ್ಗದ ವಿಷಯವೇ ಆಗಲಿ, ಬಿಜಾಪುರದ ವಿಷಯವೇ ಆಗಲಿ ಒಂದು ವಿಷಯವೂ ಕೂಡಾ ಇರುವುದಿಲ್ಲ. ಏತಕ್ಕೆಂದರೆ ಅವರಿಗೆ ಕಾಗದದ ಅಭಾವ ಇರುವುದರಿಂದ ವಿಷಯಗಳನ್ನು ಹಾಕಲಿಕ್ಕೆ ತೊಂದರೆಯಿದೆ. ನಿಜವಾಗಿಯೂ ಹೇಳುವುದಾದರೆ ಜಿಲ್ಲಾ ಮಟ್ಟದಲ್ಲಿ ಏನು ಪತ್ರಿಕೆಗಳು ಹೊರಡುತ್ತವೆ. ಆ ಪತ್ರಿಕೆಗಳಿಂದ ಅಲ್ಲಿ ಆ ಜಿಲ್ಲಾಧಿಕಾರಿ ಏನು ಕೆಲಸ ಮಾಡುತ್ತಾರೆ ಆ ಎಸ್ ಪಿ ಏನು ಕೆಲಸ ಮಾಡುತ್ತಾನೆ, ಅಲ್ಲಿ ತಾಲ್ಲೂಕ್ ಬೋರ್ಡ್ ಪ್ರೆಸಿಡೆಂಟರು ಏನು ಮಾಡುತ್ತಾರೆ ಮತ್ತು ಆ ಪುರಸಭೆಯವರು ಏನು ಕೆಲಸ ಮಾಡುತ್ತಾರೆ ಮತ್ತು ಆ ಆಸ್ಪತ್ರೆಗಳಲ್ಲಿ ರೋಗಿಗಳಲ್ಲಿ ಯಾವ ತರಹ ಟ್ರೀಟ್ಮೆಂಟ್ ಸಿಗುತ್ತದೆ ಇವೆಲ್ಲಾ ಗೊತ್ತಾಗುತ್ತದೆ. ಇದೆಲ್ಲಾ ಗ್ರಾಮಾಂತರ ಜನರಿಗೆ ತಿಳಿಸಬೇಕಾದರೆ ಈ ಸಣ್ಣ ಪತ್ರಿಕೆಗಳು ಮಹತ್ತರವಾದಂತಹ ಪಾತ್ರವನ್ನು ಆ ಜಿಲ್ಲೆಗಳಲ್ಲಿ ವಹಿಸುತ್ತವೆ ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ: ಗ್ರಾಮಾಂತರ ಪ್ರದೇಶದಲ್ಲಿ ಈ ಸಣ್ಣ ಪತ್ರಿಕೆಗಳನ್ನು ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತಿದೆ.

ಶ್ರೀ ಆರ್ ಗುಂಡೂರಾವ್ - ಈ ಸಣ್ಣ ಪತ್ರಿಕೆಗಳ ಕಷ್ಟ ಏನು ಇದೆ ಎನ್ನುವುದು ನನಗೆ ಗೊತ್ತಿದೆ. ಅದಕ್ಕೆ ಸಾಕಷ್ಟು ಬೆಂಬಲ ಕೊಡಬೇಕು ಎನ್ನುವುದು ನನಗೆ ಗೊತ್ತಿದೆ. ಆದ್ದರಿಂದ ಜಿಲ್ಲಾ ಮಟ್ಟದಲ್ಲಿ ಏನೇನು ಪಬ್ಲಿಸಿಟಿ ಕೊಡುತ್ತೇವೋ ಅದನ್ನು ಇನ್ನು ಮೇಲೆ ದೊಡ್ಡ ಪತ್ರಿಕೆಗಳಿಗೆ ಕಡಿಮೆ ಮಾಡಿ, ಈ ಸಣ್ಣ ಪತ್ರಿಕೆಗಳಿಗೆ ಕೊಡಬೇಕು ಎನ್ನುವ ಉದ್ದೇಶ ಇದೆ. ಅದನ್ನು ಯಾವ ರೀತಿ ಜಾರಿಗೆ ಕೊಡಬೇಕು ಎನ್ನುವುದನ್ನು ಯೋಚನೆ ಮಾಡುತ್ತಿದ್ದೇವೆ ನನಗಂತೂ ಇದರ ಬಗ್ಗೆ ಆಸಕ್ತಿ ಇದೆ. ಜಿಲ್ಲಾ ಮಟ್ಟದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಈಗ ಬೆಂಗಳೂರಿನಲ್ಲಿ ಪ್ರಿಂಟ್ ಆಗುವ ಪ್ರಜಾವಾಣಿಯೇ ಆಗಲಿ ಅದರಲ್ಲಿ ಬೆಂಗಳೂರು ವಿಷಯ ಬಂದರೆ ಇದನ್ನು ತಿಳಿದುಕೊಂಡರೆ ನನಗೇನು ಪ್ರಯೋಜನ ಎಂದು ಆ ಗ್ರಾಮಾಂತರ ಪ್ರದೇಶದ ಜನರಲ್ಲಿರುವ ಭಾವನೆ ಎಂದು ನನ್ನ ಅಭಿಪ್ರಾಯ. ಅದೇ ಗ್ರಾಮಾಂತರದ ವಿಷಯವಾದರೆ ಅದರ ವಿಷಯವೇ ಬೇರೆ. ನಮ್ಮ ಮನೆ ವಿಷಯ ಏನಾದರೂ ಹೊರಗಡೆ ಬಂದರೆ ಏನಾಗುತ್ತದೋ ಏನೋ ಜನ ಏನು ತಿಳಿದುಕೊಳ್ಳುತ್ತಾರೋ ಎನ್ನುವ ಭಾವನೆ ಬರುತ್ತದೆ. ಅದರಿಂದ ಅವರು ತಪ್ಪು ಮಾಡಬಾರದೂಂತ ಪ್ರಯತ್ನ ಮಾಡುತ್ತಾರೆ. ಅದು ಸಾರ್ವಜನಿಕ ಕೆಲಸವೇ ಆಗಿರಲಿ, ಯಾವ ಕೆಲಸವೇ ಆಗಿರಲಿ ಈ ರೀತಿಯದೊಂದು ಭಾವನೆ ಆ ಗ್ರಾಮಾಂತರ ಪ್ರದೇಶದ ಜನರಲ್ಲಿದೆ. ಇಂತಾ ಒಂದು ಎಚ್ಚರಿಕೆಯಿಂದ ಸಣ್ಣ ಪತ್ರಿಕೆಗಳು ಆಗಾಗ್ಗೆ ತಮ್ಮ ಸಲಹೆಯನ್ನು ನೀಡುತ್ತಾ ಇರುವುದರಿಂದ ಇದು ರಚನಾತ್ಮಕವಾದ ತಿಳುವಳಿಕೆಗೆ ಎಷ್ಟೋ ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಇದು

ಬೆಂಬಲವಾಗಿದೆ ಎಂದು ಹೇಳುತ್ತೇನೆ. ಆದುದರಿಂದ ಈ ಬಗ್ಗೆ ಸಾಕಷ್ಟು ಬೆಂಬಲ ಕೊಡಬೇಕು ಅಂತ ಇದಕ್ಕೆ 2 ಸಾವಿರ 5 ಸಾವಿರ ರೂಪಾಯಿ ಕೊಡಬೇಕು ಅಂತ ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಇಂಥಾ ಪಕ್ಷದವರಿಗೆ ಕೊಡಬೇಕು, ಅಂಥಾ ಪಕ್ಷದವರಿಗೆ ಕೊಡಬೇಕು ಅಂತ ಏನೂ ಇಲ್ಲ. ಯಾವ ಪತ್ರಿಕೆಗಳೂ ನಿಜವಾಗಿಯೂ ಸರ್ಕ್ಯುಲೇಷನ್‌ನಲ್ಲಿ ಇದೆ, ಅದರಲ್ಲೂ ನಮ್ಮ ಮಲೆನಾಡು ಭಾಗದಲ್ಲಿ ಒಂದು ಪೇಪರ್ ಸಿಗಬೇಕಾದರೆ ಎರಡು ದಿವಸವಾಗುತ್ತದೆ. ಆ ಪೇಪರ್ ನಿಜವಾಗಿಯೂ ಟೀ ಅಂಗಡಿಯವನಿಗೆ ತಲುಪಬೇಕು. ಆವಾಗ ಅವನು ಜಾಗ್ರತೆಯಾಗುತ್ತಾನೆ. ವಿದ್ಯಾವಂತರಾದರೆ ತಿಳಿದುಕೊಳ್ಳುತ್ತಾರೆ, ಅಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ, ಹಾಗಿರುವಾಗ ಅವರಿಗೆ ಬೆಂಗಳೂರಿನಿಂದ ಅಥವಾ ಡೆಲ್ಲಿಯಿಂದ ಹೊರಡತಕ್ಕಂಥ ವಿಷಯದಿಂದ ಅವರಿಗೇನು ಪ್ರಯೋಜನ. ವಿದ್ಯಾವಂತರಾದರೆ ಚೆನ್ನಾಗಿ ತಿಳಿದುಕೊಳ್ಳುತ್ತಾರೆ. ಅವಿದ್ಯಾವಂತರಿಗೆ ತಿಳಿಯುವುದು ಹೇಗೆ. ಆದುದರಿಂದ ಈ ಸಣ್ಣ ಪತ್ರಿಕೆಗಳು ಏನು ಇವೆ ಇದು ಸರ್ಕಾರಿ ಮೂಲಕವೇ ಆಗಬೇಕು. ಅಲ್ಲದೇ ಚಲನಚಿತ್ರಗಳ ಮೂಲಕವೇ ಆಗಬೇಕು ಎಂದು ಹೇಳುತ್ತೇನೆ. ಇನ್ನು ಮಾನ್ಯ ಸದಸ್ಯರು ಹೇಳಿದಂತೆ ಈ ಸಣ್ಣ ಪತ್ರಿಕೆಗಳಿಗೆ ಸಾಕಷ್ಟು ಬೆಂಬಲವನ್ನು ಸರ್ಕಾರ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಫಿಲಂ ಯೂನಿಟ್ ಬಗ್ಗೆ ಹೇಳಿದರು. ಅದರಲ್ಲಿ ಬಹಳ ವಿಷಯಗಳನ್ನು ಚಲನಚಿತ್ರ ಮೂಲಕವೇ ನಮ್ಮನ್ನು ಜಾಗೃತಿಗೊಳಿಸುವುದಕ್ಕೆ ಸಾಧ್ಯ ಎಂದು ಹೇಳುತ್ತೇನೆ. ಹೇಗೆಂದರೆ ಈವತ್ತು ಕ್ರಿಕೆಟ್ ಮ್ಯಾಚ್ ನೋಡಿದರೆ ಯಾವ ಕಾರ್ಮಿಕನಿಗೇ ಆಗಲಿ, ಯಾವ ರೈತನಿಗೇ ಆಗಲಿ, ಮ್ಯಾಚ್ ಎಂದರೆ ಏನು ಅಂತ ಗೊತ್ತಾಗುತ್ತದೆ. ಇಲ್ಲದೇ ಹೋದರೆ ಮ್ಯಾಚ್ ಎಂದರೆ ಏನು ಎನ್ನುವುದನ್ನು ಅವನಿಗೆ ವಿವರಿಸಬೇಕಾದರೆ ಎಷ್ಟೋ ದಿನಗಳು ಬೇಕಾಗುತ್ತದೆ. ಆದರೆ ಪ್ರತಿಯೊಬ್ಬರಿಗೂ ಕೂಡ ಸಿನಿಮಾ ನೋಡುವುದಕ್ಕೆ ಆಸೆ ಇದೆ. ನಾವು ಅಷ್ಟೆ. ಯಾರು ಯಾವ ಸಮಾರಂಭಕ್ಕೆ ಹೋಗಲಿ, ಯಾರು ಎಲ್ಲಿಗೇ ಹೋಗಲೀ ಅವೆಲ್ಲಾ ಚಲನಚಿತ್ರಗಳಲ್ಲಿ ಬರುತ್ತದೆ. ಆದುದರಿಂದ ಅದಕ್ಕೆ ಜನಗಳಿಗೆ ಬೆಂಬಲ ಇದ್ದೇ ಇದೆ, ಜನಗಳಲ್ಲಿ ಕೂಡ ಆ ಸಿನಿಮಾಗಳಲ್ಲಿ ಬಹಳ ಆಸಕ್ತಿ ತೋರಿಸುತ್ತಾರೆ. ಏತಕ್ಕೆ ಇದರಲ್ಲಿ ಜನರು ಆಸಕ್ತಿ ತೋರಿಸುತ್ತಾರೆ ಎಂದರೆ ಅವರ ಬುದ್ಧಿ ಹೆಚ್ಚುತ್ತೆ ಅಂತ, ಸಿನಿಮಾ ನೋಡುವುದರಲ್ಲಿ ತಪ್ಪೇನು ಇಲ್ಲ. ಅದಕ್ಕೋಸ್ಕರವಾಗಿ ಸಿನಿಮಾ ನೋಡುವುದು ತಪ್ಪು ಅಂತ ಯಾರು ಹೇಳುತ್ತಾರೆ? ಸಿನಿಮಕ್ಕೆ ಬೆಂಬಲ ಕೊಡಬಾರದು ಅಂತ ಯಾರು ಹೇಳುವುದಿಲ್ಲ. ನಿಜವಾಗಿಯೂ ನೋಡಿದಲ್ಲಿ ಅದರಲ್ಲಿ ಸಾಕಷ್ಟು ತಿಳುವಳಿಕೆ ಬರುತ್ತದೆ. ಇಂಡಿಯನ್ ನ್ಯೂಸ್ ರೀಲ್ ರಾಷ್ಟ್ರದಲ್ಲಿ ಆಗುವಂಥ ಅನೇಕ ಕೆಲಸ ಕಾರ್ಯಗಳನ್ನು ಈ ಚಲನಚಿತ್ರಗಳ ಮೂಲಕವೇ ತಿಳಿಸುತ್ತದೆ. ಆದುದರಿಂದ ಈ ಫಿಲಂ ಯೂನಿಟ್ ಮಹತ್ತರವಾದ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಫಿಲಂ ಯೂನಿಟ್ಟುಗಳು ಬಹಳ ಮಹತ್ತರವಾದ ಕೆಲಸಗಳನ್ನು ಮಾಡಬಹುದು. ಇದಕ್ಕಾಗಿ ನಮ್ಮ ಇಲಾಖೆಯಲ್ಲಿ ಎಷ್ಟು ಚೆನ್ನಾಗಿಮಾಡಲು ಎಷ್ಟು ಸೌಕರ್ಯಗಳು ಇರಬೇಕೋ ಅಷ್ಟು ಸೌಕರ್ಯಗಳು ಸಾಕಷ್ಟು ಇಲ್ಲ. ಇದನ್ನು ಒದಗಿಸಿಕೊಂಡು ಇಂತಹ ಫಿಲಂ

ಯೂನಿಟ್‌ಗಳಿಗೆ ಒಂದು ಪ್ರೋಗ್ರಾಂ ಹಾಕಿಕೊಳ್ಳಲಾಗಿದೆ. ಆದರಂತೆ ಇದಕ್ಕೆ ಬೇಕಾದ ಮೆಶಿನರಿ ಹಾಗೂ ಇನ್ನಿತರ ಉಪಕರಣಗಳನ್ನು ಒದಗಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ತಕ್ಕ ಹಾಲ್‌ಗಳಿರಬೇಕು ಮತ್ತು ಪ್ರಪಂಚದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳು ತಿಳಿಸಲು ಇದರಿಂದ ಅನುಕೂಲವಾಗುತ್ತದೆ. ಇಂತಹ ಫಿಲಂ ಯೂನಿಟ್‌ಗಳನ್ನು ಇನ್ನು ಹೆಚ್ಚಾಗಿ ಮಾಡಿ ಮುಂದುವರಿಸಬೇಕೆಂದು ಈಗಾಗಲೆ ತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದನ್ನು ಖಂಡಿತ ಮಾಡುತ್ತೇವೆ ಎಂದು ಇಲ್ಲಿ ಹೇಳಲು ಇಚ್ಛೆ ಪಡುತ್ತೇನೆ.

ಇನ್ನು ಶ್ರೀ ಲಿಂಗಪ್ಪನವರು ಮಿನಿ ಥಿಯೇಟರ್‌ಗಳ ಬಗ್ಗೆ ಹೇಳಿದರು. ಇದನ್ನು ಎಲ್ಲಾ ಕಡೆಗಳಲ್ಲೂ ಮಾಡುವುದು ಒಳ್ಳೆಯದು. ಇದಕ್ಕಾಗಿಯೇ ಫಿಲಂ ಡೆವಲಪ್‌ಮೆಂಟು ಕಾರ್ಪೋರೇಶನ್ ಮಾಡಲಾಗಿದೆ. ಇವರಿಗೆ ಸಾಕಷ್ಟು ವಿದ್ಯುಚ್ಛಕ್ತಿ ಒದಗಿಸಿ ಕೊಡಬೇಕು ಹಾಗೂ ಇನ್ನಿತರ ಸಹಾಯಗಳನ್ನು ಒದಗಿಸಿ ಕೊಡಬೇಕು. ಇದರಲ್ಲಿ ಯಾರು ಪರಿಣತರಿದ್ದಾರೋ ಅಂಥವರಿಗೆ ಇದರಲ್ಲಿ ಅವಕಾಶಕೊಟ್ಟು ಇದರಲ್ಲಿ ಜನತೆಗೆ ಯಾವ ರೀತಿ ಸಹಾಯ ಮಾಡಬಹುದು ಎನ್ನುವುದನ್ನು ಯೋಚನೆ ಮಾಡಿ ಆದರ ಬಗ್ಗೆ ಸೂಕ್ತವಾದ ಕಾರ್ಯಕ್ರಗಳನ್ನು ತೆಗೆದುಕೊಳ್ಳುತ್ತೇವೆಯೆಂದು ಇಷ್ಟು ಮಾತ್ರ ಹೇಳುತ್ತೇನೆ. ಕೊನೆಯದಾಗಿ ಕಪ್ಪು ಬಿಳುಪು ಫಿಲಂಗಾಗಿ ರೂಪಾಯಿ ಒಂದು ಲಕ್ಷ ಸಹಾಯವನ್ನು ಕೊಡುವುದೊಳ್ಳೆಯದು ಎಂದು ಕೆಲವು ಸದಸ್ಯರೂ ಹೇಳಿದರು.

ಶ್ರೀ **ಕೋಣಂದೂರು ಲಿಂಗಪ್ಪ** - ಇದನ್ನು ಕೊಡುವುದಕ್ಕೆ ಮುಂಚೆ ಯಾರು ಇಂತಹ ಫಿಲಂ ತೆಗೆಯುವರು ಎಂದು ಸರಿಯಾದ ಷರತ್ತುಗಳನ್ನು ಹಾಕಿದ್ದೀರಾ?

ಶ್ರೀ **ಆರ್ ಗುಂಡೂರಾವ್** - ಈ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟ. ಸರಕಾರ ಇದರಲ್ಲಿ ಯಾರು ಪರಿಣತರಾಗಿ ಕೆಲಸ ಮಾಡಿದ್ದಾರೆ ಮತ್ತು ಅದಕ್ಕೆ ತಕ್ಕ ಅರ್ಹತಗಳಿವೆಯೇ ಇಲ್ಲವೇ ಎನ್ನುವುದರ ಮಾಹಿತಿಗಳನ್ನೆಲ್ಲಾ ಪಡೆದು ಆ ನಂತರ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇದರ ಜೊತೆ ಸಾಲ ಕೊಡುವುದು ಸರಕಾರ. ಆದರೆ ಇದು ಸರಿಯಾಗಿ ಸರಕಾರಕ್ಕೆ ಮತ್ತೆ ವಾಪಸು ಬರುತ್ತದೆಯೇ ಎನ್ನುವುದನ್ನೂ ಖಾತರಿ ಮಾಡಿಕೊಳ್ಳಬೇಕಾಗುತ್ತದೆ. ಇದು ಒಂದು ಬಹಳ ಒಳ್ಳೆಯ ಸಲಹೆ. ಖಂಡಿತ ಮಾನ್ಯ ಸದಸ್ಯರು ಸೂಚಿಸಿರುವ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ದಿಸೆಯಲ್ಲಿ ನಿಜವಾಗಿಯೂ ಸರಿಯಾದ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತದೆ ಎಂದು ಹೇಳುತ್ತೇನೆ. ಇಂತಹ ಫಿಲಂ ತೆಗೆಯುವ ಉದ್ಯಮಿಗಳಿಗೆ ಬ್ಯಾಂಕಿನ ಮೂಲಕ ಹಣವನ್ನು ಒದಗಿಸಿ ಕೊಡಬಹುದೇ ಇಲ್ಲವೇ, ಎಲ್.ಐ.ಸಿ. ಗ್ಯಾರಂಟಿ ಮೇಲೆ ಸಾಲ ಕೊಡಲು ತೊಂದರೆ ಇದೆಯೇ, ಇವನ್ನೆಲ್ಲ ಸರಕಾರ ಇನ್ನೂ ಆಲೋಚನೆ ಮಾಡಬೇಕಾಗಿದೆ. ಸಾಲ ಕೊಟ್ಟ ಮೇಲೆ ಅದನ್ನು ವಾಪಸ್ಸು ಪಡೆಯುವುದು ಬಹಳ ಮುಖ್ಯ. ಮಾನ್ಯ ಸದಸ್ಯರು ಹೇಳುವಂತೆ ನೂರಕ್ಕೆ ಎಂಬತ್ತರಷ್ಟು ಪಾಲು ಸಾಲ ಕೊಡುವುದರಲ್ಲಿ ವಾಪಸ್ಸು ಬರುವುದೇ

ಕಷ್ಟ ಎನ್ನುವುದನ್ನು ನಾವು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು. ಇಲ್ಲಿ ಒಂದೂವರೆ ಲಕ್ಷದಷ್ಟು ಸಾಲ ಕೊಡುವಾಗ ಇದು ಯಾವ ರೀತಿ ವಾಪಸ್ಸು ಬರುತ್ತದೆ ಎನ್ನುವುದರ ಕಡೆಗೂ ಯೋಚನೆ ಮಾಡಬೇಕಾಗುತ್ತದೆ. ಕೆಲವು ವೇಳೆ ಫಿಲಂ ನಡೆಯುವಾಗ ದುಡ್ಡು ಸಾಲದೆ ಅರ್ಧಕ್ಕೆ ನಿಂತು ಹೋಗಬಹುದು ಇಲ್ಲವೆ ಬೇರಾವ ಕಾರಣದಿಂದಲೂ ನಷ್ಟವಾಗಬಹುದು. ಆಗ ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಇವನ್ನೆಲ್ಲ ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳು ಸ್ವಾಗತಾರ್ಹವಾದವು. ಇವುಗಳ ಮೆರಿಟ್ಸ್‌ಗಳನ್ನು ಸರಿಯಾಗಿ ನೋಡಿ ವಿಚಾರ ಮಾಡಿ, ಯಾವ ರೀತಿಯಾಗಿ ಸಾಲ ಕೊಟ್ಟು ಸಹಾಯ ಮಾಡಬಹುದು ಮತ್ತು ಯಾರು ಇದರಲ್ಲಿ ಸರಿಯಾದ ಜವಾಬ್ದಾರಿ ವಹಿಸಿಕೊಳ್ಳುತ್ತಾರೆ ಮತ್ತು ಸರಕಾರ ಕೊಡುವ ಹಣಕ್ಕೆ ಯಾವ ರೀತಿ ಗ್ಯಾರಂಟೀ ಬರುತ್ತದೆ, ಇವನ್ನೆಲ್ಲ ಪರಿಶೀಲನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಇಲಾಖೆಯವರು ತೀವ್ರವಾಗಿ ಪರಿಶೀಲನೆ ಮಾಡಿ ಸರಕಾರ ಸೂಕ್ತವಾದ ತೀರ್ಮಾನ ತೆಗೆದುಕೊಳ್ಳುತ್ತದೆಯೆಂದು ಇಷ್ಟು ಮಾತ್ರ ಹೇಳುತ್ತೇನೆ. ಇನ್ನು ಕೆಲವು ಅಧಿಕಾರಿಗಳನ್ನು ಬೇರೆ ಇಲಾಖೆಗಳಿಂದ ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಏಕೆ ತೆಗೆದುಕೊಳ್ಳುತ್ತಾರೆಂದು ಕೆಲವು ಸದಸ್ಯರು ಸೂಚಿಸಿದ್ದರು. ಇದರಲ್ಲಿ ತಜ್ಞರಾದವರು ಹಾಗು ಪರಿಣಿತರಾದವರು ಇದ್ದರೆ ಅಂಥವರ ಸೇವೆಯನ್ನು ಸರಕಾರ ಉಪಯೋಗಿಸಿಕೊಳ್ಳಲು ಈ ರೀತಿ ಮಾಡಲಾಗಿದೆ. ನನ್ನ ಇಲಾಖೆಯ ಮುಖ್ಯಸ್ಥರಾಗಿರುವವರು ಐ ಪಿ ಎಸ್ ಅಧಿಕಾರಿಗಳಾಗಿದ್ದವರು ಬಹು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇಂಥವರು ಬೇರೆ ಕಡೆಯಿದ್ದರೆ ಸರಕಾರ ಏಕೆ ಅಂಥವರ ಸೇವೆಯನ್ನು ಪಡೆಯಬಾರದು. ಇದರಿಂದ ನಮ್ಮ ಇಲಾಖೆಯ ಕೆಲಸಗಳು ಸಮರ್ಪಕವಾಗಿ ನಡೆಯಲು ಸಹಾಯವಾಗುತ್ತದೆ. ಉತ್ತಮವಾದ ಸೇವೆ ಮಾಡಿದವರು ಹಾಗೂ ಯುವಕರು ಇಲ್ಲಿಯೇ ಇರಲಿ. ಅವರು ಪ್ರಾಮಾಣಿಕರಾಗಿ ಉತ್ತಮ ಸೇವೆ ಮಾಡುತ್ತಾರೆಂದು ನಾವು ಅವರಿಗೆ ಎಲ್ಲಾ ಸಹಾಯಗಳನ್ನು ಒದಗಿಸಿ ಕೊಡಬೇಕು. ಎಲ್ಲಾ ಸದಸ್ಯರು ನಾನು ಮಂಡಿಸಿರುವ ಬೇಡಿಕೆಗಳಿಗೆ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಾರೆಯೆಂದು ನಂಬಿರುತ್ತೇನೆ.

## ಚಿತ್ರಮಂದಿರಗಳ ರಾಷ್ಟ್ರೀಕರಣ ಕುರಿತ ಖಾಸಗಿ ನಿರ್ಣಯಕ್ಕೆ ವಾರ್ತಾ ಸಚಿವರಾಗಿ ನೀಡಿದ ಉತ್ತರ

1976 ಏಪ್ರಿಲ್ 15 ರಂದು ವಿಧಾನಸಭೆಯಲ್ಲಿ "ರಾಜ್ಯದಲ್ಲಿರುವ ಎಲ್ಲಾ ಚಲನಚಿತ್ರ ಮಂದಿರಗಳನ್ನು ರಾಷ್ಟ್ರೀಕರಣಗೊಳಿಸಬೇಕೆಂದು ಈ ಸಭೆಯವರು ಸರ್ಕಾರದವರಿಗೆ ಶಿಫಾರಸ್ಸು ಮಾಡುತ್ತಾರೆ" ಎಂಬ ಖಾಸಗಿ ಸದಸ್ಯರ ನಿರ್ಣಯ ಚರ್ಚೆಗೆ ಬಂತು. ಹಿರಿಯ ಕಾಂಗ್ರೆಸ್ ಸದಸ್ಯ ಶ್ರೀ ಕೆ ಪ್ರಭಾಕರ್ ತಮ್ಮ ಈ ನಿರ್ಣಯ ಮಂಡಿಸಿದರು. ಶ್ರೀ ಟಿ ಆರ್ ಶಾಮಣ್ಣ, ಶ್ರೀ ಶೀನಾಳಿ ಚಂದ್ರಶೇಖರ್, ಶ್ರೀ ಕೆ ಆರ್ ಶ್ರೀನಿವಾಸಲು ನಾಯ್ಡು ಮುಂತಾದವರು ಭಾಗವಹಿಸಿ ಚರ್ಚೆ ಸುದೀರ್ಘವಾಗಿತ್ತು, ಮಾಹಿತಿ ಪೂರ್ಣವಾಗಿತ್ತು, ಮನೋರಂಜಕವಾಗಿತ್ತು.

ಅಂತಿಮವಾಗಿ ವಾರ್ತಾ ಮತ್ತು ಯುವಜನ ಸೇವಾ ಶಾಖೆಯ ರಾಜ್ಯ ಮಂತ್ರಿಗಳಾದ ಶ್ರೀ ಆರ್ ಗುಂಡೂರಾವ್ ನೀಡಿದ ಉತ್ತರ ಹೀಗಿತ್ತು.

**ಶ್ರೀ ಆರ್. ಗುಂಡೂರಾವ್** : "ಶ್ರೀಮಾನ್ ಪ್ರಭಾಕರ್ ಅವರು ತಂದಿರುವ ಖಾಸಗಿ ನಿರ್ಣಯದ ಪ್ರಕಾರ ಚಲನಚಿತ್ರಮಂದಿರಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಪ್ರಭಾಕರ್ ಅವರು ಒಂದೂ ಮುಕ್ಕಾಲು ಗಂಟೆಗೂ ಹೆಚ್ಚಿಗೆ ಮಾತನಾಡಿದ್ದಾರೆ. ಅವರ ಒಂದು ನಿರ್ಣಯಕ್ಕೂ ಮಾತನಾಡದಂಥ ವಿಷಯಕ್ಕೂ ಸಂಬಂಧವೇ ಇಲ್ಲ. ಅವರು ತಂದಿರುವ ನಿರ್ಣಯ ಚಲನಚಿತ್ರ ಮಂದಿರಗಳನ್ನು ರಾಷ್ಟ್ರೀಕರಣ ಮಾಡಬೇಕೆಂಬುದು. ಅವರು ಭಾಷಣ ಮಾಡಿದ್ದು ಪೂರ್ತಿ ಚಲನಚಿತ್ರ ಹೇಗಿರಬೇಕು, ಅದರಲ್ಲಿ ಯಾವ ರೀತಿ ಕಥೆಗಳಿರಬೇಕು, ಯಾವ ರೀತಿಯ ಸಂಸ್ಕೃತಿಯಿರಬೇಕು, ಏನೇನು ಜನರಿಗೆ ತೋರಿಸಬೇಕೆಂಬುದರ ಬಗ್ಗೆ ಬಹಳ ಧೀರ್ಘವಾಗಿ ಮಾತನಾಡಿದ್ದಾರೆ. ಚಲನಚಿತ್ರ ಮಂದಿರಗಳನ್ನು ರಾಷ್ಟ್ರೀಕರಣ ಮಾಡುವುದರಿಂದ ಅವರು ಹೇಳಿದಂತೆ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. ಏಕೆಂದರೆ ಚಲನಚಿತ್ರಮಂದಿರಗಳ ಪರವಾಗಿ ಮಾನ್ಯ ಶ್ರೀ ಶಾಮಣ್ಣನವರು ಬಹಳ ಚೆನ್ನಾಗಿ ಹೇಳಿದರು. ಚಲನಚಿತ್ರ ತೆಗೆಯುವ ಉದ್ಯಮವೇ ಬೇರೆ. ಅದು ಬರೀ ಕರ್ನಾಟಕ ರಾಜ್ಯಕ್ಕೆ ಸೇರಿದಂತಹ ಪ್ರಶ್ನೆಯಲ್ಲ. ಎಲ್ಲಾ ರಾಜ್ಯಗಳಲ್ಲಿಯೂ ಈ ಉದ್ಯಮವಿದೆ. ತಮಿಳುನಾಡು, ಮಹಾರಾಷ್ಟ್ರ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಇದನ್ನು ತೆಗೆಯುತ್ತಿದ್ದಾರೆಂದು ಇಲ್ಲಿ ಈ ನಿರ್ಣಯವನ್ನು ತಂದಿದ್ದಾರೆ. ಆದರೆ ಇಲ್ಲಿ ಅದನ್ನು ರಾಷ್ಟ್ರೀಕರಣ ಮಾಡುವುದರಿಂದ ಹಿಂದೆ ತ್ರೇತಾಯುಗ ದ್ವಾಪರಯುಗ ಮತ್ತು ಕೃತಯುಗಗಳಂತೆ ಕಲಿಯುಗದಲ್ಲಿ ಬದಲಾವಣೆಯಾಗುತ್ತದೆಯೆಂದು ನಾನು ಒಪ್ಪುವುದಕ್ಕೆ ತಯಾರಿಲ್ಲ. ಜೊತೆಗೆ ಶ್ರೀ ಚಂದ್ರಶೇಖರ್‌ರವರು ಹೇಳಿದ ರೀತಿಯಲ್ಲಿ ನಾವು ವಿಚಾರ ಮಾಡುವುದಾದರೆ, ಚಿತ್ರಗಳನ್ನು ಕಾಲಕ್ಕೆ ತಕ್ಕಂತೆ ತೆಗೆಯುವುದಾದರೆ, ಇವರು ಈ ರೀತಿಯಾಗಿ ತೆಗೆಯುತ್ತಿರುವುದರಿಂದ

---

ವಿ.ಸ.ನ. ದಿನಾಂಕ: 15-4-1976

ಬಹಳ ಜನಗಳು ದುರ್ಮಾರ್ಗಕ್ಕೆ ಇಳಿಯುವುದಕ್ಕೆ ಸಾಧ್ಯವಾಗುತ್ತಿತ್ತೆಂಬುದಾಗಿ ಅನೇಕ ವಿಷಯಗಳನ್ನು ಹೇಳಿದರು. ಚಲನಚಿತ್ರ ನೋಡುವ ಮಾತ್ರದಿಂದಲೇ ಎಲ್ಲಾ ರೀತಿಯ ಬದಲಾವಣೆ ಆಗುತ್ತಿದೆ ಎಂಬುದು ಹೇಳುವುದಕ್ಕೆ ಸಾಧ್ಯವಿಲ್ಲ. ಜೊತೆಗೆ ಒಳ್ಳೆಯ ಚಿತ್ರಗಳನ್ನು ಸಾಕಷ್ಟು ತೆಗೆಯುತ್ತಿದ್ದಾರೆ. ಇತ್ತೀಚೆಗೆ, ಹಿಂದಿನ ಕಾಲದಲ್ಲಿ ನಮ್ಮ ಚರಿತ್ರೆ ಯಾವ ರೀತಿಯಿತ್ತು ಪುರಾಣ ಯಾವ ರೀತಿಯಿತ್ತು ಎಂಬ ಬಗ್ಗೆ ಅನೇಕ ಚಿತ್ರಗಳನ್ನು ತೆಗೆಯುತ್ತಿದ್ದಾರೆ. ಅವುಗಳಿಂದ ನಮ್ಮ ಜನಗಳಿಗೆ ಯಾವ ರೀತಿಯಾಗಿ ಅವರ ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ. ಯಾವ ರೀತಿಯಾಗಿ ಮನರಂಜನೆಯಾಗುತ್ತಿದೆ ಎಂಬುದನ್ನು ನೋಡಬೇಕು.

ಶ್ರೀ ಪ್ರಭಾಕರ್ ಅವರು ಹೆಚ್ಚಿಗೆ ಮಾತನಾಡಿದರೂ ಮನರಂಜನೆಯಾಗುತ್ತದೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಅವರು ಮನರಂಜಕವಾಗಿಯೇ ಮಾತನಾಡುತ್ತಾರೆ. ಯಾವ ರೀತಿ ಯಾವ ಕಾಲದಲ್ಲಿ ಏನೋ ಬರುತ್ತದೆ, ಏನಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಒಬ್ಬ ಕವಿ ಯಾವುದೋ ಒಂದು ನದಿ ಅಥವಾ ಕಾಡಿನ ಮಧ್ಯ ಕುಳಿತುಕೊಂಡು ಒಂದು ಪದ್ಯ ಬರೆದರೆ, ಹರಿಕಥೆ ಮಾಡುವವನು ಒಂದೊಂದು ಸಂದರ್ಭದಲ್ಲಿ ತೋಚಿದ ರೀತಿಯಲ್ಲಿ ಏನಾದ್ರು ಹೇಳಿದರೆ, ಸಂಗೀತಗಾರ ಯಾವುದೋ ಸಂದರ್ಭದಲ್ಲಿ ಏನಾದರೂ ಒಂದು ಅಪೂರ್ವವಾದ ರಾಗದಲ್ಲಿ ಹಾಡಿದರೆ, ಅಂಥದನ್ನು ಬಹಳ ಮಹತ್ವವೆಂದು ಪರಿಗಣಿಸಬೇಕಾಗುತ್ತದೆ. ಅಂತಹ ಒಂದು ಅಭಿಪ್ರಾಯ ಇದಕ್ಕೂ ಬರಬೇಕಾಗುತ್ತದೆ. ಆದುದರಿಂದ ಇದನ್ನೂ ಕೂಡ ಇಂತಹ ಒಂದು ದೃಷ್ಟಿಕೋನದಲ್ಲಿಯೇ ನಿರ್ಮಾಣ ಮಾಡಬೇಕೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದೇ ಒಂದು ಕನ್ನಡ, ಹಿಂದಿ ಅಥವಾ ತಮಿಳು ಚಿತ್ರವನ್ನು ತೆಗೆದುಕೊಂಡು ನೋಡಿದರೆ ಬಹುಮುಖ್ಯವಾಗಿ ಚಿತ್ರಕ್ಕೆ ಖರ್ಚು ಮಾಡಿದಂತಹ ಹಣ ಪೂರ್ತಿ ಸಿಗುತ್ತದೆಯೇ ಮತ್ತು ಅದರಿಂದಲೇನಾದರೂ ಲಾಭವಾಗುತ್ತದೆಯೇ ನೋಡುವುದೇ ಅದರ ಮೂಲ ಉದ್ದೇಶ. ಕಪ್ಪು ಬಿಳುಪು ಚಿತ್ರ ತೆಗೆದುಕೊಂಡರೆ, ಅದಕ್ಕೆ ಐದಾರು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆದರೆ ಹತ್ತು ಲಕ್ಷಕ್ಕಿಂತ ಜಾಸ್ತಿಯಾಗಿ ಆತನಿಗೆ ಬಾರದೇ ಹೋದರೆ, ನಿಜವಾಗಿಯೂ ಅವನು ನಷ್ಟ ಪಡಬೇಕಾಗುತ್ತದೆ. ಕೊನೆಯಲ್ಲಿ ಪೂರ್ತಿಯಾಗಿ ಈ ಒಂದು ಉದ್ಯಮವನ್ನೇ ಅವನು ಕೈ ಬಿಡಬೇಕಾಗುತ್ತದೆ. ಅದರಲ್ಲಿಯೂ ಹೆಚ್ಚಿಗೆ ಮಾನ್ಯ ಪ್ರಭಾಕರ್ ಅವರು ಹೇಳಿದಂತೆ ಇಂಥಹ ಚಿತ್ರಗಳನ್ನು ತೆಗೆದರೆ ಎಲ್ಲಾ ಚಿತ್ರ ನಿರ್ಮಾಪಕರೂ ಈ ಉದ್ಯಮವನ್ನು ಬಿಡಬೇಕಾಗುತ್ತದೆ. ಈಗ ನಮ್ಮಲ್ಲಿ ಅನೇಕ ಚಿತ್ರಗಳು ಬಂದಿವೆ. ನಾನು ಎಲ್ಲಾ ಚಿತ್ರಗಳು ಬಹಳ ಚೆನ್ನಾಗಿದೆಯೆಂದು ಹೇಳುವುದಿಲ್ಲ. ಈ ಕಾಲದಲ್ಲಿ ಹೆಚ್ಚಿಗೆ ಜನರು ಚಿತ್ರಗಳನ್ನು ನೋಡುತ್ತಾರೆ. ಇದರಲ್ಲಿ ಬಹಳ ಮುಖ್ಯವಾದ ಪ್ರಶ್ನೆಯೇನೆಂದರೆ, ಯಾವ್ಯಾವ ಚಿತ್ರಗಳಲ್ಲಿ ಜನಗಳಿಗೆ ಒಂದು ನೀತಿ ಬೋಧಕವಾದ ವಿಷಯಗಳು ಇರುತ್ತವೆಯೋ, ಮತ್ತು ಅವು ಒಂದು ಒಳ್ಳೆಯ ಶಾಂತಿಯುತ ಸದ್ಭಾವನೆಯಿಂದ ಹಾಗೂ ಒಂದು ಶೀಲದಿಂದ ಕೂಡಿರುತ್ತದೆಯೋ ಅಂತಹವುಗಳನ್ನು ಮಾತ್ರ ಜನ ಹೆಚ್ಚಿಗೆ ನೋಡುತ್ತಾರೆ. ಮತ್ತೆ ಅವನ್ನು ನಾವೆಲ್ಲರೂ ಮೆಚ್ಚಬೇಕೆಂದು ಹೇಳುತ್ತಾರೆ.

ಇಂತಹ ಚಿತ್ರಗಳನ್ನು ತೆಗೆಯುವಾಗ ಅದಕ್ಕೆ ಹೆಚ್ಚಿನ ಟ್ಯಾಕ್ಸ್ ಎಗ್ಸೆಂಪ್ಷನ್ ಕೊಡಬೇಕೆಂದು ಅನೇಕರು ಕೇಳಿದ್ದಾರೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅರ್ಥಶಾಖೆಯ ಮಂತ್ರಿಗಳು ಹೆಚ್ಚಿನ ಗಮನವನ್ನು ಕೊಡುತ್ತಿದ್ದಾರೆ. ಇದಕ್ಕಾಗಿ ಐದಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ ಸರ್ಕಾರ ಜೊತೆಗೆ ಸಬ್ಸಿಡಿ ಕೊಡುತ್ತಾರೆ. ಆದರೂ ಅದರಲ್ಲಿ ನಷ್ಟವೆಂದು ಹೇಳುತ್ತಾರೆ. ಅದು ಯಾವ ರೀತಿಯಲ್ಲಿ ಆಗುತ್ತದೆ ಎಂಬುದನ್ನು ಅನೇಕ ಸದಸ್ಯರು ಹೇಳಿದ್ದಾರೆ. ಅನ್ನಾಚುರಲ್ ಸೀನ್ ಚಿತ್ರಗಳು ಬಂದಾಗ ಎಷ್ಟರ ಮಟ್ಟಿಗೆ ಜನಗಳ ಬೆಂಬಲವಿತ್ತೆಂಬುದೂ ಸಹ ಗೊತ್ತು. ಅದಕ್ಕೆ ಬೇರೆ ಸಾಕ್ಷಿಯೂ ಇವೆ. ಆದರೆ ಶೋಲೆ ಎಂಬ ಹಿಂದಿ ಚಿತ್ರದಿಂದ ಯಾರೂ ಸಂಪಾದನೆ ಮಾಡದಂಥ ದುಡ್ಡನ್ನು ಸಂಪಾದನೆ ಮಾಡುತ್ತಾರೆ. ಒಂದು ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಅದು ಬೇರೆ ಕಡೆಯದಲ್ಲ. ಕರ್ನಾಟಕದಲ್ಲಿಯೇ ತಯಾರಾಗಿರುವುದು. ಮಾನ್ಯ ಪ್ರಭಾಕರ್ ಅವರು ಅದನ್ನು ನೋಡಿದರೋ ಇಲ್ಲವೋ ಗೊತ್ತಿಲ್ಲ. ಅವರಿಗೆ ಚಿತ್ರಗಳನ್ನು ನೋಡುವ ಅಭ್ಯಾಸ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು 16-17 ಅಥವ 20ನೇ ವಯಸ್ಸಿನಲ್ಲಿ ನೋಡಿರಬೇಕು. ಆದರೆ ಈಗಲೂ ಬೇಕಾದರೇ ಅವರು ನೋಡಬಹುದು. ಅವರು ಬೇಕಾದರೆ ಕನಕದಾಸ, ಭಕ್ತ ಕುಂಬಾರ ಚಿತ್ರಗಳನ್ನು ನೋಡಬಹುದು. ಆದರೆ ಹುಡುಗರು ಅದರಲ್ಲಿಯೂ 18-19 ವಯಸ್ಸಿನವರು ಅವರ ಮನಸ್ಸಿಗೆ ಒಳ್ಳೆಯ ಪರಿಣಾಮಕಾರಿಯಾಗುವಂತಹ ಚಿತ್ರಗಳನ್ನು ನೋಡಬೇಕು. ಈ ಒಂದು ದೃಷ್ಟಿಯಿಂದ ಒಳ್ಳೆಯದಾದ ಉತ್ತಮವಾದಂಥಹ ಚಿತ್ರಗಳನ್ನು ತೆಗೆಯಬಹುದು. ಜನರ ಮನಸ್ಸಿನ ಮೇಲೆ ದುಷ್ಪರಿಣಾಮವನ್ನುಂಟು ಮಾಡುವಂಥಹ ಚಿತ್ರಗಳನ್ನು ತೆಗೆಯುವುದನ್ನು ಕೂಡಲೆ ನಿಲ್ಲಿಸಬೇಕಾಗುತ್ತದೆ. ಆದರೆ, ಇವನ್ನು ಈಗ ರಾಷ್ಟ್ರೀಕರಣ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿದರೆ ಅದು ಸಾಧ್ಯವಾಗುವುದಿಲ್ಲ. ಏಕೆಂದರೆ ಚಿತ್ರಗಳನ್ನು ಕರ್ನಾಟಕದಲ್ಲಿ ತೆಗೆಯದೇ ಹೋದರೆ ಮಹಾರಾಷ್ಟ್ರದಲ್ಲಿ ಅಥವಾ ಇನ್ನ್ಯಾವುದಾದರು ರಾಷ್ಟ್ರಗಳಲ್ಲಿ ತೆಗೆಯಬಹುದು. ರಾಷ್ಟ್ರೀಕರಣ ಮಾಡಿದ ನಂತರ ಇಂಥಹ ಚಿತ್ರಗಳನ್ನೆ ತೆಗೆಯಬೇಕೆಂದು ಕಡ್ಡಾಯವಾಗಿ ಶಾಸನ ಮಾಡುವುದು ಬಹಳ ಕಷ್ಟವಿದೆ. ಪ್ರಭಾಕರ್ ಏನು ಒಂದು ನಿರ್ಣಯ ತಂದಿದ್ದಾರೋ ಅದರಲ್ಲಿ ವಾಸ್ತವಾಂಶ ಎಷ್ಟಿದೇ ಎನ್ನುವುದನ್ನು ನೋಡಿದರೆ ಮತ್ತು ಅವರು ಈ ವಿಚಾರದಲ್ಲಿ ಏನೇನು ಮಾತನಾಡಿದರೋ ಅದನ್ನೆಲ್ಲಾ ನೋಡಿದರೆ ನಿರ್ಣಯ ಬಹುಪಾಲು ಈ ರಾಷ್ಟ್ರೀಕರಣಕ್ಕೆ ಸಂಬಂಧ ಪಟ್ಟಿದ್ದಲ್ಲ. ಚಿತ್ರವನ್ನು ಯಾವ ರೀತಿ ತೆಗೆಯಬೇಕು ಯಾರು ಇದರಲ್ಲಿ ಆಕ್ಟ್ ಮಾಡಬೇಕು ಯಾವ ರೀತಿ ಚಿತ್ರವನ್ನು ತೆಗೆದರೆ ಚೆನ್ನಾಗಿರುತ್ತದೆ ಎಂಬುದರ ಕಡೆ ಗಮನ ಕೊಡಬೇಕಾಗುತ್ತದೆ. ಸುಮಾರು 19-20 ವರ್ಷದ ಹುಡುಗರನ್ನೋ ಹುಡುಗಿಯರನ್ನೋ ಅಥವ 20-22 ವರ್ಷದ ಹುಡುಗರನ್ನೋ ಹುಡುಗಿಯರನ್ನೋ ಆರಿಸಿ ನಾಯಕನಾಯಕಿಯರ ಪಾರ್ಟ್ ಮಾಡಿಸಿದರೆ ಆ ಚಿತ್ರ ಚೆನ್ನಾಗಿರುತ್ತದೆ. ಆ ಚಿತ್ರ ಜನ ನೋಡೇ ನೋಡುತ್ತಾರೆ. ಒಂದು ವೇಳೆ ಅವರಿಗೆ 40-50 ವಯಸ್ಸಾಗಿದ್ದರೂ ಕೂಡ ಅವರು 20-22 ವರ್ಷದ ರೀತಿ ಪಾರ್ಟ್ ಮಾಡಿದರೆ ಆ ಚಿತ್ರವೂ ಚೆನ್ನಾಗಿರುತ್ತದೆ. ಅದು ಬಿಟ್ಟು

60-70 ವರ್ಷದವರನ್ನು ತೆಗೆದುಕೊಂಡು ಬಂದು, ಅವರು ನಾಯಕ ನಾಯಕಿ ಪಾರ್ಟ್ ಮಾಡಿದರೆ, ಅಂಥ ಚಿತ್ರ ತೆಗೆದರೆ ಯಾರೂ ನೋಡುವುದೇ ಇಲ್ಲಾ. ಬಹುಶಃ ಆ ಚಿತ್ರ ಮಂದಿರಕ್ಕೆ ಕಲ್ಲು ಏಟು ಬೀಳಬಹುದು.

ಚಿತ್ರ ಯಾವ ಆಧಾರದ ಮೇಲೆ ಇರಬೇಕು, ಅದು ಯಾವ ತತ್ವದ ಮೇಲೆ ಇರಬೇಕು ಎಂಬುದನ್ನು ಸೆನ್ಸಾರ್ ಬೋರ್ಡ್ ನವರು ನೋಡುತ್ತಾರೆ. ನಮ್ಮ ಭಾರತೀಯ ಚಿತ್ರ ರಂಗದಲ್ಲಿ ಯಾವತ್ತೂ ಕೂಡ ರಷ್ಯಾ ಚಿತ್ರದಲ್ಲಿರುವಂತೆ, ಇಂಗ್ಲೀಷ್ ಚಿತ್ರದಲ್ಲಿರುವಂತೆ ಫ್ರೆಂಚ್ ಚಿತ್ರದಲ್ಲಿರುವಂತೆ, ಜರ್ಮನ್ ಚಿತ್ರದಲ್ಲಿರುವಂತೆ ಇಲ್ಲ. ಆ ದೇಶಗಳ ಚಿತ್ರ ನೋಡಿದರೆ ಅಲ್ಲಿ ಮುತ್ತು ಕೊಡುವಂಥ ಚಿತ್ರದ ಹಾಗೆ ಇಲ್ಲಿ ಯಾವ ಚಿತ್ರದಲ್ಲೂ ಇರುವುದಿಲ್ಲ. ಸೆನ್ಸಾರ್ ಮಂಡಲಿ ಅದಕ್ಕೆ ಅನುಮತಿ ಕೊಟ್ಟಿಲ್ಲ. ಅನೇಕ ಮಂದಿ ಇದರ ಬಗ್ಗೆ ಬರೆಯುತ್ತಿದ್ದಾರೆ. ಭಾರತೀಯ ಚಿತ್ರದಲ್ಲಿ ಈ ಚುಂಬನ ಕೊಡುವ ದೃಶ್ಯವನ್ನು ಏಕೆ ತರಬಾದೆಂದು ಅನೇಕರು ಬರೆಯುತ್ತಿದ್ದಾರೆ. ಇದಕ್ಕೆ ಕೆಲವರು ವಿರೋಧ ಮಾಡುತ್ತಿದ್ದಾರೆ. ಇನ್ನೂ ಕೆಲವರು ತರಬೇಕೂಂತ ವಾದ ಮಾಡುತ್ತಿದ್ದಾರೆ.

ಶ್ರೀ **ಕಾಗೋಡು ತಿಮ್ಮಪ್ಪ:** ಪ್ರಭಾಕರ್‌ರವರು ಇದನ್ನು ಹೇಳಿರಲಿಲ್ಲವಲ್ಲ.

ಶ್ರೀ **ಆರ್. ಗುಂಡೂರಾವ್:** ಈ ವಿಷಯವನ್ನು ಕಾಗೋಡು ತಿಮ್ಮಪ್ಪನವರೇ ಮಾತನಾಡಲೀ ಎಂದು ಅವರ ಮನಸ್ಸಿನಲ್ಲಿ ಇರುವುದರಿಂದ ಇದನ್ನು ಪ್ರಭಾಕರ್ ಅವರು ಹೇಳಲಿಲ್ಲ. ಒಂದು ಪಕ್ಷ ಅವರ ಮನಸ್ಸಿನಲ್ಲಿ ಚುಂಬನ ಚಿತ್ರ ತರಬೇಕೂಂತಿದ್ದರೆ ಅದನ್ನು ನಮ್ಮ ತಿಮ್ಮಪ್ಪನವರೇ ಹೇಳಲೀ ಎಂದು ಸುಮ್ಮನಾಗಿದ್ದಾರೆ. ಆದುದರಿಂದ ಈ ನಿರ್ಣಯವನ್ನು ಅನೇಕ ಕಾರಣಗಳಿಂದ ಒಪ್ಪಲಿಕ್ಕೆ ಸಾಧ್ಯವಿಲ್ಲ. ಇದನ್ನು ನಡೆಸಿಕೊಂಡು ಹೋಗುವುದು ಕಷ್ಟ. ಜೊತೆಗೆ ಸಾಕಷ್ಟು ಸ್ಥಳದ ಅಭಾವ ಇದೆ. ಈವತ್ತು ಕರ್ನಾಟಕದಲ್ಲಿ 450 ಪರ್ಮನೆಂಟ್ ಸಿನಿಮಾ ಮಂದಿರವಿದೆ, ಜೊತೆಗೆ ಟೆಂಟ್ಸ್ ಬೇರೆ ಇದೆ. ಮಲೆನಾಡಿನಲ್ಲಿ 6 ತಿಂಗಳವರೆಗೆ ಈ ಟೆಂಟ್‌ಗಳಲ್ಲಿ ಸಿನಿಮಾ ಪ್ರದರ್ಶನ ಮಾಡುವುದಕ್ಕಾಗುವುದಿಲ್ಲ. ಇಂಥ ಸಮಸ್ಯೆಗಳು ಅನೇಕ ಇರುವುದರಿಂದ ಇದನ್ನು ಒಂದೇ ಸಾರಿ ರಾಷ್ಟ್ರೀಕರಣ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಮಾನ್ಯ ಪ್ರಭಾಕರ್‌ರವರು ಏನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೋ ಅದನ್ನು ಅವರು ಸೆನ್ಸಾರ್ ಬೋರ್ಡ್ ಗಮನಕ್ಕೆ ತಂದರೆ ಅವರು ಪರಿಶೀಲನೆ ಮಾಡುತ್ತಾರೆ. ಈ ಸಿನಿಮಾವನ್ನು ರಾಷ್ಟ್ರೀಕರಣ ಮಾಡಿದರೆ ನಮ್ಮ ದೇಶದ ನಾಗರೀಕತೆ ಬದಲಾವಣೆಯಾಗುವುದಿಲ್ಲ. ಈ ನಾಗರೀಕತೆ ಬಗ್ಗೆ ಹೇಳುವುದಕ್ಕೆ ಹೋದರೆ ಇದು ಯಾವ ರೀತಿ ಇದೆ ಎನ್ನುವುದನ್ನು ನಾವೇ ಪ್ರಶ್ನೆ ಮಾಡಬೇಕಾಗುತ್ತದೆ.

ಸಾವಿರಾರು ವರ್ಷದ ಹಿಂದೆ ಕೇವಲ ಒಂದು ಹೆಣ್ಣಿಗಾಗಿ ಸಾಮ್ರಾಜ್ಯವಾದಿಗಳು ಯುದ್ಧವನ್ನು ಮಾಡಿದ್ದಾರೆ. ಗ್ರೀಕ್ ದೇಶ ತೆಗೆದುಕೊಳ್ಳಿ, ರೋಮನ್ ದೇಶ ತೆಗೆದುಕೊಳ್ಳಿ, ಪೃಥ್ವೀರಾಜನ ಒಂದು ಚರಿತ್ರೆಯನ್ನೆ ತೆಗೆದುಕೊಳ್ಳಿ, ಅಷ್ಟೇ ನಮ್ಮ ರಾಮಾಯಣ

ತೆಗೆದುಕೊಂಡರೆ ಸೀತೆಗೋಸ್ಕರ ಏನು ನಡೆಯಿತು ನೋಡಿ. ಮಹಾಭಾರತವನ್ನು ಓದಿದರೆ ದ್ರೌಪದಿಗೋಸ್ಕರ ಏನು ನಡೆಯಿತು? ಇವೆಲ್ಲಾ ನೋಡಿದರೆ ಕೇವಲ ಒಂದು ಹೆಣ್ಣಿಗಾಗಿ ಇಷ್ಟೆಲ್ಲಾ ಚರಿತ್ರೆ ನಡೆದಿದೆ. ಹಳೇಬೀಡು, ಬೇಲೂರು, ದೇವಸ್ಥಾನಗಳನ್ನು ನೋಡಿದರೆ ಗೊತ್ತಾಗುತ್ತದೆ ಎಂದು ಚಂದ್ರಶೇಖರ್ ಚೆನ್ನಾಗಿ ಹೇಳಿದರು. ಹಿಂದಿನ ಕಾಲದಲ್ಲಿ ಚಲನಚಿತ್ರಗಳು ಯಾವ ರೀತಿ ಪ್ರದರ್ಶನ ಮಾಡುತ್ತಿದ್ದರು, ಈಗಿನ ಚಲನಚಿತ್ರಗಳನ್ನು ನೋಡಿದರೆ ಯಾವ ರೀತಿ ಪ್ರದರ್ಶನ ಮಾಡುತ್ತಿದ್ದಾರೆ ಅನ್ನುವುದು ಗೊತ್ತಾಗುತ್ತದೆ. ಹಿಂದಿನ ಕಾಲದಲ್ಲಿ ಬರೇ ಮೂಕಪ್ರದರ್ಶನಗಳ ಚಿತ್ರವನ್ನೆ ಹಾಕುತ್ತಿದ್ದರು. ಅದನ್ನೆ ಜನ ನೋಡುತ್ತಿದ್ದರು. ಹಿಂದಿನ ಕಾಲದಲ್ಲಿ ಏನು ಬಟ್ಟೆ ಹಾಕುತ್ತಿದ್ದರು, ಈಗಿನ ಕಾಲದಲ್ಲಿ ಏನು ಬಟ್ಟೆ ಹಾಕುತ್ತಿದ್ದಾರೆ? ಇವೆಲ್ಲವನ್ನು ಚಲನಚಿತ್ರದಲ್ಲಿ ನೋಡುತ್ತಿದ್ದೇವೆ. ಏನು ಚಲನಚಿತ್ರ ನೋಡುತ್ತಿದ್ದಾರೆ ಅದರಿಂದ ಯಾವುದೋ ಒಂದು ಶೀಲಕ್ಕಾಗಲಿ ಅಥವಾ ಒಂದು ತತ್ವಕ್ಕಾಗಲಿ ಅಂಟಿಕೊಂಡು ಬರುತ್ತಾರೆ ಎಂದು ಹೇಳುವುದು ಕಷ್ಟ. ಇದರಿಂದ ನಾಗರೀಕತೆ ಬರುತ್ತದೆ ಅಂತ ತೀರ್ಮಾನ ಮಾಡುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಸನ್ನಿವೇಶಕ್ಕೆ ತಕ್ಕಂತೆ, ಕಾಲಕ್ಕೆ ತಕ್ಕಂತೆ ಇದನ್ನು ಉತ್ತಮ ಮಾಡಬೇಕು. ಆದುದರಿಂದ ಈ ಸಿನಿಮಾವನ್ನು ರಾಷ್ಟ್ರೀಕರಣ ಮಾಡುವ ದೃಷ್ಟಿಯಿಂದ ದೇಶದಲ್ಲಿ ನಾಗರೀಕತೆ ಇವೆಲ್ಲ ಬದಲಾವಣೆಯಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಸಾಧ್ಯವಾದ ಮಟ್ಟಿಗೆ ಜನರ ಮೇಲೆ ದೇಶಪ್ರೇಮ ಉಂಟಾಗತಕ್ಕಂಥ ರೀತಿಯಲ್ಲಿ ಈ ಚಿತ್ರವನ್ನು ತೆಗೆಯಬೇಕು ಅಂಥ ಮಾನ್ಯ ಸದಸ್ಯರು ಏನು ಒಳ್ಳೆಯ ಸಲಹೆ ಕೊಟ್ಟರು, ಅದನ್ನು ಕೇಂದ್ರ ಸರಕಾರಕ್ಕೂ ಮತ್ತು ಸೆನ್ಸಾರ್ ಮಂಡಲಿಗೂ ತಿಳಿಸಿದರೆ, ಆವತ್ತಿನ ಸನ್ನಿವೇಶಗಳಿಗೆ ತಕ್ಕಂತೆ ಅವರು ಸರಿ ಮಾಡುತ್ತಾರೆ. ಅದೇ ರೀತಿ ಮಾಡಬೇಕು ಎಂದು ಅವರು ಚಿತ್ರ ತಯಾರಿಸುವವರಿಗೂ ಹೇಳುತ್ತಾರೆ. ರಾಷ್ಟ್ರೀಕರಣ ಮಾಡುವುದರಿಂದ ಇವೆಲ್ಲಾ ಪರಿಹಾರವಾಗುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದಕ್ಕೆ ಎಲ್ಲರು ಒಪ್ಪುತ್ತಾರೆ ಎಂದು ತಿಳಿದಿದ್ದೇನೆ. ಆದುದರಿಂದ ಮಾನ್ಯ ಸದಸ್ಯರು ಚಲನಚಿತ್ರ ಮಂದಿರಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ಏನೊಂದು ನಿರ್ಣಯ ತಂದಿದ್ದಾರೋ, ಅದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಕೆ. ಪ್ರಭಾಕರ್:** ಅಧ್ಯಕ್ಷರೇ, ಇದುವರೆಗೂ ನಾವು ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರ ಕೇಳಿದೆವು. ಈ ರಾಷ್ಟ್ರೀಕರಣ ಮಾಡುವುದು ಸಧ್ಯಕ್ಕೆ ಸಾಧ್ಯವಿಲ್ಲ,.... ಯೋಚನೆ ಮಾಡುತ್ತಿದ್ದಾರೆ ಎನ್ನುವುದು ನನಗೆ ಅರ್ಥವಾಗಿದೆ..... ಇದರ ಬಗ್ಗೆ ಸರಕಾರ ಕೂಲಂಕುಶವಾಗಿ ಪರಿಶೀಲನೆ ಮಾಡಿ ಸಾಧ್ಯವಾದಾಗ ರಾಷ್ಟ್ರೀಕರಣಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಅವರು ಇದರ ಬಗ್ಗೆ ಮತ್ತೆ ಪರಿಶೀಲನೆ ಮಾಡುತ್ತಾರೆ ಅನ್ನುವುದರಲ್ಲಿ ನನಗೆ ಧೃಡವಾದ ನಂಬಿಕೆಯಿದೆ. ಆದುದರಿಂದ ಠರಾವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಮ್ಮ ಮುಖಾಂತರ ಅಪ್ಪಣೆ ತೆಗೆದುಕೊಳ್ಳುತ್ತೇನೆ.

Mr. Deputy Speaker: Is it the pleasure of the house that leave be granted to the Hon'ble Member to withdraw his resolution?

Kagodu Thimappa: No, it may be put to vote.

Mr. Deputy Speaker: Even if there is a single dissent, I will have to put the motion to the vote of the House.

The question is "That this assembly recommends to the Government to nationalize all the picture houses (Cinema Houses) in the state."

(ನಿರ್ಣಯ ವಿರುದ್ಧ ಮತ ಬಂದು ನಿರ್ಣಯ ಬಿದ್ದಿತು)

## 1977-78ನೇ ಸಾಲಿನ ಬೇಡಿಕೆ ಮೇಲಿನ ಚರ್ಚೆ

ರಾಜ್ಯ ಸಚಿವ ಸ್ಥಾನದಲ್ಲಿ ಎರಡು ವರ್ಷವಾಗುವ ಹಂತದಲ್ಲೇ, ಶ್ರೀ ಆರ್. ಗುಂಡೂರಾಯರ ಪಾಲಿಗೆ ವಸತಿ ಖಾತೆಯ ಜವಾಬ್ದಾರಿಯನ್ನು ಮುಖ್ಯಮಂತ್ರಿ ನೀಡಿದರು. 30ನೇ ಜೂನ್ 1977 ರಂದು, ವಿಧಾನಸಭೆಯಲ್ಲಿ 1977-78ರ ಸಾಲಿನ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆ ಮೇಲಣ ಚರ್ಚೆಗೆ ಅವರು ವಿಶದವಾಗಿ ಉತ್ತರ ನೀಡಿದರು.

**ಶ್ರೀ ಆರ್. ಗುಂಡೂರಾವ್ (ಯುವಜನ ಹಾಗೂ ವಸತಿ ಶಾಖೆಗಳ ಮಂತ್ರಿಗಳು)** : ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನನ್ನ ಇಲಾಖೆಗೆ ಸೇರಿದಂಥಾ ಯುವಜನ ಹಾಗೂ ವಸತಿ ಇಲಾಖೆ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ, ಮತ್ತು, ಈ ಬಗ್ಗೆ ಅವರುಗಳು ಯಾವುದೇ ತರಹ ಟೀಕೆಗಳನ್ನು ಮಾಡಲಿಲ್ಲಾ. ಬಹಳ ಸಂತೋಷ. ಅದಕ್ಕೋಸ್ಕರ ನಾನು ಎಲ್ಲಾ ಸದಸ್ಯರಿಗೂ ಕೂಡ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ, ಅಧ್ಯಕ್ಷರೇ, ನಾನು ಕೆಲವು ಸಾರಿ ಹೇಳಿದ್ದೇನೆ. ಈ ಯುವಜನ ಇಲಾಖೆ ಇತರೇ ಎಲ್ಲಾ ಇಲಾಖೆಗಳಿಗಿಂತಲೂ ಬಹು ಮುಖ್ಯವಾದಂಥಾ ಇಲಾಖೆ ಎಂದು. ಆದರೂ ಸಹ ನಾನು ಮೊದಲು ಏನು ಯೋಚನೆ ಮಾಡಿದ್ದೆ ಎಂದರೆ ನಮ್ಮ ಸದಸ್ಯರು ಈ ಬಗ್ಗೆ ಇನ್ನೂ ಅನೇಕ ತರಹವಾದ ಸಲಹೆಗಳನ್ನು ಈ ಸದನದಲ್ಲಿ ಕೊಡುತ್ತಾರೆ ಅಂತ. ಏತಕ್ಕೆಂದರೆ ಈ ದೇಶವು ಭವಿಷ್ಯ ಮತ್ತು ಈ ದೇಶದ ಶಿಸ್ತು ಮತ್ತು ಈ ದೇಶದ ಭದ್ರತೆ ಇವೆಲ್ಲಾ ನಮ್ಮ ಯುವಜನರ ಮೇಲೆ ಹೊಂದಿಕೊಂಡಿದೆ. ಆದರೆ ಅನೇಕ ಮಾನ್ಯ ಸದಸ್ಯರು ಬೇರೆ ಬೇರೆ ಇಲಾಖೆ ಬಗ್ಗೆ ಸಲಹೆಗಳನ್ನು ಕೊಟ್ಟರು. ನನಗೆ ಒಂದು ತರಹ ಸಂತೋಷವಾಗಿದೆ. ಏತಕ್ಕೆಂದರೆ ಕಳೆದ ವರ್ಷಗಳಿಂದಲೂ ಕೂಡ ಯಾವುದೇ ಒಂದು ಟೀಕೆಗೆ ಒಳಗಾಗದೆ ಈ ಇಲಾಖೆ ಕೆಲಸ ಮಾಡುತ್ತಾ ಇದೆ. ನಾನು ಈ ಬಗ್ಗೆ ಹೆಮ್ಮೆಯಿಂದ ಹೇಳಬೇಕಾದರೆ ಒಂದಾನೊಂದು ಕಾಲದಲ್ಲಿ ಕರ್ನಾಟಕ ಯಾವ ಒಂದು ಕ್ರೀಡೆಯಲ್ಲಾಗಲಿ ಅಥವಾ ಇನ್ನೂ ಇವರ ಕಾರ್ಯಚಟುವಟಿಕೆಗಳಲ್ಲಾಗಲಿ ರಾಷ್ಟ್ರದಲ್ಲಿರುವ ಅನೇಕ ರಾಜ್ಯಗಳಿಗೆ ಬಹಳ ಹಿಂದುಳಿದಿದ್ದಂಥಾ ಕರ್ನಾಟಕ ಈವೊತ್ತು ಇಡೀ ಭಾರತದಲ್ಲಿ ನಮ್ಮ ಕರ್ನಾಟಕ ದ್ವಿತೀಯ ಸ್ಥಾನವನ್ನು ಪಡೆದಿದೆ ಮತ್ತು ಅನೇಕ ಯೋಜನೆಗಳಲ್ಲಿ ಪ್ರಥಮ ಸ್ಥಾನವನ್ನೂ ಸಹ ಪಡೆದಿದೆ. ಉದಾಹರಣೆಗೆ ಹೇಳಬೇಕಾದರೆ ಉತ್ತಮವಾದಂಥಾ ಕ್ರೀಡಾಪಟುಗಳಿಗೆ ಅವರ ಒಂದು ಯೋಗ್ಯತೆಯನ್ನು ಸರ್ಕಾರ ಗಮನಿಸಿ ಅವರಿಗೆ ಸಾಕಷ್ಟು ಸಹಾಯಧನವನ್ನು ಕೊಡುವಂಥಾದ್ದು ಮತ್ತು ಆ ಸಂಸ್ಥೆಗೆ ಸಾಕಷ್ಟು ಸಹಾಯ ಧನವನ್ನು ಕೊಡುವಂಥಾದ್ದು ಈ ರೀತಿಯಲ್ಲಿ ನಾವು ಈ ಕ್ರೀಡೆಗೆ ಹೆಚ್ಚಿನ ಸಹಾಯವನ್ನು ಉತ್ಸಾಹವನ್ನೂ ಪ್ರೋತ್ಸಾಹವನ್ನೂ ಸರ್ಕಾರ ಕೊಡುತ್ತಾ ಬಂದಿದೆ. ತಮಗೆ ಇನ್ನೂ ಹೇಳಬೇಕಾದರೆ ಬೆಂಗಳೂರಿನಲ್ಲಿ ಈವೊತ್ತು ಒಳ್ಳೆಯ ಉತ್ತಮವಾದಂಥಾ ಒಂದು ಕ್ರಿಕೆಟ್ ಸ್ಟೇಡಿಯಂ ಫುಟ್‌ಬಾಲ್ ಸ್ಟೇಡಿಯಂ, ಟೆನ್ನಿಸ್ ಸ್ಟೇಡಿಯಂ ಅನ್ನು ಕಟ್ಟಿದ್ದೇವೆ. ನಿಮಗೆ ಹೇಳಬೇಕಾದರೆ ಬಹುಶಃ ಇಲ್ಲಿರುವ ಟೆನ್ನಿಸ್ ಸ್ಟೇಡಿಯಂ ಏನು ಇದೆ, ಇಷ್ಟು

---

ವಿ.ಸ.ನ. ದಿನಾಂಕ: 30-6-77

ಉತ್ತಮವಾದಂಥಾ ಸ್ಟೇಡಿಯಂ ಭಾರತದಲ್ಲಿ ಎಲ್ಲೂ ಇಲ್ಲ ಎಂದು ಹೇಳುತ್ತೇನೆ. ಸರ್ಕಾರ ಪ್ರಥಮವಾಗಿ ಇಂಥಾ ಒಂದು ಸ್ಟೇಡಿಯಂ ಅನ್ನು ಬೆಂಗಳೂರಿನಲ್ಲಿ ಕಟ್ಟಿದೆ. ಕ್ರಿಕೆಟ್ ಸ್ಟೇಡಿಯಂ ಬಗ್ಗೆ ಹೇಳುವುದಾದರೆ ಈಗಾಗಲೇ ಆ ಸ್ಟೇಡಿಯಂ ಕೆಲಸ ಪೂರ್ತಿಯಾಗುವ ಸನ್ನಿವೇಶ ಇದೆ. ಹಾಗೆಯೇ ಫುಟ್‌ಬಾಲ್ ಸ್ಟೇಡಿಯಂ ಅದರ ಕೆಲಸ ಮುಗಿಯುವ ಹಂತದಲ್ಲಿ ಇದೆ. ಇದರ ಜೊತೆಗೆ ಜಿಲ್ಲಾ ಮಟ್ಟದಲ್ಲಿ ಸುಮಾರು 7-8 ಜಿಲ್ಲೆಗಳಲ್ಲಿ ನಮ್ಮ ಸ್ಟೇಡಿಯಂ ಕಾರ್ಯ ಚೆನ್ನಾಗಿ ನಡೆಯುತ್ತಾ ಇದೆ. ಈ ಬಗ್ಗೆ ನಾನು ಹೇಳುವುದು ಏನೆಂದರೆ ಯಾವ ಯಾವ ಜಿಲ್ಲೆಗಳಲ್ಲಿ ಸಾರ್ವಜನಿಕರು ಆಗಲಿ ಅಥವಾ ಇನ್ನು ಇತರ ಸ್ಥಳೀಯ ಸಂಸ್ಥೆಗಳಾಗಲಿ ಮುಂದೆ ಬಂದವರಿಗೆ ಹೆಚ್ಚಿನ ಹಣ ಸಹಾಯವನ್ನು ಒದಗಿಸಿದರೆ ಅಂದರೆ ಅವರು 50 ಪರ್ಸೆಂಟ್ ಹಣ ಸಹಾಯವನ್ನು ಕೊಡಲು ಮುಂದೆ ಬಂದಂಥವರಿಗೆ ಇನ್ನು ಉಳಿದ 50 ಪರ್ಸೆಂಟ್ ಹಣವನ್ನು ಸರ್ಕಾರ ಸಹಾಯ ಮಾಡಿ ಆ ಸ್ಟೇಡಿಯಂಗಳನ್ನು ಪೂರ್ತಿ ಮಾಡುತ್ತಾ ಇದ್ದೇವೆ. ಇದರ ಜೊತೆಗೆ ಈ ಇಲಾಖೆಗೆ ಕೇವಲ ಒಬ್ಬ ಡೈರೆಕ್ಟರ್ ಮೊದಲು ಇದ್ದರು. ಅನಂತರ ಈಗ ಡೆಪ್ಯೂಟೀ ಡೈರೆಕ್ಟರ್ಸ್ ಮತ್ತು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲೂ ಸಹ ಅಧಿಕಾರಿಗಳು ಇದ್ದಾರೆ. ಇತ್ತೀಚೆಗೆ ತಾಲ್ಲೂಕು ಲೆವೆಲ್‌ನಲ್ಲೂ ಸಹ ಅಧಿಕಾರಿಗಳನ್ನು ನೇಮಕ ಮಾಡಿ ನಮ್ಮ ಕಾರ್ಯಕ್ರಮವನ್ನು ಆ ಪ್ರದೇಶದಲ್ಲಿರತಕ್ಕಂಥಾ ಯುವಜನರ ಕಾರ್ಯ ಚಟುವಟಿಕೆ ಮತ್ತು ಆಟಗಳು ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬೆಂಬಲ ಕೊಡಬೇಕು ಅನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಈ ಬಗ್ಗೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

ಸುಮಾರು 7 ಸಾವಿರ ಕ್ಲಬ್ಸ್ ಗ್ರಾಮಾಂತರ ಪ್ರದೇಶಗಳಲ್ಲಿವೆ. ಅಲ್ಲಿ ಅನೇಕ ಚಟುವಟಿಕೆಗಳು ನಡೆಯುತ್ತಿವೆ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರ ಅವರಿಗೆ ಸಹಾಯ ಮಾಡುತ್ತಿದೆ. ಮತ್ತು ಅವರು ನಡೆಸುವಂತಹ ಪಂದ್ಯಾಟಗಳಿಗೆ ಸಹಾಯ ಮಾಡುತ್ತಿದ್ದೇವೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇದಕ್ಕೆ ಹೆಚ್ಚಿನ ಉತ್ತೇಜನ ಮಾಡಬೇಕೆಂದು ನೆನ್ನೆ ದಿವಸ ಕೆಲವು ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದರು. ಆದರೆ ಇದಕ್ಕೆ ಅನೇಕ ತೊಂದರೆಗಳಿವೆ. ಗ್ರಾಮ ಮಟ್ಟದಲ್ಲಿ ಸರಿಯಾದಂಥ ಸ್ಥಳಗಳು ಸಿಕ್ಕುವುದಿಲ್ಲ. ಮತ್ತು ಜನರು ಆರ್ಥಿಕವಾಗಿ ಹಿಂದುಳಿದಿರುತ್ತಾರೆ. ಜೊತೆಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅವರು ಕೆಲಸ ಮಾಡುವುದರಿಂದ ಈ ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ ಅವರಿಗೆ ಸಮಯವಿರುವುದಿಲ್ಲ. ಈ ಕೆಲವು ಕಾರಣಗಳಿಂದ ನಮ್ಮ ಈ ಒಂದು ಕಾರ್ಯ ನೀತಿ ನಿಧಾನವಾಗುತ್ತಿದೆ. ಮುಖ್ಯವಾಗಿ ಈ ಒಂದು ಕಾರ್ಯವನ್ನು ನಮ್ಮ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಇನ್ನೂ ಚೆನ್ನಾಗಿ ಆಗಬೇಕಾದರೆ ಸ್ಥಳೀಯ ಜನರು ಹಾಗೂ ನಮ್ಮ ಸ್ಥಳೀಯ ಸದಸ್ಯರು ಇದಕ್ಕೆ ಹೆಚ್ಚಿನ ಬೆಂಬಲ ಕೊಡಬೇಕು ಆಗ ಸರ್ಕಾರವೂ ಸಹ ಸಹಾಯ ಮಾಡಲು ಮುಂದೆ ಬರುತ್ತದೆ. ಮಾನ್ಯ ಲಿಂಗಪ್ಪನವರು ನೆನ್ನೆ ದಿವಸ ಮಾತನಾಡುವಾಗ ಎಲ್ಲ ಆಟಗಳನ್ನು ಬೆಂಗಳೂರಿನಲ್ಲಿಯೇ ಏತಕ್ಕೆ ನಡೆಸುತ್ತೀರಿ ಎಂದು ಕೇಳಿದರು. ಈಗ ಕ್ರಿಕೆಟ್ ಆಟವನ್ನು

ಬೆಂಗಳೂರಿನಲ್ಲಿ ಬಿಟ್ಟು ತೀರ್ಥಹಳ್ಳಿಯಲ್ಲಿ ನಡೆಸುವುದಕ್ಕಾಗುವುದಿಲ್ಲ. ಏಕೆಂದರೆ ದೇಶದ ಎಲ್ಲ ಜನರೂ ಅಲ್ಲಿಗೆ ಬಂದು ನೋಡುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ - ಕ್ರಿಕೆಟ್ ಆಟ ನಮ್ಮ ದೇಶಕ್ಕೆ ಹೊಂದಿಕೊಳ್ಳುವುದಿಲ್ಲ ಎಂದು ನಾನು ಹೇಳಿದ್ದು.

ಶ್ರೀ **ಆರ್. ಗುಂಡೂರಾವ್** - ಕೇಂದ್ರದಲ್ಲಿ ನಿಮ್ಮವರೇ ಆದ ಪಿ.ಸಿ.ಚಂದರ್ ಅವರು ವಿದ್ಯಾ ಮಂತ್ರಿಗಳಾಗಿದ್ದಾರೆ. ಕ್ರಿಕೆಟ್ ಆಟ ಬೇಡ ಎಂದು ಅವರಿಗೆ ನೀವು ಹೇಳಿ. ಭಾರತ ದೇಶದಲ್ಲಿ ಈ ಆಟವನ್ನು ಆಡುವುದು ಬೇಡವೆಂದರೆ ನಮಗೂ ಸಂತೋಷ. ಅದರಲ್ಲಿ ನಮಗೇನೂ ಬೇಜಾರಿಲ್ಲ. ಆದರೆ ಇಂದು ಕ್ರಿಕೆಟ್ ಆಟವನ್ನು ನೋಡಲು ದೇಶದ ಜನರು ಅಪೇಕ್ಷೆ ಪಡುತ್ತಾರೆ. ಮಾನ್ಯ ಲಿಂಗಪ್ಪನವರಂತಹ ನಾಯಕರು ತೀರ್ಥಳ್ಳಿಗೆ ಬರುತ್ತಾರೆಂದರೆ ಎಷ್ಟು ಜನು ಸೇರುತ್ತಾರೋ ಅದಕ್ಕಿಂತ ಹೆಚ್ಚು ಜನರು ಕ್ರಿಕೆಟ್ ಆಟಗಾರರು ಏನಾದರು ಅಲ್ಲಿಗೆ ಬಂದರೆ ಸೇರಿರುತ್ತಾರೆ.

ಶ್ರೀ **ಕಾಗೋಡು ತಿಮ್ಮಪ್ಪ** - ರಾಜಕುಮಾರ್ ಬಂದರೂ ಸೇರುತ್ತಾರೆ.

ಶ್ರೀ ಆರ್. ಗುಡೂರಾವ್ - ಇಂದು ಕಾಲೇಜು ಮಟ್ಟದಲ್ಲಿ ಹಾಗೂ ಗ್ರಾಮಾಂತರ ಮಟ್ಟದಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕ್ರಿಕೆಟ್ ಆಟ ಆಡುತ್ತಿರುವುದನ್ನು ತಾವು ನೋಡಿರಬಹುದು. ನಮ್ಮ ಮಲೆನಾಡು ಹಾಗೂ ಇನ್ನಿತರ ಕಡೆಗಳಲ್ಲಿ ಸರಿಯಾದಂಥ ಸ್ಥಳಾವಕಾಶವಿಲ್ಲದಿದ್ದರೂ ಸಹ ಇರುವಂತಹ ಸ್ಥಳದಲ್ಲಿಯೇ ಈ ಆಟದ ಅಭ್ಯಾಸವನ್ನು ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಒಂದು ರೀತಿಯ ಉತ್ಸಾಹ ಬರುತ್ತದೆ.

ಇನ್ನು ಮಾನ್ಯ ನಾಯ್ಡು ಅವರು ಹಾಕಿ ಆಟದ ಬಗ್ಗೆ ಹೇಳಿದ್ದಾರೆ. ಹಾಕಿ ಆಟವಾಡಲು ಬೆಂಗಳೂರಿನಲ್ಲಿ ಅಂತರಾಷ್ಟ್ರೀಯ ಮಟ್ಟದ ಒಂದು ಸ್ಟೇಡಿಯಂನ್ನು ಕಟ್ಟಿಸಬೇಕೆಂದು ಅವರು ಹೇಳಿದರು ಈ ಬಗ್ಗೆ ಅವರು ಒಂದು ಪ್ರಶ್ನೆಯನ್ನು ಸಹ ಕಳುಹಿಸಿದ್ದಾರೆ. ಕ್ರಿಕೆಟ್, ಟೆನ್ನಿಸ್ ಪುಟ್‌ಬಾಲ್ ಇವುಗಳಿಗೆಲ್ಲಾ ಸ್ಟೇಡಿಯಂ ಕಟ್ಟಿಸಿದ್ದೀರಿ, ಅದರಂತೆ ಹಾಕಿಗೂ ಕಟ್ಟಿಸಿ ಎಂದು ಹೇಳಿದರು

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು - ನನಗೆ ಈ ಬಗ್ಗೆ ಕ್ಲಿಯರ್‌ಕಟ್ ಆದಂಥ ಆಶ್ವಾಸನೆ ಬೇಕು.

ಶ್ರೀ ಆರ್. ಗುಂಡೂರಾವ್ - ನಾನು ತಮಗೆ ಇಲ್ಲ ಎಂದು ಹೇಳಲಿಲ್ಲ, ನಿಮಗೆ ಈ ಬಗ್ಗೆ ಎಷ್ಟು ಉತ್ಸಾಹವಿದೆಯೋ ಅದಕ್ಕಿಂತ ಹೆಚ್ಚಿನ ಉತ್ಸಾಹ ನನಗಿದೆ, ಏಕೆಂದರೆ ನಾನು ಹಾಕಿ ಆಟಗಾರರ ಜಿಲ್ಲೆಯಿಂದ ಬಂದಿರುವವನು, ಆದ್ದರಿಂದ ಹಾಕಿ ಸ್ಟೇಡಿಯಂನ್ನು ಸಹ ಕಟ್ಟಿಸುತ್ತೇವೆ. ಆ ವಿಚಾರವಾಗಿ ತಾವೇನೂ ಯೋಚನೆ ಮಾಡಬೇಕಾಗಿಲ್ಲ. ಇಂತಹ ಪಂದ್ಯಾಟಗಳನ್ನು ಮೈಸೂರಿನಲ್ಲಿಯಾಗಲೀ ಮಡಿಕೇರಿಯಾಗಲೀ ಬೆಳಗಾಂನಲ್ಲಿಯಾಗಲೀ ನಡೆಸುವುದಕ್ಕೆ

ಸಾಧ್ಯವಿಲ್ಲ, ರಾಷ್ಟ್ರ ಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾಸ್ಪರ್ಧೆಗಳನ್ನು ನಡೆಸಲು ಬೆಂಗಳೂರಿನಲ್ಲಿ ಹೆಚ್ಚಿನ ಅನುಕೂಲಗಳಿವೆ. ಆದಕಾರಣ ಹೆಚ್ಚಿನ ಜನರು ಬಂದು ನೋಡುತ್ತಾರೆ, ಮತ್ತು ಆಟವನ್ನು ನೋಡಲು ಬರತಕ್ಕಂಥ ಸಾವಿರಾರು ಜನರು ಇಳಿದು ಕೊಳ್ಳಲು ಅನುಕೂಲ ಕಲ್ಪಿಸಿಕೊಡಬೇಕಾದರೆ ಬೆಂಗಳೂರಿನಲ್ಲಿ ಮಾತ್ರ ಸಾಧ್ಯ, ಮತ್ತು ಇದಕ್ಕೆಲ್ಲಾ ಅನುಕೂಲಗಳನ್ನು ಸಂಬಂಧಪಟ್ಟ ಸಂಸ್ಥೆಯವರು ಮಾಡುತ್ತಾರೆ. ಜೊತೆಗೆ ನಾವು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕ್ ಮಟ್ಟದಲ್ಲಿ ಅನೇಕ ಪಂದ್ಯಾಟಗಳನ್ನು ನಡೆಸಿದ್ದೇವೆ. ಮೈಸೂರು ಜಿಲ್ಲೆಯಲ್ಲಿ ಹಾಗೂ ಕೋಲಾರ ಜಿಲ್ಲೆಯಲ್ಲಿ ಮಂಗಳೂರು ಜಿಲ್ಲೆಯಲ್ಲಿ ಕುಸ್ತಿ ಪಂದ್ಯಗಳು, ಮಂಡ್ಯ ಜಿಲ್ಲೆಯಲ್ಲಿ ಕಬಡ್ಡಿ ಪಂದ್ಯವನ್ನು, ಶಿವಮೊಗ್ಗ ಜಿಲ್ಲೆಯಲ್ಲಿ ಖೋಖೋ ಪಂದ್ಯವನ್ನು ನಡೆಸಲಾಯಿತು. ಮತ್ತು ಗ್ರಾಮಾಂತರ ಪ್ರದೇಶಗಳ ಸ್ಪರ್ಧೆಯ ಮೂಲಕ ರಾಷ್ಟ್ರಮಟ್ಟದ ಖೋಖೋ ಸ್ಪರ್ಧೆಯಾಟವನ್ನು ಹೊಸಕೋಟೆಯಲ್ಲಿ ನಡೆಸಲಾಯಿತು. ರಣಜಿ ಟ್ರೋಫಿ ಕ್ರಿಕೆಟ್ ಆಟವನ್ನು ಶಿವಮೊಗ್ಗದಲ್ಲಿ ನಡೆಸಲಾಯಿತು. ಫುಟ್‌ಬಾಲ್ ಆಟವನ್ನು ಗುಲ್ಬರ್ಗದಲ್ಲಿ, ಟೆನ್ನಿಸ್ ಆಟವನ್ನು ಬೆಳಗಾಂನಲ್ಲಿ, ವಾಲಿಬಾಲ್ ಆಟವನ್ನು ರಾಯಚೂರಿನಲ್ಲಿ ಹಾಕಿ ಆಟವನ್ನು ಬಿಜಾಪುರದಲ್ಲಿ ನಡೆಸಲಾಯಿತು.

ಇನ್ನು ಮಾನ್ಯ ಸತ್ಯನಾರಾಯಣಸಿಂಗ್ ಅವರು ಬಳ್ಳಾರಿಯಲ್ಲಿಯಾವ ಆಟವನ್ನೂ ನಡೆಸಲಿಲ್ಲ ವೆಂದು ಹೇಳಿದರು. ನಮ್ಮ ರಾಜ್ಯದ ಪಂದ್ಯಾಟವಾದ ಫುಟಬಾಲ್ ಆಟವನ್ನು ಅಲ್ಲಿ ನಡೆಸಬೇಕೆಂದಿದ್ದೆವು. ಮತ್ತು ಈ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಗಳುವರನ್ನು ಮತ್ತು ಅಲ್ಲಿಯ ಸಾರ್ವಜನಿಕರನ್ನು ಕೇಳಿದ್ದೆವು. ಆದರೆ ಯಾರೂ ಸಹ ಮುಂದೆ ಬರಲಿಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್ - ನಾವು ಮುಂದೆ ಬರುತ್ತೇವೆ.

ಶ್ರೀ ಆರ್. ಗುಂಡೂರಾವ್ - ಹಾಗಿದ್ದರೆ ಮುಂದಿನ ರಾಜ್ಯ ಮಟ್ಟದ ಫುಟ್ ಬಾಲ್ ಆಟವನ್ನು ಅಲ್ಲಿಯೇ ನಡೆಸುತ್ತೇವೆ.

ಇನ್ನು ಮಾನ್ಯ ಕೊಣಂದೂರು ಲಿಂಗಪ್ಪನವರು ಗಾಲ್ಫ್ ಕ್ಲಬ್ಬಿಗೆ ಒಂದುಲಕ್ಷ ರೂ. ಗಳನ್ನು ಏತಕ್ಕೆ ಕೊಟ್ಟಿರಿ ಎಂದು ಕೇಳಿದರು. ಈ ಆಟವನ್ನು ದೊಡ್ಡ ದೊಡ್ಡ ಮನುಷ್ಯರೇ ಆಡುತ್ತಾರೆ, ಬೇರೆಯವರು ಆಡುವುದಿಲ್ಲವೆನ್ನುವುದು ಅವರ ಅಭಿಪ್ರಾಯ.

ಶ್ರೀ ಕಾಗೋಡು ತಿಮ್ಮಪ್ಪ - ಅಲ್ಲಿ ಮೆಂಬರ್‌ಷಿಪ್ ಕೂಡ ಲಿಮಿಟೆಡ್

ಶ್ರೀ ಆರ್. ಗುಂಡೂರಾವ್ - ಈ ಗಾಲ್ಫ್ ಆಟವೂ ಸಹ ಒಂದು ಅಂತರರಾಷ್ಟ್ರೀಯ ಕ್ರೀಡೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ - ಹಾಗಿದ್ದರೆ ಸರ್ಕಾರದವರು ಬೇಕಾದರೆ ಹಣ ಕೊಡಲಿ, ಯೂತ್ ಇಲಾಖೆ ಮೂಲಕ ಕೊಡುವುದು ಬೇಡ.

ಶ್ರೀ ಆರ್. ಗುಂಡೂರಾವ್ - ಈಗ ಕೊಡುತ್ತಿರುವುದೂ ಸಹ ಸರ್ಕಾರದ ಹಣವೇ. ಮುಖ್ಯವಾಗಿ ಇದು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಎರಡನೆಯದಾಗಿ ನಮ್ಮ

ಬೆಂಗಳೂರು ನಗರ ಇಡೀ ರಾಜ್ಯದಲ್ಲಿಯೇ ಏತಕ್ಕೆ ರಾಷ್ಟ್ರಮಟ್ಟದಲ್ಲಿ ಹಾಗೂ ವಿಶ್ವದಲ್ಲಿಯೇ ಒಂದು ಒಳ್ಳೆಯ ನಗರವೆಂದು ಹೆಸರು ಪಡೆದಿದೆ. ಪ್ರಪಂಚದ ನಾನಾ ಕಡೆಗಳಿಂದ ಪ್ರವಾಸಿಗಳು ಇಲ್ಲಿಗೆ ಬಂದು ಹೋಗುತ್ತಿದ್ದಾರೆ. ಈ ಗಾಲ್ಫ್ ಆಟವೂ ಸಹ ಒಂದು ಅತಿ ಮುಖ್ಯವಾದಂಥ ಕ್ರೀಡೆಯಾಗಿದೆ. ಆದ ಕಾರಣ ಪ್ರವಾಸಿಗರು ಇಲ್ಲಿಗೆ ಬರುವುದಕ್ಕೆ ಮುಂಚೆ ಎಲ್ಲೆಲ್ಲಿ ಗಾಲ್ಫ್ ಕ್ಲಬ್‌ಗಳವೆ, ಎಲ್ಲೆಲ್ಲಿ ಬೀಚ್‌ಗಳಿವೆ ಎಂಬುದನ್ನೆಲ್ಲಾ ಅಂತರರಾಷ್ಟ್ರೀಯ ಮಟ್ಟದಲ್ಲಿ ನೋಡುತ್ತಾರೆ. ಈ ಅನುಕೂಲಗಳೆಲ್ಲಾ ಇದ್ದರೆ ಪ್ರವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅವರುಗಳು ಬರುವುದರಿಂದ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಹಾಗೂ ಕರ್ನಾಟಕ ಸರ್ಕಾರಕ್ಕೆ ಬೇಕಾದಷ್ಟು ಉತ್ಪತ್ತಿಯೂ ಸಹ ಬರುವುದಕ್ಕೆ ಅವಕಾಶವಿದೆ. ಮಾನ್ಯ ಲಿಂಗಪ್ಪನವರು ತಮ್ಮ ಭಾಷಣದಲ್ಲಿ ಯಾವಾಗಲೂ ನಮ್ಮ ಕರ್ನಾಟಕ ರಾಜ್ಯದ ಕಲೆ, ಸಂಸ್ಕೃತಿ, ಮತ್ತು ಪರಂಪರೆಯ ಬಗ್ಗೆ ಹೇಳುತ್ತಿರುತ್ತಾರೆ. ಇಂತಿಂಥ ಕವಿಗಳು ಜನಿಸಿದ ನಾಡು ಎಂದು ಹೇಳುತ್ತಾರೆ. ಇವೆಲ್ಲಾ ಪ್ರಪಂಚಕ್ಕೆ ಗೊತ್ತಾಗಬೇಕಾದರೆ ಇಲ್ಲಿಗೆ ಪ್ರವಾಸಿಗಳು ಹೆಚ್ಚು ಹೆಚ್ಚಾಗಿ ಬಂದು ಹೋಗಬೇಕು. ಅವರುಗಳು ಇಲ್ಲಿಯ ಸುಂದರ ಬೆಂಗಳೂರು ನಗರದಲ್ಲಿರುವ ವಿಧಾನಸೌಧ, ಕೆಂಪೇಗೌಡ ಪ್ರತಿಮೆ, ಲಾಲ್‌ಬಾಗ್ ಮುಂತಾದ ಸ್ಥಳಗಳನ್ನು ಹಾಗೂ ಗೆರುಸೊಪ್ಪ ಜಲಪಾತದಂತಹ ಸ್ಥಳಗಳನ್ನು ನೋಡಿಕೊಂಡು ಹೋದರೆ ನಮ್ಮ ರಾಜ್ಯಕ್ಕೆ ಕೀರ್ತಿ ಹೆಚ್ಚುತ್ತದೆ.

ಶ್ರೀ ಟಿ.ಎಂ. **ಮಂಜುನಾಥ್** - ಸರ್ಕಾರದವರು ಒಂದು ಲಕ್ಷ ಕೊಡುವ ಅವಶ್ಯಕತೆಯೇ ಇರಲಿಲ್ಲ. ಅಲ್ಲಿರುವವರೆಲ್ಲಾ ಶ್ರೀಮಂತರೇ ಆದಕಾರಣ ಅವರೇ ಹಣ ಕೊಡುತ್ತಿದ್ದರು.

**ಅಧ್ಯಕ್ಷರು** - ಅದು ನಿಮ್ಮ ಅಭಿಪ್ರಾಯ. ತಾವು ಈ ರೀತಿ ಮಧ್ಯೆ ಮಧ್ಯೆ ಮಾತನಾಡಿದರೆ ಅವರು ಉತ್ತರ ಕೊಡುವುದು ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳ ಉತ್ತರ ಮುಗಿದ ನಂತರ ವಿದ್ಯಾ ಇಲಾಖೆಯ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಆರ್. **ಗುಂಡೂರಾವ್** - ಈ ಕ್ಲಬ್‌ಗೆ ಒಂದು ಲಕ್ಷ ಕೊಟ್ಟ ಬಗ್ಗೆ ತಾವುಗಳೇನೂ ಕಳವಳ ಪಡಬೇಕಾಗಿಲ್ಲ. ಅದು ಒಳ್ಳೆಯ ರೀತಿಯಿಂದ ಉಪಯೋಗವಾಗಿದೆ. ಆ ಹಣ ಸರಿಯಾಗಿ ಉಪಯೋಗವಾಗಿಲ್ಲವೆಂದು ತಾವು ತಿಳಿಸಿದರೆ ನಾನು ಅದರ ಬಗ್ಗೆ ವಿಚಾರ ಮಾಡಿಸುತ್ತೇನೆ. ಈ ಕ್ಲಬ್‌ಗೆ ಬೇರೆ ಕಡೆಯವರೂ ಸಹ ಸದಸ್ಯರಾಗಿರುತ್ತಾರೆ. ನಾವು ಹಣ ಸಹಾಯ ಮಾಡಿದರೆ ಅವರೂ ಸಹ ಸಹಾಯ ಮಾಡುತ್ತಾರೆ.

ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಭಾರತದಲ್ಲಿಯೇ ಪ್ರಥಮವಾಗಿ ಸಾಗರದಲ್ಲಿ ಕ್ರಾಸ್ ಕಂಟ್ರೀ ರೇಸನ್ನು ನಡೆಸಿದರು, ಅವರೇ ಅದಕ್ಕೆ ಅಧ್ಯಕ್ಷರಾಗಿದ್ದರು, ಅದನ್ನು ನಡೆಸಲು ಅವರು ಹಾಗೂ ಅವರ ಸ್ನೇಹಿತರು ಬಹಳ ಶ್ರಮ ವಹಿಸಿದರು. ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮವಾಗಿ ನಡೆದಂಥ ಆ ರೇಸ್‌ಗೆ ನನ್ನನ್ನು ಹಾಗೂ ಕೇಂದ್ರದ ಮಂತ್ರಿಗಳನ್ನು ಕರೆಸಿದ್ದರು. ಹಣಕಾಸಿನ ತೊಂದರೆಯಾದಾಗ ಅನೇಕ ಜನರು ಅವರಿಗೆ ಸಹಾಯ ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ - ನೀವು ಎಷ್ಟು ಕೊಟ್ಟಿರಿ?

ಶ್ರೀ **ಆರ್. ಗುಂಡೂರಾವ್** - ಸರ್ಕಾರದಿಂದ ಹತ್ತು ಸಾವಿರ ಕೊಟ್ಟಿದ್ದೇವೆ. ಮೊದಲು 5 ಸಾವಿರ ಸಾಕು ಎಂದು ಹೇಳಿದರು. ನಂತರ ಅಂದಿನ ಸಮಾರಂಭದಲ್ಲಿ 25 ಸಾವಿರ ಜನರು ಸೇರಿದ್ದ ಸಭೆಯಲ್ಲಿ 5 ಸಾವಿರ ಸಾಲುವುದಿಲ್ಲ. ಇನ್ನೂ 5 ಸಾವಿರ ಕೊಡಿ ಎಂದು ಕೇಳಿದರು. ಅದರಂತೆ ಕೊಟ್ಟಿದ್ದೇವೆ ಇನ್ನೂ ಜಾಸ್ತಿ ಕೇಳಿದರೆ ಕೊಡುವುದಕ್ಕೆ ಸಿದ್ಧನಿದ್ದೇನೆ. ಲೋಕೋಪಯೋಗಿ, ಇಂಡಸ್ಟ್ರೀ, ಇರಿಗೇಷನ್ ಇಂತಹ ಇಲಾಖೆಗಳಾದರೆ ಕೋಟಿಗಟ್ಟಲೆ ಹಣ ಖರ್ಚು ಮಾಡಬೇಕಾಗುತ್ತದೆ. ಆದರೆ ಇದೇನು ಅಂತಹ ದೊಡ್ಡ ಇಲಾಖೆಯಲ್ಲ. ಇದು ಸಾವಿರಗಟ್ಟಲೆ ಖರ್ಚು ಮಾಡತಕ್ಕಂಥ ಇಲಾಖೆ. ಆದ್ದರಿಂದ ನಾಳೆಯೇ ಕೇಳಿ, ಕೊಡುತ್ತೇನೆ. ಅದಕ್ಕೇನೂ ತೊಂದರೆಯಿಲ್ಲ.

5 ಸಾವಿರ ರೂಪಾಯಿಗಳು ಬೇಕು ಎಂದು ಕೇಳಿ ಕೊಡುತ್ತೇನೆ. ನಿನ್ನೆಯ ದಿವಸ ಬೆಂಗಳೂರು ಪ್ಯಾಲೇಸ್ ಆರ್ಚರ್ಡ್ ನಲ್ಲಿ ನಡೆಯತಕ್ಕ ಯೋಗಾಶ್ರಮ ಬಗ್ಗೆ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮಾತನಾಡಿದ್ದಾರೆ. ಅದು ಯಾವ ರೀತಿ ನಡೆಯುತ್ತದೆ ಎನ್ನುವುದನ್ನು ನಮ್ಮ ಮಾನ್ಯ ಅಧ್ಯಕ್ಷಿಣಿಯವರು ನೋಡಿದ್ದಾರೆ. ಆದ್ದರಿಂದ ನಿನ್ನೆಯ ದಿವಸ ಅವರೇ ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಹೇಳಿದ್ದಾರೆ. ಆ ಮಾನ್ಯ ಸದಸ್ಯರು ಈ ಯೋಗಾಶ್ರಮವನ್ನು ಇಲ್ಲಿಯವರೆಗೂ ನೋಡಿರಲಿಲ್ಲ. ಈಗ ಅವರು ನೋಡಿಕೊಂಡು ಬಂದಿದ್ದಾರೆ ಅವರು ಅದನ್ನು ಚೆನ್ನಾಗಿ ನಡೆಸುತ್ತಿದ್ದಾರೆಂದು ನೋಡಿ ಕೊಂಡು ಬಂದಿದ್ದಾರೆ. ಇಂಥಾದಕ್ಕೆ ಸರ್ಕಾರದವರು ಸಹಾಯವನ್ನು ಕೊಡಬೇಕಾಗುತ್ತದೆ. ಇದರಿಂದ ಅನೇಕ ಜನಗಳಿಗೆ ಅನುಕೂಲವಾಗುತ್ತದೆ. ರಾಜಕೀಯದಲ್ಲಿ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ಕೈಗಾರಿಕೆಯಲ್ಲಿ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ವ್ಯಾಪಾರದಲ್ಲಿ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ಆದರೆ ಆರೋಗ್ಯ ಸೆಂಟರುಗಳಿಗೆ ಖರ್ಚು ಮಾಡುವುದು ಬಹಳ ಮುಖ್ಯವಾದುದು ಮುಖ್ಯವಾಗಿ ಮನುಷ್ಯನಿಗೆ ಆರೋಗ್ಯ ಚೆನ್ನಾಗಿರಬೇಕು. ಎಂ.ಎಲ್.ಎ. ಆಗಬಹುದು ಎಂ.ಪಿ. ಆಗಬಹುದು. ಆದರೆ ದುಡ್ಡು ಕೊಟ್ಟು ಆರೋಗ್ಯವನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ವ್ಯಾಪಾರ ಮಾಡಿ ಹಣ ಸಂಪಾದನೆ ಮಾಡಬಹುದು. ವ್ಯವಸಾಯ ಮಾಡಿ ಲಾಭ ಸಂಪಾದನೆ ಮಾಡಬಹುದು. ಆದರೆ ಆರೋಗ್ಯವನ್ನು ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಚಿಕ್ಕ ವಯಸ್ಸಿನಲ್ಲಿ ಯೋಗಾಸನಗಳು ಮತ್ತು ಕ್ರೀಡೆಗಳಲ್ಲಿ ಭಾಗವಹಿಸದೇ ಹೋದರೆ ಒಳ್ಳೆಯ ಆರೋಗ್ಯವಂತರಾಗಿರುವುದಕ್ಕೆ, ಆರೋಗ್ಯಭಾಗ್ಯವನ್ನು ಸಂಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಈ ಬಾಬುಗೆ ಹೆಚ್ಚಿನ ಹಣ ಸಹಾಯ ಮಾಡುವ ದೃಷ್ಟಿಯಿಂದ ಮಾನ್ಯ ಹಣಕಾಸಿನ ಮಂತ್ರಿಗಳು ಈ ಯುವ ಜನ ಇಲಾಖೆಗೆ ಹೆಚ್ಚು ಹಣವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆರ್ಟ್ಸ್ ಮತ್ತು ಕಲ್‌ಚರ್, ನಮ್ಮ ಸಂಸ್ಕೃತಿ ನಾಟಕ ಸಂಗೀತ ಇವುಗಳಿಗೆ ನಾವು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಿದ್ದೇವೆ. ಕರ್ನಾಟಕದ ಕಲೆಗೆ ಎಲ್ಲಾ ದೃಷ್ಟಿಯಿಂದ ಕಲಾವಿದರಿಗೆ ಬೆಂಬಲ ಕೊಡಬೇಕು ಎಂದು, ಹೆಚ್ಚಿನ ಆರ್ಥಿಕ ಸಹಾಯ ಮಾಡಬೇಕು ಎಂದು ಸಹಾಯ ಕೊಡುತ್ತಿದ್ದೇವೆ. ಆದರೂ ಇದು ಬಹಳ ಕಡಿಮೆ. ಸಂಗೀತ, ಹರಿಕಥೆ ನೃತ್ಯ, ಭರತನಾಟ್ಯ, ಇವುಗಳಿಗೂ ಪ್ರೋತ್ಸಾಹ ಕೊಡುತ್ತಿದ್ದೇವೆ. ಈ ಸಂಗೀತ, ಮತ್ತು ಭರತನಾಟ್ಯ ಇವುಗಳನ್ನು ವಯಸ್ಸು ಕಳೆದ ಮೇಲೆ ಅಭ್ಯಾಸ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಚಿಕ್ಕ ವಯಸ್ಸಿನಲ್ಲಿಯೆ ಅಭ್ಯಾಸ ಮಾಡಬೇಕು. ನಮ್ಮ ದೇಶದಲ್ಲಿ ಅನೇಕ ಜನ ನಾಟಕ ಕಲಾವಿದರು ಇದ್ದಾರೆ, ಕಾದಂಬರಿಕಾರರು ಇದ್ದಾರೆ. ಇವರಲ್ಲಿ ಬಹಳ ಜನ ತೊದರೆಯಲ್ಲಿದ್ದಾರೆ. ಅದಕ್ಕಾಗಿ 500 ರೂಪಾಯಿಗಳ ಮಾಸಾಶನವನ್ನು 90 ಜನಗಳಿಗೆ ಕೊಡುತ್ತಿದ್ದೇವೆ. ಇನ್ನೂ ಅನೇಕ ಜನಗಳಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ತಮಗೆಲ್ಲರಿಗೂ ಗೊತ್ತಿರುವಂತೆ ಅನೇಕ ಕಲಾವಿದರುಗಳು ಬಹಳ ಕಷ್ಟದಲ್ಲಿದ್ದಾರೆ. ನಾನು 8-9 ವರ್ಷದ ಹುಡುಗನಾಗಿದ್ದಾಗ ಹಿರಿಯ ಸಾಹಿತಿಗಳು ಕಲೆಗಾರರು ಎಂದು ಏನು ಕೇಳುತ್ತಿದ್ದೆನೋ ಅವರೆಲ್ಲರೂ ಇವೊತ್ತು ಒಂದು ಹೊತ್ತಿನ ಊಟ ಮಾಡುವುದಕ್ಕೆ ಇಲ್ಲದೆ ಇರುವಷ್ಟು ಕಷ್ಟದಲ್ಲಿದ್ದೇವೆ ಎಂದು ನಮ್ಮ ಮುಂದೆ ಅರ್ಜಿ ತೆಗೆದುಕೊಂಡು ಬರುತ್ತಾರೆ. ಮಾಸಾಶನವನ್ನು ಇನ್ನೂ ಹೆಚ್ಚು ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆ. ಶ್ರೀಮಾನ್ ಕೆ.ಆರ್.ಎಸ್. ನಾಯ್ಡು ಮತ್ತು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಸ್ಟೇಡಿಯಂ ಬಗ್ಗೆ ಮಾತನಾಡಿದ್ದಾರೆ. ಈ ಕೆಲಸವನ್ನು ಮಾಡಿಕೊಡುವುದಕ್ಕೆ ನಾನು ಎಲ್ಲಿಯವರೆಗೆ ಕ್ರೀಡಾಮಂತ್ರಿಗಳಾಗಿರುತ್ತೇನೆಯೋ ಅಲ್ಲಿಯವರೆಗೂ ಯೋಚನೆ ಮಾಡಬೇಕಾಗಿಲ್ಲ. ಆದರೆ ಯಾವಾಗ ನನ್ನ ಖಾತೆ ಬದಲಾವಣೆಯಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಇಂಟರ್ ನ್ಯಾಷನಲ್ ಆರ್ಟಿಸ್ಟ್ ಸ್ಟೇಡಿಯಂ ಮಾಡುವುದಕ್ಕೆ ಸರ್ಕಾರ ಪೂರ್ತಿ ಸಹಾಯ ಕೊಡುತ್ತದೆ ಮತ್ತು ಆ ಸ್ಟೇಡಿಯಂ ನಡೆಸುವುದಕ್ಕೆ ಸಹಾಯ ಮಾಡುತ್ತದೆ ಎಂದು ನಾನು ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ.ಆರ್. ಶ್ರೀನಿವಾಸಲು ನಾಯ್ಡು - ಎಲ್ಲರಿಗೂ ವಿಶ್ರಾಂತಿ ವೇತನವನ್ನು ಕೊಡುತ್ತಿದ್ದೀರಿ. ಅದೇ ರೀತಿ ಕ್ರೀಡಾಪಟುಗಳಿಗೂ ವಿಶ್ರಾಂತಿ ವೇತನವನ್ನು ಕೊಡುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ?

ಶ್ರೀ ಆರ್. ಗುಂಡೂರಾವ್ - ಅಧ್ಯಕ್ಷರೇ ಕೊನೆಯದಾಗಿ ಕಲಾವಿದರಿಗೆ ಯಾವ ರೀತಿ ಸಹಾಯ ಮಾಡುತ್ತಿದ್ದೇವೆಯೋ ಅದೇ ರೀತಿ ಕ್ರೀಡಾಪಟುಗಳಿಗೂ ಕೂಡ ಸಹಾಯ ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಯಾರು ಯಾರು ಉತ್ತಮ ಆಟಗಾರರು ಇದ್ದಾರೆ, ಯಾರು ಯಾರು ಕುಸ್ತಿ ಮಾಡುವವರು ಇದ್ದಾರೆ ಅವರಲ್ಲಿ ಉತ್ತಮರಾದವರಿಗೆ ಮಾಸಾಶನ ಕೊಡಬೇಕು ಎಂದು ತೀರ್ಮಾನ ಮಾಡಿದೆ. ಈ ದಿಶೆಯಲ್ಲಿ ಆದಷ್ಟು ಜಾಗ್ರತೆ ಈ ಕೆಲಸವನ್ನು ಪೂರೈಸುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ.

ಶ್ರೀಮಾನ್ ಸಯನಕ್ ಅವರು ಬೆಳಗಾಮಿನಲ್ಲಿರತಕ್ಕ ಫೋರ್ಟ್ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿದ್ದಾರೆ. ಅದು ಅರ್ಕಿಯಾಲಜಿ ಪ್ರಶ್ನೆ. ನಾವು ಅದಕ್ಕೆ ಸಂಬಂಧಪಟ್ಟ, ಯಾವುದೇ ಒಂದು ಇಲಾಖೆಯನ್ನು ಬೆಳಗಾಮಿನಲ್ಲಿ ಮಾಡಿಲ್ಲ. ಆ ಫೋರ್ಟ್ ನಮಗೆ ಸೇರಿಲ್ಲ. ಅದು ಮಿಲಿಟರಿಗೆ ಸೇರಿದ್ದು ಇಂಡಿಯನ್ ಡಿಫೆನ್ಸಿಗೆ ಸೇರಿದೆ. ಆದ್ದರಿಂದ ನಾನು ನಮ್ಮ ಇಲಾಖೆಯ ಮುಖಾಂತರ ಮಿಲಿಟರಿ ಅಧಿಕಾರಿಗಳಿಗೆ ಪ್ರಾರ್ಥನೆ ಮಾಡಿಕೊಂಡು ಆದಷ್ಟು ಜಾಗ್ರತೆ ಆ ಫೋರ್ಟನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಎನ್.ಸಿ.ಸಿ ಬಗ್ಗೆ ಯಾರೂ ಮಾತನಾಡಿಲ್ಲ. ಅದು ನಮ್ಮ ರಾಜ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದು ಒಳ್ಳೆಯ ಹೆಸರನ್ನು ರಾಷ್ಟ್ರ ಮಟ್ಟದಲ್ಲಿ ಕರ್ನಾಟಕ ಪಡೆದಿದೆ ಯುವಜನ ಸೇವಾ ಇಲಾಖೆಯ ಬಗ್ಗೆ ತಾವುಗಳೆಲ್ಲರೂ ಕೂಡ ಒಳ್ಳೆಯ ಮಾತುಗಳನ್ನು ಹೇಳಿ ಯಾವುದೇ ಟೀಕೆ ಟಿಪ್ಪಣಿಗಳನ್ನು ಮಾಡದೆ ಇರುವುದಕ್ಕೆ ಮತ್ತೊಮ್ಮೆ ತಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಯುವಜನ ಸೇವಾ ಇಲಾಖೆಗೆ ತಮ್ಮ ಸರ್ವತೋಮುಖವಾದ ಬೆಂಬಲವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಈ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ.

ಹೌಸಿಂಗ್ ಬಗ್ಗೆ ಹೇಳುವುದಾದರೆ 8 ಲಕ್ಷ ಜನ ಫ್ಯಾಮಿಲಿಯವರಿಗೆ ಮನೆ ಇಲ್ಲದೆ ಇರುವವರಿಗೆ ಜಾಗ ಇಲ್ಲದೆ ಇರುವವರಿಗೆ ಸುಮಾರು 7 ಲಕ್ಷ ಜನಗಳಿಗೂ ಮೇಲ್ಪಟ್ಟು ಜನಗಳಿಗೆ ಸೈಟುಗಳನ್ನು ಒದಗಿಸಿದ್ದೇವೆ. 89-90 ಸಾವಿರ ಮನೆಗಳನ್ನು ಕಟ್ಟಿ ಕೊಟ್ಟಿದ್ದೇವೆ. ಕೆಲವು ಕಡೆ ಮಲೆನಾಡಿನಲ್ಲಿ ಕಟ್ಟಿದ ಮನೆಗಳು ಬಿದ್ದು ಹೋದವು ಎಂದು ಮಾನ್ಯ ಸದಸ್ಯರು ಹೇಳಿದರು. ನಾನು ಕೂಡ ಮಲೆನಾಡು ಪ್ರದೇಶದಿಂದ ಬಂದಿದ್ದೇನೆ. ಸಾವಿರಾರು ಮನೆಗಳನ್ನು ಕಟ್ಟಿರುವಾಗ ಕೆಲವು ಮನೆಗಳು ಬಿದ್ದು ಹೋಗಿರಬಹುದು. ಆದರೆ ತತ್ವ ಬಹಳ ಮುಖ್ಯವಾದುದು. ಯಾವ ಜನ ನಾವು ಯಾವ ಕಾಲದಲ್ಲಿಯೂ ಮನೆಗಳನ್ನು ಕಾಣುವುದಿಲ್ಲ ಎಂದು ತಿಳಿದುಕೊಂಡಿದ್ದರೋ ಅಂಥವರು ಇವೊತ್ತು ತಮ್ಮದೇ ಆದ ಜಾಗದಲ್ಲಿ ತಮ್ಮದೇ ಮನೆಗಳಲ್ಲಿ ವಾಸಮಾಡುತ್ತಿದ್ದಾರೆ. ಈ ಮನೆಗಳು ಮಧ್ಯಮ ವರ್ಗದವರಿಗೆ ಚೆನ್ನಾಗಿ ಕಾಣದೇ ಇರಬಹುದು. ಚಿಕ್ಕಚಿಕ್ಕ ಮನೆಗಳನ್ನು ಕಟ್ಟಿರುವುದರಿಂದ ಅವು ಬಿದ್ದು ಹೋಗುವುದಿಲ್ಲ. ಕೆಲವರು ಮರದ ಕೆಳಗಡೆ ವಾಸ ಮಾಡುತ್ತಾ ಏನೂ ಇಲ್ಲದೇ ಇದ್ದವರು ಇವೊತ್ತು ತಮ್ಮದೇ ಆದ ಒಂದು ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ಸಂತೋಷದಿಂದ ವಾಸ ಮಾಡುತ್ತಿದ್ದಾರೆ. ಅನೇಕ ಕಡೆ ಮನೆಗಳು ಚೆನ್ನಾಗಿದೆ. ಕೆಲವು ಕಡೆ ಏನೋ ಸ್ವಲ್ಪ ವ್ಯತ್ಯಾಸವಾಗಿರಬಹುದು. ಅಂಥಾದ್ದು ಬಹಳ ಕಡಿಮೆ 89-90 ಸಾವಿರ ಮನೆಗಳನ್ನು ಕಟ್ಟುವಾಗ 5 ಪರ್ಸೆಂಟೋ 2 ಪರ್ಸೆಂಟೋ ಮನೆಗಳು ಬಿದ್ದು ಹೋಗಿರಬಹುದು. ಇಂಥಾ ಕಡೆ ಆ ಮನೆ ಬಿದ್ದು ಹೋಗಿದೆ ಎಂದರೆ ಅಂಥಾದವನ್ನು ಖಂಡಿತವಾಗಿಯೂ ವಿಚಾರ ಮಾಡಿ ಸರಿಪಡಿಸುವುದಕ್ಕೆ ನಾನು ತಯಾರಾಗಿದ್ದೇನೆ. ಎಲ್ಲೂ ಮನೆಗಳನ್ನು ನಾವೂ ಚೆನ್ನಾಗಿ ಕಟ್ಟಿದ್ದೇವೆ ಎಂದು ನಾನು ಹೇಳುವುದಿಲ್ಲ. ಯಾರು ಮನೆಯಲ್ಲಿ ವಾಸ ಮಾಡುತ್ತಾರೆ ಅಂಥವರು ಅವರೇ ಕಟ್ಟಿಕೊಳ್ಳುವುದಕ್ಕೆ

ಅನೇಕ ಜನ ಮುಂದೆ ಬರುತ್ತಾರೆ. ಎಲ್ಲಿ ಜನ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮುಂದೆ ಬರುವುದಿಲ್ಲ ಅಂಥಾ ಕಡೆ ಕಂಟ್ರಾಕ್ಟರ್ ಮೂಲಕವೋ ಅಥವಾ ನಮ್ಮ ಅಧಿಕಾರಿಗಳ ಮುಖಾಂತರವೋ ಕಟ್ಟಿಸಬೇಕಾಗುತ್ತದೆ. ಆದ್ದರಿಂದ ಖಚಿತವಾಗಿ ಇಂಥಾ ಕಡೆ ಲೋಪದೋಷಗಳು ಬಂದಿವೆ ಎಂದು ತಿಳಿಸಿದರೆ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಆ ಮೇಲೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಈಗ ಮನೆ ಕಟ್ಟಿಕೊಳ್ಳುವುದಕ್ಕೆ 2 1/2 ಸಾವಿರ ರೂಪಾಯಿಗಳನ್ನು ಏನು ಕೊಡುತ್ತಿದೆ ಅದನ್ನು ಸ್ವಲ್ಪ ಜಾಸ್ತಿ ಮಾಡಬೇಕು, ಅದರಲ್ಲೂ ಮಲೆನಾಡು ಏರಿಯಾಗಳಲ್ಲಿ ಈ ಹಣವನ್ನು ಜಾಸ್ತಿ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ಒಪ್ಪುತ್ತೇನೆ ಸರ್ಕಾರ ಇದನ್ನು ಆದಷ್ಟು ಜಾಗ್ರತೆ ಪರಿಶೀಲಿಸಿ ಆ ಹಣವನ್ನು ಸ್ವಲ್ಪ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಸಯನಕ್ ಅವರು ಪುದುಚ್ಚೆಯಲ್ಲಿ ಮನೆಯು ಬಿದ್ದು ಹೋಗಿದೆ ಎಂದು ಹೇಳಿದರು. ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಶ್ರೀಮಾನ್ ಸಿಂಗ್ ಅವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ಈ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟಿಸ್ ಕಳುಹಿಸಿದ್ದಾರೆ. ಅದಕ್ಕೆ ನಾನು ಜವಾಬು ಕೊಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್ - ರೂರಲ್ ಹೌಸಿಂಗ್ ಬಗ್ಗೆ ಗಮನ ಕೊಡಬೇಕೆಂದು ನಾನು ನಿನ್ನೆ ಹೇಳಿದ್ದೇನೆ. ಹೌಸಿಂಗ್ ಬೋರ್ಡ್ ಯೋಜನೆಯನ್ನು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಣೆ ಮಾಡಬೇಕೆಂದು ನಾನು ಹೇಳಿದ್ದೇನೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿಲ್ಲ.

ಶ್ರೀ ಆರ್. **ಗುಂಡೂರಾವ್** - ಕುಮಾರಸ್ವಾಮಿಯವರು ಹೌಸಿಂಗ್ ಸೊಸೈಟಿ ಮೂಲಕ ಮಾಡಿಕೊಂಡಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್ - ಈ ಕೆಲಸವನ್ನು ಹೌಸಿಂಗ್ ಬೋರ್ಡ್‌ನವರು ತೆಗೆದುಕೊಂಡಿದ್ದಾರೆ.

ಶ್ರೀ ಆರ್. **ಗುಂಡೂರಾವ್** - ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಕೊಟ್ಟ ಸಲಹೆಯನ್ನು ನಾನು ಈಗಾಗಲೇ ವಿಚಾರಮಾಡಿಸಿದೆ. ಬೋರ್ಡ್‌ನವರು ಗ್ರಾಮಾಂತರವನ್ನು ತೆಗೆದುಕೊಳ್ಳಲಿಕ್ಕೆ ಮತ್ತು ಅವರು ನೇರವಾಗಿ ಕೊಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅಲ್ಲಿ ಇಂಜಿನಿಯರ್ ಇಲ್ಲ, ತೊಂದರೆ ಇದೆ. ರೂರಲ್ ಹೌಸಿಂಗ್ ಸ್ಕೀಂನಲ್ಲಿ ಯಾರು ಮನೆ ಕಟ್ಟಿಕೊಳ್ಳಲಿಕ್ಕೆ ಮುಂದೆ ಬರುತ್ತಾರೆ ಅವರಿಗೆ ಸಾಲ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ 4870 ಮನೆಗಳನ್ನು ಕಟ್ಟಿದ್ದೇವೆ. ನಾವು ನಗರದಲ್ಲಿ ಸಾಲ ಕೊಡುತ್ತಾ ಇಲ್ಲ. ನಗರಗಳಲ್ಲಿ ಹೌಸಿಂಗ್ ಬೋರ್ಡ್‌ನವರು, ಎಲ್.ಐ.ಸಿ. ಮುಂತಾದ ಏಜೆನ್ಸಿಯವರು ಇದ್ದಾರೆ. ಹೌಸಿಂಗ್ ಬೋರ್ಡ್‌ನವರು 1973ನೇ ಇಸವಿಯವರೆಗೆ ಸಾಲವನ್ನು ಕೊಡುತ್ತಾ ಇದ್ದರು, ನಂತರ

ನಿಲ್ಲಿಸಿದರು. ಈ ರೀತಿ ಸಾಲ ಕೊಡುವುದರಿಂದ ಪ್ರಯೋಜನವಾಗಲಾರದು, ಬೇರೆ ರೀತಿಯಲ್ಲಿ ಮಾಡಬೇಕು ಎಂದು ಸಂಬಂಧಪಟ್ಟ ಮಂತ್ರಿಗಳು ಯೋಚನೆಮಾಡಿ ನಿಲ್ಲಿಸಿದರು, ಮೇಲ್ಮನೆಯ ಮತ್ತು ಈ ಮನೆಯ ಅನೇಕ ಜನ ಸದಸ್ಯರು ಇದರ ಬಗ್ಗೆ ಯೋಚನೆ ಮಾಡಿ ಪುನಃ ಪ್ರಯತ್ನ ಮಾಡಬೇಕು ಎಂದು ವೈಯಕ್ತಿಕವಾಗಿ ತಿಳಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ, ಸಾಲ ಸೌಲಭ್ಯವನ್ನು ಒದಗಿಸಬೇಕು ಎಂದು ಇದ್ದೇವೆ.

## 1978-79ನೇ ಸಾಲಿನ ಬೇಡಿಕೆ ಮೇಲಿನ ಚರ್ಚೆ

1978ರಲ್ಲಿ ಶ್ರೀ ಗುಂಡೂರಾವ್ ಸಾರಿಗೆ ಮತ್ತು ಪ್ರವಾಸೋದ್ಯಮ ಖಾತೆ ಸಚಿವರಾಗಿದ್ದರು. 10, ಜುಲೈ 1978ರಂದು ಅವರು 1978-79ನೇ ಸಾಲಿನ ತಮ್ಮ ಇಲಾಖೆ ಬೇಡಿಕೆಗಳ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರ ನೀಡಿದರು, ಸದನದ ಅನುಮೋದನೆ ಪಡೆದರು.

**ಶ್ರೀ ಆರ್. ಗುಂಡೂರಾವ್ (ಸಾರಿಗೆ ಹಾಗೂ ಪ್ರವಾಸೋದ್ಯಮ ಶಾಖೆಗಳ ಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ರಸ್ತೆ ಸಾರಿಗೆ ಇಲಾಖೆ, ಮೋಟಾರು ವೆಹಿಕಲ್ಸ್ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಗೆ ಸೇರಿದಂಥ ಬೇಡಿಕೆಗಳ ಬಗ್ಗೆ ಮೊನ್ನೆ ದಿವಸ ಈ ಸದನದಲ್ಲಿ ಅನೇಕ ಸನ್ಮಾನ್ಯ ಸದಸ್ಯರುಗಳು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಈ ಮೂರು ಇಲಾಖೆಗಳು ಸಹ ಪ್ರಧಾನವಾದ ಇಲಾಖೆಗಳು. ಅದರಲ್ಲೂ ಪ್ರತಿ ದಿವಸ ಸುಮಾರು 25-30 ಲಕ್ಷ ಜನರು ಪ್ರಯಾಣ ಮಾಡುವಂತಹ ರಸ್ತೆ ಸಾರಿಗೆ ಇಲಾಖೆ, ಆಗುವಂತಹ ಅಪಘಾತಗಳನ್ನು ನಿಯಂತ್ರಣ ಮಾಡಿ ಸಾರ್ವಜನಿಕರಿಗೆ ಯಾವುದೇ ವಿಧವಾದ ತೊಂದರೆಗಳು ಆಗದ ರೀತಿಯಲ್ಲಿ ಸರಿಪಡಿಸುವಂತಹ ಮೋಟಾರ್ ವೆಹಿಕಲ್ಸ್ ಇಲಾಖೆ ಮತ್ತು ಇಡೀ ಕರ್ನಾಟಕದ ಪ್ರಕೃತಿ ಸೌಂದರ್ಯವನ್ನು ತೋರಿಸುವಂತಹ ಮತ್ತು ದೇಶ ವಿದೇಶಗಳಿಂದ ಜನರನ್ನು ಆಕರ್ಷಿಸಿ ಕರ್ನಾಟಕದ ಹೆಮ್ಮೆಯನ್ನು ಎಲ್ಲಾ ಜನರಿಗೆ ತೋರಿಸುವಂಥಹ ಇಲಾಖೆಯೆಂದರೆ ಪ್ರವಾಸೋದ್ಯಮ ಇಲಾಖೆ. ಈ ಮೂರು ಇಲಾಖೆಗಳ ಬೇಡಿಕೆಯ ಬಗ್ಗೆ ಸಾಕಷ್ಟು ಸದಸ್ಯರು ಚರ್ಚೆ ಮಾಡಿದ್ದಾರೆ. ಮುಖ್ಯವಾಗಿ ಅವರೆಲ್ಲರೂ ಹೆಚ್ಚಾಗಿ ಈ ರಸ್ತೆ ಸಾರಿಗೆ ಇಲಾಖೆ ಬಗ್ಗೆ ಚರ್ಚೆ ಮಾಡಿದ್ದಾರೆ. ನಾನು ಈ ರಸ್ತೆ ಸಾರಿಗೆ ಇಲಾಖೆ ಬಗ್ಗೆ ಉತ್ತರ ಕೊಡುವುದಕ್ಕಿಂತ ಮೊದಲು ಮೋಟಾರ್ ವೆಹಿಕಲ್ಸ್ ಇಲಾಖೆಯ ಮೇಲೆ ಕೆಲವು ವಿಷಯಗಳನ್ನು ಹೇಳಿ ನಂತರ ರಸ್ತೆ ಸಾರಿಗೆ ಬಗ್ಗೆ ಉತ್ತರ ಕೊಡುವುದಕ್ಕೆ ಇಷ್ಟ ಪಡುತ್ತೇನೆ.

ಅಧ್ಯಕ್ಷರೇ, ನಮ್ಮ ಇಲಾಖೆ ಸರ್ಕಾರಕ್ಕೆ ಸುಮಾರು ಇಪ್ಪತ್ತೆಂಟರಿಂದ ಮೂವತ್ತು ಕೋಟಿ ರೂಪಾಯಿಯಷ್ಟು ಆದಾಯ ತರುವಂಥ ಇಲಾಖೆ. ಇವತ್ತು ದೇಶದಲ್ಲಿ, ರಾಜ್ಯದಲ್ಲಿ ಏನು ಅಪಘಾತಗಳಾಗುತ್ತಿವೆ, ಎಂಬುದನ್ನು ತಾವೆಲ್ಲ ಪತ್ರಿಕೆಗಳಲ್ಲಿ ಓದುತ್ತಾ ಇರುತ್ತೀರಿ. ಇದಕ್ಕೆ ಮುಖ್ಯ ಕಾರಣ ಏನು ಎಂದು ಕಂಡು ಹಿಡಿದು ಅದನ್ನು ನಿಯಂತ್ರಣ ಮಾಡುವುದಕ್ಕೆ ಏನು ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಬಗ್ಗೆ ಸರಕಾರ ತೀವ್ರವಾಗಿ ಆಲೋಚಿಸುತ್ತಿದೆ. ಮತ್ತು ಇತ್ತೀಚಿಗೆ ವಾಹನಗಳ ಸಂಖ್ಯೆ ಜಾಸ್ತಿಯಾಗಿ ಆಗುತ್ತಿರುವ ವಾಹನ ಅಪಘಾತಗಳು, ಆಟೋರಿಕ್ಷಾಗಳಿಂದ ಆಗುತ್ತಿರುವ ಅಪಘಾತಗಳು ಇವೆಲ್ಲವನ್ನು ಸರಕಾರ ಬಹಳ ತೀವ್ರವಾಗಿ ಗಮನಿಸಿದೆ. ಅವುಗಳನ್ನು ನಿಯಂತ್ರಣ ಮಾಡಬೇಕೆಂದು ಅದರ ಬಗ್ಗೆ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೂ ಸಹ ತೀರ್ಮಾನ ಮಾಡಿದೆ. ನಮ್ಮ ರಾಜ್ಯದಲ್ಲಿ ಸುಮಾರು 2 ಲಕ್ಷಕ್ಕೂ ಮೇಲ್ಪಟ್ಟು ವಾಹನಗಳಿವೆ. ಅಂದರೆ ಲಾರಿಗಳು, ಬಸ್ಸುಗಳು, ಟ್ರಾಕ್ಟರ್ಸ್,

---

ವಿ.ಸ.ನ. ದಿನಾಂಕ: 10-7-1978

ಕಾರುಗಳು, ಮೋಟಾರು ಸೈಕಲ್ಲುಗಳು, ಸ್ಕೂಟರುಗಳು, ವ್ಯಾನುಗಳು ಎಲ್ಲಾ ಸೇರಿ ಅಷ್ಟು ವಾಹನಗಳಿವೆ. ಬೆಂಗಳೂರು ನಗರದಲ್ಲಿ ಹಾಗು ಜಿಲ್ಲೆಯಲ್ಲಿ ಒಂದು ಲಕ್ಷಕ್ಕೂ ಮೇಲ್ಪಟ್ಟು ವಾಹನ ಸಂಚಾರವಿದೆ. ಇಂಥ ಒಂದು ದೊಡ್ಡ ಇಲಾಖೆಯಲ್ಲಿ ನಾವು ಬಹಳ ಕಠಿಣವಾದ ಕಾರ್ಯಕ್ರಮಗಳನ್ನು ಕೈಗೊಳ್ಳದೇ ಹೋದರೆ ನಿಯಂತ್ರಣ ಮಾಡುವುದು ಬಹಳ ಕಷ್ಟವಾಗುತ್ತದೆ. ನಮ್ಮ ಮೋಟಾರ್ ವೆಹಿಕಲ್ ಆಕ್ಟ್‌ನಲ್ಲಿ ಸಾಕಷ್ಟು ಕಾನೂನನ್ನು ಅಳವಡಿಸಿದರೂ ಅದನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದರಲ್ಲಿ ಸಾಕಷ್ಟು ಸಾಧನೆಯನ್ನು ನಾವು ಮಾಡಿಲ್ಲ ಎಂದು ಈ ಸಮಯದಲ್ಲಿ ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಇದಕ್ಕೆ ನಾನಾ ಕಾರಣಗಳಿವೆ, ಮೊದಲನೆಯದಾಗಿ ಸಾಕಷ್ಟು ಸಿಬ್ಬಂದಿಯಿಲ್ಲ. ಎರಡನೆಯದಾಗಿ ವಾಹನದ ಮಾಲೀಕರು ಇಲಾಖೆ ಜೊತೆಯಲ್ಲಿ ಸಾಕಷ್ಟು ಸಂಬಂಧ ಬೆಳೆಸಿಕೊಂಡಿದ್ದು ಅದನ್ನು ಒಂದು ಸಾರಿ ಪೂರ್ತಿಯಾಗಿ ನಿಲ್ಲಿಸುವುದಕ್ಕೆ ಸಾಧ್ಯವಾಗಿಲ್ಲ. ನಾನು ಈ ಇಲಾಖೆಯ ಮಂತ್ರಿಯಾಗಿ ಬಂದು ಬಹುಶಃ 3 ತಿಂಗಳಾಗಿರಬಹುದು. ಬೇರೆ ಇಲಾಖೆಗಳ ಟೀಕೆ ಟಿಪ್ಪಣಿಗಳೂ ಸಾಮಾನ್ಯವಾಗಿ ಕಡಿಮೆ ಇರುತ್ತಿತ್ತು. ಆದರೆ ಈ ಇಲಾಖೆಯಲ್ಲಿ ಸಾಕಷ್ಟು ಟೀಕೆ ಟಿಪ್ಪಣಿಗಳಿದ್ದರೂ ಅದನ್ನು ನಾವು ಸಹಿಸಿಕೊಳ್ಳಬೇಕಾಗುತ್ತದೆ ಮತ್ತು ಅದನ್ನು ಸರಿಪಡಿಸುವುದಕ್ಕೆ ಕೆಲವು ಉಗ್ರವಾದ ಕ್ರಮಗಳನ್ನು ಸಹ ಕೈಗೊಳ್ಳಬೇಕಾಗುತ್ತದೆ. ಈ ದೆಸೆಯಿಂದ ನಮ್ಮ ಇಲಾಖೆಯಲ್ಲಿ ಕೆಲವು ಕಾನೂನುಗಳ ಮಾರ್ಪಾಡನ್ನು ಮಾಡಿ ಇನ್ನು ಮೇಲೆ ಕಠಿಣವಾದ ಕ್ರಮಗಳನ್ನು ಅನುಸರಿಸುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆ. ಮತ್ತು ಹೆಚ್ಚು ತೀವ್ರಗತಿಯಿಂದ ಕಾನೂನನ್ನು ಪರಿಪಾಲನೆ ಮಾಡುತ್ತೇವೆ ಹಾಗೂ ಜಾರಿ ಮಾಡುತ್ತೇವೆ.

ಮೊದಲನೆಯದಾಗಿ ಯಾವುದೇ ಒಂದು ಬಸ್ಸಿನಲ್ಲಾಗಲೀ ಲಾರಿಯಲ್ಲಾಗಲೀ ಟ್ಯಾಕ್ಸಿಯಲ್ಲಾಗಲೀ ಆಟೋರಿಕ್ಷದಲ್ಲಾಗಲೀ ಯಾವುದೇ ವಾಹನಗಳಲ್ಲಾಗಲೀ ಡ್ರೈವರ್ ಕುಡಿದು ಡ್ರೈವ್ ಮಾಡುವುದು ಕಂಡು ಬಂದಲ್ಲಿ ಆತನ ಲೈಸನ್ಸನ್ನು ಮೂರು ತಿಂಗಳ ಕಾಲ ರದ್ದು ಮಾಡುವಂತಹ ತೀರ್ಮಾನ ಬಂದಿದೆ. ಉದಾಹರಣೆಗೆ ಒಬ್ಬ ಆಟೋರಿಕ್ಷಾ ಚಾಲಕನ ಲೈಸನ್ಸನ್ನು ರದ್ದು ಮಾಡಿದ ಮೇಲೆ ಆ ಚಾಲಕನ ಚಿತ್ರಪಟವನ್ನು ಎಲ್ಲಾ ಪತ್ರಿಕೆಗಳಲ್ಲಿ, ಪೋಲೀಸ್ ಸ್ಟೇಷನ್‌ಗಳಲ್ಲಿ ಹಾಕಿ, ಬೇರೆ ಆಟೋರಿಕ್ಷಾದಲ್ಲಾಗಲಿ ವಾಹನದಲ್ಲಾಗಲೀ ಡ್ರೈವ್ ಮಾಡದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡಿದೆ. 2ನೇ ಬಾರಿ ಆಟೋರಿಕ್ಷಾ ಡ್ರೈವರ್ ಆ ತರಹ ಕುಡಿದು ಡ್ರೈವ್ ಮಾಡಿದ ಪಕ್ಷದಲ್ಲಿ ಈತನ ಲೈಸನ್ಸನ್ನು ರದ್ದು ಮಾಡುವ ಜೊತೆಗೆ ಮಾಲೀಕರಿಗೂ ಆರು ತಿಂಗಳ ಕಾಲ ಲೈಸೆನ್ಸ್ ರದ್ದು ಮಾಡುವುದಕ್ಕೆ ಸರಕಾರ ಯೋಚನೆ ಮಾಡಿದೆ. ಇನ್ನೂ ಆಟೋರಿಕ್ಷಾದ ಚಾಲಕರ ನಡತೆಯ ವಿಚಾರವಾಗಿ ಹೇಳುವುದಾದರೆ, ಏನು ಇವತ್ತು ಪತ್ರಿಕೆಗಳಲ್ಲಿ ಓದುತ್ತಿದ್ದೀರಿ, ದುಡ್ಡನ್ನು ಜಾಸ್ತಿ ಕೇಳುತ್ತಾರೆ, ಮಹಿಳೆಯರ ಮೇಲೆ ಅತ್ಯಾಚಾರ ಮಾಡುತ್ತಾರೆ, ಪೆಟ್ಟಿಗೆಗಳನ್ನು ಇಟ್ಟುಕೊಂಡಿದ್ದರೆ ತೆಗೆದುಕೊಂಡು ಓಡಿಹೋಗುತ್ತಾರೆ, ಈತರಹ ಆಪಾದನೆಗಳನ್ನು ನಿಲ್ಲಿಸುವುದಕ್ಕೆ ಮುಖ್ಯವಾಗಿ ಆಟೋರಿಕ್ಷಾ ಚಾಲಕನ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು

ತರಬೇಕೆಂದು ಸರಕಾರ ಯೋಚನೆ ಮಾಡಿದೆ. ಇನ್ನು ಮೇಲೆ ಯಾವುದೇ ಆಟೋ ರಿಕ್ಷಾ ಮಾಲೀಕನು ಅವನ ಚಾಲಕನ ನಡತೆಗೂ ಜವಾಬ್ದಾರನಾಗಿರಬೇಕು ಎಂದು ಕಾನೂನು ಮಾಡಬೇಕೆಂದು ತೀರ್ಮಾನ ಮಾಡಿದೆ. ಬಹುಶಃ ಇದಕ್ಕೆ ಎಲ್ಲರ ಸಾರ್ವಜನಿಕ ಸಹಕಾರ ಬೇಕು. ಈ ಇಲಾಖೆಯಲ್ಲಿ ಇರುವಷ್ಟು ಸಾರ್ವಜನಿಕರ ಹಸ್ತಕ್ಷೇಪ ಮತ್ತೆ ಯಾವ ಇಲಾಖೆಯಲ್ಲೂ ಇಲ್ಲವೆಂದು ನಾನು ತಿಳಿದಿದ್ದೇನೆ. ಯಾವುದೇ ಶಾಸಕರಾಗಲಿ, ಸಾರ್ವಜನಿಕರಾಗಲಿ ಪ್ರಭಾವವನ್ನು ಬೀರುವುದು ನಿಲ್ಲಬೇಕು. ಈ ಅಪಘಾತಗಳನ್ನು ಮತ್ತು ಅನ್ಯಾಯಗಳನ್ನು ಸರಕಾರ ಮುಂದೆ ಪೂರ್ತಿಯಾಗಿ ನಿಲ್ಲಿಸುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಸಾಕಷ್ಟು ಕಾನೂನುಗಳನ್ನು ಮಾಡಿದರೂ, ಸಾಕಷ್ಟು ಸಿಬ್ಬಂದಿ ನೇಮಕ ಮಾಡಿದರೂ ಸಾರ್ವಜನಿಕರ ಸಹಕಾರ ಮುಖ್ಯವಾಗಿ ಬೇಕಾಗುತ್ತದೆ. ಆ ದೃಷ್ಟಿಯಿಂದ ಈ ಸಭೆಯ ಮೂಲಕ ಎಲ್ಲಾ ಶಾಸಕರನ್ನು, ಸಾರ್ವಜನಿಕರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ ಈ ಬಗ್ಗೆ ಸರಕಾರ ಕಠಿಣವಾದ ಕ್ರಮಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಸರಕಾರಕ್ಕೆ ಪೂರ್ತಿಯಾಗಿ ಸಹಕಾರ ನೀಡಬೇಕೆಂದು ಇಚ್ಛೆ ಪಡುತ್ತೇನೆ. ಮತ್ತೆ ನಾಲ್ಕೈದು ವರ್ಷಗಳಿಂದ 200 ಮೋಟಾರ್ ವೆಹಿಕಲ್ಸ್ ಹುದ್ದೆ ಖಾಲಿಯಿದ್ದು ನಾನಾ ಕಾರಣಗಳಿಂದ ಭರ್ತಿ ಮಾಡುವುದಕ್ಕೆ ಆಗಲಿಲ್ಲ. ಆದ್ದರಿಂದ ಈಗಾಗಲೇ ಈ ದೆಸೆಯಲ್ಲಿ ಕ್ರಮಕೈಗೊಂಡಿದ್ದೇವೆ. ಬಹುಶಃ ಇದೇ ತಿಂಗಳು 15 ರಿಂದ ಅಭ್ಯರ್ಥಿಗಳ ಆಯ್ಕೆ ಆಗುತ್ತದೆ. ಆಗಸ್ಟ್ 1ನೇ ತಾರೀಖಿನಿಂದ ಇನ್ನೂರು ಜನ ಮೋಟಾರ್ ಇನ್ಸ್‌ಪೆಕ್ಟರುಗಳನ್ನು ನಮ್ಮ ರಾಜ್ಯದಲ್ಲಿ ಹೊಸದಾಗಿ ನೇಮಿಸುವುದರ ಜೊತೆಗೆ ಅವರಿಗೆ ಸಾಕಷ್ಟು ಬೇಕಾದಂತಹ ಸೌಕರ್ಯಗಳನ್ನು ಒದಗಿಸಿಕೊಡಬೇಕಾಗುತ್ತದೆ. ಯಾವುದೇ ಒಂದು ಕೆಲಸ ಸಮರ್ಪಕವಾಗಿ ಆಗಬೇಕಾದರೆ ಅವರಿಗೆ ತಕ್ಕಂಥ ಸೌಕರ್ಯ ಒದಗಿಸಿಕೊಡುವುದು ನಮ್ಮ ಕರ್ತವ್ಯ. ಆದುದರಿಂದ ಎಲ್ಲಾ ಮೋಟಾರ್ ವೆಹಿಕಲ್ಸ್ ಇನ್ಸ್‌ಪೆಕ್ಟರುಗಳಿಗೆ ಮೋಟಾರ್ ಸೈಕಲ್ ಒದಗಿಸಿಕೊಡುವುದಲ್ಲದೆ ಜೀಪುಗಳನ್ನು ಸಹ ಆ ಇಲಾಖೆ ಒದಗಿಸಿಕೊಟ್ಟು 24 ಘಂಟೆಗಳ ಕಾಲವೂ ನ್ಯಾಷನಲ್ ಹೈವೆಗಳಲ್ಲಿ ಅಂದರೆ ಮುಂಬಾಯಿ-ಬೆಂಗಳೂರು, ಮೈಸೂರು-ಬೆಂಗಳೂರು, ಮದ್ರಾಸ್-ಬೆಂಗಳೂರು, ಹೀಗೆ ಎಲ್ಲಾ ಮಾರ್ಗಗಳಲ್ಲಿ ವಿಶೇಷ ರೀತಿಯಲ್ಲಿ ತನಿಖೆ ಕ್ರಮಗಳನ್ನು ಅನುಸರಿಸಿ ಅಪಘಾತಗಳನ್ನು ನಿಲ್ಲಿಸುವುದಕ್ಕೆ ಕ್ರಮ ಕೈಗೊಳ್ಳಲು ತೀರ್ಮಾನಿಸಿರುವುದರಿಂದ ನಮಗೆ ಹೆಚ್ಚಿನ ಸಹಾಯಕವಾಗುತ್ತದೆಂದು ಭಾವಿಸಿದ್ದೇನೆ. ಹೀಗೆ ನಾವು ಅಪಘಾತಗಳನ್ನು ಕಡಿಮೆ ಮಾಡುವುದಕ್ಕೆ ಅನೇಕ ಕ್ರಮಗಳನ್ನು ಕೈಗೊಳ್ಳುತ್ತೇವೆ. ಒಂದು ಬಸ್ಸಿನಲ್ಲಿ ಚಾಲಕನು ಕುಡಿದು ಡ್ರೈವ್ ಮಾಡುತ್ತಾನೆ ಎಂದು ಗೊತ್ತಾದರೂ ಸಹ ಅವನು ಕುಡಿದಿದ್ದಾನೆ ಎಂದು ತಿಳಿದುಕೊಂಡು ಕಾನೂನು ಪ್ರಕಾರ ಅವನನ್ನು ಶಿಕ್ಷಿಸುವುದಕ್ಕೆ ಸಾಧ್ಯವೇ ಇಲ್ಲದಂಥ ಪರಿಸ್ಥಿತಿ ಇಲ್ಲಿಯವರೆಗೆ ಇತ್ತು. ಅದಕ್ಕಾಗಿ ಈಗ ಹೊಸದಾದ ಒಂದು ಸಾಧನೆಯನ್ನು ಕಂಡು ಹಿಡಿದಿದ್ದಾರೆ, ಅದೇನೆಂದರೆ, ಅವರು ಶ್ವಾಸವನ್ನು ಬಿಟ್ಟ ತಕ್ಷಣಾ ಈ ಯಂತ್ರ ಏನಿದೆ, ಅದು ಪರೀಕ್ಷೆಗೆ ಒಳಪಡಿಸಿ ಅವನು ಕುಡಿದಿದ್ದಾನೋ ಇಲ್ಲವೋ ಎಂಬುದನ್ನು ತಿಳಿಸುವುದರಿಂದ ಅವನ ಮೇಲೆ ಕಠಿಣವಾದ ಕ್ರಮವನ್ನು ಕೈಗೊಳ್ಳುವುದಕ್ಕೆ ಅನುಕೂಲವಾಗಿದೆ.

ಈ ದಿಸೆಯಲ್ಲೂ ನಾವು ಯೋಚನೆ ಮಾಡಿದ್ದೇವೆ. ಅಂದರೆ ಎಲ್ಲಾ ಮೋಟಾರ್ ವೆಹಿಕಲ್ಸ್ ಡಿಪಾರ್ಟ್ಮೆಂಟುಗಳಲ್ಲಿ ಕೆಲವು ಜನ ತರಬೇತಾದ ಸ್ಪೇರ್ ಡ್ರೈವರ್ಸ‌ನ್ನು ಇಟ್ಟುಕೊಂಡು ರಾತ್ರಿ ಹೊತ್ತು ಕುಡಿದು ಬಸ್ ಓಡಿಸಿದ್ದರೆ ಆ ಡ್ರೈವರ್‌ನನ್ನು ಇಳಿಸಿ ಮತ್ತೊಬ್ಬ ಡ್ರೈವರನ್ನು ಕೊಟ್ಟು ಬಸ್ಸನ್ನು ಮುಂದಕ್ಕೆ ಕಳಿಸುತ್ತಾರೆ, ಆ ಡ್ರೈವರ್ ಎಲ್ಲಿಯೂ ಕೆಲಸ ಮಾಡುವುದಕ್ಕೆ ಅವಕಾಶ ಕೊಡದೇ ಇರುವ ರೀತಿ ಕ್ರಮ ತೆಗೆದುಕೊಂಡರೆ ಮಾತ್ರ ಅಪಘಾತಗಳನ್ನು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆ. ಈ ವಿಷಯದಲ್ಲಿ ನಾನು ಸಾಕಷ್ಟು ಚರ್ಚೆಮಾಡಿದ್ದೇನೆ. ಅಪಘಾತಗಳನ್ನು ನಿಲ್ಲಿಸಬೇಕಾದರೆ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಯಾವುದೇ ಜಾತಿಯ ಪ್ರಭಾವ, ಮತದ ಪ್ರಭಾವ, ಭಾಷೆಯ ಪ್ರಭಾವ, ರಾಜಕೀಯ ಪ್ರಭಾವವನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಏನೆಂದರೆ ಇದು ಮನುಷ್ಯನ ಜೀವದ ಪ್ರಶ್ನೆ. ಒಬ್ಬ ಡ್ರೈವರ್ ಒಂದು ಘಳಿಗೆ ಕಣ್ಣು ಮುಚ್ಚಿದರೆ, ಅಪಘಾತವಾಗಿ ಪ್ರಾಣಗಳು ಹೋಗುತ್ತವೆ. ಇದು ಮುಖ್ಯವಾಗಿ ಪ್ರಾಣದ ಪ್ರಶ್ನೆಯಾಗಿರುವುದರಿಂದ ಬೇರೆ ಎಲ್ಲ ಇಲಾಖೆಗಳಿಗಿಂತ ಈ ಇಲಾಖೆಗಳನ್ನು ವಿಶೇಷವಾಗಿ ಗಮನಿಸಿ, ತಪ್ಪಿತಸ್ಥರನ್ನು ಶಿಕ್ಷಿಸುವಾಗ ಯಾವುದೇ ಪ್ರಭಾವವನ್ನು ನಮ್ಮ ಪಕ್ಷದ ಸದಸ್ಯರಾಗಲೀ ಅಥವಾ ವಿರೋಧ ಪಕ್ಷದ ಸದಸ್ಯರಾಗಲೀ, ಇನ್ನ್ಯಾವುದೇ ಕಾರಣಗಳಿಗೋಸ್ಕರವಾಗಿ ಮಾಡದೇ ಹೋದರೆ, ಬಹುಶಃ ನಮ್ಮ ಕರ್ನಾಟಕದಲ್ಲಿ ಈ ಒಂದು ಇಲಾಖೆಯನ್ನು ನಮ್ಮ ರಾಷ್ಟ್ರದಲ್ಲೇ ಉತ್ತಮವಾದ ಇಲಾಖೆಯನ್ನಾಗಿ ಮಾಡಿ, ಅಪಘಾತಗಳನ್ನು ಕಡಿಮೆ ಮಾಡಲಿಕ್ಕೆ ಸಾಧ್ಯವಾಗುತ್ತದೆ.

ಈ ಕ್ರಮಗಳನ್ನು ತೆಗೆದುಕೊಳ್ಳಬೇಕಾದರೆ ಸಾಕಷ್ಟು ಕಷ್ಟ ಇದೆ. ಅವರು ಪ್ರಭಾವಯುತರಾಗಿರುತ್ತಾರೆ. ಈ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ ಅಪಘಾತ ಜಾಸ್ತಿಯಾಗುತ್ತದೆ. ಆದುದರಿಂದ ಅಪಘಾತಗಳನ್ನು ತಪ್ಪಿಸಲು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಲು ತಾವೆಲ್ಲರೂ ಸಹಕಾರ ಕೊಡಬೇಕು. ಇದರಲ್ಲಿ ಯಾವುದೇ ಜಾತಿಯ, ರಾಜಕೀಯ ಪ್ರಭಾವವನ್ನು ತರದೆ, ಇದು ಸಣ್ಣ ಮಕ್ಕಳ ಜೀವದ ಪ್ರಶ್ನೆ, ಹೆಂಡತಿಯರ ಜೀವದ ಪ್ರಶ್ನೆ, ಗಂಡನ ಜೀವದ ಪ್ರಶ್ನೆ, ಮುದುಕರ ಜೀವದ ಪ್ರಶ್ನೆ, ಆದುದರಿಂದ ತಾವೆಲ್ಲರೂ ಸಹಕಾರ ನೀಡಬೇಕು. ಈ ಇಲಾಖೆಯು ನಿಮ್ಮೆಲ್ಲರ ಸಹಕಾರದಿಂದ ಅಪಘಾತಗಳನ್ನು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆ. ನಮ್ಮ ಮಾನ್ಯ ಸದಸ್ಯರು ಪೂರ್ತಿಯಾಗಿ ಈ ಇಲಾಖೆಯವರ ಜೊತೆ ಸೇರಿ ಸಹಕಾರ ನೀಡಿದರೆ ಇದನ್ನು ಸರಿಪಡಿಸಲಿಕ್ಕೆ ಬಹಳವಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ಪ್ರಕಟಣೆ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಆಟೋರಿಕ್ಷಾ ಡ್ರೈವರ್‌ಗಳಲ್ಲಿ ಸರಿಯಾದ ಡ್ರೈವಿಂಗ್ ಲೈಸೆನ್ಸ್ ಕೊಡದೇ ತೊಂದರೆಯಾಗಿದೆ, ಮೋಟಾರ್ ಡ್ರೈವಿಂಗ್ ಸ್ಕೂಲಿನವರಿಗೂ ಆರ್.ಟಿ.ಓ. ಅಧಿಕಾರಿಗಳಿಗೂ ಹೊಂದಾಣಿಕೆ ಬಂದು 3 ದಿವಸಗಳಲ್ಲಿ ಲೈಸೆನ್ಸ್ ಕೊಡುತ್ತಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಇದನ್ನು ತಪ್ಪಿಸಲಿಕ್ಕೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಡ್ರೈವಿಂಗ್ ಲೈಸೆನ್ಸ್ ಕೊಟ್ಟಿರುವುದು ಸರಿಯಾಗಿದೆಯೋ ಇಲ್ಲವೋ ಎಂದು ಪರೀಕ್ಷೆಗೆ

ಒಳಪಡಿಸಿ ಸರಿಯಾಗಿ ಡ್ರೈವ್ ಮಾಡದೆ ಹೋದರೆ ಸರಿಯಾಗಿ ಪ್ರದರ್ಶನ ನೀಡದೇ ಹೋದರೆ, ಪರ್‌ಫಾರ್ಮೆನ್ಸ್ ಚೆನ್ನಾಗಿ ಇಲ್ಲದೇ ಹೋದರೆ, ಅದೇ ಸಮಯದಲ್ಲಿ ಡ್ರೈವಿಂಗ್ ಲೈಸೆನ್ಸ್ ಕ್ಯಾನ್ಸಲ್ ಮಾಡುವುದರ ಜೊತೆಗೆ ಯಾವ ಅಧಿಕಾರಿ ಆತನಿಗೆ ಲೈಸೆನ್ಸ್ ಕೊಡಬೇಕು ಎಂದು ರೆಕಮೆಂಡ್ ಮಾಡಿದ್ದಾನೋ "he will also be dealt with seriously and if he repeats once again, Government will not hesitate even to dismiss him from service ಇದನ್ನೂ ಸಹ ನಾವು ತಿಳಿದುಕೊಳ್ಳಬೇಕು. ಮೊದಲು ಡ್ರೈವಿಂಗ್ ಸ್ಕೂಲಿನವರು ಡ್ರೈವರ್ ವಿಚಾರದಲ್ಲಿ ಲೈಸೆನ್ಸ್ ಕೊಡಲಿಕ್ಕೆ ಪ್ರಯತ್ನ ಪಟ್ಟಿರುವುದು ಎನ್ನುವುದು ಸರ್ಕಾರದ ಗಮನಕ್ಕೆ ಬಂದರೆ ಅಂತಹ ಮೋಟಾರ್ ಡ್ರೈವಿಂಗ್ ಸ್ಕೂಲಿನವರ ಲೈಸೆನ್ಸ್ ನ್ನು ಸಸ್ಪೆಂಡ್ ಮಾಡಿ ಒಂದೆರೆಡು ಸಾರಿ ವಾರ್ನಿಂಗ್ ಕೊಟ್ಟು, ಪುನಃ ಅದೇ ರೀತಿ ಮಾಡಿದರೆ ಆ ಲೈಸೆನ್ಸ್ ಕ್ಯಾನ್ಸಲ್ ಮಾಡುವಂಥ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ. ಇದರಲ್ಲಿ ಯಾವುದೇ ಪ್ರಭಾವಕ್ಕೆ ಒಳಗಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಡುತ್ತೇನೆ.

ಇನ್ನು ಮಾನ್ಯ ಸದಸ್ಯರನೇಕರು ಆರ್.ಟಿ.ಒ. ಆಫೀಸಿನ ಬಗ್ಗೆ ಹೇಳಿದ್ದಾರೆ. ಇದು ನಿಜವಾದ ಸಂಗತಿ. 29-30 ಕೋಟಿ ರೂಪಾಯಿಗಳ ಆದಾಯವಿರುವಂಥ ಆಫೀಸಿಗೆ ಸರಿಯಾದ ಒಂದು ರೀತಿಯಿಲ್ಲ, ಬೆಂಗಳೂರಿನ ಅನೇಕ ಸದಸ್ಯರು ಆರ್.ಟಿ.ಒ. ಆಫೀಸಿನ ಬಗ್ಗೆ ಹೇಳಿದ್ದಾರೆ. ಇದು ಯಾವ ರೀತಿ ಇದೆ ಎನ್ನುವುದನ್ನು ನಾನು ಖಂಡಿತ ಒಪ್ಪಿಕೊಳ್ಳುತ್ತೇನೆ. ಬೆಂಗಳೂರಿನ ಆರ್.ಟಿ.ಒ. ಆಫೀಸ್ ಬೇರೆ ಯಾವುದೇ ಕಛೇರಿಗೆ ಇರುವಂಥ ಯೋಗ್ಯತೆಯಿಲ್ಲ ಮತ್ತು ಸರಿಯಾದ ಸ್ಥಿತಿಯಲ್ಲಿ ಇಲ್ಲ. ಇದನ್ನು ಉತ್ತಮವಾಗಿ ಮಾಡಬೇಕಾಗಿದೆ. ಬೆಂಗಳೂರಿನಲ್ಲಿ ಒಂದು ಮಲ್ಟಿಸ್ಟೋರ್ ಬಿಲ್ಡಿಂಗ್ ಕಟ್ಟಿ ಅದರಲ್ಲಿ ಆರ್.ಟಿ.ಒ. ಆಫೀಸಿನ ಎಲ್ಲಾ ಭಾಗಗಳನ್ನು ಅಳವಡಿಸಿ ಜನರಿಗೆ ಅನುಕೂಲವಾಗುವಂತೆ ಮಾಡಬೇಕಾಗಿದೆ. ಈ ಒಂದು ಕಚೇರಿಯನ್ನು ನಿರ್ಮಿಸಲಿಕ್ಕೆ ಸರ್ಕಾರ ತೀರ್ಮಾನ ಮಾಡಿದೆ. ಎಂದು ಈ ಸದನದಲ್ಲಿ ಆಶ್ವಾಸನೆ ಕೊಡಲಿಕ್ಕೆ ಇಷ್ಟಪಡುತ್ತೇನೆ., ಜೊತೆಗೆ ಸಬ್ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸನ್ನು ಈಗಾಗಲೇ ತೆಗೆದಿದ್ದೇವೆ. ಅದರಲ್ಲಿ ಹೆಚ್ಚು ಹೆಚ್ಚು ಕೆಲಸವಾಗಿ ಪರಿಣಾಮಕಾರಿಯಾಗಿ ಕಂಡರೆ ಬೇರೆ ವಿಭಾಗಗಳಲ್ಲಿ ಉಪ-ವಿಭಾಗದ ಕಛೇರಿಗಳನ್ನು ತೆಗೆದು ಜನರಿಗೆ ಯಾವ ತೊಂದರೆಯಾಗದ ರೀತಿ ಸರಿಪಡಿಸುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಇನ್ನು ಲೈಸೆನ್ಸ್ ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟವಿದೆ., ಇಲಾಖೆಗಳಿಂದ ಸಾಕಷ್ಟು ಕಷ್ಟವಾಗುತ್ತಿದೆ ಎನ್ನತಕ್ಕಂಥ ದೂರು ಬರುತ್ತಿದೆ. ಇದನ್ನು ತಪ್ಪಿಸಲಿಕ್ಕೋಸ್ಕರ ಕೆಲವು ಕಾನೂನುಗಳನ್ನು ಮಾಡಿರುತ್ತೇವೆ. ಅದರ ಪ್ರಕಾರ ಇಷ್ಟೇ ದಿವಸದ ಒಳಗೆ ಲರ್ನಿಂಗ್ ಲೈಸೆನ್ಸ್ ಕೊಡಬೇಕು, ಇಲ್ಲವಾದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು. ಈ ಕಾನೂನನ್ನು ಈಗ ಮಾಡಿದ್ದೇವೆ. ಸಾರ್ವಜನಿಕರು ಯಾರೇ ಆಗಲೀ ಆರ್.ಟಿ.ಒ. ಆಫೀಸಿನಲ್ಲಾಗಲೀ ಅಥವಾ ಸಂಬಂಧಪಟ್ಟ ಇಲಾಖೆಯಲ್ಲಾಗಲಿ

ತೊಂದರೆಯಾಗಿದ್ದ ಪಕ್ಷದಲ್ಲಿ ಅದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅಂತಹವರ ಬಗ್ಗೆ ತೀವ್ರವಾಗಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಡುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಟ್ಯಾಕ್ಸ್ ಕಟ್ಟಬೇಕಾದರೆ ಆರ್.ಟಿ.ಒ. ಆಫೀಸಿನಲ್ಲಿ ತೊಂದರೆಯಾಗುತ್ತದೆ ಎಂದು ತಿಳಿದು, ಪೋಸ್ಟಾಫೀಸಿನ ಮೂಲಕ ಕಟ್ಟುವುದಕ್ಕೆ ಏರ್ಪಾಡು ಮಾಡಿರುತ್ತೇವೆ. ಇದು ಈಗಾಗಲೇ 2 ತಿಂಗಳಿಂದ ಕಾರ್ಯಾಚರಣೆಯಲ್ಲಿ ಬಂದಿದೆ. ಬೆಂಗಳೂರು, ಮೈಸೂರು ಹುಬ್ಬಳ್ಳಿ-ಧಾರವಾಡ, ಗುಲ್ಬರ್ಗ, ಬೆಳಗಾಂ ಮಂಗಳೂರು ಮುಂತಾದ ಕಡೆ ಎಲ್ಲೆಲ್ಲಿ ಹೆಚ್ಚಿನ ವ್ಯವಹಾರಗಳಿವೆಯೋ ಅಂತಹ ಸ್ಥಳಗಳಲ್ಲಿ ಈ ರೀತಿಯ ವ್ಯವಸ್ಥೆ ಮಾಡಲಾಗಿದೆ. ಯಾವುದೇ ಪೋಸ್ಟಾಫಿಸಿನಲ್ಲಿ ಅಂತ ಹಣ ಕಟ್ಟಿದರೆ ಆ ಪೋಸ್ಟಾಫೀಸಿನ ಮೂಲಕವೇ ಆತನಿಗೆ ಬೇಕಾಗಿರುವಂಥ ಎಲ್ಲಾ ಸರ್ಟಿಫಿಕೇಟ್‌ಗಳ ದಾಖಲೆಗಳು ದೊರಕುವಂತೆ ಈಗಾಗಲೇ ಏರ್ಪಾಡು ಮಾಡಿರುತ್ತೇವೆ. ಇದು ಇನ್ನೂ ಸಾಕಷ್ಟು ಪ್ರಚಾರವಾಗಿಲ್ಲ. ಸ್ವಲ್ಪ ಸಮಯ ತೆಗೆದುಕೊಂಡರೆ ಸಾಕಷ್ಟು ಪ್ರಚಾರವಾಗಿ ಜನರು ಇದರ ಪ್ರಯೋಜನ ಪಡೆಯುತ್ತಾರೆ ಎನ್ನುವ ವಿಶ್ವಾಸ ನನಗೆ ಇದೆ.

ಅನೇಕ ಮಾನ್ಯ ಸದಸ್ಯರು ಮುನಿಸಿಪಾಲಿಟಿಗಳಿಗೆ ಸ್ವಲ್ಪ ಹೆಚ್ಚು ಹಣವನ್ನು ಕೊಡಬೇಕು, 15-20 ವರ್ಷಗಳ ಹಿಂದೆ ಫಿಕ್ಸ್ ಮಾಡಿದಂಥ ಕಡಿಮೆ ಹಣವನ್ನು ಕೊಡುತ್ತಿದ್ದಾರೆ, ಇದನ್ನು ಜಾಸ್ತಿ ಮಾಡಬೇಕು ಎಂದು ತಿಳಿಸಿದ್ದಾರೆ. ಇದು ನಿಜವಾಗಿಯು ಒಳ್ಳೆಯ ಸಲಹೆ. ಇದು 15-20 ವರ್ಷಗಳ ಹಿಂದೆ ಮಾಡಿದಂಥ ನಿಯಮ. ಆ ನಿಯಮವನ್ನು ಬದಲಾವಣೆ ಮಾಡಬೇಕಾದರೆ ನಮ್ಮ ಇಲಾಖೆಯ ಉತ್ಪತ್ತಿಯಲ್ಲಿ ಸುಮಾರು 10 ಪರ್ಸೆಂಟ್ ಉತ್ಪತ್ತಿಯನ್ನು ಎಲ್ಲಾ ಪುರಸಭೆಗಳಿಗೆ ಕೊಡಲಿಕ್ಕೆ ನಮ್ಮ ಇಲಾಖೆಯ ವಿರೋಧವಿಲ್ಲ. ಈ ಕಾನೂನನ್ನು ತಿದ್ದುಪಡಿ ಮಾಡಿ ಶೀಘ್ರವಾಗಿ ಎಲ್ಲಾ ಪುರಸಭೆಗಳಿಗೂ ಹಣ ಸಿಕ್ಕುವ ರೀತಿಯಲ್ಲಿ ಸರ್ಕಾರ ಯೋಚನೆ ಮಾಡಿದೆ. ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಮಾನ್ಯ ಸದಸ್ಯರು ಇನ್ನೇನಾದರೂ ಸಲಹೆ ಕೊಟ್ಟಿದ್ದರೆ ಅವುಗಳನ್ನು ಕಾರ್ಯರೂಪಕ್ಕೆ ತರಲಿಕ್ಕೆ ಖಂಡಿತ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಈ ಸಮಯದಲ್ಲಿ ಹೇಳಿ, ಈ ಇಲಾಖೆಯ ಬೇಡಿಕೆ ಏನಿದೆ, ಅದಕ್ಕೆ ಸಂಪೂರ್ಣವಾಗಿ ತಾವೆಲ್ಲರೂ ಬೆಂಬಲ ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಬಹಳ ಮುಖ್ಯವಾದುದು ಪ್ರವಾಸೋದ್ಯಮ ಇಲಾಖೆ ಈ ಪ್ರವಾಸೋದ್ಯಮ ಇಲಾಖೆ ಎಷ್ಟು ತೀವ್ರಗತಿಯಲ್ಲಿ ಬೆಳೆಯಬೇಕೋ ಅಷ್ಟು ತೀವ್ರಗತಿಯಲ್ಲಿ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಇದು ಕೇಂದ್ರ ಮತ್ತು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ.

ಕೇಂದ್ರ ಸರ್ಕಾರ ಸಾಕಷ್ಟು ಹಣ ಸಹಾಯ ಮಾಡಲು ಮುಂದೆ ಬಂದರೆ, ರಾಜ್ಯ ಸರ್ಕಾರವು ಒಂದು ಇಲಾಖೆಗೆ ಎಷ್ಟು ಹಣವನ್ನು ಕೊಡಬೇಕೋ ಅಷ್ಟು ಹಣವನ್ನು

ಕೊಡುವುದರಲ್ಲಿ ಹಿಂದೆ ಬೀಳುವುದಿಲ್ಲವೆಂದು ಹೇಳುತ್ತಾ, ಈ ಇಲಾಖೆಯು ಎಷ್ಟು ಪ್ರಗತಿಯನ್ನು ಸಾಧಿಸಬೇಕೋ ಅಷ್ಟು ಪ್ರಗತಿಯನ್ನು ಸಾಧಿಸಿ ದೇಶ ವಿದೇಶಗಳಿಂದ ಬರತಕ್ಕಂಥ ಪ್ರವಾಸಿಗರನ್ನು ಆಕರ್ಷಿಸಿ, ಕರ್ನಾಟಕದ ವೈಭವ ಏನು ಇದೆ ಅದನ್ನು ಎಷ್ಟರ ಮಟ್ಟಿಗೆ ಪ್ರಚಾರ ಮಾಡಬೇಕೋ ಅಷ್ಟರ ಮಟ್ಟಿಗೆ ಪ್ರಚಾರ ಮಾಡಲು ಎಲ್ಲ ವಿಧವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಕರ್ನಾಟಕ ವೈಭವ ಎಷ್ಟರ ಮಟ್ಟಿಗೆ ಇರುತ್ತದೆ ಎಂಬುದರ ಬಗ್ಗೆ ದೇಶವಿದೇಶಗಳ ಭಾಷೆಗಳಲ್ಲಿ ಮುದ್ರಿಸಿ, ಕರ್ನಾಟಕದಲ್ಲಿ ಕಿತ್ತೂರು ಚೆನ್ನಮ್ಮ, ಬೇಲೂರು, ಹಳೇಬೀಡು ಶಿಲ್ಪಕಲೆ, ಕೆ.ಆರ್.ಎಸ್. ಇವು ಏನು ಸ್ವಲ್ಪವೇ ಜನರಿಗೆ ತಿಳಿದಿರುತ್ತದೆ, ಇದು ಎಲ್ಲರಿಗೂ ತಿಳಿಯುವಂತೆ ಮತ್ತು ಆಕರ್ಷಣೀಯವಾಗುವಂತೆ ಮಾಡಲು ಸಾಕಷ್ಟು ಪ್ರಾತಿನಿಧ್ಯವನ್ನು ಒದಗಿಸಿಕೊಡಬೇಕೆಂದು ಇರುತ್ತೇವೆ. ಭಾರತವೆಂದರೆ ಉತ್ತರ ಭಾರತದಲ್ಲಿ ಅನೇಕ ವರ್ಷಗಳಿಂದಲೂ ಕಾಶ್ಮೀರ, ಸಿಕ್ಕಿಂ, ರಾಜಸ್ಥಾನ ಮುಂತಾದ ಪ್ರದೇಶಗಳು ಬಹಳ ಪ್ರಸಿದ್ಧವಾಗಿದ್ದವು. ದಕ್ಷಿಣದಲ್ಲಿ ಮದ್ರಾಸ್ ಒಂದನ್ನು ಬಿಟ್ಟರೆ ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಇತಿಹಾಸವಿದ್ದರೂ ವಿದೇಶಗಳಿಂದ ಬರತಕ್ಕಂತ ಅನೇಕ ಪ್ರವಾಸಿಗರಿಗೆ ಇದು ತಿಳಿದಿರಲಿಲ್ಲ. ಇದರಲ್ಲಿ ಕೇಂದ್ರ ಸರ್ಕಾರ, ತಮ್ಮ ರಾಜ್ಯ ಸರ್ಕಾರದ್ದು ತಪ್ಪಿಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಇಬ್ಬರೂ ಸೇರಿ ಎಷ್ಟರಮಟ್ಟಿಗೆ ಪ್ರಚಾರ ಮಾಡಬೇಕಿತ್ತೋ ಅಷ್ಟರಮಟ್ಟಿನ ಪ್ರಚಾರ ಮಾಡಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ತಮಿಳುನಾಡಿನಿಂದ, ಕರ್ನಾಟಕದಿಂದ, ಆಂಧ್ರದಿಂದ, ಕೇರಳದಿಂದ, ಬಾಂಬೆಯಿಂದ, ಡೆಲ್ಲಿಯಿಂದ ದೇಶದ ಯಾವ ಭಾಗದಿಂದ ಪರದೇಶಗಳಿಗೆ ಹೋದರೂ, ದಕ್ಷಿಣದಿಂದ ಬಂದಿರುತ್ತೇವೆಂದು ಹೇಳಿದರೆ ಮದ್ರಾಸಿನಿಂದ ಬಂದವರೆಂದು ಹೇಳುತ್ತಿದ್ದರೆ ಹೊರತು ಮೈಸೂರಿನಿಂದ ಬಂದವರು ಎಂದು ಕೇಳುವ ಸಂಪ್ರದಾಯ ಇರಲಿಲ್ಲ. ಇದು ಯಾರದು ತಪ್ಪು ಯಾರದು ಸರಿ ಎಂದು ಹೇಳುವುದಕ್ಕೆ ಬರುವುದಿಲ್ಲ. ನಮ್ಮ ಜನರು ಬೇರೆ ಕಡೆ ಹೋಗಿ ನೆಲಸಲು ಒಪ್ಪಿಕೊಳ್ಳುತ್ತಿರಲಿಲ್ಲ. ಬೆಂಗಳೂರು ಹವಾಮಾನದಲ್ಲಿರತಕ್ಕಂಥವರು ಪಕ್ಕದಲ್ಲಿ ಇರತಕ್ಕಂತಹ ತುಮಕೂರು ಹವಾಮಾನಕ್ಕೆ ಹೊಂದಿಕೊಳ್ಳಲು ಇಷ್ಟ ಪಡುವುದಿಲ್ಲ. ಖಾಯಿಲೆ ಬರುತ್ತದೆಂದು ನಮ್ಮ ಜನ ಹೇಳುತ್ತಾರೆ. ಅದೇ ತಮಿಳುನಾಡು ಜನರನ್ನು ತೆಗೆದುಕೊಂಡರೆ ಆ ಜನ ಅಷ್ಟು ಮುಂದುವರೆಯುವುದಕ್ಕೆ ಏನು ಕಾರಣವೆಂದರೆ ಅವರು ಯಾವ ಸ್ಥಳದಲ್ಲಿಯಾದರೂ ನೆಲಸಬಲ್ಲರು. ಸಿಲೋನ್, ಮಲೇಶಿಯಾದಲ್ಲಿ ಹೋಗಿ ನೆಲೆಸಿದ್ದಾರೆ. ಆ ದೇಶಗಳಲ್ಲಿ ಹೋಗಿ ನೆಲೆಸಿ ತಮ್ಮ ನಾಡಿನ ಕಲೆ, ಸಂಸ್ಕೃತಿಯನ್ನು ಪ್ರಚಾರ ಮಾಡಿರುತ್ತಾರೆಂದರೆ ಆಶ್ಚರ್ಯಪಡಬಹುದು. ಸರ್ಕಾರದ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸಬೇಕಾದರೆ ವಿದೇಶದಿಂದ ಬಂದಂಥ ಪ್ರವಾಸಿಗರಿಗೆ ಉಳಿದುಕೊಳ್ಳಲು ಸಾಕಷ್ಟು ಸೌಲಭ್ಯಗಳು ಇರಬೇಕು. ಪ್ರಯಾಣ ಮಾಡಲಿಕ್ಕೆ ಬಸ್ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಇದೆಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ರಾಜ್ಯದ ಒಂದು ಉತ್ಪತ್ತಿಗೆ ಅವಕಾಶವಾಗುತ್ತದೆ. ನಮ್ಮ ರಾಜ್ಯವು ಆರ್ಥಿಕ ಲಾಭವನ್ನು ಗಳಿಸುವುದಕ್ಕೂ ಸಾಧ್ಯವಾಗುತ್ತದೆ. ಅಷ್ಟೇ ಅಲ್ಲದೆ

ರಾಜ್ಯದಲ್ಲಿ ಹೋಟೆಲ್‌ಗಳು ಬೆಳೆಯವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಅನೇಕ ಜನರಿಗೆ ಉದ್ಯೋಗವು ದೊರಕಿ ನಿರುದ್ಯೋಗದ ಸಮಸ್ಯೆಯನ್ನೂ ಸ್ವಲ್ಪಮಟ್ಟಿಗೆ ನಿವಾರಿಸಿದಂತಾಗುತ್ತದೆ. ಸರ್ಕಾರದವರು ಉತ್ಪಾದನೆ ಗಳಿಸಬೇಕಾದರೆ ಎಲ್ಲ ರಂಗದಲ್ಲಿಯೂ ಬಂಡವಾಳವನ್ನು ಹೂಡಬೇಕಾಗಿರುತ್ತದೆ. ಆದರೆ ಇದಕ್ಕೆ ಅಷ್ಟು ಆರಂಭ ಬಂಡವಾಳವನ್ನು ಹಾಕಬೇಕಾಗಿಲ್ಲ. ಕೋಟಿಗಟ್ಟಲೆ ಹಣವನ್ನು ಹೂಡಬೇಕಾಗಿಲ್ಲ ಎಷ್ಟೋ ಕಡೆ ಕರ್ನಾಟಕಕ್ಕೆ ವಿದೇಶಗಳಿಂದ ಬರತಕ್ಕಂಥ ವಿದೇಶೀಯರಿಗೆ ಸ್ವಲ್ಪ ಸೌಲಭ್ಯವನ್ನು, ಒದಗಿಸಿಕೊಟ್ಟರೆ ಸಾಕು ಅನೇಕ ಜನರನ್ನು ಆಕರ್ಷಿಸುವುದರಲ್ಲಿ ನಮ್ಮ ರಾಜ್ಯದಲ್ಲಿ ನಿಸರ್ಗ ಸೌಂದರ್ಯ ಸಂಪತ್ತನ್ನು ಹೊಂದಿರುತ್ತದೆ. ಕೆ.ಆರ್.ಎಸ್. ಬೃಂದಾವನವನ್ನು ನೋಡಿದಂತೆ, ಅನೇಕ ಜನರಲ್ಲಿ ಮತ್ತೆ ಮೈಸೂರಿಗೆ ಬರಲೇಬೇಕು, ನೋಡಲೇಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಮೈಸೂರು ಹುಲಿ ಎಂದು ಹೆಸರು ಪಡೆದಂಥ ಟಿಪ್ಪುಸುಲ್ತಾನ್ ಇಂಗ್ಲೀಷರೊಡನೆ ಹೋರಾಟ ಮಾಡಿದ ಇತಿಹಾಸವನ್ನು ಸ್ಥಾಪಿಸಿದಂಥ ಶ್ರೀರಂಗಪಟ್ಟಣ, ಇವೇ ಮುಂತಾದ ಸ್ಥಳಗಳಲ್ಲಿ ಪ್ರವಾಸಿಗರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಡಲು ಸಾಧ್ಯವಾಗಿಲ್ಲ. ಈ ಎಲ್ಲ ಕಡೆ ಸಾಧ್ಯವಾದಷ್ಟು ಸೌಕರ್ಯಗಳನ್ನು ಒದಗಿಸಿದ್ದೇ ಆದರೆ, ನಮ್ಮ ರಾಜ್ಯದ ಬೊಕ್ಕಸಕ್ಕೆ ಸಾಕಷ್ಟು ಉತ್ಪತ್ತಿಯಾಗುವುದರಲ್ಲಿ ಯಾವ ವಿಧವಾದ ಸಂದೇಹವಿಲ್ಲ. ಈವತ್ತು ಬಿಜಾಪುರ ಬೆಳಗಾಂ, ಮಂಗಳೂರು, ಮುಂತಾದ ಸ್ಥಳಗಳನ್ನು ಟೂರಿಸ್ಟ್ ಸೆಂಟರ್ ಮಾಡಬೇಕೆಂದು ಮಾನ್ಯ ಮಿತ್ರರನೇಕರು ಹೇಳಿರುತ್ತಾರೆ. ಶ್ರೀಮಾನ್ ಕಕ್ಕಿಲ್ಲಾಯ ಅವರು ಮಾತನಾಡುತ್ತಾ ಮಲ್ಪೆ, ಮರವಂತೆ ಬಗ್ಗೆ ಹೇಳಿದರು. ಇದನ್ನು ಅನೇಕ ಸಲ ನಾನು ನೋಡಿರುತ್ತೇನೆ. ನಮ್ಮ ದೇಶದ ಜನರು ಇದನ್ನು ಮರೆಯುವಂತೆಯೇ ಇಲ್ಲ. ಒಂದು ಕಡೆ ಸಮುದ್ರ ಇದ್ದರೆ ಮತ್ತೊಂದು ಕಡೆ ಒಂದು ದೊಡ್ಡ ನದಿ ಹರಿಯುತ್ತಿರುತ್ತದೆ. ಇವೆರಡರ ನಡುವೆ ಇರತಕ್ಕಂತ ರಸ್ತೆ ದೇಶದ ಬೇರೆ ಯಾವ ರಾಜ್ಯದಲ್ಲೂ ಕೂಡ ಈ ರೀತಿಯಾದ ನಿಸರ್ಗ ಸೌಂದರ್ಯ ಇಲ್ಲವೆಂದು ಅನೇಕ ಜನ ವ್ಯಕ್ತಪಡಿಸಿದ್ದಾರೆ. ಕರ್ನಾಟಕದಲ್ಲಿರುವ ಪ್ರಕೃತಿ ಸೌಂದರ್ಯ ಯಾವ ರೀತಿಯದೆಂದರೆ ಈವತ್ತು ಅಮೆರಿಕಾ ದೇಶದಲ್ಲಿ, ಕೆನ್ಯಾ ದೇಶದಲ್ಲಿ ಉಗಾಂಡದಲ್ಲಿ ಎಷ್ಟು ಚೆನ್ನಾಗಿರುತ್ತದೆ ಅದಕ್ಕಿಂತ ಮಿಗಿಲಾಗಿರುತ್ತದೆ. ಉಗಾಂಡ ರಾಜ್ಯವನ್ನು ಈವತ್ತಿನ ದಿವಸ ನೋಡಬೇಕು ಎಂದರೆ ಒಂದು ವರ್ಷಕ್ಕಿಂತ ಮುಂಚಿತವಾಗಿಯೇ ಟಿಕೆಟ್ ರಿಸರ್ವ್ ಮಾಡಿಸಿರಬೇಕು ಅರಣ್ಯದಲ್ಲಿ ಮೃಗಗಳನ್ನು ನೋಡಲು ಅನುಕೂಲ ಯಾವ ರೀತಿ ಮಾಡಿದ್ದಾರೆಂದು ನೋಡಬೇಕು. ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಅವರು ಅಂಥ ಹೆಚ್ಚಿನ ವಿಶೇಷ ಏನು ಮಾಡಿಲ್ಲ ಎತ್ತರವಾದ ಕಡೆಯಲ್ಲಿ ಹೋಟೆಲನ್ನು ಕಟ್ಟಿರುತ್ತಾರೆ. ಹೋಟೆಲಿನ ಮೇಲ್ಭಾಗದಲ್ಲಿ ರೂಮುಗಳನ್ನು, ಕೆಳಭಾಗದಲ್ಲಿ ಕಾಡು ಪ್ರಾಣಿಗಳು ಬಂದು ನೀರನ್ನು ಕುಡಿಯುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಕಾಡು ಪ್ರಾಣಿಗಳು ಅಲ್ಲಿ ನೀರನ್ನು ಕುಡಿಯಲು ಬರುತ್ತವೆ. ಅವು ಬಂದು ಹೋಗಲು ಅನುಕೂಲವಾದಂಥ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ಕಾಡಿನ ಅನುಭವ ಇಲ್ಲದ ಜನ ಓಡಾಡುವ ಕಡೆ ಕೆಲವು ಹಾವುಗಳನ್ನು ಬಿಟ್ಟು

ಬಿಡುತ್ತಾರೆ. ಈ ಹಾವುಗಳು ರಸ್ತೆಯಲ್ಲಿ ಹರಿದಾಡುವುದನ್ನು ನೋಡಿದ ಜನಕ್ಕೆ ಒಂದು ರೀತಿಯಾದ ಆಶ್ಚರ್ಯ ಉಂಟಾಗುತ್ತದೆ. ಈ ರೀತಿಯಾಗಿ ಹಣವನ್ನು ಇಲಾಖೆಯವರು ಸರ್ಕಾರದವರು ಸಂಪಾದನೆ ಮಾಡುತ್ತಿದ್ದಾರೆ, ದೇವರು ಕೊಟ್ಟಿರತಕ್ಕಂಥ ನೈಸರ್ಗಿಕ ಸಂಪತ್ತನ್ನು ಉಪಯೋಗಿಸಿಕೊಳ್ಳುವುದರಲ್ಲಿ ನಾವು ಬಹಳ ಮಟ್ಟಿಗೆ ವಿಫಲರಾಗಿದ್ದೇವೆ. ನಮ್ಮ ದೇಶದ ಚಾರಿತ್ರತೆ ದೇಶ ವಿದೇಶಗಳಲ್ಲಿ ಯಾವ ರೀತಿ ಪ್ರಚಾರವಾಗಬೇಕೋ ಆ ಮಟ್ಟದಲ್ಲಿ ಪ್ರಚಾರವಾಗಬೇಕೆಂದು ಹೇಳಲು ಇಷ್ಟಪಡುತ್ತೇನೆ. ಶ್ರೀ ಮಳ್ಳೂರು ಆನಂದರಾವ್‌ರವರು ಮಾತನಾಡುತ್ತಾ ರಾಯಚೂರು, ಬಾದಾಮಿ, ಪಟ್ಟದಕಲ್ಲು, ಐಹೊಳೆ ಮುಂತಾದ ಪ್ರೇಕ್ಷಣೀಯ ಸ್ಥಳಗಳು ಕರ್ನಾಟಕ ರಾಜ್ಯದಲ್ಲಿದ್ದರೂ ಅವು ಈವತ್ತಿನ ದಿವಸ ಪ್ರಚಾರದಲ್ಲಿಲ್ಲ. ರಾಜ್ಯದ ಎಷ್ಟೋ ಜನಕ್ಕೆ ಇದು ಎಲ್ಲಿದೆ ಎಂತಲೂ ಗೊತ್ತಿಲ್ಲ ಎಂದಿದ್ದಾರೆ. ಇವೆಲ್ಲಾ ಸಾಕಷ್ಟು ಪ್ರೇಕ್ಷಣೀಯ ಸ್ಥಳಗಳಾಗಬೇಕಾದರೆ ಸಾಕಷ್ಟು ಹಣವನ್ನು ಖರ್ಚು ಮಾಡದಿದ್ದರೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಅನೇಕ ಜನ ಸದಸ್ಯರು ಮಾತನಾಡುತ್ತಾ ಅನೇಕವಾಗಿ ಟೀಕೆಗಳನ್ನು ಮಾಡಿರುತ್ತಾರೆ. ಘಟಪ್ರಭ ಮಲಪ್ರಭ ಇವುಗಳನ್ನು ಸೇರಿಸಿಕೊಳ್ಳಬೇಕೆಂದು ಹೇಳಿರುತ್ತಾರೆ. ಈ ಭಾಗಗಳನ್ನು ಸೇರಿಸಿಕೊಳ್ಳುವುದಲ್ಲಿ ನನ್ನ ಅಭ್ಯಂತರವೇನಿಲ್ಲ. ಮಾನ್ಯ ಶಿವಲಿಂಗೇಗೌಡರು ಮಾತನಾಡುತ್ತ ಬೆಂಗಳೂರು ಹತ್ತಿರದಲ್ಲೇ ಇರತಕ್ಕಂತಹ ಮೇಕೇದಾಟುವಿನಲ್ಲಿ ಕಾವೇರಿ ಸಂಗಮವೇನು ಇರುತ್ತದೆ, ಅದನ್ನು ಟೂರಿಸ್ಟ್ ರಿಸಾರ್ಟ್ ಎಂದು ಪರಿಗಣಿಸಬೇಕೆಂದು ಕೇಳಿರುತ್ತಾರೆ. ಪ್ರವಾಸೋದ್ಯಮವನ್ನು ನಮ್ಮ ರಾಜ್ಯದಲ್ಲಿ ಬೇರೆ ಯಾವ ರಾಜ್ಯಕ್ಕೂ ಕಡಿಮೆ ಇಲ್ಲದಂತೆ ಅಭಿವೃದ್ಧಿ ಪಡಿಸಬೇಕೆಂದು ಸರಕಾರದ ಉದ್ದೇಶವಾಗಿರುತ್ತದೆ. ನಮ್ಮ ಉದ್ದೇಶವೂ ಅದೇ ಆಗಿರುತ್ತದೆ ಎಂದು ನಾನು ಇಲ್ಲಿ ಸ್ಪಷ್ಟವಾಗಿ ಹೇಳಿರುತ್ತೇನೆ. ಬಿಜಾಪುರ, ಬಾದಾಮಿ, ಪಟ್ಟದಕಲ್ಲು, ಕಾರವಾರ, ಮಲ್ಪೆ, ಮರವಂತಿಗೆ, ಕೃಷ್ಣರಾಜಸಾಗರ, ನಂದಿಬೆಟ್ಟ, ಬಂಡೀಪುರ, ನಾಗರಹೊಳೆ ಈ ಎಲ್ಲಾ ಭಾಗಗಳನ್ನು ಅಭಿವೃದ್ಧಿ ಪಡಿಸುವುದೇ ನಮ್ಮ ಸರಕಾರದ ಉದ್ದೇಶವಾಗಿದೆ.

ಮತ್ತೆ ನಮ್ಮ ಶ್ರೀಮಾನ್ ಆರ್ಮುಗಂ ಅವರ ಭಾಷಣದಲ್ಲಿ ಸರಕಾರಕ್ಕೆ ಒಂದು ಸಲಹೆಯನ್ನು ಮಾಡಿದ್ದಾರೆ. ಅದೇನೆಂದರೆ ಕೆ ಜಿ ಎಫ್ ಇಡೀ ಪ್ರಪಂಚದಲ್ಲಿ ಅತೀ ಹೆಚ್ಚಿನ ಆಳದಿಂದ ಚಿನ್ನವನ್ನು ತೆಗೆಯತಕ್ಕಂತಹ ಸ್ಥಳವಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಆದರೆ ಕೆ ಜಿ ಎಫ್ ಅನ್ನು ಕರ್ನಾಟಕ ರಾಜ್ಯದ ಪ್ರವಾಸೋದ್ಯಮದ ಕೇಂದ್ರವನ್ನಾಗಿ ಮಾಡಿಕೊಳ್ಳುವುದಕ್ಕೆ ಸರಕಾರ ಪ್ರಯತ್ನ ಮಾಡುತ್ತದೆಂಬ ಭರವಸೆಯನ್ನು ಕೊಡುತ್ತಿದ್ದೇನೆ.

'I assure you that KGF will also be included in the tourist map of Karnataka, you need not worry about it'.ಇವೆಲ್ಲವುಗಳನ್ನು ಅಭಿವೃದ್ಧಿ ಪಡಿಸಬೇಕಾದರೆ ಅನೇಕ ಹೋಟೆಲ್‌ಗಳನ್ನು ಕಟ್ಟಿಸಬೇಕು. ಆದರೆ ಆ ರೀತಿಯ ಹೋಟೆಲ್‌ಗಳನ್ನು ಕಟ್ಟಬೇಕಾದರೆ ಜನರ ಸಹಕಾರ ಬೇಕಾಗುತ್ತದೆ. ಜೊತೆಗೆ ಸರಕಾರದವರು ಹೆಚ್ಚಿನ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಪ್ರವಾಸೋದ್ಯಮ ಇಲಾಖೆಯಲ್ಲಿ

STOCK NO C-6141
22/08/03



ತಮಿಳುನಾಡು, ಹರಿಯಾಣ, ಪಂಜಾಬ್ ಮತ್ತು ರಾಜಾಸ್ತಾನ ರಾಜ್ಯಗಳು ಮುಂದುವರೆದಿವೆ. ಅದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯವು ಮುಂದುವರೆಯುವುದಕ್ಕೆ ಸಾಧ್ಯ ಇದೆ. ಕಾರಣ ನಮ್ಮ ರಾಜ್ಯದಲ್ಲಿ ಪ್ರಕೃತಿ ಸೌಂದರ್ಯ ಆ ರೀತಿ ಇದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಬೆಂಗಳೂರಿನಲ್ಲಿರುವ ಅಲಸೂರು ಕೆರೆಯನ್ನು ಜಯಪುರದಲ್ಲಿರುವ ಪಾಲೇಸಿನ ಹಾಗೆ ಮಾಡಬಹುದು. ಆದರೆ ಅದಕ್ಕೆಲ್ಲ ಹಣವನ್ನು ಖರ್ಚು ಮಾಡಬೇಕು. ಇವನ್ನೆಲ್ಲ ದೃಷ್ಟಿಯಲ್ಲಿಟ್ಟುಕೊಂಡು ಇನ್ನು ಮುಂದೆ ಈ ಇಲಾಖೆಯನ್ನು ಅಭಿವೃದ್ಧಿ ಪಡಿಸುವ ಕಡೆಗೆ ಹೆಚ್ಚಿನ ಗಮನ ಹರಿಸುತ್ತೇವೆಂಬ ಭರವಸೆಯನ್ನು ಕೊಡುತ್ತೇವೆ. ಹೇಗೂ ಈ ಇಲಾಖೆ ಸಾಕಷ್ಟು ಟೀಕೆಗೆ ಒಳಗಾಗಿಲ್ಲ. ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್ - ಸಾಕಷ್ಟು ಸಮಯ ಇರಲಿಲ್ಲ.

ಶ್ರೀ ಪಿ. ರಾಮದೇವ್ - ಚರ್ಚೆ ಬಹಳ ಸಪ್ಪೆಯಾಗಿತ್ತು ಎಂಬುದಾಗಿ ಪ್ರಜಾವಾಣಿಯಲ್ಲಿ ಪ್ರಕಟವಾಗಿದೆ.

ಶ್ರೀ ಆರ್. ಗುಂಡೂರಾವ್ - ರೂಲ್ 312ರ ಕೆಳಗೆ ಚರ್ಚೆ ಮಾಡಬೇಕೆಂದರೆ ಸದಸ್ಯರೆಲ್ಲರು ಇರುತ್ತಾರೆ. ಆದರೆ ಕರ್ನಾಟಕದ ವೈಭವಯುತವಾದ ಬೇಡಿಕೆಯನ್ನು ಚರ್ಚೆ ಮಾಡುವಾಗ ಎಲ್ಲರೂ ತಮ್ಮ ತಮ್ಮ ಸ್ವಂತ ಕೆಲಸಗಳಿಗೆ ಹೋದರೆ ನಾನು ಏನು ಮಾಡಲಿ! ಇದು ನನ್ನ ತಪ್ಪು ಅಲ್ಲ. ಶ್ರೀಮಾನ್ ರಾಮದೇವರು ಯಾವಾಗ ಇರುತ್ತಾರೆಂದರೆ ಬಿ ಟಿ ಎಸ್ ಪ್ರಶ್ನೆ ಬಂದಾಗ ಅವರು ಇರುತ್ತಾರೆ. ಆದರೂ ಕೆಲವು ಸದಸ್ಯ ಮಿತ್ರರು ಮಾತನಾಡಲಿ, ಮಾತನಾಡದಿರಲಿ. It is the duty of the government to see that all facilities are provided to the tourists. We will see that Karnataka will be placed in a very high position and in a very important place in the tourist map of not only India but internationally also. ಮಾನ್ಯ ಸದಸ್ಯರೆಲ್ಲರೂ ಈ ಇಲಾಖೆಯ ಬೇಡಿಕೆಯನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ ಕೊನೆಯದಾಗಿ, ರಸ್ತೆ ಸಾರಿಗೆ ಇಲಾಖೆಯ ವಿಚಾರ. ನೆನ್ನೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನನ್ನ ಸದಸ್ಯ ಮಿತ್ರರಾದ ಶ್ರೀಮಾನ್ ಗಟ್ಟಿ ಚಂದ್ರಶೇಖರವರು ಕಪ್ಪು ಟೋಪಿ ಹಾಕಿಕೊಂಡಿದ್ದರು. ನಾನು ಕೆಂಪು ಶರ್ಟು ಹಾಕಿ ಕೊಂಡಿದ್ದೇನೆ. ಅದಕ್ಕವರು ಇದು ರಸ್ತೆ ಸಾರಿಗೆ ಬಸ್ಸಿನ ಬಣ್ಣವೋ ಎಂಬುದಾಗಿ ಕೇಳಿದ್ದರು. ಇವತ್ತು ಅವರು ಬಿಳೀ ಟೋಪಿ ಹಾಕಿಕೊಂಡಿದ್ದಾರೆ. ನಾನು ನೀಲಿ ಶರ್ಟು ಹಾಕಿಕೊಂಡಿದ್ದೇನೆ. ಅವರಿಗೆ ಸಮಾಧಾನ ಹೇಳಬೇಕಾಗಿದೆ.

ಹೇಗೋ ಈ ಇಲಾಖೆ ಬಹಳ ದೊಡ್ಡ ಇಲಾಖೆ. ಸುಮಾರು 33,000 ಜನ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಪಬ್ಲಿಕ್ ಸೆಕ್ಟರ್ನಲ್ಲಿ ನಡೆಯುತ್ತಿರುವಂತಹ ಸಂಸ್ಥೆಗಳಲ್ಲಿ ಇದರಷ್ಟು ದೊಡ್ಡ ಸಂಸ್ಥೆ ಬೇರೆ ಯಾವುದೂ ಇಲ್ಲ. ಸುಮಾರು 20 ಲಕ್ಷ ಜನ ಪ್ರಯಾಣಿಕರು ನಮ್ಮ ರಾಜ್ಯದಲ್ಲಿ ಒಂದು ದಿವಸಕ್ಕೆ ಪ್ರಯಾಣ

923.209 54 DAI
KLS - EL
C-6141
KLS - EL



ಮಾಡುತ್ತಾರೆ. ಬೆಂಗಳೂರು ನಗರದಲ್ಲಿ ಪ್ರತಿ ದಿವಸ 6 ಲಕ್ಷ ಜನರು ಪ್ರಯಾಣ ಮಾಡುತ್ತಿದ್ದಾರೆ. ಇಂತಹ ಒಂದು ದೊಡ್ಡ ಸಂಸ್ಥೆಯಲ್ಲಿ ಲೋಪದೋಷಗಳ ಆಗುವಂಥಾದ್ದು ಸ್ವಾಭಾವಿಕ. ಕೆಲವು ಲೋಪದೋಷಗಳನ್ನು ತಪ್ಪಿಸಲೇ ಬೇಕಾಗುತ್ತದೆ. ಆದ್ದರಿಂದ ಬಹುತೇಕ ಸದಸ್ಯರು ಬಸ್ಸುಗಳು ಚೆನ್ನಾಗಿರುವುದಿಲ್ಲ ಮತ್ತು ಬಸ್ಸುಗಳು ದಾರಿಯಲ್ಲಿ ಕೆಟ್ಟು ನಿಂತುಕೊಂಡರೆ ಅವುಗಳನ್ನು ರಿಪೇರಿ ಮಾಡುವುದಿಲ್ಲ, ಬಸ್ಸುಗಳು ಸಮಯಕ್ಕೆ ಸರಿಯಾಗಿ ಬರುವುದಿಲ್ಲ ಮತ್ತು ಜನಗಳ ಸೌಕರ್ಯಕ್ಕಾಗಿ ಹೆಚ್ಚು ಹೆಚ್ಚು ಬಸ್ಸುಗಳನ್ನು ಓಡಿಸಬೇಕು ಎಂದು ಎಲ್ಲರೂ ಮಾಡಿದಂತಹ ಟೀಕೆ. ಮತ್ತೆ ಕೆಲವರು ಸೋರಿ (ಲೀಕೇಜ್) ಹೋಗುತ್ತಿರುವುದರ ಬಗ್ಗೆ ಹೇಳಿದ್ದಾರೆ. ಇದಕ್ಕಿಂತಲೂ ಮುಖ್ಯವಾಗಿ ಸಮಯಕ್ಕೆ ಸರಿಯಾಗಿ ಓಡಿಸದಿರುವುದು ಮತ್ತು ಶುಚಿಯಾಗಿ ಇಲ್ಲದಿರುವುದು ಮತ್ತು ರಸ್ತೆಯಲ್ಲಿ ಕೆಟ್ಟುಬಿಟ್ಟು ನಿಂತುಕೊಂಡರೆ ಅವುಗಳನ್ನು ರಿಪೇರಿ ಮಾಡದಿರುವುದು ಮತ್ತು ಕಂಡಕ್ಟರ್ ಮತ್ತು ಡ್ರೈವರ್‌ಗಳು ಸಾರ್ವಜನಿಕರ ಜೊತೆಯಲ್ಲಿ ಸರಿಯಾಗಿ ನಡೆದುಕೊಳ್ಳದಿರುವುದು, ಈ ರೀತಿಯಾಗಿ ಸಾಮೂಹಿಕವಾಗಿ ಮಾಡಿದಂತಹ ಟೀಕೆಗಳು. ಆದರೆ ನಾನು ಅವುಗಳನ್ನು ಟೀಕೆಗಳೆಂದು ಭಾವಿಸುವುದಿಲ್ಲ. ಮುಖ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆಂದು ಭಾವಿಸಿ, ತಾವು ಏನೇನು ಹೇಳಿದ್ದೀರಿ ಅವುಗಳನ್ನು ಪೂರ್ತಿಯಾಗಿ ಒಪ್ಪತಕ್ಕಂಥವನು ನಾನು. ಈ ಖಾತೆಯನ್ನು ವಹಿಸಿಕೊಂಡ ಮೊದಲನೆ ದಿನವೇ ಅಧಿಕಾರಿಗಳ ಜೊತೆಯಲ್ಲಿ ಮಾತನಾಡುವಾಗ ಹೇಳಿದ್ದೇನೆ. ಸಾರ್ವಜನಿಕ ಪ್ರಯಾಣಿಕರು ನಿಮ್ಮ ಆಫೀಸ್ ಹೇಗೆ ನಡೆಯುತ್ತಿದೆ, ನಿಮ್ಮಲ್ಲಿ ಎಷ್ಟು ಸಿಬ್ಬಂದಿ ಇದೆ, ಯಾವ ತರಹ ಬೋನಸ್ ಕೊಡುತ್ತಾರೆ ಎಂಬುದಾಗಿ ಕೇಳುವುದಿಲ್ಲ. ಅವರಿಗೆ ಮುಖ್ಯವಾಗಿ ಬೇಕಾಗಿರುವ ಅನುಕೂಲ ಯಾವುದೆಂದರೆ ಸಮಯಕ್ಕೆ ಸರಿಯಾಗಿ ಬಸ್ಸುಗಳನ್ನು ಓಡಿಸುವುದು ಮತ್ತು ಬಸ್ಸುಗಳನ್ನು ಶುಚಿಯಾಗಿಡುವುದು. ನಂತರ ಬಸ್ಸುಗಳು ದಾರಿಯ ಮಧ್ಯದಲ್ಲಿ ಕೆಟ್ಟು ನಿಂತುಬಿಟ್ಟಾಗ ರಿಪೇರಿ ಮಾಡುವುದಕ್ಕೆ ಡ್ರೈವರ್‌ಗಳಿಗೆ ಸೂಕ್ತ ಸಾಮಾನುಗಳನ್ನು ಕೊಟ್ಟಿದ್ದಾರೆಯೇ, ಮತ್ತೆ ಆ ಡ್ರೈವರಿಗೆ ರಿಪೇರಿ ಮಾಡುವುದಕ್ಕೆ ಬರುತ್ತದೆಯೇ ಇವುಗಳ ಬಗ್ಗೆ ಮುಖ್ಯ ಗಮನ ಹರಿಸಬೇಕೆಂದು ಹೇಳಿದ್ದೇನೆ. ಆ ಪ್ರಕಾರ ತಾವು ಹೇಳಿದಂತಹ ಎಲ್ಲವನ್ನೂ ಪೂರ್ತಿಯಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ - ಬಸ್ಸಿನಲ್ಲಿ ಕುಳಿತುಕೊಳ್ಳುವುದಕ್ಕೆ ಜಾಗ ....

ಶ್ರೀ ಆರ್. ಗುಂಡೂರಾವ್ - 1958ನೇ ಇಸವಿಯಲ್ಲೇ ಬಂದಂತಹ ಇಲಾಖೆ ಇದು. ಹಿಂದೆ ಎಂ ಜಿ ಆರ್ ಟಿ ಆಗಿತ್ತು. ನಂತರ ಕಾರ್ಪೊರೇಷನ್ ಆಯಿತು. ಹೀಗೆ ಅದು ಬೆಳೆದು ಬಂತು. ಅಂತದನ್ನು ಕೇವಲ ಅಲ್ಪ ಸಮಯದಲ್ಲಿ ಎಲ್ಲವನ್ನೂ ಸರಳಗೊಳಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದಾಗಿ ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಇನ್ನೂ ಸಮಯ ಬೇಕಾಗಿದೆ. ತಾವುಗಳು ಯಾರಾದರು ಕಾರ್ಪೊರೇಷನ್ ಆಡಳಿತ ವ್ಯವಹಾರದಲ್ಲಿ ಮಧ್ಯಪ್ರವೇಶ ಮಾಡದಿದ್ದಲ್ಲಿ ಒಂದು ವರ್ಷದಲ್ಲಿ ಬಸ್ಸುಗಳು ಸರಿಯಾದ ಸಮಯಕ್ಕೆ ಹೋಗತಕ್ಕ ಅನುಕೂಲವಾಗುತ್ತದೆ. ಕೆಲವರು 15-20 ವರ್ಷಗಳಿಂದಲೂ ಒಂದೇ

ಊರಿನಲ್ಲಿ ವಾಸ ಮಾಡಿಕೊಂಡಿದ್ದಾರೆ. ಅವರನ್ನು ಆ ಊರಿನಿಂದ ವರ್ಗ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಜೊತೆಗೆ ಕೆಲಸ ಗೊತ್ತಿಲ್ಲದೆ ಇರತಕ್ಕಂಥವರನ್ನು, ತಮಗೆ ಬೇಕಾದವರನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದಾರೆ. ಮತ್ತು ತಮ್ಮ ಜಾತಿಗೆ ಸೇರಿದವರನ್ನು ತಮ್ಮ ನೆಂಟರಿಷ್ಟರನ್ನು ಕೆಲಸಕ್ಕೆ ಸೇರಿಸಿಕೊಂಡಿದ್ದಾರೆ. ಬಸ್ಸುಗಳನ್ನು ರಿಪೇರಿ ಮಾಡಿಕೊಳ್ಳುವುದಕ್ಕೂ ಸಹ ಬರದೆ ಇರತಕ್ಕಂಥ ಡ್ರೈವರ್‌ಗಳಿದ್ದಾರೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಂತಹ ವಿಚಾರವನ್ನು ಮುಚ್ಚಿಟ್ಟು ಎಲ್ಲವೂ ಸರಿಯಾಗಿ ನಡೆಯುತ್ತಿದೆ, ಎಂಬುದಾಗಿ ಕೇಳಿಕೊಳ್ಳದೇ ತಮ್ಮ ಎದುರಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಳ್ಳುತ್ತಿದ್ದೇನೆ. ಡ್ರೈವರ್‌ಗೆ ಬಸ್ಸುಗಳನ್ನು ರಿಪೇರಿ ಮಾಡಿಕೊಳ್ಳುವುದಕ್ಕೂ ಬರುವುದಿಲ್ಲ. ಮಾನ್ಯ ಕಕ್ಕಿಲ್ಲಾಯರವರಿಗೆ ಗೊತ್ತಿರುವ ಹಾಗೆ ಕಾರ್ಮಿಕರ ಕಾನೂನಿನ ಪ್ರಕಾರ ಅವರು 180 ದಿವಸಗಳು ಕೆಲಸ ಮಾಡಿದ ಕೂಡಲೇ they will all become permanent employees of the corporation. ಹೀಗಾಗಿ ಕಾನೂನು ಪ್ರಕಾರ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕಾನೂನಿನ ಅಡಚಣೆ ಇರುತ್ತದೆ. ಇದು ಒಂದು ಕಾರಣ. ಮತ್ತೆ ಇನ್ನು ಬೇರೆ ಕಾರಣಗಳು ಇವೆ. ಇವೆಲ್ಲ ಕಾರಣಗಳಿಂದ ಕಾರ್ಪೊರೇಷನ್ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಇವನ್ನೆಲ್ಲ ನೋಡಿ ನಾವು ಈಗ ಒಂದು ಮಾರ್ಗವನ್ನು ಅನುಸರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರಿಂದ ಕೆಲವರಿಗೆ ತಪ್ಪು ರೀತಿಯಾದ ತಿಳುವಳಿಕೆಯಾಗಬಹುದು. ಕೆಲವರಿಗೆ ಅದು ಒಳ್ಳೆಯದಾಗಿರಬಹುದು. ಇನ್ನು ಮುಂದೆ ಯಾವನೇ ಒಬ್ಬ ಕಂಡೆಕ್ಟರ್ ಒಂದು ಸಾರಿ ಟಿಕೆಟ್ ಕೊಡದೆ ದುಡ್ಡು ತಿಂದಿದ್ದಾನೆಂದು ಸಿಕ್ಕಿ ಹಾಕಿಕೊಂಡರೆ ಆತನನ್ನು ಕೆಲಸದಿಂದಲೇ ಡಿಸ್ಮಿಸ್ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆತನು ಯಾರೇ ಆಗಲಿ ಆತನನ್ನು ಕೆಲಸದಿಂದ ತೆಗೆದು ಹಾಕಬೇಕು. ಆ ರೀತಿ ಮಾಡದೆ ಬೇರೆ ಯಾವ ರೀತಿ ಮಾಡಿದರೂ ಪ್ರಯೋಜನವಾಗುವುದಿಲ್ಲ ಎಂಬ ಉದ್ದೇಶದಿಂದ ಈ ರೀತಿಯ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ನಮ್ಮ ಇಲಾಖೆಯ ಮೂಲಕ ಯಾವುದೇ ಕಠಿಣ ಕ್ರಮವನ್ನು ಕೈಗೊಂಡರೆ ನಮ್ಮ ಇಲಾಖೆಗೆ ಪ್ರತಿದಿವಸ 3 ಲಕ್ಷ ರೂಪಾಯಿಗಳ ಉತ್ಪತ್ತಿಯಾಗುತ್ತದೆ. ಈ ಕಠಿಣ ಕ್ರಮದಿಂದ ದಿನಕ್ಕೆ 3 ಲಕ್ಷಗಳು ಜಾಸ್ತಿ ಬರುತ್ತದೆಯೆಂದರೆ ಒಂದು ತಿಂಗಳಿಗೆ 90 ಲಕ್ಷ ರೂಪಾಯಿಗಳಾಗುತ್ತದೆ. ಆದ್ದರಿಂದ ಅವರ ಮೇಲೆ ಕಠಿಣ ಕ್ರಮಗಳನ್ನು ಕೈಗೊಂಡರೆ ಮಾತ್ರ ಈ ರೀತಿ ಎರಡರಷ್ಟು ಮೂರರಷ್ಟು ಉತ್ಪತ್ತಿ ನಷ್ಟವಾಗುತ್ತಾ ಇರುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅದು ಸಾಧ್ಯವಾಗುವುದಿಲ್ಲ. ಅನಂತರ ಈ ಬಸ್ಸಿನ ಮಾಡೆಲ್‌ಗಳು ಚೇಂಜಾಗುತ್ತಾ ಇರುತ್ತವೆ. ಅಂದರೆ ಮೋಟಾರು ಕಂಪನಿಯವರು ಕೆಲವಾರು ನವೀನ ರೀತಿಯ ಉಪಕರಣಗಳನ್ನು ಅಳವಡಿಸುತ್ತಿರುತ್ತಾರೆ. ಇದರಿಂದ ನಮಗೆ ಖರ್ಚು ಇದೆ. ಮಾನ್ಯ ಆರ್ಮುಗಂರವರು ಈ ಸ್ಪೇರ್ ಪಾರ್ಟ್‌ಗಳನ್ನು ಹೊರಗಡೆ ಕೊಳ್ಳುವುದರಿಂದ ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗುತ್ತದೆ ಎಂದು ಹೇಳಿದರು. ಇದನ್ನು ತಪ್ಪಿಸುವುದಕ್ಕೆ ನಾವು ಸೂಕ್ತ ವ್ಯವಸ್ಥೆಯನ್ನು ಮಾಡುತ್ತೇವೆ. ಆಮೇಲೆ ಮಾನ್ಯ ಇಬ್ರಾಹಿಂರವರು ಏರ್

ಕಂಡೀಷನ್ ಗೆಸ್ಟ ಹೌಸ್ ಕಟ್ಟಿಬಿಟ್ಟಿದ್ದೇರೆಂದು ಹೇಳಿದರು. ನಾನು ಮಂತ್ರಿಯಾದ ಮೇಲೆ ಈ ಕೆ. ಎಸ್. ಆರ್. ಟಿ. ಸಿ. ಗೆಸ್ಟ್‌ಹೌಸ್‌ನಲ್ಲಿ ಒಂದು ದಿನವೂ ಸಹ ಉಳಿದಿಲ್ಲ. ಅದನ್ನು ಏತಕ್ಕೆ ಕಟ್ಟಿದ್ದಾರೆಯೋ ಏತಕ್ಕೆ ಬಿಟ್ಟಿದ್ದಾರೆಯೋ ನನಗೆ ಗೊತ್ತಿಲ್ಲ. ಅದು ನನಗೆ ಸಂಬಂಧಪಟ್ಟ ವಿಷಯವೂ ಅಲ್ಲ. ಆದರೆ ನಾನು ಒಂಧು ಮಾತು ಮಾತ್ರ ಹೇಳುತ್ತೇನೆ. ಆ ಗೆಸ್ಟ್‌ಹೌಸ್ ಅವಶ್ಯಕತೆ ಇರಲಿಲ್ಲ. ಕೆ ಎಸ್ ಆರ್ ಟಿ ಸಿ ಅಲ್ಲಿ ಇರತಕ್ಕಂಥ ಜನರಲ್ ಮ್ಯಾನೇಜರ್ ಅಂಥವರು ಅಲ್ಲಿಗೆ ಹೋಗಿ ಇಳಿದುಕೊಳ್ಳುತ್ತಾರೆ. ಅವರು ಹೋಟೆಲ್‌ನಲ್ಲಿ ದುಡ್ಡು ಕೊಟ್ಟು ಇಳಿದುಕೊಂಡರೆ ಏನೂ ತೊಂದರೆಯಾಗುವುದಿಲ್ಲ. ಅದಕ್ಕೋಸ್ಕರ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಗೆಸ್ಟ್‌ಹೌಸ್ ಅವಶ್ಯಕತೆ ಇರಲಿಲ್ಲ. ಅದೂ ಅಲ್ಲದೆ ಅಲ್ಲಿ ಏರ್‌ಕಂಡೀಷನ್ ಹಾಕಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ನಾನು ಅಲ್ಲಿಗೆ ಹೋಗಿ ಉಳಿದಿಲ್ಲ. ಅದೂ ನನಗೆ ಗೊತ್ತಿಲ್ಲ. ಕೆಲವು ಗೆಸ್ಟ್‌ಹೌಸ್‌ಗಳಲ್ಲಿ ಏರ್‌ಕಂಡೀಷನ್ ಹಾಕಿಲ್ಲಾ ಎಂದು ತಿಳಿದು ಬಂದಿದೆ. ಗುಲ್ಬರ್ಗದಲ್ಲಿ ಸೆಕೆ ಎಂದು ನಿಮಗೆ ಗೊತ್ತಿದೆ; ಗುಲ್ಬರ್ಗದವರು ಮಂತ್ರಿಗಳಾಗಿದ್ದಾಗ ಅಲ್ಲಿಗೆ ಜಾಸ್ತಿ ಹೋಗುತ್ತಾ ಇದ್ದರು ಅಂತ ಕಾಣುತ್ತೆ. ಆಗ ಅದನ್ನು ಹಾಕಿದ್ದು ಎಂದು ಕಾಣುತ್ತದೆ. ಏನೇ ಆದರೂ ಅಲ್ಲಿ ಅದರ ಅವಶ್ಯಕತೆ ಇರಲಿಲ್ಲ.

ಒಬ್ಬ ಮಾನ್ಯ ಸದಸ್ಯರು - ಮುಕ್ಕಾಲು ವಾಸಿ ಗೆಸ್ಟ್ ಹೌಸ್ ಎಲ್ಲ ಹಾಗೆ ಇರಬೇಕು

ಶ್ರೀ ಆರ್. ಗುಂಡೂರಾವ್ - ಇಲ್ಲ, ಹಾಗೇನೂ ಇಲ್ಲ; ಬೇರೆ ಕಡೆ ನಾನು ಹೋಗಿ ನೋಡಿದ್ದೇನೆ. ಆದರೆ ಮಾನ್ಯ ಸದಸ್ಯರು ಹೇಳಿದಂಥ ಗೆಸ್ಟ್‌ಹೌಸ್‌ನಲ್ಲಿ ನಾನು ಯಾವತ್ತೂ ಉಳಿದಿಲ್ಲ. ಅದು ನನಗೆ ಗೊತ್ತಿಲ್ಲ. ಇನ್ನೊಂದು ವಿಚಾರವೇನೆಂದರೆ ಎಲ್ಲಾ ಡಿಸ್ಟ್ರಿಕ್ಟ್ ಹೆಡಕ್ವಾರ್ಟರ್ಸ್‌ನಿಂದ ನಾನ್‌ಸ್ಟಾಪ್ ಬಸ್‌ಗಳು ಬೆಂಗಳೂರಿಗೆ ಬರಬೇಕು ಎಂಬುದಾಗಿ ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ. Every day it should start at 7'o Clock and reach the Headquarters within a specific time. ಆ ತರಹ ಮಂಡ್ಯ, ತುಮಕೂರು, ಕೋಲಾರ, ಬೀದರ್ ಎಲ್ಲಾ ಜಿಲ್ಲಾ ಕೇಂದ್ರಗಳಿಂದ ನಾನ್‌ಸ್ಟಾಪ್ ಬಸ್‌ಗಳನ್ನು ಓಡಿಸುವುದಕ್ಕೆ ನಾವು ತೀರ್ಮಾನ ಮಾಡಿದ್ದೇವೆ. ಆದಷ್ಟು ಬೇಗ ಅದನ್ನು ಓಡಿಸುತ್ತೇವೆ. ಈ ಲಕ್ಷುರಿ ಬಸ್‌ಗಳ ವಿಚಾರವಾಗಿ ಹೇಳಬೇಕೆಂದರೆ 3-4 ತಿಂಗಳುಗಳ ಹಿಂದೆ ಈ ಲಕ್ಷುರಿ ಬಸ್‌ಗಳನ್ನು ತೆಗೆದು ಹಾಕಿದ್ದಾರೆ. ಅದನ್ನು ಪುನಃ ಇಂಟ್ರೊಡ್ಯೂಸ್ ಮಾಡುತ್ತೇವೆ. ಉತ್ತಮವಾದ ಲಕ್ಷುರಿ ಬಸ್‌ಗಳನ್ನು ಮತ್ತೆ ಓಡಿಸಬೇಕೆಂದು ಹೇಳಿ ನಮ್ಮ ಅನೇಕ ಮಾನ್ಯ ಸದಸ್ಯರುಗಳು ಹಾಗೂ ಸಾರ್ವಜನಿಕರು ನಮಗೆ ಮನವಿಯನ್ನು ಕೊಟ್ಟಿದ್ದಾರೆ. ಬೀದರ್‌ನಿಂದ ಬೆಂಗಳೂರು, ಮಂಗಳೂರುನಿಂದ ಬೆಂಗಳೂರು, ಬೆಳಗಾಂನಿಂದ ಬೆಂಗಳೂರಿಗೆ ಬರುವುದು ಬಹಳ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ. ಮಾನ್ಯ ಸದಸ್ಯರು ಈ ಬಗ್ಗೆ ಮುದುಕ ಹುಡುಗನಾಗುತ್ತಾನೆ, ಹುಡುಗ ಮುದುಕನಾಗುತ್ತಾನೆ ಎಂದು ಹೇಳಿದ್ದಾರೆ. ಇದರಲ್ಲಿ ಅರ್ಥವಿದೆ. ಮುದುಕ ಅದರಲ್ಲಿನ ಕಷ್ಟವನ್ನು ಸಹಿಸಿ ಹುಡುಗನಾಗುವುದಕ್ಕೆ ಸಾಧ್ಯತೆ ಇದೆ ಎಂದು ಹೇಳುತ್ತಾರೆ. ಆದರೆ ಹುಡುಗನಿಗೆ ಕಷ್ಟ ಸಹಿಸುವುದು ಸಾಧ್ಯವಿಲ್ಲ

ಮುದುಕನಾಗುತ್ತಾನೆ. ಅದೇನೇ ಇದ್ದರೂ ನಾವು ಪುನಃ ಈ ಲಕ್ಷುರಿ ಬಸ್‌ಗಳನ್ನು ಇಂಟ್ರೊಡ್ಯೂಸ್ ಮಾಡುತ್ತೇವೆ. ಇದರಲ್ಲಿ ಇಬ್ಬರು ಕುಳಿತುಕೊಳ್ಳಬೇಕಾದ ಜಾಗದಲ್ಲಿ 3 ಜನರು ಕುಳಿತುಕೊಳ್ಳುವುದರಿಂದ ತೊಂದರೆಯಿದೆ ಎಂದು ಕಪ್ಲೆಂಟ್ ಮಾಡಿದ್ದಾರೆ. ಅದರಲ್ಲಿ ನನ್ನಂತಹವರು, ಮಾನ್ಯ ಇಬ್ರಾಹಿಂರವರಂತವರು 3 ಜನರು ಕುಳಿತುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಮಾನ್ಯ ಒಡೆಯರಾಜ ಮತ್ತು ಮಾನ್ಯ ಕಕ್ಕಿಲ್ಲಾಯರವರಂತಹವರು 3 ಜನ ಕುಳಿತುಕೊಳ್ಳಬಹುದು. ಮಾನ್ಯ ಇಬ್ರಾಹಿಂ ಮತ್ತು ಮಾನ್ಯ ಮಳ್ಳೂರ್ ಆನಂದರಾವ್‌ರವರಂತಹವರು 3 ಜನ ಕುಳಿತುಕೊಂಡರೆ ಬಸ್ ಮುಂದಕ್ಕೇ ಹೋಗುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್ - ನಾನು, ನೀವು ಮತ್ತು ಇಬ್ರಾಹಿಂರವರು ಕುಳಿತರೆ ಬಸ್ ಸ್ಟಾರ್ಟ್ ಆಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು - ಸ್ವಾಮಿ, ತಾವು ಅದರಲ್ಲಿ ಕುಳಿತುಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಸಿ.ಎಂ. ಇಬ್ರಾಹಿಂ - ಬೆಂಗಳೂರಿನಿಂದ ಬೇಲೂರಿಗೆ ನಾನ್‌ಸ್ಟಾಪ್ ಬಸ್‌ಗಳನ್ನು ಪ್ರತಿದಿನ ಓಡಿಸಿದರೆ ಎಲ್ಲಾ ಸರಿಹೋಗುತ್ತದೆ.

ಶ್ರೀ ಆರ್. ಗುಂಡೂರಾವ್ - ಆ ತರಹ ಏನೂ ಇಲ್ಲ. ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾವು ಕಂಡಕ್ಟರುಗಳ ಮೇಲೆ ಕ್ರಮ ಇಟ್ಟಿದ್ದೇವೆ ಮತ್ತು ಡ್ರೈವರ್‌ಗಳ ಮೇಲೆ ಕ್ರಮ ಇಟ್ಟಿದ್ದೇವೆ. ಬೆಂಗಳೂರಿನಿಂದ ಮಂಗಳೂರಿಗೆ, ಬೆಂಗಳೂರಿನಿಂದ ಚಿತ್ರದುರ್ಗಕ್ಕೆ, ಬೆಂಗಳೂರಿನಿಂದ ತುಮಕೂರಿಗೆ ಹೋಗತಕ್ಕಂಥ ಬಸ್‌ಗಳಲ್ಲೇ ಆಗಲೀ, ಇನ್ನಿತರ ಕಡೆಗಳಿಗೆ ಹೋಗತಕ್ಕಂಥ ಬಸ್‌ಗಳಲ್ಲೇ ಆಗಲೀ ಡ್ರೈವರ್‌ಗಳು ಕುಡಿದು ಬಸ್‌ಗಳನ್ನು ಓಡಿಸುತ್ತಿದ್ದರೆ, ಪ್ರಯಾಣಿಕರು ಹತ್ತಿರದ ಪೋಲೀಸ್ ಸ್ಟೇಷನ್‌ಗೆ ತಿಳಿಸಿದ ಪಕ್ಷದಲ್ಲಿ ಅಂತಹವರ ಮೇಲೆ ನಾವು ಕಠಿಣ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಏಕೆಂದರೆ ಅಂತಹವರ ವಿಚಾರದಲ್ಲಿ ಕರುಣೆ ತೋರಿಸುವುದಕ್ಕೆ ಸಾಧ್ಯವಿಲ್ಲ. ಡ್ರೈವರ್‌ಗಳು ಒಂದು ಸೆಕೆಂಡ್ ಕಾಲ ಕಣ್ಣುಮುಚ್ಚಿ ಬಸ್ ಓಡಿಸಿದರೂ ಸಹ ಆಕ್ಸಿಡೆಂಟ್ಸ್ ಆಗುತವೆ. ಅದಕ್ಕೆ ಕಾರಣ ಕೊಡಬೇಕಾಗಿಲ್ಲ. ಅದು ಹೊಸ ಬಸ್ ಆಗಿದ್ದರೂ ಆಕ್ಸಿಡೆಂಟ್ ಆಗುತ್ತದೆ.

ಶ್ರೀ ಕೆ.ಎಂ. ತಿಮ್ಮಯ್ಯ - ಸ್ವಾಮಿ, ತಾವು ಲಕ್ಸ್ಯುರಿ ಬಸ್‌ಗಳನ್ನು ಓಡಿಸುತ್ತೇವೆ ಎಂದು ಹೇಳಿದ್ರಲ್ಲ, ಇರುವ ಬಸ್‌ಗಳನ್ನೇ ಲಕ್ಷುರಿ ಬಸ್ ಎಂದು ಮಾಡುತ್ತೀರಾ ಅಥವಾ ಹೊಸ ಬಸ್‌ಗಳನ್ನು ಹಾಕುತ್ತೀರಾ? ಅಥವಾ 'ಫಸ್ಟ್ ಕ್ಲಾಸ್ ಸಿಟ್ ಡೌನ್, ಸೆಕೆಂಡ್ ಕ್ಲಾಸ್ ಗೆಟ್ ಡೌನ್,' ಅಂತಹ ಬಸ್‌ಗಳನ್ನೇನಾದರೂ ಇಂಟ್ರೊಡ್ಯೂಸ್ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್ - ಆ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿ, ಉತ್ತರ ಕೊಡೋಣ. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಾ ಹೋದರೆ ನಿಧಾನವಾಗುತ್ತದೆ. ಆದ್ದರಿಂದ ಕುಡಿದು ಬಸ್ ಓಡಿಸತಕ್ಕಂಥ ಡ್ರೈವರ್‌ಗಳ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕೆಂದು

ನಾವು ತೀರ್ಮಾನ ಮಾಡಿದ್ದೇವೆ. ನಮ್ಮ ಇಲಾಖೆಗೆ ಸಂಬಂಧಪಟ್ಟಂಥ ಬೇರೆಯವರು ತಪ್ಪು ಮಾಡಿದರೂ ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಇಬ್ರಾಹಿಂರವರು ಕಳಿಸಿಕೊಟ್ಟಿರುವ 12 ಸಲಹೆಗಳನ್ನು ನಾವು ಪರಿಶೀಲನೆ ಮಾಡುತ್ತೇವೆ. ಆದ್ದರಿಂದ ಪ್ರಾಣವೇನೂ ಹೋಗುವುದಿಲ್ಲ. ನಾಳೆ ದಿವಸ ಅದನ್ನು ತನಿಖೆ ಮಾಡಬಹುದು. ಆದರೆ ಡ್ರೈವರ್‌ಗಳು ಕುಡಿದು ಒಂದು ಕ್ಷಣ ಕಣ್ಣು ಮುಚ್ಚಿದರೂ ಅದರಿಂದ ಪ್ರಯಾಣಿಕರಿಗೆ ಬಹಳ ತೊಂದರೆ ಇದೆ. ಅಂತಹ ಡ್ರೈವರ್ ಎಷ್ಟು ವರ್ಷ ಸರ್ವೀಸ್ ಮಾಡಿರಲಿ, ಅವನು ಯಾರ ಪ್ರಭಾವಕ್ಕೆ ಒಳಗಾಗಿರಲಿ, ಅಂತಹವರ ಮೇಲೆ ಕಠಿಣ ಕ್ರಮವನ್ನು ತೆಗೆದುಕೊಂಡು, ಆಗತಕ್ಕಂಥ ಅನಾಹುತಗಳನ್ನು ತಪ್ಪಿಸಬೇಕು ಎಂದು ನಾವು ಈಗಾಗಲೇ ನಮ್ಮ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಅದನ್ನು ಅವರು ಖಂಡಿತವಾಗಿಯೂ ಪಾಲನೆ ಮಾಡುತ್ತಾರೆ. ಈ ದಿಸೆಯಲ್ಲಿ ಈ ಅಧಿಕಾರಿಗಳು ತಪ್ಪು ಮಾಡಿದರೂ ಸಹ ಅಂತಹರವರನ್ನು ಕ್ಷಮಿಸತಕ್ಕಂಥ ಪ್ರಶ್ನೆ ಬರುವುದಿಲ್ಲ. ಅವರ ಮೇಲೆಯೂ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಯೋಚನೆ ಮಾಡಿದ್ದೇವೆ.

ಶ್ರೀ ಬಿ.ವಿ. ಕಕ್ಕಿಲ್ಲಾಯ - ಬಸ್‌ಗಳನ್ನು ದೂರ ಪ್ರಯಾಣಕ್ಕೆ ಕಳುಹಿಸಬೇಕಾದರೆ ಬ್ರೇಕ್ ಮತ್ತು ಟೈರ್‌ಗಳನ್ನು ಟೆಸ್ಟ್ ಮಾಡಿ ಕಳುಹಿಸಬೇಕು. ಇಲ್ಲದಿದ್ದರೆ ಪ್ರಯಾಣಿಕರಿಗೆ ತೊಂದರೆಯಾಗತಕ್ಕಂಥ ಸಂಭವ ಇರುತ್ತೆ.

ಶ್ರೀ ಆರ್. ಗುಂಡೂರಾವ್ - ಅದೂ ನಿಜ. ಬಸ್‌ಗಳ ಟೈರು ಮತ್ತು ಬ್ರೇಕು ಕಂಡೀಷನ್ ಆಗಿ ಇರಬೇಕಾದಂಥದು ಬಹಳ ಮುಖ್ಯವಾದದ್ದು. ಇದರಲ್ಲಿ ಡ್ರೈವರ್ ಬುದ್ಧಿವಂತನಾದರೆ ಇದು ಎರಡನೇ ಪ್ರಶ್ನೆಯಾಗುತ್ತದೆ. ಮುಖ್ಯವಾಗಿ ಇದರಲ್ಲಿ ಡ್ರೈವರ್‌ಗೆ ಜವಾಬ್ದಾರಿ ಜಾಸ್ತಿ ಇರಬೇಕು. ಅವರು ಈ ಬಗ್ಗೆ ಹೆಚ್ಚು ಜವಾಬ್ದಾರಿ ತೆಗೆದುಕೊಂಡರೆ ಆಗತಕ್ಕಂಥ ತೊಂದರೆಗಳನ್ನು ಕಡಿಮೆ ಮಾಡಬಹುದು. ಈ ಬಗ್ಗೆ ನಮ್ಮಲ್ಲಿ ಮೆಕಾನಿಕ್‌ಗಳು ಇದ್ದಾರೆ. ಅವರು ಎಲ್ಲಾ ಬಸ್‌ಗಳು ಹೊರಡುವ ಮೊದಲು ಬ್ರೇಕ್, ಟೈರ್ ಮತ್ತಿತರ ಪಾರ್ಟ್ಸ್‌ಗಳನ್ನೆಲ್ಲಾ ಚೆನ್ನಾಗಿ ಚೆಕ್-ಅಪ್ ಮಾಡಿ ಕಳಿಸಿಕೊಡುತ್ತಾರೆ. ಈ ಬಗ್ಗೆ ಹೆಚ್ಚಿನ ಸಿಬ್ಬಂದಿಯನ್ನು ಅಲ್ಲಿ ಒದಗಿಸಿಕೊಡುವುದಕ್ಕೆ ಸರ್ಕಾರ ಈಗಾಗಲೇ ಯೋಚನೆ ಮಾಡಿದೆ. ಅದನ್ನು ನಾವು ಗಮನದಲ್ಲಿಟ್ಟು ಕೊಂಡಿದ್ದೇವೆ.

ಮಾನ್ಯ ಅಧ್ಯಕ್ಷರೇ, ಇನ್ನು ಪ್ರೈವೇಟ್ ಬಸ್ಸುಗಳಿಗೆ ಯಾರೂ ಮೆಕ್ಯಾನಿಕ್ ಇರುವುದಿಲ್ಲ ಆ ಬಸ್ಸಿನ ಡ್ರೈವರ್ ಸ್ವಲ್ಪಮಟ್ಟಿಗೆ ಆತನೇ ಕೆಲವು ಸಣ್ಣಪುಟ್ಟ ನ್ಯೂನತೆಗಳನ್ನು ಸರಿಮಾಡಿಕೊಳ್ಳುತ್ತಾನೆ. ಇನ್ನು ಕೆಲವು ಸುಧಾರಣೆಗಳನ್ನು ಡ್ರೈವರ್-ಹಾಗೂ ಕಂಡಕ್ಟರ್‌ಗಳೇ ಜವಾಬ್ದಾರಿ ವಹಿಸಿಕೊಂಡು ಮಾಡಿಸಿ ಕೊಳ್ಳುತ್ತಾರೆ. ಅದೇನೆಂದರೆ ಬಸ್ಸುಗಳನ್ನು ಶುಚಿಮಾಡುವುದು, ಬಸ್ಸುಗಳನ್ನು ತೊಳೆಸುವುದು, ಇದೆಲ್ಲಾ ಆ ಸಂಬಂಧಪಟ್ಟ ಬಸ್ ಡ್ರೈವರ್ ಹಾಗೂ ಕಂಡಕ್ಟರ್ ಜವಾಬ್ದಾರಿಗೆ ಸೇರುತ್ತದೆ.

ಇನ್ನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಉದಾಹರಣೆಗೆ ವಿದೇಶಗಳಲ್ಲಿಯೂ ಈ ರೀತಿ ಇದೆ. ಯಾರೇ ಒಬ್ಬ ಸ್ನೇಹಿತರು ಯೂರೋಪ್ ದೇಶಕ್ಕೆ ಪ್ರವಾಸ ಹೋದಾಗ ನಮ್ಮ ಮೈಸೂರಿನವರೇ ಆದ ಒಬ್ಬರು ದೊಡ್ಡ ಹುದ್ದೆಯಲ್ಲಿದ್ದರು. He was participating in a dinner. Afterwards he too took wine. He was not prepared to go out of his house because there was no driver with him. Once a person is caught driving under the influence of alcohol, his licence will be permanently cancelled in foreign countries. There are no such rules here. Here also I am going to follow this rule strictly ರೂಲ್ಸ್ ಮಾಡುತ್ತೇವೆ. ಈಗಲೂ ಕೂಡ ಮೋಟಾರ್ ವೆಹಿಕಲ್ಸ್ ಆಕ್ಟ್ ಪ್ರಕಾರ ಕುಡಿಯಬಾರದೆಂದು ಕಾನೂನು ಜಾರಿಯಲ್ಲಿದೆ. ಆದರೆ ಅದನ್ನು ಅಷ್ಟು ಕಠಿಣವಾಗಿ ಬಳಸುತ್ತಿರಲಿಲ್ಲ. ಆದರೆ ಯಾವುದಾದರೂ ಪ್ರಕರಣಗಳು ಕೋರ್ಟಿಗೆ ಹೋದರೆ, ಕೋರ್ಟಿನ ತೀರ್ಮಾನ ಬರುವವರೆಗೆ ನಾವು ಆತನನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಸಿ.ಎಂ. ಇಬ್ರಾಹಿಂ - ಯಾರು ನೌಕರರು ಇದ್ದಾರೆ ಅವರು ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ. ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವವರು ಅಥವಾ ಆರ್ಡರ್ ಮಾಡುವವರು ಯಾರು ಇದ್ದಾರೆ ಅವರು ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್ - ಆರ್ಡ್ರ್ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇರೆ ವಿಷಯ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ತಡವಾದರೂ ತೆಗೆದುಕೊಳ್ಳಬಹುದು. ಆದರೆ, ಡ್ರೈವರ್ ತಪ್ಪುಮಾಡಿದರೆ ಬಸ್ಸಿನಲ್ಲಿ ಪ್ರಯಾಣ ಮಾಡುವ 50-60 ಜನರ ಪ್ರಾಣಕ್ಕೆ ಅಪಾಯ ಒದಗುತ್ತದೆ. ಆದ್ದರಿಂದ ಉದಾಹರಣೆಗೆ ಒಬ್ಬ ಬ್ರೇಕ್ ಇನ್ಸ್‌ಪೆಕ್ಟರ್ ಅಥವಾ ಆರ್.ಟಿ.ಓ. ಕುಡಿದರೆ ಅಥವಾ ಮಂತ್ರಿ ಕುಡಿದರೆ ಅದರಿಂದ ಯಾರ ಪ್ರಾಣಕ್ಕೂ ಅಪಾಯವಿಲ್ಲ. ಆದರೆ ಡ್ರೈವರ್ ಕುಡಿದಾಗ ನಿಮಗೆ ತೊಂದರೆಯಾಗುತ್ತದೆ. ಆದ್ದರಿಂದ ಆಕ್ಸಿಡೆಂಟ್ಸ್ ತಪ್ಪಿಸಬೇಕಾದರೆ ಉಗ್ರವಾದ ಕಾನೂನನ್ನು ಜಾರಿಗೆ ತರಬೇಕಾಗುತ್ತದೆ ಹಾಗೂ ಸಾಕಷ್ಟು ವಿರೋಧವನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾದರೆ ಪೋಲೀಸ್ ಇಲಾಖೆ ಸಹಾಯ್ಯ ಪಡೆಯಬೇಕು.

ಇನ್ನು ಸಾಮಾನ್ಯವಾಗಿ ಲಾರಿಗಳ ಕಾಟ ಜಾಸ್ತಿಯಾಗಿದೆ. ಉದಾಹರಣೆಗೆ ಬೆಂಗಳೂರು, ಬೊಂಬಾಯಿ ಮಾರ್ಗಗಳಲ್ಲಿ ವಿಪರೀತ ಆಕ್ಸಿಡೆಂಟುಗಳು ನಡೆಯುತ್ತವೆ. ನಾನು ಆಗಲೇ ಹೇಳಿದ ನಾನಾ ಕಾರಣಗಳಿಂದ ಆಕ್ಸಿಡೆಂಟುಗಳು ಆಗುತ್ತವೆ. ಇನ್ನು ಪಿಡಬ್ಲ್ಯೂಡಿ ಯವರು ರಸ್ತೆಗಳನ್ನು ಮಾಡುವುದಕ್ಕೆ ರೋಡುಗಳು ಅಗೆದು ಅರ್ಧಂಬರ್ಧ ಮಾಡಿರುತ್ತಾರೆ. ಇಲ್ಲವಾದರೆ

ರೋಡ್ ಬ್ಲಾಕ್‌ಗಳಲ್ಲಿ ನಡುರಸ್ತೆಯಲ್ಲಿ ನಿಲ್ಲಿಸಿರುತ್ತಾರೆ ಅಥವಾ ಟಾರ್ ಇಂಜಿನ್ ನಿಲ್ಲಿಸುತ್ತಾರೆ, ಸಲಾಕೆಗಳನ್ನು ಬಿಸಾಡಿರುತ್ತಾರೆ ಇದರಿಂದಲೂ ಕೂಡ ಅನೇಕ ಆಕ್ಸಿಡೆಂಟುಗಳು ನಡೆಯುತ್ತವೆ. ಆದ್ದರಿಂದ ಅವುಗಳನ್ನು ಯಾರು ಮಾಡಿಸುತ್ತಾರೆ, ಆ ಕಂಟ್ರಾಕ್ಟರುಗಳು ಇದನ್ನು ಜವಾಬ್ದಾರಿ ವಹಿಸಿ ನೋಡಿಕೊಳ್ಳಬೇಕಾಗುತ್ತದೆ. ಇವರಿಗೆ ಸರಿಯಾದ ಆದೇಶ ಕೊಟ್ಟಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಆ ಸಂದರ್ಭಗಳಲ್ಲಿ ರೋಡ್ ಲೈಟ್ ಹಾಕುವುದಿಲ್ಲ. ವಾಹನಗಳನ್ನು ಓಡಿಸುವವರು ಡಿಪ್ ಅಂಡ್ ಡಿಮ್ ಮಾಡುವಾಗ ಹತ್ತಿರ ಬಂದಾಗ ಲೈಟ್ ಹಾಕಿದರೆ ಅಲ್ಲಿ ಜೋರು ಮಾಡುತ್ತಾರೆ. ಇದರಿಂದ ಎದುರು ಬರುವ ವಾಹನಗಳಿಗೆ ತೊಂದರೆಯಾಗುತ್ತದೆ. ಇನ್ನು ಕೆಲವು ಸಂದರ್ಭಗಳಲ್ಲಿ ರೋಡುಗಳಲ್ಲಿ ಪೈಪ್‌ಗಳನ್ನು ಬಿಸಾಡಿರುತ್ತಾರೆ. ಅದರಿಂದ ಎಷ್ಟೋ ಜನ ನಮ್ಮ ನಿಮ್ಮಂತವರು ಪ್ರಾಣವನ್ನು ಕೊಟ್ಟಿದ್ದಾರೆ. ಅದರಿಂದ ಪಿಡಬ್ಲ್ಯೂಡಿಯವರು ಹಾಗೂ ಕಂಟ್ರಾಕ್ಟರುಗಳಿಗೂ ರೋಡ್ ರಿಪೇರಿಯಾಗುವಾಗ ಕಾಷನ್ ಲೈಟ್ ಹಾಕದೆ ಇದ್ದರೆ, ಆ ಕಂಟ್ರಾಕ್ಟರ್ ಹಾಗೂ ಸಂಬಂಧಪಟ್ಟ ಇಂಜಿನಿಯರ್ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇದು ನಾವೆಲ್ಲಾ ಪ್ರಾಕ್ಟಿಕಲ್ ಆಗಿ ನೋಡಿರುವ ವಿಚಾರವೇ. ಒಂದೆರಡು ದಿವಸಗಳಲ್ಲಿ ಇಂತಹ ತಾಪತ್ರಯಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಇನ್ನೂ ಸೈನ್‌ಬೋರ್ಡ್‌ಗಳನ್ನು ಅನೇಕ ಸಾರಿ ಹಾಕಿರುವುದಿಲ್ಲ. ಇದೆಲ್ಲಾ ನಮ್ಮ ಅವಗಾಹನೆಗೆ ಬಂದಿದೆ. ಇನ್ನು ಅಂಕಿ ಅಂಶಗಳನ್ನು ತೆಗೆದುಕೊಂಡರೆ ನಮ್ಮ ಕರ್ನಾಟಕದಲ್ಲಿಯೂ ಆಕ್ಸಿಡೆಂಟ್ಸ್ ಕಡಿಮೆ ಇದೆ. ಬೇರೆ ನಾಲ್ಕೈದು ರಾಜ್ಯಗಳಲ್ಲಿ ತೆಗೆದುಕೊಂಡರೆ ಉದಾಹರಣೆಗೆ ಬೊಂಬಾಯಿ, ಕಲ್ಕತ್ತಾ ಇವುಗಳನ್ನೆಲ್ಲಾ ನೋಡಿದರೆ ನಮ್ಮ ಭಾಗದಲ್ಲಿ ಆಕ್ಸಿಡೆಂಟ್ಸ್ ಕಡಿಮೆಯಾಗಿದೆ. ತಮಗೆ ಈಗ ಹೇಳಿದ ಪ್ರಕಾರ ಅಹಮದಾಬಾದ್ 2.25 ಪರ್ಸೆಂಟ್ ಒಂದು ಲಕ್ಷ ಕಿಲೋಮೀಟರಿಗೆ, ಗುಜರಾತ್ 0.35, ತಮಿಳುನಾಡು 2.30, ಮಹಾರಾಷ್ಟ್ರ 0.41, ರಾಜಾಸ್ಥಾನ 0.31, ಕೇರಳ 2.20 ಬಾಂಬೆ ತೆಗೆದುಕೊಂಡರೆ 9.96, ಅದು ದೊಡ್ಡ ನಗರ. ನಮ್ಮ ಕರ್ನಾಟಕದಲ್ಲಿ 1974-75ರಲ್ಲಿ 0.32, 76-77ರಲ್ಲಿ, 3.32, 77-78ರಲ್ಲಿ 0.35, ಬೇರೆ ದೇಶಕ್ಕೆ ಹೋಲಿಸಿದರೆ ನಮ್ಮ ದೇಶದಲ್ಲಿ ಕಡಿಮೆಯಾಗುತ್ತಿದೆ. ಇದರಲ್ಲಿ ಏನಾದರೂ ವ್ಯತ್ಯಾಸವಿದ್ದರೆ ಮಾನ್ಯ ಸದಸ್ಯರು ಅದರ ಬಗ್ಗೆ ಕೇಳಿದರೆ ನಾನು ಎಲ್ಲವನ್ನೂ ಕ್ಲಾರಿಫೈ ಮಾಡುತ್ತೇನೆ, ಹಾಗೂ ಅವರಿಗೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ನಾನು ತಯಾರಿದ್ದೇನೆ. ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅವೆಲ್ಲದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ಕೆಲವು ವಿಚಾರಗಳನ್ನು ಇನ್ನು 10-15 ದಿವಸಗಳಲ್ಲಿ ಬದಲಾವಣೆ ಮಾಡಬೇಕೆಂದು ತೀರ್ಮಾನ ಕೈಗೊಂಡಿದ್ದೇವೆ.

ಈಗಾಗಲೇ ಇದಕ್ಕೆ ಸಂಬಂಧಪಟ್ಟ ಆರ್ಡರ್ ಹೋಗಿದೆ. ಜುಲೈ 31ರೊಳಗೆ ಬಹುಶಃ ನಾಲಕ್ಕು ವರ್ಷಕ್ಕೆ ಮೇಲ್ಪಟ್ಟು ಯಾವ ಅಧಿಕಾರಿಯೂ ಒಂದೇ ಸ್ಥಳದಲ್ಲಿ ಕೆಲಸ ಮಾಡಬಾರದು ಎನ್ನುವ ತೀರ್ಮಾನವನ್ನು ತೆಗೆದುಕೊಂಡು ಈ ಬಗ್ಗೆ ಆದೇಶವನ್ನು ಕೊಟ್ಟಿದ್ದೇವೆ.

ಮತ್ತೆ ನಾವು ಎಲ್ಲರಿಗೂ ಅನುಕೂಲವಾಗುವಂತೆ ಬಸ್ಸುಗಳನ್ನು ಓಡಿಸಬೇಕು ಎನ್ನುವ ಉದ್ದೇಶದಿಂದ, ನಮ್ಮಲ್ಲಿ ಕಂಡು ಬರುವ ನ್ಯೂನತೆಗಳನ್ನು ಸರಿಪಡಿಸಿಕೊಳುವುದಕ್ಕೆ ಸದಸ್ಯರುಗಳನ್ನು ಸಭೆ ಸೇರಿಸಿ ಅವರ ಸಲಹೆಗಳನ್ನು ಪಡೆದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸೂಕ್ತ ಗಮನ ಕೊಟ್ಟಿದ್ದೇವೆ. ಹಾಗೆಯೇ ಬೆಂಗಳೂರಿನ ಸದಸ್ಯರನ್ನು ಕರೆದು ಸಭೆ ಸೇರಿಸಿ, ಬೆಂಗಳೂರಿನ ಸಮಸ್ಯೆಯ ಬಗ್ಗೆ ಚರ್ಚೆ ಮಾಡಿದ್ದೇವೆ. ಅವರ ಉತ್ತಮವಾದ ಸಲಹೆಗಳನ್ನು ಆದಷ್ಟೂ ಶೀಘ್ರವಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಮಾತ್ರ ಹೇಳುತ್ತೇನೆ. ಇನ್ನು ರಾಷ್ಟ್ರೀಕರಣದ ಬಗ್ಗೆ ಮಾನ್ಯ ಬಸಪ್ಪನವರು ಹೇಳಿದರು. ನಮ್ಮ ಬಾಂಬೆ ಕರ್ನಾಟಕ ಅಂದರೆ, ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳಲ್ಲಿ ಪೂರ್ತಿಯಾಗಿ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದ್ದು ಆ ಭಾಗದಲ್ಲಿ ನಮ್ಮ ಕೆ.ಎಸ್.ಆರ್.ಟಿ.ಸಿ.ಗೆ ಹೆಚ್ಚು ಲಾಭ ಬರುತ್ತಿದೆ. ಉಳಿದ ಕಡೆಗಳಲ್ಲಿ ನ್ಯಾಷನಲೈಸ್ ಮಾಡದೆ ಇರುವಂಥ ಭಾಗದಲ್ಲಿ ನಮಗೆ ಸ್ವಲ್ಪ ನಷ್ಟ ಬರುತ್ತಿದೆ. ಈ ದೃಷ್ಟಿಯಿಂದ ಮೊದಲು ಬಸ್ಸುಗಳು ಓಡಾಡುವ ಕಡೆಗಳಲ್ಲಿ ಸರಿಯಾಗಿ ಬಸ್ಸುಗಳು ಓಡಿಸುವುದಕ್ಕೆ ಪ್ರಯತ್ನ ಪಟ್ಟು, ನಂತರ ಹೊಸದಾಗಿ ರಾಷ್ಟ್ರೀಕರಣ ಮಾಡುವಂತ ಯೋಜನೆಯನ್ನು ನಾವು ಪರಿಶೀಲನೆ ಮಾಡಬೇಕು. ಒಂದೇ ಸಾರಿಗೆ ಎಲ್ಲವನ್ನು ರಾಷ್ಟ್ರೀಕರಣ ಮಾಡುವುದಕ್ಕೆ ಹೋದರೆ ಸರ್ಕಾರ ಮತ್ತು ಕಾರ್ಪೋರೇಷನ್ ಅನೇಕ ಟೀಕೆ ಟಿಪ್ಪಣಿಗಳಿಗೆ ಗುರಿಯಾಗಬೇಕಾಗುತ್ತದೆ, ಮತ್ತು ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಹಣದ ಕೊರತೆ ಬರುತ್ತದೆ. ಈ ದೃಷ್ಟಿಯಿಂದ ಸದ್ಯಕ್ಕೆ ಇರುವ ಮಾರ್ಗದಲ್ಲಿ ಸರಿಯಾಗಿ ಬಸ್‌ಗಳನ್ನು ಓಡಿಸುವುದಕ್ಕೆ ಪ್ರಯತ್ನ ಪಟ್ಟು ಮುಂದೆ ಇದರ ಬಗ್ಗೆ ಯೋಚನೆ ಮಾಡಿ ತೀರ್ಮಾನ ಕೈಗೊಳ್ಳಬೇಕು. ಇದು ಬಹಳ ದೀರ್ಘವಾದ ಸಮಸ್ಯೆ. ಇದನ್ನು ನಾವು ಆಳವಾಗಿ ಯೋಚನೆ ಮಾಡಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ ಇದಕ್ಕೆ ಇನ್ನೂ ಸ್ವಲ್ಪ ಸಮಯಬೇಕಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಬೆಂಗಳೂರು ಬಿ.ಟಿ.ಎಸ್. ಬಗ್ಗೆ, ಇದನ್ನು ಕೆಲವು ಸದಸ್ಯರು ಕಾರ್ಪೋರೇಷನ್‌ಗೆ ಕೊಡುವಂತ ವಿಚಾರದಲ್ಲಿ, ಕೊಡುವುದು ಬೇಡ ಎನ್ನುವ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ನಮ್ಮ ಉದ್ದೇಶವಾದರೂ ಇಷ್ಟೆ. ಅನೇಕ ಕಡೆ ಕಾರ್ಪೋರೇಷನ್‌ಗಳೇ ಈ ಬಸ್ಸುಗಳನ್ನು ಓಡಿಸುತ್ತಿವೆ. ಆದ್ದರಿಂದ ಇಲ್ಲಿಯೂ ಏಕೆ ಇದನ್ನು ನಡೆಸಬಾರದೆಂದು ಒಂದು ಆಲೋಚನೆ ಇತ್ತು. ಆದರೆ ಇದು ಅಷ್ಟು ಸರಿಯಾಗಿ ಕಾಣಲಿಲ್ಲ. ಸದ್ಯಕ್ಕೆ ನಮ್ಮ ಬಿ ಟಿ ಎಸ್ ನ್ನೇ ಒಂದು ಪ್ರತ್ಯೇಕ ಡಿವಿಜನ್ ಮಾಡಿ ಇದಕ್ಕೆ ಇನ್ನೂ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ಇದ್ದೇವೆ. ಬೆಂಗಳೂರು ಟ್ರಾನ್ಸ್‌ಪೋರ್ಟ್ ಸರ್ವೀಸ್ ಎಂದು ಹೆಸರು ಕೊಟ್ಟು ಇದರಲ್ಲಿ ಇನ್ನೂ ದಕ್ಷತೆ ಹೆಚ್ಚುವಂತೆ ಇಲಾಖೆಯನ್ನೇ ಪುನರ್‌ರಚನೆ ಮಾಡಿ ಬೆಂಗಳೂರಿನ ನಾಗರೀಕರಿಗೆ ಅನುಕೂಲ ಮಾಡಬೇಕು ಎಂದು ನಮ್ಮ ಆಲೋಚನೆ ಇದೆ. ದಿನೇ ದಿನೇ ಬೆಂಗಳೂರು ನಗರ ಬೆಳೆಯುತ್ತಿದೆ. ಬೆಂಗಳೂರಿನಲ್ಲಿ ಒಂದು ದಿವಸ ನಮ್ಮ ಬಸ್ಸುಗಳು ನಿಂತುಹೋದರೆ

ಬೆಂಗಳೂರಿನ ಜನ ಜೀವನವೇ ಅಲ್ಲೋಲಕಲ್ಲೋಲ ಆಗುತ್ತದೆ. ಬಿ ಇ ಎಲ್, ಹೆಚ್ ಎಂ ಟಿ, ಐ ಟಿ ಐ ಇಂಥ ನಾಲಕ್ಕು ದೊಡ್ಡ ಫ್ಯಾಕ್ಟರಿಯನ್ನು ಬಿಟ್ಟರೆ ಇನ್ನುಳಿದ ಸಣ್ಣ ಸಣ್ಣ ಕೈಗಾರಿಕೆಗಳವರು ತಮ್ಮ ನೌಕರರಿಗೆ ನಮ್ಮ ಒಂದು ಸಾರಿಗೆ ವ್ಯವಸ್ಥೆಯನ್ನೇ ಉಪಯೋಗಿಸಿಕೊಳ್ಳುತ್ತಿದ್ದಾರೆ. ನಮ್ಮ ನೌಕರರು ಒಂದು ಸಾರಿ ಮುಷ್ಕರ ಮಾಡಿದರೆ ಈ ಕಾರ್ಖಾನೆಗಳಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟ ಆಗುತ್ತದೆ. ಏಕೆಂದರೆ, ಬಸ್ಸುಗಳಿಲ್ಲದೆ, ನೌಕರರು ಯಾರೂ ಕಾರ್ಖಾನೆಗೆ ಹೋಗುವಂತಿಲ್ಲ, ನೌಕರರು ಯಾರು ಒಂದು ಕಡೆ ವಾಸ ಮಾಡುತ್ತಿರುವುದಿಲ್ಲ. ಒಬ್ಬರು ಜಯನಗರದಲ್ಲಿದ್ದರೆ ಇನ್ನೂ ಕೆಲವರು ರಾಜಾಜಿನಗರ ಮತ್ತು ಕೆಲವರು ಇಂದಿರಾನಗರದಲ್ಲಿ ಇರುತ್ತಾರೆ. ಆದ್ದರಿಂದ ಒಂದು ದಿವಸ ಬಿ ಟಿ ಎಸ್ ಇಲ್ಲವೆಂದರೆ ಇವರಿಗೆಲ್ಲ ಬಹಳ ತೊಂದರೆಯಾಗುತ್ತದೆ. ಇವೆಲ್ಲಾ ತೊಂದರೆಗಳಿಗೆ ನಾವು ಪರಸ್ಪರ ಕುಳಿತುಕೊಂಡು ಚರ್ಚೆ ಮಾಡಬೇಕೇ ಹೊರತು ಹಾಗೆಯೇ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಬಸ್ಸುಗಳು ಆಟೋರಿಕ್ಷಾಗಳು ನಿಂತುಹೋದರೆ ಬಹಳ ಕಷ್ಟ. ಎಷ್ಟೋ ಜನ ಮದುವೆಗಳಿಗೆ ಪೂಜೆ ಪುನಸ್ಕಾರಗಳಿಗೆ, ಆಸ್ಪತ್ರೆಗಳಿಗೆ, ಶಾಲೆಗಳಿಗೆ, ಮಸೀದಿಗೆ ಹೋಗಬೇಕಾಗಿರುತ್ತದೆ. ಬಸ್ಸಿಲ್ಲದಿದ್ದರೆ, ಆರೆ ಕ್ಯಾ ಹೋಗಯ ಎಂದು ಹೇಳುವುದಕ್ಕೆ ಶುರು ಮಾಡುತ್ತಾರೆ. ಈ ದೃಷ್ಟಿಯಿಂದ ಇದು ಬೇರೆ ಸಮಸ್ಯೆಯ ಹಾಗೆ ಅಲ್ಲ. ಈ ಎಲ್ಲಾ ದೃಷ್ಟಿಯಿಂದ ನಮ್ಮ ಇಲಾಖೆಯಲ್ಲಿ ಕಾರ್ಯದಕ್ಷತೆ ಹೆಚ್ಚಬೇಕು. ಇದಕ್ಕೆ ನಾವು ಎಲ್ಲಾ ಕಠಿಣವಾದ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹೇಳುತ್ತೇನೆ.

ಜಿಲ್ಲಾ ಕೇಂದ್ರಗಳಿಂದ ನಾನ್‌ಸ್ಟಾಪ್ ಬಸ್ಸುಗಳನ್ನು ಓಡಿಸುವುದು ಮತ್ತು ತಾಲ್ಲೂಕು ಹೆಡ್-ಕ್ವಾಟರ್ಸ್‌ಗಳಿಂದ ಎಕ್ಸ್‌ಪ್ರೆಸ್ ಬಸ್ಸುಗಳನ್ನು ಓಡಿಸುವುದಕ್ಕೆ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ಹಾಗೆಯೇ ನಮ್ಮ ಕಾರ್ಯ ಹೆಚ್ಚಾಗಿ ನಡೆಯಬೇಕಾದರೆ ಎಲ್ಲರ ಸಹಕಾರ ಮುಖ್ಯ.

ಶ್ರೀ ಸಿ.ಎಸ್. ಇಬ್ರಾಹಿಂ - ನೀವು ಅಲ್ಲಿಯ ತನಕ ಮಂತ್ರಿಯಾಗಿ ಉಳಿದರೆ ಸಾಕು.

ಶ್ರೀ **ಆರ್. ಗುಂಡೂರಾವ್** - ಜನತಾಪಕ್ಷದವರು ಗೆದ್ದಿದರೆ ನೀವು ಈ ಸಾರಿಗೆ ಇಲಾಖೆಯ ಮಂತ್ರಿಗಳಾಗಿರುತ್ತಿದ್ದೀರಿ. ಆದರೆ ನಿಮ್ಮ ಪಕ್ಷದವರು ತಿಳಿದುಕೊಂಡಿದ್ದು ತಪ್ಪಾಯಿತು. ಹಿಂದೆ ಮಹಮ್ಮದಾಲಿಯವರು ಇದ್ದರು. ಈಗ ನಾನು ಬಂದಿದ್ದೇನೆ.

ಶ್ರೀ ಸಿ.ಎಂ. ಇಬ್ರಾಹಿಂ - ನಾನು ಮುಖ್ಯಮಂತ್ರಿಯಾಗುತ್ತಾ ಇರಲಿಲ್ಲವೇ. ಅದು ನಿಮಗೆ ಹೇಗೆ ಗೊತ್ತು?

ಶ್ರೀ **ಆರ್. ಗುಂಡೂರಾವ್** - ಇರಲಿ, ನಾನು ಯಾವ ಒಂದು ಸ್ಥಾನಕ್ಕೆ ಆಸೆ ಪಟ್ಟು ಬಂದವನಲ್ಲ. ಯಾರ ಪ್ರಭಾವಕ್ಕೆ ಒಳಗಾಗಿ ನಾನು ಕೆಲಸ ಮಾಡುತ್ತಿಲ್ಲ. ಮತ್ತು ಯಾರಿಗೂ ಹೆದರಿ ಕೆಲಸ ಮಾಡುತ್ತಿಲ್ಲ. ನಿಷ್ಪಕ್ಷಪಾತದಿಂದ ಎಲ್ಲಾ ಕೆಲಸಗಳನ್ನು ಜನಗಳಿಗೆ

ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಇರುತ್ತೇನೆ. ಇಷ್ಟೊಂದು ಭರವಸೆಗಳನ್ನು ಮಾನ್ಯ ಸದಸ್ಯರುಗಳಿಗೆ ಕೊಟ್ಟು ನಮ್ಮ ಬೇಡಿಕೆಯನ್ನು ಮಾನ್ಯ ಸದಸ್ಯರೆಲ್ಲರು ಸರ್ವಾನುಮತದಿಂದ ಅನುಮೋದನೆ ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

## ಕಾಂಗ್ರೆಸ್ ಸರ್ಕಾರದ ಸಿಂಧುತ್ವದ ಬಗ್ಗೆ ನಡೆದ ಚರ್ಚೆ

1979ರ ದ್ವಿತೀಯಾರ್ಧದ ಆರು ತಿಂಗಳಷ್ಟು ಕಾಲ ಆರ್. ಗುಂಡೂರಾವ್ ಅವರು ಶ್ರೀಮತಿ ಇಂದಿರಾಗಾಂಧಿಯವರ ಬೆಂಬಲಕ್ಕೆ ನಿಂತು ಕರ್ನಾಟಕದಲ್ಲಿ ಪ್ರತಿಪಕ್ಷದ ಸಾಲಿನಲ್ಲಿ ಸೇರಿ ಬಿಟ್ಟಿದ್ದರು. ಕಾಂಗ್ರೆಸ್‌ನ ಬಹುಮತದ ಶಾಸಕರು ದೇವರಾಜ್ ಅರಸರು ಹೊಸದಾಗಿ, ರಚಿಸಿದ ಕರ್ನಾಟಕ ಕಾಂಗ್ರೆಸ್‌ನ್ನು ಬೆಂಬಲಿಸುವ ತೀರ್ಮಾನ ತೆಗೆದುಕೊಂಡಿದ್ದರು. ಕಾಂಗ್ರೆಸ್ ಪಕ್ಷದ್ದಾಗಿದ್ದ ಅರಸ್‌ರ ಸಂಪುಟ ಮತ್ತು ಸರ್ಕಾರ, ಇಂದಿರಾ ವಿರೋಧಿಯಾಗಿತ್ತು.

ಸೆಪ್ಟೆಂಬರ್ 18 ರಂದು ರಾಜ್ಯ ವಿಧಾನಸಭೆ ಸೇರಿ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿದ್ದ ಅರ್ಲ್ ಮೌಂಟ್ ಬ್ಯಾಟನರ ನಿಧನಕ್ಕೆ ಸಂತಾಪ ಸೂಚಿಸಿದ ಬಳಿಕ, ದೇವರಾಜ ಅರಸ್‌ರ ಕರ್ನಾಟಕ ಕಾಂಗ್ರೆಸ್ ಸರಕಾರದ 'ವ್ಯಾಲಿಡಿಟಿ' ಬಗ್ಗೆ ಪ್ರಸ್ತಾಪಿಸಲ್ಪಟ್ಟು, ಪರ ವಿರೋಧ ಚರ್ಚೆ, ಚಕಮಕಿಗಳಾದವು. ಪ್ರತಿಪಕ್ಷದಲ್ಲಿ ಗುಂಡೂರಾಯರದು ಅದು ಮೊದಲ ಅನುಭವ. ಹಾಗೆಯೇ ತಮ್ಮ ರಾಜಕೀಯ ಗುರುವಿನೆದರು ಪ್ರಮುಖ ವಿರೋಧಿ ಪಕ್ಷದ ನಾಯಕನಾಗಿ ಹೊಣೆ ಹೊತ್ತ ಮುಜುಗರವೂ ಇತ್ತು.

ಮೊದಲು, ಎಸ್.ಆರ್. ಬೊಮ್ಮಾಯಿಯವರು ಕ್ರಿಯಾಲೋಪ ಎತ್ತಿ, 'ಈ ಸರ್ಕಾರ ಸಂವಿಧಾನಬದ್ಧವಾಗಿ ರಚಿತವಾಗಿಲ್ಲ, ಯಾಕೆಂದರೆ ಇಲ್ಲಿರುವ ಬಹುತೇಕ ಶಾಸಕರು ಕಾಂಗ್ರೆಸ್ (ಐ) ಟಿಕೇಟ್‌ನಲ್ಲಿ ಗೆದ್ದು ಬಂದವರು. ಆದ್ದರಿಂದ ಈ ಸದನವು ಸಂವಿಧಾನಬದ್ಧವಾಗಿ ರೂಪುಗೊಂಡಿಲ್ಲ' ಎಂದು ವಾದ ಸರಣಿ ಮಂಡಿಸಿದರು.

ಅರಸ್ ಬೆಂಬಲಿಗ ಶಾಸಕರುಗಳೆಲ್ಲಾ ಕ್ರಿಯಾಲೋಪವನ್ನು ವಿರೋಧಿಸಿದರು. ಬೊಮ್ಮಾಯಿಯವರ ಪ್ರಸ್ತಾಪಕ್ಕೆ ಸಚಿವ ಕೆ.ಎಚ್. ರಂಗನಾಥ್ ಮತ್ತೊಂದು ಕ್ರಿಯಾಲೋಪ ಎತ್ತಿದರು. ಈ ಹಂತದಲ್ಲಿ ಕೆಲವು ಸದಸ್ಯರುಗಳು ಒಟ್ಟಿಗೆ ಎದ್ದು ನಿಂತು ಮಾತನಾಡಲು ಪ್ರಾರಂಭಿಸಿದಾಗ, ಒಟ್ಟಿಗೇ ಮಾತನಾಡಿದರೆ ಅದು ರೆಕಾರ್ಡ್ ಆಗುವುದಿಲ್ಲವೆಂದು ಸಭಾಧ್ಯಕ್ಷರು ಸೂಚಿಸಿದರು.

**ಆರ್. ಗುಂಡೂರಾವ್** : ತಾವು ಬೊಮ್ಮಾಯಿಯವರನ್ನು ಅವರು ವಿಷಯ ಏನು ಹೇಳಬೇಕೆಂದಿದ್ದಾರೋ, ಅದನ್ನು ಹೇಳುವುದಕ್ಕೆ ಕರೆದಿದ್ದೀರಿ. ತಾವು ಅವರಿಗೆ ಮಾತನಾಡುವುದಕ್ಕೆ ಅಪ್ಪಣೆ ಕೊಡಿಸಿದ್ದೀರಿ. ಅದನ್ನು ಅವರು ಹೇಳಿ ಮುಗಿಸುವವರೆಗೂ ಯಾವ ಸದಸ್ಯರಿಗೂ ಇಂಟರಪ್ಟ್ ಮಾಡುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ.

**ಕೆ.ಎಚ್. ರಂಗನಾಥ್** - ಮಾನ್ಯ ಸದಸ್ಯರಾದ ಗುಂಡೂರಾಯರು ಏನು ಹೇಳಿದರು. ಅದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದಾರೆ.

---

ವಿ.ಸ.ನ. ದಿನಾಂಕ: 18-9-1979

**ಆರ್. ಗುಂಡೂರಾವ್** - ನನ್ನನ್ನು ಸದಸ್ಯರು ಎಂದು ಹೇಳಿದರೆ, ನೀವು ಮಂತ್ರಿಯೂ ಅಲ್ಲ. Since the Hon. Minister is calling me as Member of this house, I will also call him as member... If you give respect, then only you will get respect from the opposition.

ಸಂವೈಧಾನಿಕ ವಾದ-ವಿವಾದ ಮುಂದುವರಿಯಿತು.

Mr. Speaker: The Hon. member of this House Sri Bommai, has rasied a question and that question will have to be decided with abundant caution and care and it cannot be so lightly treated. After all even the memorandum which is submitted by my part to the Governer is pending before him. I am repeating what he has said `Mr. Chief Minister Sri Devaraj Urs was summoned by the Governor and it was reported that he has agreed to that his majority in this House.' We are pressing this point because when we saw the agenda, we were surprised to see that a plain agenda like the "Government business" has appeared. When the Constitutional head has asked him to test his majority. whether the proceedings are reduced to writing or not, that proceeding is binding on the Chief Minister. When the Chief Minister was called by H.E. Governor and when the matter was discussed in pursuance of the memorandum and also the representation made by Sri. Bommai, that proceeding is binding. The Hon. Chief Minister is bound to act, Otherwise, I am afraid. I have to use the words most hesitatingly that the Chief Minister is misguiding the House and he may attempt to commit breach of privilege of this House by misguiding the House. We are entitled to know what direction was given to the Chief Minister by the Governor on our memorandum. The people of Karnataka and the entire country is looking towards Bangalore, this august house. The constitutional propriety requires that he will have to test his majority in this august House in the form of a motion under the Rules of procedure. He has to bring in a motion of confidence;

until then the entire Government is not entitled to transact any business in this House. After all we are all responsible people. The people sitting outside are watching the proceedings of this House and they are eager to know how the democracry is functioning in this House. Here is a person belonging to the Congress presiding over the group and he has not even addressed a letter to the Speaker. In view of this the Government is not properly constituted, the sitting of this House is not proper and the recognition of the party is quite improper and illegal. In view of this, the Government cannot be allowed by the Hon. Speaker to conduct the proceedings of this House as this House is not legally constituted.

(Several hon. members stand up to speak)

(Interruptions)

SRI D. DEVARAJ URS - I have been sitting quietly without talking a word. I am sure the hon. members on the opposite side who talked about the constitution should not talk simultaneously?

SRI B. SHIVANNA - We want to know who is the leader of this House. We have raised a fundamental question.

MR. SPEAKER - The entire House is going to decide this matter. The final decision of this House will be binding on all of us. The Hon. Chief Minister will speak.

SRI S.M. SHEERANALI CHANDRASEKHAR - The Hon. Speaker cannot curtail my right to speak.

(Again some hon. members stood up to speak)

SRI D. DEVARAJ URS.- Is this the way to conduct the proceedings of this House in a democratic way when I have been called upon to speak by the Speaker?

ಶ್ರೀ **ಆರ್. ಗುಂಡೂರಾವ್** - ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀಮಾನ್ ಬೊಮ್ಮಾಯಿಯವರು ಕೆಲವು ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದಾರೆ. ಸರ್ಕಾರದ ಬಗ್ಗೆ ಕೂಡ ಕೆಲವು ವಿಚಾರಗಳನ್ನು ತಮ್ಮ ಮುಂದಿಟ್ಟಿದ್ದಾರೆ. ಏತಕ್ಕೋಸ್ಕರ ಈ ಸರ್ಕಾರಕ್ಕೆ ಮನ್ನಣೆ ಕೊಡುವುದಕ್ಕಾಗುವುದಿಲ್ಲ ಎನ್ನುವ ವಿಷಯದಲ್ಲಿ ಕೂಡ ಕೆಲವು ವಿಷಯಗಳನ್ನು ತಮ್ಮ ಮುಂದಿಟ್ಟಿದ್ದಾರೆ. ಮಾನ್ಯ ವೀರಪ್ಪಮೊಯ್ಲಿಯವರು ಕೂಡ ಕೆಲವು ವಿಷಯಗಳನ್ನು ನಿಯಮಗಳನ್ನು ಕೋಟ್ ಮಾಡಿದ್ದಾರೆ. ಮಾನ್ಯ ಬೊಮ್ಮಾಯಿಯವರು ಮಾತು ಮುಗಿಸುವುದಕ್ಕೆ ಮೊದಲೇ ಇನ್ನು ಕೆಲವು ಸದಸ್ಯರುಗಳು ಈ ವಿಷಯದ ಬಗ್ಗೆ ಮಾತನಾಡುವವರಿದ್ದಾರೆ ............

SRI MALLUR ANANDA RAO .- I would like to know whether he is speaking as the Leader of the Opposition or as an ordinary member of this House?

SRI R. GUNDU RAO - ಪಾಪ, ಆನಂದರಾಯರು ಈಗ ಆ ಕಡೆ ಹೋಗಿದ್ದಾರೆ. ಬಹಳ ವರ್ಷಗಳಿಂದ ಆ ಕಡೆ ಹೋಗಬೇಕೂಂತ ಪ್ರಯತ್ನಪಟ್ಟರು, ಏನೋ ಯೋಚನೆ ಮಾಡಿ ಹೋಗಿದ್ದಾರೆ. ಇನ್ನು ಮುಂದೆ ಅವರಿಗೆ ಅಲ್ಲಿನ ಕಷ್ಟ ಗೊತ್ತಿಲ್ಲ ಇರಲಿ.

I would have been the first person to congratulate Sri Ananda Rao. You and I know for what purpose he has gone that side.

SRI MALLUR ANANDA RAO.- ಇಡೀ ಸಭೆ ಇಲ್ಲೀಗಲ್ ಅಂತ ಹೇಳಿದರೆ, ಮಾನ್ಯ ಗುಂಡೂರಾಯರು ವಿರೋಧಪಕ್ಷದ ನಾಯಕರು ಹೇಗೆ ಆಗುತ್ತಾರೆ?

**ಅಧ್ಯಕ್ಷರು** - ಈ ರೀತಿ ಎಲ್ಲ ಸದಸ್ಯರೂ ಒಟ್ಟಿಗೇ ಎದ್ದು ಮಾತನಾಡಲು ಪ್ರಾರಂಭಿಸಿದರೆ, ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. I will give a ruling on this point.

SRI S.R. BOMMAI - The Chair should permit the members to participate in the debate on this important matter. We cannot be cowered down like this. An opportunity should be given. I have to say something. I must try to convince the Chair. It is not a simple Point of Order. It is a very important point.

ಶ್ರೀ **ಆರ್. ಗುಂಡೂರಾವ್** - ಮಾನ್ಯ ಬೊಮ್ಮಾಯಿಯವರೂ ಮತ್ತು ಮಾನ್ಯ ವೀರಪ್ಪ ಮೊಯ್ಲಿಯವರೂ ಒಂದು ಕಾನ್‌ಸ್ಟಿಟ್ಯೂಷನಲ್ ಪಾಯಿಂಟ್‌ನ್ನು ಹೇಳಿದ್ದಾರೆ.

ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಮೂಲಕ ನಮಗೆ ಉತ್ತರ ಹೇಳುವಾಗ ಸರಿಯಾದ ರೀತಿಯಲ್ಲಿ ಉತ್ತರ ಹೇಳಲಿಲ್ಲ. ಬೊಮ್ಮಾಯಿಯವರು ಮತ್ತು ಮಾನ್ಯ ವೀರಪ್ಪ ಮೊಯಿಲಿಯವರು ಏನು ಮಾತು ಹೇಳಿದ್ದಾರೆ ಎಂದು ನಮ್ಮ ಕರ್ನಾಟಕ ಕಾಂಗ್ರೆಸ್.........

(ಸಭೆಯಲ್ಲಿ ಗೊಂದಲ)

ಆ ಕಡೆಯ ನಾಯಕರು ಮಾತನಾಡುವಾಗ ನಮ್ಮ ಕಡೆಯವರು ಬಹಳ ಗೌರವದಿಂದ ಮತ್ತು ಬಹು ಶಾಂತಿಯಿಂದ ಕೂತು ಕೇಳಿದ್ದೇವೆ. ಈಗ ನಾವು ಹೇಳುವ ಮಾತನ್ನು ಆ ಕಡೆಯವರು ಕೇಳದೇ ಹೋದರೆ ನಾವು ಕೂಡ ಗಲಾಟೆ ಮಾಡಬೇಕಾಗುತ್ತದೆ. ಈ ಸದನದಲ್ಲಿ ಏನು ಮಾತನಾಡಬೇಕು, ಏನು ಮಾತನಾಡಬಾರದು ಎಂಬುದನ್ನು ಹೇಳುವವರು ಅಧ್ಯಕ್ಷರು. ಈಗ ಇರತಕ್ಕ ವಿರೋಧ ಪಕ್ಷ ಹಿಂದೆ ಇದ್ದಂತೆ ಇಲ್ಲ. ಇದು ಬಹಳ ಬಲವಾಗಿದೆ. ನಮಗೂ ಅವರಿಗೂ ಇನ್ನು ಕೇವಲ 16-17 ಮತಗಳು ಮಾತ್ರ ವ್ಯತ್ಯಾಸವಿರಬಹುದು. ನಾಳೆ ನಾಡಿದ್ದರಲ್ಲಿ ಇನ್ನೂ ಏನೇನಾಗುತ್ತವೆ ಎಂಬುದನ್ನು ನೀವೆ ನೋಡುವಿರಂತೆ.

SRI B. SUBBAYYA SHETTY - Are you speaking about the unholly alliance ...............? (Intertuptions).

SRI R. GUNDU RAO - It is for the Speaker to control the House and deal with the members in his own way, Sri Subbayya Shetty has no business to say that it is an unholy alliance and all that. With the very man who appointed the Grover Commission. against the same government, you are having an alliance. It is a holy alliance? You have to control yourselves and not interrupt me.

**ಮಾನ್ಯ ಅಧ್ಯಕ್ಷರು** - ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತ್ರ ಮಾತನಾಡುವುದಕ್ಕೆ ನಾನು ಅವಕಾಶ ಕೊಡುತ್ತೇನೆ.

**ಶ್ರೀ ಆರ್. ಗುಂಡೂರಾವ್** - ಮಾನ್ಯ ಅಧ್ಯಕ್ಷರೇ, ತಮಗೇ ಗೊತ್ತಿರುವಂತೆ ಆ ಕಡೆಯ ಪಕ್ಷದ ನಾಯಕರು ಮಾತನಾಡುವಾಗ ನಮ್ಮ ಕಡೆಯವರು ಒಂದು ಮಾತನ್ನೂ ಕೂಡ ಆಡದೆ ಸುಮ್ಮನೆ ಕೂತು ಕೇಳುತ್ತಿದ್ದರು. ನಮ್ಮ ಮಾನ್ಯ ಬೊಮ್ಮಾಯಿಯವರು ಮತ್ತು ಮೊಯಿಲಿ ಅವರು ಏನು ಕಾನ್‌ಸ್ಟಿಟ್ಯೂಷನಲ್ ಪಾಯಿಂಟ್ ರೈಸ್ ಮಾಡಿದ್ದಾರೆ ಅದಕ್ಕೆ ಸೂಕ್ತ ಉತ್ತರ ಕೊಡಬೇಕೆಂದು ಹೇಳಿ ನಾನು ಒಂದೇ ಒಂದು ಮಾತು ಏನು ಹೇಳಿದೆ ಅಂದರೆ, 'ಕರ್ನಾಟಕ ಕಾಂಗ್ರೆಸ್' ಎಂದು ಹೇಳಿದ ಕೂಡಲೇ ಎಲ್ಲರೂ ಕೂಗಾಡುವುದಕ್ಕೆ ಪ್ರಾರಂಭ ಮಾಡಿದರು. ನಮ್ಮ ಈ ಸದನದಲ್ಲಿ ಮಾನ್ಯ ಭೀಮಣ್ಣ ಖಂಡ್ರೆ ಅವರು ಇಂಡಿಯನ್

ನ್ಯಾಷನಲ್ ಕಾಂಗ್ರೆಸ್‌ನ ಏಕೈಕ ಸದಸ್ಯರಾಗಿದ್ದರು ಅವರೂ ಕೂಡ ಈಗ ಬೇರೆ ಪಕ್ಷಕ್ಕೆ ಸೇರಿದ್ದಾರೆ. ಇವತ್ತು ಮಾನ್ಯ ದೇವರಾಜ ಅರಸ್‌ರವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿರುವುದರಿಂದ ಮಾನ್ಯ ಬೊಮ್ಮಾಯಿಯವರು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಮಜಾಯಿಷಿಯನ್ನು ಕೊಡುವಾಗ ಸರಿಯಾಗಿ ಉತ್ತರ ಹೇಳಲಿಲ್ಲ. ಸರಿಯಾದ ಉತ್ತರವನ್ನು ಹೇಳಬೇಕೆಂದು ನಾನು ಕೇಳಲು ಮೇಲಕ್ಕೆ ಎದ್ದಾಗ ಆ ಕಡೆಯವರೆಲ್ಲಾ "ಹೋ ........... ಹೋ.." ಎಂದು ಕೂಗಾಡಲು ಪ್ರಾರಂಭಿಸಿದರು. ಅವರ ನಾಯಕರು ಮಾತನಾಡುವಾಗ ನಾವು ಒಂದು ಮಾತನ್ನು ಕೂಡ ಆಡದೆ ಸುಮ್ಮನೆ ಕುಳಿತು ಅವರು ಹೇಳಿದ್ದನ್ನು ನಾವು ಕೇಳುತ್ತಿದ್ದೆವು.

ಸದಸ್ಯರು ಆ ಕಡೆ ಮಾತನಾಡಿದಂಥ ವಿಷಯಗಳನ್ನು ಮತ್ತು ಈ ಕಡೆ ಮಾತನಾಡಿದಂಥ ವಿಷಯಗಳನ್ನು ತಾವು ಕೇಳಿ ಯಾವುದು ಸರಿ, ಯಾವುದು ತಪ್ಪು ಎಂದು ಹೇಳತಕ್ಕಂಥಾದ್ದು ತಮಗೆ ಸೇರಿರುತ್ತದೆ. ತಮ್ಮ ಸಾರ್ವಭೌಮತ್ವ ಅಧಿಕಾರವನ್ನು ಪ್ರಶ್ನೆ ಮಾಡುವುದಕ್ಕೆ ಯಾರಿಗೂ ಅಧಿಕಾರವಿರುವುದಿಲ್ಲ. ವಿರೋಧ ಪಕ್ಷದ ನಾಯಕನಾಗಿ ನಾನು ಮಾತನಾಡುತ್ತಿರುವಾಗ ಮಾನ್ಯ ಸುಬ್ಬಯ್ಯ ಶೆಟ್ಟರು ಮಾತನಾಡುವಾಗ ಹೋಲಿ ಅಲೆಯನ್ಸ್ ಮತ್ತು ಅನ್ ಹೋಲಿ ಅಲಿಯನ್ಸ್ ಎಂಬುದಾಗಿ ಮಾತನಾಡಿದರು. ಆ ರೀತಿಯಾಗಿ ಮಾತನಾಡತಕ್ಕಂಥ ನೈತಿಕ ಹಕ್ಕು ಅವರಿಗೆ ಇರುವುದಿಲ್ಲ. ಏತಕ್ಕೆಂದರೆ ವಿಧಾನ ಸಭೆಯಲ್ಲಿ ವ್ಯಕ್ತಿಗಳ ಬಗ್ಗೆ ಮಾತನಾಡಿದವರು ಇವತ್ತು ಶ್ರೀ ಚರಣಸಿಂಗ್‌ರವರ ನಾಯಕತ್ವವನ್ನು ಒಪ್ಪಿಕೊಂಡಿರುವುದು ಹೋಲಿ ಮೇಲೆ, ಮತ್ತು ಪಕ್ಷದ ಮೇಲೆ ಅಲಿಯನ್ಸ್ ಆಗುತ್ತದೆಯೇ?

SRI D. DEVARAJ URS - ಆ ಮಾತನ್ನು ಆಡಬೇಡಿ, ಅದನ್ನು ನಾವು ಕೇಳುವುದಕ್ಕೆ ಹೋಗುವುದಿಲ್ಲ. ಆದರೆ ತಾವು ಶ್ರೀ ಚರಣಸಿಂಗ್‌ರವರಿಗೆ ಅನ್‌ಕಂಡೀಷನಲ್ ಆಗಿ ಸಪೋರ್ಟ್ ಕೊಡುತ್ತೇನೆಂದು ಹೇಳಿದ ಮಾತು ಏನಾಯಿತು ಎಂದು ಕೇಳುತ್ತೇನೆ?

SRI R. GUNDU RAO - We have not said it from our side. It has come from your side. I never wanted to talk about it.

SRI D. DEVARAJ URS - it is Mrs. Gandhi who first gave unconditional support to him in the public.

SRI R. GUNDU RAO - I know what was the assurance you had given to Sri Morarji Desai before leaving Bangalore, thinking that he till form the Government.

SRI D. DEVARAJ URS - About the unconditional support, it is the public statement given and not I.

MR. SPEAKER.- ಆ ಮಾತುಗಳನ್ನು ಈಗ ಹೇಳುವುದು ಬೇಡ. ಮಾನ್ಯ ಬೊಮ್ಮಾಯಿಯವರು ಪಾಯಿಂಟ್ ಆಫ್ ಆರ್ಡರ್ ಏನು ಇರುತ್ತದೆ ಅದನ್ನು ಜಾಗ್ರತೆಯಾಗಿ ಮುಗಿಸೋಣ.

SRI R. GUNDU RAO.- ಮಾನ್ಯ ಮುಖ್ಯಮಂತ್ರಿಗಳು ರಾಜಕೀಯ ಮಾತನಾಡುವುದನ್ನು ಬಿಟ್ಟು ಶ್ರೀಮತಿ ಇಂದಿರಾಗಾಂಧಿಯವರ ಮಾತನ್ನು ಆಡಿದರು?

SRI D. DEVARAJ URS - These things could be talked in different platforms and there are occasions also to talk in the House itself.

SRI R. GUNDU RAO - I never wanted the Hon. Chief. Minister to raise the issue at all. It is they who have raised about this unholy alliance.

SRI B. SUBBAIAH SHETTY - You only said that the Opposition is only 17 members less than the ruling party. That means, the opposition consists of not only congress (I) but other parties i.e., Janatha.

**ಅಧ್ಯಕ್ಷರು** - ಮಾನ್ಯ ಗುಂಡೂರಾಯರು ಪೊಲಿಟಿಕಲ್ ಮ್ಯಾಟರ್ಸ್‌ನ್ನು ಈ ಸಂದರ್ಭದಲ್ಲಿ ಎತ್ತುವುದು ಬೇಡವೆಂದು ನಾನು ಹೇಳುತ್ತೇನೆ.

ಶ್ರೀ **ಆರ್. ಗುಂಡೂರಾವ್** - ಇನ್ನು ಕೆಲವು ಸದಸ್ಯರುಗಳು ಮಾತನಾಡಲಿ, ನಂತರ ಮುಖ್ಯ ಮಂತ್ರಿಗಳು ಉತ್ತರ ಕೊಡಬಹುದು. ಕೆಲವು ವಿಷಯಗಳನ್ನು ಕ್ಲಾರಿಫೈ ಮಾಡುವುದಕ್ಕೆ ಅವಕಾಶವಾಗುತ್ತೆ.

ಮಾನ್ಯ ಮುಖ್ಯಮಂತ್ರಿಗಳು ಶಾಂತ ರೀತಿಯಿಂದ ಕುಳಿತಿದ್ದಾರೆ. ನಾನು ಅದೇ ತರಹ ಶಾಂತರೀತಿಯಿಂದ ಕುಳಿತಿದ್ದೇನೆ. ಆದ್ದರಿಂದ ತಾವು ಏನು ತಮ್ಮ ಉತ್ತರ ಕೊಡುತ್ತೀರೋ ಅದಕ್ಕೆ ಮೊದಲು ಈ ಕಡೆ ಅಥವಾ ಆ ಕಡೆ ಸದಸ್ಯರು ಯಾರಾದರು ಮಾತನಾಡುವುದು ಇದ್ದರೆ ಅವರಿಗೆ ಒಂದು ಟೈಮ್ ಫಿಕ್ಸ್ ಮಾಡಿ ಅವಕಾಶ ಕೊಟ್ಟು ಬಿಟ್ಟರೆ ಮಾನ್ಯ ಮುಖ್ಯ ಮಂತ್ರಿಗಳು ಆಗಾಗ ಉತ್ತರ ಕೊಡುವುದು ತಪ್ಪುತ್ತದೆ ಎಂದು ನನ್ನ ಅಭಿಪ್ರಾಯ.

MR. SPEAKER - this is not a subject matter for discussion.

SRI SHEERNALI CHANDRASHEKAR - Mr. Speaker Sir, I request you to allow me to speak for two minutes.

MR. SPEAKER - I cannot allow anybody to speak. I would appeal to you to co-operate.

SRI D. DEVARAJ URS (Chief Minister) - I have heard with great attention what the Leader of the Opposition spoke about this matter. I have also heard Sri Bommai and Sri Veerapa Moily quoting some constitutional provisions in favour of their arguments. I really wonder whether the subject is a matter for regular discussion. The erst-while leader of the Opposition Sri Bommai has raised this question and had brought forth some legal points. I do not think there is any one who could add more to the points of constitutionality or legality which were brought about and questioned by speakers on their side. I think they have exhausted all the points relevent to it. I am appealing to the Leader of the opposition to appreciate my point. according to them I am not supposed to be the Chief Minister or the Leader of the house. Sir, I would request the Hon'ble members particulary those who referred to this matter i.e., Sri Bommai and Sri Veerappa Moily, to the Constitution. I draw their attention to Article 124. Likewise there is another Art 75 which relates to the appointment of Prime Minister.

"The Prime Minister shall be appointed by the President and other Ministers by the President on the advice of the Prime Minister. The Ministers shall hold office during the pleasure of the President. The Council of Ministers shall be collectively responsible to the House of the people."

There is another Article which refers to the appointment of the Chief Minister in the State and this is Article No. 164 (1).

"The Chief Minister shall be appointed by the Governor and the other Ministers shall be appointed by the Governor on the advice of the Chief Minister and the Ministers shall hold the office during the pleasure of the Governor........"

This is how the Constitution reads. I would like to bring to the notice of this House particularly to the Hon'ble Members of the other side that I have been appointed by the Governor as the Chief Minister of the State. Likewise my Ministers have been appointed on the advice of the Chief Minister. Now, unless the Governor withdraws the notification I cannot be questioned by my friends to say that I am not the Chief Minister. The other point they said was that the Governor had adviced me that I should get the confidence vote here and there is a letter in regard to this matter. I am sorry to say that what Sri Bommai said is not correct. I do not know why he is relying on some Press Report. I can say there is no such communicatin from the Governor to the Chief Minister of the State. therefore, that question does not arise. If there was a communication to that effect, I would have certainly given due respect to it. Therefore, there is no truth in saying that I have lost confidence of this House. There is a constitutional provision for them to bring a no confidence motion and defeat me. But I do not know why my Hon'ble friends are insisting that I should seek the vote of confidence. Then that is the position they have no right to call me to do this or that When there is a constitutional provision, it is open to them to test whether I have got majority or not. Nobody would come in their way to move the vote of no confidence. I do not know why Sri Bommai who is an Advocate and Sri Veerappa Moili who is a member of the Bar must not be knowing this simple problem. They know it well. K+ nowing fully well all these things why have they wasted the time of this house is not understandable. The other point whether I belong to Karnataka Congress or Congress (I) Party or not, I am sorry it is none of their business. As long as I am constitutionally appointed as Chief Minister by virtue of my being Leader of this House and as long as I enjoy the confidence for

the House, it is none of their concern. There are precedents to quote. Sri Shaik Abdulla does not belong to Congress party and he is being continued as Chief Minister When all these things are there it is not relevant to bring such a point before this August house. Next Which is the legally recognised party in this House which should be in the opposition. Now for instance, the Congress (I) party has been recognised as the opposition party. The other party which was previously recognised as the opposition party, has lost the majority to be recognised as the opposition party. For this purpose rules have been framed. Supposing I lose the majority, I also cease to be the Chief minister. that is very clear. It is for them to prove whether I have the majority or not. That is all the point.

(ನಾಲ್ಕಾರು ಜನ ಮಾನ್ಯ ಸದಸ್ಯರು ಒಟ್ಟಿಗೇ ಎದ್ದು ಮಾತನಾಡಲು ಪ್ರಾರಂಭಿಸಿದರು)

**ಗುಂಡೂರಾವ್** - ತಾವು ಎಷ್ಟರ ಮಟ್ಟಿಗೆ ಇದ್ದೀರಿ. ನಾವು ಎಷ್ಟು ಜನ ಮೆಂಬರ್ಸ್ ಇದ್ದೇವೆ. ಜನತಾದವರು ಎಷ್ಟು ಜನ ಇದ್ದಾರೆಂದು ಹೇಳಲಿಲ್ಲ. ತಮಗಿರುವುದು ಕೇವಲ ವ್ಯತ್ಯಾಸ 16-17 ಮಾತ್ರ ಇದೆ ಎಂದು ಕೇಳಿದೆ. ಅದು ಎಷ್ಟೇ ಇರಲಿ ನಾವು ಕೇಳಿದ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಈವತ್ತು ಅವರನ್ನು ಕರ್ನಾಟಕ ಕಾಂಗ್ರೆಸ್ಸಿನ ನಾಯಕರನ್ನಾಗಿ ಆರಿಸಿಕೊಂಡಿರುತ್ತಾರೆಯೋ ಅಥವಾ ಅವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಪ್ರೆಸಿಡೆಂಟ್ ಆಗಿ ಆರಿಸಿಕೊಂಡಿರುತ್ತಾರೆಯೋ ಎಂಬುದಕ್ಕೆ ಸದಸ್ಯರಿಗೆ ತೃಪ್ತಿಕರವಾಗಿ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ.

**ಕೆ.ಎಚ್. ರಂಗನಾಥ್** - ಸ್ವಾಮಿ, ಬಹಳ ಸಂತೋಷದಿಂದ ಮಾನ್ಯ ಗುಂಡೂರಾಯರನ್ನು ವಿರೋಧಪಕ್ಷದ ನಾಯಕರೆಂದು ಹೇಳುತ್ತೇನೆ. ಬೊಮ್ಮಾಯಿಯವರ ಪಾಯಿಂಟ್ ಆಫ್ ಆರ್ಡರ್ ಏನಿದೆ ಎಂದರೆ ಈ ಮನೆ ಸರಿಯಾಗಿ ಕಾನ್‌ಸ್ಟಿಟ್ಯೂಟ್ ಆಗಿಲ್ಲ ಲೀಡರ್ ಇಲ್ಲ, ಸರ್ಕಾರವಿಲ್ಲ ಎಂದೆಲ್ಲ ಹೇಳಿರುತ್ತಾರೆ. ಒಂದು ಸರ್ಕಾರ ಇದ್ದ ಮೇಲೆ ಆಡಳಿತ ಪಕ್ಷ ಇದ್ದ ಮೇಲೆ ಅದಕ್ಕೆ ಇಬ್ಬರು ನಾಯಕರು ಇದ್ದ ಮೇಲೆ ಈ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

ವಾಗ್ವಿವಾದ ಮುಂದುವರಿದು ಅನೇಕ ಸದಸ್ಯರು ಮಾತನಾಡಲು ಅವಕಾಶ ಕೊಡುತ್ತಿದ್ದ ಹಂತದಲ್ಲಿ ಗುಂಡೂರಾಯರು ಮಧ್ಯ ಪ್ರವೇಶಿಸಿದರು.

ಪ್ರತಿ ಪಕ್ಷ ನಾಯಕನಾಗಿ ಮಧ್ಯ

"As leader of the opposition I have got a right always to interfere and clarify certain points" ಎಂದು ಹೇಳಿ ತಮ್ಮ ಪಕ್ಷದ ಅಧ್ಯಕ್ಷರಿಗೂ ಮಾತನಾಡಲು ಕಾಲಾವಕಾಶ ಕೊಡಬೇಕೆಂದು ಒತ್ತಾಯಿಸಿದರು.

ಮತ್ತೆ ಮುಖ್ಯ ಮಂತ್ರಿ ಅರಸ್ ತಮ್ಮ ನಿಲುವು ವಿವರಿಸಿದರು.

SRI D. DEVARAJ URS (Chief Minsiter) - May I submit one thing because hon. Member Sri S.R. Bommai has asked me a specific question and that I should answer it., viz., whether I was instructed by the Govenor orally or in writing. What transpired orally, I am not bound to say anything on the floor of the House. Nevertheless, the very fact that this urgent session has been called shows beyond doubt that I was not hesitating to face the Assembly. You are well aware and the House is well aware that I had six months time after the adjournment I could have gone on postponing convening of this session. If I were in doubt that I had no majority I could have dragged on for six months.

SRI S.R. BOMMAI - That would have reduced your strength.

SRI D. DEVARAJ URS - Whatever it is, whether it is reduced or increased, at least you will appreciate that I had not hesitated to call the House and when the House is called it automatically means that I am convinced beyond doubt that I have the majority. Supposing I did not have the majority the onus is on the Members of the other side to prove. Secondly, why is he harping that I should seek a vote of confidence ? I really do not understand that. In one breath he says that I have the majority and in another breath he says that I must seek a vote of confidence. What is the logic of this argument? I fall to understand. I am glad he has realised and I must thank him and congratulate him for his honesty. He accepts that I have majority and at the same time he wants me to seek a vote of confidence. How is it possible? I do not understand. Therefore Sir, I am not here to go on obliging everbody

who wants that I should seek a vote of confidence. At the same time he says legally it is not proper. Where is it stated in the Cosntitution that a man who belongs to a political party or a group of people who support a leader should belong to one political party? It is not stated anywhere. For his information, though it may not be relevant because it is not necessary to say to which party I belong I may say or I may not say - because he is still harping on that point. I will say that on 30-8-79 a meeting of the Karnataka Congress Legislators was called wherein my strength was proved, where they accpeted me as their leader. At that time, for the information of the hon. Member Sri S.R. Bommai I want to tell that I was already a member of the Indian National Congress; the Working Committee had elected me. Therefore, my being elected as Indian National Congress President in no way alters the situation because at the time of my party meeting on 30-8-1979. I was already a member of the Working Committee of the Indian Naitional Congress. Therefore, that question also I am clarifying because he is harping on the question since I belong to a different party, whether I could be a leader or not. That does not arise. I was a member of a different party when the Karnataka Congress Legislators took me as the; leader, and might have written to the Speaker and also to the Governor. Therefore, Sir, on all these counts there is no legality or Constitutionality involved. It is for the Speaker to give a ruling. Therefore, the point of order raised by Sri Bommai falls through on all counts.

ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ) - ಮಾನ್ಯ ಮುಖ್ಯ ಮಂತ್ರಿಗಳು ಅಸೆಂಬ್ಲಿ ಕರೆದ ವಿಚಾರವನ್ನು ಮಾತನಾಡಿದರು. ಅವರು ಮಾತನಾಡುವಾಗ ಅಸೆಂಬ್ಲಿಯನ್ನು ಆರು ತಿಂಗಳೊಳಗೆ ಕರೆಯಬೇಕಾಗಿರಲಿಲ್ಲ. ಆರು ತಿಂಗಳೊಳಗೆ ಏತಕ್ಕೋಸ್ಕರ ಕರೆದೆ ಅಂದರೆ ನನಗೆ ಬಹುಮತ ಇದೆ ನನಗೆ ಏನು ಅಂಜಿಕೆ ಇಲ್ಲ ಆ ದೃಷ್ಟಿಯಿಂದ ಕರೆದೆ ಅಂತ ಹೇಳಿದರು. ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ಮಾನ್ಯ ಮುಖ್ಯಮಂತ್ರಿಗಳು ಅವರಾಗಿಯೇ ಅಸೆಂಬ್ಲಿಯನ್ನು ಕರೆಯಲಿಕ್ಕೆ ಪ್ರಯತ್ನಪಡಲಿಲ್ಲ.

ನಮ್ಮ ಪಕ್ಷದ ಅಧ್ಯಕ್ಷರಾದ ಬಂಗಾರಪ್ಪನವರು ಮತ್ತು ವಿರೋಧ ಪಕ್ಷದ ನಾಯಕರಾದ ಬೊಮ್ಮಾಯಿ ಅವರು ಇವರಿಬ್ಬರು ಹೋಗಿ ಪ್ರತ್ಯೇಕವಾಗಿ ರಾಜ್ಯಪಾಲರನ್ನು ಭೇಟಿ ಮಾಡಿದ ಮೇಲೆ ರಾಜ್ಯಪಾಲರು ಮುಖ್ಯ ಮಂತ್ರಿಗಳನ್ನು ಕರೆಸಿ ಮಾತನಾಡುತ್ತೇನೆ ಅಂತ ಬಂಗಾರಪ್ಪನವರಿಗೂ ಅಂದು ವಿರೋಧ ಪಕ್ಷ ನಾಯಕರಾದ ಬೊಮ್ಮಾಯಿ ಅವರಿಗೂ ಭರವಸೆ ಕೊಟ್ಟರು. ಆ ಭರವಸೆ ಕೊಟ್ಟ ಮೇಲೆ ಮುಖ್ಯ ಮಂತ್ರಿಗಳನ್ನು ರಾಜ್ಯಪಾಲರು ಕರೆಸಿದರು. So the point you made that you yourself called the Assembly is not correct. Whether it was oral instruction or written, you called the Assembly after the Governor summoned you. This, the whole country knows. You called the Assembly only after our President Sri S. Bangarappa and Sri S.R. Bommai approached the Governor. Now it is for you to show that whether you enjoy the confidence of the House. As Sri Bommai stated it may be that physically you may have 10 or 15 members more. But the point is, you never met the Governor on your own. You met him when he called you and afterwards you summoned the Assembly. So, the matter before us is, the Assembly is being called only after the then Leader of the Opposition and the President of the Congress (I) Sri Bangarappa met the Governor. ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿದ್ದಾರೆ ನನಗೆ ಸಭೆಯಲ್ಲಿ ಬಹುಮತ ಇದೆ ಆದ್ದರಿಂದ ಕರೆದೆ ಅಂತ. ನಿಮಗೆ ಅಸೆಂಬ್ಲಿಯಲ್ಲಿ ಬಹುಮತ ಇದೆಯೋ ಇಲ್ಲವೇ ಆ ಪ್ರಶ್ನೆ ನಮ್ಮ ಮುಂದೆ ಇಲ್ಲ. ನಾವು ರಾಜ್ಯಪಾಲರನ್ನು ಭೇಟಿ ಮಾಡಿ ನಿಮಗೆ ಬಹುಮತ ಇಲ್ಲ ಎಂದು ಹೇಳಿದಾಗ ಅವರು ಸಭೆಯನ್ನು ಕರೆದಿದ್ದಾರೆ. ಆದ್ದರಿಂದ ತಾವು ಈ ಸಭೆಯಲ್ಲಿ ತಮಗೆ ಬಹುಮತ ಇದೆಯೇ ಎನ್ನುವುದನ್ನು ಕೇಳಬೇಕು; ಎಂದು ನಮ್ಮ ಅಭಿಪ್ರಾಯ.

ಮತ್ತೂ ಕೂಡಾ ವಾದವಿವಾದಗಳು ಮುಂದುವರಿದವು. ಸದನ ಆದಿನ ಸಂಜೆ ಏಳುಗಂಟೆಗೆ ಏಳುವ ಮುನ್ನ ಸಭಾಧ್ಯಕ್ಷರು ಮಾನ್ಯ ಗುಂಡೂರಾಯರನ್ನು ಪ್ರತಿಪಕ್ಷ ನಾಯಕರೆಂದು ಮನ್ನಣೆ ನೀಡಿದ ಪ್ರಕಟಣೆ ಬಂತು.

I have received a letter from Shri R. GUNDU RAO, who has been elected Leader of the Congress (I) Legislature Party stating that the members of the House have joined the Congress (I) Legislature Party. Letters from individual members stating that they have joined Congress(I) Legislature Party have also been

enclosed. The letter is further accompanied by a list of the office bearers of the party, Six members have given names in the list of both Congress (I) and Karnataka Congress. One member has said that he would be an independent. However, the Cognress (I) has 45 members which is more than that of Janata Party. I, therefore recognise has Congress (I) Legislature Party has the main Opposition Party and its leader Mr. R. Gundu Rao as Leader of the Opposition.

Now the House stands adjourned to meet again at 1 p.m. tomorrow.

## ಲೋಕನಾಯಕನಿಗೆ ಶ್ರದ್ಧಾಂಜಲಿ

24 ಜನವರಿ 1980 ರಂದು ವಿಧಾನ ಸಭೆಯಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮುಖ್ಯಮಂತ್ರಿ ಶ್ರೀ.ಆರ್. ಗುಂಡೂರಾವ್ ನಿರ್ಣಯ ಮಂಡಿಸಿ ಸದನ ಸಂತಾಪ ಸೂಚಿಸಿತು.ಗುಣಕ್ಕೆ ಮತ್ಸರವಿಲ್ಲ ಎಂಬ ರಾಯರ ನಿಲುವು ಮತ್ತೊಮ್ಮೆ ನಿಚ್ಚಳ.

**ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು)**: ಸ್ವಾಮಿ, ಈ ಮುಂದಿನ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಲು ತಮ್ಮ ಅನುಮತಿ ಕೋರುತ್ತೇವೆ.

ಲೋಕನಾಯಕ ಜಯಪ್ರಕಾಶ್ ನಾರಾಯಣ್ ಅವರು ನಮ್ಮನ್ನು ಅಗಲಿ ಕೇವಲ ನಾಲ್ಕು ತಿಂಗಳುಗಳಾಗಿವೆ. ಈ ಅಲ್ಪ ಅವಧಿಯಲ್ಲಿ ದೇಶದಲ್ಲಿ ಮಹತ್ತರ ಬದಲಾವಣೆಗಳು ಆಗಿ ಹೋಗಿವೆ.

ಆದರೆ ಜೆ.ಪಿ. ಅವರ ಜೀವನಾದರ್ಶಗಳು ಜನರ ಮನದಲ್ಲಿ ನೆಲೆ ನಿಂತು, ಚಿರಂತನ ಸ್ಫೂರ್ತಿಯ ನೆಲೆಯಾಗಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಅಪ್ರತಿಮ ಧೈರ್ಯ, ಸ್ವಾತಂತ್ರ್ಯ ನಂತರದಲ್ಲಿ ಪ್ರಜಾಪ್ರಭುತ್ವ ಮೌಲ್ಯ ರಕ್ಷಣೆಗಾಗಿ ತಾಳಿದ ನಿಲುವು, ಜನ ಹಿತ ಚಿಂತನೆಗಾಗಿ ಅವರು ಸಲ್ಲಿಸಿದ ಅಪಾರ ಸೇವೆ, ನಮ್ಮ ಭಾರತದ ಇತಿಹಾಸದಲ್ಲಿ ಅತ್ಯಂತ ಉಜ್ವಲ ಪ್ರಕರಣಗಳಾಗಿ ಉಳಿದಿದೆ.

ಭೂದಾನ, ಸರ್ವೋದಯ, ಸಮಾಜವಾದ ಮುಂತಾದ ಅನೇಕ ಆಂದೋಳನಗಳಿಗೆಲ್ಲ ತಮ್ಮ ವಿಚಾರಧಾರೆ ಹಾಗೂ ನಿಸ್ವಾರ್ಥ ಸೇವೆಯನ್ನು ಮುಕ್ತವಾಗಿ ನೀಡಿ, ರಾಷ್ಟ್ರ ಜೀವನಕ್ಕೆ ಶಕ್ತಿ ತುಂಬಿದ ಮಹಾನ್ ವ್ಯಕ್ತಿ ಅವರು. ತಾನಾಗಿಯೇ ಆರಿಸಿ ಬಂದ ಅಧಿಕಾರವನ್ನು ತೃಣೀಕರಿಸಿ, ಅತ್ಯುನ್ನತ ಆದರ್ಶಗಳಿಗಾಗಿ ಇಡೀ ಜೀವನವನ್ನೇ ಮುಡಿಪಾಗಿಟ್ಟ ಈ ಮಹಾ ಚೇತನದ ಪುಣ್ಯ ನೆನಪಿಗೆ ಈ ಸಭೆ ಗೌರವಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತದೆ."

ಮಾನ್ಯ ಅಧ್ಯಕ್ಷರೇ, ದಿವಂಗತ ಜಯಪ್ರಕಾಶ್ ನಾರಾಯಣ್ ಅವರ ಬಗ್ಗೆ ಬಹುಶಃ ನಮ್ಮ ರಾಷ್ಟ್ರದಲ್ಲಿಯೇ ಅವರು ಸಲ್ಲಿಸಿರತಕ್ಕ ಸೇವೆ ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಬಂದ ಮೇಲೆ ಅವರು ದೇಶಕ್ಕಾಗಿ ಎಷ್ಟರ ಮಟ್ಟಿನ ತ್ಯಾಗ ಮಾಡಿದ್ದಾರೆ ಎನ್ನುವ ವಿಷಯವನ್ನು ಹೇಳಲಿಕ್ಕೆ ನಾವೆಲ್ಲರೂ ಚಿಕ್ಕವರು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಅನೇಕ ಹಿರಿಯ ನಾಯಕರು, ರಾಜಕಾರಣಿಗಳು, ಮತ್ತು ರಾಷ್ಟ್ರದ ಎಲ್ಲಾ ನಾಯಕರುಗಳು ಹೆಸರಿಸುವಂಥ ವ್ಯಕ್ತಿ ಇವರಾಗಿದ್ದರು. ಸ್ವಾತಂತ್ರ್ಯದ ಚಳುವಳಿಯಲ್ಲಿ ದೇಶವನ್ನು ಗುಲಾಮಗಿರಿಯಿಂದ ತಪ್ಪಿಸಬೇಕು, ದೇಶದಲ್ಲಿ

---

ವಿ.ಸ.ನ. ದಿನಾಂಕ: 24-1-1980

ಪ್ರಜಾಪ್ರಭುತ್ವ ಬರಬೇಕು ಎಂದು ಹೇಳಿ ಲಕ್ಷಾಂತರ ಜನರು ತಮ್ಮ ಪ್ರಾಣಾರ್ಪಣೆಯನ್ನು ಮಾಡಿದ್ದಾರೆ. ಇಂತಹ ಚಳುವಳಿಯಲ್ಲಿ ಭಾಗವಹಿಸಿದಂಥ ಅನೇಕ ನಾಯಕರುಗಳು ಸ್ವಾತಂತ್ರ್ಯ ಬಂದ ಮೇಲೆ ನಾನಾ ವಿಧವಾದ ಅಧಿಕಾರವನ್ನು ಪಡೆದು ದೇಶದ ಅಭಿವೃದ್ಧಿಯಲ್ಲಿ ಪಾಲುಗೊಂಡಿದ್ದಾರೆ. ಆದರೆ, ಜಯಪ್ರಕಾಶ್ ನಾರಾಯಣ್ ಅವರು ಯಾವುದೇ ಒಂದು ಅಧಿಕಾರಕ್ಕೆ ಆಸೆ ಪಡದೆ, ಅನೇಕ ಸಂದರ್ಭಗಳಲ್ಲಿ ನೆಹರೂ ಅವರಿಂದ ಕರೆ ಬಂದರೂ ಒಪ್ಪಲಿಲ್ಲ. ಅವರು ನನಗೆ ಅಧಿಕಾರ ಬೇಡ, ಅಧಿಕಾರದಿಂದ ಹೊರಗೆ ಬಿದ್ದು, ರಾಷ್ಟ್ರ ಕಟ್ಟಲಿಕ್ಕೆ ನನ್ನ ಕೈಯಲ್ಲಾದ ಸೇವೆಯನ್ನು ಮಾಡುತ್ತೇನೆಂದು ಹೇಳಿದರು. ಅವರು ವಿದೇಶ ಪ್ರವಾಸ ಮಾಡಿದ ಸಮಯದಲ್ಲಿ ನಮ್ಮ ದೇಶಕ್ಕೆ ಸಲ್ಲಬೇಕಾದಂಥಹ ಕೀರ್ತಿ ಗೌರವವನ್ನು ರಾಷ್ಟ್ರದ ಸಂಸ್ಕೃತಿಯನ್ನು ಎತ್ತಿ ಹಿಡಿದು ಭಾರತದ ಪರಂಪರೆಯನ್ನು, ಚರಿತ್ರೆಯನ್ನು, ಅದರ ಪ್ರಾಚೀನತೆಯನ್ನು ಎತ್ತಿ ಹೇಳಿದರು ಮತ್ತು ಭಾರತದ ಜನ ಎಷ್ಟು ಶಾಂತಿಪ್ರಿಯರು, ಅವರ ಉದಾಹರಣೆಗಳು ಯಾವ ರೀತಿಯದಾಗಿವೆ ಎನ್ನುವುದನ್ನು ಹೊರ ದೇಶದವರಿಗೆ ಅರ್ಥ ಮಾಡಿಕೊಟ್ಟು ಬಂದಿದ್ದಾರೆ. ಇದೇ ರೀತಿಯಲ್ಲಿ ಅಮೇರಿಕಾ ಮತ್ತಿತರ ರಾಷ್ಟ್ರಗಳಲ್ಲಿ, ನಮ್ಮ ದೇಶದ ಕೀರ್ತಿ ಗೌರವವನ್ನು ಎತ್ತಿ ಹಿಡಿದು ದೇಶಕ್ಕೆ ಮಹತ್ತರ ಸೇವೆಯನ್ನು ಸಲ್ಲಿಸಿದ್ದಾರೆ.

ಮೊದಲು ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರು. ಅನೇಕ ಭಿನ್ನತೆಯಿಂದ ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಸೋಷಲಿಸ್ಟ್ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಅದರ ಬೆಳವಣಿಗೆಗೆ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಅನಂತರ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಕಳೆದ ಒಂದು ದಶಕದಿಂದ ಅವರು ರಾಷ್ಟ್ರದಲ್ಲಿ ಎಲ್ಲರ ಒಂದು ಸಂಘಟನೆಯಾಗಬೇಕು, ಎಲ್ಲ ಸಮಾಜವಾದಿಗಳು ಒಂದಾಗಬೇಕು, ದೇಶದಲ್ಲಿ ಸಂಪೂರ್ಣ ಕ್ರಾಂತಿಯಾಗಬೇಕು ಎಂದು ಆಸೆಯನ್ನು ಇಟ್ಟುಕೊಂಡಿದ್ದರು. ಇದನ್ನು ಬಹುಶಃ ಯಾರೂ ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂದು ಕಾಣುತ್ತದೆ. ಅವರ ಈ ಒಂದು ಕ್ರಾಂತಿಯನ್ನು ದೇಶದಲ್ಲಿ ಯಾವ ರೀತಿ ಆಚರಣೆಗೆ ತರಬೇಕು, ಯಾವ ಹಂತದಲ್ಲಿ ತರಬೇಕು ಎನ್ನುವುದನ್ನು ಯಾರೂ ಅರ್ಥ ಮಾಡಿಕೊಳ್ಳಲಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಅವರು ಈ ದೇಶದಲ್ಲಿ ಸಂಪೂರ್ಣ ಕ್ರಾಂತಿಯನ್ನು ತರಬೇಕೆಂದು ಬಹಳ ಪ್ರಯತ್ನಪಟ್ಟರು. ಅವರ ಆರೋಗ್ಯ ಸರಿಯಾಗಿಲ್ಲದೆ ಇದ್ದರೂ ಸಹ ದೇಶದ ಮೂಲೆಮೂಲೆಗಳಲ್ಲಿ ಸಂಚಾರ ಮಾಡಿ ಲಕ್ಷಾಂತರ ಜನರನ್ನು ತಮ್ಮ ಸಭೆಗೆ ಬರುವಂತೆ ಮಾಡುತ್ತಿದ್ದರು. ದೇಶದಲ್ಲಿ ಬಡತನ ಹೋಗಬೇಕು, ಸಿರಿವಂತರ ಮತ್ತು ಬಡವರ ನಡುವೆ ಏನು ಅಂತರ ಇದೆ ಅದು ಹೋಗಿ ಅವರಲ್ಲಿ ಸಮಾನತೆ ಬರಬೇಕು. ದೇಶದಲ್ಲಿ ಎಲ್ಲರಿಗೂ ಉದ್ಯೋಗ ಸಿಕ್ಕಬೇಕು. ಜಾತಿ ಪದ್ಧತಿ ಹೋಗಬೇಕು. ಈ ಒಂದು ನೈತಿಕ ಚೌಕಟ್ಟಿನಲ್ಲಿ ಕ್ರಾಂತಿಯನ್ನು ಮಾಡಬೇಕು, ಭಾರತವನ್ನೇ ಒಂದು ಮಾದರಿಯಾದಂಥಹ ರಾಷ್ಟ್ರವನ್ನಾಗಿ ಮಾಡಬೇಕು ಎನ್ನುವಂತಹ ಮಹತ್ತರ ಆಸೆಯನ್ನು ಇಟ್ಟುಕೊಂಡಿದ್ದರು. ಈ ದಿಸೆಯಿಂದ ಪೂರಕವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡು ದೇಶದಲ್ಲಿ ಸಂಚಾರ ಮಾಡಿ, ಭಾರತದ ಜನತೆಯನ್ನು ತಮ್ಮ ಕಡೆಗೆ ಸೆಳೆದುಕೊಂಡರು.

ಚುನಾವಣೆಗಳು ನಡೆದ ಸಮಯದಲ್ಲಿ ಜನತೆ ಕಾಂಗ್ರೆಸ್ ಪಕ್ಷವನ್ನು ಸೋಲಿಸಲಿಕ್ಕೆ ಅವರು ಮಹತ್ತರ ಪಾತ್ರವನ್ನು ವಹಿಸಿದರು. ಜನತೆ ಕಾಂಗ್ರೆಸ್ ನೀತಿಯಿಂದ ಹೆಚ್ಚಿನ ಅನುಕೂಲವಾಗುವುದಿಲ್ಲವೆನ್ನುವ ದೃಷ್ಟಿಯನ್ನು ಇಟ್ಟುಕೊಂಡು ಜನತಾ ಪಕ್ಷಕ್ಕೆ ಮತ ನೀಡಿ ಅಧಿಕಾರಕ್ಕೆ ತಂದರು. ದೇಶದಲ್ಲಿ ಗಾಂಧೀಜಿಯವರು ಇಲ್ಲದಿದ್ದರೆ, ಜೆ.ಪಿ.ಯವರು ಇದ್ದಾರೆ ಎಂದು ಹೇಳುವಂತಹ ಒಂದು ಪ್ರಚಾರಕ್ಕೆ ಜನತೆ ಮನ್ನಣೆ ನೀಡಿತು. ಅದರಲ್ಲಿಯೂ ಉತ್ತರ ಭಾರತದಲ್ಲಿ ಜನತಾ ಪಕ್ಷಕ್ಕೆ ವಿಶೇಷವಾಗದಂತಹ ಬಹುಮತ ದೊರೆತಿದ್ದುದು ಜೆ.ಪಿ.ಯವರ ಶ್ರಮದಿಂದ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ವಿವಿಧ ನೀತಿಗಳನ್ನು, ವಿವಿಧ ಮಾರ್ಗಗಳನ್ನು ಹೊಂದಿದಂತಹ ಪಕ್ಷಗಳನ್ನು ಒಂದುಗೂಡಿಸಿ ಎಲ್ಲರೂ ಒಂದು ತಳಹದಿಯ ಮೇಲೆ ನಡೆಯಬೇಕು ಎಂದು ಒಳ್ಳೆಯ ಮಾರ್ಗವನ್ನು ಹಾಕಿಕೊಟ್ಟರು.

ಆದರೆ, ಜನತಾಪಕ್ಷದ ನಾಯಕರುಗಳು, ಅವರು ಅಧಿಕಾರದಲ್ಲಿರುವಾಗ ಜೆ.ಪಿ.ಯವರನ್ನು ನೆನೆದರು, ಕೊನೆಯಲ್ಲಿ ಅವರ ಆರೋಗ್ಯ ಬಹಳ ಕೆಡಲಿಕ್ಕೆ ಅವರೊಳಗಿನ ಭಿನ್ನಾಭಿಪ್ರಾಯಗಳೇ ಕಾರಣವಾದವು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಅವರು ಇನ್ನೂ ಬದುಕಿರುವಾಗ, ಅವರು ತೀರಿ ಹೋದರು ಎಂದು ಸತ್ಯಕ್ಕೆ ದೂರವಾದ ಸಮಾಚಾರವನ್ನು ದೇಶದಲ್ಲಿ ಸಾರಿದರು. ನಮ್ಮ ಸಭೆಯಲ್ಲಿ ಮಾನ್ಯ ಬೊಮ್ಮಾಯಿಯವರು ಆ ದಿನ ಮಾತನಾಡಲಾರದೆ, ಕಣ್ಣಲ್ಲಿ ನೀರು ತಂದರು. ರಾಷ್ಟ್ರದಲ್ಲಿ ನಾಯಕರುಗಳು ಅವರ ಈ ಗುಣಗಳಿಗಾಗಿ ತಮ್ಮ ಪಕ್ಷ ಭೇದವನ್ನು ಮರೆತು ದೇವರು ಅವರಿಗೆ ಒಳ್ಳೆಯ ಆರೋಗ್ಯ, ಆಯುಷ್ಯವನ್ನು ಕೊಡಲೆಂದು ಪ್ರಾರ್ಥಿಸಿದರು. ಆದರೆ, ಜನತಾ ಪಕ್ಷದಲ್ಲಿದ್ದಂಥಹ ಒಗ್ಗಟ್ಟು ಯಾವ ರೀತಿಯಾಗಿ ಒಡೆದು ಹೋಯಿತು ಮತ್ತು ಅವರ ಯಾವ ರೀತಿ ಅಧಿಕಾರವನ್ನು ನಡೆಸುತ್ತಿದ್ದರು, ಪತ್ರಿಕೆಗಳಲ್ಲಿ ಯಾವ ರೀತಿ ಹೇಳಿಕೆಗಳನ್ನು ಕೊಡುತ್ತಿದ್ದರು, ಜನತೆಗೆ ಚುನಾವಣೆಗಳ ಸಮಯದಲ್ಲಿ ಏನು ಭರವಸೆಗಳನ್ನು ಕೊಟ್ಟಿದ್ದರು, ಅವುಗಳಿಗೆ ವಿರುದ್ಧವಾಗಿ ಹೋಗುತ್ತಿದ್ದಾರೆಂದು ಮನಗಂಡು ಜೆ.ಪಿ. ಅವರು ಅನೇಕ ಸಾರಿ ಪತ್ರಿಕೆಗಳಲ್ಲಿ, ಜನತಾ ನಾಯಕರುಗಳು ಸರಿಯಾಗಿ ನಡೆದುಕೊಳ್ಳಬೇಕು ಎಂದು ಹೇಳಿಕೆಗಳನ್ನು ಕೊಡುತ್ತಿದ್ದರು. ಬಹುಶಃ ಇವರ ಮಾತಿಗೆ ಜನತಾ ನಾಯಕರಲ್ಲಿ ಹೆಚ್ಚಿನ ಬೆಲೆ ಸಿಕ್ಕಲಿಲ್ಲ. ಜೆ.ಪಿ. ಯವರಿಗಿದ್ದ ಅನೇಕ ಚಿಂತೆಗಳಲ್ಲಿ, ಈ ಒಂದು ಚಿಂತೆಯೂ ಸೇರಿ ಅವರು ದುಃಖ ಪಡುವಂಥ ಪರಿಸ್ಥಿತಿ ಬಂದಿತು. ಎಷ್ಟೊಂದು ಸಾಹಸದಿಂದ ಕಟ್ಟಿದಂಥ ಪಕ್ಷ ಎಷ್ಟು ಬೇಗ ಈ ರೀತಿಯಾಯಿತು ಎಂದು ದುಃಖವಾಗಿ ಅವರ ಆರೋಗ್ಯ ಇನ್ನೂ ಕೆಡಲಿಕ್ಕೆ ಕಾರಣವಾಯಿತು. ರಾಷ್ಟ್ರದ ಅನೇಕ ನಾಯಕರುಗಳು ಇವರ ಆರೋಗ್ಯವನ್ನು ನೋಡಿಕೊಂಡು ಬರುತ್ತಿದ್ದರು. ಕೊನೆಗೆ ಪಾಟ್ನಾದಲ್ಲಿ ಅವರು ತಮ್ಮ ಕೊನೆಯ ಉಸಿರನ್ನು ಎಳೆದರು. ಇಡೀ ಭಾರತವೇ ಅಲ್ಲ, ಇಡೀ ಪ್ರಪಂಚವೇ ದುಃಖದಲ್ಲಿ ಮುಳುಗಿತು. ಪ್ರಪಂಚದ ಎಲ್ಲಾ ಮಹಾನಾಯಕರುಗಳು ಇವರ ಆತ್ಮಕ್ಕೆ ಶಾಂತಿ ಸಿಗಲೆಂದು ಸಂದೇಶಗಳನ್ನು ಕಳುಹಿಸಿದರು. ಇಂಥ ಲೋಕನಾಯಕರ ಅಂತಿಮ ಯಾತ್ರೆಯಲ್ಲಿ ವಿವಿಧ ಪಕ್ಷಗಳ ನಾಯಕರುಗಳು ತಮ್ಮ ಪಕ್ಷ-ಪಕ್ಷಗಳ ಭೇದವಿಲ್ಲದೆ ಪಾಲುಗೊಂಡು,

ಶ್ರದ್ಧಾಂಜಲಿಯನ್ನು ಸಲ್ಲಿಸಿದರು. ಎಲ್ಲಾ ನಾಯಕರುಗಳು ಇವರನ್ನು ಲೋಕನಾಯಕರೆಂದು ಒಪ್ಪಿ ಇವರಿಗೆ ಅಂತಿಮ ಗೌರವವನ್ನು ಮತ್ತು ಅವರ ಕುಟುಂಬದವರಿಗೆ ಸಂತಾಪವನ್ನು ವ್ಯಕ್ತಪಡಿಸಿದರು. ಇಂತಹ ಮಹಾನ್ ವ್ಯಕ್ತಿಯನ್ನು ನಾವು ಈ ಸಮಯದಲ್ಲಿ ಕಳೆದುಕೊಂಡಿದ್ದು ನಮ್ಮ ದುರಾದೃಷ್ಟವೆಂದು ಹೇಳಬಹುದು. ಏಕೆಂದರೆ, ಈ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಕಾರಣರಾದಂಥಹ ರಾಜಕಾರಣಿಗಳ ಪೈಕಿ ಕೇವಲ ಕೆಲವೇ ಜನರು ಇಂದು ನಮ್ಮ ದೇಶದಲ್ಲಿದ್ದಾರೆ. ಅಂತಹವರ ಪೈಕಿ ಇವರೂ ಒಬ್ಬರಾಗಿದ್ದರು. ಈ ಹಿರಿಯ ರಾಜಕಾರಣಿಗಳ ಪೈಕಿ ಕೆಲವರು ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡಿದ್ದಾರೆ, ಜೆ.ಪಿ. ಯವರು ಮಾತ್ರ ದೇಶ ಸೇವೆ ಮಾಡುವುದು ಬಹಳ ಅಮೂಲ್ಯವಾದಂಥ ಕೆಲಸವೆಂದು ಭಾವಿಸಿದ್ದರು. ಅವರ ಒಂದು ಮಾರ್ಗದರ್ಶನ ಜನತಾ ಪಕ್ಷಕ್ಕೆ ಮಾತ್ರವಲ್ಲ, ಇಡೀ ದೇಶದ ಎಲ್ಲಾ ಪಕ್ಷದವರಿಗೂ ಅವರು ಮಾರ್ಗದರ್ಶಕರಾಗಿದ್ದರು. ಅವರ ಒಂದು ಒಳ್ಳೆಯ ಆದರ್ಶವನ್ನು ಎಲ್ಲರೂ ತಿಳಿದುಕೊಳ್ಳುತ್ತಿದ್ದರು. ಮತ್ತು ಎಲ್ಲರೂ ಅವರನ್ನು ಪಾಲನೆ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದರು. ಅವರೇನಾದರೂ ಬದುಕಿದ್ದರೆ, ಏನಾದರೂ ಸಮಸ್ಯೆಗಳು ಉದ್ಭವವಾದರೆ ಅದನ್ನು ಬಗೆಹರಿಸುವುದಕ್ಕೆ ಅವರಿಗೆ ತಿಳಿದಂಥಹ ಅನುಭವದ ದಾರಿಯನ್ನು ನಾಯಕರುಗಳಿಗೆ ಕೊಡುತ್ತಿದ್ದರು. ಒಟ್ಟಿನಲ್ಲಿ ಹೇಳಬೇಕೆಂದರೆ, ಈ ದೇಶದ ಅಭ್ಯುದಯಕ್ಕೆ ಕಾರಣರಾದಂಥ ಕೆಲವೇ ಜನರ ಪೈಕಿ ಶ್ರೀ ಜಯಪ್ರಕಾಶ್ ನಾರಾಯಣ್ ಒಬ್ಬರಾಗಿದ್ದರು. ಇಷ್ಟೊಂದು ಸೇವೆ ಮಾಡಿದಂಥ ಮಹಾನ್ ವ್ಯಕ್ತಿ ಇಂದು ನಮ್ಮ ಜೊತೆಯಲ್ಲಿ ಇಲ್ಲ. ಆದರೆ, ಅವರು ಬಿಟ್ಟು ಹೋದ ಆದರ್ಶ, ರಾಜಕೀಯ ನೀತಿ, ಜನತೆಯ ಮೇಲಿಟ್ಟ ಪ್ರೀತಿ, ಅಭಿಮಾನ ಚಿರಸ್ಥಾಯಿಯಾಗಿ ಉಳಿದಿದೆ. ಈ ದೇಶದ ಅಭಿವೃದ್ಧಿಗಾಗಿ ಅವರು ಒಳ್ಳೆಯ ಮಾರ್ಗದರ್ಶನವನ್ನು ಏನು ಬಿಟ್ಟು ಹೋಗಿದ್ದಾರೆ, ಅದರಲ್ಲಿ ಆ ಪಕ್ಷ, ಈ ಪಕ್ಷ ಎಂಬ ಭೇದವಿಲ್ಲ. ಈ ರಾಷ್ಟ್ರವನ್ನು ಕಟ್ಟಬೇಕಾದರೆ ನಾವೆಲ್ಲರೂ ಒಗ್ಗಟ್ಟಾಗಿ ದುಡಿಯಬೇಕಾಗಿದೆ. ಮತ್ತು ಎಲ್ಲರೂ ಅದಕ್ಕೆ ಸಹಕರಿಸಬೇಕಾಗುತ್ತದೆ. ಈ ವಿಚಾರದಲ್ಲಿ ನಾನು ಅಧಿಕಾರದಲ್ಲಿದ್ದರೆ ಮಾತ್ರ ಆ ಕೆಲಸವಾಗುತ್ತದೆ, ಇನ್ನೊಬ್ಬರು ಅಧಿಕಾರದಲ್ಲಿದ್ದರೆ ಆಗುವುದಿಲ್ಲವೆಂದು ತತ್ವವನ್ನು ಇಟ್ಟುಕೊಂಡಿರುವವನು ನಾನಲ್ಲ. ಈ ರಾಷ್ಟ್ರ ಬೆಳೆಯಬೇಕು. ಈ ರಾಷ್ಟ್ರ ಉಳಿಯಬೇಕಾದರೆ ನಾವೆಲ್ಲರೂ ಒಗ್ಗಟ್ಟಾಗಿ ದುಡಿಯಬೇಕಾಗಿದೆ. ಜೆ.ಪಿ.ಯವರ ಆದರ್ಶ ನೀತಿಯನ್ನು ಬೇರೆ ಪಕ್ಷದವರೂ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ನಮ್ಮದೇ ನೀತಿ ಎಂದು ಒರಟುತನದಲ್ಲಿ ಹೋಗುವಂತಹ ರಾಜಕೀಯ ನೀತಿ ಮಾಡುವುದಕ್ಕೆ ನಾನು ತಯಾರಿಲ್ಲ. ಏಕೆಂದರೆ, ಅವರು ಭಾರತವೆಂದರೆ ವಿಶೇಷವಾದಂತಹ ಒಂದು ಗೌರವವನ್ನು ಇಟ್ಟಿದ್ದರು. ಈ ದೇಶದ ಬಗ್ಗೆ ಅಪಾರವಾದಂಥ ಪ್ರೀತಿ, ಪ್ರೇಮ ಮತ್ತು ಗೌರವವಿತ್ತು. ಆದ ಕಾರಣ ನಾವೆಲ್ಲರೂ ಸಹ ಅವರು ಬಿಟ್ಟು ಹೋದಂಥ ಒಳ್ಳೆಯ ಮಾರ್ಗವನ್ನು ಅನುಸರಿಸಬೇಕಾಗಿದೆ. ಇಂತಹ ಒಬ್ಬ ಆದರ್ಶ ಪುರುಷರು ನಮ್ಮನ್ನು ಬಿಟ್ಟು ಹೋದ ದುಃಖಕರವಾದಂಥ ದಿನಗಳನ್ನು ನಾವು ಪ್ರಥಮ ಬಾರಿಗೆ ಇಲ್ಲಿ ಸಭೆ ಸೇರುತ್ತಿದ್ದೇವೆ. ಅವರ

ಆತ್ಮಕ್ಕೆ ಶಾಂತಿ ಸಿಗಬೇಕಾದರೆ ನಾವು ಇಲ್ಲಿ ಒಂದು ನಿಮಿಷ ಎದ್ದು ನಿಂತು ಪ್ರಾರ್ಥನೆ ಮಾಡಿದರೆ ಸಾಲದು, ಅವರು ಏನು ಒಂದು ಗುರಿಯನ್ನು ಇಟ್ಟುಕೊಂಡಿದ್ದರು, ಈ ಒಂದು ಗುರಿಯನ್ನು ಸಾಧನೆ ಮಾಡುವುದರಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕಾಗುತ್ತದೆ. ಭಾರತ ದೇಶ ಯಾವ ರೀತಿ ಇರಬೇಕೆಂದು ಅವರು ಕನಸು ಕಂಡಿದ್ದರೋ ಆ ಒಂದು ಸೃಷ್ಟಿಯಲ್ಲಿ ನಾವೆಲ್ಲರೂ ಪಾಲುದಾರರಾಗಿ ಕೆಲಸವನ್ನು ಮಾಡೋಣ ಮತ್ತು ಅವರು ಬಿಟ್ಟು ಹೋದಂಥ ಮಾರ್ಗಗಳು ಅಡ್ಡದಾರಿಗೆ ಹೋಗದೆ, ಈ ಸ್ವತಂತ್ರ ಭಾರತ ದೇಶ ಚಿರಸ್ಥಾಯಿಯಾಗಿ ಉಳಿಯಲು ಒಗ್ಗಟ್ಟಾಗಿ ದುಡಿಯುವುದರ ಮೂಲಕ ಅವರ ಆತ್ಮಕ್ಕೆ ಶಾಂತಿ ಬಯಸುವುದು ನಮ್ಮ ಪ್ರಥಮ ಕರ್ತವ್ಯ. ಈ ರೀತಿ ಮಾಡಿದ್ದೇ ಆದರೆ ನಿಜವಾಗಿಯೂ ಅವರ ಆತ್ಮಕ್ಕೆ ಶಾಂತಿ ಸಿಗುತ್ತದೆ.

ಈ ವಿಧಾನ ಸಭೆ ಸರ್ವಾನುಮತದಿಂದ ಈ ನಿರ್ಣಯವನ್ನು ಅಂಗೀಕಾರ ಮಾಡಬೇಕು ಮತ್ತು ಅವರ ಆತ್ಮಕ್ಕೆ ಶಾಂತಿ ಕೋರಿ ನಾವೆಲ್ಲರೂ ಒಂದು ನಿಮಿಷ ಎದ್ದು ನಿಂತು ಗೌರವ ಸಲ್ಲಿಸಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಈ ಸಭೆಗೆ ಪ್ರಾರ್ಥನೆ ಮಾಡುತ್ತೇನೆ.

## ಬೇಡಿಕೆಗಳ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯಾಗಿ ನೀಡಿದ ಉತ್ತರ

12 ಜನವರಿ 1980 ರಂದು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಶ್ರೀ ಆರ್. ಗುಂಡೂರಾವ್ 30 ಜುಲೈ 1980 ರಲ್ಲಿ, ಲೇಖಾನುದಾನ ಪಡೆದುಕೊಂಡಿದ್ದ ತಮ್ಮ ಇಲಾಖೆ ಬೇಡಿಕೆಗಳ ಸಾಮಾನ್ಯ ಚರ್ಚೆಗೆ ಉತ್ತರ ನೀಡಿ, ವಿರೋಧ ಪಕ್ಷಗಳ ಟೀಕೆ, ಚಾಟೂಕ್ತಿಗಳ ನಡುವೆಯೇ ಅನುಮೋದನೆ ಪಡೆದುಕೊಂಡರು.

**ಆರ್. ಗುಂಡೂರಾವ್ (ಮಾನ್ಯ ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ನಡೆದಂತಹ ಚರ್ಚೆ ಬಹಳ ಚೆನ್ನಾಗಿತ್ತು. ಆ ಬಗ್ಗೆ 17 ಜನ ಮಾನ್ಯ ಸದಸ್ಯರು ಮಾತನಾಡಿದರು. ಅವರೆಲ್ಲರೂ ಮಾತನಾಡಿದಾಗ ಅದರಲ್ಲಿ ಗಹನವಾದಂತಹ ಬೇಡಿಕೆಗಳಿದ್ದವು. ಅವು ನಮಗೆ ಬಹುಪಾಲು ಸಂಬಂಧ ಪಡದೆ ಹೋದರೂ, ಅವರು ಮಾಡಿದಂತಹ ಟೀಕೆ ಸಲಹೆ ಮತ್ತು ಸೂಚನೆಗಳು ನನಗೆ ಸಂಬಂಧ ಪಡುವುದಿಲ್ಲ. ಈ ಬಗ್ಗೆ ಚರ್ಚೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿದರು. ಶ್ರೀ ಜೆ ಹೆಚ್ ಪಟೇಲ್, ಶ್ರೀ ಬೊಮ್ಮಾಯಿ ಅವರು ಸಹ ಮಾತನಾಡಿದರು. ಶ್ರೀ ದೇವೇಗೌಡರು ಚರ್ಚೆಗಳನ್ನೆಲ್ಲ ಅಂತ್ಯ ಗೊಳಿಸಿದರು. ಒಂದೊಂದು ಇಲಾಖೆಯು ಬಹು ಮುಖ್ಯವಾದ್ದು. ಮೊದಲು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾದ ಪ್ರಕಾರ ಇದರ ಬಗ್ಗೆ ಇಲ್ಲಿ 5 ದಿವಸಗಳ ಕಾಲ ಚರ್ಚೆ ನಡೆದು ಕೊನೆಯ ದಿವಸ ಬೆಳಿಗ್ಗೆ 9 ಘಂಟೆಯಿಂದ ಮಧ್ಯಾಹ್ನ 1 ಘಂಟೆಯವರೆಗೆ ನಾನು ಉತ್ತರ ಕೊಡಬೇಕಾಗಿತ್ತು. ದುರಾದೃಷ್ಟವಷಾತ್ ಅದು ಹಾಗೆ ಆಗಲಿಲ್ಲ. ಈ ಬಗ್ಗೆ ಡಿಸಿಷನ್ ಬೇಗ ಕನ್‌ಕ್ಲೂಡ್ ಆಗಿದ್ದರೆ ಎಲ್ಲಾ ಮಾನ್ಯ ಸದಸ್ಯರ ಪ್ರಶ್ನೆಗಳಿಗೂ ನಮ್ಮ ಅಧಿಕಾರಿಗಳ ಜೊತೆಯಲ್ಲಿ ತಜ್ಞರ ಜೊತೆಯಲ್ಲಿ ಕುಳಿತು ಮಾಹಿತಿ ಪಡೆದು ಸಾಕಷ್ಟು ವಿಷಯಗಳನ್ನೊಳಗೊಂಡ ಉತ್ತರವನ್ನು ಕೊಡಬಹುದಾಗಿತ್ತು. ಆದರೆ, ಈಗ ಹಾಗೆ ಆಗಿಲ್ಲ. ಈಗ ಏನಾಗಿದೆ ಎಂದರೆ ಎಲ್ಲಾ ವಿಷಯಗಳನ್ನು ಇವತ್ತೇ ಚರ್ಚೆ ಮಾಡಿ ಇವತ್ತೇ ಉತ್ತರ ಕೊಡತಕ್ಕಂತಹ ಸಂದರ್ಭ ಉಂಟಾಗಿದೆ. ಆದುದರಿಂದ ನಾನು ಹೆಚ್ಚಿಗೆ ಟೆಕ್ನಿಕಲ್ಲಾಗಿ ಉತ್ತರ ಕೊಡುವುದಕ್ಕೆ ಹೋಗುವುದಿಲ್ಲ. ನಾನು ಸಾಧ್ಯವಾದಷ್ಟು ಮಟ್ಟಿಗೆ ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ನಾಣಯ್ಯನವರು ಅರಣ್ಯ ಇಲಾಖೆ ಬಗ್ಗೆ ಮಾತನಾಡುತ್ತ ಕೆಲವು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ. ಅದೇ ಪ್ರಕಾರ ಎಕ್ಸೈಸ್ ಇಂಡಸ್ಟ್ರೀ, ಇರ್ರಿಗೇಶನ್, ಪವರ್ ಈ ಇಲಾಖೆಗಳ ಮೇಲೆ ಪ್ರತಿಯೊಬ್ಬರೂ ಉತ್ತಮವಾದ ಹಾಗೂ ದೀರ್ಘವಾದ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟು ಮಾತನಾಡಿದ್ದಾರೆ. ಇನ್ನೂ ಅನೇಕ ಮಾನ್ಯ ಸದಸ್ಯರುಗಳೆಲ್ಲರೂ ಸಮಯ ಇಲ್ಲದೆ ಇದ್ದುದರಿಂದ ಸಾಧ್ಯವಾದಷ್ಟು ಸಲಹೆ ಕೊಟ್ಟಿದ್ದಾರೆ. ಮಾನ್ಯ ಸಿ ಎಂ ಅರ್ಮುಗಂರು ಮತ್ತು ಮಾನ್ಯ ಬಿ ಬಸವಲಿಂಗಪ್ಪ ಈ ಬೇಡಿಕೆಗಳ ಬಗ್ಗೆ ಮಾತನಾಡಿದ್ದಾರೆ. ಜನರಲ್ ಅಡ್ಮಿನಿಸ್ಟ್ರೇಷನ್, ಫಾರೆಸ್ಟ್ ಸಿರಿಕಲ್ಚರ್, ಯುವಜನ ಸೇವಾ ಇಲಾಖೆಗಳ ಬಗ್ಗೆ ಯಾರೂ ಹೆಚ್ಚಿಗೆ ಮಾತನಾಡಲಿಲ್ಲ. ಮುಖ್ಯವಾಗಿ

ವಿ.ಸ.ನ. ದಿನಾಂಕ: 30-7-1980

ಹೆಚ್ ಡಿ ದೇವೇಗೌಡರು, ಜೆ ಹೆಚ್ ಪಟೇಲರು ಮಾತನಾಡುತ್ತ, ಅಡ್ಮಿನಿಸ್ಟ್ರೇಶನ್ ಸಿಸ್ಟಂನಲ್ಲಿ ಕರಪ್ಷನ್ ಜಾಸ್ತಿಯಾಗಿದೆ. ಅದನ್ನು ಹೇಗೆ ತಡೆ ಹಿಡಿಯುತ್ತೀರಿ? ಇದರಿಂದ ಯಾವ ರೀತಿ ಸರ್ಕಾರದ ಆಡಳಿತ ನಡೆಸುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಸಾಕಷ್ಟು ಸರಕಾರದ ಗಮನವನ್ನು ಸೆಳೆದಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು 33 ವರ್ಷಗಳಾಯಿತು. ಈಗ ನಾವು 1980ನೇ ಇಸವಿಯಲ್ಲಿದ್ದೇವೆ. 1980ರ ಮಾರ್ಚ್ 31 ಹಿಂದೆ ಏನು ನಡೆಯಿತು ಅದಕ್ಕೂ ನನಗೂ ಸಂಬಂಧವಿಲ್ಲ. ಆದರೂ ಸ್ವಲ್ಪ ಅದರಲ್ಲಿ ನಾನು ಪಾಲುದಾರನಾಗಿದ್ದೇನೆ. ಏಕೆಂದರೆ ನಾನು ಮಂತ್ರಿಮಂಡಲದಲ್ಲಿ ಇದ್ದೆ. ಮಾನ್ಯ ಸದಸ್ಯರು ಐ ಎ ಎಸ್ ಆಫೀಸರ್ಸ್ ಬಗ್ಗೆ ಐ ಪಿ ಎಸ್ ಆಫೀಸರ್ಸ್ ಬಗ್ಗೆ ಮಾತನಾಡಿದ್ದಾರೆ. ಶ್ರೀ ಸಿ ಎಂ ಅರ್ಮುಗಂರು ಮಾತನಾಡುತ್ತಾ ಕರ್ನಾಟಕದವರು ಐ ಎ ಎಸ್ ಮತ್ತು ಐ ಪಿ ಎಸ್ ಹುದ್ದೆಗಳಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಇದ್ದಾರೆಂದು ಹೇಳಿದರು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಪರೀಕ್ಷೆಗಳಿಗೆ ಜಾಸ್ತಿ ಜನ ಕುಳಿತುಕೊಳ್ಳುವುದಿಲ್ಲ. ಕಡಿಮೆ ಜನ ಕುಳಿತುಕೊಂಡರೂ ಸಹ ಅವರೆಲ್ಲ ಫೇಲಾಗುತ್ತಾರೆಂದು ಹೆಚ್ ಡಿ ದೇವೇಗೌಡರು ಹೇಳಿದರು. ಇದಕ್ಕೆ ನಾನು ಏನು ಮಾಡೋಣ? What is the way out? ಇವತ್ತು ಈ ಸಂಖ್ಯೆ ಕರ್ನಾಟಕದಲ್ಲಿ ಕಡಿಮೆ ಆಗುತ್ತಿದೆ. ತಮಿಳುನಾಡಿನಲ್ಲಿ ಕಡಿಮೆಯಾಗುತ್ತಿದೆ ಎನ್ನುವ ಪ್ರಶ್ನೆ ಮುಖ್ಯವಲ್ಲ. ಆ ಸಿಸ್ಟಂ ಬೇರೆಯಲ್ಲ ಈ ಸಿಸ್ಟಂ ಬೇರೆಯಲ್ಲ. ಸರಕಾರ ನಡೆಸಬೇಕಾದರೆ ನಾನೇ ಮುಖ್ಯಮಂತ್ರಿಯಾಗಲಿ ಶ್ರೀಮಾನ್ ಡಿ ದೇವರಾಜ್ ಅರಸ್ ಅವರೇ ಮುಖ್ಯ ಮಂತ್ರಿಯಾಗಲಿ ಅಥವಾ ಈ ಸ್ಥಾನಕ್ಕೆ ಇನ್ನೊಬ್ಬರು ಬಂದರೂ ಸಹ ಒಂದೇ ಸಿಸ್ಟಂನಲ್ಲಿ ಸರಕಾರ ನಡೆಸಬೇಕು. ಬೇರೆ ಸಿಸ್ಟಂನಲ್ಲಿ ಸರಕಾರ ನಡೆಸುವುದಕ್ಕಾಗುವುದಿಲ್ಲ. ಟ್ರಾನ್ಸ್ಫರ್ ಬಗ್ಗೆಯಾಗಲೀ ರೆಕ್ರುಟ್ಮೆಂಟ್ ಬಗ್ಗೆಯಾಗಲಿ ಬಹಳ ಡೀಟೇಲ್ ಆಗಿ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಶ್ರೀಮಾನ್ ದೇವೇಗೌಡರು ಯಾರೋ ಒಬ್ಬರನ್ನು ಯಾವುದೋ ಒಂದು ಇಲಾಖೆಗೆ ಚೇರ್ಮ್ಯಾನ್ ಆಗಿ ನೇಮಕ ಮಾಡುತ್ತೀರಿ ಎಂದು ಹೇಳಿದರು. ನಾವು ಆ ರೀತಿ ಹೊಸದಾಗಿ ಯಾವುದನ್ನೂ ನೇಮಕ ಮಾಡಿಲ್ಲ. ನಮಗೂ ನಿಮಗೂ ತಿಳಿದಿರುವಂತಹ ವಿಚಾರ ಎಂದರೆ ಹಿಂದೆ ಬೆಳಿಗ್ಗೆ ಒಂದು ಟ್ರಾನ್ಸ್ಫರ್ ಆಗಿ 11 ಘಂಟೆಗೆ ಕ್ಯಾನ್ಸಲ್ ಆಗಿದೆ. ಮಧ್ಯಾಹ್ನ ಒಂದು ಟ್ರಾನ್ಸ್ಫರ್ ಆರ್ಡರ್, ಆಗಿ ಸಾಯಂಕಾಲ ಅದು ಕ್ಯಾನ್ಸಲ್ ಆಗಿದೆ. ಆದರೆ ನಾನು ಮುಖ್ಯಮಂತ್ರಿಯಾದ ಮೇಲೆ ಆರು ತಿಂಗಳ ಕಾಲದಲ್ಲಿ ಯಾವುದೇ ಒಂದು ಟ್ರಾನ್ಸ್ಫರ್ ಆರ್ಡರನ್ನು ಕ್ಯಾನ್ಸಲ್ ಮಾಡಿಲ್ಲ. Atleast you must compliment me that I have not cancelled any transfers so far. I can place all the records for the last 20-30 years. this I can say boldly.

ಇದರಿಂದ ಇಂಥಹ ಒಂದು ಪರಿಸ್ಥಿತಿಯಲ್ಲಿ ನಾನು ತಮ್ಮ ಮೂಲಕ ಮಾನ್ಯ ಸದಸ್ಯರುಗಳ ಸಹಕಾರವನ್ನು ಕೇಳುತ್ತಿದ್ದೇನೆ. ಮಾನ್ಯ ಸದಸ್ಯರುಗಳ ಸಹಕಾರ ಇಲ್ಲದಿದ್ದರೆ ಆಡಳಿತದಲ್ಲಿ ಯಾವ ಬದಲಾವಣೆ ಮಾಡಲು ಸಾಧ್ಯವಾಗುವುದಿಲ್ಲ. ಇಲ್ಲಿಯವರೆಗೆ ವರ್ಗಗಳು ತಾಲ್ಲೂಕ

ಮಟ್ಟದಲ್ಲಿ, ಇಲ್ಲವೇ ಜಿಲ್ಲಾ ಮಟ್ಟದಲ್ಲಿ, ಇಲ್ಲವೇ ರಾಜ್ಯ ಮಟ್ಟದಲ್ಲಿ ಏನಾದರೂ ಆಗುತ್ತಿದ್ದರೆ ಅವರಿಗೆ ಸಂಬಂಧಪಟ್ಟವರ ಮೂಲಕವೊ ಅವರ ಜಾತಿಯವರ ಮೂಲಕವೋ, ಅಥವಾ ರಾಜಕಾರಣಿಗಳ ಮೂಲಕವೋ ತಮಗೆ ಬೇರೆ ಕಡೆಗೆ ವರ್ಗ ಮಾಡುವುದರಿಂದ ಆ ರೀತಿ ತೊಂದರೆಯಾಗುತ್ತದೆ. ಅಥವಾ ಈ ರೀತಿ ತೊಂದರೆಯಾಗುತ್ತದೆಯೆಂದು ಹೇಳಿಸಿ ಅದನ್ನು ರದ್ದು ಮಾಡಿಸುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದು ಮೊದಲು ಹೋಗಬೇಕು. ಅದಕ್ಕಾಗಿಯೇ ನಾನು ಒಂದು ಸಲ ವರ್ಗಾ ಮಾಡಿದ ಮೇಲೆ ಅದನ್ನು ರದ್ದು ಮಾಡಲು ಅವಕಾಶ ಕೊಡುತ್ತಿಲ್ಲ ಇದರಲ್ಲಿ ಎರಡೂ ಕಡೆಯ ಮಾನ್ಯ ಸದಸ್ಯರುಗಳ ಸಹಕಾರ ಇದ್ದರೆ ಮತ್ತು ಯಾರೂ ಮಧ್ಯ ಪ್ರವೇಶಮಾಡುವುದಿಲ್ಲವೆಂದು ಭರವಸೆ ಕೊಟ್ಟರೆ ಮಾತ್ರ ಈ ಕೆಲಸ ಮಾಡಬಹುದು. ಇಲ್ಲದಿದ್ದರೆ ಇಷ್ಟೊಂದು ಬಿಗಿಯಾದ ಕ್ರಮ ಕೈಗೊಳ್ಳುವುದು ಕಷ್ಟವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ - ತಾವು ಬಿಗಿ ಆಡಳಿತ ಮುಂದುವರಿಸಿ.

ಶ್ರೀ ಆರ್ ಗುಂಡೂರಾವ್ - ಎಷ್ಟು ದಿವಸ ಬಿಗಿ ಇರುತ್ತದೋ ಅಲ್ಲಿಯವರೆಗೆ ಇದನ್ನು ಮುಂದುವರೆಸುತ್ತೇವೆ, ಈ ಒಂದು ಕ್ರಮ ಕೈಗೊಂಡಿದಕ್ಕೆ ತಾವು ನನ್ನನ್ನು ಅಭಿನಂದಿಸಬೇಕು. ಏಕೆಂದರೆ, ಇದು ನನಗಾಗಿ ಮಾಡಿದ್ದಲ್ಲ. ಆಡಳಿತದಲ್ಲಿ ಬಿಗಿ ಬರಬೇಕೆಂದು ಮಾಡಿದ್ದು ಅಷ್ಟೆ ಹೊರತು, ಇದರಿಂದ ನನಗೇನು ಕಿರೀಟ ಬರುತ್ತದೆಯೋ, ಯಾರಾದರೂ ನನಗೆ ಪಾರಿತೋಷಕ ಕೊಡುತ್ತಾರೆಯೋ ಎಂದರೆ ಇಲ್ಲ. ಅದಕ್ಕೆ ಬದಲು ಥ್ರೆಟನಿಂಗ್ ಲೆಟರ್‌ಗಳು ಬರುತ್ತವೆ. ಇಲ್ಲವೆ ಅಧಿಕಾರದಿಂದ ಕೆಳಗಿಳಿಯಬೇಕೆಂದು ಪೂಜೆ ಇನ್ನು ಜಾಸ್ತಿ ಮಾಡುತ್ತಾರೆ. ಒಟ್ಟಿನಲ್ಲಿ ಈ ಬಗ್ಗೆ ನಾನು ತಮ್ಮ ಸಹಕಾರ ಕೇಳುತ್ತಿದ್ದೇನೆ. ನಾವೆಲ್ಲರೂ ಸೇರಿಕೊಂಡು ಒಂದು ಬಿಗಿ ಆಡಳಿತ ತರಲು ಪ್ರಯತ್ನ ಮಾಡೋಣ. ಒಳ್ಳೆಯ ಒಂದು ಆಡಳಿತವನ್ನು ತರಲು ನಾವು ಪ್ರಯತ್ನ ಮಾಡೋಣ. ಇದರ ಮೂಲಕ ನಾವು ಜನರ ಹಿತವನ್ನು ಕಾಪಾಡೋಣ. ಅದನ್ನು ಬಿಟ್ಟು ಮೂತ್ರದಲ್ಲಿ ಮೀನು ಹಿಡಿಯುವಂತೆ ಕೆಲಸವನ್ನು ಮಾಡಲು ಹೋಗುವುದುಬೇಡ. ಹಿಂದೆಲ್ಲಾ ಮಾಡಿಲ್ಲವೇ ಎಂದು ಕೇಳಬಹುದು. ಹಿಂದೆ ತಪ್ಪು ಮಾಡಿದ್ದರೆ, ಅದನ್ನು ನಾವು ತಿದ್ದಿಕೊಳ್ಳೋಣ, ಅದನ್ನು ಮುಂದೆಯೂ ಮಾಡುವುದು ಬೇಡ". I have passed an order stating that if any officer brings political influence the officer will be suspended and action will be taken. Though the orders and circulars were already there, I have made it clear that it should be implimented very effectively.

ಶ್ರೀ ಎಸ್ ಆರ್ ಬೊಮ್ಮಾಯಿ - ತಮ್ಮ ನೀತಿಯನ್ನು ನಾನು ಒಪ್ಪುತ್ತೇನೆ. ಆದರೆ ವರ್ಗ ಮಾಡುವುದಕ್ಕೆ ಬದಲು ಯಾವುದಾದರು ನಾರವ್ಸ್ ಅನ್ನು ತಾವಿಟ್ಟುಕೊಳ್ಳುವುದೊಳ್ಳೆಯದು.

ಶ್ರೀ ಆರ್ ಗುಂಡೂರಾವ್ - ಅದನ್ನು ಸಹ ನಾನು ಹೇಳುತ್ತೇನೆ, ಕೆಲವರು ಹೇಳುತ್ತಿದ್ದರು ಏನೆಂದರೆ ಕೆಲವರನ್ನು 6 ತಿಂಗಳಿಗೇ ವರ್ಗಾ ಮಾಡಲಾಗುತ್ತಿದೆ. ಆದರೆ ಮತ್ತೆ ಕೆಲವರನ್ನು 6 ವರ್ಷಗಳಾಗುತ್ತಿದ್ದರೂ ವರ್ಗ ಮಾಡುತ್ತಿಲ್ಲ ಎಂದು ಈ ಲೋಕೋಪಯೋಗಿ ಇಲಾಖೆಯಲ್ಲಿ ವರ್ಗಾವಣೆಗಳು ಯಾವ ರೀತಿ ನಡೆಯುತ್ತಿವೆ ಎಂಬುದು ಮೊದಲು ನನಗೂ ಗೊತ್ತಿರಲಿಲ್ಲ. ಈಗ ನನಗೆ ತಿಳಿಯುತ್ತಿದೆ. ಇವತ್ತು ಸಭೆ ಮುಗಿಯುತ್ತಿದೆ. I do not mind even calling a special session for 15 days only to discuss about all these things. We will consider how we can change it. ಮಾನ್ಯ ಹೆಚ್ ಡಿ ದೇವೇಗೌಡರು ಹೇಳಿದಂತೆ ಯಾರಿಗೆ ಮಂತ್ರಿಗಳ ಸಂಪರ್ಕ ಬೆಳೆಸಲು ಸಾಧ್ಯತೆಯಿದೆ. ಅಂತವರೆಲ್ಲ ಒಂದೇ ಕಡೆ ಅಂದರೆ ಮೇಜರ್ ಇರಿಗೇಷನ್ ನಲ್ಲಿಯೇ ಉಳಿದುಕೊಂಡಿದ್ದಾರೆ. ಆದರೆ ಯಾರಿಗೆ ರಾಜಕೀಯ ಪ್ರಭಾವ ಇಲ್ಲವೋ ಯಾರಿಗೆ ಸರಕಾರದ ಮಟ್ಟದಲ್ಲಿ ಪ್ರಭಾವ ಬೀರಿಸಲು ಶಕ್ತಿಯಿಲ್ಲವೋ ಅಂತವರೆಲ್ಲ ಇನ್ವೆಸ್ಟಿಗೇಶನ್ ಡಿಪಾರ್ಟ್‌ಮೆಂಟಿನಲ್ಲಿಯೇ ಕಳೆದ 25-30 ವರ್ಷಗಳಿಂದ ಇದ್ದಾರೆ. Such intelligent officers are there because they have no political influence and those people are suffering there. ಇದು ಯಾವ ರೀತಿ ನಡೆಯುತ್ತಿದೆಯೆಂದ್ರೆ ಹಾರಂಗಿ ಯೋಜನೆ ಪ್ರಾರಂಭ ಮಾಡುವ ಹಂತದಲ್ಲಿ ಅದನ್ನು ಸರ್ವೆ ಮಾಡಲು ಎಕ್ಸ್ ವೈ ಜಡ್ ಯಾರನ್ನು ಹಾಕುವುದು, ಕಟ್ಟಡ ಕಟ್ಟುವ ಹಂತದಲ್ಲಿ ಅಂದರೆ ಕೋಟಿಗಟ್ಟಲೆ ಹಣದ ಕಟ್ಟಡವನ್ನು ಕಟ್ಟಿಸಲು ಟೆಂಡರ್ ಕರೆಯತಕ್ಕಂತಹ ಸಂದರ್ಭದಲ್ಲಿ ಬೇರೆಯವರನ್ನು ಹಾಕುವುದು ಈ ರೀತಿ ನಡೆದುಕೊಂಡು ಬಂದಿದೆ. ಇದು ಹಾರಂಗಿ ಒಂದಕ್ಕೆ ಅನ್ವಯವಾಗುವುದಿಲ್ಲ. ಹೇಮಾವತಿ, ಕಬಿನಿ, ಅಪ್ಪರ್ ಕೃಷ್ಣ ಮುಂತಾದ ಎಲ್ಲಾ ಯೋಜನೆಗಳಿಗೂ ಅನ್ವಯವಾಗುತ್ತದೆ. ಈ ಮಾತನ್ನು ಮಾನ್ಯ ರಾಮಸ್ವಾಮಿಯವರು ಸಹ ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ - ಹೌದು ನಿಜ.

ಶ್ರೀ ಆರ್ ಗುಂಡೂರಾವ್ - ಇದು ಯಾವ ರೀತಿಯಾಗಿದೆ ಎಂದರೆ ಹಸು ಕರು ಹಾಕುವವರೆಗೂ ನೀನು ಸಾಕು ಕರು ಹಾಕಿದ ನಂತರ ಹಾಲು ಕರೆಯುವ ಸಮಯದಲ್ಲಿ ನಾನು ಸಾಕುತ್ತೇನೆ ಎಂದು ಹೇಳಿದಂತಾಗಿದೆ. ಈ ರೀತಿ ಬುದ್ಧಿವಂತ ಜನರನ್ನೆಲ್ಲ ಎಲ್ಲಿಯೂ ಒಂದು ಕಡೆ ತೆಗೆದುಕೊಂಡು ಹೋಗಿ ಹಾಕಿದ್ದಾರೆ. ಉಳಿದವರು ಅಂದರೆ ರಾಜಕೀಯ ಪ್ರಭಾವವಿರುವವರು ಒಳ್ಳೆಯ ಜಾಗದಲ್ಲಿದ್ದಾರೆ. ಇದು ಇದೊಂದೇ ಇಲಾಖೆಯಲ್ಲಿ ಇದೆ ಎಂದು ತಾವು ತಿಳಿಯಬಾರದು: ಎಲ್ಲ ಕಡೆಯು ಇದೆ. ಈಗ ಪೋಲೀಸ್ ಇಲಾಖೆಯನ್ನೇ ತೆಗೆದುಕೊಂಡರೆ, ಸಿ ಒ ಡಿ ಗಾಗಲೀ ಇಲ್ಲವೇ ವಿಜಿಲೆನ್ಸ್ ಗಾಗಲೀ ವರ್ಗ ಮಾಡಿದರೆ ಯಾರೂ ಹೋಗಲೂ ಇಷ್ಟ ಪಡುವುದಿಲ್ಲ. ಇದಕ್ಕೆ ಕಾರಣ ನಾನು ಹೇಳಬೇಕಾಗಿಲ್ಲ. ವರ್ಗ ಮಾಡಿದ ಕೂಡಲೇ ಅನೇಕ ಜನರು ವರ್ಗವನ್ನು ರದ್ದು ಪಡಿಸುವಂತೆ ನೆವ ಹೇಳುತ್ತಾರೆ. ತಮಗೆ ಏನೋ ತೊಂದರೆ ಇದೆ ಎಂದು ಹೇಳುತ್ತಾರೆ, ವಯಸ್ಸಾದ ತಂದೆ ತಾಯಿಗಳನ್ನು

ಸಾಕಬೇಕಾಗಿದೆ ಎಂದು ಹೇಳುತ್ತಾರೆ, ಇಲ್ಲವೆ ಏಯ್‌ಲಿಂಗ್ ಸಿಸ್ಟರ್ ಅನ್ನು ನೋಡಿಕೊಳ್ಳಬೇಕಾಗಿದೆ ಎಂದು ಹೇಳುತ್ತಾರೆ. ಇಲ್ಲವೇ ಈಗ ತಾನೆ ಹೆಂಡತಿಗೆ ಅಬಾರ್ಷನ್ ಆಗಿದೆಯೆಂದು ಹೇಳುತ್ತಾರೆ., ಈ ರೀತಿಯ ಕಾರಣಗಳನ್ನು ಕೊಟ್ಟು ಈ ಮೊದಲು ವರ್ಗ ರದ್ದು ಮಾಡಿಕೊಂಡಿರುವುದು ಸಹ ಉಂಟು. ಆದರೆ ಇನ್ನು ಮುಂದೆ ಇದೆಲ್ಲ ನಡೆಯಲು ಅವಕಾಶ ಕೊಡುವುದಿಲ್ಲ. ಒಬ್ಬರು ಅಧಿಕಾರಿ ಹೇಳುತ್ತಿದ್ದರಂತೆ.I have seen many Ministers and legislators, nobody can shake me ಎಂದು. But I had shaken him ಏಕೆಂದರೆ ಬೆಳಗ್ಗೆ ಬಸ್ ಹತ್ತಿಕೊಂಡು ಊರಿಗೆ ಹೋಗುವುದಕ್ಕೆ ತಯಾರು ನಾನು. I have no interest in any individual, not only by talking but by action also. I have no worry at all for all these things. I seek co-operation from my collegues and friends. I Agree that we are responsible to give a clean government. ಇದನ್ನು ಮಾಡಿದರೆ 20 point programme, SC programme implementation ಆಗುತ್ತದೆ. ಎಂಪ್ಲೊಯ್ಮೆಂಟ್ ಎಫರ್ಮೇಶನ್ ಸ್ಕೀಂ ನಲ್ಲಿ ಏನಾಗಿದೆಯೆಂದರೆ ಅದು ದೊಡ್ಡ ಕಥೆ. ಅದರಲ್ಲಿ ಒಬ್ಬರು ಒಂದುವರೆ ಲಕ್ಷ, 2 ಲಕ್ಷ, 3 ಲಕ್ಷ ಮಾಡಿಕೊಂಡಿದ್ದಾರೆ. ಮಾನ್ಯ ಅಧ್ಯಕ್ಷರೆ, I will look into it, and continue a committee to look into all these after the session is concluded.

ಶ್ರೀ ಎಸ್ ಆರ್ ಬೊಮ್ಮಾಯಿ - ಮಾನ್ಯ ಮುಖ್ಯಮಂತ್ರಿಯವರು ಒಂದು ನಿಮಿಷ ಈಲ್ಡ್ ಆಗುವುದಾದರೆ ಒಂದು ವಿಚಾರ ಹೇಳುತ್ತೇನೆ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿ ಚೆರ್ಮ್ಯಾನಾಗಿದ್ದಾಗ ನಾರ್ತ್ ಕೆನರಾ ಫಾರೆಸ್ಟ್ನಲ್ಲಿ ಸುಮಾರು 50 ಲಕ್ಷ ರೂ ಗಳಷ್ಟು ಮರವನ್ನು ಅಕ್ರಮವಾಗಿ ಕದಿಯುತ್ತಿರುವ ಸುದ್ದಿ ಬಂತು. ಆಗ ಕೂಡಲೇ ನಾನು ನಮ್ಮ ಕಮಿಟಿ ಸದಸ್ಯರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ನೋಡಿದೆವು. ರಸ್ತೆಯ ಪಕ್ಕದಲ್ಲಿಯೇ ಇರುವ ಫಾರೆಸ್ಟ್ ಮರಗಳನ್ನು 50-60 ವರ್ಷದಷ್ಟು ಹಳೆಯ ಮರಗಳನ್ನು ಕಡಿದು ಹಾಕಿರುವುದನ್ನು ನೋಡಿಕೊಂಡು ಬಂದೆವು. ಆನಂತರ ನಾನು ಆ ಕಮಿಟಿಯ ಚೇರ್ಮಾನಾಗಿ ಸಂಬಂಧ ಪಟ್ಟವರಿಗೆ ದೂರು ಕೊಟ್ಟಾಗ ಅಲ್ಲಿಯ ಅಧಿಕಾರಿಯನ್ನು ಅಲ್ಲಿಂದ ಟ್ರಾನ್ಸ್ಫರ್ ಮಾಡಿ ದಳಿಯಾಳಕ್ಕೆ ಹಾಕಿದ್ದಾರೆ. ಅಲ್ಲಿ ಇದಕ್ಕಿಂತ ಹೆಚ್ಚಿನ ಉತ್ಪನ್ನ ಬರತಕ್ಕದ್ದು ಇದೆ. ಅಲ್ಲಿಗೆ ಇಂಥವರನ್ನು ತೆಗೆದುಕೊಂಡು ಹೋಗಿ ವರ್ಗ ಮಾಡಿದ್ದಾರೆ. ಮತ್ತೆ ಅಲ್ಲಿಂದ ಅವರಿಗೆ ಮುಂದೆ ಪ್ರಮೋಷನ್ ಕೂಡ ಕೊಟ್ಟಿದ್ದಾರೆ.

ಶ್ರೀ ವಿ ಎಂ ಘಾಡಿ - ಸ್ವಾಮಿ ಮಾನ್ಯ ಬೊಮ್ಮಾಯಿ ಅವರು ಹೇಳುವ ವಿಷಯದಲ್ಲಿ ಪ್ರೈಮಾಫೇಸಿ ಕೇಸಿದೆ. ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದನ್ನು ರೀವೋಕ್ ಮಾಡಿದ್ದಾರೆ, ಆ ಅಧಿಕಾರಿಗೆ ಸ್ಟೇಟ್ ಅವಾರ್ಡ್ ಕೊಟ್ಟಿದ್ದಾರೆ. ಪ್ರಮೋಷನ್ ಕೊಟ್ಟ ಮೇಲೆ ನ್ಯಾಷನಲ್ ಅವಾರ್ಡ್ ಕೂಡ ಬಂದಿದೆ. ಆದುದರಿಂದ ಅದರ ಬಗ್ಗೆ ಎಲ್ಲಾ ತನಿಖೆಯಾಗಬೇಕು.

ಶ್ರೀ ಆರ್ ಗುಂಡೂರಾವ್ - ಇಂಥಾದ್ದು ಸಾವಿರಾರು ಇದೆ. ಇಂಥಾದ್ದನ್ನೆಲ್ಲ ತಡೆಗಟ್ಟಬೇಕಾದರೆ ಇದಕ್ಕೆ ಮಾನ್ಯ ಸದಸ್ಯರುಗಳೆಲ್ಲರ ಸಹಕಾರ ಬೇಕಾಗುತ್ತದೆ. ಬೊಮ್ಮಾಯಿ ಅವರು ನಾನು ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ ಎಂದು ಹೇಳಿದರು. ನಾನು ಸ್ವತಃ ಖುದ್ದಾಗಿ ನೋಡಿದ್ದೇನೆ. ನಮ್ಮ ಜಿಲ್ಲೆಯಲ್ಲಿ ಹಿಂದೆ ಬರೀ ಮಿಷನ್ ಇಟ್ಟುಕೊಂಡು ಬಟ್ಟೆ ಹೊಲೆದುಕೊಂಡು ಜೀವನ ಮಾಡುತ್ತಿದ್ದವರು ಇವತ್ತು ಮಲ್ಟಿಮಿಲಿಯನರ್ಸ್ ಆಗಿದ್ದಾರೆ. ನಾನು ಅದೇ ಜಿಲ್ಲೆಯಿಂದ ಫಾರೆಸ್ಟ್ ಇರತಕ್ಕಂಥ ಜಾಗದಿಂದಲೇ ಬಂದಿರುವವನಾದ್ದರಿಂದ ನನಗೆ ಎಲ್ಲ ಗೊತ್ತಿದೆ. ಅದಕ್ಕೋಸ್ಕರ ಇವತ್ತು ನಾವು ಫಾರೆಸ್ಟನ್ನು ಉಳಿಸದೇ ಹೋದರೆ ಮಾನ್ಯ ಎಂ ಸಿ ನಾಣಯ್ಯ ಮತ್ತು ಶ್ರೀ ಹೆಚ್ ಡಿ ದೇವೇಗೌಡರು ಹೇಳಿದ ಹಾಗೆ ಅಲ್ಲಿರುವ ಕಾಡೆಲ್ಲ ಇನ್ನು 5-6 ವರ್ಷಗಳಲ್ಲಿ ಬರಿದು ಆಯಿತೆಂದರೆ ಬಹುಶಃ ನಮ್ಮ ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದ ಏನು ನೀರು ಬರುತ್ತಿದೆ ಅಲ್ಲಿ ಅದು ಬತ್ತಿ ಹೋಗಿ ಕುಡಿಯಲು ನೀರು ಸಹ ಇಲ್ಲದ ಹಾಗಾಗುತ್ತದೆ. ಅದಕ್ಕೋಸ್ಕರವಾಗಿಯಾದರು ನಾವು ಇವತ್ತು ಅರಣ್ಯವನ್ನು ಬೆಳೆಸಬೇಕಾಗಿದೆ.

ನಮ್ಮ ಎಲ್ಲಾ ಸಂಪತ್ತು ಏನಿದೆ ಅದು ಉಳಿಯಬೇಕಾದರೆ ವನ್ಯ ಸಂಪತ್ತು ಇರಬೇಕು. ಅದು ಇಲ್ಲದ್ದಿದ್ದರೆ ಆಗುವುದಿಲ್ಲ, ಇವತ್ತಿನ ದಿವಸ ನಮ್ಮಲ್ಲಿ, ಹಾರಂಗೀ, ಹೇಮಾವತಿ, ಹಾಗೂ ಕಬಿನಿ ಯೋಜನೆಗಳಿಂದ ಬೇಕಾದಷ್ಟು ಅರಣ್ಯ ಸಂಪತ್ತು ಮುಳಗಿಹೋಗಿತ್ತು. ಪುನಃ ಕಾಳಿ ನದಿ ಯೋಜನೆಯಿಂದ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಮುಳಗಲಿದೆ. ಹೀಗೆ ಬರೀ ಪ್ರಾಜಕ್ಟಗಳನ್ನು ಕಟ್ಟುತ್ತಾ ಹೋದರೆ ಬಹಳಷ್ಟು ಅರಣ್ಯ ಸಂಪತ್ತು ಮುಳುಗಿ ಹೋಗುತ್ತದೆ ಇಂಜನೀಯರು ಕೇಳಿದರೆ, ಪ್ರಾಜಕ್ಟ್ ಕಟ್ಟಬೇಕೆನ್ನುತ್ತಾರೆ. ಕೈಗಾರಿಕೆಯವರನ್ನು ಕೇಳಿದರೆ ಮರಗಳನ್ನು ಬೇಕೆನ್ನುತ್ತಾರೆ. ಇದೇ ರೀತಿ ಅರಣ್ಯ ಮುಳುಗುತ್ತಾ, ನಾಶವಾಗುತ್ತಾ, ಹೋದರೆ ಅರಣ್ಯವನ್ನು ಬೆಳೆಸುವುದಾದರೂ ಹೇಗೆ? ಉಳಿಸುವುದಾದರೂ ಹೇಗೆ? ಒಂದು ಬೀಟೆ, ಹೊನ್ನೆ ಅಥವಾ ತೇಗದ ಮರವನ್ನು ಬೆಳಸಬೇಕಾದರೆ ಕೊನೆಯ ಪಕ್ಷ 120 ವರ್ಷಗಳಾದರು ಬೇಕಾಗುತ್ತದೆ. 120 ವರ್ಷಗಳ ಕಾಲ ಅವುಗಳನ್ನು ರಕ್ಷಣೆ ಮಾಡಿಕೊಂಡು ಬಂದರೆ ದಟ್ಟ ಅರಣ್ಯವಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ರಕ್ಷಣೆ ಮಾಡುವುದಾದರೂ ಎಲ್ಲಿ ಬುತ್ತಿ? ಇವತ್ತಿನ ದಿವಸ ನಮ್ಮ ಭಾರತ ದೇಶದಲ್ಲಿ ಗಂಧದ ಮರ ಇರುವುದು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ. ಯಥೇಚ್ಛವಾಗಿ ಗಂಧದ ಮರ ಇರುವುದೆಂದರೆ ನಮ್ಮ ರಾಜ್ಯದಲ್ಲಿ ಮಾತ್ರ. ಅದನ್ನು ನಾವು ಕಳೆದುಕೊಂಡದ್ದೇ ಆದರೆ ಪುನಃ ಬೆಳೆಸುವುದಕ್ಕಾಗುವುದಿಲ್ಲ. ಒಂದು ಅಂಬಾಸಿಡರ್ ಕಾರಿನಲ್ಲಿ ಗಂಧದ ಮರವನ್ನು ಮೈಸೂರು ಅಥವಾ ಕೊಡಗೂ ಬಾರ್ಡರ್‌ನಿಂದ ಕೇರಳಕ್ಕಾಗಲಿ, ತಮಿಳುನಾಡಿಗಾಗಲಿ ಸಾಗಿಸಿದರೆ ಆತನಿಗೆ ಒಂದು ಹೊಸ ಅಂಬಾಸಿಡರ್ ಕಾರನ್ನು ಕೊಟ್ಟು ಕಳುಹಿಸುತ್ತಾರೆ. even today with all our efforts it is still going on. ಇಲ್ಲಿ ಏನಾಗುತ್ತಿದೆ ಎಂದರೆ ಕೋರ್ಟಿನಲ್ಲಿ ಬಿಟ್ಟು ಬಿಡುತ್ತಾರೆ. ಪೋಲಿಸರು ಏನಾದರೂ ಅಡಿದರೆ ಕಾರನ್ನೇ ಬಿಟ್ಟು ಓಡುತ್ತಾರೆ. ಏತಕ್ಕೆ ಕಾರನ್ನು ಬಿಟ್ಟು ಓಡುತ್ತಾರೆಂದರೆ,

ಕಾರು ಬಿಟ್ಟಿ ಬಂದಿರುವುದು. ಹೋದರೆ ಹೋಯಿತು ಎನ್ನುತ್ತಾರೆ. ಕೊನೆಗೂ ಯಾರು ಕಾರನ್ನು ಕ್ಲೈಂ ಮಾಡುವುದಕ್ಕೆ ಬರುವುದಿಲ್ಲ. ನಾನು ಹಿಂದೆ ಸಾರಿಗೆ ಮಂತ್ರಿಯಾಗಿದ್ದಾಗ ನನ್ನ ಜೊತೆ ಮಾನ್ಯ ನಾಣಯ್ಯನವರು ಬಂದಿದ್ದರು; ನಾವು ಅಲ್ಲಿ ಬಿದ್ದಿದ್ದ ಸುಮಾರು 36 ಕಾರುಗಳನ್ನು ನೋಡಿದೆವು ಯಾರು ಅದನ್ನು ಕ್ಲೈಂ ಮಾಡುವ ಗೋಜಿಗೆ ಹೋಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಇವತ್ತಿನ ಕಾನೂನು ಪ್ರಕಾರ ಆ ಕಳ್ಳಸಾಗಾಣಿಕೆಯನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. That is what I am bringing an amendment to this Forest Act. ಕಳ್ಳ ಸಾಗಾಣಿಕೆಗಾರರಿಗೆ ಜೀವಾವಧಿ ಶಿಕ್ಷೆಯನ್ನು ಕೊಡಬೇಕು. Unless you declare such punishment the smuggling of sandal-wood, rose-wood and teakwood will not be stopped. They are well trained and their machinery and their information is very accurate and systematic. Our Government machinery cannot work in such a way. ಇವತ್ತು ನಮ್ಮ ರಾಜ್ಯದ ಬಾರ್ಡರ್ ನಲ್ಲಿ ಮರಗಳನ್ನು ಕಡಿದು ಹೊಳೆಯೊಳಗೆ ಹಾಕಿ ಅದರ ಜೊತೆಯಲ್ಲಿ ಈಜಿಕೊಂಡು ಕೇರಳಕ್ಕೆ ಹೋಗುತ್ತಾರೆ. ಕಾಡಿನ ಮಧ್ಯದಲ್ಲಿರುವ ಗಾರ್ಡನ್ನು ಕೇಳುವವರಾದರೂ ಯಾರಿರುತ್ತಾರೆ? Their life is in danger. I was pleadig for this since last five years after becoming Minister and the former Minister Sri Rame Gowda was very much willing to take certain decisions. But, it could not be implemented and now we have taken certain actions. We have started a new squad. A Superintendent of Police in charge of the squad with necessary additional staff and jeeps. Wireless stations have been established. Unless we use this military type of helicopters to put down such activities it may not be possible. Even if you post 5 to 6 officers unless they give co-operation to the smuglers, they will never get anything, because those smugglers say "If you co-operate we will give you everything, If you do not co-operate you are not sure about your life also". So many guards and foresters were shot dead. This is a very serious matter. I know the entire background I do not require any briefing or anything from anyone, nor I should read any books. That is what I am saying that this should be dealt with very very seriously and severe punishment should be given. if any body commits an offence of smuggling for

the first time he should be imprisoned for not less than five years. It should be like a military operation, not like an ordinary operation, because you will have to do it in forests.

Sr M.C. NANAIAH - Traders have got a direct link with the smugglers. We have to eliminate them first.

SRI R. GUNDU RAO - If that act is passed the local traders will be automatically eliminated. They are getting all advantages., It is easy for them. We have to take very very drastic action.

Coming to the Excise Department, it is another big lobby as Hon'ble friend Sri Devegowda put it. It is a very influential lobby. It is controlled by Excise contractors. To-day why there is criticism about me is because I am not yielding to them. That is why they are trying to give a different colour to this Government and to this Ministry. But, I will not be scared by such persons. I know where to tighten them. If once I start I know how to teach them a lesson also.

ನಾನು ಈ ಇಲಾಖೆಯನ್ನು ವಹಿಸಿಕೊಂಡ 6 ತಿಂಗಳಿಗೇ 25 ಕೋಟಿ ರೂಪಾಯಿಗಳಷ್ಟು ಜಾಸ್ತಿಯಾಗಿದೆ. ಅದರಲ್ಲೂ ಇಷ್ಟು ಹಣ ಜಾಸ್ತಿಯಾಗಿರುವುದು ಇದೇ ಮೊದಲ ಬಾರಿಗೆ. ಇನ್ನು ಸ್ವಲ್ಪ ಕಾಲಾವಕಾಶವನ್ನು ಕೊಡಿ, ಬರುವ ವರ್ಷಕ್ಕೆ 50 ಕೋಟಿ ರೂಪಾಯಿಗಳನ್ನು ಮಾಡಿ ತೋರಿಸುತ್ತೇನೆ.

Sri K. Prabhakar.- This is really what is expected of you.

Sri R. Gundu Rao. - Thank you, I do not mind having a friendship with those people. they are also very important people. ಯಾರೋ ಒಬ್ಬ ಅಧಿಕಾರಿಯನ್ನು ಜಿಲ್ಲಾ ಮಟ್ಟದಲ್ಲಿ ಹಿಡಿದು ಅವರ ಬಗ್ಗೆ ಇಲ್ಲದ ಸಲ್ಲದ ಕಿತಾಪತಿ ಮಾಡಿ ಪತ್ರಿಕೆಗಳಲ್ಲೆಲ್ಲ ಬರೆದರು. ಈವತ್ತು ಆ ವಿಚಾರ ನನಗೆ ಗೊತ್ತಿದೆ. Though the reporters like to write correct reports it will be changed at some level, that is what is happeing to-day. If they think by carrying such false propaganda they can achieve their end. I tell them it is not possible. ಇನ್ನು ಅಬಕಾರಿ ವಿಷಯವಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ಏನನ್ನೋ ಮಿಶ್ರ ಮಾಡುತ್ತಾರೆ ಎಂದು ಹೇಳಿದ್ದಾರೆ. ಆದರೆ ನಾನು ಅವರನ್ನು ಮಟ್ಟೆ

ಹಾಕುವ ಶಕ್ತಿ ನನಗಿದೆ. ಎಕ್ಸೈಜ್‌ನವರು ಬೇಕಾದಷ್ಟು ಆಡಿದರು, ಆದರೆ ಏನೂ ನಡೆಯಲಿಲ್ಲ. ನಡೆಯುವುದಕ್ಕೆ ನಾನು ಬಿಡುವುದಿಲ್ಲ. I agree, lot of corruption is there in the Excise department I am at it and Government is also doing its best to put an end to it. Therefore, I once again seek the co-operation of all the Members and if they strengthen my hands I will put down all the malpractices. I will not hesitate to punish the guilty persons whoever they may be.

Sri B.B. Sayanak - Sir, I have told you about the denatured spirit.

Sri R. Gundu Rao, - When I am talking about tiger you are talking about rat. That is a simple thing. That is only in the district and taluka level. I am talking about the state level. So, don't worry about denatured spirit. We will take action to set right things. I assure that within 6 months I will set right this department and at the same time I seek your co-operation to this operation.

Sri J.H. Patel. - Wish you all the best.

Sri R. Gundu Rao - Thank you very much. This is the case in other department also. So, let us have a Session to consider the working of each department.

ಇನ್ನು ಕೈಗಾರಿಕೆ ಬಗ್ಗೆ ಹೆಚ್ಚಾಗಿ ಯಾರೂ ಮಾತನಾಡಿಲ್ಲ. ಅವರು ಕೆಲವು ವಿಷಯಗಳನ್ನು ಮಾತ್ರ ಹೇಳಿದ್ದಾರೆ. ಆದರ ಬಗ್ಗೆ ವಿವರವಾಗಿ ಚರ್ಚೆ ಮಾಡುವ ಅವಶ್ಯಕತೆ ಇದೆ. ರೇಷ್ಮೆ ಉದ್ದಿಮೆಯ ವಿಷಯವಾಗಿ ಶ್ರೀ ಎಂ.ಸಿ. ಬಸಪ್ಪನವರು ಮಾತನಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ 83 ಕೋಟಿ ರೂಪಾಯಿ ಯೋಜನೆ ಈಗ ಬಂದಿದೆ. ಮಾರ್ಕೆಟಿಂಗ್ ಸಿಸ್ಟಂ ಕಂಟ್ರೋಲ್ ಮಾಡಬೇಕು ಎಂದು ಬೆಂಗಳೂರಿನಲ್ಲಿ ಸಿಲ್ಕ್ ಎಕ್ಸ್ಚೇಂಜನ್ನು ಮಾಡಲಾಗಿದೆ. ಆದರಲ್ಲೂ ಲ್ಯಾಪ್ಸಸ್ ಇರಬಹುದು, ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಇದೊಂದು ಪ್ರಯೋಗ, ಕರ್ನಾಟಕ ರೇಷ್ಮೆ ಉದ್ದಿಮೆಗೆ ಹೆಸರು ವಾಸಿಯಾಗಿದೆ. We have to maintain our standard, Earlier it was decided to take up sericulture in five districts, Now we are taking up sericulture projects in all the 19 districts.

ನಿರುದ್ಯೋಗ ಸಮಸ್ಯೆಯನ್ನು ಬಗೆ ಹರಿಸುವುದಕ್ಕೆ ಇದು ಸಹಕಾರಿಯಾಗುತ್ತದೆ. ಫಾರಿನ್ ಎಕ್ಸ್ಛೇಂಜ್ ತಂದು ಕೊಡುತ್ತದೆ. ಮೈಸೂರು ಸಿಲ್ಕ್ ಎಂದರೆ ಹೆಸರುವಾಸಿಯಾಗಿದೆ. ಇದಕ್ಕೆ ವಿಶ್ವಬ್ಯಾಂಕ್ ನೆರವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು 80 ಕೋಟಿ ರೂಪಾಯಿ ಯೋಜನೆಯನ್ನು ಮಾಡಬೇಕಾಗಿದೆ. ಅದರ ಬಗ್ಗೆ ಸರ್ಕಾರ ಸಾಕಷ್ಟು ಗಮನ ಕೊಡುತ್ತದೆಂದು ಹೇಳಬಯಸುತ್ತೇನೆ.

ಇನ್ನು ವಿಜಯನಗರ ಉಕ್ಕಿನ ಕಾರ್ಖಾನೆ ವಿಷಯ, ಇದರ ಬಗ್ಗೆ ಕೇಂದ್ರ 30 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಲು ನಾಳೆ ನಾನು ನಿರ್ಣಯವನ್ನು ಇಲ್ಲಿ ತರುತ್ತೇನೆ. I agree with my friends that 30 crores is nothing for such a big project. At lest with our efforts and with the co-operation of all the members we got the money.

ಶ್ರೀ ಎಸ್.ಆರ್. ಬೊಮ್ಮಾಯಿ.- ಒಂದೊಂದು ಇಂಡಸ್ಟ್ರಿಯಲ್ ಪ್ರಾಜೆಕ್ಟ್‌ನಲ್ಲಿ ಕೋಟ್ಯಾಂತರ ರೂಪಾಯಿಗಳು ಖರ್ಚಾಗುತ್ತಿದೆ. ಸೋಪ್ ಫ್ಯಾಕ್ಟರಿ, ಪೇಪರ್ ಮಿಲ್ ಆಮೇಲೆ ಸಿಲ್ಕ್ ಯೂನಿಟ್ ಈ 3 ಕಡೆಗಳಲ್ಲಿ ಯಾವ ರೀತಿ ಹಣ ಖರ್ಚಾಗುತ್ತಿದೆ ಎಂಬುದಕ್ಕೆ ನನ್ನ ಹತ್ತಿರ ಅಂಕಿ ಸಂಖ್ಯೆ ಇದೆ. ಡಾಕ್ಯುಮೆಂಟ್ಸ್ ಇದೆ. ಆದರೂ ಏತಕ್ಕೆ ಹೇಳಿಲ್ಲ ಎಂದರೆ ಸಮಯ ಇಲ್ಲ.

ಶ್ರೀ ಆರ್. ಗುಂಡೂರಾವ್.- ಪ್ರಾಜೆಕ್ಟ್ ಗಳನ್ನು ಮಾಡಿದಾಗ ಎಷ್ಟು ಅಂದಾಜು ಮಾಡಿರುತ್ತಾರೋ ಅದು ಮುಗಿಯಬೇಕಾದರೆ ಅಷ್ಟಕ್ಕೆ ಮುಗಿಯುವುದಿಲ್ಲ. ಉದಾಹರಣೆಗೆ ಹೇಮಾವತಿ ಪ್ರಾಜೆಕ್ಟ್ ನಾನು ಎಂ.ಎಲ್.ಎ. ಆಗಿದ್ದಾಗ 16 ಕೋಟಿ ರೂಪಾಯಿ ಅಂದಾಜು ಇತ್ತು. ಅದು ಈಗ 50 ಕೋಟಿಗೆ ಹೋಗಿದೆ. ಹಾರಂಗಿ ಪ್ರಾಜೆಕ್ಟ್ 14 ಕೋಟಿ ರೂಪಾಯಿ ಇದ್ದದ್ದು 250 ಕೋಟಿ ರೂಪಾಯಿ ಆಗಿದೆ., ಅದೆ ರೀತಿ ಪೇಪರ್ ಮಿಲ್ ವಿಸ್ತರಣಾ ಯೋಜನೆಗೆ 25 ಕೋಟಿ ರೂಪಾಯಿ ಮೊದಲು ಅಂದಾಜಿದ್ದರೆ ನಂತರ 100 ಕೋಟಿ ರೂಪಾಯಿಗೆ ಹೋಯಿತು. ಇವತ್ತು 150 ಕೋಟಿ ರೂಪಾಯಿಗೆ ತಲುಪಿದೆ. ಅದೇ ರೀತಿ ಷಿಪ್ಪಿಂಗ್ ಕಾರ್ಪೋರೇಷನ್.

ಶ್ರೀ ಬಿ.ಬಸವಲಿಂಗಪ್ಪ .- ಅದನ್ನು ಮುಳುಗಿಸಿದ್ದೀರಲ್ಲ.

ಶ್ರೀ ಆರ್. ಗುಂಡೂರಾವ್.- ಮುಳುಗಿಸಿದ್ದೀರಿ ಎಂದು ಏತಕ್ಕೆ ಹೇಳುತ್ತೀರಿ? ನಿಮ್ಮ ಮಾತಿನಲ್ಲೇ ಹೇಳಿ 'ನೆಗೆದು ಬಿದ್ದು ಹೋಯಿತು' ಎಂದು (ನಗು) ಕೈಗಾರಿಕೆ ಬಗ್ಗೆ ಸಾಕಷ್ಟು ಚರ್ಚೆ ಮಾಡಬೇಕಾದ ವಿಷಯಗಳಿವೆ. ಅದರಲ್ಲಿ ಸಾಕಷ್ಟು ಲ್ಯಾಪ್ಸಸ್ ಇದೆ. ಲೈಸನ್ಸಿಂಗ್ ಸಿಸ್ಟಂನಲ್ಲಿ, ಕೋಟಾ ಕೊಟ್ಟಿರುವುದರಲ್ಲಿ ಬೇಕಾದಷ್ಟು ಲ್ಯಾಪ್ಸಸ್ ನಡೆದಿದೆ.

ನಮ್ಮ ರಾಜ್ಯದ ಅನೇಕ ಯೋಜನೆಗಳಿಗೆ ಕೇಂದ್ರದಿಂದ ಹಣ ಸಿಕ್ಕಿಲ್ಲ ಮತ್ತು ನಮಗೆ ಅನ್ಯಾಯವಾಗಿದೆ, ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ.

ಇಲ್ಲಿ ಪಕ್ಷ ಪಂಗಡಗಳ ಪ್ರಶ್ನೆ ಇಲ್ಲ. We will have a resource committe. ಎರಡೂ ಕಡೆಯ ಮಾನ್ಯ ಸದಸ್ಯರುಗಳನ್ನು ಸೇರಿಸಿ ಒಂದು ಸಮಿತಿ ಮಾಡೋಣ. To safeguard the state interest to get assitance from the central government or world bank, a delegation must go and convince the concerned Minister and also the prime minister, in this issue let us show that Karnataka is one and karnataka Legislators one united. We should treat these issues above party level. It is not a question of an individual. It is a question of state interest. Whatever injustice has been done so far question of state interest. We will demand compensation for that. We will use our good officer and influence, convince, them and get more money so that incomplete works can be completed and canals and road works can be taken up.

ಇನ್ನು ಬೆಲೆ ಏರಿಕೆ ವಿಚಾರದ ಬಗ್ಗೆ ನಾನೀಗಾಗಲೇ ಹೇಳಿದ್ದೇನೆ. ಒಂದು ವಾರದಿಂದ ಆದರ ಬಗ್ಗೆ ಇಲ್ಲಿ ಚರ್ಚೆಯಾಗಿದೆ.

ಇನ್ನು, ನಮ್ಮ ರಾಜ್ಯದ ಪೊಲೀಸರನ್ನು ಬೇರೆ ರಾಜ್ಯಗಳ ಪೊಲೀಸರಿಗೆ ಹೋಲಿಸಿ ನೋಡುವುದಾದರೆ, ನಮ್ಮಲ್ಲಿ ಎಲ್ಲಾ ಮಟ್ಟಗಳಲ್ಲೂ ಒಳ್ಳೆಯ ಕೆಲಸ ಮಾಡಿದವರಿದ್ದಾರೆ. ಎಲ್ಲೋ ಕೆಲವರು ಕೆಟ್ಟವರು ಸಹ ಇರಬಹುದು. ಆದರೆ compared to all other states, out state police have done excellent work and they are doing good work. ಈಗ ನಮ್ಮಲ್ಲಿ ಪೋಲೀಸ್ ಠಾಣೆಗಳು ಮತ್ತು ಡಿವಿಜನ್‌ಗಳು ಕಡಿಮೆ ಇವೆ. We have now started one more DIvision in mangalore comprising four districts viz. Chickmangalur, North Kannara, South Kanara and Shimoga. Mysore Division is having 9 districts. The whole system of the intelligence department will be reorganised and we are having a separate plan for it. We shall see that the relationship between the police and the people are cordial, and also see that dealing with the public by the police will be a friendly approach rather than as an authoritative approach. We will train the police officers at all levels but it takes time.

Sri J.H. Patel - I had pointed out that in Tamilnadu and Maharashtra, the police constables have been allowed to have their own union. But in karnataka it is not permitted. If they are allowed to have their union, they can air their grievances through the union.

Sri R. Gundu Rao - We will think over, discuss and take a decision. ಇತ್ತೀಚಿಗೆ ನವೀನ ರೀತಿಯ ಕಳ್ಳತನಗಳಾಗುತ್ತವೆ, ಹೊಸ ಹೊಸ ಕಳ್ಳತನಗಳು ಹುಟ್ಟಿಕೊಳ್ಳುತ್ತಿವೆ. ಮುಂದುಗಡೆ ಒಂದು ಕಾರು ಹೋಗುತ್ತಿದ್ದರೆ, ಹಿಂದಿನಿಂದ ಕಾರಿನಲ್ಲಿ ಬಂದು ಓವರ್‌ಟೇಕ್ ತೆಗೆದುಕೊಂಡು ಆ ಕಾರಿನಲ್ಲಿದ್ದವರ ಹಣ ಒಡವೆಗಳನ್ನು ಕಿತ್ತುಕೊಂಡು ಕಳುಹಿಸುವ ಪ್ರಸಂಗಗಳು ನಡೆಯುತ್ತಿವೆ ಆದುದರಿಂದ We are thinking of strengthening the whole department. By giving more facilities to enable them to do their job more effectively and detect crimes and see that protection is given to the citizen of the state. ಇನ್ನು ವಾರ್ತಾ ಇಲಾಖೆ ಸಾಕಷ್ಟು ಕೆಲಸ ಮಾಡಬೇಕಾಗಿದೆ. ಸಣ್ಣ ಪತ್ರಿಕೆಗಳಿಗೆ ಜಾಹೀರಾತು ಕೊಡುವುದನ್ನು ನಿಲ್ಲಿಸಲಾಗಿದೆ. ಕೆಲವು ಸಣ್ಣ ಪತ್ರಿಕೆಗಳು ಜಿಲ್ಲಾ ಮಟ್ಟದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿವೆ. ಅಂತಹ ಪತ್ರಿಕೆಗಳಿಗೆ ಬೇಕಾದರೆ 100 ಅಥವಾ 200 ರೂಪಾಯಿ ಜಾಸ್ತಿ ಕೊಡೋಣ. ಆದರೆ, ಕೆಲವು ಸಣ್ಣ ಪತ್ರಿಕೆಗಳು 160 ಜನ ಶಾಸಕರಲ್ಲಿ ಯಾರು ಮಂತ್ರಿಗಳಾಗುತ್ತಾರೆ ಎಂದು ಬರೆಯುವುದು, ಏನೇನೋ ಬರೆಯುವುದು, ಇದೆಲ್ಲಾ ಏನು? There should be some potentiality in the news. we will give assistance. It is the duty of the government to encourage the small newspapers. Atleast they should maintain the quality of the publication. 500 ಅಥವಾ ಒಂದು ಸಾವಿರ ಪತ್ರಿಕೆಯನ್ನು ಮುದ್ರಣ ಮಾಡಿ ಹಂಚಿದರೆ ಪರವಾಗಿಲ್ಲ 10 ಪತ್ರಿಕೆಗಳನ್ನು ಮುದ್ರಣ ಮಾಡಿ 10,000 ರೂಪಾಯಿಗಳನ್ನು ಕೊಡಿ ಎಂದರೆ, ದುಡ್ಡು ಯಾರದು? ಕೊನೆಯ ಪಕ್ಷ ಕೆಳಮನೆಯ ಮತ್ತು ಮೇಲ್ಮನೆಯ ಸದಸ್ಯರ ಸಂಖ್ಯೆಯಷ್ಟಾದರೂ ಮುದ್ರಣ ಮಾಡಿ ಹಂಚಬಹುದಲ್ಲ? ನಾವು ಇಂತಹವುಗಳಿಗೆ ಪ್ರೋತ್ಸಾಹ ಕೊಟ್ಟರೆ, ಅದು ನಿಜವಾದ ಪ್ರೋತ್ಸಾಹವಾಗಲಾರದು.

ಇನ್ನು, ದೊಡ್ಡ ದೊಡ್ಡ ಪತ್ರಿಕೆಯವರದೂ ಒಂದು ರೀತಿಯ ರಾಜಕೀಯ ಅವರು ಮನಸೇಚ್ಛೆಯಿಂದ ಬರೆಯುತ್ತಿರುತ್ತಾರೆ. ದೇಶದ ಹಿತದೃಷ್ಟಿಯಿಂದ ಬರೆಯುವುದಿಲ್ಲ. ಇವತ್ತು ಯಾರು ಹೋಗುತ್ತಾರೆ ಮತ್ತು ಯಾರು ಬರುತ್ತಾರೆ ಎಂಬುವುದನ್ನು ನೋಡಿಕೊಂಡು ಬರೆಯುತ್ತಾರೆ. "ರೈತರ ಗುಂಪಿನಲ್ಲಿ ಕೆಲವು ಗುಂಡಾಗಳೂ ಸೇರಿಕೊಂಡು ಗಲಾಟೆ ಮಾಡಿದ್ದಾರೆ" ಎಂದು ನಾನು ಹೇಳಿದರೆ, ಪತ್ರಿಕೆಯಲ್ಲಿ ರೈತರ ಚಳುವಳಿ ಗೂಂಡಾ ಚಳವಳಿ

ಎಂದು ನಾನು ಹೇಳಿದಂತೆ ಬರೆದಿದ್ದಾರೆ, ಅದನ್ನು ಓದಿದ ಯಾವ ರೈತನೇ ಆಗಲಿ ಅಪ್ಸೆಟ್ ಆಗುವುದಿಲ್ಲವೆ? I tell you, it is an anti-social and anti-people activity. If such people are continued to exist, it is a very dangerous thing for the state. We cannot close our eyes and keep quiet. This is nothing but misleading the leaders and say something, naturally they will get offended. If you go one step further and say something, naturally they will get offended. If they write such things, peole will take care of them in the interest of peace and stability in the state. There should be some limit for anything. They cannot go on like this. I can understand that view can be expressed by any individual. They can express their views in editorial and readers columns. But not in the react columns. If they do it they are answerable, they are accountable and chargeable for bad and false propaganda which creates violence in the state. Tomorrow, the whole assembly may pass a resolution against such type of attitude. Unless people are fed with correct information and correct news, there may be some sort of chaos, again the government has to interfere, therefore, I request the Editors, Chief Reporters, Proprietors who ever they may be, let them understand Dharma and act accordingly.

ಶ್ರೀ ಎಸ್. ಆರ್. ಬೊಮ್ಮಾಯಿ - ಪತ್ರಿಕೆಯ ನೀತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರುಗಳು ಹೇಳಿದ್ದಾರೆ. ನಾನದನ್ನು ಒಪ್ಪಿಕೊಳ್ಳುತ್ತೇನೆ. ಪತ್ರಿಕೆಗಳೂ ಕೂಡ ಪ್ರಜಾಪ್ರಭುತ್ವದಲ್ಲಿ ಜವಾಬ್ದಾರಿ ಸ್ಥಾನದಲ್ಲಿವೆ. ಅವುಗಳನ್ನು ತಿದ್ದತಕ್ಕ ಪ್ರಯತ್ನವನ್ನು ನಾನು ಒಪ್ಪುತ್ತೇನೆ. ಆದರೆ, ಮಾನ್ಯ ಮುಖ್ಯಮಂತ್ರಿಯವರು ಈ ರೀತಿಯ ಉದ್ದೇಶದಿಂದ ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ ಬರುವ ರೀತಿಯಲ್ಲಿ ಹೇಳುವುದು ಸೂಕ್ತವಲ್ಲ ಇಲ್ಲಿಯ ವರದಿಯನ್ನು ತಪ್ಪಾಗಿ ಪ್ರಕಟಿಸಿ ಜನರಿಗೆ ತಿಳುವಳಿಕೆ ಕೊಡುವುದನ್ನು ತಪ್ಪಿಸುವುದನ್ನು ನಾನು ಒಪ್ಪುತ್ತೇನೆ ಆದರೆ, ಪತ್ರಿಕಾ ಸ್ವಾತಂತ್ರ್ಯವಿರುವಾಗ ಪತ್ರಿಕೆಗಳ ಮಾಲೀಕರಿಗೆ ಮ್ಯಾನೇಜ್ಮೆಂಟ್ನವರಿಗೆ ಮತ್ತು ವರದಿಗಾರರಿಗೆ ಬೆದರಿಕೆ ಹಾಕುವುದು ಸರಿಯಲ್ಲವೆಂದು ಹೇಳುತ್ತೇನೆ.

(ಗೊಂದಲ)

ಶ್ರೀ **ಗುಂಡೂರಾವ್** - ನಾನು ಬೆದರಿಕೆ ಹಾಕುತ್ತಿಲ್ಲ. ಇದರಿಂದಾಗುವ ಅನಾಹುತವೆಷ್ಟು? ನಾಳೆ ದಿವಸ ಯಾವುದಾದರೊಂದು ಬಾವಿ ಉದ್ಘಾಟಿಸಲು ನಾನು ಹೋಗಬಹುದು. ಅಥವಾ ತಾವು ಸಮ್ಮೇಳನಕ್ಕೆ ಬನ್ನಿ ಎಂದು ನನ್ನನ್ನು ಕರೆದಾಗ ಬರಬಹುದು. ಆಗ, ರೈತರುಗಳು, ನಮ್ಮನ್ನು ಗುಂಡಾಗಳೆಂದು ಕರೆದಿದ್ದೀರಿ ಎಂದು ಕೇಳಿದರೆ, ನಾನಿದನ್ನೆಲ್ಲಾ ವಿವರಿಸಬೇಕಾಗುತ್ತದೆ. ಅಲ್ಲಿ ಕಲ್ಲು ಹೊಡೆದರೆ ಇವರು ಬರುತ್ತಾರಾ ನಮ್ಮ ರಕ್ಷಣೆಗೆ? ಅವರು ತೊಂದರೆ ತಂದು ಹಾಕಿದರೆ ನಮ್ಮ ರಕ್ಷಣೆಗಾಗಿ ನಾವು ಯೋಚನೆ ಮಾಡಬೇಕಾಗುತ್ತದೆ. ಅವರನ್ನು ಹೆದರಿಸಿದರೆ ನಮಗೆ ಏನು ಲಾಭ ಬರುತ್ತದೆ? "ಸಂಪಾದಕೀಯ"ದಲ್ಲಿ ಬೇಕಾದರೆ ಏನಾದರೂ ಬರೆದು ಕೊಳ್ಳಲಿ, ಆದರೆ, ವಾಸ್ತವ ಸುದ್ದಿಯಲ್ಲಿ ಏತಕ್ಕೆ ಹೀಗೆ ಮಾಡಬೇಕು? Report should be honest to the facts, regarding opinion, I have objection, it is their freedom. no one will interfere. As far as the news is concerned, if it goes wrong, we have got a right to comment on it.

## ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ

1981ರಲ್ಲಿ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನಾ ನಿರ್ಣಯದ ಚರ್ಚೆಗೆ 2 ಫೆಬ್ರವರಿಯಂದು ಮುಖ್ಯಮಂತ್ರಿ ಗುಂಡೂರಾವ್ ಉತ್ತರ ನೀಡಿದರು. ಔಪಚಾರಿಕ ಉತ್ತರದೊಂದಿಗೆ ರಾಜಕೀಯ ವಿಶ್ಲೇಷಣೆಯನ್ನು ಮಾಡುತ್ತಾ ಹೋಗುವುದು ಅವರ ಶೈಲಿಯಾಗಿತ್ತು.

ಶ್ರೀ **ಆರ್. ಗುಂಡೂರಾವ್ (ಮಾನ್ಯ ಮುಖ್ಯಮಂತ್ರಿಗಳು)** : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ನಿರ್ಣಯದ ಮೇಲೆ ಅನೇಕ ಮಾನ್ಯ ಮಿತ್ರರು ಮಾತನಾಡಿದ್ದಾರೆ. ಹಾಗೆ ಮಾತನಾಡಿದ ಸಂದರ್ಭದಲ್ಲಿ, ಒಂದು ವರ್ಷದಲ್ಲಿ ನಡೆದ ಆಡಳಿತವನ್ನು ಕೆಲವರು ಕಟುವಾಗಿಯೂ ಮತ್ತೆ ಕೆಲವರು ಸರಳವಾಗಿಯೂ ಟೀಕೆ ಮಾಡಿದ್ದಾರೆ. ಕೆಲವರು ಸಲಹೆಗಳನ್ನೂ ನೀಡಿದ್ದಾರೆ. ಅವರು ಮಾಡಿರುವ ಅನೇಕ ಸಲಹೆಗಳು ನನ್ನ ಮುಂದೆ ಇವೆ. ನಾವು ಸೋಮವಾರದ ದಿವಸ ರೈತರ ಸಮಸ್ಯೆಗಳ ವಿಷಯವಾಗಿಯೇ ಚರ್ಚೆ ಮಾಡುವುದಕ್ಕೆ ಸೇರುತ್ತಿದ್ದೇವೆ. ಅನೇಕ ಸದಸ್ಯರು ರೈತರ ಬಗ್ಗೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಏನೋ ಸರ್ಕಾರ ಮಾಡಿದ ಆಜ್ಞೆಗಳನ್ನೆಲ್ಲಾ ಜಾರಿಗೆ ತಂದಿಲ್ಲ, ದೇಶದಲ್ಲಿ ಕಾನೂನು ಸ್ಥಿತಿ ಏನೋ ಅವ್ಯವಸ್ಥೆ ಆಗಿದೆ ಎಂದೂ, ಏನೋ ಹಿಂದಿನ ಯಾವ ಸರ್ಕಾರವೂ ತಪ್ಪು ಮಾಡೇ ಇಲ್ಲ ಅಥವಾ ಹಿಂದಿನ ಸರ್ಕಾರ ಏನೋ ಎಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿದ್ದು ಅದೆಲ್ಲಾ ಈ ಸರ್ಕಾರದಲ್ಲಿ ತಲೆಕೆಳಗಾಗಿದೆ, ಇದೆಲ್ಲಾ ಈ ಒಂದು ವರ್ಷದಲ್ಲಿ ಆಗಿಬಿಟ್ಟಿದೆ, ಹಿಂದಿನ ಸರ್ಕಾರದವರು ಏನೋ ರೈತರ ಮೇಲೆ ಎಷ್ಟು ಪ್ರೀತಿ ಇಟ್ಟುಕೊಂಡಿದ್ದರು, ಎಷ್ಟು ಅವರಿಗೆ ಕಂದಾಯವನ್ನು ರದ್ದು ಮಾಡಿದ್ದರು, ಬೆಟರ್‌ಮೆಂಟ್ ಲೆವಿ ರದ್ದು ಮಾಡಿದರು ಎಂದು ಈಗಿನ ಸರ್ಕಾರ ರೈತರನ್ನು ಕಂಡರೆ ವಿರೋಧಿ ಸುತ್ತಾರೆನ್ನುವ ರೀತಿಯಲ್ಲಿ ಅನೇಕರು ಮಾತನಾಡಿದ್ದಾರೆ. ಅವರು ಮಾತನಾಡಬೇಕು. ಅವರು ಮಾತನಾಡುವುದರ ಬಗ್ಗೆ ನನಗೆ ಬೇಜಾರೇನೂ ಇಲ್ಲ. ಆದರೆ ನಮ್ಮ ಹತ್ತಿರ ಬಂದಾಗ ಒಂದು ಮಾತನಾಡುವುದು, ಈ ಸದನಕ್ಕೆ ಬಂದಾಗ ಏನೋ ತಮಗೆ ಒಂದು ಪ್ರಚಾರ ಸಿಗಬೇಕೆಂದು ಅಥವಾ ತಮಗೆ ಏನೂ ರಾಜಕೀಯದಲ್ಲಿ ನೆಲೆ ಇಲ್ಲವಲ್ಲಾ ಎಂದು ಅದನ್ನು ಬಲಪಡಿಸುವುದಕ್ಕಾಗಿ ಇಲ್ಲಿ ಒಂದು ಮಾತನಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ನನಗೆ ನಿಜವಾಗಿಯೂ ವ್ಯಥೆಯಾಗುತ್ತದೆ. ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಿ. ನಾವು ಬೇಡ ಎಂದೇನೂ ಹೇಳುವುದಿಲ್ಲ. ಆದರೆ ಮಾಡಿರುವ ಸಹಾಯವನ್ನು ಇಲ್ಲಾ ಎಂದು ಹೇಳುವ ಪ್ರವೃತ್ತಿ ಏನಿದೆ ಅದನ್ನು ನಾನು ನಿಜವಾಗಿಯೂ ಖಂಡಿಸಲೇಬೇಕಾಗುತ್ತದೆ. ಇವತ್ತು ನಾವು ಎಲ್ಲವನ್ನೂ ಸಾಧನೆ ಮಾಡಿದ್ದೇವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಮಾಡಿರುವಂತಹ ಒಳ್ಳೆಯ ಕೆಲಸಗಳನ್ನು ಒಪ್ಪಿಕೊಳ್ಳುವ ಸೌಜನ್ಯವನ್ನು ಇವತ್ತು ಅನೇಕ ಜನರು ವ್ಯಕ್ತ ಮಾಡದೇ ಹೋದರೆ, ಇದರಿಂದ ಯಶಸ್ಸು ಪಡೆಯುತ್ತೇವೆ, ಇದರಿಂದ

ವಿ.ಸ.ನ. ದಿನಾಂಕ: 2-2-1981

ದೇಶದಲ್ಲಿ ಏನೋ ಬರುತ್ತದೆ ಎನ್ನುವುದು ಬರೀ ಭ್ರಮೆ ಎಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಶ್ವೇತ ಪತ್ರವನ್ನು ಸರ್ಕಾರ ಪ್ರಕಟಿಸಿದೆ. ಇವತ್ತು ಬೆಟರ್‌ಮೆಂಟ್ ಲೆವಿಯನ್ನು ರದ್ದು ಮಾಡಿರುವುದರ ಬಗ್ಗೆ ಅದು ಸರಿಯೋ ತಪ್ಪೋ ಎಂದು ಚರ್ಚೆ ಮಾಡಬೇಕಾಗುತ್ತದೆ. I am prepared to take a challenge in the whole of the State to-day and I am sure wherever I went people have accepted, people have whole-heartedly came and garlanded me. If I go, thousands of people gather. ಅಧ್ಯಕ್ಷರೇ, ಕೆಲವು ಸದಸ್ಯರು ಮಾನ್ಯ ಮುಖ್ಯಮಂತ್ರಿಯವರಿಗೆ ಸನ್ಮಾನ ಮಾಡಿದರು ಎಂದು ಹೇಳಿದರು. ಏನು ಸನ್ಮಾನ ಮಾಡಿದರು? ಈ ದಿನ ನನಗೆ ಸನ್ಮಾನ ಮಾಡಿದಂತಹ ಸಾವಿರಾರು ಜನರು ಬ್ಲಾಕ್ ಮಾರ್ಕೆಟಿಯರ್ಸ್ ಎಂದು ಹೇಳುತ್ತಿದ್ದಾರೆ. ಚೇಂಬರ್ ಆಫ್ ಕಾಮರ್ಸ್‌ನವರು ಕಾಳಸಂತೆಕೋರರೇನು? ಮುನಿಸಿಪಾಲಿಟಿ ಪ್ರೆಸಿಡೆಂಟರು ಕಾಳಸಂತೆಕೋರರೇನು? ತಾಲ್ಲೂಕು ಬೋರ್ಡ್ ಅಧ್ಯಕ್ಷರು ಕಾಳಸಂತೆಕೋರರೇನು? ನನ್ನ ಸನ್ಮಾನ ಮಾಡಿದ ಸಮಿತಿಯವರ ಲೆಕ್ಕವನ್ನು ತೆಗೆದುಕೊಂಡರೆ ಅಥವಾ ನನಗೆ ಭಿನ್ನವತ್ತಳೆಗಳನ್ನು ಅರ್ಪಿಸಿದವರ ಲೆಕ್ಕವನ್ನು ತೆಗೆದುಕೊಂಡರೆ ಎಲ್ಲರೂ ಕೂಡ ಕಾಳಸಂತೆಕೋರರೇ ಆಗುತ್ತಾರೇನು? ವಿರೋಧ ಪಕ್ಷದವರು ಕರೆದಂತಹ ಸಮಾರಂಭಗಳಿಗೂ ಹೋಗಿ ಬಂದಿದ್ದೇನೆ. ಚನ್ನಗಿರಿಯಲ್ಲಿ ನನ್ನನ್ನು ಕರೆದಿದ್ದರು. ನಾನು ಹೋಗಿ ಬಂದೆ, ಅಲ್ಲಿ ನನ್ನನ್ನು ಅವರು ಜೀಪಿನಲ್ಲಿ ಮೆರವಣಿಗೆಯಲ್ಲಿ ಕರೆದುಕೊಂಡು ಹೋದರು. ಅದು ತಪ್ಪೇ? ನನಗೆ ತಾಲ್ಲೂಕು ಬೋರ್ಡ್ ಅಧ್ಯಕ್ಷರು, ಪುರಸಭಾಧ್ಯಕ್ಷರು ಮನವಿ ಕೊಡುವುದು ತಪ್ಪೇ? ಹೀಗೆ ಏನೋ ಒಂದು ಹೇಳಿಕೊಂಡು ಹೋದರೆ ಹೇಗೆ? ಹಾಗಾದರೆ ಮುಖ್ಯ ಮಂತ್ರಿಗಳಿಗೂ ಜನರಿಗೂ ಸಂಪರ್ಕ ಬರುವ ದಾರಿ ಯಾವುದು?

Sri J.H. Patel - General exceptions are there like Channagiri.

Sri R. Gundu Rao - I am going to many places, You are in the opposition, therefore I have quoted Channagiri. ಯಾರೂ ಮಾಡದೇ ಇರುವುದನ್ನು ನಾವು ಮಾಡುತ್ತಿದ್ದೇವೆಯೇ? ಸನ್ಮಾನ ಮಾಡಿದ್ದಾರೆ, ಸನ್ಮಾನ ಮಾಡುತ್ತಿದ್ದಾರೆ, ಏನು ಮಾಡಿದ್ದಾರೆ? ಸನ್ಮಾನ ಮಾಡುತ್ತಿದ್ದಾರೆ, ಯಾರಿಗೆ ಸನ್ಮಾನ ಮಾಡುತ್ತಿದ್ದಾರೆ? ಮುಖ್ಯ ಮಂತ್ರಿಗಳವರಿಗೆ ಸನ್ಮಾನ ಮಾಡುತ್ತಿದ್ದಾರೆ. ಗುಂಡೂರಾಯರಿಗೆ ಯಾರು ಸನ್ಮಾನ ಮಾಡುತ್ತಿದ್ದಾರೆ? ಹಿಂದಿನ ಮುಖ್ಯಮಂತ್ರಿಗಳಿಗೆ ಸನ್ಮಾನ ಮಾಡಲಿಲ್ಲವೇ? ಸನ್ಮಾನಗಳ ಸುರಿಮಳೆಯೇ ಆಗಿಲ್ಲವೇ? ಎಲ್ಲಾ ಕಡೆಯಿದ ಜನರನ್ನು ಕರೆಸಿ ಮೆರವಣಿಗೆ ಮಾಡಲಿಲ್ಲವೇ? ನಾವೇ ಸೇರಿ ಮಾಡಿಸಿದ್ದೇವೆ. ಕೈಗೆ ಕತ್ತಿ ಕೊಡಿಸಿದ್ದೇವೆ.

ಶ್ರೀ ಜೆ.ಎಚ್. ಪಟೇಲ್ - ಗಧೆ ಕೊಡಿಸಿದಿರಿ.

ಶ್ರೀ **ಆರ್. ಗುಂಡೂರಾವ್** - ಗಧೆ, ಕತ್ತಿ ಎಲ್ಲವನ್ನೂ ಕೊಡಿಸಿದ್ದೇವೆ, ಬೇರೆ ರಾಜ್ಯಗಳಲ್ಲಿ ಪಂಜಾಬಿನಿಂದ ಹಿಡಿದು ಕೇರಳದವರೆವಿಗೂ ಹೋಗಿ ಗಧೆಗಳನ್ನು ತೆಗೆದುಕೊಂಡು ಬರಲಿಲ್ಲವೇ? ಆವಾಗ ಚೆನ್ನಾಗಿರಲಿಲ್ಲವೇ? ಆಗ ಗುಂಡೂರಾಯರು ಉದ್ದವಾಗಿದ್ದರು. ಈಗ ಅವರು ಸ್ವಲ್ಪ ಉದ್ದ ಕಡಿಮೆ ಆಗಿದ್ದಾರಾ? ಆಗ ಗುಂಡೂರಾಯರು ಬಲಗೈ, ಖಾನ್ ಅವರು ಎಡಗೈ ಎಂದು ಹೇಳುವುದಕ್ಕೆ ಚೆನ್ನಾಗಿತ್ತು. ಈಗ ಅದು ಏನಾಯಿತು? ಈಗ ಅದು ಹಿಂದು ಮುಂದು ಆಗಿದೆಯೇ?

ಶ್ರೀ **ಎಚ್. ಗಂಗಾಧರ್** - ಕೈ ಕೊಟ್ಟಿದೆ.

ಶ್ರೀ **ಆರ್. ಗುಂಡೂರಾವ್** - ಈ ದೇಶದಲ್ಲಿ ಈ ರೀತಿ ಮರುಳು ಮಾಡುವುದಕ್ಕೆ ಆಗುವುದಿಲ್ಲ. ಅವರು ಆಟೋರಿಕ್ಷಾದಲ್ಲಿ ಕುಳಿತು ಸನ್ಮಾನ ಮಾಡಿಸಿಕೊಳ್ಳಲಿಲ್ಲವೇ? ಕುದುರೆ ಮೇಲೆ ಕುಳಿತುಕೊಂಡು ಸನ್ಮಾನ ಮಾಡಿಸಿಕೊಳ್ಳಲಿಲ್ಲವೇ? ಆದರೆ, ಇದು ಶಾಶ್ವತವೇ? ನಾನೂ ಸನ್ಮಾನ ಮಾಡಿಸಿಕೊಳ್ಳುತ್ತೇನೆ. ಅದರಲ್ಲಿ ಏನು ತಪ್ಪು? (ನಗು)

ಶ್ರೀ **ಜೆ. ಎಚ್. ಪಟೇಲ್** - ಇದಕ್ಕೆಲ್ಲಾ ಉತ್ತರ ಕೊಡುವುದಕ್ಕಾಗುವುದಿಲ್ಲ ಸ್ವಾಮಿ, ನೀವು ಹೇಳುವುದನ್ನು ಹೇಳಿ.

ಶ್ರೀ **ಆರ್. ಗುಂಡೂರಾವ್** - ಇದೆಲ್ಲಾ ಆಗೋಲ್ಲ. This is not the point before us. I cannot understand. ಇವತ್ತು ರಾಜ್ಯದಲ್ಲಿ ಏನು ಆಗಬೇಕಾಗಿದೆ ಆ ಬಗ್ಗೆ ಗಮನ ಹರಿಸಬೇಕು, ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ, ಕಾವೇರಿ ನೀರು ಹಂಚಿಕೆ ಬಗ್ಗೆ ನಾವು ಒಗ್ಗಟ್ಟಾಗಿ ಕೆಲಸ ಮಾಡಬೇಕಾಗಿದೆ. ಆ ಬಗ್ಗೆ ಗಮನ ಹರಿಸಿಲ್ಲ. ನಮ್ಮ ರಾಜ್ಯಕ್ಕೆ ಹೆಚ್ಚು ಕೈಗಾರಿಕೆಗಳು ಬರುವ ಬಗ್ಗೆ ಚರ್ಚೆ ಮಾಡೋಣ. ಅದು ಬಿಟ್ಟು ಸನ್ಮಾನ ಮಾಡಿಸಿಕೊಳ್ಳುತ್ತಿದ್ದಾರೆ ಎಂದು ಹೊಟ್ಟೆ ಉರಿದು ಕೊಂಡರೆ ಏನು ಮಾಡಲಿ?

ಶ್ರೀ **ಪಿ. ರಾಮದೇವ್** - ವಯಸ್ಸಾದವರಿಗೆ, ಸನ್ಮಾನಗಳು ಬೇಕಾಗುತ್ತವೆ. ತಾವು ಯುವಕರಿದ್ದೀರಿ. ನಿಮಗೆ ಏಕೆ ಸ್ವಾಮಿ ಸನ್ಮಾನ?

ಶ್ರೀ **ಐ.ಪಿ.ಡಿ. ಸಾಲಪ್ಪ** - ಒಂದು ವರ್ಗಕ್ಕೆ ಸನ್ಮಾನವನ್ನು ಮಾಡಿದರೆ ಅವರಿಗೆ ತೃಪ್ತಿ ಆಗುತ್ತದೆಂದು ಕಾಣುತ್ತದೆ. ಬೇರೆಯವರಿಗೆ ಸನ್ಮಾನ ಮಾಡಿದರೆ ........

ಶ್ರೀ **ಆರ್. ಗುಂಡೂರಾವ್** - ನಾವು ಏನೋ ಸರ್ಕಾರಕ್ಕೆ ಕಳಂಕ ತರುತ್ತೇವೆ ಎನ್ನುವ ರೀತಿಯಲ್ಲಿ ಈ ಪತ್ರಿಕೆಗಳವರು ಸಂಪಾದಕೀಯದ ಮೇಲೆ ಸಂಪಾದಕೀಯವನ್ನು ಬರೆಯುತ್ತಿದ್ದಾರೆ. ಅವರಿಗೇನಾದರೂ ಸನ್ಮಾನಕ್ಕೆ ಕರೆದರೆ ಸಂಪಾದಕರು ಮುಂದೆ ಹೋಗಿ ಕುಳಿತುಕೊಂಡಿರುತ್ತಾರೆ. ಅವರಿಗೆ ಯಾರೂ ಸನ್ಮಾನಕ್ಕೆ ಕರೆಯುವುದಿಲ್ಲ. ಅವರನ್ನು ಯಾರೂ ಕರೆಯದಿದ್ದರೆ ಹೇಳಲಿ. ನಾನು ಅದಕ್ಕೆ ಏರ್ಪಾಡು ಮಾಡುತ್ತೇನೆ, ಅದಕ್ಕೇನಿಲ್ಲ. I am very happy. This all goes in favour of me because the very people

of Karnataka have seen all these things during the last 10 years and 20 years; at least here is a man who will keep up timing of the function. ಹಿಂದೆ ಸಮಾರಂಭಗಳು 2-3 ಗಂಟೆಗಳ ವಿಳಂಬವಾಗಿ ಪ್ರಾರಂಭವಾಗುತ್ತಿದ್ದವು. ಈಗಿನ ಮುಖ್ಯಮಂತ್ರಿಗಳು ದಿಢೀರನೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆಂದು ಹೇಳುತ್ತಾರೆ. ದಿಢೀರನೆ ನಿರ್ಧಾರ ತೆಗೆದುಕೊಳ್ಳದಿದ್ದ ಮೇಲೆ ಮುಖ್ಯ ಮಂತ್ರಿಗಳು ಏಕೆ ಇರಬೇಕು? ಕಣೀ ಕೇಳಿ ನಾನು ಡಿಸಿಷನ್ ತೆಗೆದುಕೊಳ್ಳಲೇ? ನನ್ನ ಮನಸ್ಸಿಗೆ ಯಾವುದು ಸರಿ ಎಂದು ಕಾಣುತ್ತದೆ ಹಾಗೆ ಮಾಡುತ್ತೇನೆ.

ನನ್ನ ಮನಸ್ಸಿಗೆ ಯಾವುದು ಸರಿ ಎಂದು ಕಾಣಿಸುತ್ತದೋ ದೇಶಕ್ಕೆ ಯಾವುದು ಸರಿ ಎಂದು ಕಾಣುತ್ತದೋ, ರಾಜ್ಯದ ಹಿತಕ್ಕೆ ಯಾವುದು ಸರಿ ಎಂದು ನನಗೆ ಕಾಣುತ್ತದೋ ಅದರ ಬಗ್ಗೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆ. ಏನ್ರೀ ಶ್ರೀಮಾನ್ ಜೆ. ಹೆಚ್. ಪಟೇಲರೇ?

ಶ್ರೀ ಜೆ. ಹೆಚ್. ಪಟೇಲ್ - ಹೌದು ತಾವು ಒಳ್ಳೆಯ ಕೆಲಸವನ್ನೇ ಮಾಡುತ್ತೀರಿ ಎನ್ನುವುದು ನನಗೆ ಗೊತ್ತಿದೆ. ಅದಕ್ಕೆ ಜನರೂ ನಿಮ್ಮನ್ನು ಒಳ್ಳೆಯವರು ಅಂತ ಹೇಳಿದ್ದಾರೆ.

ಶ್ರೀ ಆರ್. **ಗುಂಡೂರಾವ್** - ಆ ಮಾತನ್ನು ಇನ್ನು ಸಲ್ಪ ಜೋರಾಗಿ ಹೇಳಿ, ಗೊತ್ತಾಗಲಿ. ಪ್ರಾಮಾಣಿಕವಾಗಿ ಯಾವುದಾದರೂ ಒಳ್ಳೆಯ ಕೆಲಸ ಇದ್ದರೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆಯೇ ಇಲ್ಲವೇ ಅನ್ನುವುದನ್ನು ಈಗಲಾದರೂ ಕೂಡ ತಾವು ತಿಳಿದುಕೊಳ್ಳಿ. ಆದುದರಿಂದ ನಾನು ಹೇಳುತ್ತೇನೆ ದೇಶದಲ್ಲಿ ರಾಜಕೀಯ ಮಾಡಿದರೆ ಏನೂ ಪ್ರಯೋಜನ ಇಲ್ಲಾ. ರಾಜ್ಯಾಂಗದ ಒಂದು ಚೌಕಟ್ಟಿನೊಳಗೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ದೇಶದಲ್ಲಿ ಅನೇಕ ಜಾತಿ ಧರ್ಮಗಳು ಏನು ಇವೆ ಅವನ್ನೆಲ್ಲಾ ಈ ಕಾನೂನಿನ ಚೌಕಟ್ಟಿನಲ್ಲೇ ಬೇದಿಸಿ ಒಳ್ಳೆಯ ಕೆಲಸ ಮಾಡುವುದಕ್ಕೆ ಅನೇಕ ತರಹವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಆದರಿಂದಾಗಿ ಎಲ್ಲರೂ ನನ್ನನ್ನು ಸ್ವಾಗತಿಸುತ್ತಾರೆ. ಆದರಿಂದ ಅವರಿಗೆ ಎಷ್ಟೋ ಉಪಕಾರವಾಗಿದೆ. ಇಂತಹ ಕೆಲಸ ಮಾಡುವುದರಲ್ಲಿ ತಪ್ಪೇನಿದೆ? You have to compare the past performance and the present performance. You judge for yourselves. ನಾನೇನೂ ಹೇಳಬೇಕಾಗಿಲ್ಲ. ಹಿಂದೆ ಅವರು ನನ್ನ ಜೊತೆಗೆ ಇರಲಿಲ್ಲವೇ? ತಮಗೆಲ್ಲಾ ಗೊತ್ತಿದೆ. ಒಂದು ರ್‍ಯಾಲಿ ಏರ್ಪಾಡು ಮಾಡುವುದಾಗಲಿ, ಒಂದು ಟ್ಯಾಕ್ಸಿ ಅರೇಂಜ್ ಮಾಡುವುದಾಗಲಿ, ಸನ್ಮಾನ ಸಮಾರಂಭಗಳನ್ನು ಆರ್ಗನೈಸ್ ಮಾಡುತ್ತಿದ್ದವರು ಯಾರು? ನಾನೇ ಅನ್ನುವುದು ತಮಗೆಲ್ಲಾ ಗೊತ್ತಿದೆ. ಟ್ಯಾಕ್ಸಿಯನ್ನು ಕರೆದುಕೊಂಡು ಬರುತ್ತಿದ್ದವರು ಯಾರು, ಅದೂ ಗೊತ್ತಿದೆ. ದುಡ್ಡು ಕೊಟ್ಟಿದ್ದೇನೆ. ಹಿಂದೆ 9 ವರ್ಷಗಳ ಕಾಲ ಏನು ಆಡಳಿತ ನಡೆಸುತ್ತಿದ್ದವರು ಅವರಿಗೆ ಏನೇನು ಸಮಾರಂಭಗಳನ್ನಾಗಲಿ ಯಾವುದಾದರೂ ಬೇರೆ ಒಂದು ವ್ಯವಸ್ಥೆಯನ್ನಾಗಲಿ ಅದರ ಬಗ್ಗೆ ಆರ್ಗನೈಸ್ ಮಾಡುತ್ತಿದ್ದವನು

ನಾನೇ ಎನ್ನುವುದು ತಮಗೆಲ್ಲಾ ಗೊತ್ತಿದೆ. ಹೀಗೆ ಹಿಂದಿದ್ದವರು 9 ವರ್ಷಗಳ ಕಾಲ ಮೆರವಣಿಗೆ ಮಾಡಿಸಿಕೊಂಡು ಈಗ ಒಂದು ವರ್ಷ ನಾನು ಮಾಡಿಸಿಕೊಂಡರೆ ಅದಕ್ಕೇಕೆ ಏನೇನೊ ಟೀಕಿಸುತ್ತಾರೆ ನನಗೆ ಗೊತ್ತಾಗುತ್ತಾ ಇಲ್ಲ. ಅದಾಗ ಶ್ರೀಮಾನ್ ದೇವೇಗೌಡರು ಇದೇ ಮನೆಯಲ್ಲಿ ಆ ಪ್ರಶ್ನೆಯನ್ನು ಎತ್ತಿ ಎಷ್ಟು ಟೀಕೆ ಮಾಡಿದ್ದಾರೆ ಎನ್ನುವುದು ಗೊತ್ತಿದೆ, ಆವಾಗ ನಾನೇನಾದರೂ ತೊಂದರೆ ಕೊಟ್ಟನೇ? ಆವಾಗ he was strong enough to do. I am not bothered about that ಬೇರೆ ಯಾರಿಗಾದರೂ ಹೇಳಬಹುದು. ಪ್ರತಿಯೊಂದು ವಿಷಯವೂ ಆವಾಗ ಏನು ನಡೆಯುತ್ತಿತ್ತು ಎನ್ನುವುದು ನನಗೆ ಗೊತ್ತಿರುವುದರಿಂದ ನನಗೆ ಹಾಗೆ ಹೇಳುವುದಕ್ಕಾಗುವುದಿಲ್ಲ. 1969 ರಿಂದ 1979 ರ ಜೂನ್ 25 ರ ವರೆಗೂ ಕೂಡ ಆ ಮಂತ್ರಿಮಂಡಲ ಬಿಡುವವರೆಗೂ ಅದರ ಒಂದು ಪ್ರೀತಿಪಾತ್ರನಾಗಿದ್ದೆ, ತಾವುಗಳು ಕೂಡ ಪ್ರೀತಿಪಾತ್ರರಾಗಿದ್ದುದು ಗೊತ್ತಿದೆ, ಶ್ರೀಮಾನ್ ಎ.ಜಿ. ಕೊಡ್ಗಿಯವರು ಮಾತನಾಡುವಾಗ ಒಂದು ಮಾತು ಹೇಳಿದರು. ನೀವು ಇಂದಿರಾ ಗ್ರೂಪ್‌ನವರು ಎಂದು, ನೀವು ಇಂದಿರಾಗಾಂಧಿ ಕೃಪಾ ಪೋಷಿತ ನಾಟಕ ಮಂಡಲಿಗೆ ಸೇರಿದವರು ಎಂದು ಹೇಳಿದರು. ಅವರಿಗೆ ನಾನು ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ. ಅವರು ಮೊದಲು ನಮ್ಮಲ್ಲೇ ಇದ್ದಾಗ ಆ ನಾಟಕದ ಮಂಡಲಿಯಲ್ಲಿ ಅವರಿಗೆ ಒಂದು ಪರದೆ ಎಳೆಯುವ ಕೆಲಸವನ್ನೂ ಕೊಟ್ಟಿರಲಿಲ್ಲ. ಹೋಗಲಿ, ಅವರು ಈಗ ಗೆದ್ದು ಬಂದಿದ್ದಾರಲ್ಲಾ, ಯಾವ ಒಂದು ನಾಟಕ ಮಂಡಲಿಯಿಂದ ಗೆದ್ದು ಬಂದಿದ್ದಾರೆ ಹೇಳಲಿ. ಶ್ರೀಮತಿ ಇಂದಿರಾಗಾಂಧಿಯವರ ಒಂದು ಕೃಪೆಯಿಂದಲೇನೇ ಅವರು ಗೆದ್ದು ಬಂದಿರುವುದು. I will challenge today, Let him contest. If he wins, I will resign from politics. Are you prepared for this challenge? ಇಂದಿರಾಗಾಂಧಿಯವರ ಕೃಪೆ ಇಲ್ಲದೆ ನೀವು ಗೆದ್ದು ಬಂದಿದ್ದಿರಾ? ಶ್ರೀಮತಿ ಇಂದಿರಾಗಾಂಧಿ ಏಕೈಕ ನಾಯಕಿ ಅಂತ ಕುಂದಾಪುರ ಮತ್ತು ಬೈಂದೂರಿನಲ್ಲಿ ಭಾಷಣ ಮಾಡಿದಾಗ ಶ್ರೀಮಾನ್ ಎ.ಜಿ. ಕೊಡ್ಗಿಯವರು ಹೇಳಲಿಲ್ಲವೇ. ಇದರ ಬಗ್ಗೆ ಏನಾದರೂ ದಾಖಲೇ ಬೇಕಾ, ತಾವು ಈ ಮಾತನ್ನು ಹೇಳಲಿಲ್ಲ ಎಂದು ಹೇಳಿಬಿಡಿ ಅವಾಗ ನೀವು ಹೇಳಿದ ಮಾತನ್ನು ಒಪ್ಪಿಕೊಳ್ಳೋಣ. ಆದರೆ ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಬರಬಹುದು. ಹಾಗೇನಾದರೂ ಭಿನ್ನಾಭಿಪ್ರಾಯ ಬಂದಿದ್ದರೆ ಅದನ್ನು ರಾಜಕೀಯವಾಗಿಯೇ ಬೇಕಾದರೆ ಅಟ್ಯಾಕ್ ಮಾಡೋಣ. 1978ನೇ ಇಸವಿಯಲ್ಲಿ ನಮ್ಮ ಪಕ್ಷದ ನಾಯಕರು ಕುಂದಾಪುರ ಮತ್ತು ಬೈಂದೂರಿಗೆ ಬಂದು ಭಾಷಣ ಮಾಡಿದ್ದು ತಮಗೆ ನೆನಪು ಇದೆಯೇ? ಶ್ರೀಮತಿ ಇಂದಿರಾ ಗಾಂಧಿಯವರು ಬಣ್ಣ ಬಳಿಯದೇ ಇದ್ದರೆ ನೀವ್ಯಾರೂ ಕೂಡ ಅಲ್ಲಿಂದ ಗೆದ್ದು ಬರುತ್ತಿರಲಿಲ್ಲಾ. ಶ್ರೀಮಾನ್ ದೇವರಾಜ್ ಅರಸ್‌ರವರಾಗಲಿ ಶ್ರೀಮಾನ್ ಶಿವಯ್ಯನವರಾಗಲಿ ಶ್ರೀಮಾನ್ ಸುಬ್ಬಯ್ಯ ಶೆಟ್ಟರಾಗಲಿ, ಇನ್ನೂ ಕೆಲವರು ಇವರೆಲ್ಲಾ ಯಾರ ಒಂದು ಬಣದಿಂದ ಗೆದ್ದು ಬಂದರು? ಶ್ರೀಮಾನ್ ದೇವರಾಜು ಅರಸ್ ರವರು ಮುಖ್ಯಮಂತ್ರಿಯಾದದ್ದು ಯಾರ ಒಂದು ಬಲದಿಂದ ಹೇಳಿ, ಯಾರ ಒಂದು ಕೃಪೆಯಿಂದ ಹೇಳಿ? ಈವೊತ್ತು ಅವರಿಗೆಲ್ಲಾ

ಒಂದು ಕಿಕ್ ಕೊಟ್ಟು, ಓಡಿಸಿರುವ ಹೊತ್ತಿಗೇನೇ ನಾನು ಇಂದು ಮುಖ್ಯ ಮಂತ್ರಿಯಾಗಿರುವುದು. ಶ್ರೀಮತಿ ಇಂದಿರಾಗಾಂಧಿಯವರ ಒಂದು ಕೃಪೆಯಿಂದಲೇ ನಾನು ಮುಖ್ಯಮಂತ್ರಿಯಾಗಿರುವುದು, ಅದನ್ನು ನಾನು ಈಗಲೂ ಹೇಳುತ್ತೇನೆ, ಮುಂದೂ ಹೇಳುತ್ತೇನೆ, ಒಂದು ವೇಳೆ ಇಂದಿರಾಗಾಂಧಿಯವರ ಕೃಪೆ ಅವರ ಮೇಲೇನೇ ಇದ್ದಿದ್ದರೆ ನಾನು ಟ್ರಾನ್ಸ್‌ಪೋರ್ಟ್ ಮಂತ್ರಿಯಾಗಿಯೋ ಅಥವಾ ಟೂರಿಸಮ್ ಮಂತ್ರಿಯಾಗಿಯೋ ಇರುತ್ತಿದ್ದೆ. ಶ್ರೀಮಾನ್ ಶಿವಯ್ಯನವರು ಹಾರ್ಟಿಕಲ್‌ಚರ್ ಅಥವಾ ಸಿರಿಕಲ್‌ಚರ್ ಮಿನಿಸ್ಟರ್ ಆಗಿಯೇ ಇರುತ್ತಿದ್ದರು. ಈಗ ಬಸವಲಿಂಗಪ್ಪನವರಿಗೆ ನೀವು ಏನೇನೋ ಹೇಳಿ ಅವರನ್ನು ಅಲ್ಲಿಯೇ ಕೂರಿಸಿ ಬಿಟ್ಟಿರಿ. ಅವರು ಮೊದಲು ನಮ್ಮ ಕಡೆ ಬಂದಿದ್ದರೆ ಏನಾದರೂ ಆಗುತ್ತಿತ್ತೋ ಏನೋ? ಒಟ್ಟಿನಲ್ಲಿ ಹೇಳಬೇಕಾದರೆ ಇದಕ್ಕೆಲ್ಲಾ ರಾಜಕೀಯವನ್ನು ಬಳಸಬಾರದು. ರಾಜಕೀಯದಲ್ಲಿ ಬದಲಾವಣೆಗಳು ಆಗುತ್ತವೆ, ಹೋಗುತ್ತವೆ. ಆದರೆ ಅದನ್ನೇ ಮನಸ್ಸಿನಲ್ಲಿಟ್ಟುಕೊಂಡು ವೈಯುಕ್ತಿಕವಾಗಿ ಟೀಕೆ ಮಾಡುವುದಕ್ಕೆ ಹೋಗಬಾರದು. ಸಮಯ ಹೀಗೇ ಇರುವುದಿಲ್ಲ. ನಾನು ಮೊನ್ನೆ ತಾನೇ ಒಂದು ಭಾಷಣ ಓದಿದೆ. ಶ್ರೀಮಾನ್ ದೇವರಾಜ್ ಅರಸ್‌ರವರ ಸರ್ಕಾರ ಇದ್ದಾಗ, ರೈಲ್ವೆ ಸ್ಟ್ರೈಕ್ ಆದಾಗ ಪಂಪಾಪತಿಯವರು, ಎಂ.ಎಸ್. ಕೃಷ್ಣನ್‌ರವರು ಸ್ಟ್ರೈಕ್ ಮಾಡಿದಾಗ ಅರಸ್‌ರವರು ಏನು ಹೇಳಿದ್ದಾರೆ ಎಂದರೆ, You are all a set of fools ಎಂದು ಹೇಳಿದ್ದಾರೆ. ಅವರು ಈ ಮಾತನ್ನು ಹೇಳಲಿಲ್ಲಾ ಎಂದು ಹೇಳಿ ಬಿಡಲಿ, ಸಾಕು. ಅಲ್ಲದೆ ಶ್ರೀಮಾನ್ ಹೆಚ್.ಡಿ. ದೇವೇಗೌಡರಿಗೆ ಈ ಎಲ್ಲಾ ವಿಚಾರವೂ ಚೆನ್ನಾಗಿ ಗೊತ್ತಿದೆ. ಮುಖ್ಯಮಂತ್ರಿಗಳು ಆ ರೀತಿ ಹೇಳುವುದು ತಪ್ಪೋ, ಸರಿಯೋ ಅದು ಬೇರೆ ವಿಷಯ. ಆದರೆ ಯಾವುದನ್ನು ಟೀಕೆ ಮಾಡಬೇಕು, ಯಾವುದನ್ನು ಟೀಕೆ ಮಾಡಬಾರದು ಅನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ಕೊನೆ ಪಕ್ಷ ಈವೊತ್ತಿನ ರಾಜ್ಯಪಾಲರ ಭಾಷಣಕ್ಕಾದರೂ ಕೂಡ ವಂದನೆಯನ್ನು ಸಲ್ಲಿಸುವ ಕಾಲದಲ್ಲಿ ಸ್ವಲ್ಪವಾದರೂ ಸಂತೋಷವಾಗಿರಬೇಡವೇ? The whole State and the whole country is complimenting the Governor's Address. When that is the situation, what is the point in raising that issue on the floor of the House? ಶ್ರೀಮಾನ್ ದೇವರಾಜ ಅರಸ್ ಮುಖ್ಯಮಂತ್ರಿಗಳಾಗಿ ಏನು ಆಡಳಿತ ನಡೆಸಿದರು ಆವಾಗ ಅವರು ಯಾವ ಅಸೆಂಬ್ಲಿ ಕಾನ್ಸಿಟ್ಯೂಯನ್ಸಿಗೂ ಕಂಟೆಸ್ಟ್ ಮಾಡಿರಲಿಲ್ಲ. ಹಾಗಿದ್ದರೂ ಕೂಡ, ಅವರು ಸದಸ್ಯರಾಗದೇ ಇದ್ದರೂ ಕೂಡ, ಅವರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡಿದವರು ಯಾರು? ಅವರನ್ನು ಏತಕ್ಕೆ ಮುಖ್ಯಮಂತ್ರಿಗಳನ್ನಾಗಿ ಮಾಡಿದರು? ಈವೊತ್ತು ಬಸವಲಿಂಗಪ್ಪನವರು ದಾರಿ ತಪ್ಪಿರಬಹುದು, ಆವೊತ್ತು ಬಸವಲಿಂಗಪ್ಪನವರನ್ನು ಮುಖ್ಯ ಮಂತ್ರಿಯಾಗಿ ಮಾಡಬೇಕೆಂದು ಸ್ಪರ್ಧಿಸಿದ್ದರೂ ಕೂಡ, ಶ್ರೀಮತಿ ಇಂದಿರಾಗಾಂಧಿಯವರು ಶ್ರೀಮಾನ್ ಡಿ. ದೇವರಾಜ ಅರಸ್‌ರವನ್ನೇ ಮಾಡಬೇಕು ಎಂದು ಆದೇಶ ಮಾಡಿದ್ದರಿಂದಲ್ಲವೇ, ಅವರು ಮುಖ್ಯಮಂತ್ರಿಯಾದದ್ದು? ಕೆಲವರು ಈಗಾಗಲೇ ನಮ್ಮ

ಕಡೆಗೆ ಬಂದಿದ್ದಾರೆ. ಇನ್ನು ಸ್ವಲ್ಪ ದಿವಸದಲ್ಲೇ ಅವರೆಲ್ಲಾ ಬರುತ್ತಾರೆ ಬನ್ನಿ, ಬನ್ನಿ, ಬೇಡ ಎಂದು ಹೇಳುವುದಿಲ್ಲ. ನೀವೇನೂ ತಿಳಿದುಕೊಳ್ಳಬೇಡಿ. ಆದರೆ ಇತ್ತ ಕಡೆ ಯಾರೂ ಬಂದರೂ ಕೂಡ, ಬಿ.ಜೆ.ಪಿ. ಯವರು ಜನತಾ ಪಾರ್ಟಿಯವರು ಮತ್ತು ಕಮ್ಯುನಿಸ್ಟ್ ಪಾರ್ಟಿಯವರು ಮಾತ್ರ ಅಲ್ಲೇ ಉಳಿದುಕೊಳ್ಳುತ್ತಾರೆ.

Sri C.M. Armugham - Yes.

Sri R. Gundu Rao - I am not telling puranas or something. It has all happended in front of us ನಾನು ಒಂದು ಟೈಂನಲ್ಲಿ ಜೆ.ಹೆಚ್. ಪಟೇಲರನ್ನು ಅವರು ಯಾವಾಗಲೂ ವಿರೋಧ ಪಕ್ಷದಲ್ಲೆ ಇರುತ್ತಾರೆ ಅಂತ ತಿಳಿದು ಕೊಂಡಿದ್ದೆ. ಆದರೆ ಏಕೋ ಗೊತ್ತಾಗಲಿಲ್ಲ. ಅವರು 1979ರಲ್ಲಿ ಶ್ರೀಮಾನ್ ದೇವರಾಜಅರಸ್‌ರವರ ಕಡೆ ಬಂದು ಸೇರಿಕೊಂಡರು, ಆದರೆ ಅರಸ್‌ರವರಿಗೂ ಲೋಹಿಯಾರವರಿಗೂ ಏನು ಸಂಬಂಧವೋ ಗೊತ್ತಿಲ್ಲ.

ಶ್ರೀ **ಜೆ. ಹೆಚ್. ಪಟೇಲ್** - ಈ ವಿಷಯ ಹೇಳಿದ್ದರಿಂದ ನಾನು ಹೇಳಬೇಕಾಗಿದೆ. let it be on record. ವಿಷಯ ಹೀಗೆ ಆಯಿತು. ಜನತಾಪಾರ್ಟಿ ಒಡೆದ ಮೇಲೆ ಜನತಾಪಾರ್ಟಿ ಮುಖಂಡರಿಗೂ ನನಗೂ ಸ್ವಲ್ಪ ಭಿನ್ನಾಭಿಪ್ರಾಯ ಬಂದಮೇಲೆ ನಮ್ಮ ಸ್ನೇಹಿತರು ಸಮಾಜವಾದಿ ಅಂತ ಹೇಳಿಸಿಕೊಳ್ಳುವವರು ಏನು ಇದ್ದರು, ಅವರು ಒಂದು ಲೋಕದಳ ಪಾರ್ಟಿ ಮಾಡಿದರು. ಆ ಲೋಕದಳದ ಪಾರ್ಟಿಯಲ್ಲಿ ಕೆಲಸ ಮಾಡುವುದಕ್ಕೆ ನನಗೆ ಇಷ್ಟವಾಗಲಿಲ್ಲ. ಏತಕ್ಕೆಂದರೆ ನಾನು ಯಾವಾಗಲೂ ಕೂಡ ಶ್ರೀಮತಿ ಇಂದಿರಾಗಾಂಧಿಯವರೊಂದಿಗೆ ಸೆಣೆಸಾಡುತ್ತಿದ್ದುದು ತಮಗೆಲ್ಲಾ ಗೊತ್ತಿದೆ. ಆ ಸಂದರ್ಭದಲ್ಲಿ ಶ್ರೀಮಾನ್ ದೇವರಾಜ್‌ಅರಸ್‌ರವರು ಶ್ರೀಮತಿ ಇಂದಿರಾಗಾಂಧಿಯವರ ವಿರುದ್ಧವಾಗಿ ಸೆಣೆಸಾಡುತ್ತಾ ಇದ್ದುದರಿಂದ ನಾನು ಅವರಿಗೆ ಬೆಂಬಲ ಕೊಟ್ಟೆನೇ ವಿನಾ ಇನ್ನಾವ ವಿಷಯಕ್ಕೂ ಅಲ್ಲ. ನನ್ನ ಮೊದಲು ನಿಲುವು ಏನು ಇತ್ತು ಈಗಲೂ ಕೂಡ ಅದೇ ನಿಲುವು ಎಂದು ನಾನು ಒತ್ತಿ ಹೇಳುತ್ತೇನೆ. I have not disowned my leader now, I am with my leader.

ಶ್ರೀ **ಆರ್. ಗುಂಡೂರಾವ್** - ತಮ್ಮ ನಿಲುವು ಏನು ಎಂಬುದು ದೇಶಕ್ಕೆ, ಜನಕ್ಕೆ ಗೊತ್ತಿದೆ. ಸಮಾಜವಾದಿ ತತ್ವದ ಮೇಲೆ ನಿಂತು ಲೋಹಿಯಾರವರ ಹಾಗೆ ಕೆಲಸ ಮಾಡುವಂಥಾ ಜನರೂ ಈಗಲೂ ಇದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ - ನನ್ನ ಉದ್ದೇಶವೂ ಅದೇ, ನಾನು ಈಗಲೂ ಅದೇ ಹೇಳುತ್ತೇನೆ, ಮುಂದೆಯೂ ಕೂಡ ನನ್ನ ಉದ್ದೇಶ ಹಾಗೆಯೇ ಇರುತ್ತದೆ ಎಂದು ಹೇಳುತ್ತೇನೆ.

ಶ್ರೀ **ಆರ್. ಗುಂಡೂರಾವ್** - ನೀವೇನಾದರೂ ರಾಜಿ ಮಾಡಿಕೊಂಡರೆ ಆಗ ಯೋಚನೆ ಮಾಡಬೇಕಾಗುತ್ತದೆ (ನಗು)

ಶ್ರೀ ಜೆ. ಹೆಚ್. ಪಟೇಲ್ - ಯೋಚನೆ ನನಗಿಲ್ಲ.

ಶ್ರೀ **ಆರ್. ಗುಂಡೂರಾವ್** - ನಮಗೆ ವಿರೋಧ ಪಕ್ಷ ಬೇಕು. I want a constructive opposition party. Opposition party, is a must. Opposition is not on personal differences. Opposition is not there because they are not in power. I want to stress that they may not come to power for another ten years but let there be a strong opposition. There is nothing wrong. But it should be under one common principle and under one common, leadership. We do not question that leadership, whoever he may be. Otherwise opposition will never grow. We were also in opposition.

ಶ್ರೀ ಕೆ.ಬಿ. ಶಿವಯ್ಯ - ವಿರೋಧ ಪಕ್ಷವನ್ನು 1947 ರಿಂದಲೂ ಕಾಂಗ್ರೆಸ್ ಪಕ್ಷದವರು ಬೆಳೆಸಲಿಲ್ಲ. ಈಗ ವಿರೋಧ ಪಕ್ಷ ಬೆಳದಿಲ್ಲವೆಂದು ತಾವೇಕೆ ನಮ್ಮನ್ನು ಬಯ್ಯಬೇಕು?

ಶ್ರೀ **ಆರ್. ಗುಂಡೂರಾವ್** - ನನಗೆ ಮಾನ್ಯ ಶಿವಯ್ಯನವರ ಮೇಲೆ ಪ್ರೀತಿ ಇದೆ. ಮೈಸೂರಿನ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿದ್ದವರು ನಾನೋ, ತಾವೋ? ತಾವು ಏತಕ್ಕೆ ಬೆಳೆಸಲಿಲ್ಲ? ನಾನು ಬಂದದ್ದೇ ಈಗ. ನಾನು ಬಂದ ಮೇಲೆ ಕಷ್ಟಪಟ್ಟು ಬೆಳೆಸುತ್ತಿದ್ದೇನೆ.

ಶ್ರೀ ಕೆ. ರಮೇಶ್‌ಕುಮಾರ್ - ಹೀಗೆ ನಾವು ನೀವೇ ಜಗಳವಾಡಿದರೆ ಹೇಗೆ? ನಮಗಿದನ್ನು ಕೇಳಿ ಟಾರ್ಚರ್ ಆಗುತ್ತಿದೆ. ಏಕೆಂದರೆ, ನಾವು ಒಂದು ಪಕ್ಷ ಬಿಟ್ಟು ಮತ್ತೊಂದು ಪಕ್ಷ ಸೇರಿದವರಲ್ಲ.

ಶ್ರೀ **ಆರ್. ಗುಂಡೂರಾವ್** - ನಾವೆಲ್ಲ ಒಟ್ಟಿಗೆ ಚೆನ್ನಾಗಿ ಕಲೆತು ಕೆಲಸ ಮಾಡಿರುವವರು. ಮಾನ್ಯ ಆರ್.ಎಸ್. ಪಾಟೀಲ್, ಶ್ರೀ ಸುಬ್ಬಯ್ಯ ಶೆಟ್ಟಿಯವರು ನಮ್ಮನ್ನು ಹೇಗೆ ವಿರೋಧ ಮಾಡುತ್ತಾರೆ? ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಬಿ. ಶಿವಯ್ಯ - ಹೀಗೆ ಹೇಳಿದರೆ ಜನರಿಗೆ ನಮ್ಮ ಮೇಲೆ ಅಪನಂಬಿಕೆ ಬರುತ್ತದೆ.

ಶ್ರೀ ಪಿ. ರಾಂದೇವ್ - ಅನುಮಾನ ಬರಲೆಂದೇ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವುದು.

Sri R. Gundu Rao - I can understand. Members like Sri H.D. Devegowda can oppose us. I can understand Sri A. Laxmisagar can oppose and even Sri J.H. Patel can also oppose,

inspite of the remaining in that party. But others, how can they oppose? because we have moved together and ate together. How can they oppose just because of some misunderstanding? you cannot oppose.

ಶ್ರೀ ಪಿ. ರಾಂದೇವ್ - ಇವರನ್ನೆಲ್ಲ ನೋಡಿಯೇನು, ತಾವು ವಿರೋಧ ಪಕ್ಷವಿಲ್ಲವೆಂದು ಹೇಳಿದ್ದು?

ಶ್ರೀ **ಆರ್. ಗುಂಡೂರಾವ್** - ರಾಷ್ಟ್ರದಲ್ಲಿ ವಿರೋಧ ಪಕ್ಷ ಇಲ್ಲ, ಇನ್ನು ರಾಜ್ಯದಲ್ಲಿ ಎಲ್ಲಿ ಬಂತು? ಅಂತೂ ಎಲ್ಲರೂ ನಮ್ಮ ಜೊತೆಯಲ್ಲಿದ್ದವರೇ, ಇನ್ನೂ ಎರಡು ವರ್ಷ ಇದೆ. ಅಲ್ಲಿಗೆ ಎಲ್ಲ ಸರಿ ಹೋಗುತ್ತದೆಂದು ಕಾಣುತ್ತದೆ, ಆದರೆ ಶ್ರೀ ಜೆ. ಹೆಚ್. ಪಟೇಲರ ವಿಷಯ ಗೊತ್ತಿಲ್ಲ. ಕಳೆದ ಸಾರಿ ನಾನು ಭಾಷಣ ಮಾಡುತ್ತಾ, ಶ್ರೀ ಬಸವಲಿಂಗಪ್ಪನವರು ನಮ್ಮ ಕಡೆ ಬಂದುಬಿಟ್ಟರೆ ........ ಎಂದು ಹೇಳಿದ್ದೆ. ಅವರು ಆವತ್ತೇ ಬಂದುಬಿಟ್ಟಿದ್ದರೆ ಏನೋ ಆಗಿರುತ್ತಿದ್ದರು. ಆವತ್ತು ಕೇಳಲಿಲ್ಲ. ಎಲ್ಲಾ ಬಂದಿದ್ದಾರೆ. ನೀವು ಬನ್ನಿ ಎಂದೆ. "ಬರುತ್ತೇನೆ, ಬರುತ್ತೇನೆ, ತಡೀರಿ" ಎಂದರು. ಬರಲಿಲ್ಲ. ಈಗ ಬಂದಿದ್ದಾರೆ. ಏನು ಮಾಡಲಿ?

ಶ್ರೀ **ಕೆ. ರಮೇಶ್ ಕುಮಾರ್** - ಏನೂ ಮಾಡುವುದಿಲ್ಲವೆ?

ಶ್ರೀ **ಆರ್. ಗುಂಡೂರಾವ್** - ನಾನು ಮಾನ್ಯ ಬಸವಲಿಂಗಪ್ಪನವರನ್ನ ಆಹ್ವಾನಿಸಿದೆ. I have offered him. I am not going back. But he did not come.

ಶ್ರೀ ಕೆ. ಹೆಚ್. ಶ್ರೀನಿವಾಸ್ - ಅವರಿಗೆ ಮಂತ್ರಿ ಪದವಿ ಮೇಲೆ ಆಸೆ ಇಲ್ಲ. ಅವರು ನಿಮ್ಮ ಕುರ್ಚಿ ಮೇಲೆ ಏಟು ಹಾಕಿರಬೇಕು, ಸ್ವಲ್ಪ ನೋಡಿಕೊಳ್ಳಿ.

Sri R. Gundu Rao - I am not bothered about this chair. ನನ್ನ ಕುರ್ಚಿ ಮೇಲೆ ಏಟು ಹಾಕುವ ಪ್ರಶ್ನೆ ಯಾವತ್ತೂ ಬರುವುದಿಲ್ಲ. ಏಕೆಂದರೆ ನಾನು ಕುರ್ಚಿಗೆ ಅಂಟಿಕೊಂಡಿಲ್ಲ. ಎಲ್ಲಿಯವರೆಗೆ ನಮ್ಮ ಶಾಸಕರು ನಮ್ಮ ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದಲ್ಲಿರುತ್ತಾರೋ ಅಲ್ಲಿಯವರೆಗೆ ಈ ಸದನದಲ್ಲಿ ಶಾಶ್ವತವಾಗಿರುತ್ತೇನೆ. ನಿಮಗೆ ಅನುಮಾನ ಬೇಡ.

Sri J.H. Patel - I entirely agree with you. I admire you. This is the one man who is sincere in that respect.

ಶ್ರೀ **ಆರ್. ಗುಂಡೂರಾವ್** - ಅದಕ್ಕಾಗಿಯೇ ನಾನು ಹೇಳುವುದೇನೆಂದರೆ, ಟೀಕೆ ಮಾಡಲಿ, ಸಂತೋಷ, ಅದು ಸ್ವಾಭಾವಿಕ. ಆದರೆ, ಮಾನ್ಯ ಲಕ್ಷ್ಮೀಸಾಗರ್ ಅವರು ಸನ್ಮಾನ ಮಾಡುವವರೆಲ್ಲ ಕಾಳಸಂತೆಕೋರರೆಂದು ಹೇಳಿದರು. ಎಲ್ಲಾ ಕಾಳಸಂತೆಕೋರರಿರುವುದಿಲ್ಲ

ಅಲ್ಲಿ ಸಾವಿರ ಜನ ಸೇರುತ್ತಾರೆ, ಈಗ ನಮಗೆ ಮತ ನೀಡಿದವರಲ್ಲಿ ವೇಶ್ಯೆಯರೂ ಇದ್ದಾರೆ. ಅಂದರೆ, ತಮಗೆ ಬರೀ ವೇಶ್ಯೆಯರು ಮತ್ತು ಕಾಳಸಂತೆಕೋರರು ಮಾತ್ರ ಮತ ಹಾಕಿದ್ದಾರೆಂದು ಅರ್ಥವೇನು? ಇಲ್ಲವೆಂದು ನನಗೂ ಗೊತ್ತಿದೆ, ತಮಗೂ ಗೊತ್ತಿದೆ. ಅಥವಾ ಇನ್ನೊಬ್ಬರು ಬಂದು ಮತ ಹಾಕಿದ್ದಾರೇನು? ಸನ್ಮಾನ ಮಾಡುವುದು ನಮ್ಮ ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯಾಗಿದೆ. ಯಾರೇ ಅಧಿಕಾರಕ್ಕೆ ಬರಲಿ. ನನ್ನ ಭೇದವಿಲ್ಲದೆ ಕರೆದು ಸನ್ಮಾನ ಮಾಡುತ್ತಾರೆ. ಯಾರಾದರೂ ಕರೆದರೆ ನಾವು ಹೋಗಬೇಕಾಗುತ್ತದೆ. Even I have not refused to go to a particular constituency, where it is represented by an opposition member.

ಶ್ರೀ **ಕೆ.ಹೆಚ್.** ಶ್ರೀನಿವಾಸ್ - ಸನ್ಮಾನ ಮಾಡುವುದರ ಬಗ್ಗೆ ನಾನೇನು ಅಸೂಯೆಯಿಂದ ಮಾತನಾಡುತ್ತೇವೆಂದಲ್ಲ. ಅಲ್ಲದೆ, ಮುಖ್ಯಮಂತ್ರಿಗಳಾದವರಿಗೆ ಸನ್ಮಾನ ಮಾಡಬಾರದೆನ್ನುವ ಮಾತನ್ನು ನಾವು ಹೇಳಿಲ್ಲ. ಆದರೆ ಸನ್ಮಾನಗಳು ಮಿತಿಗಿಂತ ಜಾಸ್ತಿಯಾಗಿವೆ. ಸನ್ಮಾನಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ಬರುವುದರ ಬದಲು ಜನರಿಗೆ ಜಿಗುಪ್ಸೆ ಬರುವ ಮಟ್ಟಿಗೆ ಹೋಗುತ್ತಿವೆಯೇನೋ ಎನ್ನುವ ಆತಂಕವನ್ನು ವ್ಯಕ್ತಪಡಿಸುತ್ತಿದ್ದೇವೆ. ತಾವು ಪ್ರತಿ ದಿವಸವೂ ತಮ್ಮ ಬಗ್ಗೆ ಬರುವ ಜಾಹಿರಾತುಗಳನ್ನು ಗಮನಿಸಿದ್ದೀರೆಂದು ಭಾವಿಸುತ್ತೇನೆ. ನಿಮ್ಮ ಭಾವಚಿತ್ರದ ಕೆಳಗಡೆಯಲ್ಲಿ "ಯಾರೇ ಕೂಗಾಡಲಿ ಗುರಿಯತ್ತ ಗುಂಡೂರಾವ್ ಮುಖ್ಯಮಂತ್ರಿ" ಎನ್ನುವ ಜಾಹೀರಾತುಗಳು ಬರುತ್ತಿವೆ. ರಾಜಕುಮಾರ್ ಹಾಡು "ಯಾರೇ ಕೂಗಾಡಲಿ, ಯಾರೇ ಹೋರಾಡಲಿ, ಎಮ್ಮೆ ನಿನಗೆ ಸಾಟಿ ಇಲ್ಲ" ಎನ್ನುವುದನ್ನು ತೆಗೆದುಕೊಂಡು ನಿಮ್ಮ ಭಾವಚಿತ್ರದ ಕೆಳಗಡೆ ಹಾಕಿದರೆ, ಅದು ಔಚಿತ್ಯ ಮೀರಿ ಹೋಗಿ ---- ಗುಂಡೂರಾಯರೇ ನಿಮಗೆ ಸಾಟಿ ಇಲ್ಲ ....." ಎನ್ನುವಂತಾದೀತು. ಇದನ್ನು, ಮಾನ್ಯ ಮುಖ್ಯಮಂತ್ರಿಗಳಿಗೆ ಸನ್ಮಾನ ಮಾಡಬಾರದೆನ್ನುವ ಕಾರಣದಿಂದ ಹೇಳುತ್ತಿಲ್ಲ. ಎಲ್ಲಿ ಔಚಿತ್ಯ ಮೀರುತ್ತದೆ ಅಲ್ಲಿ ಅದನ್ನು ತಾವು ಕಟ್ರೋಲ್ ಮಾಡಿ. ಅಷ್ಟೇ ನಿಮ್ಮನ್ನು ನಾವು ಕೇಳಿಕೊಳ್ಳುವುದು.

ಶ್ರೀ ಆರ್. **ಗುಂಡೂರಾವ್** - ಇದು ಹೇಳುವುದು ಸುಲಭ, ಆದರೆ ನಡೆದುಕೊಳ್ಳುವುದು ಬಹಳ ಕಷ್ಟ.

ಶ್ರೀ ಕೆ.ಎಚ್. ಶ್ರೀನಿವಾಸ್ - ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಆರ್. **ಗುಂಡೂರಾವ್** - ಯಾರೇ ಕೂಗಾಡಲಿ ಎಂದು ಏತಕ್ಕೆ ಬರೆಯುತ್ತಾರೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾವು ಕೇವಲ ಸನ್ಮಾನ ಸಮಾರಂಭಗಳ ಕಡೆಗೇ ಗಮನ ಕೊಟ್ಟಿಲ್ಲ. ರಾಜ್ಯದ ಅಭಿವೃದ್ಧಿ ಕೆಲಸಗಳ ಕಡೆಗೂ ಗಮನ ಕೊಟ್ಟಿದ್ದೇವೆ. ಇಂತಹ ಸಮಾರಂಭಗಳಿಗೆ ಹೋದಾಗ ರಾಜ್ಯದ ಅಭಿವೃದ್ಧಿ ಬಗ್ಗೆ ಜನರಿಗೆ ವಿವರಿಸುತ್ತೇವೆ. ಇದರಿಂದ ಜನರಿಗೂ ಬೇಸರವಾಗಿಲ್ಲ. ಯಾರೇ ಮುಖ್ಯಮಂತ್ರಿಗಳಾಗಿ ಆಯ್ಕೆಯಾಗಲಿ ಅವರಿಗೆ ಎಲ್ಲ ಕಡೆಯೂ ಸನ್ಮಾನ ಸಮಾರಂಭಗಳನ್ನು ಏರ್ಪಾಡು ಮಾಡುವುದು

ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಜನರು ಕರೆದಾಗ ನಾವು ಹೋಗಬೇಕಾಗುತ್ತದೆ. ನೀವೆಲ್ಲರೂ ಸೇರಿ ಕರೆದ ಕಾರಣ ನಾನು ಮೊನ್ನೆ ಶಿವಮೊಗ್ಗಕ್ಕೂ ಸಹ ಬಂದಿದ್ದೆ. ಅದರಂತೆ ಯಾರು ಕರೆದರೂ ಹೋಗಬೇಕಾಗುತ್ತದೆ.

ಶ್ರೀ **ಪಿ. ರಾಮದೇವ್** - ಈ ಸನ್ಮಾನ ಸಮಾರಂಭಗಳ ಹೆಸರಿನಲ್ಲಿ ಕೆಲವರು ಜನರಿಗೆ ಹೆದರಿಕೆ ಬೆದರಿಕೆ ಹಾಕಿ ಹಣ ವಸೂಲಿ ಮಾಡುತ್ತಿದ್ದಾರೆ. ಇದು ನಿಲ್ಲಬೇಕು.

ಶ್ರೀ **ಆರ್. ಗುಂಡೂರಾವ್** - ತಾವೇ ಯಶವಂತಪುರದಲ್ಲಿ ಒಂದು ಸನ್ಮಾನ ಸಮಾರಂಭವನ್ನು ಏರ್ಪಾಡು ಮಾಡಿದ್ದೀರಿ. ಆಗ ಜನರಿಂದ ಹಣ ಕಲೆಕ್ಟ್ ಮಾಡಲಾಯಿತೇನು?

ಶ್ರೀ **ಪಿ. ರಾಮದೇವ್** - ಅದು ತಮಗೆ ಏರ್ಪಡಿಸಿದ್ದ ಸನ್ಮಾನವಲ್ಲ. ಅದೊಂದು ಸಮಾರಂಭ. ಆದರೆ ಸನ್ಮಾನ ಸಮಾರಂಭಗಳಿಗೆಂದು ಭಯೋತ್ಪಾದನೆಯಿಂದ ಹಣ ಕಲೆಕ್ಟ್ ಮಾಡುತ್ತಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ **ಆರ್. ಗುಂಡೂರಾವ್** - ಈಗ ನಾವು ರ್‍ಯಾಲಿಗಳನ್ನು ಮಾಡುತ್ತೇವೆ. ಕಾನ್‌ಫರೆನ್ಸ್‌ಗಳನ್ನು ಮಾಡುತ್ತೇವೆ ಪಿ.ಸಿ.ಸಿ. ಮೀಟಿಂಗ್ ನಡೆಯುತ್ತದೆ. ಎ.ಐ.ಸಿ.ಸಿ. ಮೀಟಿಂಗ್ ನಡೆಯುತ್ತದೆ. ಇದಕ್ಕೆ ಬೇಕಾದ ಹಣವನ್ನು ಕಲೆಕ್ಟ್ ಮಾಡದೆ ಯಾವ ರೀತಿ ನಡೆಸಲು ಸಾಧ್ಯ? ಇದಕ್ಕೆ ಆಗುವ ಖರ್ಚನ್ನು ಯಾವ ರಾಜಕೀಯ ಪಕ್ಷಗಳೂ ತಮ್ಮ ಸ್ವಂತ ಪಾಕೇಟ್‌ನಿಂದ ಕೊಡುವುದಿಲ್ಲ. ಇದೆಲ್ಲಾ ಹೇಳುವುದಕ್ಕೆ ಚೆನ್ನಾಗಿದೆ ಅಷ್ಟೆ. ಆದರೆ ಇದನ್ನೆಲ್ಲಾ ಕೇಳುವವರು ಹೆಡ್ಡರೇನು? ಈ ಮೊದಲು ತಾವು ಅಧಿಕಾರದಲ್ಲಿದ್ದಾಗ ಬೆಂಗಳೂರಿನಲ್ಲಿ ಎ.ಐ.ಸಿ.ಸಿ. ಮೀಟಿಂಗ್ ನಡೆಯಿತು. ಆಗ ಮಹಾತ್ಮಾಗಾಂಧಿ ರಸ್ತೆಯಿಂದ ಹಿಡಿದು ಲಾಲ್‌ಬಾಗ್‌ವರೆಗೆ ಉದ್ದಕ್ಕೂ ಇಲ್ಯೂಮಿನೇಷನ್ ಮಾಡಲಾಗಿತ್ತು. ಆಗ ಬಂದಂಥ ಅತಿಥಿಗಳು ಇಳಿದುಕೊಳ್ಳಲು ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ಮತ್ತು ಅಶೋಕ ಹೋಟೆಲ್‌ನಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಅದಕ್ಕೆಲ್ಲಾ ಹಣ ಎಷ್ಟು ಖರ್ಚಾಯಿತು ಮತ್ತು ಅದು ಎಲ್ಲಿಂದ ಬಂತು? ...... It may be direct or indirect. But, the money was paid in one form or the other. Whether I am in power or you are in power; whether my grandfather is in power or your grandfather is in power, naturally it is going to happen. ನಾಳೆ ನೀವು ಅಧಿಕಾರಕ್ಕೆ ಬಂದರೂ ಸಹ ಇದೇ ರೀತಿ ಮಾಡುತ್ತೀರಿ. ಈಗ ಕೇರಳದಲ್ಲಿ ಕಮ್ಯುನಿಸ್ಟ್ ಪಾರ್ಟಿ ಸರ್ಕಾರ ಇದೆ. ಅಲ್ಲಿನ ಮುಖ್ಯಮಂತ್ರಿಗಳಾದ ಶ್ರೀ ನಯನಾರ್ ಅವರು ಎಲ್ಲದಕ್ಕೂ ತಮ್ಮ ಸ್ವಂತ ಪಾಕೇಟ್‌ನಿಂದ ದುಡ್ಡು ಹಾಕಿಕೊಂಡು ಖರ್ಚು ಮಾಡುತ್ತಾರೇನು?

ಶ್ರೀ **ಪಂಪಾಪತಿ**.- ಕಮ್ಯುನಿಸ್ಟ್ ಪಾರ್ಟಿಯವರೇನಾದರೂ ಹಣ ಕಲೆಕ್ಟ್ ಮಾಡಿದರೆ ಅಷ್ಟನ್ನೂ ಸಹ ಖರ್ಚು ಮಾಡುತ್ತಾರೆ. ಆದರೆ ತಮ್ಮ ಪಾರ್ಟಿಯವರು ಒಂದು ಲಕ್ಷ ಕಲೆಕ್ಟ್

ಮಾಡಿದರೆ ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಉಳಿದಿದ್ದನ್ನು ತಾವೇ ಉಳಿಸಿಕೊಳ್ಳುತ್ತಾರೆ.

ಶ್ರೀ **ಆರ್. ಗುಂಡೂರಾವ್.**- ಈಗ ದಾವಣಗೆರೆಯಲ್ಲಿ ತಾವೇನಾದರೂ ಸಮಾರಂಭಗಳನ್ನು ನಡೆಸಿದಾಗ ಎಷ್ಟು ಕಲೆಕ್ಟ್ ಆಯಿತು, ಎಷ್ಟು ಖರ್ಚಾಯಿತು ಎಂಬ ಲೆಕ್ಕದ ಬಗ್ಗೆ ನಾನು ತಮ್ಮನ್ನೇನೂ ಪ್ರಶ್ನೆ ಮಾಡಲಿಲ್ಲ.

ಶ್ರೀ ಪಂಪಾಪತಿ.- ನಾವು ಹಣ ಕಲೆಕ್ಟ್ ಮಾಡಿದರೆ, ಅದನ್ನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಎಲ್ಲವನ್ನೂ ಖರ್ಚು ಮಾಡುತ್ತೇವೆ.

ಶ್ರೀ ಐ.ಪಿ.ಡಿ. ಸಾಲಪ್ಪ.- ನಾವು ಹಣ ವಸೂಲಿ ಮಾಡಿದರೆ, ಅದರಲ್ಲಿ ಕಾಲು ಪೈಸೆಯನ್ನು ಸಹ ನಾವು ಇಟ್ಟುಕೊಳ್ಳುವುದಿಲ್ಲ. ಎಲ್ಲವನ್ನೂ ನಾವು ಬಡವರಿಗಾಗಿ ಖರ್ಚು ಮಾಡುತ್ತೇವೆ.

ಶ್ರೀ ಜೆ.ಎಚ್. ಪಟೇಲ್.- ತಾವು ಈ ರಾಜ್ಯದ ಸಮಸ್ಯೆಗಳ ಬಗ್ಗೆ ಏನನ್ನೂ ಹೇಳಲಿಲ್ಲ?

ಶ್ರೀ **ಆರ್. ಗುಂಡೂರಾವ್.**- ಅದನ್ನು ಸಹ ಹೇಳುತ್ತೇನೆ. ಇದರ ಬಗ್ಗೆ ಹೇಳದಿದ್ದರೆ ಒನ್ ಸೈಡ್ ಹೇಳಿದಂತೆ ಆಗುತ್ತದೆ. ಆದಕಾರಣ ಇದನ್ನು ಸಹ ಹೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.- ಈಗ ಸನ್ಮಾನಗಳಿಗೆಂದು ಹಣ ಕಲೆಕ್ಟ್ ಮಾಡುವುದು ಸರಿ. ಆದರೆ ಹಣಕ್ಕೋಸ್ಕರವಾಗಿಯೇ ಸನ್ಮಾನಗಳನ್ನು ಏರ್ಪಡಿಸುವುದು ಬೇಡ ಎಂದು ನಾನು ಹೇಳಿದ್ದು.

ಶ್ರೀ **ಆರ್. ಗುಂಡೂರಾವ್.**- ನೀವು ಅಧಿಕಾರದಲ್ಲಿದ್ದಾಗ ನಿಮಗೂ ಸನ್ಮಾನಗಳನ್ನು ಮಾಡಿದ್ದಾರೆ. ಮೊದಲು ನೀವು ಕಾಂಗ್ರೆಸ್ (ಒ) ನಲ್ಲಿದ್ದಿರಿ. ನಂತರ ತಾವು ಆ ಪಕ್ಷ ಬಿಟ್ಟು, ಶ್ರೀ ದೇವರಾಜ ಅರಸ್ ಅವರಿಗೆ ಪೊಲಿಟಿಕಲ್ ಸೆಕ್ರೆಟರಿ ಆದಿರಿ. ಆ ಸಮಯದಲ್ಲಿ ತಮ್ಮ ಕಛೇರಿಯ ಬಳಿ 50 ಜನರು ಇರುತ್ತಿದ್ದರೆ, ಮುಖ್ಯಮಂತ್ರಿಗಳ ಕಛೇರಿಯ ಬಳಿ 20 ಜನರು ಇರುತ್ತಿದ್ದರು, ಏತಕ್ಕೆ ? ನಾನಾ ಕೆಲಸಗಳಿಗಾಗಿ ತಮ್ಮ ಹತ್ತಿರ ಬರುತ್ತಿದ್ದರು. ನಾಮಿನೇಷನ್ಸ್, ಪ್ರಮೋಷನ್ಸ್, ಟ್ರಾನ್ಸ್‌ಫರ್ಸ್ ಮುಂತಾದ ಕೇಸ್‌ಗಳೆಲ್ಲಾ ಪೊಲಿಟಿಕಲ್ ಸೆಕ್ರೆಟರಿ ಮೂಲಕವೇ ಹೋಗಬೇಕಾಗಿತ್ತು. ಆದಕಾರಣ ತಮ್ಮ ಬಳಿ ಯಾವಾಗಲೂ ಜನರು ಇರುತ್ತಿದ್ದರು. ಅದರಲ್ಲಿ ತಪ್ಪೇನೂ ಇಲ್ಲ.

ಶ್ರೀ ಕೆ.ಬಿ. ಶಿವಯ್ಯ.- ಗುರುತು ಕಂಡ ಕಳ್ಳ ಜೀವ ಸಹಿತ ಬಿಡ ಎಂಬ ಗಾದೆಯಂತೆ, ಇವರು ಎಲ್ಲವನ್ನೂ ತಿಳಿದುಕೊಂಡಿದ್ದಾರೆ. ಅದೇ ಬಂದಿರುವುದು ಕಷ್ಟ.

ಶ್ರೀ ಕೆ. ರಮೇಶ್‌ಕುಮಾರ್.- ಈ ಸನ್ಮಾನ ಸಮಾರಂಭಗಳನ್ನು ಏನು ಏರ್ಪಡಿಸಲಾಗುತ್ತದೆ. ಅದರ ಹಿಂದೆ ಕೆಲವು ಜನರಿರುತ್ತಾರೆ. ಈ ಜನರ ಬಗ್ಗೆ ನಾನು ಸ್ವಲ್ಪ

ಹೇಳಬೇಕಾಗಿದೆ. Whoever has been in the office, in the past, whether Sri Urs or the present Chief Minister the same people, the same common men will come and host the Chief Minister. Suppossing if I were or Sri Devegowda were to be the Chief Minister, the same people will be there in the host committee.

Sri J.H. Patel - Sir, there is a famous saying, it says,

``Kings are changed,

Queens are changed,

but, courtiers are not chagned"

Sri K. Ramesh Kumar - I do not want to comment upon it. But I would like to say that the people who host the Chief Minister will have some antecedents. Therefore as a sincere well-wisher of the Chief Minister, I suggest to enquire about the antecedents of the members of the hosting committee, before going to attend the functions of felicitations. ಇಲ್ಲದಿದ್ದರೆ ಇಂತಹವರಿಂದ ನಿಜವಾಗಿಯೂ ದೇಶಕ್ಕೆ ಹಾಗೂ ರಾಜ್ಯಕ್ಕೆ ಹಾನಿಯಾಗುತ್ತದೆ. ಅಧಿಕಾರದಲ್ಲಿರುವವರ ಹತ್ತಿರ ಸಲೀಸಾಗಿ ಪ್ರವೇಶ ದೊರಕಿಸಿಕೊಳ್ಳಲು ಈ ಜನರು ಇಂತಹ ಸನ್ಮಾನ ಸಮಾರಂಭಗಳನ್ನು ಏರ್ಪಡಿಸುತ್ತಾರೆ. ಆದಕಾರಣ ಇಂತಹವರ ಬಗ್ಗೆ ನಿಗಾ ಇಡುವುದು ಒಳ್ಳೆಯದೆಂದು ಹೇಳುತ್ತೇನೆ.

**ಶ್ರೀ ಆರ್. ಗುಂಡೂರಾವ್.**- ನಾವು ಅಧಿಕಾರಕ್ಕೆ ಬಂದು ವರ್ಷವಾಯಿತು. ಆದ ಕಾರಣ ಇನ್ನು ಮುಂದೆ ಈ ರೀತಿಯೆಲ್ಲಾ ದೊಡ್ಡದಾಗಿ ಸಮಾರಂಭಗಳು ಆಗುವುದಿಲ್ಲ ಬಿಡಿ. ಒಟ್ಟಿನಲ್ಲಿ ಇಂತಹ ಸನ್ಮಾನ ಸಮಾರಂಭಗಳ ಬಗ್ಗೆ ಯಾರೇ ಆಗಲಿ, ರಾಜಕೀಯ ಮಾಡುವುದು ಬೇಡ. ರಚನಾತ್ಮಕ ಸಲಹೆಗಳು ಏನಾದರು ಇದ್ದರೆ ಕೊಡಿ. ಎಲ್ಲೆಲ್ಲಿ ಸರ್ಕಾರ ತಪ್ಪಿದೆ, ಅಂತಹ ಕಡೆಗಳಲ್ಲಿ ತಾವುಗಳು ತಿದ್ದುವುದಕ್ಕೆ ಪ್ರಯತ್ನ ಮಾಡಿ. ನಾವೇನು ಸಾರ್ವಭೌಮರಲ್ಲ. ಮತ್ತು ಎಲ್ಲವನ್ನೂ ತಿಳಿದುಕೊಂಡಿಲ್ಲ. ನಮ್ಮ ರಾಜ್ಯದಲ್ಲಿ ಮೂರೂವರೆ ಕೋಟಿ ಜನರಿದ್ದಾರೆ, ಅನೇಕ ಜಾತಿಗಳಿವೆ, ಜೊತೆಗೆ ಆಡಳಿತ ಯಂತ್ರ ದೊಡ್ಡ ದಾಗಿದೆ. ಆದಕಾರಣ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇಲ್ಲಿ ಮಾತನಾಡಬೇಕೇ ಹೊರತು ಚೀಪ್ ಪಾಪ್ಯುಲ್ಯಾರಿಟಿಗೋಸ್ಕರ ಟೀಕೆಗಳನ್ನು ಮಾಡುವುದು ಸರಿಯಲ್ಲ. ಆದರೆ ರಚನಾತ್ಮಕ ಟೀಕೆಗಳಿಗೆ ನಮ್ಮ ಸ್ವಾಗತವಿದೆ. ನನ್ನನ್ನು ದಾನಶೂರಕರ್ಣ ಎಂದು ಹೊಗಳುವುದೂ ಬೇಡ, ನಂತರ ತೆಗಳುವುದೂ ಬೇಡ.

ಇದರಿಂದ ಯಾವ ಪುರುಷಾರ್ಥ ಸಾಧನೆ ಮಾಡಿದಂತಾಗುತ್ತದೆ? ಯಾವುದೂ ಇಲ್ಲ, ಇದು ನನ್ನ ಅಭಿಪ್ರಾಯ. ಇದರಿಂದ ಜನರೂ ಮರುಳಾಗುವುದಿಲ್ಲ. ಇವತ್ತು ಯಾವುದೋ ಒಂದು ಹಾಸನದ ಪ್ರಕರಣದ ಬಗ್ಗೆ ಇಲ್ಲಿ ಚರ್ಚೆಯಾಯಿತು. ಆ ಬಗ್ಗೆ ಎನ್ ಕ್ವೈರಿ ಮಾಡಿಸಿ ಎಂದರೆ we are prepared to accept it. After all the State belongs to everybody. It is not the property of one individual or one party. As rightly pointed out by a hon. member, King may come king may go; queen may come queen may go but the State remains where it is. Therefore, we have to move in this direction and we should serve the people. I am not after power. This is not permanent also.

ಆದ್ದರಿಂದ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮ ರಾಜ್ಯದಲ್ಲಿ ಅನ್ಯಾಯಗಳು ನಡೆದಿದ್ದರೆ ಅದನ್ನು ಸರಿಪಡಿಸುವುದಕ್ಕೆ ನಾವೆಲ್ಲಾ ಒಂದಾಗಿ ಕೆಲಸ ಮಾಡೋಣ. ಎಲ್ಲಿ ಕೆಲಸ ಕಾರ್ಯಗಳು ನಡೆದಿಲ್ಲ ಆ ಬಗ್ಗೆ ಸಲಹೆ ಕೊಡಿ. ಮಾನ್ಯ ವಿರೋಧಪಕ್ಷದವರು ಕಂಡರೆ ನನಗೆ ವಿಶ್ವಾಸ ಇದೆ. ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಯಾಗಿ ನಾನು ಅವರಿಗೆ ಏನೇನು ಸಹಾಯ ಮಾಡಿಕೊಡಬೇಕೋ ಅದನ್ನು ಪಕ್ಷಪಾತ ಇಲ್ಲದೇ ಮಾಡಿಕೊಡುವ ಮನಸ್ಸು ನನಗಿದೆ. ಈ ದೃಷ್ಟಿಯಿಂದ ಎಲ್ಲಾ ಕಮಿಟಿಗಳಲ್ಲಿ ಮತ್ತು ಟ್ರಿಬ್ಯುನಲ್‌ಗಳಲ್ಲಿ ಆಪೋಜಿಷನ್‌ನವರು ಇರಬೇಕು ಎಂದು ಅವರನ್ನು ನಾನೇ ಹಾಕಿದ್ದೇನೆ. ಆ ಕಮಿಟಿಗಳಲ್ಲಿ ಮಾನ್ಯ ವಿರೋಧಪಕ್ಷದವರು ಇದ್ದರೆ ಒಂದೇ ತರಹ ತೀರ್ಮಾನವಾಗುವುದಕ್ಕೆ ಅವಕಾಶವಿರುವುದಿಲ್ಲ. ಕೊನೆಯ ಪಕ್ಷ ಚರ್ಚೆಯಾದರೂ ಆಗುತ್ತದೆ. ಆ ದೃಷ್ಟಿಯಿಂದ ನಾವು ಹಾಕಿದ್ದೇವೆ. ಆದ್ದರಿಂದ ನಮ್ಮಲ್ಲಿ ಪಾರ್ಟಿ ಭಿನ್ನಾಭಿಪ್ರಾಯ ಏನೇ ಇದ್ದರೂ ಅದನ್ನು ಚುನಾವಣೆಯ ಸಮಯದಲ್ಲಿ ಇಟ್ಟುಕೊಳ್ಳೋಣ. ಆಗ ಏನು ಹೇಳಬೇಕೋ ಅದನ್ನು ಹೇಳೋಣ. ಚುನಾವಣೆಯಲ್ಲಿ ನಾನೇ ಗೆದ್ದು ಬರಲಿ, ನೀವೇ ಬರಲಿ ಅಥವಾ ಯಾರೇ ಬರಲಿ ಈ ರಾಜ್ಯವನ್ನು ಸರ್ವತೋಮುಖ ಅಭಿವೃದ್ಧಿ ಮಾಡುವುದಕ್ಕೆ ಒಟ್ಟಾಗಿ ಕೆಲಸ ಮಾಡೋಣ. ನೀವು ರೈತರ ಚಳುವಳಿ ಬಗ್ಗೆ ಹೇಳುತ್ತಿದ್ದಿರಿ. ರೈತರಿಗೆ ಅಧಿಕಾರಿಗಳಿಂದ ಅಪಚಾರ ಆಗಿರಬಹುದು. ನಮ್ಮ ರಿಪೋರ್ಟ್ ಪ್ರಕಾರ ಅದು ಹೆಚ್ಚಿನ ಸಂಖ್ಯೆಯಲ್ಲಿ ಆಗಿಲ್ಲ. After all the Government servants functioning at various levels are not servants of Gundu Rao. They are not the servants of Communist party or B.J.P. They are there to serve the State and the State Government.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ .- ತಾವು ಅದನ್ನು ಈಗ ಹೇಳಿದ್ದು ಬಹಳ ಉತ್ತಮವಾಯಿತು. 3ನೇ ತಾರೀಖು ಮಂಗಳೂರಿನಲ್ಲಿ ಭಾಷಣ ಮಾಡುವುದಕ್ಕೆ ಮಾನ್ಯ ಶಿಕ್ಷಣ

ಮಂತ್ರಿಯವರು ಹೋದಾಗ ಅಲ್ಲಿ ಅವರು ಡ್ಯೂಟಿಯಲ್ಲಿ ಇದ್ದಂತಹ ಕಾನ್‌ಸ್ಟೇಬಲ್ ಮತ್ತು ಸಬ್ ಇನ್ಸ್‌ಪೆಕ್ಟರನ್ನು ಬೈದದ್ದು ನಮ್ಮ ಗಮನಕ್ಕೆ ಬಂದಿದೆ. ಇದನ್ನೂ ತಾವು ಗಮನಕ್ಕೆ ತೆಗೆದುಕೊಳ್ಳಬೇಕು.

ಶ್ರೀ **ಆರ್. ಗುಂಡೂರಾವ್**.- ಅದನ್ನು ಚರ್ಚೆ ಮಾಡುವುದಕ್ಕೆ ಬೇರೆ ಫೋರಂ ಇದೆ.

ಶ್ರೀ **ಪಿ. ರಾಮದೇವ್**.- ಸ್ವಾಮಿ, ಅಧಿಕಾರಿ ಒಬ್ಬರು ಸನ್ಮಾನ ಸಮಾರಂಭಕ್ಕೆ ಬರಲಿಲ್ಲ ಎಂದು ಹೇಳಿ ಅವರನ್ನು ಸಸ್ಪೆಂಡ್ ಮಾಡಿದ್ದಾರೆ.

ಶ್ರೀ **ಆರ್. ಗುಂಡೂರಾವ್**.- ಆ ಅಧಿಕಾರಿ ಸನ್ಮಾನ ಸಮಾರಂಭಕ್ಕೆ ಬರಲಿಲ್ಲ ಎಂದರೆ ಅದು ಹಾಗಲ್ಲ, I will tell you when the Information Minister is present at a particular place, it is the duty of the Information officer to be preset there. It is the duty of the concerned officers to be present on the occasion when the Minister visits a particular district or a taluk. ಆ ಜಾಗದಲ್ಲಿ ನಾನೇ ಇರಬಹುದು, ಯಾರೇ ಇರಬಹುದು, ಅದನ್ನು ಬೇರೆ ಫೋರಂನಲ್ಲಿ ನಾವು ಚರ್ಚೆ ಮಾಡೋಣ. ಈಗ We should follow the path in the interest of the State. ಇವತ್ತು ಎಷ್ಟೋ ಜನ ಮುಖ್ಯಮಂತ್ರಿಯಾಗಿ ಬಂದು ಹೋದರು, ಶ್ರೀಮಾನ್ ಕೆ.ಸಿ. ರೆಡ್ಡಿಯವರು, ಶ್ರೀಮಾನ್ ಹನುಮಂತಯ್ಯನವರು, ಶ್ರೀ ನಿಜಲಿಂಗಪ್ಪನವರು, ಶ್ರೀ ವೀರೇಂದ್ರಪಾಟೀಲ್‌ರವರು ಮುಖ್ಯಮಂತ್ರಿಯಾಗಿ ಇದ್ದರು. ಈಗ ನಾನು ಬಂದಿದ್ದೇನೆ. ರಾಜ್ಯದ ಆಡಳಿತ ನಿಂತುಹೋಗಿದೆಯೇ? ಅಧಿಕಾರಿಗಳು ಬಂದು ಹೋದರು, ಶಾಸಕರು ಬಂದು ಹೋದರು, ಈಗ ನಮ್ಮ ಪಾಲಿನ ಕರ್ತವ್ಯವನ್ನು ನಾವು ಮಾಡುತ್ತಿದ್ದೇವೆ. ನಾಳೇ ದಿವಸ ನಾವು ಹೋಗುತ್ತೇವೆ. ಆದರೆ ಶಾಸನಸಭೆ ಇರುತ್ತದೆ, ರಾಜ್ಯಾಂಗ ಇರುತ್ತದೆ. ಜನ ಏನನ್ನು ಅಳತೆ ಮಾಡುತ್ತಾರೆ? ನಾವು ಇಷ್ಟು ವರ್ಷಗಳಲ್ಲಿ ಏನೇನು ಮಾಡಿದೆವು ಎಂಬುದನ್ನು ಅಳತೆ ಮಾಡುತ್ತಾರೆ. ನಾವು ಎಷ್ಟು ವರ್ಷ ಇದ್ದೆವು ಎಂಬುದನ್ನು ಅಳತೆ ಮಾಡುವುದಿಲ್ಲ. ಈ ಸರ್ಕಾರ ಚೀಫ್ ಮಿನಿಸ್ಟರ್ ಎಲ್ಲಾ ಕೆಲಸಗಳನ್ನು ಮಾಡಬೇಕಾದರೆ ನೀವೆಲ್ಲಾ ನಮ್ಮೊಡನೆ ಸಹಕಾರ ಮಾಡಿದರೆ ಮಾತ್ರ ಸಾಧ್ಯ. ಚೀಫ್ ಮಿನಿಸ್ಟರ್‌ಗೆ ಕಾರ್ ಇರಬಹುದು, ಬಂಗ್ಲೆ ಇರಬಹುದು, 4 ಜನರನ್ನು ಚೇರ್‌ಮನ್ ಮಾಡಬಹುದು. That is not the duty of the Chief Minister of respective party. We have to compare with the neighbouring states as to how progress has been achieved and how developmental works are taking place. ಅಲ್ಲಿ ಪ್ರೋಗ್ರೆಸ್ ಆಗುತ್ತಾ ಇದೆ, ನಮ್ಮಲ್ಲಿ ಏತಕ್ಕೆ ಆಗುತ್ತಾ ಇಲ್ಲ? ನಾವು ಎಲ್ಲಿ ತಪ್ಪಿದ್ದೇವೆ, ಇದನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕು? Let us join

together and work hard. Let us forget about Gundu Rao or Basappa or others. We should take overall picture. ಇವತ್ತು ಬೆಂಗಳೂರಿನಲ್ಲಿ ಟಿ.ವಿ. ಸ್ಟೇಷನ್ ಬರುತ್ತಾ ಇದೆ. ನನಗಾಗಿ ಬರುತ್ತಾ ಇದೆಯೇ? ನಾಳೆ ದಿವಸ ವಿಜಯನಗರ ಸ್ಟೀಲ್ ಪ್ಲಾಂಟ್ ಬರಬೇಕು. ನನಗಾಗಿ ಬರುತ್ತಾ ಇದೆಯೇ? ಇಲ್ಲ. ರಾಜ್ಯದಲ್ಲಿ ಎಲ್ಲೆಲ್ಲಿ ಆವಶ್ಯಕವೋ ಅಲ್ಲಿ ಬ್ರಿಡ್ಜ್, ಸ್ಕೂಲು-ಇವುಗಳನ್ನು ಕಟ್ಟಿದರೆ ಅದರಿಂದ ಪ್ರತಿಯೊಬ್ಬರಿಗೂ ಅನುಕೂಲವಾಗುತ್ತದೆ. ಈ ಒಂದು ದಿಶೆಯಲ್ಲಿ ನಾವೆಲ್ಲಾ ಕೆಲಸ ಮಾಡಬೇಕು ಎಂಬುದು ನನ್ನ ಪ್ರಾಮಾಣಿಕವಾದ ಆಶಯ. ಅದನ್ನು ಬಿಟ್ಟು ಯಾರ್‍ಯಾರನ್ನು ಅರೆಸ್ಟ್ ಮಾಡೋಣ ಅನ್ನತಕ್ಕಂಥ ಆಶಯವಿಲ್ಲ. ಈ ಬಗ್ಗೆ ನ್ಯಾಷನಲ್ ಸೆಕ್ಯೂರಿಟಿ ಆರ್ಡಿನೆನ್ಸ್ ಬಂತಲ್ಲ. Let me be very very clear, I am not thinking in that direction. It is not the intention of the Government at all. ಇದರಲ್ಲಿ ನನ್ನ ಅಭಿಪ್ರಾಯ ಏನಿದೆ ಎಂದರೆ ಈ ರಾಜ್ಯದ ಅಭಿವೃದ್ಧಿಗಾಗಿ ನಾವೆಲ್ಲಾ ಒಟ್ಟಾಗಿ ಕೆಲಸ ಮಾಡೋಣ. ನಮಗೆ ಒಂದು ಅಪರ್ಚುನಿಟಿ ಬಂದಿದೆ. Let us make use of the opportunity to serve the people to the best of our ability. ನಾನೇ ಇಲ್ಲಿ ಇರುತ್ತೇನೆ ಎಂದು ಹೇಳುವುದಕ್ಕೆ ನಾನೇನು ಚಕ್ರವರ್ತಿಯೇ, ಸರ್ವಾಧಿಕಾರಿಯೇ? ನಾವೆಲ್ಲಾ 83ನೇ ಇಸವಿಯ ಜನವರಿ ಎಲೆಕ್ಷನ್‌ಗೆ ಹೋಗಬೇಕು. This is only the budget in which we can concentrate more. Today my relationship and personal relationship with the Prime Minister is good. Let us make use of the opportunity to see that the State gets its legitimate share.

**ಶ್ರೀ ಎಚ್.ಎಲ್. ತಿಮ್ಮೇಗೌಡ.-** This is the only budget, ಎಂದು ಹೇಳುತ್ತಿದ್ದೀರಿ. 1982ರ ಬಜೆಟ್ ಇದೆಯಲ್ಲಾ?

**ಶ್ರೀ ಆರ್. ಗುಂಡೂರಾವ್.-** 1982ರಂದು ಎಲೆಕ್ಷನ್ ಬಜೆಟ್ ಆಗುತ್ತದೆ. ಎಲೆಕ್ಷನ್ ಬಜೆಟ್ ನೆಕ್ಸ್ಟ್ ಇಯರ್ ಬರುತ್ತದೆ. ಆಗ ನಮಗೆ 6 ತಿಂಗಳು ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದರಲ್ಲಿ 3 ತಿಂಗಳು ಸರಿಯಾಗಿ ಕೆಲಸ ಮಾಡಿದರೆ ಜನವರಿ ತಿಂಗಳು ಬರುತ್ತದೆ. ಜನವರಿ ತಿಂಗಳು ಬಂದರೆ ನಮ್ಮ ಪಾರ್ಲಿಮೆಂಟ್ ಬೋರ್ಡ್‌ನಲ್ಲಿ ಯಾರ್‍ಯಾರಿಗೆ ಎಲೆಕ್ಷನ್ ಟಿಕೆಟ್ ಕೊಡಬೇಕು - ಯಾರ್‍ಯಾರನ್ನು ಎಲ್ಲೆಲ್ಲಿ ನಿಲ್ಲಿಸಬೇಕು ಎನ್ನತಕ್ಕಂಥಾದ್ದನ್ನು ವ್ಯವಸ್ಥೆ ಮಾಡತಕ್ಕಂಥಾದ್ದು ಇರುತ್ತದೆ. ಎಲೆಕ್ಷನ್ ಆಗುವವರೆಗೆ ಯಾವ ಪ್ರೋಗ್ರೆಸ್ ಇಲ್ಲಿ ಆಗುವುದಿಲ್ಲ. ಅದಕ್ಕೆ ನಾನು ಹೇಳುತ್ತಾ ಇರೋದು. This is very important year for all of us. Therefore, let us concentrate more on this year's budget. Let us work together. ನನಗೆ ಇವತ್ತು ಒಬ್ಬರ ಕ್ಷೇತ್ರಕ್ಕೆ ದುಡ್ಡು ಕೊಡಬಾರದು, ಒಬ್ಬರಿಗೆ ಕೊಡಬೇಕು, ಇನ್ನೊಬ್ಬರಿಗೆ ಕಡಿಮೆ ಕೊಡಬೇಕು

ಎನ್ನತಕ್ಕಂಥ ಯೋಚನೆ ಇಲ್ಲ. ನಮಗೆ ಬರಬೇಕಾಗಿರತಕ್ಕಂಥ ಷೇರನ್ನು ಸೆಂಟ್ರಲ್ ಗೌರ್ನಮೆಂಟ್‌ನಿಂದ ಪ್ರಯತ್ನ ಮಾಡಿ ತಂದು ಎಲ್ಲಾ ಡೆವಲಪ್‌ಮೆಂಟ್ ಆಕ್ಟಿ ವಿಟೀಸ್‌ಗೆ ನಾವು ಕೊಡೋಣ. ನಾವೆಲ್ಲಾ ಸೇರಿಕೊಂಡು ರಾಜ್ಯದ ಅಭ್ಯುದಯಕ್ಕಾಗಿ ದುಡಿಯೋಣ. ಬಸವನಗುಡಿ ಕ್ಷೇತ್ರದಲ್ಲಿ ಚುನಾವಣೆ ಪ್ರಾರಂಭವಾದಾಗ ಅಲ್ಲಿ ಸ್ವಿಮ್ಮಿಂಗ್ ಪೂಲ್ ಇನಾಗುರೇಟ್ ಮಾಡಬೇಕಿತ್ತು. ಆಗ ಎಲೆಕ್ಷನ್ ಸ್ಟಾರ್ಟ್ ಆಗಿತ್ತು, ನಾನೇ ಹೋಗಲಿಲ್ಲ. ಶ್ರೀ ಲಕ್ಷ್ಮಣರಾವ್‌ರವರು ಅಡ್ಮಿನಿಸ್ಟೇಟರ್ ಆಗಿದ್ದಾಗ ಅದಕ್ಕೆ ಸ್ಯಾಂಕ್ಷನ್ ಕೊಟ್ಟಿದ್ದರು. ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ಸ್ವಿಮ್ಮಿಂಗ್ ಪೂಲ್ ಇನಾಗುರೇಟ್ ಮಾಡುತ್ತಿದ್ದಾರೆ ಅಂತ ಕೆಲವರು ಹೇಳಿದರು. ಬೇಡ, ಚುನಾವಣೆ ಕಳೆದಮೇಲೆ ಇನಾಗುರೇಟ್ ಮಾಡೋಣ ಅಂತ ನಾನು ಹೇಳಿದೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.– ಸ್ವಿಮ್ಮಿಂಗ್ ಪೂಲನ್ನು ಜಾಗ್ರತೆ ಓಪನ್ ಮಾಡಿ.

ಶ್ರೀ **ಆರ್. ಗುಂಡೂರಾವ್**.– ಸ್ವಿಮ್ಮಿಂಗ್ ಪೂಲನ್ನು ನಾನು ಸ್ವಿಂ ಮಾಡಿ ಓಪನ್ ಮಾಡುತ್ತೇನೆ, ಇಲ್ಲದೇ ಹೋದರೆ ಇಷ್ಟುಹೊತ್ತಿಗೆ ಮಾಡಿಬಿಡುತ್ತಿದ್ದೆ. ಮುಖ್ಯಮಂತ್ರಿಗಳು ಸ್ವತಃ ಸ್ವಿಂ ಮಾಡುತ್ತಾರೆ ಅಂದರೆ ಬಹಳ ಜನ ಸೇರುತ್ತಾರೆ. 10ನೇ ತಾರೀಖು ಫಿಕ್ಸ್ ಮಾಡಿದ್ದಾರೆ ಎಂದು ಕಾಣುತ್ತದೆ. ಓಪನ್ ಮಾಡಿಬಿಡೋಣ.

ಶ್ರೀ **ಆರ್. ಗುಂಡೂರಾವ್** .– ಮಾನ್ಯ ತಿಮ್ಮೇಗೌಡರು ಇರುತ್ತಾರೆ. ಎಲ್ಲರೂ ಸೇರಿ ರಾಜ್ಯವನ್ನು ಚೆನ್ನಾಗಿ ಕಟ್ಟೋಣ,ಚೆನ್ನಾಗಿ ಬೆಳೆಸೋಣ. ಅಧಿಕಾರವನ್ನು ಉಳಿಸಿಕೊಳ್ಳಬೇಕು ಅಂದರೆ ಯಾರ ಕೈಲೂ ಸಾಧ್ಯವಿಲ್ಲ. 11 ವರ್ಷ ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರದಲ್ಲಿರಲಿಲ್ಲವೇ. 1977 ನಲ್ಲಿ ಒಂದು ಸೀಟೂ ಬರದೆ ಕಳಿಸಲಿಲ್ಲವೇ, 1978ರಲ್ಲಿ ದೇಶದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರಕ್ಕೆ ಬರಲಿಲ್ಲವೇ. 8 ವರ್ಷ ಚೀಫ್ ಮಿನಿಸ್ಟರ್ ಆಗಿ ಬೇಕಾದಷ್ಟು ಕೆಲಸ ಮಾಡಿದ್ದಾರೆ, ಹೆಲಿಕಾಪ್ಟರ್ ತಂದು ಎಲ್ಲಾ ಮಾಡಿದರು ಎಂದು ಜನ ಓಟು ಕೊಟ್ಟರೆ ? ಕೊಡಲಿಲ್ಲ. We are not the masters. Nothing is in our hands. We are only the actors as rightly said by Sri A.G. Kodgi. ಡೈರಕ್ಟರು, ಪ್ರೊಡ್ಯೂಸರ್ ಯಾವ ರೀತಿ ಆಟ ಆಡಬೇಕು ಏನೆಂದು ಹೇಳುತ್ತಾರೋ ಆ ರೀತಿ ನಾವು ಮಾಡಬೇಕು. ಸುಮ್ಮನೆ ಹೇಳುತ್ತೇನೆ ಅಂದರೆ ಯಾರು ಕೇಳುತ್ತಾರೆ, ಇದನ್ನು ಬಿಡೋಣ, ಇದೆಲ್ಲಾ ಇನ್ನು ಮೇಲೆ ಬೇಡ. ಅದರ ಬದಲು ಚೆನ್ನಾಗಿ ಕೆಲಸ ಮಾಡೋಣ, ನಿಮ್ಮ ಬುದ್ಧಿವಂತಿಕೆ ಇದರಲ್ಲಿ ಉಪಯೋಗಿಸಿಕೊಳ್ಳಿ. ವಿರೋಧ ಪಕ್ಷದವರು ಬುದ್ಧಿವಂತರು ಅಂದರೆ ಆಡಳಿತ ಪಕ್ಷದವರು ಬುದ್ಧಿವಂತರಲ್ಲ ಎಂದು ಅರ್ಥವೇ. ಇನ್ನು ಇರುವುದು ಕೇವಲ ಒಂದೂವರೆ ವರ್ಷ. ಒಂದೂವರೆ ವರ್ಷದಲ್ಲಿ ಚೆನ್ನಾಗಿ ಕೆಲಸ ಮಾಡೋಣ, ತಾವು ಸಹಕಾರ ಕೊಡಿ, ಸಲಹೆ ಕೊಡಿ, ನಾವು ಹೆಚ್ಚು, ನೀವು ಹೆಚ್ಚು ಇದೆಲ್ಲಾ ಇಲ್ಲ, ಹೆಚ್ಚು ಆದವರೆಲ್ಲಾ ಎಲ್ಲಿ ಹೋದರು. ಬ್ಯಾಕ್‌ವರ್ಡ್ ಫಾರ್‌ವರ್ಡ್

ಯಾವುದೂ ಇಲ್ಲ. ಕಾಂಗ್ರೆಸ್‌ನಲ್ಲಿ ಬ್ಯಾಕ್‌ವರ್ಡ್, ಫಾರ್‌ವರ್ಡ್ ಇದೆಯೇ? ಇಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಫಾರ್‌ವರ್ಡ್, ನಾವಲ್ಲ, ಎಂದಲ್ಲ. ಯಾರು ಬ್ಯಾಕ್‌ವರ್ಡ್, ಯಾರು ಫಾರ್‌ವರ್ಡ್. ಬ್ಯಾಕ್‌ವರ್ಡ್, ಫಾರ್‌ವರ್ಡ್ ಪೇಪರಿನಲ್ಲಿದೆ, ಮನೆಯಲ್ಲಿದೆ. ಸುಮ್ಮನೆ ಬ್ಯಾಕ್‌ವರ್ಡ್, ಫಾರ್‌ವರ್ಡ್ ಜಾತಿ ಬಂದು ಬಿಟ್ಟಿದೆ. ಯಾರು ಯಾವ ಜಾತಿ. ಪಾರ್ಟಿ ಕಟ್ಟುವಾಗ ಜಾತಿ ಇತ್ತೆ? ಯೂತ್ ಕಾಂಗ್ರೆಸ್ ಪಾರ್ಟಿ ಕಟ್ಟಿದಾಗ ಜಾತಿ ಇತ್ತೆ? ಅಧಿಕಾರಕ್ಕೆ ಬರಬೇಕಾದರೆ ಫಾರ್‌ವರ್ಡ್, ಬ್ಯಾಕ್‌ವರ್ಡ್, ಎಲ್ಲರೂ ಬ್ಯಾಕ್ ವರ್ಡ್, ಫಾರ್ ವರ್ಡ್. ಎರಡೇ ದೇಶದಲ್ಲಿ ಇರುವುದು, ಯಾವ ಜಾತಿಯಲ್ಲಿದ್ದರೂ ರೆಸ್ಪೆಕ್ಟ್ ಉಂಟು. ಸಮಾಜದಲ್ಲಿ ಬುದ್ಧಿವಂತರಿಗೆ ಅವರು ಯಾವ ಜಾತಿಯಲ್ಲಿದ್ದರೂ ರೆಸ್ಪೆಕ್ಟ್ ಇರುವುದಿಲ್ಲವೆ? ಅಧಿಕಾರಕ್ಕೋಸ್ಕರ ಬ್ಯಾಕ್‌ವರ್ಡ್, ಫಾರ್‌ವರ್ಡ್, ಒಕ್ಕಲಿಗ, ಲಿಂಗಾಯಿತ, ಬ್ರಾಹ್ಮಣ, ಬ್ಯಾಕ್ ವರ್ಡ್‌ನವರು ಲಕ್ಷಾಧಿಪತಿಗಳಾಗಿಲ್ಲವೆ. ದುಡ್ಡು, ಖಜಾನೆ ಎಲ್ಲಾ ಇದ್ದು ನಾವು ಹೇಳಿದ ಹಾಗೆ ಸರ್ಕಾರ ಕೇಳುತ್ತದೆ ಎಂದು ತಿಳಿದುಕೊಂಡಿದ್ದರು. ಅದು ಈಗ ಇಲ್ಲ. ಚೆನ್ನಾಗಿ ಕೆಲಸ ಮಾಡಿದರೆ, ಎಲ್ಲರೂ ಫಾರ್‌ವರ್ಡ್, ಎಲ್ಲರೂ ಬ್ಯಾಕ್‌ವರ್ಡ್. The man is judged for his merit, efficiency, performance and not on the basis of his caste. Intelligence has no caste. ಆದುದರಿಂದ ನಮ್ಮ ದಾರಿ ಏನಿದೆ, ಗುರಿ ಏನಿದೆ, ಮಾರ್ಗ ಯಾವ ರೀತಿ ಹೋಗುತ್ತಿದೆ. ಕೆಲಸ ಯಾವ ರೀತಿ ಮಾಡುತ್ತಿದ್ದಾರೆ. ಬ್ಯಾಕ್‌ವರ್ಡ್, ಎಸ್.ಸಿ. ಯಾರನ್ನೋ ಹಾಕಿಬಿಟ್ಟು, if he becomes more corrupt, can you say it is good?

ಶ್ರೀ ಎಸ್.ಆರ್. ಬೊಮ್ಮಾಯಿ.- ಕರಪ್ಷನ್‌ಗೆ ಜಾತಿ ಇಲ್ಲ.

Sri R. Gundu Rao - So, when there is no caste for the corruption, sometimes, there is no caste for efficiency and performance also.

ಶ್ರೀ ಜೆ. ಹೆಚ್. ಪಟೇಲ್.- ಕರಪ್ಷನ್‌ಗೆ ಜಾತಿ ಇಲ್ಲ ಎಂದು ನಮ್ಮ ಮಿತ್ರರು ಹೇಳಿದರು, ಇಲ್ಲ. ಆದರೆ ಕೆಲವರು ತಿಂದಿದ್ದು ಮುಖದ ಮೇಲೆ ಕಾಣುವ ಹಾಗೆ ಇರುತ್ತದೆ. ಕೆಲವರು ತಿಂದಿದ್ದು ಹೊಟ್ಟೆಗೆ ಹೋದದ್ದು ಗೊತ್ತಾಗದ ರೀತಿ ಇರುತ್ತದೆ. ಆದುದರಿಂದ ಯಾವ ಜಾತಿ ಇರಬಹುದು ಎಂದು ಕಾಣುತ್ತದೆ.

ಶ್ರೀ ಆರ್. ಗುಂಡೂರಾವ್.- We agree with you, ಅದು ಬುದ್ಧಿವಂತಿಕೆ ಜಾತಿ. ಅದರಲ್ಲಿ ಏನೂ ತಪ್ಪಿಲ್ಲ. ನಾವು ನಮ್ಮ ಗುರಿ ಏನು, ನಾವು ಎಲ್ಲಿ ಹೋಗಬೇಕು ಎನ್ನುವುದನ್ನು ನೋಡಬೇಕು, ದೇಶದಲ್ಲಿ ಹಿಂದುಳಿದ ವರ್ಗದವರಿದ್ದಾರೆ, ಎಸ್.ಸಿ. ಅವರಿದ್ದಾರೆ, ಬ್ಯಾಕ್‌ವರ್ಡ್ ಜನ ಇದ್ದಾರೆ, ಅವರಿಗೆ ಅನುಕೂಲ ಮಾಡಬೇಕು. ನಾವು ಜಾತಿಗಳನ್ನು ಇಟ್ಟುಕೊಂಡು ಅವರ ಮೇಲೆ ರಾಜಕೀಯ ಮಾಡುತ್ತೇವೆ ಅಂದರೆ ಆಗುವುದಿಲ್ಲ.

ಒಳ್ಳೆಯ ಕೆಲಸ ಮಾಡುವುದು ಮುಖ್ಯ, ಯಾವ ಜಾತಿ ಆದರೆ ಏನು, ಪಕ್ಕದ ಮನೆಯವರು ಯಾವ ಜಾತಿ ಎಂದು ಕೇಳುತ್ತೀರಾ. ಅದನ್ನೆಲ್ಲಾ ಇಲ್ಲಿ ಬಿಡೋಣ. ನಮ್ಮ ರಾಜ್ಯವನ್ನು ಚೆನ್ನಾಗಿ ಕಟ್ಟೋಣ, ನಮ್ಮ ರಾಜ್ಯಕ್ಕೆ ಅನುಕೂಲ ಮಾಡೋಣ. ನಮ್ಮ ರಾಜ್ಯದಲ್ಲಿ ನೈಸರ್ಗಿಕ ಸಂಪತ್ತು ಬೇಕಾದಷ್ಟು ಇದೆ. ಹಾರ್ಬರ್ ಆಗಬೇಕಾದ್ದಿದೆ. ಪ್ರಕೃತಿ ಅನುಕೂಲವಾಗಿದೆ. ಟೂರಿಸಂ ಡೆವಲಪ್‌ಮೆಂಟ್ ಆಗಬೇಕಾಗಿದೆ. Because of want of money and lack of unity, we could not progress much. ಇದೆಲ್ಲಾ ಆಗಬೇಕಾದರೆ ನಾವು ಪಾರ್ಟಿಯೊಳಗಾಗಲಿ ಎಲ್ಲೇ ಆಗಲಿ ಒಗ್ಗಟ್ಟಾಗಿ ಕೆಲಸ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ನಾವು ಕೆಲಸ ಮಾಡುವುದು ಯಾವಾಗ. ನಾಳೆ ಅಜಿಟೇಷನ್ ಮಾಡುತ್ತೇವೆ ಅಂದರೆ, ನೀವೇ ಪ್ರಯತ್ನಮಾಡಿದಿರಿ ಅಂದರೆ, ನಾವು ಅದನ್ನು ಹತ್ತಿಕ್ಕಲಿಕ್ಕೆ, ನಿಲ್ಲಿಸಬೇಕು ಎಂದು ಪ್ರಯತ್ನ ಮಾಡಿದರೆ, ಸತ್ಯಾಗ್ರಹ ಮಾಡಬೇಕು ಎಂದು ದಿನಾ ಮಾಡುತ್ತಾ ಹೋದರೆ ಪ್ರೋಗ್ರೆಸ್ ತರುವುದು ಯಾವಾಗ? ಅಧಿಕಾರಿಗಳು ಕೆಲಸ ಮಾಡಲಿಲ್ಲ ಅಂದರೆ, ಹೇಗೆ ಮಾಡುತ್ತಾರೆ? Where is the time for Ministers and MLAs just to think, go to the districts and study? Everyday there is an agitation. Let us fight out this. ಆ ಮೇಲೆ ಇಷ್ಟನ್ನು ಹೇಳಿ, ಚೆನ್ನಾಗಿ ಕೆಲಸ ಮಾಡೋಣ. ಈ ಡಿಮ್ಯಾಂಡ್‌ಗಳಲ್ಲಿ ಇಷ್ಟು ಮಾಡುವುದಕ್ಕಾಗುವುದಿಲ್ಲ, ಇಷ್ಟು ಮಾಡುವುದಕ್ಕಾಗುತ್ತದೆ ಎಂದು ನಾವು ಧೈರ್ಯವಾಗಿ ಹೇಳುತ್ತಿದ್ದೇವೆ.

ಆದುದರಿಂದ ಇವತ್ತು ಯಾವುದಕ್ಕೆ ಪ್ರಿಯಾರಿಟಿ ಕೊಟ್ಟು ಕೆಲಸವನ್ನು ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ತೆಗೆದುಕೊಳ್ಳೋಣ. ಕೆಲವು ಸಮಯದಲ್ಲಿ ಏನಾಗುತ್ತದೆ ಎಂದರೆ ಇವತ್ತು ಇದ್ದಂಥ ಪಾಲಿಟಿಕ್ಸ್ ನಾಳೆ ಇಲ್ಲದೇ ಇರುವುದರಿಂದ ಇವತ್ತು ಇರತಕ್ಕಂಥ ರಾಷ್ಟ್ರದ ಮತ್ತು ರಾಜ್ಯದ ಸಂಬಂಧ ನಾಳೆ ಇಲ್ಲದೇ ಇರಬಹುದು, ನಾಳೆ ಯಾವ ರೀತಿಯ ಬದಲಾವಣೆಯಾಗುತ್ತದೆಯೋ ಹೇಳುವುದಕ್ಕೆ ಬರುವುದಿಲ್ಲ.

No one should think that he is a 'Brahma' even for a moment. People who are in power should not think even for a moment that they are in power. They should think that they are out of power. To preserve the chair only, we do injustice. We should not do it. ಆ ಮೇಲೆ ಅಧ್ಯಕ್ಷರೇ, ಬೇಕಾದಷ್ಟು ವಿಷಯಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ಇವತ್ತು ವೈಟ್ ಪೇಪರ್ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ ಆದರೆ ನಾವು ಈಗಾಗಲೇ ಸಾಕಷ್ಟು ಕನ್‌ಸೇಷನನ್ನು ಕೊಟ್ಟಿದ್ದೇವೆ. ಆ ದೃಷ್ಟಿಯಿಂದ ಇನ್ನು ಹೆಚ್ಚಿಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆ ಮೇಲೆ ಕಾವೇರಿ ನದಿ ನೀರಿನ ಹಂಚಿಕೆಯ ಬಗ್ಗೆ ಸೆಂಟರ್‌ನಲ್ಲಿಯೂ ಕೂಡ ಫೈಟ್ ಮಾಡುತ್ತಿದ್ದೇವೆ. ಅದಕ್ಕೆ ತಮ್ಮೆಲ್ಲರ ಸಲಹೆಯನ್ನೂ ಕೂಡ ತೆಗೆದುಕೊಂಡು ಮಾಡುತ್ತಿದ್ದೇವೆ. ಇವತ್ತು ನಮ್ಮ ರಾಜ್ಯದಲ್ಲಿ ಇದರಿಂದ

ಏನು ನೀರಿನ ಕೊರತೆಯನ್ನು ಅನುಭವಿಸುತ್ತಿದ್ದೇವೆ ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಥರ್ಮಲ್ ಹೈಡ್ರೋ ಪ್ರಾಜೆಕ್ಟ್‌ನ್ನು ಮಾಡಲು ಕೋಲ್ ಸಪ್ಲೈನ ಅಭಾವವಿರುವುದರಿಂದ ಹೇಗೆ ಮಾಡಬೇಕು ಎನ್ನುವ ಬಗ್ಗೆ ತಜ್ಞರು, ಯೋಚನೆ ಮಾಡುತ್ತಿದ್ದಾರೆ. ಮತ್ತೆ ಬೇಡ್ತಿ ಮತ್ತು ಅಘನಾಶಿನಿ ಇದನ್ನೆಲ್ಲಾ ನಾವು ಮಾಡದೇ ಹೋದರೆ ಮುಂದೆ 2 ಸಾವಿರದ ಹೊತ್ತಿಗೆ ಎಷ್ಟು ತೊಂದರೆಯಾಗುತ್ತದೆ ಎನ್ನುವ ಬಗ್ಗೆ ಶ್ರೀ ಕೆ.ಎಚ್. ಶ್ರೀನಿವಾಸ್‌ರವರಿಗೆ ಗೊತ್ತಿದೆ, ಅವರು ಸಹ ಮಂತ್ರಿಯಾಗಿದ್ದರು ಇದರ ಬಗ್ಗೆ ಬಹಳ ಸ್ಟಡಿ ಮಾಡಿದ್ದಾರೆ. ಬಹಳ ಅಧ್ಯಯನ ಕೂಡ ಮಾಡಿದ್ದರು, ಇನ್ನು ಸ್ಟೀಲ್ ಪ್ಲಾಂಟ್ ಬಗ್ಗೆ ನಾವು ಕೇಂದ್ರದವರು 30 ಕೋಟಿ ಕೊಡುತ್ತೇವೆಂದು ಹೇಳಿದ್ದಕ್ಕೆ ಅಭಿನಂದನೆಯ ನಿರ್ಣಯವನ್ನು ಮಂಡಿಸಿ ಕಳುಹಿಸಿದ್ದೆವು. ಕೇಂದ್ರದ ಫಿನಾನ್ಸ್ ಮಿನಿಸ್ಟರ್‌ರವರು ಯಾವುದೋ ಟೆಕ್ನಿಕಲ್ ಕಾರಣಕ್ಕೋಸ್ಕರ, ಅದನ್ನು ಪಾರ್ಲಿಮೆಂಟಿನಲ್ಲಿ ಮಂಡನೆ ಮಾಡುವುದಕ್ಕಿಂತ ಮುಂಚಿತವಾಗಿ ಸ್ಟೇಟ್‌ಮೆಂಟ್ ಮಾಡಿದ್ದರು, ಅದರಿಂದ ಅವರು ಕೊಟ್ಟಂಥ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳಬೇಕಾಗಿ ಬಂದಿತ್ತಂತೆ.

ಶ್ರೀ ಜೆ.ಎಚ್. ಪಟೇಲ್.– ಮೊದಲು ತಾವು ಇಲ್ಲಿಗೆ ಅಧಿಕಾರಕ್ಕೆ ಬಂದ ತಕ್ಷಣವೇ ಹೇಳಿದಿರಿ, ಮತ್ತು ನಾವು ಸಹ ಈ ಸದನದಲ್ಲಿ ಸರ್ವಾನುಮತದಿಂದ ಒಂದು ನಿರ್ಣಯವನ್ನು ಮಾಡಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇದರಲ್ಲಿ ಯಾವ ತಾಂತ್ರಿಕ ಅಡಚಣೆಯೂ ಇಲ್ಲ, ಮೆಕ್ಕಾನ್ ರವರು ಸಹ ಇದರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಂಥಾದ್ದರಲ್ಲಿ ಕೇಂದ್ರ ಸರ್ಕಾರದವರು ಇಲ್ಲಿಗಿಂತ ಮಂಗಳೂರಿಗೆ ಕೊಡುವುದು ಉತ್ತಮ ಹಾಗೆಂದು ಹೇಳುತ್ತಾ, ಕೊನೆಗೆ ಈ ವಿಜಯನಗರ ಸ್ಟೀಲ್ ಪ್ಲಾಂಟ್ ಯೋಜನೆಯೇ ನಮ್ಮ ರಾಜ್ಯದಿಂದ ಕೈ ಬಿಟ್ಟು ಹೋಗದ ಹಾಗೆ ನೋಡಿಕೊಳ್ಳಿ. ಇವತ್ತು ವಿಜಯನಗರಕ್ಕೆ ಪರ್ಮಿಷನ್ ಕೊಡದೇ ಮಂಗಳೂರಿಗೆ ಕೊಡುವುದಾದರೆ ಸಂತೋಷದಿಂದ ಸ್ವಾಗತಿಸೋಣ. ಇಲ್ಲ ವಿಜಯನಗರಕ್ಕೇ ಬೇಕು ಎನ್ನುವ ಬಗ್ಗೆ ಹಠ ಮಾಡುವುದು ಬೇಡ, ಇದರ ಬಗ್ಗೆ ಎಲ್ಲರೂ ಒಮ್ಮತದಿಂದ ಹೋರಾಟ ಮಾಡೋಣ.

ಶ್ರೀ ಆರ್. ಗುಂಡೂರಾವ್.– ವಿಜಯನಗರಕ್ಕೇ ಸ್ಟೀಲ್ ಪ್ಲಾಂಟನ್ನು ಕೊಡುವ ಬಗ್ಗೆ ಒಪ್ಪಿಕೊಂಡಿದ್ದಾರೆ. ಆದರೆ ಇದನ್ನು ಪಾರ್ಲಿಮೆಂಟಿನಲ್ಲಿ ಮಂಡಿಸದೇ ಹೊರಗಡೆ ಆಶ್ವಾಸನೆ ಕೊಡಬಾರದಾಗಿತ್ತು. ಆ ರೀತಿಯ ಒಂದು ಟೆಕ್ನಿಕಲ್ ಪ್ರಾಬ್ಲಂ ಬಂದುದರಿಂದ ಅವರು ಅದನ್ನು ವಾಪಸ್ಸು ತೆಗೆದುಕೊಂಡಿದ್ದಾರಂತೆ, ಅದನ್ನು ಸರಿಪಡಿಸಿ ಅದಕ್ಕೆ ಹಣ ಕೊಡುವುದಾಗಿ ತಿಳಿಸಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.– ವಿಜಯನಗರದಿಂದ ಮಂಗಳೂರಿಗೆ ವರ್ಗಾಯಿಸುವುದು ಸರಿಯಲ್ಲವೆಂದು ನಾವು ಈಗಲೇ ಹೇಳಿ ಬಿಡಬೇಕಾಗುತ್ತದೆ. ಆದುದರಿಂದ ನಮ್ಮ ಕರ್ನಾಟಕ ಸರ್ಕಾರದವರು ಇದರ ಬಗ್ಗೆ ಸಾಕಷ್ಟು, ಅಧ್ಯಯನ ಮಾಡಿ

ಕೇಂದ್ರ ಸರ್ಕಾರದವರ ಮೇಲೆ ಒತ್ತಡ ತಂದು ಅದು ಅಲ್ಲಿಯೇ ಆಗುವ ಹಾಗೆ ನೋಡಿಕೊಳ್ಳಬೇಕು. ಏತಕ್ಕೆಂದರೆ ನಮ್ಮ ನಮ್ಮಲ್ಲಿ ಜಗಳ ಬೇಡ. ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಎಲ್ಲರೂ ಒಂದಾಗಿ ಹೋರಾಟ ಮಾಡೋಣ, ಅದಕ್ಕೆ ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಹೀಗಿರುವಾಗ ನೀವು ಕೇಂದ್ರ ಸರ್ಕಾರದ ಮೇಲೆ ನಿಮ್ಮ ಪ್ರಭಾವವನ್ನು ಸೇರಿ ನಮ್ಮ ಕರ್ನಾಟಕ ರಾಜ್ಯದ ಅಭಿವೃದ್ಧಿಗಾಗಿ ಹೆಚ್ಚಿನ ಹಣವನ್ನು ತರುವಲ್ಲಿ ನಿಮಗೆ ಸಂಪೂರ್ಣರಾಗಿ ಬೆಂಬಲವನ್ನು ಕೊಡುತ್ತೇವೆ.

ಶ್ರೀ **ಆರ್. ಗುಂಡೂರಾವ್**.- ನಿಜ, ಒಪ್ಪುತ್ತೇನೆ. ಹಾಗೇನೂ ಭಿನ್ನಾಭಿಪ್ರಾಯ ನಮ್ಮಲ್ಲಿ ಇಲ್ಲ. Let us be united and let us go and press the Centre for Steel Plant, Karwar Harbour etc.

ಶ್ರೀ **ಹೆಚ್. ಗಂಗಾಧರನ್**.- ನಾನು ಒಂದು ಒಳ್ಳೆಯ ಸಂಪ್ರದಾಯದ ಬಗ್ಗೆ ಹೇಳಬಯಸುತ್ತೇನೆ. 7ನೇ ಅಕ್ಟೋಬರ್ 1981ಕ್ಕೆ ಶಾಸನ ಸಭೆಗೆ 100 ವರ್ಷ ತುಂಬುತ್ತದೆ. ಆಗ ಸೆಂಟಿನರಿ ಈಯರ್ ಎಂದು ಮಾಡಿ ಎಲ್ಲ ಶಾಸಕರೂ ಒಂದಾಗಿ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಏನು ಹೇಳಿದ್ದೀರಿ ಅದಕ್ಕಾಗಿ ಎಲ್ಲರೂ ಪರಿಶ್ರಮ ಪಡುವ ಒಂದು ಹೊಸ ಸಂಪ್ರದಾಯವನ್ನು ಹಾಕುವುದು ಮತ್ತು ನಮ್ಮಲ್ಲಿ ಏನು ಪ್ರಾಜೆಕ್ಟುಗಳು ಇವೆ ಅವುಗಳನ್ನು ಆದಷ್ಟು ಜಾಗ್ರತೆ ಪೂರ್ಣಗೊಳಿಸುವ ಸಲುವಾಗಿ ಹೋರಾಡುವುದಕ್ಕೆ ಮುಂದಾಗಿ ಕೇಂದ್ರದೊಡನೆ ಸಮಗ್ರವಾಗಿ ಸಮಾಲೋಚನೆ ನಡೆಸಿ ಅವುಗಳನ್ನು ಕಾರ್ಯಗತಗೊಳಿಸುವುದು.- ಈ ಎಲ್ಲ ವ್ಯಾಪಕ ಯೋಜನೆಗಳ ಸಲುವಾಗಿ ಒಂದು ವರ್ಷ ಕಾಲ ಸೆಂಟಿನರಿ ಈಯರ್ ಎಂದು ಆಚರಿಸುವ ಬಗ್ಗೆ ಒಂದು ಆದೇಶವನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ **ಆರ್. ಗುಂಡೂರಾವ್**.- ಅದು ಬಹಳ ಒಳ್ಳೆಯ ಸಲಹೆ, ನನಗೆ ಅದು ಗೊತ್ತಿರಲಿಲ್ಲ. ಈ ವರ್ಷ ಕನ್ನಡ ಸಮ್ಮೇಳನ ಮಾಡಬೇಕೆಂದು ಮಾಡಿದ್ದೇವೆ, ಅದೇ ರೀತಿ ಇದನ್ನು ಮಾಡೋಣ, ಇವತ್ತಿನ ದಿವಸ ನಾವು ವಸತಿ ಯೋಜನೆಗೆ ಸಾಕಷ್ಟು ಹಣ ದೊರೆಯಬೇಕೆಂದು ಪ್ರಯತ್ನಿಸುತ್ತಿದ್ದೇವೆ. ಅದಕ್ಕೆ ಕೇಂದ್ರದವರು ಸಹ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಇನ್ನು ಹುಬ್ಬಳ್ಳಿ, ಬೆಳಗಾಂ ಹಾಗೂ ಮೈಸೂರಿನಲ್ಲಿ ಏರ್‌ಪೋರ್ಟ್ ಮಾಡಬೇಕೆಂದು ಕೇಳುತ್ತಿದ್ದಾರೆ. ಮತ್ತು ಸಾಕಷ್ಟು ಬೇಡಿಕೆಗಳನ್ನು ಇಡುತ್ತಿದ್ದಾರೆ. ಅದರ ಬಗ್ಗೆ ಸಹ ಗಮನ ಕೊಡಬೇಕಾಗಿದೆ. ರಾಜ್ಯದಲ್ಲಿ ಜನರು ತಿಳುವಳಿಕೆಯಿಂದ ಹೋಗುವುದಕ್ಕೆ ಅವಕಾಶ ಕಲ್ಪಿಸದೆ ಇದ್ದರೆ ಸತ್ಯಾಗ್ರಹ ಮುಂತಾದವು ನಡೆಯುತ್ತವೆ, ಆಮೇಲೆ ಗೋಲೀಬಾರ್ ಮುಂತಾದವು ನಡೆಯುತ್ತವೆ. ಹೀಗೆ ನಡೆಯುತ್ತಾ ಹೋಗಿ ಕೊನೆಗೆ ಚುನಾವಣೆ ಬರುತ್ತದೆ.

# ಕಳ್ಳಭಟ್ಟಿ ದುರಂತದ ಕುರಿತು ನಡೆದ ಚರ್ಚೆಗೆ ಮುಖ್ಯಮಂತ್ರಿಗಳಾಗಿ ನೀಡಿದ ಉತ್ತರ

1981ರಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕಳ್ಳಭಟ್ಟಿ ಸಾರಾಯಿ ಕುಡಿದು 200ಕ್ಕೂ ಅಧಿಕ ಮಂದಿ ಕೊನೆಯುಸಿರೆಳೆದರು. ಈ ದುರಂತದ ಬಗ್ಗೆ ಶಾಸನಸಭೆಯಲ್ಲಿ ಚರ್ಚೆಯಾದಾಗ ಬಹುತೇಕ ಪ್ರತಿಪಕ್ಷ ಸದಸ್ಯರುಗಳು ಅಮಾನತ್ತಿನಲ್ಲಿದ್ದರು. ಪ್ರಮುಖ ವಿರೋಧಿ ನಾಯಕರುಗಳ ಅನುಪಸ್ಥಿತಿಯಲ್ಲೇ ಮುಖ್ಯಮಂತ್ರಿ ಗುಂಡೂರಾವ್ ಸಾರಾಯಿ ದುರಂತ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ತಿಳಿಸಿದರಲ್ಲದೆ; ಸಮಸ್ಯೆಯ ಬೇರುಬೇರು ವಿಶ್ಲೇಷಿಸಿದರು.

ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಬಹಳ ಉತ್ತಮವಾದಂಥ ಸಲಹೆಗಳಿಂದ ಕೂಡಿದಂಥ ಚರ್ಚೆ ಈ ದಿನ ಆಗಿದೆ. ಬೆಂಗಳೂರು ನಗರದಲ್ಲಿ ಮತ್ತು ಮೈಸೂರು ನಗರದಲ್ಲಿ ನಡೆದಂಥ ಸಾರಾಯಿ ದುರಂತದ ಬಗ್ಗೆ ನಮ್ಮ ಸನ್ಮಾನ್ಯ ಸದಸ್ಯರೆಲ್ಲಾ ಇಲ್ಲಿ ಭಾಗವಹಿಸಿದ್ದಾರೆ. ಮಾತನಾಡುವಂಥ ಸಂದರ್ಭದಲ್ಲಿ ಇದು ದುಃಖಕರವಾದಂಥಾದ್ದು ಎಂದು ಹೇಳಿದ್ದಾರೆ. ಇದನ್ನು ಯಾರೂ ಒಳ್ಳೆಯ ಘಟನೆ ಎಂದು ಹೇಳುವುದಿಲ್ಲ ಅಥವಾ ಘಟನೆ ಆಗಬೇಕು ಎಂದು ಯಾರೂ ಇಷ್ಟಾನೂ ಪಟ್ಟಿರುವುದಿಲ್ಲ. ಘಟನೆ ನಡೆದಿದೆ, ಇದು ಯಾತಕ್ಕೋಸ್ಕರ ನಡೆದಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕು. ಈ ಘಟನೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಸರ್ಕಾರ ಮಾರುವಂಥ ಸಾರಾಯಿಯಾಗಲಿ ಅಥವಾ ಸೇಂದಿಯಾಗಲಿ ಇದರ ಕ್ರಯ ಜಾಸ್ತಿ ಇರುವುದರಿಂದ ಈ ಬಡ ಜನತೆ ಈ ರೀತಿ ಕಳ್ಳಭಟ್ಟಿ ಕುಡಿಯುತ್ತಾರೆ, ಅದನ್ನು ನಿಲ್ಲಿಸಬೇಕು ಎಂದು ಹೇಳುತ್ತಾರೆ. ಹಾಗಾದರೆ ಈ ಕಳ್ಳಭಟ್ಟಿ ವ್ಯವಹಾರವನ್ನು ಹೇಗೆ ನಿಲ್ಲಿಸುವುದು? ನಾವು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕಾನೂನಿಗೆ ಒಳಪಟ್ಟು ಸರ್ಕಾರ ಕೆಲಸ ಮಾಡಬೇಕಾಗಿದೆ. ಪ್ರೊಹಿಬಿಷನ್ ತಂದರೆ ಈ ಕಳ್ಳಭಟ್ಟಿ ನಿಲ್ಲುತ್ತದೋ ಎಂದು ಹಿಂದೆ ಚರ್ಚೆಯಾಗಿದೆ. ಆದರೆ ಪಾನ ನಿರೋಧವನ್ನು ಜಾರಿಗೆ ತರುವುದರಿಂದ ಕಳ್ಳಭಟ್ಟಿ ಒಂದಕ್ಕೆ ನೂರು ಪಾಲು ಜಾಸ್ತಿಯಾಗಿ ಅನೇಕ ರಾಜ್ಯಗಳಲ್ಲಿ ನಮ್ಮ ರಾಜ್ಯವೂ ಮೊದಲ್ಗೊಂಡು ಇಂತಹ ಕಳ್ಳಭಟ್ಟಿ ಕುಡಿದು ಸಾವಿಗೆ ಈಡಾಗಿದ್ದಾರೆ; ಶಕ್ತಿಯನ್ನು ಕಳೆದುಕೊಂಡಿದ್ದಾರೆ, ಕಣ್ಣನ್ನು ಕಳೆದುಕೊಂಡಿದ್ದಾರೆ. ಇದನ್ನೆಲ್ಲಾ ನಾವು ಕೇಳಿ ತಿಳಿದಿದ್ದೇವೆ, ನೋಡಿದ್ದೇವೆ. ಆದುದರಿಂದ ಪಾನ ನಿರೋಧವನ್ನು ಜಾರಿಗೆ ತರುವುದರಿಂದ ಇದು ನಿಲ್ಲುವುದಿಲ್ಲ ಎಂದು ಎಲ್ಲರೂ ಸಾಕಷ್ಟು ಒಪ್ಪಿದ್ದಾರೆ. ನಮ್ಮ ದೇಶದ ಆಡಳಿತವನ್ನು ವಹಿಸಿಕೊಂಡ ಮೇಲೆ ಪೂರ್ಣವಾಗಿ ಪಾನ ನಿರೋಧವನ್ನು ತರಲಿಕ್ಕೆ ಸಾಧ್ಯವಾಗದೇ ಹೋದರೆ, ಕುಡಿಯುವ ಚಟವನ್ನು, ಕುಡಿಯುವಂಥ ಅಭ್ಯಾಸವನ್ನು ತಪ್ಪಿಸಲಿಕ್ಕೆ ಇನ್ನು ಯಾವ ತರಹ ಕ್ರಮ ಕೈಗೊಳ್ಳಬೇಕು ಎಂದು ಬೇಕಾದಷ್ಟು ಚರ್ಚೆಗಳಾಗಿದೆ. ಕುಡಿಯುವಂಥ ಪದಾರ್ಥಗಳ ಬೆಲೆಯನ್ನು ಅಂದರೆ ಸಾರಾಯಿ ಕ್ರಯವನ್ನು ಜಾಸ್ತಿ ಮಾಡಿದರೆ, ಸೇಂದಿ ಕ್ರಯವನ್ನು ಜಾಸ್ತಿ

ಮಾಡಿದರೆ ಬಡವರು ಕುಡಿಯುವುದನ್ನು ಬಿಡುತ್ತಾರೆ, ಆದುದರಿಂದ ಇವುಗಳ ಬೆಲೆಯನ್ನು ಸ್ವಲ್ಪ ಜಾಸ್ತಿ ಮಾಡಬೇಕು ಎನ್ನುವುದರ ಬಗ್ಗೆಯೂ ಕೂಡ ಸಾಕಷ್ಟು ಚರ್ಚೆಗಳಾಗಿದೆ. ಆ ಮೇಲೆ ಬಡವರು ಇರತಕ್ಕಂಥ ಜಾಗದಲ್ಲಿ ಸಾರಾಯಿ, ಸೇಂದಿ ಅಂಗಡಿಗಳನ್ನು ಇಟ್ಟರೆ ಜಾಸ್ತಿ ಕುಡಿಯುತ್ತಾರೆ, ಅದನ್ನು ಬಹಳ ದೂರ ಇಟ್ಟರೆ ಕುಡಿಯುವುದಿಲ್ಲ ಅಥವಾ ಕಡಿಮೆ ಮಾಡುತ್ತಾರೆ, ಆದುದರಿಂದ ಬಡ ಜನತೆ ಇರುವ ಜಾಗದಲ್ಲಿ ಅಂಗಡಿಗಳನ್ನು ಇಡಬಾರದು ಎಂದು ಚರ್ಚೆಯಾಗಿದೆ.

ಇಷ್ಟೆಲ್ಲಾ ಆದರೂ ಕುಡಿಯುವವರ ಸಂಖ್ಯೆ ಕಡಿಮೆ ಆಗಿದೆಯೋ? ಕಡಿಮೆ ಆಗಿಲ್ಲ, ಜಾಸ್ತಿಯಾಗುತ್ತಾ ಇದೆ. ಇದನ್ನು ಹೇಗೆ ನಿಲ್ಲಿಸುವುದು? ಪೋಲೀಸ್ ಸಿಬ್ಬಂದಿ ಇದೆ, ಅಬ್ಕಾರಿ ಸಿಬ್ಬಂದಿ ಇದೆ. ನಮ್ಮ ದೇಶದಲ್ಲಿ ಇರುವಂಥ ಜನಸಂಖ್ಯೆಗೆ ನಮ್ಮ ದೇಶದಲ್ಲಿ ಇವತ್ತು ಇದು ವ್ಯಾಪಕವಾಗಿ ಹರಡಿಕೊಂಡಿರುವಂಥಾದ್ದನ್ನು ಕೇವಲ ಸರ್ಕಾರ ಒಂದರಿಂದಲೇ ಇದನ್ನು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆಯೇ ಎಂದು ತಾತ್ವಿಕವಾಗಿ ನಾವು ವಿಚಾರ ಮಾಡಬೇಕಾಗಿದೆ. ನಾವೂ ಹೇಳಬಹುದು. ಪೋಲೀಸ್ ಇಲಾಖೆಯವರು ಅಥವಾ ಅಬ್ಕಾರಿ ಇಲಾಖೆಯವರು ಏನೂ ಕೆಲಸ ಮಾಡಿಲ್ಲ, ಶಾಮೀಲಾಗಿದ್ದಾರೆ ಎಂದು ಜನರಲ್ ರಿಮಾರ್ಕ್ಸ್ ಸಾಮಾನ್ಯವಾಗಿ ಮಾಡಿದರೆ ಅದರಿಂದ ಕಾರ್ಯಸಾಧನೆಯಾಗುವುದಿಲ್ಲ, ಅದರ ಬದಲು ನಮ್ಮ ಕಾನೂನಿನ ಮಿತಿ ಏನಿದೆ, ಇವತ್ತು ರಾಜ್ಯಾಂಗದಲ್ಲಿ, ಸಂವಿಧಾನದಲ್ಲಿ ನಮಗೆಷ್ಟು ಅವಕಾಶವಿದೆ ಎಂದು ನೋಡಬೇಕಾಗಿದೆ. ಒಂದು ಕಡೆ ಎಕ್ಸೈಜ್ ಇಲಾಖೆಯವರು, ಪೋಲೀಸ್ ಇಲಾಖೆಯವರು ಹೋಗಿ ಮಾನವೀಯತೆಯನ್ನು ಇಟ್ಟುಕೊಂಡು ಹೋಗಿ ನೋಡುತ್ತಾರೆ ಅಂದರೆ ಯಾರನ್ನೂ ಹಿಡಿಯಲಿಕ್ಕೆ ಯಾವ ಸರ್ಕಾರದ ಕೈಯಲ್ಲೂ ಸಾಧ್ಯತೆಯಿಲ್ಲ. ಬಹುಶಃ ದೇವರೇ ಬಂದರೆ ನಿಲ್ಲಿಸುತ್ತಾನೆ ಎಂದು ಹೇಳುವುದಕ್ಕೆ ಸಾಧ್ಯತೆಯಿಲ್ಲ. ಇನ್ನು ಮಾನವೀಯತೆಯನ್ನು ಬಿಟ್ಟು ಅವರು ಹಿಡಿಯಬೇಕು ಅಂದರೆ ಪ್ರಜಾಪ್ರಭುತ್ವದಲ್ಲಿ ಅದಕ್ಕೆ ಅವಕಾಶವಿಲ್ಲ. ಪ್ರಜಾಪ್ರಭುತ್ವದ ಪ್ರಕಾರ ಪೋಲೀಸ್ ಇಲಾಖೆಯವರಿಗೂ, ಎಕ್ಸೈಜ್ ಇಲಾಖೆಯವರಿಗೂ ಹಿಡಿಯುವುದಕ್ಕೆ ಅಧಿಕಾರವಿಲ್ಲ. ಏನಪ್ಪ ಸಾರಾಯಿ ಕಾಯಿಸುತ್ತಾ ಇದ್ದೀಯ, ಕಾಯಿಸುವುದು ತಪ್ಪು, ನಿನ್ನ ಮೇಲೆ ಕಾನೂನು ಪ್ರಕಾರ ಕೇಸ್ ಮಾಡಬೇಕು ಗೌರವವಾಗಿ ಬಾ ಎಂದು ಪೋಲೀಸರು ಕೇಳಿದರೆ, ಹಿಂದೇನೇ ಕರಿಕೋಟು ಹಾಕಿಕೊಂಡು ಲಾಯರ್ ಇರುತ್ತಾನೆ. ಯಾವ ಕಾನೂನು ಪ್ರಕಾರ ಅರೆಸ್ಟ್ ಮಾಡುತ್ತೀರಿ, ಯಾವ ಇದರ ಪ್ರಕಾರ ಮಾಡಿದ್ದೀರಾ, 12 ಗಂಟೆ ಇಟ್ಟುಕೊಳ್ಳುವುದಕ್ಕೆ ನಿಮಗೇನು ಅಧಿಕಾರವಿದೆ ಎಂದು ಹೇಳಿ ಜಾಮೀನಿನ ಮೇಲೆ ಬಿಡಿ ಎಂದು ಹೇಳುತ್ತಾನೆ. ಸಾವಿರಾರು ಕೇಸುಗಳನ್ನು ಕೋರ್ಟಿನಲ್ಲಿ ಹಾಕಿದ್ದೇವೆ. ಒಂದು ಕೇಸಿನಲ್ಲೂ ಸಹ ಸಾಕ್ಷಿ ಹೇಳುವುದಕ್ಕೆ ಸಮಾಜ ಬರುವುದಿಲ್ಲ. ಬಂದು ಸಾಕ್ಷಿ ಹೇಳುವುದಕ್ಕೆ ಯಾರೂ ತಯಾರಾಗಿಲ್ಲ. ಅದಕ್ಕಿಂತ ಹೆಚ್ಚಾಗಿ, ಯಾರು ಈಸಿಕೊಂಡು ಕುಡಿದಿದ್ದಾರೆ, ಕುಡಿದವರನ್ನು ಎಲ್ಲಿಂದ ಕುಡಿದೆ ಅಂದರೆ, ಇಂಥಾ ಕಡೆ ಕುಡಿದಿದ್ದೇನೆ ಎಂದು ಹೇಳುವುದಕ್ಕೆ ತಯಾರಿಲ್ಲ. ಅದರಿಂದ ಯಾರಿಗೆ ಪನಿಷ್‌ಮೆಂಟ್ ಕೊಡುತ್ತೀರಿ. ಚೀಫ್ ಮಿನಿಸ್ಟರ್ ಪನಿಷ್‌ಮೆಂಟ್

ಕೊಡುವುದಕ್ಕೆ ಆಗುವುದಿಲ್ಲ, ಶಾಸನಸಭೆ ಪನಿಷ್‌ಮೆಂಟ್ ಕೊಡುವುದಕ್ಕೆ ಆಗುವುದಿಲ್ಲ, ಪನಿಷ್‌ಮೆಂಟ್ ಕೊಡಬೇಕಾಗಿರುವುದು ಕೋರ್ಟ್. ಕೋರ್ಟಿನಲ್ಲಿ ತೆಗೆದುಕೊಂಡು ಹೋದ ತಕ್ಷಣ, ಕಾನೂನು ಇರುತ್ತದೆ, ಲಾಯರುಗಳನ್ನು ಇಟ್ಟುಕೊಳ್ಳುತ್ತಾರೆ ಬಿಡುಗಡೆಯಾಗಿ ಬರುತ್ತಾರೆ.,ಬಂದು ಪುನಃ ಶುರು ಮಾಡುತ್ತಾರೆ. ಇದನ್ನು ನಿಲ್ಲಿಸಬೇಕಾಗಿರುವುದು ಸರ್ಕಾರ ಎಂದು ಹೇಳುತ್ತಾರೆ. ಮೊನ್ನೆ ಮೂರೇ ಮೂರು ತಿಂಗಳಲ್ಲಿ ಸುಮಾರು 2.5 ಲಕ್ಷ ಲೀಟರುಗಳನ್ನು ಹಿಡಿದು ತೆಗೆದುಕೊಂಡು ಹೋಗಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ, ವಿಧಾನ ಸೌಧದ ಮುಂದೆ, ಕಬ್ಬನ್ ಪಾರ್ಕ್‌ನಲ್ಲಿ ಅಥವಾ ಮಹಾತ್ಮಾಗಾಂಧಿ ರೋಡಿನಲ್ಲಿ ನಿಲ್ಲಿಸಿ ಗುಂಡು ಹೊಡೆಯುವುದಕ್ಕೆ ಅಧಿಕಾರ ಯಾವ ಸರ್ಕಾರಕ್ಕೂ ಇಲ್ಲ, ಯಾವ ಶಾಸನ ಸಭೆಗೂ ಇಲ್ಲ.

ಆದುದರಿಂದ, ಇದನ್ನು ಯಾವ ರೀತಿ ನಿಲ್ಲಿಸಬೇಕು? ಇವರನ್ನು ಹಿಡಿದುಕೊಂಡು ಹೋದ ತಕ್ಷಣ ನ್ಯಾಯಾಲಯದವರು ಬಿಟ್ಟುಬಿಡುತ್ತಾರೆ. ಮತ್ತೆ ಒಂದೆರಡು ಸಲ ಹಿಡಿದುಕೊಂಡು ಹೋದರೆ, ಪೋಲೀಸಿನವರು ಹಿಂಸೆ ಕೊಡುತ್ತಾರೆ - ಮಾಮೂಲು ಕೊಡಲಿಲ್ಲವೆಂದು ಹಿಡಿದುಕೊಂಡು ಬಂದಿದ್ದಾರೆ; ಅಬ್ಕಾರಿ ಇಲಾಖೆಯವರೂ ಸಹ ಮಾಮೂಲಿ ಕೊಡಲಿಲ್ಲವೆಂದು ಹಿಡಿದುಕೊಂಡು ಬಂದಿದ್ದಾರೆಂದು ಅವರು ಹೇಳಿದರೆ ನ್ಯಾಯಾಲಯದವರು ಸ್ಟ್ರಿಕ್ಚರ್ಸ್ ಪಾಸ್ ಮಾಡುತ್ತಾರೆ. ಸರಿ; ನಾವು ಸರ್ಕಾರಿ ಸಾರಾಯಿಯನ್ನು ಎರಡು ರೂಪಾಯಿಗೆ ಕೊಡುತ್ತೇವೆ ಎಂದರೆ, ಕೊಡಲೀ ಅವರು ನಾಲ್ಕಾಣೆಗೆ, ಕೊಡುತ್ತಾರೆ; ಇಪ್ಪತ್ತು ಪೈಸೆಗೆ, ಮೂವತ್ತು ಪೈಸೆಗೆ ಕೊಡುತ್ತಾರೆ. ಆದುದರಿಂದ, ಮೂಲಭೂತವಾಗಿ ಕುಡಿಯುವ ಚಟವುಳ್ಳ ಜನರಿಗೆ ಶಿಕ್ಷಣ ಕೊಟ್ಟು ಕುಡಿಯಬಾರದೆಂದು ಹೇಳಬೇಕಾಗುತ್ತದೆ ಕಾನೂನು ಇದೆ. ಆದರೆ, ಇದನ್ನು ಬುದ್ಧಿ ಹೇಳಿ ತಿದ್ದುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಕಾನೂನಿನಲ್ಲಿ ಸರಿ ಮಾಡುವುದಕ್ಕಾಗುವುದಿಲ್ಲ. ಇದು ನಮ್ಮ ಸಮಾಜದಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಕಾಯಿಲೆ. ಕಳೆದ ಮೂರು ತಿಂಗಳಲ್ಲಿ ಸುಮಾರು 2,014 ಜನರನ್ನು ಈ ಸಂಬಂಧವಾಗಿ ದಸ್ತಗಿರಿ ಮಾಡಲಾಗಿದೆ; ಇದರ ಜೊತೆಗೆ ಸುಮಾರು 257 ಕಾರು ಮತ್ತು ಲಾರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ, ಹಾಗೆ ವಶಪಡಿಸಿಕೊಂಡ ತಕ್ಷಣ ಅವುಗಳನ್ನು ಇಟ್ಟುಕೊಳ್ಳುವ ಅಧಿಕಾರವಿಲ್ಲ. ಮಾರನೆ ದಿವಸ ಬಿಟ್ಟುಬಿಡುತ್ತಾರೆ. ಆದುದರಿಂದ, ಈ ರೀತಿಯಾಗಿ ನಾವು ಆವೇಶಭರಿತರಾಗಿ ಮಾತನಾಡುವುದು ಸರಿಯಲ್ಲ. ವಿಷಯ ತಿಳಿದ ತಕ್ಷಣ ನಾನು ಆಸ್ಪತ್ರೆಗೆ ಹೋದೆ. ಮಾನ್ಯ ಅಧ್ಯಕ್ಷರು ತಿಳಿಸಿದ ಹಾಗೆ, ಸಾವಿರ ರೂಪಾಯಿಗಳನ್ನು ಸಮಾಧಿ ಖರ್ಚಿಗೆಂದು ಕೊಟ್ಟರೆ ಆ ದುಡ್ಡಿನಲ್ಲೇ ಪುನಃ ಹೋಗಿ ಕುಡಿದು ಬಂದಿದ್ದಾರೆ; ನಮ್ಮ ಪದ್ಧತಿ ಪ್ರಕಾರ ಕುಡಿದು ನೃತ್ಯ ಮಾಡುತ್ತಾ ಶವ ಸಂಸ್ಕಾರ ಮಾಡಿದರೆ ಮಾತ್ರ ಸತ್ತವನ ಆತ್ಮ ಸ್ವರ್ಗಕ್ಕೆ ಹೋಗುತ್ತದೆ; ಇಲ್ಲದಿದ್ದರೆ ಹೋಗುವುದಿಲ್ಲ; ವಾಪಸ್ಸು ಬಂದು ಭೂತವಾಗಿರುತ್ತದೆ ಎಂದು ಅವರು ಹೇಳುತ್ತಾರೆ; ಇದನ್ನೆಲ್ಲ ಹೇಗೆ ನಿಲ್ಲಿಸುತ್ತೀರಿ? ಯಾವ ಕಾನೂನು ಪ್ರಕಾರ ನಿಲ್ಲಿಸುತ್ತೀರಿ? ದಯಮಾಡಿ ತಿಳಿಸಬೇಕು. ನಡೆದದ್ದೆಲ್ಲಾ ಹೃದಯ ವಿದ್ರಾವಕ ಘಟನೆಯೇ. ಆಸ್ಪತ್ರೆಯಲ್ಲಿ ಸತ್ತವರಿಗೆ ಒಂದು ಸಾವಿರ

ರೂಪಾಯಿಗಳನ್ನು ಕೊಡುತ್ತೇವೆಂದು ನಾನು ವಿಧಾನ ಸಭೆಯಲ್ಲಿ ಘೋಷಣೆ ಮಾಡಿದ ಅರ್ಧದಲ್ಲಿಯೇ ಆ ವಿಚಾರ ಎಲ್ಲ ಕಡೆ ಪ್ರಚಾರವಾಯಿತು. ಸರಿ, ಕೂಡಲೇ ಯಾರು ಯಾರು ಸತ್ತರೋ ಅದನ್ನೆಲ್ಲಾ ತೆಗೆದುಕೊಂಡು ಆಸ್ಪತ್ರೆಗೆ ಬಂದರು; ಆದರೆ, ಆಸ್ಪತ್ರೆಗೆ ಸೇರಿರುವವರಲ್ಲಿ ಮೂರನೆ ಎರಡರಷ್ಟು ಜನರನ್ನು ವೈದ್ಯರುಗಳು ಉಳಿಸಿದ್ದಾರೆ. ಯಾರು ಯಾರು ಎಲ್ಲೆಲ್ಲಿ ಯಾವ ಯಾವ ಕಾರಣ ದಿದ ಸತ್ತರೋ ಗೊತ್ತಿಲ್ಲ. ಸ್ವಾಮಿ, ಕಣ್ಣು ಉರೀತಿತ್ತು; ಕಿವಿ ಉರೀತಿತ್ತು ಎಂದು ತೆಗೆದುಕೊಡು ಬಂದ್ದಾರೆ; ಹೆಣಕ್ಕೆ ಸಮಾಧಿ ಮಾಡುವುದಕ್ಕೆ ಸಾವಿರ ರೂಪಾಯಿ ಕೊಡಿ ಎಂದು ಕೇಳುತ್ತಿದ್ದಾರೆ; ಆದುದರಿಂದ, ಸಮಾಜದಲ್ಲಿ ಇದೆಲ್ಲಾ ಇರುವಾಗ ನಾವು ಇದರ ಬಗ್ಗೆ ಕೂಲಂಕುಷವಾಗಿ ಯೋಚನೆ ಮಾಡಿ, ನಮ್ಮ ಮಿತಿಯೊಳಗೆ ಏನೇನು ಮಾಡಬೇಕೋ ಮತ್ತು ಏನೇನು ಮಾಡುವುದಕ್ಕೆ ಸಾಧ್ಯತೆ ಇದೆಯೋ ಎನ್ನುವುದನ್ನು ನೋಡಬೇಕಾಗುತ್ತದೆ. ಪೋಲೀಸ್ ಇಲಾಖೆಗೆ ಕಳ್ಳಭಟ್ಟಿಯವರನ್ನು ಪೂರ್ಣವಾಗಿ ಹಿಡಿಯುವುದೊಂದೇ ಕೆಲಸವಲ್ಲ. ತಾವೇ ಒಪ್ಪಿಕೊಂಡ ಹಾಗೆ ಅವರಿಗೆ ದೇಶದಲ್ಲಿ ಬೇಕಾದಷ್ಟು ಕೆಲಸವಿದೆ. ಹದಿನಾಲ್ಕು ಸಾವಿರ ಜನರಿಗೆ ಒಬ್ಬ ಪೋಲೀಸ್ ಪೇದೆಯನ್ನು ಕೊಡುವುದಕ್ಕೆ ನಮ್ಮ ಕೈಯಲ್ಲಿ ಇನ್ನೂ ಆಗಿಲ್ಲ. ಆತ ದೇಶದಲ್ಲಿ ಸಂಚಾರ ವ್ಯವಸ್ಥೆಯನ್ನು ನಿಯಂತ್ರಿಸಬೇಕು; ಕಳ್ಳತನವಾಗುವುದನ್ನು ತಪ್ಪಿಸಬೇಕು, ಕಳ್ಳರನ್ನು ಹಿಡಿಯಬೇಕು, ಬೇರೆ ರೀತಿಯ ವ್ಯವಹಾರಗಳನ್ನು ತಡೆಗಟ್ಟಬೇಕು, ಎಲ್ಲಾ ಕಡೆ ಸಂಚಾರ ಮಾಡಬೇಕು ಮತ್ತು ಶಿಸ್ತು ಹಾಗೂ ಕಾನೂನು ಪರಿಪಾಲನೆ ಮಾಡಬೇಕು. ಜೊತೆಗೆ ಎಕ್ಸೈಸ್ ರೇಡ್, ಇನ್ನೊಂದು ರೇಡ್ ಮಾಡಬೇಕು. ಆದರೂ ಅವನ ಮಿತಿಯೊಳಗೆ ಅವನು ಕೆಲಸ ಮಾಡುತ್ತಿದ್ದಾನೆ. ಇಂಥಾ ಹೃದಯ ವಿದ್ರಾವಕ ಘಟನೆ ನಡೆದಾಗ ಸತ್ತು ಹೋದವರ ಬಳಿಗೆ ಹೋಗಿ, ನಾನು ಸರ್ಕಾರದಿಂದ ಸಾವಿರ ರೂಪಾಯಿ ಕೊಡಿಸುತ್ತೇನೆಂದು ಏಜೆಂಟ್ ಆಗಿ ಹೋಗುವವರೂ ಸಮಾಜದಲ್ಲಿ ಹುಟ್ಟಿಕೊಂಡರೆ ಹೇಗೆ? ಅದೇ ರೀತಿ ಪೋಲೀಸ್ ಅಥವಾ ಇನ್ನೊಂದು ಇಲಾಖೆಯಲ್ಲಿ ಕೆಲಸ ಮಾಡುವವರೂ ಇರಬಹುದು, ಅಂದ ಮಾತ್ರಕ್ಕೇ, ಒಬ್ಬ ಅಧಿಕಾರಿ ತಪ್ಪು ಮಾಡಿದ ಎಂದರೆ ಆತನನ್ನು ಸೇವೆಯಿಂದ ವಜಾ ಮಾಡುವುದಕ್ಕೆ ಅಧಿಕಾರವಿದೆಯೇ? ಏನಿದೆ ಸರ್ಕಾರಕ್ಕೆ ಅಧಿಕಾರ? ನಮಗೆ ಸರಿಯಾದ ಮಾಹಿತಿ ಸಿಕ್ಕಿದರೆ ಮತ್ತು ಅವನೇ ನಿಜವಾಗಿಯೂ ಇದರಲ್ಲಿ ಭಾಗಿಯಾಗಿದ್ದಾನೆಂದು ಗೊತ್ತಾದರೆ ಆತನನ್ನು ಸಸ್ಪೆಂಡ್ ಮಾಡಿ ವಿಚಾರಣೆ ನಡೆಸಬಹುದು. ವಿಚಾರಣೆ ಸಮಯದಲ್ಲಿ ಅವರ ವಿರುದ್ಧ ಸಾಕ್ಷ್ಯ ಹೇಳುವುದಕ್ಕೆ ಯಾರು ಬರುತ್ತಾರೆ? ಅಯ್ಯೋ ಮಕ್ಕಳೊಂದಿಗ ವಯಸ್ಸಿಗೆ ಬಂದ ಮಗಳಿದ್ದಾಳೆ ಹೆಚ್ಚಿಗೆ ಮಕ್ಕಳಿದ್ದಾರೆ, ನಿವೃತ್ತನಾಗುವ ಕಾಲ, ಏತಕ್ಕೆ ತೊಂದರೆ ಕೊಡುತ್ತೀರಿ, ಕಡ್ಡಾಯ ನಿವೃತ್ತಿಯನ್ನಾದರೂ ಮಾಡಿ ಎಂದು ಎಷ್ಟೋ ಜನ ಬರುತ್ತಾರೆ. ಇದೊಂದು ವಿಷ ಚಕ್ರ. ಇದರಿಂದ ಯಾರಿಗೆ ತೃಪ್ತಿ ಇದೆ? ಸಾರಾಯಿ ಮಾರುವವರಿಗೂ ಇವರನ್ನು ಕೊಲ್ಲಬೇಕೆಂಬ ಇಷ್ಟವಿಲ್ಲ. ನಾವಿದನ್ನು ಆಳವಾಗಿ ವಿಚಾರ ಮಾಡೋಣ. ಅವರನ್ನು ಹಿಡಿಯುತ್ತೇವೆ, ದಂಡ ಹಾಕುತ್ತೇವೆ. ಆದರೆ, ಎಷ್ಟು ಹಿಡಿದರೂ ಅವರು ಮಾಡುತ್ತಾ ಇರುತ್ತಾರೆ. ಕೊಲೆ ಮಾಡಿದವನನ್ನು ತೂಗಿ ಹಾಕಬೇಕೆಂದು

ಹೇಳುತ್ತೇವೆ. ಆದರೆ, ಕೊಳ್ಳುವವರು ನಿಲ್ಲಿಸಿದ್ದಾರೇನು? ಆದುದರಿಂದ, ಇದನ್ನೆಲ್ಲ ಸರ್ಕಾರದ ಅಧಿಕಾರಕೊಳಪಟ್ಟು, ಎಷ್ಟರಮಟ್ಟಿಗೆ ಮಾಡಬೇಕು. ಏನು ತಿದ್ದುಪಡಿ ತರಬೇಕೆಂದು ಯೋಚನೆ ಮಾಡೋಣ. ತಿದ್ದುಪಡಿ ತರುವುದಕ್ಕೆ ಅವಕಾಶವಿದೆಯೋ ಎನ್ನುವುದನ್ನು ನೋಡೋಣ. ತಿದ್ದುಪಡಿ ತಂದರೆ ಅದು ಸುಪ್ರೀಂ ಕೋರ್ಟಿನಲ್ಲಿ ಅಥವಾ ಹೈಕೋರ್ಟಿನಲ್ಲಿ ನಿಲ್ಲುತ್ತದೆಯೋ ಎಂದು ಆಲೋಚನೆ ಮಾಡಬೇಕು. ಸುಮ್ಮನೇ ಏನೇ ಒಂದು ಘಟನೆ ನಡೆಯಲಿ, ಅದಕ್ಕೆ ಸರ್ಕಾರ ರಾಜೀನಾಮೆ ಕೊಡಬೇಕು, ಒಂದು ಹಸು ನಾಲ್ಕು ಕರು ಹಾಕಿತ್ತು ಪಶುಸಂಗೋಪನಾ ಸಚಿವರು ರಾಜೀನಾಮೆ ಕೊಡಬೇಕು, ಒಂದು ಹಸು ನಾಲ್ಕು ತಿಂಗಳು ಕರು ಹಾಕಲೇ ಇಲ್ಲ, ಏತಕ್ಕೆ ಕರ ಹಾಕಲಿಲ್ಲ, ರಾಜೀನಾಮೆ ಕೊಡಬೇಕು ಎಂದೆಲ್ಲಾ ಕೇಳುವುದೇ? Where are the issues and what are the issues? ಇದೆಲ್ಲಾ ಆಗಬೇಕೆಂದು ಯಾರಿಗೆ ಇಷ್ಟವಿದೆ. ಸರ್ಕಾರ ಲಕ್ಷಾಂತರ ಲೀಟರು ಕಳ್ಳಭಟ್ಟಿಯನ್ನು ಹಿಡಿದಿದೆ. ಅದನ್ನು ಬಹಿರಂಗವಾಗಿ ನ್ಯಾಯಾಲಯದ ಮುಂದೆ ಹಾಜರ್ಪಡಿಸಿದೆ. ಕಾನೂನು ಪ್ರಕಾರ ಇಷ್ಟನ್ನು ಸರ್ಕಾರ ಮಾಡುವುದಕ್ಕೆ ಸಾಧ್ಯವಿದೆ. ಎಲ್ಲರನ್ನೂ ಕರೆದು ಕೊಂಡು ಬಂದು ಗುಂಡಿಕ್ಕಿರೆಂದು ಹೇಳುವುದಕ್ಕೆ ಇಲ್ಲೇನು ಮಾರ್ಷಲ್ ಲಾ ಇಲ್ಲ.

ಒಬ್ಬ ಅಪರಾಧಿಯನ್ನು ಅಥವಾ ಕಳ್ಳನನ್ನು ಹಿಡಿದುಕೊಂಡು ಬಂದು ಒಂದರ್ಧ ಗಂಟೆ ಕಾಲ ಜಾಸ್ತಿ ಪೋಲೀಸ್ ಸ್ಟೇಷನ್ನಿನಲ್ಲಿ ಇಟ್ಟುಕೊಂಡರೆ ಅಥವಾ ಹೊಡೆದರೆ ಅದಕ್ಕೆ ಕಾನೂನು ಕೇಳುತ್ತಾರೆ. ಅವರನ್ನು ಹೊಡೆಯಲೂ ಬಾರದು, ಇಟ್ಟುಕೊಳ್ಳಲೂ ಬಾರದು. ಕಳ್ಳತನ ಮಾಡಿದವನಿಗೆ ಮೈಸೂರುಪಾಕು, ಖಾರ, ಕಾಫಿ ಕೊಟ್ಟು, ಕಳ್ಳತನ ಮಾಡಿದ್ದೀಯಾ? ಎಂದು ಕೇಳಬೇಕು. ಆತ ಒಪ್ಪಿಕೊಂಡರೆ ಚಾರ್ಜ್‌ಷೀಟ್ ಹಾಕಬೇಕು, ಇಲ್ಲದಿದ್ದರೆ ಬಿಟ್ಟುಬಿಡಬೇಕು. ಒಂದು ವೇಳೆ ಸಬ್ ಇನ್ಸ್‌ಪೆಕ್ಟರು, ಕದ್ದಿದ್ದೀಯಾ ಇಲ್ಲವೇ ಎಂಬುದನ್ನು ನಿಜ ಹೇಳು ಎಂದು ಕಳ್ಳನಿಗೆ ಒದೆಯುವುದಕ್ಕೆ ಹೋದರೆ ಅಥವಾ ಒದ್ದರೆ ಯಾವ ಕಾನೂನು ಪ್ರಕಾರ ಸಬ್ ಇನ್ಸ್‌ಪೆಕ್ಟರ್ ಒದ್ದರು, ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳುವುದು; ಈ ದೇಶದಲ್ಲಿ ಪ್ರಜಾಪ್ರಭುತ್ವದ ಕೊಲೆಯಾಗುತ್ತಿದೆ, ಮಾನವ ಹಕ್ಕಿಗೆ ಚ್ಯುತಿ ಬಂದಿದೆ, ನಿರಪರಾಧಿಗಳಿಗೆ ಯಾವ ರೀತಿಯ ರಕ್ಷಣೆಯೂ ಇಲ್ಲ ಎಂದು ಹೇಳುವುದನ್ನು ಇವತ್ತು ಕಾಣುತ್ತಿದ್ದೇವೆ. ಆದ್ದರಿಂದ ಯಾವ ತರಹ ಯಾರಿಗೆ ರಕ್ಷಣೆ ಕೊಡಬೇಕೆಂಬುದನ್ನು ಸಮಾಜ ತೀರ್ಮಾನ ಮಾಡಬೇಕಾಗಿದೆ. What is the way out? I want to know. I am very glad that though the Opposition Members are not here today, our own Party people have taken up this issue seriously and discussed it at length. But what is the way out? ಇವತ್ತಿನ ದಿವಸ, ಇದಕ್ಕೆಲ್ಲ ಮೂಲ ರಾಣಿ ಒಬ್ಬಳು ಇದ್ದಾಳೆಂದು ಕುಮಾರಿ ಪ್ರಮೀಳರವರು ಏನು ಹೇಳಿದರು ಆಕೆ ಸಾವಿರಾರು ಜನರನ್ನು ಸಾಕುತ್ತಿದ್ದಾಳೆ, ಅವಳು ದಿನಬೆಳಗಾದರೆ ಕುಮಾರಿ ಪ್ರಮೀಳರವರಂಥ 10 ಜನ ವಕೀಲರನ್ನು ಇಟ್ಟುಕೊಳ್ಳುತ್ತಾಳೆ. ಅವಳ ವಿಚಾರದಲ್ಲಿ ಯಾರೂ ಕೈಹಾಕಲಿಕ್ಕೆ

ಸಾಧ್ಯವಿಲ್ಲ, ವಕೀಲರಿಗೆ ಬೇಕಾಗಿರುವುದು ಫೀಜು, ಫೀಜು ಬರುತ್ತದೆಂದರೆ ಯಾವ ಕೇಸನ್ನು ಬೇಕಾದರೂ ತೆಗೆದುಕೊಂಡು ವಾದ ಮಾಡುತ್ತಾರೆ. "My Lord, these police people have brought this lady unnecessarily, She is an innocent lady and this is all concocted by the Police." ಎಂದು ಹೇಳಿ ವಾದ ಮಾಡುತ್ತಾರೆ. And the Court will say "Yes. She is given bail". And then she is released. The moment she is released, she goes back and says. "ಪೋಲೀಸರು ಹಿಡಿದುಕೊಂಡರೆ ಏನು ಮಾಡುತ್ತಾರೆ; ವಕೀಲರು ಇದ್ದಾರೆ, ಹಣ ಇದೆ" ಎಂದು ಸ್ವಾಭಾವಿಕವಾಗಿ ಹೇಳುತ್ತಾಳೆ, ಕೋರ್ಟಿನಲ್ಲಿ ಬಿಟ್ಟರು ಅಂದ ತಕ್ಷಣ, ಸರ್ಕಾರಕ್ಕೆ ಇವತ್ತು ಬಹಳ ತೊಂದರೆ ಮಾಡಿದ್ದಾರೆಂದು ಬಂಧಿಸಲಿಕ್ಕೆ ನನಗಾಗಲೀ ಅಥವಾ ಶಾಸನ ಸಭೆಗಾಗಲೀ ಅಧಿಕಾರ ಇಲ್ಲ. ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಹಾಕಿದರೂ (ಬಂಧಿಸಿದರೂ) ಸಹ ಅದಕ್ಕೂ ಕೂಡ ಒಂದು ಕಮಿಟಿ ಇದೆ. ಅದು ವಿಚಾರ ಮಾಡಬೇಕಾಗುತ್ತದೆ. ಯಾವ ಕಾರಣಕ್ಕೋಸ್ಕರ ಬಂಧಿಸಿದಿರಿ ? ದೇಶದ್ರೋಹ ಅಪಾದನೆ ಮಾಡಿದ್ದಾರೆಯೇ, ಸಮಾಜದ್ರೋಹ ಮಾಡಿದ್ದಾರೆಯೇ, ಆರ್ಥಿಕವಾಗಿ ಅಪರಾಧ ಮಾಡಿದ್ದಾರೆಯೇ ಎಂದು ಕೇಳುತ್ತಾರೆ. 10 ಜನರನ್ನು ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಪ್ರಕಾರ ಬಂಧಿಸಿ ತೆಗೆದುಕೊಂಡು ಹೋದರೆ ಕಮಿಟಿಯಲ್ಲಾಗಲೀ ಅಥವಾ ಕೋರ್ಟಿನಲ್ಲಾಗಲೀ ಬಿಟ್ಟುಬಿಡುತ್ತಾರೆ. ಅನೇಕ ಜನ ಮಾನ್ಯ ಸದಸ್ಯರುಗಳಿಗೆ ಆವೇಶ ಬಂದಹಾಗೆ ನನಗೂ ಬರುತ್ತದೆ. ಆದರೆ ಮಾಡುವುದು ಏನು ? ಕೆಲವು ಮಂದಿ ನಿರ್ಗತಿಕರು ಆಸ್ಪತ್ರೆ ಸೇರಿದ್ದಾರೆ ಅವರಿಗೆ ನಾವು ಮಾಡುವುದಾದರೂ ಏನು ? ನಮ್ಮ ಕೈಯಲ್ಲಿ ಆಗುವುದಾದರೂ ಇಷ್ಟೆ ಅವರಿಗೆ ಒಳ್ಳೆಯ ಔಷಧಿಯನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುವುದು. ಒಂದು ವೇಳೆ ಪ್ರಯತ್ನ ವಿಫಲವಾಗಿ ಸತ್ತರೆ ಅವರ ಕುಟುಂಬಕ್ಕೆ ಸಾವಿರ ರೂಪಾಯಿಗಳನ್ನು ಕೊಡುವುದು. ಇವತ್ತು ಅನೇಕ ಜನರಿಗೆ ಕಣ್ಣು ಹೋಗುತ್ತಿದೆ; ಅವರಿಗೆ ಏನು ಸಹಾಯ ಬೇಕೋ ಅದನ್ನು ಮಾಡುವುದು ಮತ್ತು ಅವರ ಮಕ್ಕಳನ್ನು ರಕ್ಷಿಸಲು ಏರ್ಪಾಡು ಮಾಡುವುದು. ನಿರ್ಗತಿಕರನ್ನು ಸಮಾಧಿ ಮಾಡುವಾಗ ಚಾರ್ಜ್ ವಸೂಲ್ಮಾಡದೆ ಸಮಾಧಿ ಮಾಡಬೇಕೆಂದು ಕಾರ್ಪೊರೇಷನ್ನಿಗೆ ಆದೇಶ ಕೊಟ್ಟಿದ್ದೇವೆ. ಅದೇ ಪ್ರಕಾರ ಜಟಕಾ ಗಾಡಿಗಳನ್ನು ಮತ್ತೊಂದನ್ನು ಮಾಡಿ ಶವವನ್ನು ತೆಗೆದುಕೊಡು ಹೋಗಿ ಸಮಾಧಿ ಮಾಡಲಾಗಿದೆ. ಶವವನ್ನು ತೆಗೆದುಕೊಂಡು ಹೋಗುವುದಕ್ಕಾಗಲೀ, ಸಮಾಧಿ ಮಾಡುವುದಕ್ಕಾಗಲೀ ಹಣ ಕೇಳಿಲ್ಲ. ಆದರೂ ನಾನು ಇದಕ್ಕೆಲ್ಲ ತಕ್ಕ ಏರ್ಪಾಡು ಮಾಡಿಸಿದ್ದೇನೆಂದು ದಲ್ಲಾಳಿ ಬಂದು ಕಮೀಷನ್ ತೆಗೆದುಕೊಂಡು ಹೋಗುತ್ತಿರುತ್ತಾನೆ. ಕಾರ್ಪೊರೇಷನ್ ಮತ್ತಿತರ ಕಛೇರಿಗಳಲ್ಲಿ ತಿಂಗಳ ಸಂಬಳ ಪಾವತಿಯಾಗತಕ್ಕ ಸಂದರ್ಭದಲ್ಲಿ ಕಮೀಷನ್ ಅನ್ನು ಕಸ ಗುಡಿಸುವವರ ಹತ್ತಿರವೆಲ್ಲ ವಸೂಲ್ಮಾಡುವ ಜನ ಈ ದೇಶದಲ್ಲಿದ್ದಾರೆ. ಇಂಥ ವಿಚಾರವನ್ನು ಬೇರೆ ಯಾವ ದೇಶದಲ್ಲಿಯಾದರೂ ಕೇಳಿದ್ದೀರಾ ಅಧ್ಯಕ್ಷರೇ ? ಕಾರ್ಪೊರೇಷನ್ನಿನಲ್ಲಿ ಕಸ ಗುಡಿಸುವವರ ಹತ್ತಿರವೆಲ್ಲ ನಾನು ನಿನಗೆ ಸರ್ಕಾರದಿಂದ

ಕೊಡಿಸಿದೆ, ನನಗೆ ಕಮೀಷನ್ ಕೊಡು ಎಂದು ಹತ್ತಿಪ್ಪತ್ತು ರೂಪಾಯಿಗಳನ್ನು ತಗೆದುಕೊಳ್ಳುವ ಜನ ಈ ಸಮಾಜದಲ್ಲಿರಬೇಕಾದರೆ ಇದಕ್ಕೆಲ್ಲ ಯಾರು ರಕ್ಷಣೆ ಕೊಡುವುದಕ್ಕಾಗುತ್ತದೆ? ಆಸ್ಪತ್ರೆಯಲ್ಲಿ ಸತ್ತವರ ಸಂಬಂಧಿಕರ ಬಳಿ ಹೋಗಿ, ನಾವು ಸರ್ಕಾರದಿಂದ ನಿಮಗೆ ಸಾವಿರ ರೂಪಾಯಿಗಳನ್ನು ಕೊಡುವಂತೆ ಮಾಡಿಸಿದ್ದೇವೆಂದು ಹೇಳಿ ನಮಗೆ 10 ರೂಪಾಯಿಗಳನ್ನು ಕೊಡಿ ಎಂದು ಕೇಳುವುದು-ಇವೆಲ್ಲ ನಡೆಯುವುದನ್ನು ಕಾಣುತ್ತೇವೆ. ಹೀಗೆ ನಾನಾ ಕಡೆಗಳಲ್ಲಿ ಈ ರೀತಿಯ ವ್ಯವಹಾರಗಳು ನಡೆಯುತ್ತಿವೆ. ಇವನ್ನೆಲ್ಲ ಹೇಗೆ ಬಿಡಿಸುವುದು ಎಂಬದೇ ಒಂದು ಸಮಸ್ಯೆಯಾಗಿದೆ. ಉಗ್ರ ಕ್ರಮ ಕೈಗೊಳ್ಳಬೇಕು ಅಂದರೆ ಏನು? ಪೋಲೀಸರು ಒಂದು ಹತ್ತು ಬಾರಿ ರೈಡ್ ಮಾಡಬಹುದು, ತಪ್ಪಿತಸ್ಥರನ್ನು ಹಿಡಿದುಕೊಂಡು ಬಂದು ಕೋರ್ಟಿಗೆ ಕೊಡಬಹುದು. ಇವತ್ತು ಇಂತಿಂಥ ತಪ್ಪುಗಳನ್ನು ಮಾಡಿದ್ದಾರೆಂದು ಹೇಳಿ ನ್ಯಾಯಾಧೀಶರ ಮುಂದೆ ನಿಲ್ಲಿಸಬಹುದು. ಇವತ್ತು 2014 ಜನರನ್ನು ಅಪರಾಧಿಗಳೆಂದು ಅರೆಸ್ಟ್ ಮಾಡಿದ್ದು 257 ಜನರನ್ನು ಬಿಡಲಾಗಿದೆ. ಅವರನ್ನು ಬಿಡಬಾರದು ಎಂದು ಹೇಳುವುದಕ್ಕೆ ನನಗೂ ಅಧಿಕಾರ ಇಲ್ಲ ಮತ್ತು ಶಾಸನ ಸಭೆಗೂ ಅಧಿಕಾರ ಇಲ್ಲ.

ಶ್ರೀ ಕೆ.ಎಚ್. ಹನುಮೇಗೌಡ – ಇದೆ. ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಅವಕಾಶ ಇದೆ. ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಅಧಿಕಾರ ಇಲ್ಲವೆ?

ಶ್ರೀ ಆರ್. ಗುಂಡೂರಾವ್ – ನೀವು ಬದಲಾವಣೆ ಮಾಡಿದರೆ ಅದು ತಪ್ಪೋ ಸರಿಯೋ ಎಂದು ತೀರ್ಮಾನ ಕೊಡುವವರು ಅವರು. ವಾಹನ ಅಪಘಾತಕ್ಕೆ ಕಾರಣರಾದವರಿಗೆ 10 ವರ್ಷ ಶಿಕ್ಷೆ ವಿಧಿಸಬೇಕೆಂದು ಕಾನೂನಿನಲ್ಲಿದೆ. ಅದನ್ನು ವಿಧಿಸುವ-ಬಿಡುವ ಅಧಿಕಾರ ಅವರಿಗೆ ಇದೆ. ಅದರಲ್ಲಿ ನಮಗೆ ಏನು ಅಧಿಕಾರ ಇದೆ? ನಾವು ಒಂದು ಸಾರಿಯಲ್ಲ, ಹತ್ತು ಸಾರಿಯಾದರೂ ತಪ್ಪಿತಸ್ಥರನ್ನು ಹಿಡಿಯಬೇಕು; ಹಿಡಿದು ಅವರ ಮುಂದೆ ನಿಲ್ಲಿಸಬೇಕು; ಅವರು ಅದನ್ನು ತೀರ್ಮಾನಿಸಬೇಕು. ಆದುದರಿಂದ, ಮೊನ್ನೆ ನಡೆದ ಘಟನೆ ಏನಿದೆ ಇದು ಬಹಳ ದುಃಖಕರವಾದ ಘಟನೆ. ಇದರ ಬಗ್ಗೆ ಸರ್ಕಾರ ಸಾಕಷ್ಟು ಕ್ರಮ ಕೈಗೊಂಡಿದೆ; ಬೇಕಾದಷ್ಟು ಜನರನ್ನು ದಸ್ತಗಿರಿ ಮಾಡಲಾಗಿದೆ. ನಿರ್ಗತಿಕರ ಸಲುವಾಗಿ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಕೈಗೊಂಡಿದ್ದೇವೆ. ಇನ್ನೂ ಸ್ವಲ್ಪ ಪೋಲೀಸ್ ಪೋಸ್ಟುಗಳನ್ನು ಹಾಗೂ ಎಕ್ಸೈಜ್ ಇನ್ಸ್‌ಪೆಕ್ಟರ್ ಪೋಸ್ಟ್ ಗಳನ್ನು ಜಾಸ್ತಿ ಮಾಡಬೇಕೆಂದರೆ ಅದಕ್ಕೆ ಹಣದ ಚೌಕಟ್ಟು ಬೇಕಲ್ಲ. ಅದು ನಾನ್ ಪ್ಲಾನ್ ಪ್ರಾಜೆಕ್ಟ್ ಆಗುತ್ತದೆ. ಇವತ್ತಿನ ದಿವಸ, ವಿದ್ಯುತ್, ನೀರಾವರಿ, ರಸ್ತೆ, ಶಾಲೆ, ಆಸ್ಪತ್ರೆ, ಸಮಾಜ ಕಲ್ಯಾಣ ಕೇಂದ್ರಗಳು ಇತ್ಯಾದಿಗಳನ್ನು ನಿರ್ಮಿಸಲು ಹಣ ಖರ್ಚು ಮಾಡಬೇಕಾಗಿರುವಾಗ there is a limitation to spend on Police and Excise. ಇವತ್ತು ಎಕ್ಸೈಜ್ ಇಲಾಖೆಯಿಂದ 60 ಕೋಟಿ ರೂಪಾಯಿ ಆದಾಯ ಬಂದಿದೆಯಾದ್ದರಿಂದ ನಾಳೆ ದಿವಸ 25 ಕೋಟಿ ರೂಪಾಯಿಗಳನ್ನು ಇಲಾಖೆಗಾಗಿ ಖರ್ಚು ಮಾಡುತ್ತೇನೆಂದರೆ ಯಾವ ಪ್ಲಾನಿಂಗ್ ಕಮೀಷನ್ನೂ ಒಪ್ಪಿಗೆ ಕೊಡುವುದಿಲ್ಲ. ವಿಧಾನ ಸಭೆಯಲ್ಲಿ ಸಹ ಒಪ್ಪಿಗೆ ದೊರೆಯುವುದಿಲ್ಲ. ಅಲ್ಲಿ ಒಂದು

ಮಿತಿ ಇರುತ್ತದೆ. ಇಷ್ಟೇ ಖರ್ಚು ಮಾಡಬೇಕೆಂಬ ದಿಗ್ಬಂಧನವನ್ನು ಹಾಕುತ್ತಾರೆ. ಈ ದೇಶದ ಆರ್ಥಿಕ ವ್ಯವಸ್ಥೆ ಆ ಒಂದು ತಳಹದಿಯ ಮೇಲೆ ಬಂದಿದೆ. ಇವತ್ತು ನಾವು 10 ಸಾವಿರ ಪೋಲೀಸ್ ಪೋಸ್ಟುಗಳನ್ನು ಜಾಸ್ತಿ ಮಾಡಬೇಕೆಂದರೆ 5 ವರ್ಷಗಳ ಕಾಲ ಪ್ರಯತ್ನ ಮಾಡಬೇಕು. ತಮಿಳ್ನಾಡಿನಲ್ಲಿ ಎಷ್ಟಿದೆ, ಗುಜರಾತಿನಲ್ಲಿ ಎಷ್ಟಿದೆ, ಮಹಾರಾಷ್ಟ್ರದಲ್ಲಿ ಎಷ್ಟಿದೆ ಎಂಬ ಮಾಹಿತಿಗಳನ್ನೆಲ್ಲ ತರಿಸಿ ನಮ್ಮ ಮತ್ತು ಕೇಂದ್ರದ ಹಣಕಾಸಿನ ಸಚಿವರುಗಳ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಹಾಗೆ ಒಪ್ಪಿಗೆ ನೀಡುವಾಗ 10 ಸಾವಿರ ಪೋಲೀಸ್ ಹುದ್ದೆಗಳನ್ನು ಜಾಸ್ತಿ ಮಾಡುವುದಾದರೆ ನೀರಾವರಿ ಬಾಬಿನಲ್ಲಿ 3 ಕೋಟಿ ರೂಪಾಯಿಗಳನ್ನು ಕಟ್ ಮಾಡುತ್ತೇವೆ. ವಿದ್ಯುಚ್ಛಕ್ತಿ ಬಾಬಿನಲ್ಲಿ 2 ಕೋಟಿ ರೂಪಾಯಿಗಳನ್ನು ಕಟ್ ಮಾಡುತ್ತೇವೆ, ದೊಡ್ಡ ನೀರಾವರಿ ಬಾಬಿನಲ್ಲಿ 4 ಕೋಟಿ ರೂಪಾಯಿಗಳನ್ನು ಕಟ್ ಮಾಡುತ್ತೇವೆ ಎಂದೆಲ್ಲ ಷರತ್ತು ಹಾಕಿ ಅದಕ್ಕೆ ಒಪ್ಪುವುದಾದರೆ 10 ಸಾವಿರ ಪೋಲೀಸ್ ಹುದ್ದೆಗಳನ್ನು ಜಾಸ್ತಿ ಮಾಡುತ್ತೇವೆ ಅನ್ನುತ್ತಾರೆ. ಇತ್ತಕಡೆ ನೀವುಗಳು ನಾಳೆ ದಿವಸ ಹೇಮಾವತಿ ನಾಲೆ ಆಗಿಲ್ಲ, ಕಬಿನಿ ನಾಲೆ ಆಗಿಲ್ಲ, ಭದ್ರ ನಾಲೆ ಮುಳುಗುತ್ತಿದೆ, ಆಲಮಟ್ಟಿಯಲ್ಲಿ ನೀರು ಬಂದಿಲ್ಲ, ನಾರಾಯಣಪುರ ಹಾಗೂ ಮಲಪ್ರಭದಲ್ಲಿ ನೀರಿಲ್ಲ ಎಂದು ಬರುತ್ತೀರಿ. ನಾನು ಅದನ್ನೂ ಮಾಡಬೇಕು, ಇದನ್ನೂ ಮಾಡಬೇಕು. ಹೀಗಿರುವಾಗ, ಈ ದಿನ ಇದನ್ನು ಮಾಡಿ ಎಂದರೆ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳುತ್ತೇನೆಯೇ ಹೊರತು, ಅದನ್ನು ಪೂರ್ತಿ ಮಾಡಿಯೇ ಮಾಡುತ್ತೇನೆಂದು ಹೇಳುವುದಕ್ಕೆ ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಯಾವಾಗ ಪೂರ್ತಿಯಾಗಿ ಯಾರೂ ಕುಡಿಯುವುದಿಲ್ಲವೆಂದು ತೀರ್ಮಾನಿಸುತ್ತಾರೋ ಆಗ ಮಾತ್ರ ಈ ಸಮಸ್ಯೆ ಬಗೆ ಹರಿಯುತ್ತದೆ. ಆಗ ಮಾತ್ರ ನಮ್ಮ ಬಡತನ ಹೋಗಿ ಅನುಕೂಲ ಸ್ಥಾನಕ್ಕೆ ಬರಲು ಸಾಧ್ಯ. ಸಾರಾಯಿ, ಸೇಂದಿ, ಬೀಡಿ ವಗೈರೆಗಳಿಗೆ ಏತಕ್ಕೋಸ್ಕರ ಬೆಲೆಯನ್ನು ಜಾಸ್ತಿ ಮಾಡಲಾಗುತ್ತಿದೆ ಎಂದರೆ ಕುಡಿಯುವ ಚಟವನ್ನು ಕಡಿಮೆ ಮಾಡಿ ಕ್ರಮೇಣ ಬಿಡಿಸಬೇಕು ಎಂದು. ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಯಾಗಿದೆ. ಮಾದಕ ಪದಾರ್ಥಗಳ ಬೆಲೆಯನ್ನು ಜಾಸ್ತಿ ಮಾಡಿದರೆ ಜನರು ಕುಡಿಯುವುದನ್ನು ಕಡಿಮೆ ಮಾಡುತ್ತಾರೆಂಬ ಉದ್ದೇಶದಿಂದ ಅವುಗಳ ಬೆಲೆಯನ್ನು ಜಾಸ್ತಿ ಮಾಡಲಾಗಿದೆಯೇ ಹೊರತು ಬೇರೆ ಯಾವ ಉದ್ದೇಶದಿಂದಲೂ ಅಲ್ಲ.

ಆದರೆ ನಾವು ಬೆಲೆ ಎಷ್ಟೇ ಜಾಸ್ತಿ ಮಾಡಿದರೂ ಕುಡಿಯುವುದೂ ಜಾಸ್ತಿಯಾಗುತ್ತಲೇ ಇದೆ. ನಿಮಗೆ ಹೇಳಬೇಕು ಎಂದರೆ ಹೋದ ವಾರ ಬೆಂಗಳೂರಿನಲ್ಲಿ ಸರ್ಕಾರದಿಂದ ಅಪ್ರೂವಲ್ ಮಾಡಲ್ಪಟ್ಟ ಅರಾಕ್ ಮಾರಾಟವಾಗಿರುವುದು ಸುಮಾರು 1 ಲಕ್ಷ 34 ಸಾವಿರ ಲೀಟರ್‌ಗಳು. ಇಷ್ಟು ಕ್ರಯ ಜಾಸ್ತಿಯಾಗಿ ಅಷ್ಟು ಮಾರಾಟವಾಗಿದೆ. ಇದು ಸರ್ಕಾರದ್ದು, ಕಳ್ಳಭಟ್ಟಿ ಅಲ್ಲ. ಸಾರಾಯಿ ಬೆಲೆಯನ್ನು ಜಾಸ್ತಿ ಮಾಡಿದರೂ ಮಾರಾಟವಾಗಿರುವುದು ಒಂದು ಲಕ್ಷ 34 ಸಾವಿರ ಲೀಟರ್‌ಗಳು. ಅದೂ ಒಂದು ವಾರದಲ್ಲಿ. ಜೂನ್‌ನಲ್ಲಿ 1 ಲಕ್ಷ 62 ಸಾವಿರ ಲೀಟರ್‌ಗಳ ಮಾರಾಟವಾಗಿದೆ. ಇದನ್ನು ನೋಡಿದಾಗ ಗೊತ್ತಾಗುತ್ತದೆ

ಕುಡಿಯುವುದು ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಕುಡಿಯುವವರು ನಾವು ಕ್ರಯವನ್ನು ಎಷ್ಟೇ ಜಾಸ್ತಿ ಮಾಡಿದರೂ ಕುಡಿಯುತ್ತಿದ್ದಾರೆ. ಕುಡಿಯುವ ಜನ ನಾವು ಎಷ್ಟೇ ಬೆಲೆ ಕಡಿಮೆ ಮಾಡಿದರೂ ಕುಡಿಯುವುದಿಲ್ಲ. ಮಾನ್ಯ ಪ್ರಧಾನ ಮಂತ್ರಿಯವರೂ ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ. ಬೇರೆ ಮದ್ಯಪಾನಗಳ ಬೆಲೆಯನ್ನು ಎಷ್ಟೇ ಕಡಿಮೆ ಮಾಡಿದರೂ ಕಳ್ಳಭಟ್ಟಿ ಕುಡಿಯುವವರು ಅದನ್ನು ಕುಡಿಯುವುದಿಲ್ಲ. ಏಕೆಂದರೆ ಅದರಲ್ಲಿ ಸ್ಟ್ರಾಂಗ್ ಕಿಕ್ ಸಿಗುವುದಿಲ್ಲವಂತೆ. ನೀವು ಕುಡಿಯುವುದಿಲ್ಲ ಅಲ್ಲವೇ? (ಶ್ರೀ ಕೆ. ಹೆಚ್. ಹನುಮೇಗೌಡರನ್ನು ಕುರಿತು).

**ಶ್ರೀ ಕೆ. ಹೆಚ್. ಹನುಮೇಗೌಡ** – ಇಲ್ಲ.

**ಶ್ರೀ ಆರ್. ಗುಂಡೂರಾವ್** – ಆದ್ದರಿಂದ ನೀವು ಏತಕ್ಕೆ ತಲೆ ಕೆಡಿಸಿಕೊಳ್ಳುತ್ತೀರಿ? (ನಗು) ಇವತ್ತು ಯಾರು ಸಾರಾಯಿ ಕುಡಿಯುತ್ತಾರೆ ಅವರ ಮುಂದೆ 500 ರೂಪಾಯಿದಲ್ಲ 1000 ರೂಪಾಯಿ ಬೆಲೆಯ ವಿಸ್ಕಿ ತೆಗೆದುಕೊಂಡು ಹೋಗಿ ಇಟ್ಟರೂ ಅವರು ಮುಟ್ಟುವುದಿಲ್ಲ. ಲಕ್ಷ್ಮಣ್ ಅವರನ್ನು ಬೇಕಾದರೆ ಕೇಳಿ, ಹೇಳುತ್ತಾರೆ.

**ಶ್ರೀ ಕೆ. ಲಕ್ಷ್ಮಣ್** – ಸರ್ಕಾರೀ ಸಾರಾಯಿಗೆ ಬೆಲೆ ಕಡಿಮೆ ಮಾಡಿದರೆ ಕಳ್ಳಭಟ್ಟಿ ಕುಡಿಯುವುದಿಲ್ಲ. ಏಕೆಂದರೆ ಅರಾಕ್‌ಗೂ, ಕಳ್ಳಭಟ್ಟಿಗೂ ವ್ಯತ್ಯಾಸ ಇಲ್ಲ.

**ಶ್ರೀ ಆರ್. ಗುಂಡೂರಾವ್** – ಈ ಅರಾಕ್, ಕಳ್ಳಭಟ್ಟಿ ಕುಡಿದು ಅಭ್ಯಾಸ ಆಗಿರುವಾಗ ಸರ್ಕಾರೀ ಸಾರಾಯಿಯನ್ನು ಕುಡಿಯುವುದಿಲ್ಲ. 10-12 ಮೈಲಿಯಾದರೂ ಹೋಗಿ ಕಳ್ಳಭಟ್ಟಿಯನ್ನು ಕುಡಿಯುತ್ತಾರೆ. ಇದನ್ನು ತಪ್ಪಿಸಬೇಕಾದರೆ ನಮ್ಮ ಕೈಯಲ್ಲಿ ಸರ್ವಾಧಿಕಾರಿತನ ಬರಬೇಕು. ಹೃದಯ ವಿದ್ರಾವಕ ಘಟನೆ ನಡೆದಿದೆ, ತಪ್ಪಿತಸ್ಥರನ್ನು ತಂದು ನೇಣು ಹಾಕಿ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ನಿಜ. ಆದರೆ ಅವರು ಹೇಳಿದ ಕೆಲಸವನ್ನು ಮಾಡುವುದಕ್ಕೆ ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ವಿಧಾನ ಸೌಧದ ಮುಂದೆ ತಂದು ನೇಣು ಹಾಕುವುದಕ್ಕೆ, ಗುಂಡಿಟ್ಟು ಕೊಲ್ಲುವುದಕ್ಕೆ ಯಾವ ಸರ್ಕಾರಕ್ಕೂ ಆಗುವುದಿಲ್ಲ.

**ಅಧ್ಯಕ್ಷರು** – ಹಾಗೆ ಮಾಡಿದರೆ ಹನುಮೇಗೌಡರೇ ಸುಮ್ಮನಿರುವುದಿಲ್ಲ. ಆ ರೀತಿ ಮಾಡುವುದಕ್ಕೆ ನಿಮಗೆ ಯಾವ ಕಾನೂನಿದೆ ಎಂದು ಕೇಳುತ್ತಾರೆ.

**ಶ್ರೀ ಆರ್. ಗುಂಡೂರಾವ್** – ಆದ್ದರಿಂದ ನಾವು ಯಾವತ್ತೂ ಇದನ್ನು ಒಂದು ಇಷ್ಯೂ ಮಾಡಬಾರದು. ಇವತ್ತು ದುರ್ದೈವ, ಏನೇ ಆದರೂ ಅದನ್ನು ಇಷ್ಯೂ ಮಾಡುತ್ತಾರೆ. ಯಾವುದೇ ಘಟನೆ ನಡೆದರೂ ಅದನ್ನು Political issue ಮಾಡುತ್ತಾರೆ. ಸತ್ತು ಹೋದವರ ಮಕ್ಕಳಿಗೆ ಏನು ಮಾಡಬೇಕು, ಆಸ್ಪತ್ರೆಯಲ್ಲಿ ಏನಾಯಿತು, ಪೋಲೀಸರು ಯಾವ ರೀತಿ ಕಾರ್ಯಾಚರಣೆ ಮಾಡಿದ್ದಾರೆ, ಈ ವಿಷಯಗಳ ಬಗ್ಗೆ ಗಮನ ಕೊಡುವುದಿಲ್ಲ. ಏನಾದರೂ ಆದ ತಕ್ಷಣವೇ ಮುಖ್ಯಮಂತ್ರಿ ರಾಜೀನಾಮೆ ಕೊಡಲಿ, ಸರ್ಕಾರ ರಾಜೀನಾಮೆ

ಕೊಡಲಿ ಎಂದು ಹೇಳುತ್ತಾರೆ. ಯಾವ ಸರ್ಕಾರ ಕುಡಿಯಿರಿ ಎಂದು ಹೇಳುತ್ತದೆ. ಮುಖ್ಯಮಂತ್ರಿ ಹೇಳುತ್ತಾರೆಯೇ? ಕಳ್ಳಭಟ್ಟಿ, ಸಾರಾಯಿ ಕುಡಿಯಿರಿ ಎಂದು, ಯಾವ ಮುಖ್ಯಮಂತ್ರಿ ಹೇಳುತ್ತಾರೆ? ಇದನ್ನು ತಪ್ಪಿಸುವುದಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳೋಣ. ತಾವೆಲ್ಲಾ ಸಹಕಾರ ಕೊಡಿ. ಒಂದು ಕಮಿಟಿ ಮಾಡೋಣ. ಪಾರ್ಲಿಮೆಂಟಿನಲ್ಲಿ ಏನು ತಿದ್ದುಪಡಿ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡೋಣ. ಇದು ಎಲ್ಲರ ಗಮನ ಸೆಳೆದಿದೆ. ಆದ್ದರಿಂದ ಎಕ್ಸೈಜ್ ಆಕ್ಟ್‌ನಲ್ಲಿ ಏನು ತಿದ್ದುಪಡಿ ತರಬೇಕು ಎಂಬುದರ ಬಗ್ಗೆ ಯೋಚನೆ ಮಾಡೋಣ.

ಮುಖ್ಯಮಂತ್ರಿ ರಾಜೀನಾಮೆ ಕೊಟ್ಟರೆ ಪಾನ ನಿರೋಧ ಬಂದು ನಾಳೆ ಬೆಳಗ್ಗೆ ಎಲ್ಲಾ ಸರಿಹೋಗುತ್ತದೆಯೇ? ಜನ ನಗುತ್ತಾರೆ, ಏನಿದು ಬೆಳಗ್ಗೆ ಎದ್ದರೆ ರಾಜೀನಾಮೆ, ರಾಜೀನಾಮೆ ಎಂದು ಹೇಳುತ್ತಾರೆ ಎಂದು ಜನ ಕೇಳುತ್ತಾರೆ. ಇಲ್ಲ ಬೆಂಗಳೂರು, ಮೈಸೂರಿನಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ, ಎಲ್ಲಿ ಲೋಪ ಆಗಿದೆ ಎಂಬುದನ್ನು ನೋಡಿ ಅದನ್ನು ಸರಿಪಡಿಸುವುದಕ್ಕೆ ಹೋಗೋಣ, ಮುಂದೆ ಈ ಘಟನೆಗಳು ಆಗದಂತೆ ತಡೆಗಟ್ಟುವುದಕ್ಕೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದು ಎಂಬುದನ್ನು ನಮ್ಮ ಲಿಮಿಟ್‌ನಲ್ಲಿ ಏನು ಮಾಡಲಿಕ್ಕೆ ಸಾಧ್ಯತೆ ಉಂಟು ಎಂಬುದನ್ನು ನೋಡೋಣ. ನಮ್ಮ ರಾಜ್ಯದ ಕಾನೂನನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ? ರಾಷ್ಟ್ರ ಮಟ್ಟದಲ್ಲೋ, ಪಾರ್ಲಿಮೆಂಟ್ ಮಟ್ಟದಲ್ಲೋ ಶಾಸನಸಭೆ ಮಟ್ಟದಲ್ಲೋ ಚರ್ಚೆ ಮಾಡಿ ಆದಷ್ಟು ಎಜುಕೇಟ್ ಮಾಡುವುದಕ್ಕೆ ಯಾವ ರೀತಿ ಪ್ರಯತ್ನ ಮಾಡಬೇಕು ಎಂಬುದನ್ನು ನೋಡೋಣ. ಕೆಲವು ಕಡೆ ಕೆಲವು ಪ್ರಯತ್ನಗಳು ನಡೆದರೂ ಪ್ರಯೋಜನವಾಗಲಿಲ್ಲ ತಮಿಳುನಾಡಿನಲ್ಲಿ Life imprisonment ಮಾಡುವುದಕ್ಕೆ ಕಾನೂನು ತಂದಿದ್ದರೂ ಅದು ಸಾಧ್ಯವಾಗಲಿಲ್ಲ. ಕೋರ್ಟ್‌ನಲ್ಲಿ ನಿಲ್ಲುವುದಿಲ್ಲ.

ಶ್ರೀ ಕೆ. ಲಕ್ಷ್ಮಣ್ - ಅಲ್ಲಿ ಎಕ್ಸೈಜ್ ಡ್ಯೂಟಿ ತೆಗೆದುಹಾಕಿದ್ದಾರೆ.

ಶ್ರೀ ಆರ್. ಗುಂಡೂರಾವ್ - ಹಾಗೆ ಮಾಡಿದರೆ ಕಡಿಮೆಯಾಗುತ್ತದೆ ಎಂದು ಹೇಳುವುದು ಕೇವಲ ಭ್ರಮೆ. ಕಡಿಮೆಯಾಗುವುದಕ್ಕೆ ಸಾಧ್ಯವೇ ಇಲ್ಲ. ಈ ದುರ್ಘಟನೆ ಬಗ್ಗೆ ನಾನಾ ಕಾರಣಗಳನ್ನು ಕೊಡುತ್ತಾರೆ. ಎಕ್ಸೈಜ್‌ನವರಿಗೆ ಜಾಸ್ತಿ ದುಡ್ಡು ಕೊಟ್ಟಿರುವ ದೆಸೆಯಿಂದ ಎಕ್ಸೈಜ್ ಕಂಟ್ರಾಕ್ಟರುಗಳೆಲ್ಲಾ ಸೇರಿಕೊಂಡು ಈ ಕೆಲಸ ಮಾಡಿಸಿದ್ದಾರೆ ಎಂದು ಹೇಳಿದ್ದಾರೆ. ಇದೇ ರೀತಿ ಬೇರೆ ಬೇರೆ ರೆಪ್ರಸೆಂಟೇಷನ್‌ಗಳು ನಮಗೆ ಬರುತ್ತಿವೆ. ನಾನು ಅವರು ಹೇಳಿದ್ದು ಸರಿ, ಇವರು ಹೇಳಿದ್ದು ತಪ್ಪು ಎಂದು ವಾದ ಮಾಡುತ್ತಿಲ್ಲ. There are complaints before me ಎಕ್ಸೈಜ್ ಆಕ್ಷನ್‌ನಲ್ಲಿ ಕಂಟ್ರಾಕ್ಟರುಗಳು ಪೈಪೋಟಿಯಲ್ಲಿ ಜಾಸ್ತಿ ಹಣ ಕೊಟ್ಟು ತೆಗೆದುಕೊಂಡರು. ಇದರಿಂದ ಸರ್ಕಾರಕ್ಕೆ 60 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಆದ್ದರಿಂದ ಕಳ್ಳಭಟ್ಟಿ ಕುಡಿಯಲು ಎಲ್ಲಾ ಹೊರಟರೆ ತಮಗೆ ನಷ್ಟವಾಗುತ್ತದೆ

ಎಂದು ಕಳ್ಳಭಟ್ಟಿ ಕುಡಿಯದಂತೆ ಹೆದರಿಕೆ ಹುಟ್ಟಿಸಲು ಕಂಟ್ರಾಕ್ಟರುಗಳು ಮಾಡಿದ್ದಾರೆ ಎಂದು ಅರ್ಜಿ ಬಂದಿದೆ. ಅದು ನಮ್ಮ ಮುಂದಿದೆ. ಅದು ಸರಿಯೋ ತಪ್ಪೋ ನೋಡಬೇಕು. ಸರ್ಕಾರಕ್ಕೆ 60 ಕೋಟಿ ರೂಪಾಯಿ ಕೊಡಬೇಕಲ್ಲ ಎಂದು ಈ ರೀತಿ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಅವರು 60 ಕೋಟಿ ರೂಪಾಯಿಗಳನ್ನು ಟ್ಯಾಕ್ಸ್ ಮೂಲಕ ಕೊಡುತ್ತಿಲ್ಲ. ಆಕ್ಷನ್‌ನಲ್ಲಿ ತೆಗೆದುಕೊಂಡಿದ್ದಾರೆ. ಇದರಲ್ಲಿ ದೊಡ್ಡ ದೊಡ್ಡ ಎಕ್ಸೈಜ್ ಕಂಟ್ರಾಕ್ಟರುಗಳ ಕೈವಾಡ ಇದೆಯೋ ಇಲ್ಲವೋ ಎಂಬುದನ್ನು ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಅಧಿಕಾರಿಗಳ ಕೈವಾಡ ಇದೆ ಎಂದು ಕೆಲವರು ಹೇಳಿದ್ದಾರೆ. ಇನ್ನು ಕೆಲವರು ರಾಜಕೀಯದವರ ಕೈವಾಡ ಇದೆ ಎಂದು ಹೇಳಿದ್ದಾರೆ. ಇನ್ನು ಕೆಲವರು ಎಕ್ಸೈಸ್ ಕಂಟ್ರಾಕ್ಟರುಗಳಿಗೆ ಯಾವ ಯಾವ ರಾಜಕೀಯದವರ ಬೆಂಬಲ ಇದೆಯೋ political people who have got link with the Excise contractors ಅವರ ಕೈವಾಡ ಇದೆ ಎಂದೂ ಹೇಳಿದ್ದಾರೆ. ಯಾವುದು ಸರಿ, ಯಾವುದು ತಪ್ಪು ಎಂದು ಈಗ ತೀರ್ಮಾನ ಮಾಡುವ ಪರಿಸ್ಥಿತಿಯಲ್ಲಿಲ್ಲ. ಎಕ್ಸೈಸ್ ಕಂಟ್ರಾಕ್ಟರುಗಳು, ರಾಜಕೀಯದವರು ಒಟ್ಟಿಗೆ ಸೇರಿ ಇದನ್ನ ಮಾಡಿಸಿದ್ದಾರೆ ಎಂದೂ ಕೆಲವರು ಹೇಳಿದ್ದಾರೆ. ಇದು ಸತ್ಯವೋ ಇಲ್ಲವೋ ಎಂಬುದನ್ನು ತಿಳಿಯಬೇಕಾದರೆ ನ್ಯಾಯಾಂಗ ವಿಚಾರಣೆಯಾಗಬೇಕು. ಮಾಹಿತಿಗಳು ಸಿಗಬೇಕು. ಆದ್ದರಿಂದ ಸರ್ಕಾರ ನೇರವಾಗಿ ಹೈಕೋರ್ಟ್ ಜಡ್ಜ್ ರಿಂದಲೇ ನಿಷ್ಪಕ್ಷಪಾತವಾದ ವಿಚಾರಣೆ ಆಗಬೇಕು ಎಂದು ತೀರ್ಮಾನ ಮಾಡಿ ಅನೌನ್ಸ್ ಮಾಡಿದ್ದೇವೆ. ಆ ದುರ್ಘಟನೆಯಲ್ಲಿ ಶಾಮಿಲಾಗಿರುವವರಿಗೆ ರಕ್ಷಣೆ ಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಲವಲೇಶವೂ ಇಲ್ಲ. ಅವರೆಷ್ಟೇ ದೊಡ್ಡವರಿರಲಿ ಅಥವಾ ಸಣ್ಣವರಿರಲಿ ಈ ದುರ್ಘಟನೆಗೆ ಕಾರಣರಾರೆಂಬುದು ವಿಚಾರಣೆಯಿಂದ ಹೊರಬರುತ್ತದೆ. ಅವರನ್ನು ಹಿಡಿದು ಕಾನೂನು ಪ್ರಕಾರ ಶಿಕ್ಷೆ ಕೊಡಿಸಲಿಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುವ ಮಾರ್ಗದಲ್ಲಿ ಸರ್ಕಾರವಿದೆ. ಈ ಮಧ್ಯೆ ನಮ್ಮ ಅಧಿಕಾರಕ್ಕೊಳಪಟ್ಟು ಏನು ಮಾಡಬೇಕೆನ್ನುವುದರ ಬಗ್ಗೆ ಆಳವಾಗಿ ಯೋಚನೆ ಮಾಡುತ್ತೇವೆ. ಕಾನೂನು ತಜ್ಞರ ಜೊತೆಯಲ್ಲಿ ವಿಚಾರ ಮಾಡುತ್ತಿದ್ದೇವೆ, ಆದುದರಿಂದ, ಇದನ್ನು ಯಾವುದೇ ದೃಷ್ಟಿಯಿಂದ ರಾಜಕೀಯವಾಗಿ ಯಾರೂ ನೋಡಲಿಕ್ಕೆ ಪ್ರಯತ್ನ ಮಾಡಬಾರದು. ನೋಡುವಂಥಾ ವಿಷಯವೂ ಇದಲ್ಲ. ರಾಜಕೀಯವಾಗಿ ನೋಡುವಂಥ ಒಂದೇ ಒಂದು ಅಖಾಡವೆಂದರೆ ಚುನಾವಣೆ, ಮದುವೆ ಮನೆಯಲ್ಲಿ ಹುಟ್ಟಿದ್ದಕ್ಕೂ, ಆಸ್ಪತ್ರೆಯಲ್ಲಿ ಸತ್ತಿದ್ದಕ್ಕೂ ರಾಜಕೀಯ ಮಾಡುತ್ತಾ ಹೋದರೆ ಇದು ಎಲ್ಲಿಗೆ ಹೋಗುತ್ತದೆ? ಸಾಧ್ಯವಿಲ್ಲ. ಜನ ನಗೆಯಾಡುತ್ತಾರೆ. ಮುನ್ನೂರು ಜನ ಸಾಯುತ್ತಿದ್ದಾರೆ. ಸರ್ಕಾರ ಏನೆಲ್ಲ ಪ್ರಯತ್ನ ಮಾಡುತ್ತಿದೆ. ಮುಖ್ಯಮಂತ್ರಿಯಾಗಿ ನಾನು ಎರಡು ಮೂರು ಸಲ ಆಸ್ಪತ್ರೆಗೆ ಭೇಟಿ ನೀಡಿದ್ದೇನೆ, ಅನೇಕ ಸಾರ್ವಜನಿಕ ಮುಖಂಡರು ಹೋಗಿ ನೋಡಿದ್ದಾರೆ. ವೈದ್ಯರು ಮತ್ತು ದಾದಿಗಳು ಊಟ ತಿಂಡಿ ಬಿಟ್ಟು ಹಗಲಿರುಳೆನ್ನದೆ ದುಡಿಯುತ್ತಿದ್ದಾರೆ. ಅಂತೆಯೇ ಪೋಲೀಸ್ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇಂಥಾ ಸಮಯದಲ್ಲಿ ನಾವು ನೊಂದವರಿಗೆ ಏನು ಸಹಾಯ

ಮಾಡಬೇಕೆಂದು ಯೋಚನೆ ಮಾಡೋಣ. Accident is an accident. ಯಾರಿಗೆ ಜೀವ ಕಳೆದುಕೊಳ್ಳುವುದಕ್ಕೆ ಆಸೆ ಇದೆ, ಯಾರಿಗೂ ಇಲ್ಲ. ಆದುದರಿಂದ, ಈ ಘಟನೆ ಬಗ್ಗೆ ಸರ್ಕಾರ ಎಲ್ಲಾ ಕ್ರಮಗಳನ್ನೂ ಕೈಗೊಂಡಿದೆ. ಮತ್ತೆ ನಾವು ಯೋಚನೆ ಮಾಡುತ್ತೇವೆ. ಈ ದುರ್ಘಟನೆಯಲ್ಲಿ ಕಣ್ಣನ್ನು ಕಳೆದುಕೊಂಡವರಿಗೆ ಮಾಸಾಶನ ಕೊಡುವುದಕ್ಕೆ ಯೋಚನೆ ಮಾಡೋಣ. I think we will announce the monthly pension of Rs. 40 or Rs. 50. ಸಣ್ಣಸಣ್ಣ ಮನೆಗಳನ್ನು ಕಟ್ಟಿಸಿಕೊಡೋಣ. ಈ ದುರ್ಘಟನೆಯಿಂದ ಅನಾಥರಾದ ಮಕ್ಕಳಿಗೆ ಅವರು ದೊಡ್ಡವರಾಗಿ ಬೆಳೆಯುವವರೆಗೂ ನಗರಸಭೆಯ ಅನಾಥ ಶಾಲೆಗಳಲ್ಲಿ ಅಥವಾ ಖಾಸಗಿ ಅನಾಥ ಶಾಲೆಗಳಲ್ಲಿ ಅವಕಾಶ ಕಲ್ಪಿಸಿಕೊಡೋಣ. ಒಂದು ತಿಂಗಳ ಸಂಬಳವನ್ನು ಈ ದುರ್ಘಟನೆಯಲ್ಲಿ ನೊಂದವರಿಗಾಗಿ ಕೊಡಿರೆಂದು ನಮ್ಮ ಪಕ್ಷದ ಸದಸ್ಯರನ್ನು ನಾನು ಕೇಳಿಕೊಳ್ಳುತ್ತೇನೆ. ಇಂಥಾ ದುರ್ಘಟನೆ ನಡೆದಿರುವಾಗಲೂ ವಿರೋಧ ಪಕ್ಷದವರು ವಿಧಾನ ಸಭೆಗೆ ಬರುವುದಕ್ಕೆ ಮನಸ್ಸು ಮಾಡಿಲ್ಲ. ನಾವೇನು ಮಾಡೋಣ? ನಾವೀಗ 183 ಜನ ಸದಸ್ಯರಿದ್ದೇವೆ. ಮೇಲ್ಮನೆಯಲ್ಲಿ 25 ಜನರಿದ್ದೇವೆ. ನಾನು ನಮ್ಮ ಪಕ್ಷದ ನಾಯಕನಾಗಿ ಹೇಳುತ್ತಿದ್ದೇನೆ. ನಾವು 220 ಜನರು ಒಂದು ತಿಂಗಳ ಸಂಬಳವನ್ನು ನಿರ್ಗತಿಕರ ಕುಟುಂಬದವರಿಗೆ ಕೊಡೋಣ. ಅವರಿಗೆ ನೇರವಾಗಿ ಹಣವನ್ನೇ ಕೊಡುವುದು ಬೇಡ. ಅವರ ಪುನರ್ವಸತಿ, ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವ ಬಟ್ಟೆ ಹೊಲಿಸಿ ಕೊಡುವ ಮತ್ತು ಕಣ್ಣು ಕಾಣದೆ ಹೋದವರಿಗೆ ಚಿಕಿತ್ಸೆ ಮಾಡಿ ಪುನಃ ದೃಷ್ಟಿ ಬರುವಂತೆ ಮಾಡಲು ನಮ್ಮ ರಾಜ್ಯದಲ್ಲಿ ಅಥವಾ ನಮ್ಮ ರಾಷ್ಟ್ರದಲ್ಲಿ ಆಗದಿದ್ದರೆ ಬೇರೆ ರಾಷ್ಟ್ರಕ್ಕೆ ಕಳುಹಿಸುವುದಾದರೆ ಅದಕ್ಕಾಗುವ ಹಣವನ್ನೂ ಸಹ ಸರ್ಕಾರ ಭರಿಸಲು ನಮ್ಮ ಸರ್ಕಾರ ತಯಾರಿದೆ ಎಂದು ಹೇಳಬಯಸುತ್ತೇನೆ. ಇಪ್ಪತ್ತು ಸಾವಿರ ಅಥವಾ ಮೂವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಕಣ್ಣು ಬರುತ್ತದೆಂದು ಹೇಳಿದರೆ ಅದಕ್ಕೂ ನಾನು ಸಿದ್ಧ. ಈ ರೀತಿ ನಾವು ಕೆಲಸ ಮಾಡೋಣ. ಆಮೇಲೆ ಲೀಗಲ್ ಸೈಡಿನಲ್ಲೋ ನಮ್ಮಲ್ಲೇ ಒಂದು ಸಮಿತಿ ಮಾಡೋಣ. ಅದರಲ್ಲಿ ವಕೀಲರನ್ನೂ ಸೇರಿಸೋಣ. ಅಂತೂ ನಮ್ಮ ಪಕ್ಷದ ಮಟ್ಟದಲ್ಲಿ ಮಾಡೋಣ. ನಾವೆಲ್ಲ ಸೇರಿ ಇದನ್ನು ನಿಲ್ಲಿಸುವುದಕ್ಕೆ ಮತ್ತು ತಪ್ಪು ಮಾಡಿದವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡೋಣ. ಶಿಕ್ಷೆಯ ಅವಧಿಯನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡೋಣ. ಆದರೆ, ಶಿಕ್ಷೆ ವಿಧಿಸುವಂಥ ಅಧಿಕಾರ ನ್ಯಾಯಾಧೀಶರಿಗೆ ಬಿಟ್ಟಿದ್ದು. ಎರಡು ವರ್ಷಗಳ ಶಿಕ್ಷೆ ಇರುವುದನ್ನು ಬೇಕಾದರೆ ಹತ್ತು ವರ್ಷವೆಂದು ಮಾಡೋಣ. ಆದರೆ ತೀರ್ಮಾನ ಮಾತ್ರ ನ್ಯಾಯಾಲಯಕ್ಕೆ ಬಿಟ್ಟಿದ್ದು. ಜೊತೆಗೆ ಇಂತಹ ಸಂದರ್ಭಗಳಲ್ಲಿ ಖುದ್ದು ಸಾಕ್ಷ್ಯ ಅಗತ್ಯವೇ ಅಥವಾ ಅಗತ್ಯವಿಲ್ಲವೇ ಎನ್ನುವುದರ ಬಗ್ಗೆಯೂ ಯೋಚನೆ ಮಾಡೋಣ. ಅಬ್ಕಾರಿ ವಿಭಾಗದವರು ಮತ್ತು ಪೋಲೀಸಿನವರು ದಾಳಿ ಮಾಡಿದಾಗ ಅವರು ಯಾವ ರೀತಿ ನಡೆದುಕೊಳ್ಳಬೇಕೆನ್ನುವುದರ ಬಗ್ಗೆಯೂ ಕಾನೂನು ಮಾಡೋಣ. ಇದೆಲ್ಲ ಚರ್ಚೆ ಮಾಡಿ ಮಾಡೋಣ. ಬೇಕಾದರೆ

ಅಬ್ಕಾರಿ ಇಲಾಖೆ ಬೇಡಿಕೆ ಮೇಲಿನ ಚರ್ಚೆ ಬಂದಾಗ ಸಲಹೆ ಕೊಡಿ. ಪೋಲಿಸ್ ಇಲಾಖೆ ಬಂದಾಗಲೂ ಸಲಹೆ ಕೊಡಿ. ಆದರೆ, ಅವರಿಗೆ ಇದಾವುದೂ ಬೇಡ, ನಾವೇನು ಹೇಳಿದರೂ ಅವರದೊಂದೇ ಒಂದು ಅಂಶದ ಕಾರ್ಯಕ್ರಮ. ಅದಕ್ಕೆ ನಾವೇನು ಮಾಡೋಣ? ಅವರ ಒಂದು ಅಂಶದ ಕಾರ್ಯಕ್ರಮ ಇಟ್ಟುಕೊಂಡು ಮನೆಯಲ್ಲಿ ಬೆಂಕಿ ಕಾಸುತ್ತಾ ಕುಳಿತುಕೊಂಡಿರಲಿ. ನಾನಿದರ ಬಗ್ಗೆ ಯೋಚನೆ ಮಾಡುವುದಿಲ್ಲ. ಆದರ ಬಗ್ಗೆ ಚಿಂತೆಯೂ ನನಗಿಲ್ಲ. ನಮಗೆ ಸಮಾಜದ ಸಹಕಾರ ಸಾರ್ವಜನಿಕ ಮುಖಂಡರ ಸಹಕಾರ, ರಾಜಕೀಯ ಮುಖಂಡರ ಸಹಕಾರ, ಪ್ರತಿಯೊಬ್ಬ ವಿದ್ಯಾವಂತರ ಸಹಕಾರ ಮತ್ತು ಎಲ್ಲ ಶಾಸಕರ ಸಹಕಾರ ಮತ್ತು ಸಲಹೆಗಳನ್ನು ನೀಡಲಿ. ಇದನ್ನು ನಿಲ್ಲಿಸಲು ಉಗ್ರ ರೂಪದ ಶಾಸನ ತರೋಣ. ಒಂದು ವೇಳೆ ನಮ್ಮ ಸಾಲಪ್ಪನವರು, ಹನುಮೇಗೌಡರು ಮತ್ತು ಆನಂದರಾಯರು ಹೇಳಿದ ಹಾಗೆ ನಮ್ಮ ರಾಜ್ಯಾಂಗ ಅವಕಾಶ ಕೊಡುವುದಾದರೆ ಯಾರು ಯಾರು ಕಳ್ಳಭಟ್ಟಿ ತಯಾರ ಮಾಡುತ್ತಾರೆ ಅಂಥವರಿಗೆ 50 ರಿಂದ 100 ಚಡಿ ಏಟುಗಳನ್ನು ನೀಡಲು ಕಾನೂನು ಮಾಡುವುದಕ್ಕೂ ತಯಾರಾಗಿದ್ದೇನೆ. ವಿಧಾನಸೌಧದ ಬಳಿ ನಿಲ್ಲಿಸಿ ಛಡಿ ಏಟು ಕೊಡುವುದಕ್ಕೂ ಸಿದ್ಧನಾಗಿದ್ದೇನೆ. ಆದರೆ ಈಗಿನ ಕಾನೂನು ಹಾಗ ಮಾಡುವಂತೆ ಬರುವುದಿಲ್ಲ. ಕೆಲವು ಸದಸ್ಯರು ಇಂಥವರನ್ನು ಗಡೀಪಾರು ಮಾಡಿ ಎಂದು ಹೇಳಿದರು. ಆದರೆ, ಇಂಥಾ ಅಪರಾಧಿಗಳಿಗೆ ಗಡೀಪಾರು ಮಾಡಲು ಯಾವ ನ್ಯಾಯಾಲಯವೂ ಒಪ್ಪುವುದಿಲ್ಲ. ಅದು ಬಹಳ ಕಷ್ಟ. ಒಂದೆರಡು ಗಡೀಪಾರು ಪ್ರಕರಣಗಳಲ್ಲಿ ಸರ್ಕಾರ ಪ್ರಯತ್ನ ಮಾಡಿದ್ದರೂ ಅದಿನ್ನೂ ನ್ಯಾಯಾಲಯದಿಂದ ಆಗಿಲ್ಲ. ಆದರೂ, ಇದನ್ನೂ ಯೋಚನೆ ಮಾಡೋಣ. ಇದೇ ರೀತಿ ಮಾಡಬೇಕೆನ್ನುವುದು ಸರ್ಕಾರದ ಪ್ರತಿಷ್ಠೆ ಇಲ್ಲ. ಇದು ಬಡವರ ಅಳಿವು ಮತ್ತು ಉಳಿವಿನ ಪ್ರಶ್ನೆ. ಇದರ ಬಗ್ಗೆ ಎಲ್ಲರೂ ಕುಳಿತು ಚರ್ಚೆ ಮಾಡಿ ಒಳ್ಳೆಯದನ್ನು ಮಾಡುವುದಕ್ಕೆ ತಯಾರಾಗಿದ್ದೇನೆ.

ಮತ್ತೆ ಕೆಲವು ಸದಸ್ಯರು ಮಾತನಾಡುತ್ತಾ, ಆಸ್ಪತ್ರೆಯಲ್ಲಿ ಬೇಕಾದಷ್ಟು ಶವಗಳ ಮರಣೋತ್ತರ ಪರೀಕ್ಷೆಯಾಗಿಲ್ಲವೆಂದು ಶಂಕೆಯನ್ನು ವ್ಯಕ್ತ ಮಾಡಿದರು. ಆಸ್ಪತ್ರೆಗೆ ನಾನು ಮತ್ತೆ ಭೇಟಿ ಕೊಟ್ಟಿದ್ದೆ. ಅಲ್ಲಿ ಒಂದು ಶವವೂ ಬಾಕಿ ಇಲ್ಲ. ಎಲ್ಲ ಶವಗಳ ಸಂಸ್ಕಾರವೂ ಮುಗಿದಿದೆ. ನಾನೇ ನೋಡಿಕೊಂಡು ಬಂದಿದ್ದೇನೆ. ಕೆಲವರು ಹಾರಿಕೆ ಸುದ್ದಿ ಹರಡುವವರಿರುತ್ತಾರೆ. ಒಂದು ಸಾವಿರ ಜನ ಸತ್ತು ಹೋಗಿದ್ದಾರೆಂದು ವರ್ತಮಾನ ಬಂದಿದೆ. ಬೇರೆ ಬೇರೆ ಕಾರಣದಿಂದ ಸತ್ತಿರಬಹುದು. ಊರಲ್ಲಿ ಸತ್ತಿರುವವರೆಲ್ಲಾ ಈ ಕಾರಣದಿಂದಲೇ ಸತ್ತು ಹೋಗಿದ್ದಾರೆಂದು ಹೇಳುವುದು ಬೇಡ. ಇವತ್ತು ಅವರೆಲ್ಲಾ ಸತ್ತುಹೋಗಿದ್ದಕ್ಕೆ, ನಮಗೆ ಬರತಕ್ಕ ಮತಗಳು ಹೋದವಲ್ಲ ಎನ್ನುವ ಯೋಚನೆ ಇದೆ; ಕಾರ್ಪೊರೇಷನ್ ಎಲೆಕ್ಷನ್ ಬಂತು, ನಮಗೆ 300-400 ಓಟುಗಳು ಹೋಯಿತು ಎನ್ನುವ ಯೋಚನೆ ಇದೆ. ರಾಜಕೀಯವಾಗಿಯೂ ಯೋಚನೆ ಇದೆ; ದುರ್ಘಟನೆ ನಡೆದಿದೆ, ಸಹಾಯ ಮಾಡಬೇಕೆನ್ನುವ ಯೋಚನೆ ಇದೆ. ನೊಂದಿರತಕ್ಕವರಿಗೆ ಸಹಾಯ ಮಾಡೋಣ; ಗಾಬರಿಯಾಗಬೇಕಾಗಿಲ್ಲ. ಶಾಸಕರಾದ ತಮಗೆ ಪೂರ್ತಿಯಾದ ಸ್ವಾತಂತ್ರ್ಯ ಇದೆ; ತಾವು ಆಸ್ಪತ್ರೆಗಳಿಗೆ ಹೋಗಿ

ನೋಡಿಕೊಂಡು ಬರಬಹುದು. ಆಸ್ಪತ್ರೆಯಲ್ಲಿರತಕ್ಕವರುಗಳ ಬಗ್ಗೆ ವೈದ್ಯರು ಸರಿಯಾದ ಕ್ರಮ ತೆಗೆದುಕೊಳ್ಳದೇ ಇದ್ದರೆ ನನಗೆ ಫೋನ್ ಮಾಡಿ; ಆರೋಗ್ಯ ಮಂತ್ರಿಗಳಿಗೆ ಫೋನ್ ಮಾಡಿ; ಇವತ್ತು ಆಸ್ಪತ್ರೆಯಲ್ಲಿ ಪ್ರತಿಯೊಂದು ಹೆಣವನ್ನು ಪೋಸ್ಟ್ ಮಾರ್ಟಮ್ ಏತಕ್ಕೆ ಮಾಡಬೇಕು? ಇದರ ಉದ್ದೇಶವೇನು? ಎಲ್ಲವನ್ನೂ ನೋಡಬೇಕಾಗುತ್ತದೆ. We must say compliments to the Health Department, Police Deaprtment and Excise Department, because day and night they have worked. I have seen with my own eyes. Forgetting their family, forgetting their Health and forgetting everything, right from a common sweeper to officers, compounders, doctors and surgeons have worked..... ಮಾನ್ಯ ಅಧ್ಯಕ್ಷರೇ, ಎಷ್ಟೋ ಸಾರಿ ಚರ್ಚೆಗಳಾಗಿವೆ, ಖಾಸಗಿ ಆಸ್ಪತ್ರೆಗಳಲ್ಲಿ ಒಳ್ಳೆಯ ಚಿಕಿತ್ಸೆ ಸಿಗುತ್ತದೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಗುವುದಿಲ್ಲವೆಂದು ಹೇಳುತ್ತಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಯಾರಿಗೆ ಸಿಗುತ್ತೆ? ದೊಡ್ಡ ದೊಡ್ಡವರಿಗೆ ಸಿಗುತ್ತೆ; ಹಣ ಕೊಡತಕ್ಕವರಿಗೆ ಸಿಗುತ್ತೆ; ಸರ್ಕಾರೀ ಆಸ್ಪತ್ರೆಗಳಲ್ಲಿ ವೈದ್ಯರುಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಾರೆಂಬುದನ್ನು ನೋಡಬೇಕಾದರೆ ಇಂಥ ಘಟನೆಗಳು ಸರ್ಕಸ್ ಘಟನೆಗಳು ನಡೆದಂತ ಸಂದರ್ಭದಲ್ಲಿ ಹೋಗಿ ನೋಡಬೇಕು. ಒಂದೊಂದು ಸಾರಿ 100-150 ಹೆಣಗಳನ್ನು ಆಪರೇಷನ್ ಮಾಡಬೇಕಾಗುತ್ತೆ; ಔಷಧಿ ಕೊಡಬೇಕಾಗುತ್ತೆ; ಎಷ್ಟು ಕಷ್ಟ ಇದೆ ಎನ್ನುವುದು ಗೊತ್ತಾಗುತ್ತದೆ. ಎಷ್ಟೇ ಕಷ್ಟ ಇದ್ದರೂ ಕೂಡ ನಗುಮುಖದಿಂದ, ಸಂತೋಷದಿಂದ, ಆಸ್ಪತ್ರೆಯ ಸಿಬ್ಬಂದಿಯವರು ಕೆಲಸ ಮಾಡುತ್ತಿರುವುದನ್ನು ನೋಡಬಹುದು. ಕೆಲವು ಆಸ್ಪತ್ರೆಗಳಲ್ಲಿ ಔಷಧಿ ಇಲ್ಲದೇ ಇರಬಹುದು. ಇಂಥ ಅಪಘಾತಗಳು ಆದಾಗ, ಸನ್ನಿವೇಶಗಳು ಬಂದಾಗ ಸರ್ಕಾರೀ ಆಸ್ಪತ್ರೆಯ ಸಿಬ್ಬಂದಿಯವರು ಸಾಮೂಹಿಕವಾಗಿ ಕೆಲಸ ಮಾಡುತ್ತಾರೆ. ಮೇಲಿನ ಅಧಿಕಾರಿಗಳಿಂದ ಹಿಡಿದು ಕೆಳಗಿನ ಸಿಬ್ಬಂದಿಯವರೆಗೂ ಸಾಮೂಹಿಕವಾಗಿ ಕೆಲಸ ಮಾಡುತ್ತಾರೆ. We can announce ex-gratia to such people who are getting salary. ಒಂದು ತಿಂಗಳ ಸಂಬಳವನ್ನು ಇವರಿಗೆ ಕೊಡಬೇಕಾಗುತ್ತೆ. ಇವತ್ತು ಅವರು ಅಷ್ಟು ಶ್ರಮದಿಂದ ಕೆಲಸ ಮಾಡಿದ್ದಾರೆ. ಸರ್ಕಾರ ಎಲ್ಲವನ್ನೂ ಗಮನಿಸಿದೆ; ಮುಂದೆ ಈ ರೀತಿ ಆಗದ ಹಾಗೆ ಸರ್ವ ಪ್ರಯತ್ನವನ್ನೂ ಮಾಡೋಣ. ತಿರುಪತಿಗೆ, ಮಂತ್ರಾಲಯಕ್ಕೆ ಹೋಗುವಾಗ ಬಸ್ಸು ಬಿದ್ದು ಸಾಯುತ್ತಾರೆ, ವಿಮಾನ ಹೋಗುವಾಗ ಬಿದ್ದು ಹೋಗುತ್ತೆ, ರೈಲು ಹೋಗುವಾಗ ಬಿದ್ದು ಸಾಯುತ್ತಾರೆ. ಇನ್ನು ಮುಂದೆ ಈ ರೀತಿ ಆಗುವುದಿಲ್ಲವೆಂದು ನಾನು ಭರವಸೆ ಕೊಡುವುದಕ್ಕೆ ದೇವರಲ್ಲ; ವಶಿಷ್ಟ, ವಿಶ್ವಾಮಿತ್ರರಲ್ಲ. ಸಮಾಜದಲ್ಲಿರತಕ್ಕ ಸಮಾಜ ಸುಧಾರಕರು, ಕಾರ್ಯಕರ್ತರು, ಸಿಕ್ಕಿಸಿಕ್ಕಿದ ಕಡೆಯಲ್ಲಿ ಕಂಡಕಂಡಲ್ಲಿ ಕಳ್ಳಭಟ್ಟಿ ಕುಡಿಯಬೇಡಿ ಎಂದು ಬುದ್ಧಿ ಹೇಳಿ; ಮನುಷ್ಯ ಪ್ರಯತ್ನ ಮೀರಿ ನಡೆದರೆ ನಾವು, ನೀವು ಜವಾಬ್ದಾರರಲ್ಲ. ಸರ್ವ ಪ್ರಯತ್ನವನ್ನೂ ಮಾಡೋಣ.

## ಪ್ರತಿಪಕ್ಷ ಇಲ್ಲದ ಶಾಸನಸಭೆಯಲ್ಲಿ ಮಾಡಿದ ಭಾಷಣ

ಜುಲೈ 16ನೇ 1981ರಲ್ಲಿ ಶ್ರೀ ಗುಂಡೂರಾವ್ ಮುಖ್ಯಮಂತ್ರಿಗಳಾಗಿದ್ದಾಗ ಕರ್ನಾಟಕ ವಿಧಾನಮಂಡಲದಲ್ಲಿ ಹಲವಾರು ವಾರಗಳ ಕಾಲ ಪ್ರಮುಖ ಪ್ರತಿಪಕ್ಷ ನಾಯಕರುಗಳಿಲ್ಲದೆ, ಕೆಳಮನೆ ಕಲಾಪ ನಡೆಯಿತು. ಸಚಿವ ಶ್ರೀ ಸಿ.ಎಂ. ಇಬ್ರಾಹಿಂ ಅವರ ರಾಜೀನಾಮೆಗೆ ಆಗ್ರಹ ಪಡಿಸಿ, ಸದನ ಕಲಾಪಕ್ಕೆ ಅಡ್ಡಿ ಪಡಿಸಿದರೆಂಬ ಹಿನ್ನೆಲೆಯಲ್ಲಿ ಶ್ರೀ ಡಿ. ದೇವರಾಜ ಅರಸ್, ಶ್ರೀ ಜೆ. ಎಚ್. ಪಟೇಲ್ ಮತ್ತು ಶ್ರೀ ಎ. ಲಕ್ಷ್ಮೀಸಾಗರ್ ಸೇರಿದಂತೆ ಅನೇಕ ಪ್ರಮುಖ ವಿರೋಧಪಕ್ಷ ನಾಯಕರುಗಳ ಅಮಾನತು ಆಯಿತು. ರಾಜ್ಯದ ಅಭ್ಯುದಯಕ್ಕೆ ಸಂಬಂಧಪಟ್ಟಂತೆ ಚರ್ಚೆ ಪ್ರತಿಪಕ್ಷ ಇಲ್ಲದಿದ್ದಾಗ ಹೇಗೆ? ಪ್ರತಿಪಕ್ಷಗಳ ಹೊಣೆಗಾರಿಕೆ ಏನು, ಅವರ ವರ್ತನೆ ಹೇಗಿರಬೇಕು ಎಂಬುದೆಲ್ಲದರ ಬಗ್ಗೆ ಅಮಾನತು ನಿರ್ಣಯ ವಾಪಸ್ ಪಡೆಯುವ ನಿರ್ಣಯದ ಮೇಲೆ ಮಾತನಾಡುತ್ತಾ ಗುಂಡೂರಾವ್ ತಮ್ಮ ಸ್ವಾಭಿಮಾನದ ಅನಿಸಿಕೆಗಳನ್ನು ಈ ರೀತಿ ಪ್ರಕಟಿಸಿದರು.

ಅಧ್ಯಕ್ಷರು : ಈ ಕಾರ್ಯಕ್ರಮ ಪಟ್ಟಿಯಲ್ಲಿ ಸೂಚಿತವಾಗಿರುವಂತೆ ಮುಂದಿನ ಐಟಂನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ನಾನು ಒಂದು ವಿಚಾರವನ್ನು ನಿಮ್ಮೆಲ್ಲರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ಸದನದ ಮಾನ್ಯ ಸದಸ್ಯರಿಗೆ ಜ್ಞಾಪಕ ಇದೆ, ಕಳೆದ ತಿಂಗಳು 23ನೇ ತಾರೀಖಿನ ದಿವಸ ಅನಿವಾರ್ಯವಾಗಿ ಈ ಸಭೆಯಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಒದಗಿ ಬಂತು. ಆ ನಿರ್ಣಯದ ಪ್ರಕಾರ ಈ ಸಭೆಯ ಮಾನ್ಯ ವಿರೋಧಪಕ್ಷದ ಸದಸ್ಯರನ್ನು ಈ ಅಧಿವೇಶನದ ಅಂತ್ಯದವರೆಗೆ ಸಸ್ಪೆಂಡ್ ಮಾಡಲಾಗಿದೆ. ಇದು ಈ ಸದನದ ಮಾನ್ಯ ಸದಸ್ಯರೆಲ್ಲರಿಗೂ ಜ್ಞಾಪಕವಿರಬಹುದು. ಅವತ್ತಿನ ದಿವಸ ಆ ಒಂದು ನಿರ್ಣಯ ಈ ಸಭೆಯಲ್ಲಿ ಬಂದು ಅದನ್ನು ಇಲ್ಲಿ ಮೂವ್ ಮಾಡಿದ ಮೇಲೂ ಕೂಡ ನನಗೆ ಇದ್ದಂಥ ಒಂದು ಅವಕಾಶ ಎಂದರೆ ಅದನ್ನು ಓಟಿಗೆ ಹಾಕತಕ್ಕಂಥಾದ್ದು. ಅದನ್ನು ಓಟಿಗೆ ಹಾಕತಕ್ಕಂಥ ಸಮಯದಲ್ಲಿ ಕೂಡ ಮಾನ್ಯ ವಿರೋಧಪಕ್ಷದ ಸದಸ್ಯರು ಅವರವರ ಜಾಗಕ್ಕೆ ಹೋಗಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಂಡೆ. ಅದು ಆಗದಿದ್ದಂಥ ಪರಿಸ್ಥಿತಿ ಬಂದದ್ದರಿಂದ ನಾನು ಅನಿವಾರ್ಯವಾಗಿ ಭಾರವಾದ ಹೃದಯದಿಂದ ಅದನ್ನು ಓಟಿಗೆ ಹಾಕಬೇಕಾಗಿ ಬಂತು, ಈ ಸಭೆ ಅದಕ್ಕೆ ಅನುಮೋದನೆಯನ್ನು ಕೊಟ್ಟಿತು. ಈ ಸಭೆಯ ಕಾರ್ಯ ಕಲಾಪಗಳು ಸುಸೂತ್ರವಾಗಿ, ಯಾವುದೇ ಅಡ್ಡಿ ಆತಂಕವಿಲ್ಲದೇ, ಟೀಕೆಟಿಪ್ಪಣಿಗಳು ಹಾಗೂ ಸಲಹೆಗಳಿಂದ, ಪ್ರತಿಯೊಬ್ಬನಿಗೂ ಎಷ್ಟು ಪ್ರಾಮುಖ್ಯತೆಯನ್ನು ಕೊಡಬೇಕೋ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟುಕೊಂಡು ನಡೆಯಬೇಕು ಎನ್ನತಕ್ಕಂಥಾದ್ದು ಈ ಸದನದ ಅಭಿಪ್ರಾಯ. ಯಾವುದೇ ದೃಷ್ಟಿಯಿಂದ ಟೀಕೆಗಳನ್ನಾಗಲೀ, ಸಲಹೆಗಳನ್ನಾಗಲೀ ಮೊಟಕು ಮಾಡತಕ್ಕಂಥಾದ್ದು ಈ ಸದನದಲ್ಲಿ ಯಾರ ಅಭಿಪ್ರಾಯವೂ ಅಲ್ಲ. ಏನೇ ಆದರೂ

---

ವಿ.ಸ.ನ. ದಿನಾಂಕ: 16-7-1981

ಮಾನ್ಯ ವಿರೋಧ ಪಕ್ಷದವರ ಸಸ್‌ಪೆನ್‌ಷನ್ ಆಯಿತು. ಅದು ಆಗಿ ಇಲ್ಲಿಗೆ ಸುಮಾರು 3 ವಾರ ಆಯಿತು. ಇದಾದ ಮೇಲೆ ಕೂಡ ನಾನು ಮಾನ್ಯ ವಿರೋಧಪಕ್ಷದ ಮಿತ್ರರ ಜೊತೆಯಲ್ಲಿ ಈ ಸಭೆಗೆ ಅವರು ಹಾಜರಾಗುವ ಬಗ್ಗೆ ಮಾತನಾಡುವುದಕ್ಕೆ ಪ್ರಯತ್ನಪಟ್ಟೆ. ಆ ಪ್ರಯತ್ನವನ್ನು ನಾನು ಮುಂದುವರಿಸಿಕೊಂಡು ಹೋದೆ. ನಾನು ಮಾನ್ಯ ವಿರೋಧಪಕ್ಷದ ಸದಸ್ಯರ ಜೊತೆಯಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಕೂಡ ಈ ಬಗ್ಗೆ ಮಾತನಾಡಿದೆ. ಆದರೆ ಈ ದಿಶೆಯಲ್ಲಿ ನನ್ನ ಪ್ರಯತ್ನ ಫಲ ಕೊಡಲಿಲ್ಲ. ಮತ್ತು ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಮಾನ್ಯ ವಿರೋಧಪಕ್ಷದವರನ್ನು ಹೆಚ್ಚು ದಿವಸಗಳ ಕಾಲ ಸಭೆಯಿಂದ ಹೊರಗಿಟ್ಟು ಇಲ್ಲಿ ಕಾರ್ಯಕಲಾಪಗಳನ್ನು ಮಾಡತಕ್ಕಂಥಾದ್ದು ಸರಿಯಲ್ಲ ಎಂದು ನನ್ನ ಮನಸ್ಸಿಗೆ ಬಂದದ್ದರಿಂದ ಮತ್ತು ಈಗಾಗಲೇ ಈ ಸಭೆ ಏನೊಂದು ತೀರ್ಮಾನವನ್ನು ತೆಗೆದುಕೊಂಡಿದೆ ಅದನ್ನು ವಜಾ ಮಾಡತಕ್ಕಂಥ ಒಂದು ನಿರ್ಣಯವನ್ನು ಮಾನ್ಯ ಸಭಾನಾಯಕರು ಇಲ್ಲಿ ಮಂಡಿಸಿ ಮಾನ್ಯ ವಿರೋಧಪಕ್ಷದ ಸದಸ್ಯರು ಈ ಸಭೆಗೆ ಬಂದು ಈ ಸದನದ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದು ಸೂಕ್ತ ಎಂದು ನನಗೆ ಅನ್ನಿಸಿದ್ದರಿಂದ, ನಾನು ಈ ಒಂದು ವಿಚಾರವನ್ನು ಅವರ ಮುಂದೆ ಇಡುತ್ತಿದ್ದೇನೆ. ಬಹಳ ಮಟ್ಟಿಗೆ ನನಗಾದರೂ ಅನ್ನಿಸುತ್ತಿದೆ, ರಾಷ್ಟ್ರದ ಯಾವುದೇ ರಾಜ್ಯದ ವಿಧಾನಸಭೆಯಲ್ಲಾಗಲೀ ಅಥವಾ ಪಾರ್ಲಿಮೆಂಟ್‌ನಲ್ಲಾಗಲೀ ಮಾನ್ಯ ಅಧ್ಯಕ್ಷರು ಈ ಮಾತನ್ನು ಹೇಳತಕ್ಕಂಥ ಇಂತಹ ಒಂದು ಸಂಪ್ರದಾಯ ನನ್ನ ಕಣ್ಣಿಗೆ ಬಿದ್ದಿಲ್ಲ. ಈ ಒಂದು ಸಂಪ್ರದಾಯಕ್ಕೆ ಎಲ್ಲಿಯೂ ಕೂಡ ಒಂದು ಆಧಾರ ಸಿಕ್ಕದಿದ್ದರೂ ಸಹ ಇಲ್ಲಿ ಇಂತಹ ಒಂದು ಹೊಸ ಸಂಪ್ರದಾಯವನ್ನು ಪ್ರಥಮವಾಗಿ ಹಾಕಿದರೆ ತಪ್ಪಾಗಲಾರದು ಎನ್ನತಕ್ಕಂಥ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.ಆದ್ದರಿಂದ ನಾನು ಮಾನ್ಯ ಸಭಾನಾಯಕರ ಮುಂದೆ ಈ ಒಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ಸಭಾನಾಯಕರು ಈ ಬಗ್ಗೆ ಸೂಕ್ತವಾಗಿ ಯೋಚನೆ ಮಾಡಿ ನನ್ನ ಈ ಒಂದು ಮನವಿಗೆ ಮನ್ನಣೆ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ.

**ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಯವರು)** : ಮಾನ್ಯ ಅಧ್ಯಕ್ಷರೇ, ಕಳೆದ ತಿಂಗಳು 23ನೇ ತಾರೀಖಿನಲ್ಲಿ ಈ ನಮ್ಮ ಶಾಸನ ಸಭೆಯಲ್ಲಿ ನಡೆದ ಘಟನೆ ಬಗ್ಗೆ ತಾವು ಹೇಳಿದ್ದೀರಿ. ಈ ಒಂದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ವಿರೋಧಪಕ್ಷಗಳು ಮತ್ತು ಆಡಳಿತಪಕ್ಷದವರು ಸಹಕಾರದಿಂದ ನಡೆದುಕೊಂಡು ಹೋಗುವಂಥಾದ್ದು ಮತ್ತು ಎಲ್ಲಿ ಸರ್ಕಾರದ ಲೋಪದೋಷಗಳು ಇರುತ್ತದೆ ಆ ಲೋಪದೋಷಗಳನ್ನು ಎತ್ತಿ ಹಿಡಿದು ತೋರಿಸುವಂಥಾದ್ದು ಮತ್ತು ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಸರ್ಕಾರಕ್ಕೆ ಅವಕಾಶ ಕೊಡುವಂಥಾದ್ದು ಈ ಒಂದು ಪದ್ಧತಿಯ ಪ್ರಕಾರ ನಡೆದುಕೊಂಡು ಬರುತ್ತಾ, ಇದೆ. ನಮ್ಮ ರಾಜ್ಯಾಂಗದಲ್ಲಿರುವ ಪ್ರಕಾರ ಚುನಾವಣೆ ನಡೆದು ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಅದರಲ್ಲಿ ಗೆದ್ದು ಬರುತ್ತಾರೆ. ಯಾವ ಪಕ್ಷದ ಸದಸ್ಯರು ಹೆಚ್ಚಿನ ಬಹುಮತದಿಂದ ಚುನಾವಣೆಯಲ್ಲಿ ಗೆದ್ದು ಬರುತ್ತಾರೋ

ಅವರು ರಾಜ್ಯದ ಅಧಿಕಾರ ಸೂತ್ರವನ್ನು ಹಿಡಿದುಕೊಳ್ಳುತ್ತಾರೆ. ನಮ್ಮ ರಾಜ್ಯದ ಈ ಒಂದು ಶಾಸನಸಭೆಯ ಇತಿಹಾಸದಲ್ಲಿ ಅನೇಕ ಸಾರಿ ಈ ತರಹ ಘಟನೆ ನಡೆದಿದೆ. ಹಾಗೆ ನಡೆದಂಥ ಸಂದರ್ಭದಲ್ಲಿ ವಿರೋಧಪಕ್ಷದವರನ್ನು ಅನೇಕ ಸಂದರ್ಭಗಳಲ್ಲಿ ಈ ಸಭೆಯಿಂದ ಹೊರಗೆ ಹಾಕಿರುವಂಥಾದ್ದು ಇದೆ. ಆದರೆ ಇಲ್ಲಿ ವಿರೋಧಪಕ್ಷದವರು ತೆಗೆದುಕೊಂಡಂಥ ನಿಲುವು ಮತ್ತು ಕಾರಣ ಏನು ಎಂಬುದು ಬಹಳ ಮುಖ್ಯ. ಈಗ ನಮ್ಮ ಮುಂದೆ ಇರತಕ್ಕಂಥ ವಿಷಯ ಮುಖ್ಯವಾದದ್ದು ಮಾನ್ಯ ವಿರೋಧಪಕ್ಷದವರು ಒಬ್ಬ ಮಂತ್ರಿಯನ್ನು ಮಂತ್ರಿಮಂಡಲದ ಸದಸ್ಯ ಸ್ಥಾನದಿಂದ ತೆಗೆದುಹಾಕಬೇಕು, ಅವರನ್ನು ತೆಗೆದು ಹಾಕದೇ ಹೋದರೆ ನಾವು ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಬಿಡುವುದಿಲ್ಲ ಎಂದು ಹೇಳುವಂಥ ನಿಲುವನ್ನು ತೆಗೆದುಕೊಂಡರು. ಇದು ಬಹಳ ಪ್ರಾಮುಖ್ಯ ಪಡೆದಂಥ ಸಭೆ. ಕಾರಣವೇನೆಂದರೆ ಈ ರಾಜ್ಯದಲ್ಲಿ ಒಂದು ವರ್ಷದಲ್ಲಿ ಏನೆಲ್ಲಾ ಪ್ರಗತಿಯಾಗಬೇಕು, ನಾನಾ ಮುಖದಲ್ಲಿ ಏನೇನು ಅಭಿವೃದ್ಧಿಯಾಗಬೇಕು, ಕೈಗಾರಿಕೆ ರಂಗದಲ್ಲಾಗಲೀ, ವ್ಯವಸಾಯ ರಂಗದಲ್ಲಾಗಲೀ, ನೀರಾವರಿ ಯೋಜನೆಗಳಲ್ಲಾಗಲೀ ಅಥವಾ ವಿದ್ಯಾ ರಂಗದಲ್ಲಾಗಲೀ ಏನೇನು ಅಭಿವೃದ್ಧಿ ಕಾರ್ಯಗಳು ಆಗಬೇಕು, ಮತ್ತು ಈ ದೇಶದ ಭವಿಷ್ಯವನ್ನು, ಈ ದೇಶದ ಬಡಜನರ ಕಷ್ಟವನ್ನು, ರೈತರ ಸಮಸ್ಯೆಗಳನ್ನು, ಕಾರ್ಮಿಕರ ಸಮಸ್ಯೆಗಳನ್ನು ಇವೆಲ್ಲವನ್ನೂ ನಾವು ಇಲ್ಲಿ ಕೂಲಂಕಷವಾಗಿ ಚರ್ಚೆ ಮಾಡುವಂಥ ಒಂದು ಸಭೆ ಇದು. ಈ ಅಧಿವೇಶನದಲ್ಲಿ ನಾವು ಎಲ್ಲವನ್ನೂ ಇಲ್ಲಿ ಚರ್ಚೆ ಮಾಡುತ್ತೇವೆ, ಕೇವಲ 15 ದಿವಸದಲ್ಲಿ ಯಾವುದೋ ಬೇರೆ ಬೇರೆ ಹೆಚ್ಚಿನ ಪ್ರಾಮುಖ್ಯತೆ ಇಲ್ಲದಂಥ ವಿಷಯದಲ್ಲಿ ಚರ್ಚೆ ಮಾಡುವಂಥ ಸಭೆ ಇದಲ್ಲ. ಈ ಒಂದು ವರ್ಷದ ರಾಜ್ಯದ ಆಯವ್ಯಯವನ್ನು, ರಾಜ್ಯದ ಆರ್ಥಿಕ ಸ್ಥಿತಿಯನ್ನು ಚರ್ಚೆ ಮಾಡುವಂಥ ಸಭೆ ಇದು. ಇಲ್ಲಿ ವಿರೋಧಪಕ್ಷದವರು ಎಲ್ಲಾ ವಿಷಯಗಳನ್ನು ಚರ್ಚೆ ಮಾಡಿ ಸರ್ಕಾರದ ತಪ್ಪುಗಳನ್ನು ಎತ್ತಿ ಹಿಡಿಯುವುದಕ್ಕೆ ಬೇಕಾದಷ್ಟು ಅವಕಾಶ ಇದೆ. ಪ್ರತಿಯೊಂದು ವಿಷಯದಲ್ಲೂ, ಪ್ರತಿಯೊಂದು ಇಲಾಖೆಗಳ ಬೇಡಿಕೆಗಳ ಮೇಲೂ ಅವರು ಇಲ್ಲಿ ಚರ್ಚೆ ಮಾಡಬಹುದು. ಎಲ್ಲಾ ವಿಷಯಗಳಲ್ಲಿಯೂ ಅನೇಕ ಸಂದರ್ಭಗಳಲ್ಲಿ ಇವೆಲ್ಲಾ ಇಲ್ಲಿ ಎರಡೆರಡು ದಿವಸ, ಮೂರು-ಮೂರು ದಿವಸ ಚರ್ಚೆ ಮಾಡಿರುವುದೂ ಉಂಟು. ಆದರೆ ಒಬ್ಬ ಮಂತ್ರಿಯ ಮೇಲೆ ಒಂದು ಕೇಸ್ ರಿಜಿಸ್ಟರ್ ಆಯಿತು ಎನ್ನುವ ಕಾರಣಕ್ಕೋಸ್ಕರ ಅವರನ್ನು ಮಂತ್ರಿಮಂಡಲದ ಸದಸ್ಯಸ್ಥಾನದಿಂದ ತೆಗೆಯಬೇಕು, ಅವರನ್ನು ತೆಗೆಯುವವರೆಗೆ ನಾವು ವಿಧಾನಸಭೆಯ ಕಾರ್ಯಕಲಾಪಗಳನ್ನು ನಡೆಯುವುದಕ್ಕೆ ಬಿಡುವುದಿಲ್ಲ ಎನ್ನತಕ್ಕಂಥ ನಿಲುವು ತೆಗೆದುಕೊಂಡರು. ಈ ಪಟ್ಟು ಇಡೀ ರಾಷ್ಟ್ರದ ಇತಿಹಾಸದಲ್ಲೇ ಇಲ್ಲ. ಈ ತರಹ ಇವತ್ತಿನವರೆಗೆ ಎಲ್ಲಿಯೂ ನಡೆದಿಲ್ಲ. ಹಿಂದೆ ಇದೇ ಸಭೆಯಲ್ಲಿ ವಿರೋಧಪಕ್ಷದವರು ಧರಣಿ ಕುಳಿತರು. ಶ್ರೀಮತಿ ಇಂದಿರಾಗಾಂಧಿಯವರ ದಸ್ತಗಿರಿ ಆಗಿದ್ದರಿಂದ ದೇಶದಲ್ಲಿ ಗೊಂದಲ ಆಗುತ್ತಾ ಇದೆ, ಕಾನೂನು ಮತ್ತು ಶಿಸ್ತು ಪಾಲನೆಯೂ ಹದಗೆಟ್ಟಿದೆ, ಅಂಗಡಿಗಳು ಲೂಟಿಯಾಗುತ್ತಿವೆ, ಈ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಕೇಳಿ ವಿರೋಧಪಕ್ಷದವರು

ಧರಣಿ ಕುಳಿತರು. ಮಾನ್ಯ ಸ್ಪೀಕರ್‌ರವರು ಅವರ ಕರ್ತವ್ಯವನ್ನು ನಡೆಸದಂತೆ ಅಡ್ಡಿ ಮಾಡಿದರು. ಮಾನ್ಯ ಸ್ಪೀಕರ್‌ರವರ ಸ್ಥಾನ ಅತ್ಯಂತ ಮಹತ್ತರವಾದ ಸ್ಥಾನ, ಅತ್ಯಂತ ಗೌರವಯುತವಾದ ಸ್ಥಾನ, ಅಂತಹ ಸ್ಥಾನದ ಹತ್ತಿರ ಹೋಗಿ ಸ್ಪೀಕರ್‌ರವರ ಮೇಲೆ ಕೈ ಮಾಡುವಂಥ ಪರಿಸ್ಥಿತಿಗೆ ಹೋದರು. ಅವರ ಮೇಲೆ ಕೈ ಮಾಡಲಿಕ್ಕೆ ಹೋದಂಥವರು ಇವತ್ತು ನಮ್ಮ ಕಡೆ ಇದ್ದಾರೆ. ಅಂತಹವರು ಅನೇಕ ಜನರು ಇದ್ದಾರೆ. ಅಂತಹ ಒಂದು ಪರಿಸ್ಥಿತಿಯಲ್ಲಿ, ಇವತ್ತು ವಿರೋಧಪಕ್ಷದವರಾಗಿ ಧರಣಿ ಕೂರುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದಂಥ ಶ್ರೀ ದೇವರಾಜ ಅರಸ್‌ರವರು ಅವತ್ತು ಮಾನ್ಯ ಮುಖ್ಯಮಂತ್ರಿಯಾಗಿ ಈ ಸಭೆಯ ವಿರೋಧಪಕ್ಷದವರನ್ನು ಹೊರಕ್ಕೆ ಹಾಕಬೇಕೆಂದು ಒಂದು ರೆಸ್ಲ್ಯೂಷನ್ ಮೂವ್ ಮಾಡಿದ್ದಾರೆ. ಅದರ ಬಗ್ಗೆ ವಿವರಗಳು ನಮ್ಮ ಹತ್ತಿರ ಇವೆ. ಅವರು ರೆಸ್‌ಲ್ಯೂಷನ್ ತಂದಂತಹ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ತತ್ವಗಳು ಏನು ಎಂಬುದನ್ನು ಸ್ಪಷ್ಟವಾಗಿ ಅವರ ಭಾಷಣದಲ್ಲಿ ಹೇಳಿದ್ದಾರೆ. ಅವರು ಅಂದು ಮಾನ್ಯ ಮುಖ್ಯಮಂತ್ರಿಯಾಗಿ ಏನು ಹೇಳಿದ್ದರೋ ಅದಕ್ಕೆ ತದ್ವಿರುದ್ಧವಾಗಿ ಇಲ್ಲಿ ಇವತ್ತು ವರ್ತಿಸಿದ್ದಾರೆ. ಅವರು ಅಂದು ಏನು ಹೇಳಿದ್ದರೋ ಅದನ್ನು ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅದನ್ನು ನಾನು ಈಗ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಗಳು ಹೇಗಿರಬೇಕು, ಯಾವ ರೀತಿ ರಚನಾತ್ಮಕವಾದ ಸಲಹೆಗಳನ್ನು ಕೊಡಬೇಕು. ಯಾವ ಒಂದು ಮಿತಿಯಲ್ಲಿ ವಿರೋಧಪಕ್ಷಗಳು ವರ್ತಿಸಬೇಕು. ವಿರೋಧಪಕ್ಷಗಳು ಯಾವಾಗ ಮಿತಿಮೀರಿ ವರ್ತಿಸಿದಾಗ ಅವರನ್ನು ಸಭೆಯಿಂದ ಹೊರಕ್ಕೆ ಹಾಕಬೇಕಾಗುತ್ತದೆ. ಎಂಬುದನ್ನೆಲ್ಲಾ ಹೇಳಿ ಅವರು ಅಂದು ಒಂದು ರೆಸ್‌ಲ್ಯೂಷನ್ ಅನ್ನು ಮೂವ್ ಮಾಡಿದ್ದಾರೆ. ಅದು ಅವರಿಗೆ ಗೊತ್ತೇ ಇದೆ. ಅವತ್ತಿನ ಪರಿಸ್ಥಿತಿ ಏನು? ಈ ದೇಶದಲ್ಲಿ ಕಾನೂನಿನ ವ್ಯವಸ್ಥೆ ಸರಿ ಇರಲಿಲ್ಲ. ಜನರು ಗೊಂದಲ ಮಾಡಿ ರೈಲು-ಬಸ್‌ಗಳನ್ನು ಸುಟ್ಟು ಹಾಕಿದರು, ಪೋಸ್ಟ್ ಆಫೀಸನ್ನು ಸುಟ್ಟರು. ಅಂಗಡಿಗಳನ್ನು ಲೂಟಿ ಮಾಡಿದರು. ಈ ಸರ್ಕಾರ ಅಧಿಕಾರದಲ್ಲಿ ಇರಕೂಡದು, ಅದನ್ನು ವಜಾ ಮಾಡಬೇಕು ಎಂದು ಹೇಳುವುದಕ್ಕೆ ಹೊರಟಾಗ ರೆಸ್‌ಲ್ಯೂಷನ್ ಮೂವ್ ಮಾಡಿ ವಿರೋಧಪಕ್ಷದವರನ್ನು ಹೊರಕ್ಕೆ ಹಾಕಿದರು.

ಅವರು ಹೊರಗಡೆ ಹೋಗಿದ್ದಾರೆ. ಅವತ್ತಿನ ಮಾನ್ಯ ಮುಖ್ಯಮಂತ್ರಿಗಳು ಏನು ಒಂದು ತೀರ್ಮಾನ ಕೈಗೊಂಡಿದ್ದಾರೆ. ಅದರ ಪ್ರಕಾರ ಅವರು ಹೊರಗಡೆ ಹೋಗಿದ್ದಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಏನಾಗಿದೆ ಎಂದರೆ ಯಾವುದೋ ಒಂದು ಕೇಸು ರಿಜಿಸ್ಟರ್ ಆಗಿದೆ ಆದ್ದರಿಂದ ಈಗಲೇ ಆ ಮಂತ್ರಿಗಳಿಂದ ರಾಜೀನಾಮೆಯನ್ನು ತೆಗೆದುಕೊಳ್ಳುವವರಿವಿಗೂ ನಾವು ಬಿಡುವುದಿಲ್ಲ ಎಂದು ಹೇಳಿದರು. ಯಾರು ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಮತ್ತು ನಂಬಿಕೆಯನ್ನು ಇಟ್ಟುಕೊಂಡಿದ್ದಾರೆಯೋ ಅವರೇ ಇದನ್ನು ಒಪ್ಪಿಲ್ಲ. ಇದನ್ನು ರಾಜ್ಯಾದ್ಯಾಂತ ದೊಡ್ಡದು ಮಾಡಿಕೊಂಡು ನಾವು ಜನಗಳ ಬೆಂಬಲವನ್ನು ಗಳಿಸುತ್ತೇವೆ ಎಂದು ಹೋಗಿದ್ದಾರೆ. ಆದರೆ ಅವರಿಗೆ ಯಾವ ಜನರ ಬೆಂಬಲವೂ ಸಿಕ್ಕಿಲ್ಲ. ಎಲ್ಲಾ ಕಡೆಯೂ ಜನರು ಬಹಳ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಇಷ್ಟು ಹಣವನ್ನು ಖರ್ಚು ಮಾಡುವ ವಿಧಾನಸಭೆಯಲ್ಲಿ

ಒಂದ ವಿರೋಧ ಪಕ್ಷವೂ ಇಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಮನ್ನಣೆ ಪಡೆದಂತಹ ವಿರೋಧ ಪಕ್ಷ ಇಲ್ಲ. ಮತ್ತು ಪಾರ್ಲಿಮೆಂಟಿನಲ್ಲಿಯೂ ಕೂಡ ಮನ್ನಣೆಯನ್ನು ಪಡೆದಂತ ವಿರೋಧಪಕ್ಷ ಇಲ್ಲ. ಮನ್ನಣೆಯನ್ನು ಪಡೆದಂತಹ ವಿರೋಧಪಕ್ಷ ಇರಬೇಕಾಗಿತ್ತು. ಅದು ಏತಕ್ಕೆ ಇಲ್ಲ ಎಂದರೆ ಇವತ್ತು ಜನರ ಬೆಂಬಲ ಕಡಿಮೆಯಾಗುತ್ತಾ ಬಂದಿದೆ ಎನ್ನುವಂತಹ ಒಂದು ಸೂಚನೆ ನಮಗೆ ಕಂಡುಬರುತ್ತಿದೆ. ಇವತ್ತು ರಾಜ್ಯಾದ್ಯಾಂತ ಅವರು ಸಭೆಗಳನ್ನು ನಡೆಸುತ್ತಿದ್ದಾರೆ 4-5 ಪಕ್ಷಗಳು ಒಟ್ಟಿಗೆ ಸೇರಿ ಸಭೆಗಳನ್ನು ನಡೆಸುತ್ತಿದ್ದಾರೆ. ಅವರು ನಮ್ಮ ಮೇಲೆ ಸಾಕಷ್ಟು ಭಾಷಣದಲ್ಲಿ ಮಾತಾಡಿದ್ದಾರೆ. ರಾಜ್ಯದಲ್ಲಿ ಸುಮಾರು 4 ಕೋಟಿ ಜನಸಂಖ್ಯೆ ಇದೆ. ಅದರಲ್ಲಿ ಸುಮಾರು 30 ಲಕ್ಷದಷ್ಟು ಜನಸಂಖ್ಯೆ ಬೆಂಗಳೂರು ನಗರದಲ್ಲಿದೆ. ಈ ಬೆಂಗಳೂರು ನಗರ ಜನಸಂಖ್ಯೆಯಲ್ಲಿ 5ನೇ ಸ್ಥಾನವನ್ನು ಪಡೆದಿದೆ. ಈ 30 ಲಕ್ಷ ಜನಸಂಖ್ಯೆಯಲ್ಲಿ ಸುಮಾರು 10 ಲಕ್ಷದಷ್ಟು ಮಕ್ಕಳಿದ್ದಾರೆ. ಇವರನ್ನು ಬಿಟ್ಟರೆ ಇನ್ನು ಸುಮಾರು 20 ಲಕ್ಷದಷ್ಟು ಜನರಲ್ಲಿ ಸುಮಾರು 5-6 ಸಾವಿರಕ್ಕಿಂತಲೂ ಹೆಚ್ಚು ಜನರು ಸೇರಿಲ್ಲ; ಈ ಸಭೆಯಲ್ಲಿ 5 ಪಕ್ಷಗಳವರು ಒಟ್ಟುಗೂಡಿದ್ದಾರೆ. ಅವರು ಯಾರೆಂದರೆ ಬಿ.ಜೆ.ಪಿ. ಸಿ.ಪಿ.ಐ., ಜನತಾ, ಕಾಂಗ್ರೆಸ್ ಯು, ಸಿ.ಪಿ.ಎಂ., ಈ 5 ಪಕ್ಷಗಳವರೂ ಸೇರಿ ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಬೇಕಾದಷ್ಟು ಸಭೆಗಳನ್ನು ಮಾಡಿದ್ದಾರೆ ಆದರೆ ಅಲ್ಲಿಯೂ ಕೂಡ ಸುಮಾರು 5-6 ಸಾವಿರಕ್ಕಿಂತಲೂ ಹೆಚ್ಚು ಜನರು ಸೇರಿಲ್ಲ. ಒಂದು ಪಕ್ಷ 10 ಸಾವಿರ ಜನರು ಸೇರಿರಬಹುದು. ಈ 10 ಸಾವಿರ ಜನರನ್ನು 5 ಪಕ್ಷಗಳವರಿಗೂ ಹಂಚಿದರೆ ಒಂದೊಂದು ಪಕ್ಷಕ್ಕೆ ಸುಮಾರು 1 1/2 ಸಾವಿರ ಜನರು ಬರಬಹುದು. ಇದರಲ್ಲಿ ಯಾವ ಪಕ್ಷಕ್ಕೆ ಹೆಚ್ಚಿಗೆ ಕೊಡಬೇಕು ಯಾವ ಪಕ್ಷಕ್ಕೆ ಕಡಿಮೆ ಕೊಡಬೇಕು ಎನ್ನುವುದನ್ನು ನಾನು ಅವರಿಗೆ ಬಿಟ್ಟಿದ್ದೇನೆ. ಒಂದು ಪಕ್ಷ ಜನತಾ ಪಕ್ಷಕ್ಕೆ ಹೆಚ್ಚು ಕೊಡಬೇಕೋ ಅಥವಾ ಕಾಂಗ್ರೆಸ್ (ಯು) ಪಕ್ಷಕ್ಕೆ ಹೆಚ್ಚು ಕೊಡಬೇಕೋ ಯಾವ ಪಕ್ಷಕ್ಕೆ ಹೆಚ್ಚು ಷೇರ್ ಕೊಡಬೇಕೋ ಅದನ್ನು ಅವರಿಗೆ ಬಿಟ್ಟಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಗಲಾಟೆ ಮತ್ತು ಕೂಗಾಟ ಮಾಡುವುದರಿಂದ ಅವರು ಯಾವುದೇ ಸರ್ಕಾರದಲ್ಲಿರತಕ್ಕಂತಹ ಪ್ರಜಾಪ್ರಭುತ್ವದ ನೀತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರವಾಗಿ ಬೇಕಾದಷ್ಟು ಅವಕಾಶಗಳು ಇವೆ. ಚುನಾವಣೆಗಳು ಬರುತ್ತವೆ. ಚುನಾವಣೆಗಳಲ್ಲಿ ಸ್ಪರ್ಧೆ ಮಾಡತಕ್ಕಂತಹ ಅವಕಾಶಗಳು ಇರುತ್ತವೆ. ಚುನಾವಣೆಗಳಲ್ಲಿ ಯಾವ ಪಕ್ಷಕ್ಕೆ ಬೆಂಬಲ ಕೊಡಬೇಕು ಯಾವ ಪಕ್ಷವನ್ನು ಆರಿಸಬೇಕು, ಯಾವ ಪಕ್ಷಕ್ಕೆ ಕೊಡಬಾರದು ಎನ್ನತಕ್ಕಂಥದ್ದನ್ನು ಜನತೆ ತೀರ್ಮಾನ ಮಾಡಿದ್ದಾರೆ. ಇವತ್ತು ನಮ್ಮ ಯಜಮಾನರು ಜನತೆ ಎಂದು ಹೇಳುತ್ತಾರೆ. ಆದರೆ ಜನತೆಯ ತೀರ್ಮಾನಕ್ಕೆ ನಾವು ಒಪ್ಪುವುದಿಲ್ಲ ಎಂದರೆ ಅದೇ ನಮಗೆ ಬಂದಿರುವ ಕಷ್ಟ. ಇವತ್ತು ಪ್ರಜಾಪ್ರಭುತ್ವದಲ್ಲಿ ಜನಗಳು ನಮ್ಮ ಪ್ರಭುಗಳು, ಅದು ಬಿಟ್ಟು ಸುಪ್ರಿಂಕೋರ್ಟ್ ನಮ್ಮ ಪ್ರಭುಗಳಲ್ಲ. ಮುಖ್ಯಮಂತ್ರಿಗಳು ನಮ್ಮ ಪ್ರಭುಗಳಲ್ಲ, ಮಂತ್ರಿಮಂಡಲ ನಮ್ಮ ಪ್ರಭುಗಳಲ್ಲ. ಪ್ರಧಾನ ಮಂತ್ರಿಗಳು ನಮ್ಮ ಪ್ರಭುಗಳು ಅಲ್ಲ ನಮ್ಮ ಪ್ರಭುಗಳು ವಿಧಾನಸಭೆಯಲ್ಲ, ನಮ್ಮ ಪ್ರಭುಗಳು ಪಾರ್ಲಿಮೆಂಟ್ ಅಲ್ಲ. ನಮ್ಮ ಪ್ರಭುಗಳು ಪ್ರಜಾಪ್ರಭುತ್ವದಲ್ಲಿ ಮತವನ್ನು

ಚಲಾವಣೆ ಮಾಡತಕ್ಕಂತಹ ಮತದಾರರು ಎಂದು ಭಾಷಣವನ್ನು ಮಾಡುತ್ತಾರೆ. ಆದರೆ ಪ್ರಭುಗಳು ಹೇಳಿದಂತಹ ತೀರ್ಮಾನಕ್ಕೆ ಇವರು ಯಾರೂ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಇದು ಯಾವ ಧರ್ಮ? ಇತ್ತೀಚೆಗೆ ನಮ್ಮ ರಾಜ್ಯದಲ್ಲಿ 3 ಚುನಾವಣೆಗಳು ನಡೆದವು. ಈ 3 ಚುನಾವಣೆಗಳಲ್ಲಿ ನಮ್ಮ ರಾಜ್ಯದ ಪ್ರಭುಗಳು ತೀರ್ಮಾನವನ್ನು ಕೊಟ್ಟಿದ್ದಾರೆ. ಮತ್ತು ಅವರು ತಮ್ಮ ಅಭಿಪ್ರಾಯವನ್ನು ಸಹ ತಿಳಿಸಿದ್ದಾರೆ. ಈ ನಮ್ಮ ಪ್ರಭುಗಳು ಕೊಟ್ಟಿರುವ ತೀರ್ಮಾನ ಸರಿಯಾಗಿಲ್ಲ, ಅವರು ನಮ್ಮಂತೆ ತೀರ್ಮಾನ ಕೊಡಲಿಲ್ಲ, ಎಂದು ಹೇಳಿದರೆ ಇದಕ್ಕೆ ಯಾವ ಔಷಧಿಯನ್ನು ತರೋಣ? ಈ ಚುನಾವಣೆಗಳಲ್ಲಿ ಅವರೇನಾದರೂ ಗೆದ್ದಿದ್ದರೆ ನೀವು ಸೋತಿದ್ದೀರಿ ಆದ್ದರಿಂದ ನೀವು ಮುಖ್ಯಮಂತ್ರಿಗಳಾಗಿ ಮತ್ತು ಈ ಮಂತ್ರಿಮಂಡಲ ಮತ್ತು ನಿಮ್ಮ ಸರ್ಕಾರ ಒಂದು ಗಳಿಗೆಯೂ ಕೂಡ ಅಧಿಕಾರದಲ್ಲಿ ಇರುವುದಕ್ಕೆ ಹಕ್ಕಿಲ್ಲ ಎಂದು ಹೇಳುತ್ತಿದ್ದರು. ಧಾರವಾಡ ಮತ್ತು ಹೊಳಲಕೆರೆ ಚುನಾವಣೆಗಳಲ್ಲಿ ದೇಶವು ಶೇಕಡ 80 ಪರ್ಸೆಂಟ್ ಜನಗಳು ವಾಸಮಾಡತಕ್ಕ ಗ್ರಾಮಾಂತರ ಪ್ರದೇಶದ ಜನಗಳು ತಮ್ಮ ಒಂದು ಭವಿಷ್ಯವನ್ನು ನಿರ್ಧಾರ ಮಾಡಿ ತಿಳಿಸಿದ್ದಂತಹ ಚುನಾವಣೆಯಾಗಿದೆ. ಆದ್ದರಿಂದ ಈ ಸರ್ಕಾರ ರಾಜೀನಾಮೆ ಕೊಡಬೇಕೇ? ಎಂದು ಅವರು ಹೇಳುತ್ತಿದ್ದರು. morally, legally and technically they are incompetent to perform. I will apply the samething now. People have rejected the opposition. Morally, legally and techincally they have no right to function as opposition members. They should quit. That is the demand of the Ruling Party. That is the demand by the Government, whether to accept it or not, it is not for us. We will leave it to the people. ಆದರೆ ಜನತೆಯು ಕೊಟ್ಟಂತಹ ತೀರ್ಮಾನಕ್ಕೆ ಒಪ್ಪಿಕೊಂಡು ತಲೆಬಾಗತಕ್ಕಂತದ್ದು ನಮ್ಮ ಧರ್ಮ, ಇವತ್ತು ನಡೆದಿದ್ದು ಏನೆಂದರೆ ಕಮೀಷನ್ ಮೇಲೆ ಕಮೀಷನ್ ನೇಮಕ ಮಾಡಿದ್ದಾರೆ. ಅಲ್ಲಿ ನಡೆದುಂತದ್ದು ಅವರ ಮನಸ್ಸಿನಲ್ಲಿ ಇವತ್ತು ಪ್ರೈಮಾಫೇಸಿ ಕೇಸ್ ಇದೆ ಎಂದು ಅರ್ಥವಾಗುತ್ತದೆ. ಇವತ್ತು ತಮಿಳುನಾಡಿನಲ್ಲಿಯೂ ಕೂಡ ಸೆಂಟ್ರಲ್ ಗೌರ್ನಮೆಂಟ್ ನವರು ಒಂದು ಕಮೀಶನ್ ಅನ್ನು ಪ್ರೈಮಾಫೇಸಿ ಮೇಲೆ ನೇಮಕ ಮಾಡಿದ್ದರು. ಮತ್ತು ಕೇರಳದವರ ಮೇಲೆಯೂ ಒಂದು ಕಮೀಷನನ್ನು ನೇಮಕ ಮಾಡಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ 14 ಜನರು ಇರತಕ್ಕಂತಹ ಒಂದು ವಿರೋಧ ಪಕ್ಷ ಇದೆ. ಈ 14 ಜನರಲ್ಲಿ 14,13,12, ಹೀಗೆ 3,4,2,1 ಒಟ್ಟು 1 ರಿಂದ 14ರವರೆವಿಗೂ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿರೋಧಪಕ್ಷದವರು ಇದ್ದಾರೆ. 1 ಇರುವವರಿಗೆ ಮೊದಲನೆ ಸ್ಥಾನವನ್ನು, ಇಬ್ಬರು ಇರುವವರಿಗೆ 2ನೇ ಸ್ಥಾನವನ್ನು ಹೀಗೆ 14 ಜನರಿರುವವರಿಗೆ ಒಬ್ಬರು ಇರತಕ್ಕ ವಿರೋಧಪಕ್ಷವನ್ನು ನಾವು ಇವತ್ತು ಕರ್ನಾಟಕದಲ್ಲಿ ಕಾಣುತ್ತಿದ್ದೇವೆ ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಮಾನ್ಯ ವಿರೋಧಪಕ್ಷದ ಸದಸ್ಯರಾದ ಶ್ರೀಮಾನ್ ಆರುಮ್ಗಂರವರು ಒಂದು ವಿರೋಧ ಪಕ್ಷಕ್ಕೆ ಸೇರಿದವರು. ಇವತ್ತು

ಈ 34 ಅಂಕೆಗಳನ್ನು ಪಡೆದಂತಹ ವಿರೋಧಪಕ್ಷಗಳು ವಿಧಾನಸಭೆಯಲ್ಲಿ ಇವೆ. ಈ ಹಿಂದೆ ಇದ್ದ ಸರ್ಕಾರದ ಮೇಲೆ ಆಪಾದನೆ ಇದೆ. ನಮ್ಮ ಮೇಲೆ ಚಾರ್ಜ್ ಇದೆ ಎಂದು ಸುಪ್ರಿಂ ಕೋರ್ಟ್ ನ್ಯಾಯಾಧೀಶರೊಬ್ಬರ ಮೇಲ್ ನೋಟಕ್ಕೆ ಆಪಾದನೆ ಮಾಡಿ ಈ ಮಂತ್ರಿಮಂಡಲದ ಮೇಲೆ ಒಂದು ಕಮೀಶನನ್ ಅಪಾಯಿಂಟ್ ಮಾಡಿದಾಗ ರಾಜೀನಾಮೆಯನ್ನು ಕೊಡದೆ ಈಗ ರಾಜೀನಾಮೆಯನ್ನು ನೀವು ಕೊಡಿ ಎಂದು ಕೇಳುವ ನೀತಿ ಏನಾದರೂ ಇದೆಯೆ? After all, a Station House Officer has registered a case against one individual. Fortunately or unfortunately, he is a Minister. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಮೀಷನ್ ಅನ್ನು ನೇಮಕ ಮಾಡಿ ಆ ಕಮೀಷನ್ನಿನವರು ಮಂತ್ರಿಮಂಡಲದಲ್ಲಿರತಕ್ಕಂತಹವರ ಮೇಲೆ ಆಪಾದನೆಗಳು ಇವೆ, ಚಾರ್ಜ್‌ಗಳು ಇದೆ ಎಂದು ಹೇಳಿದರೂ ಕೂಡ ಆಗ ಮಂತ್ರಿಗಳು ರಾಜೀನಾಮೆಯನ್ನು ಕೊಡಲಿಲ್ಲ. ಇವತ್ತು ಕೇರಳ ಮತ್ತು ತಮಿಳುನಾಡಿನಲ್ಲಿ ಕಮೀಷನ್ ಅನ್ನು ನೇಮಕ ಮಾಡಿದ್ದರು. ಮತ್ತು ಕರ್ನಾಟಕದಲ್ಲಿಯೂ ಕೂಡ ಗ್ರೋವರ್ ಕಮೀಷನ್ ನೇಮಕ ಮಾಡಿದ್ದರು. ಆಗ ಮುಖ್ಯಮಂತ್ರಿಗಳಾಗಿದ್ದವರು ನನ್ನ ಮೇಲೆ ಚಾರ್ಜ್ ಇದೆ ಚಾರ್ಜ್ ನಂಬರ್ 1 ಮತ್ತು ಚಾರ್ಜ್ ನಂಬರ್ 2 ಚಾರ್ಜ್ ನಂಬರ್ 3 ನಮ್ಮ ಮೇಲೆ ಇದೆ, ಆದ್ದರಿಂದ ಗ್ರೋವರ್ ಕಮೀಷನ್ ಅನ್ನು ನೇಮಕ ಮಾಡಿದ್ದಾರೆ. ಈ ಚಾರ್ಜ್‌ಗಳೆಲ್ಲವೂ ಈ ಆಯೋಗದಲ್ಲಿ ತೀರ್ಮಾನ ಕೊಡುವ ತನಕ ನಾವು ಮಂತ್ರಿಮಂಡಲದಲ್ಲಿ ಇರುವುದಿಲ್ಲ ಮತ್ತು ನಾನು ಮುಖ್ಯ ಮಂತ್ರಿಯಾಗಿಯೂ ಇರುವುದಿಲ್ಲ ಎಂದು ಹೇಳಿ ಅಧಿಕಾರವನ್ನು ಬಿಟ್ಟು ಕೊಟ್ಟಿದ್ದರೆ ನಾನು ಅವತ್ತೆ ಮುಖ್ಯಮಂತ್ರಿಯಾಗಿ ಇರುತ್ತಿದ್ದೆ.

**ಶ್ರೀ ಮಳ್ಳೂರು ಆನಂದರಾವ್** : ಅದಕ್ಕೆ ಅವರು ರಾಜೀನಾಮೆಯನ್ನು ಕೊಡಲಿಲ್ಲ.

**ಶ್ರೀ ಆರ್. ಗುಂಡೂರಾವ್** : ಅವರು ಯೋಚನೆ ಮಾಡಿ ಶ್ರೀಮಾನ್ ಗುಂಡೂರಾವ್ ರವರ ಮೇಲೆ ಯಾವ ಚಾರ್ಜ್ ಇಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಅವರನ್ನು ಮುಖ್ಯಮಂತ್ರಿಯಾಗಿ ಚುನಾಯಿಸುತ್ತಾರೆ ಎಂದು ಅವರಿಗೆ ಗೊತ್ತಿತ್ತು. ಇದರ ಬಗ್ಗೆ ನಾನು ಹೆಚ್ಚಿಗೆ ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುತ್ತಾ ಇಲ್ಲ. ಇವತ್ತು ಗ್ರೋವರ್ ಕಮೀಷನ್‌ಗೆ ಚೀಫ್ ಸೆಕ್ರೆಟರಿಯವರು ರಿಪೋರ್ಟ್ ಕೊಡಬೇಕು ಮತ್ತು ಹೋಂ ಸೆಕ್ರೆಟರಿಯವರು ರಿಪೋರ್ಟ್ ಕೊಡಬೇಕು ಮತ್ತು ಫೈನಾನ್ಸ್ ಸೆಕ್ರೆಟರಿಯವರು ರಿಪೋರ್ಟ್ ಕೊಡಬೇಕು ಮತ್ತು ಪೋಲೀಸ್ ಅಧಿಕಾರಿಗಳು ಕೋಆಪರೇಟ್ ಮಾಡಬೇಕು. ಈ ಎಲ್ಲಾ ಇಲಾಖೆಗಳು ಜವಾಬ್ದಾರಿಯನ್ನು ಹೊತ್ತು ಮಂತ್ರಿಮಂಡಲದಲ್ಲಿ ಮತ್ತು ಮುಖ್ಯಮಂತ್ರಿಗಳ ಮೇಲೆ ಚಾರ್ಜ್ ಇದ್ದರೂ ಕೂಡ ಅವರು ಹೇಗೆ ಅಧಿಕಾರದಲ್ಲಿ ಮುಂದುವರಿದರು? ಈಗ ಯಾವುದೋ ಸ್ಟೇಷನ್‌ನಲ್ಲಿ ಒಬ್ಬ ಮಂತ್ರಿಯ ಮೇಲೆ ಚಾರ್ಜ್ ಫ್ರೇಮ್ ಮಾಡಿದ್ದಕ್ಕಾಗಿ ರಾಜೀನಾಮೆಯನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ಎಂದು ಕೇಳುವುದು ಸರಿಯೇ?

ಮೊನ್ನೆ ಕೇರಳದಲ್ಲಿ ಅಲ್ಲಿನ ಮುಖ್ಯಮಂತ್ರಿಗಳು ಒಂದು ಪ್ರಕರಣದಲ್ಲಿ ಏನು ಉತ್ತರ ಕೊಟ್ಟಿದ್ದಾರೆಂಬುದೂ ಸಹ ತಮಗೆಲ್ಲಾ ಗೊತ್ತಿದೆ. ಅಲ್ಲಿನ ವಿರೋಧ ಪಕ್ಷದವರು ಆ ರಾಜ್ಯದ ಎಕ್ಸೈಜ್ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಕೇಳಿದಾಗ, ಅವರ ಮೇಲಿರುವ ತಪ್ಪು ಸಾಬೀತಾಗಲಿ, ಅನಂತರ ಬೇಕಾದರೆ ನೋಡೋಣ ಎಂದು ಅಲ್ಲಿನ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದರಿಂದ ಅಲ್ಲಿನ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು. ಅಲ್ಲಿ ಸಿ.ಪಿ.ಐ., ಸಿ.ಪಿ.ಎಂ., ಕಾಂಗ್ರೆಸ್ ಯು ಪಕ್ಷಗಳಿಂದ ಕೂಡಿದ ಸಂಯುಕ್ತ ರಂಗದ ಸರ್ಕಾರವೇ ಇರುವುದು. ಆದ್ದರಿಂದ ಪ್ರಜಾಪ್ರಭುತ್ವದ ಒಂದು ತತ್ವ, ಒಂದು ನೀತಿಯ ಬಗ್ಗೆ ಯಾರೇ ಆಗಲೀ ಒಂದು ನಿಲುವು ತೆಗೆದುಕೊಳ್ಳುವಾಗ ಎಲ್ಲವನ್ನೂ ನೋಡಿಕೊಂಡು ಮಾತನಾಡುವುದು ಒಳ್ಳೆಯದು. ಅದನ್ನು ಬಿಟ್ಟು ಮಂತ್ರಿ ಒಬ್ಬರು ರಾಜೀನಾಮೆ ಕೊಡುವವರೆಗೆ ನಾವು ಸಭೆ ಒಳಗೆ ಹೋಗುವುದಿಲ್ಲ ಎಂದರೆ ಏನರ್ಥ? ಇದನ್ನು ಯಾವ ಜನರು ಒಪ್ಪುತ್ತಾರೆ. ಗ್ರಾಮಾಂತರ ಪ್ರದೇಶದ ಜನರು ಹಾಗೂ ನಗರದ ಜನರು ಇದನ್ನು ಒಪ್ಪಿಲ್ಲ. ಆದರೂ ಸಹ ಇವರುಗಳು ನಾವು ಅದು ಮಾಡುತ್ತೇವೆ, ಇದು ಮಾಡುತ್ತೇವೆ ಎಂದರೆ, ಅದಕ್ಕೆ ಯಾರು ಹೊಣೆ? ಸರ್ಕಾರ ನಮ್ಮನ್ನು ಸಭೆಯಿಂದ ಹೊರಕ್ಕೆ ಹಾಕಿದೆ ಎಂದು ಅವರು ಹೇಳುತ್ತಿದ್ದಾರೆ. ನಮಗೆ ಸಾಕಷ್ಟು ಬಹುಮತ ಇರುವಾಗ ಅವರಿಗೆ ನಾವು ಏತಕ್ಕೆ ಹೆದರಬೇಕು? ಈಗ ಮನ್ನಣೆ ಪಡೆದ ವಿರೋಧ ಪಕ್ಷವೆ ಇಲ್ಲ. ಜೊತೆಗೆ ಅವರು ಸಭೆಯಲ್ಲಿದ್ದರೆ ಬಿಲ್‌ಗಳೇ ಪಾಸಾಗುವುದಿಲ್ಲ ಎಂಬ ಭಯ ಕೂಡ ನಮಗೆ ಇಲ್ಲ. ಆದ್ದರಿಂದ ನಾವು ಯಾವುದಕ್ಕೂ ಭಯ ಪಡಬೇಕಾಗಿಲ್ಲ. ಕಳೆದ ತಿಂಗಳು ನಡೆದ ಉಪಚುನಾವಣೆಯಲ್ಲಿ ಜನರು ಈ ಸರ್ಕಾರಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ನಾವು ಈಗ ಮೊದಲಿಗಿಂತ ಎರಡರಷ್ಟು ಬಲಯುತರಾಗಿದ್ದೇವೆ. ಅವರನ್ನು ಹೊರಹಾಕಬೇಕೆಂಬ ಉದ್ದೇಶ ನಮಗೇನೂ ಇರಲಿಲ್ಲ. ಆದರೆ ಅವರೇ ಧರಣಿ ಮಾಡುವುದರ ಮೂಲಕ ಸಿಕ್ಕಿಹಾಕಿಕೊಂಡರು. 25 ವರ್ಷಗಳ ಕಾಲ ಅಧಿಕಾರ ಮಾಡಿದವರೇ ಧರಣಿ ಮಾಡುತ್ತೇವೆಂದು ಕೂತಾಗ ಈ ಒಂದು ಪರಿಸ್ಥಿತಿ ಬಂತು. ಧರಣಿಯನ್ನು ಎಲ್ಲಿ ಮಾಡಬೇಕು, ಹೇಗೆ ಮಾಡಬೇಕು ಎಂಬುದು ಅವರಿಗೆ ಗೊತ್ತಿಲ್ಲ. ಅಂತಹವರ ಒಂದು ನೇತೃತ್ವದಲ್ಲಿ ಬೇರೆ ಪಕ್ಷದವರೂ ಸಹ ಧರಣಿ ಕೂತರು. ಎಂತಹ ಸಂದರ್ಭದಲ್ಲಿ ಧರಣಿ ಕೂರಬೇಕು ಎಂಬುದರ ಬಗ್ಗೆ ಮಾನ್ಯ ಆನಂದರಾಯರನ್ನಾಗಲೀ ಅಥವಾ ಮಾನ್ಯ ಆರ್ಮುಗಂ ಅವರನ್ನಾಗಲೀ ಕೇಳಿದ್ದರೆ ಹೇಳಿಕೊಡುತ್ತಿದ್ದರು. ಆದರೆ ಇಲ್ಲಿ ಧರಣಿ ಮಾಡಲು ಯಾವ ತರಹದ ವಿಷಯವೂ ಇರಲಿಲ್ಲ. ಆದರೂ ಧರಣಿ ಮಾಡಿದರು. ಅವರು ಸಭೆಗೆ ಬಂದು ನಮಗೆ ಸಹಕಾರ ಕೊಡಲಿ. ನಾವು ಏನಾದರೂ ತಪ್ಪು ಮಾಡಿದ್ದರೆ ಅದನ್ನು ಹೇಳಲಿ, ನಾವು ಸರಿಪಡಿಸಿಕೊಳ್ಳುತ್ತೇವೆ. ಅದು ಬಿಟ್ಟು ಒಬ್ಬ ಮಂತ್ರಿ ರಾಜೀನಾಮೆ ಕೊಡುವವರೆಗೆ ಸಭೆಗೆ ಬರುವುದಿಲ್ಲ ಎಂದರೆ ಹೇಗೆ? ಮಂತ್ರಿ ಆದವರು ಏನಾದರೂ ತಪ್ಪು ಮಾಡಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತರಲಿ. ತಾವೂ ಸಹ ರೂಲ್ 59ರ ಪ್ರಕಾರ ಎರಡೂವರೆ ಗಂಟೆಗಳ ಕಾಲ ಇದೇ ವಿಚಾರದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದರೂ

ಸಹ ಅವರು ಅದಕ್ಕೆ ಒಪ್ಪಲಿಲ್ಲ. ಈಗ ಅವರು ಹೋದ ಕಡೆಯಲ್ಲೆಲ್ಲಾ ಸೋಲುತ್ತಿದ್ದಾರೆ. ಇದರಿಂದ ಅವರಲ್ಲಿ ಒಂದು ರೀತಿಯ ಫ್ರಸ್ಟ್ರೇಷನ್ ಕ್ರಿಯೇಟ್ ಆಗಿದೆ. ಆದ್ದರಿಂದ ಏನಾದರೂ ಮಾಡಬೇಕು ಎಂದು ಹೊರಟಿದ್ದಾರೆ. ಹೊಳಲ್ಕೆರೆ, ಬಸವನಗುಡಿ, ಧಾರವಾಡದಲ್ಲಿ ಉಪಚುನಾವಣೆಗಳಾದವು. ಧಾರವಾಡದಲ್ಲಿ ಇವರು ಭಾಷಣ ಮಾಡುವಾಗ ಗುಂಡೂರಾವ್ ಎಂದು ಅವರ ತಂದೆ ಹೆಸರಿಟ್ಟರು. ಹೆಸರಿಗೆ ತಕ್ಕಂತೆ ಅವರು ಜನರ ಮೇಲೆ ಗುಂಡು ಹಾರಿಸುತ್ತಿದ್ದಾರೆ ಎಂದೆಲ್ಲಾ ಭಾಷಣ ಮಾಡಿದರು. ದೇಶದ ಸಮಸ್ಯೆಗಳ ಬಗ್ಗೆ ಅವರು ಮಾತನಾಡಲಿಲ್ಲ, ಜನರಿಗೆ ತಮಾಷೆ ಆಗಲಿ ಎಂದು ಏನೇನೋ ಹೇಳಿದರು. ನಮ್ಮಲ್ಲಿ 35 ಪರ್ಸೆಂಟ್ ವರೆಗೆ ಅನ್-ಎಂಪ್ಲಾಯ್ಡ್ ಆಗಿದ್ದಾರೆ. ಅವರಿಗೆ ಯಾವುದೇ ತರಹದ ಮನರಂಜನೆ ಇಲ್ಲದ ಕಾರಣ, ಎಲ್ಲಿ ಭಾಷಣಗಳಾಗುತ್ತವೋ, ಇವರುಗಳು ಇರುತ್ತಾರೆ. ಇವರು ಏನೇ ಭಾಷಣೆ ಮಾಡಲಿ, ಕರ್ನಾಟಕದ ಜನತೆ ಮಾತ್ರ ಇವರನ್ನು ಪೂರ್ತಿಯಾಗಿ ತಿರಸ್ಕಾರ ಮಾಡಿದ್ದಾರೆ. ಈಗ ಮತ್ತೆ ಕರ್ನಾಟಕ ರಾಜ್ಯದ ನಾನಾ ಕಡೆಗಳಲ್ಲಿ ಬಂದ್ ಆಚರಿಸಲು ಕರೆ ಕೊಡುತ್ತಿದ್ದಾರೆ. ಇವೊತ್ತು ಕನಕಪುರ ಬಂದ್, ನಾಳೆ ಇನ್ನೊಂದು ಕಡೆ ಬಂದ್ ಅನ್ನು ಆಚರಿಸಲಾಗುತ್ತಿದೆ. ಬಂದ್ ಯಾವ ರೀತಿ ನಡೆಯುತ್ತಿದೆ ಎಂಬುದು ನಮಗೆ ಗೊತ್ತು. ಅದನ್ನು ಯಾರೂ ಸಹ ಪ್ರೀತಿಯಿಂದ ಮಾಡುವುದಿಲ್ಲ. ಬಂದ್ ಮೂಲಕ ತಮ್ಮ ವ್ಯಾಪಾರವನ್ನು ತೆಗೆದುಕೊಳ್ಳಲು ಯಾವ ವ್ಯಾಪಾರಸ್ಥರು ಇಷ್ಟಪಡುವುದಿಲ್ಲ. ಹೋಟೇಲ್‌ನವರಾಗಲೀ ಸಿನಿಮಾದವರಾಗಲೀ ತಾವಾಗಿಯೇ ಬಂದ್ ಆಚರಿಸುವುದಿಲ್ಲ. ಇವರೆಲ್ಲರೂ ಏತಕ್ಕಾಗಿ ಇದನ್ನು ಮಾಡುತ್ತಾರೆಂದರೆ, ಇವು ಹಾಕಿಸಿರುವಂತಹ ಒಳ್ಳೆ ಒಳ್ಳೆಯ ಕನ್ನಡಿ ಹಾಗೂ ಗಾಜುಗಳನ್ನು ನಾಲ್ಕು ಜನರು ಕಲ್ಲು ಹೊಡೆದು ಹಾಳು ಮಾಡಿಯಾರು ಎಂಬ ಹೆದರಿಕೆಯಿಂದ ಬಂದ್ ಆಚರಿಸುತ್ತಾರೆ. ಕಳೆದ ಹತ್ತು ವರ್ಷಗಳ ಕರ್ನಾಟಕ ರಾಜ್ಯದ ಚರಿತ್ರೆಯಲ್ಲಿ ಈ ರೀತಿ ಯಾವಾಗಲೂ ನಡೆದಿರಲಿಲ್ಲ. ಈ ಮೊದಲು ನರಗುಂದ ಮತ್ತು ನವಲಗುಂದದಲ್ಲಿ ರೈತರ ಚಳುವಳಿ ಆಯಿತು. ಅನಂತರ ನಿಪ್ಪಾಣಿಯಲ್ಲಿ ಆಯಿತು. ಅನಂತರ ಶಿವಮೊಗ್ಗದಲ್ಲಿ ಜೈಲ್-ಭರೋ ಕಾರ್ಯಕ್ರಮ ನಡೆಯಿತು. ರೈತರು ಮಾರುಕಟ್ಟೆಗಳಿಗೆ ತರಕಾರಿ ಹಾಗೂ ಹಣ್ಣು ತರುವುದನ್ನು ನಿಲ್ಲಿಸಿದರು. ಬೆಳೆದ ಆಲೂಗಡ್ಡೆ ಪೇಟೆಗೆ ಬರಲಿಲ್ಲ. ಪತ್ರಿಕೆಗಳಲ್ಲಿ ಫೋಟೋ.. ಹಾಕಿಸಿದರು. ಇದೆಲ್ಲಾ ನಡೆದ ಮೇಲೆ ಈಗ ಮತ್ತೆ ಶಿವಮೊಗ್ಗ ಬಂದ್, ಭದ್ರಾವತಿ ಬಂದ್, ಧಾರವಾಡ ಬಂದ್, ಗುಲ್ಬರ್ಗ ಬಂದ್, ಬೆಳಗಾಂ ಬಂದ್ ಎಂದು ಆಚರಿಸುತ್ತಿದ್ದಾರೆ. ಇವರು ಏನೇ ಕಾರ್ಯಕ್ರಮ ಕೈಕೊಂಡರೂ ಸಹ ಜನರು ಮಾತ್ರ ನಮಗೇ ಓಟು ಕೊಟ್ಟರು. ಈಗ ರಾಜ್ಯದ ನಾನಾ ಜಿಲ್ಲೆಯಲ್ಲಿ ಬಂದ್‌ಗಳಾಗುತ್ತಿವೆ. ಇದನ್ನು ಏತಕ್ಕಾಗಿ ಮಾಡುತ್ತಿದ್ದಾರೆಂಬುದು ನಮಗೆ ಗೊತ್ತಿದೆ. ಜನರ ಬೆಂಬಲ ಗಳಿಸಲು ಈ ರೀತಿ ಮಾಡುತ್ತಿದ್ದಾರೆ, ಆದರೆ ಜನರ ಬೆಂಬಲ ಇವರಿಗೆ ಸಿಗುತ್ತಿಲ್ಲ. ಮುಖ್ಯವಾಗಿ ಇವರು ಧರಣಿ ನಡೆಸಿದ್ದು ತಪ್ಪು. ಅದಕ್ಕೆ ಬದಲು ಸಭಾತ್ಯಾಗ ಮಾಡಿ ನಂತರ ಸಭೆಗೆ ವಾಪಸು ಬಂದು ಜನರ ಸಮಸ್ಯೆಗಳ ಬಗ್ಗೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಮಾತಾನಾಡಬಹುದಾಗಿತ್ತು ಆದರೆ ಆ ರೀತಿ

ಮಾಡದೆ ಒಬ್ಬರು ಮಂತ್ರಿ ರಾಜೀನಾಮೆ ಕೊಡಬೇಕು, ಇಲ್ಲದಿದ್ದರೆ ಧರಣಿ ಮಾಡುತ್ತೇವೆ, ಮತ್ತೊಬ್ಬರನ್ನು ಮಂತ್ರಿಯಾಗಿ ತೆಗೆದುಕೊಳ್ಳಬೇಕು ಇಲ್ಲದಿದ್ದರೆ ಧರಣಿ ಮಾಡುತ್ತೇವೆ ಎಂದು ಹೇಳುವುದಾದರೆ ಈ ಪ್ರಜಾಪ್ರಭುತ್ವ ಯಾವ ರೀತಿ ನಡೆಯಬೇಕು? ನಾವು ಹೇಗೂ ಅಧಿಕಾರ ಬರುವುದಿಲ್ಲ. ಆದಕಾರಣ ಈ ತರಹ ಮಾಡಿಕೊಂಡು ಹೋಗೋಣ ಎನ್ನತಕ್ಕಂಥ ಇವರ ನೀತಿ, ಏನಿದೆ ಇದನ್ನು ಇವರುಗಳು ಬದಲಾವಣೆ ಮಾಡಿಕೊಳ್ಳದೆ ಹೋದರೆ ಈ ನಮ್ಮ ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯುವುದಕ್ಕೆ ಸಾಧ್ಯವಿಲ್ಲ. ಆ ದಿನ ತಾವೂ ಸಹ ಎರಡೂವರೆ ಗಂಟೆಗಳ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದರೂ ಸಹ ಅವರು ಒಪ್ಪಲಿಲ್ಲ. ಧರಣಿ ಕೂತರು. ಶ್ರೀ ಇಬ್ರಾಹಿಂ ಅವರು ರಾಜೀನಾಮೆ ಕೊಡುವವರೆಗೆ ಒಳಗೆ ಬರುವುದಿಲ್ಲವೆಂದು ಹೇಳಿದರು. ಇವೊತ್ತು ಈ ರೀತಿ ಹೇಳುತ್ತಾರೆ. ನಾಳೆದಿವಸ ಇನ್ನೊಬ್ಬರನ್ನು ಮಂತ್ರಿಯನ್ನಾಗಿ ಮಾಡುವವರೆಗೆ ನಾವು ಒಳಗೆ ಬರುವುದಿಲ್ಲ ಎಂದು ಹೇಳಬಹುದು. ಹೀಗೆ ಇವರು ಹೆಜ್ಜೆಹೆಜ್ಜೆಗೂ ಇಂತಹ ಸಣ್ಣ ವಿಷಯಗಳನ್ನು ಬೃಹದಾಕಾರವಾಗಿ ಬೆಳೆಸಿಕೊಂಡು ಹೋದರೆ, ಅದಕ್ಕೆ ಯಾವ ಜನರ ಬೆಂಬಲವೂ ಸಿಗುವುದಿಲ್ಲ. ಮತ್ತು ಇಂತಹ ಒಂದು ಘಟನೆ ಯಾವ ಕಾಲದಲ್ಲಿಯೂ ನಡೆದಿಲ್ಲ. ಕರ್ನಾಟಕದ ಇತಿಹಾಸದಲ್ಲಿಯಾಗಲೀ, ಭಾರತ ಇತಿಹಾಸದಲ್ಲಿಯಾಗಲೀ ಅಥವಾ ಪ್ರಜಾಪ್ರಭುತ್ವದ ಪದ್ಧತಿ ಇರತಕ್ಕಂಥ ಯಾವ ದೇಶದ ಇತಿಹಾಸದಲ್ಲಿಯೇ ಆಗಲಿ, ಒಬ್ಬ ಮಂತ್ರಿ ರಾಜೀನಾಮೆ ಕೊಡಬೇಕೆಂಬ ಕಾರಣಕ್ಕಾಗಿ ಧರಣಿ ನಡೆದಿಲ್ಲ. ಈಗ ಇವರುಗಳಿಂದ ನಡೆದಿದೆ. ಆದ್ದರಿಂದ ಈ ಒಂದು ಕೀರ್ತಿ ಬೇರೆಬೇರೆ ಪಕ್ಷದವರೂ ಇರತಕ್ಕಂಥ ವಿರೋಧ ಪಕ್ಷಕ್ಕೆ ಹೋಗಬೇಕೇ ಹೊರತು ಬೇರೆ ಯಾರಿಗೂ ಅಲ್ಲ. ಅವರುಗಳನ್ನು ಬಿಟ್ಟು ಸಭೆ ನಡೆಯಬೇಕೆಂಬ ಉದ್ದೇಶ ನಮಗೆ ಇರಲಿಲ್ಲ. ಇದನ್ನು ನಾನು ಮೊದಲೇ ಸ್ಪಷ್ಟ ಪಡಿಸಿದ್ದೇನೆ. ಆದ್ದರಿಂದ ಅವರುಗಳು ಸಭೆಯಲ್ಲಿ ಭಾಗವಹಿಸಿ ಸಲಹೆಗಳನ್ನು ಕೊಡಬಹುದಾಗಿತ್ತು. ಆದರೆ ಈ ರೀತಿ ಸರ್ಕಾರದ ಮೇಲೆ ತಪ್ಪು ಹೇಳುತ್ತಾ ಹೋಗಿ ಆ ಕಡೆಯ ಬೆಂಬಲ ಮತ್ತು ಈ ಕಡೆಯ ಬೆಂಬಲ ಎರಡನ್ನೂ ಸಹ ಕಳೆದುಕೊಂಡು ಈಗ ಜನತೆಯ ಮುಂದೆ ಹೋಗಿದ್ದಾರೆ. ಮಳೆ ಬಂದಾಗ ಕೊಡೆಯ ಕೆಳಗೆ ನಾಲ್ಕು ಜನರು ಸೇರಿಕೊಂಡಂತೆ, ನಾಲ್ಕು ಪಕ್ಷದವರು ಈಗ ಒಂದು ಕಡೆ ಸೇರಿದ್ದಾರೆ. ಮತ್ತೆ ಸಾರ್ವಜನಿಕರ ಮುಂದೆ ಹೋಗಿ ಇಬ್ರಾಹಿಂ ಪ್ರಕರಣದ ಬಗ್ಗೆ ಮತ್ತು ಅವರು ಹಾಗೆ, ಇವರು ಹೀಗೆ ಎಂದು ಭಾಷಣ ಮಾಡುತ್ತಿದ್ದಾರೆ. ಇದನ್ನೆಲ್ಲಾ ಜನರು ಕೇಳಿ ಕೇಳಿ ಬೇಜಾರಾಗಿ ಸುಸ್ತಾಗಿದ್ದಾರೆ. ಇದರ ಜೊತೆಗೆ ವಿರೋಧ ಪಕ್ಷವನ್ನು ಚೆನ್ನಾಗಿ ಬೆಳೆಸಿದ ನಂತರ ತಮ್ಮ ತಮ್ಮ ಪಕ್ಷಗಳಿಗೆ ಜನತೆಯ ಬೆಂಬಲ ಕಡಿಮೆಯಾದರೆ ಏನು ಮಾಡುವುದು ಎಂಬತಕ್ಕಂಥ ಅಂಶವನ್ನೂ ಸಹ ಅವರು ಯೋಚಿಸುತ್ತಿದ್ದಾರೆ. ಒಟ್ಟಿನಲ್ಲಿ ಇವರುಗಳು ಜನತೆ ಮುಂದೆ ಹೋಗಿ ಇಲ್ಲಸಲ್ಲದ ವಿಚಾರಗಳನ್ನೆಲ್ಲಾ ಹೇಳಿಕೊಂಡಿದ್ದಾರೆ. ಅದನ್ನೆಲ್ಲಾ ಕೇಳುವುದು ಬಿಡುವುದು ಜನತೆಗೆ ಸೇರಿದ್ದು. ಕೊನೆಯಲ್ಲಿ ಜನತೆಯ ತೀರ್ಮಾನಕ್ಕೆ ನಾವೆಲ್ಲರೂ ತಲೆಬಾಗಬೇಕಾಗುತ್ತದೆ. ಆ ದಿನ ತಮ್ಮ ಮಾತಿಗೂ ಅವರು ಬೆಲೆ ಕೊಡಲಿಲ್ಲ. ತಾನು ಓಟಿಗೆ ಹಾಕುವುದಕ್ಕೆ ಮೊದಲೂ ಸಹ

ಮತ್ತೊಮ್ಮೆ ಯೋಚನೆ ಮಾಡಿ ನೋಡಿ ಇಂತಹ ಒಂದು ಪವಿತ್ರವಾದಂಥ ಸನ್ನಿವೇಶವನ್ನು ಕಳೆದುಕೊಳ್ಳಬೇಡಿ, ಅನೇಕ ಗಹನವಾದಂಥ ವಿಚಾರಗಳನ್ನು ಚರ್ಚೆ ಮಾಡುವುದಿದೆ, ಆದಕಾರಣ ತಮ್ಮ ಸ್ಥಳಗಳಿಗೆ ವಾಪಸ್ ಹೋಗಿ, ತಾವು ಸಭೆಯಲ್ಲಿ ಇಲ್ಲದಿದ್ದರೆ ಸಭೆ ಶೋಭಿಸುವುದಿಲ್ಲ, ಇರತಕ್ಕಂಥ ವಿಚಾರಗಳನ್ನು ಚರ್ಚೆ ಮಾಡಲು ಅನೇಕ ಮಾರ್ಗಗಳು ಇವೆ ಎಂದು ನಾವು ಅನೇಕ ಸಲ ಮನವಿ ಮಾಡಿಕೊಂಡರೂ ಸಹ ಅವರು ತಮ್ಮ ಮನವಿಯನ್ನು ತಿರಸ್ಕಾರ ಮಾಡಿ ಹೋದರು.

ಆದರೆ ಅವರು ತಮ್ಮ ಮನವಿಯನ್ನು ತಿರಸ್ಕಾರ ಮಾಡಿದರು, ತಮ್ಮ ಮನವಿಯನ್ನು ತಿರಸ್ಕಾರ ಮಾಡಬೇಕು ಎಂದು ನನ್ನ ಉದ್ದೇಶವಿಲ್ಲ. ಇವತ್ತು ಅತ್ಯಂತ ಪವಿತ್ರವಾದಂಥ ಅಧ್ಯಕ್ಷರ ಸ್ಥಾನ. ಅಧ್ಯಕ್ಷರಿಗೆ ಪಕ್ಷವಿಲ್ಲ. ಅಧ್ಯಕ್ಷರು ಒಂದು ಸಾರಿ ಚುನಾಯಿತರಾಗಿ ಬಂದು ಪೀಠವನ್ನು ಅಲಂಕರಿಸಿದರೆ ಎಲ್ಲರಿಗೂ ಸಮಾನವಾಗಿ ನೋಡುವರು. ಅದಕ್ಕೋಸ್ಕರ ಮೇಲ್ಗಡೆ ಇರುವಂಥಾದ್ದು. ವಿರೋಧಪಕ್ಷದವರ ಸಂಖ್ಯೆ ಕಡಿಮೆ ಇರಲಿ, ಆಡಳಿತ ಪಕ್ಷದವರ ಸಂಖ್ಯೆ ಆದರೂ ಸಹ ಸಭೆಯಲ್ಲಿ ನ್ಯಾಯವನ್ನು ಎತ್ತಿ ಹಿಡಿಯುವುದರಲ್ಲಿ, ಪ್ರಜಾಪ್ರಭುತ್ವದ ಮೌಲ್ಯ ಎತ್ತಿ ಹಿಡಿಯುವುದರಲ್ಲಿ, ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯುವುದರಲ್ಲಿ ಮತ್ತು ದೇಶದಲ್ಲಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಮತ್ತು ವಿಶ್ವಾಸ ಬರುವ ರೀತಿಯಲ್ಲಿ ನೋಡಿಕೊಳ್ಳುವುದರಲ್ಲಿ ತಮ್ಮ ಸ್ಥಾನ ಪವಿತ್ರವಾದಂಥ ಸ್ಥಾನ. ಈ ಸ್ಥಾನದಿಂದ ಒಂದು ಮಾತು-ಬಂತು ಅಂದರೆ ಸಭಾ ನಾಯಕ ವಿರೋಧಪಕ್ಷದ ಸದಸ್ಯರಾಗಲಿ ಯಾರೋ ಆಗಲಿ ಅದಕ್ಕೆ ಮನ್ನಣೆ ಕೊಡಬೇಕು. ಕೋನೇಪಕ್ಷ ಮಾಡುತ್ತೇನೆ ಎಂದಾದರೂ ಹೇಳಬೇಕು. ಆ ಒಂದು ಸೌಜನ್ಯವನ್ನೂ ಸಹ ನಮ್ಮ ಮಿತ್ರರಲ್ಲಿ ಇರಲಿಲ್ಲ. ತಾವು ಪದೇ ಪದೇ ಎದ್ದು ಮನವಿ ಮಾಡಿದರೂ ಸಹ ತಮ್ಮ ಹಠವನ್ನು ಬಿಡದೆ ಈ ಸಭೆಯ ಕಾರ್ಯಕಲಾಪಗಳನ್ನು ನಿಲ್ಲಿಸಬೇಕು ಮತ್ತು ಸರ್ಕಾರವನ್ನು ಪೇಚಿಗೆ ಸಿಕ್ಕಿಸಬೇಕು ಎನ್ನುವಂಥ ದೃಷ್ಟಿಯಿಂದ ಜನನೀತಿಗೆ ವಿರೋಧವಾದಂಥ ರೀತಿ ನಡೆದುಕೊಂಡಿದ್ದರಿಂದ ನಾವು ಒಂದು ತೀರ್ಮಾನವನ್ನು ಕೈಗೊಳ್ಳಬೇಕಾಯಿತು. ಇಲ್ಲದೇ ಹೋದರೆ ರಾಜ್ಯದ 4 ಕೋಟಿ ಜನರಿಗೆ ಜವಾಬ್ದಾರರಾಗಿದ್ದೇವೆ. ನಾವು ಪದೇ ಪದೇ ಹೇಳುತ್ತಾ ಇದ್ದೇವೆ. All the 224 Legislators of House, directly or indirectly, are responsible, accountable and answerable to the people of Karnataka. ನಾವು ನಮ್ಮ ಜವಾಬ್ದಾರಿಕೆಯನ್ನು ವೈಯುಕ್ತಿಕವಾದಂಥ ಕಾರಣಗಳಿಂದ, ರಾಜಕೀಯ ದ್ವೇಷದ ಕಾರಣಗಳಿಂದ, ಮತ್ತು ಯಾವುದೋ ತಮ್ಮ ಮನಸ್ಸಿನಲ್ಲಿ ಖೇದವನ್ನು ಇಟ್ಟುಕೊಂಡು ಅದನ್ನು ಇನ್ನಾವ ರೀತಿಯೂ ತೋರಿಸಿಕೊಳ್ಳುವುದಕ್ಕೆ ಸಾಧ್ಯತೆಯಿಲ್ಲ ಎನ್ನುವ ಕಾರಣದಿಂದ ಪ್ರಜಾಪ್ರಭುತ್ವದ ಮೌಲ್ಯಕ್ಕೆ ವಿರೋಧಪಕ್ಷದವರು ಪೆಟ್ಟನ್ನು ಕೊಟ್ಟಿದ್ದಾರೆ ಎಂದರೆ ಆಶ್ಚರ್ಯಪಡಬೇಕಾದ್ದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ನಡೆದ ಘಟನೆಯನ್ನು ಕೇಳಿದ್ದೇನೆ. ನಮಗೆ ಅದರ ಯೋಚನೆ ಇಲ್ಲ. ನಾನು ಮೊನ್ನೆ ದಿವಸ ಹೇಳಿದೆ, ಕಳ್ಳಭಟ್ಟಿ ಪ್ರಕರಣದಲ್ಲಿ

ಭಾಷಣ ಮಾಡುತ್ತಾ ಹೇಳಿದೆ. ಇಂತಹ ವಿಚಾರಗಳು ಬಂದಾಗ ಚರ್ಚೆಮಾಡಲಿ,ಅದು ಬಿಟ್ಟು ರಾಜಕೀಯ ಮಾಡುವುದಕ್ಕೆ ಹೊರಟು ಬಿಟ್ಟರು. ಯಾವುದಕ್ಕೆ ರಾಜಕೀಯ ಮಾಡಬೇಕು, ಯಾವುದಕ್ಕೆ ಮಾಡಬಾರದು ಎಂದು ಯೋಚನೆ ಮಾಡದೆ ಏನಾದರೂ ಆಗಲಿ ಸರ್ಕಾರದವರು ರಾಜೀನಾಮೆ ಕೊಡಲಿ ಎಂದು ಹೇಳಿಕೊಂಡು ಹೋದರೆ ಯಾವ ಸರ್ಕಾರ ಇದನ್ನು ಕೇಳುತ್ತದೆ. ಗೌರವ ಎಲ್ಲಿರುತ್ತದೆ. ವಿರೋಧ ಪಕ್ಷಕ್ಕೆ ಏನು ಬೆಲೆ ಕೊಡಬೇಕು. ಮಾನ್ಯ ಅಧ್ಯಕ್ಷರೆ ಒಂದು ವಿಷಯದ ಬಗ್ಗೆ ಒಂದು ವಿರೋಧಪಕ್ಷದವರು ಮಾತನಾಡಿದರೆ, ಒಂದು ವೇದಿಕೆಯ ಮೇಲೆ ವಿರೋಧಪಕ್ಷದ ಸದಸ್ಯರು ಹೇಳಿದರೆ ಅಥವಾ ಪತ್ರಿಕೆ ಮೂಲಕ ತಿಳಿಸಿದರೆ., ಸರ್ಕಾರ ತನ್ನ ಎರಡು ಕಿವಿಗಳನ್ನು ಎಚ್ಚರಿಸಿ ಕಣ್ಣು ಬಿಟ್ಟು ನೋಡುವ ತರಹ ಮಾತುಗಳನ್ನು ಹೇಳಬೇಕು, ಬರೆಯಬೇಕು. ಇವತ್ತು ಮೂರು ಕಾಸಿನ ಬೆಲೆ ಇಲ್ಲ ಪ್ರತಿಯೊಂದಕ್ಕೂ ತಮಾಷೆಯಾಗಿದೆ. ಜನಗಳಿಗೆ ಬೇಜಾರು ಆಗಿದೆ. ಇವರಿಗೆ ಬೇರೆಸಮಸ್ಯೆಗಳಿಲ್ಲವೆ ದೇಶದಲ್ಲಿ ಬೇರೆ ವಿಷಯವಿಲ್ಲವೆ ಎಂದು ಜನರಿಗೆ ಬೇಜಾರು ಆಗಿದೆ. ಪೇಪರನ್ನು ಓದಲು ಕೊಂಡು ಕೊಂಡರೆ ಫ್ರಂಟ್‌ಪೇಜ್‌ನಲ್ಲಿ ಇಬ್ರಾಹಿಂ, ಖಾನ್, ಗುಂಡೂರಾಯರು ಇದೊಂದು ದೇಶದ ಇವತ್ತಿನ ದಿವ್ಸ ನ್ಯೂಸ್‌ಪೇಪರ್ ಹೋಗಿ ವ್ಯೂಸ್‌ಪೇಪರ್ ಆಗಿದೆ. ಏನಾದರೂ ಪತ್ರಿಕೆಯವರನ್ನು ಕಂಡರೆ ಮುಖ್ಯ ಮಂತ್ರಿಯವರಿಗೆ ಆಗುವುದಿಲ್ಲ ಎಂದು ಶುದ್ಧ ಸುಳ್ಳು, ಸತ್ಯಕ್ಕೆ ದೂರವಾದುದು ಬರೆಯುತ್ತಾರೆ. ಏನು ಮಾಡೋಣ ನಾವು ಹೇಳಿದರೂ ತಪ್ಪು, ಹೇಳದೇ ಹೋದರೂ ತಪ್ಪು, ಪೇಪರಿನಲ್ಲಿ ಎಡಿಟೋರಿಯಲ್ ಕಾಲಂ ಇರುತ್ತದೆ. ಎರಡನೇ ಪುಟದಲ್ಲಿ ಅಥವಾ ಮೂರನೇ ಪುಟದಲ್ಲಿ ಎಡಿಟೋರಿಯಲ್ ಕಾಲಂ ಬರುತ್ತದೆ. ಮೂರನೇ ಪುಟದಲ್ಲಿ ಎಡಿಟೋರಿಯಲ್ ಬರೆದರೆ ಓದುವುದಿಲ್ಲ ಎಂದು ಫ್ರಂಟ್‌ಪೇಜಿನಲ್ಲೇ ಬರೆಯುವುದಕ್ಕೆ ಶುರುಮಾಡಿದ್ದಾರೆ. ಇಂಟರ್‌ನ್ಯಾಷನಲ್ ಲೆವೆಲ್ ಪೇಪರ್ಸೂ ಬರೆಯುವುದಿಲ್ಲ. ಫ್ರಂಟ್‌ಪೇಜ್‌ನಲ್ಲಿ ಬರೆಯುತ್ತಾರೆ. ಇವತ್ತು ಎಡಿಟರ್ಸ್ ರಾಜಕೀಯ ಭಾಷಣ ಮಾಡುವುದಕ್ಕೂ ಹೊರಟುಬಿಟ್ಟರು. ಇಂಪಾರ್ಷಿಯಲ್ ಪೇಪರ್ ಎಂದು ಯಾವುದನ್ನು ಕರೆಯುತ್ತೇವೋ ಅಂತಹ ಪತ್ರಿಕೆಯವರು ಈ ರೀತಿ ಮಾಡಿದರೆ ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳುವ ಪರಿಸ್ಥಿತಿ ಇಲ್ಲ. Their's a party paper. It is a politically motivated paper, which makes an anti-government propaganda. The Editors are making anti government speeches through editorials. How far is it possible to get justice?

ಇನ್ನೊಂದು ವಿಷಯವೇನೆಂದರೆ, ಚುನಾವಣೆ ಬರಲಿ, ನಾಳೆ ಬರಲಿ ಬರುವ ವರ್ಷಕ್ಕೆ ಬರಲಿ ಅಂತೂ ಚುನಾವಣೆ ಬಂದೇ ಬರುತ್ತದೆ. ಅಲ್ಲಿ ತೀರ್ಮಾನವಾಗುತ್ತದೆ. ನಮಗೆ ಪತ್ರಿಕೆಗಳು ಸಹಾಯ ಮಾಡಬೇಕು. ನಮ್ಮ ತಪ್ಪನ್ನು ಎತ್ತಿ ಹೇಳಬೇಕಾದರೆ, ಆತ್ಮ ಮನಸ್ಸು ಶುದ್ಧವಾಗಿರಬೇಕು; ಇಂಥಾ ಮನಸ್ಸನ್ನು ಇಟ್ಟುಕೊಂಡು ಸರ್ಕಾರದ ವಿರುದ್ಧ ಬರೆಯುತ್ತಾ ನಾವೇನು ಮಾಡುವುದಕ್ಕಾಗುವುದಿಲ್ಲ. ಅವರೇ ಆತ್ಮ ಶೋಧನೆ ಮಾಡಿಕೊಳ್ಳಲಿ,

ಇನ್ನೊಬ್ಬರ ಆತ್ಮವನ್ನು ಶೋಧನೆ ಮಾಡುವಾಗ ತಮ್ಮಲ್ಲಿ ಎಷ್ಟು ಕಲ್ಮಷವಿದೆ ನೋಡಿಕೊಂಡು ನೋಡಿದರೆ ಗೊತ್ತಾಗುತ್ತದೆ. ಕನ್ನಡಪ್ರಭ ಪತ್ರಿಕೆಯ ಎಡಿಟರ್ ಏನಿದ್ದಾರೆ ಚುನಾವಣೆಗೆ ನಿಲ್ಲಲಿ, ಡಿಪಾಜಿಟ್ ಉಳಿದುಕೊಂಡರೆ ಅವರ ಪುಣ್ಯ. ನೋಡಿಕೊಳ್ಳೋಣ. ಅದು ಕೆಟ್ಟಿದೆ; ಚುನಾವಣೆ ಎದುರಿಸಲಿ ಚುನಾವಣೆಗೆ ಬಂದು ನಿಂತುಕೊಂಡರೆ ಅದು ಪ್ರಜಾಪ್ರಭುತ್ವ ಮೌಲ್ಯದ ಅಖಾಡ ಅಂದರೆ ಚುನಾವಣೆ, ಅಲ್ಲಿ ಏನು ಪಟ್ಟು ಹಾಕುತ್ತಾರೋ, ನಾವೂ ಹಾಕುತ್ತೇವೆ. ಅಲ್ಲಿ ಹೋಗಿ ರಾಜಕೀಯ ಭಾಷಣ ಮಾಡುವುದು, ಇಲ್ಲಿ ಸರ್ಕಾರದ ಮಾತನಾಡಿದರೆ, ಇವತ್ತು ಎಡಿಟೋರಿಯಲ್ ಓದಿದರೆ ನಾವು ತಿಳಿದುಕೊಳ್ಳುವುದು ಏನು ನಗಾಡುತ್ತಾರೆ ಸರ್ಕಾರದವರನ್ನು ಬಯ್ಯುತ್ತಾ ಇಲ್ಲಿ ಬರೆದರೆ ಯಾರು ಕೇಳುತ್ತಾರೆ. People are laughing at them. Edmoad Berke, While expressing his grateful thanks to the Press people of India, once remarked-

"you abuse me; you criticize me; you praise me but keep my name on the board"

Similarly, I am also thankful to the Press for giving me publicity. You do whatever you want to, but my name is on board. Without me, you cannot do anything. Take any Magazine any newspaper and take anything, you will find me. I need not be introduced by any body in train or in plane. I wish the press continues the samething.

25.20 ವರ್ಷಗಳ ಹಿಂದೆಯೇ ನನ್ನ ಫೋಟೋ ಹಾಕಲಿಲ್ಲವಲ್ಲಾ ಅಂತ ಬೇಜಾರು ನನಗೆ. When I was 25 or 30 years old. ಫೋಟೋ ಹಾಕಿದ್ದರೆ so many offers would have come for me. Becasue I have a laughing face, good height, good look and so on. Any way even I am not sorry for it.

ಶ್ರೀ ತೆಕ್ಕೇಡ್.- ಅಕ್ಕರವರಿಗೆ ಹೀಗೆ ಹೇಳಿದ್ದು ಗೊತ್ತಾದರೆ ಏನು ಆದೀತ್ರಿ?

Sri R. GunduRao - The press people are damaging the interest of Karnataka, the image and character of the people of Karnataka, industrial relations of Karnataka. All these things are hampered because of the anti-social activities of the press. If at all there is any blame, it is not on the Governemnt but it is on the press. I am not important and I am only symbolic here. I am

nothing. ಈ ದೇಶದ ಜನ ಇಂಪಾರ್ಟೆಂಟ್. ಕರ್ನಾಟಕ ಜನ ಇಂಪ್ರೂವ್ ಆಗಬೇಕಾದರೆ, ಇವತ್ತು ಕಾವೇರಿ, ಕೃಷ್ಣಾ, ತುಂಗಭದ್ರಾ, ಕಬಿನಿ ಹಾರಂಗಿ ನದಿಗಳಲ್ಲಿ ಇವತ್ತು ಬೇಕಾದಷ್ಟು ಸಮಸ್ಯೆಗಳು ಇವೆ. ಇವತ್ತು ನಮ್ಮ ಪ್ಲಾನಿಂಗ್ ಕಮಿಷನ್ನಿನಿಂದ ಅಪ್ರೂವ್ ಆಗಿಲ್ಲ. ಇವತ್ತು ಈ ನೀರಾವರಿ ಯೋಜನೆಗಳಿಗೆ ಹಣ ಸಾಲುತ್ತಿಲ್ಲ. ಇವತ್ತು ಕೋಟಿಗಟ್ಟಲೆ ಹಣವನ್ನು ನಾವು ಖರ್ಚು ಮಾಡಿದ್ದೇವೆ. ಲಕ್ಷಾಂತರ ರೈತರಿಗೆ ನಾವು ಸಹಾಯವನ್ನು ಒದಗಿಸಿಕೊಂಡಿದ್ದೇವೆ. ಅದರ ಬಗ್ಗೆ ಬರೆಯುತ್ತಿಲ್ಲ. ಪ್ರತಿ ದಿವಸ ಬೇರೆ ಒಂದು ಚಿತ್ರವನ್ನು ಕೊಟ್ಟು ಕೊಂಡು ಬರುತ್ತಿದ್ದಾರೆ. ಇವತ್ತಿನ ದಿವಸ ನಾನು ಇರಬಹುದು ನಾಳೆ ನಾನು ಹೋಗಬಹುದು. ಅದು ಮುಖ್ಯವಲ್ಲ. ನಾನು ಅನೇಕ ಸಾರಿ ಹೇಳಿದ ಹಾಗೆ ನಮಗೆ ಏನಿದೆ? No-body can take off my Ex-chief Ministership till my death. Even after a death, I will be called as Ex-Chief Minsiter. It is not the Chief Minster or the Minister or the President, MLA., who is important. That State is important. ಆದುದರಿಂದ ಇವತ್ತು ನಾವು ದೇಶಕ್ಕೋಸ್ಕರವಾಗಿ, ನಮ್ಮ ಜನರಿಗೋಸ್ಕರವಾಗಿ ಕೆಲವು ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡುವಾಗ ತಪ್ಪಿದ್ದರೆ ಹೇಳಲಿ, ಅದನ್ನು ಬಿಟ್ಟು ಪ್ರತಿದಿನ ಇಲ್ಲದೇ ಇರುವುದನ್ನು ಬರೆಯುತ್ತಾ ಹೋದರೆ, ಆ ತಪ್ಪನ್ನು ಅವರು ತಿದ್ದಕೊಳ್ಳಬೇಕಾಗುತ್ತೆ. ಈ ಸದನ ಬಹಳ ಪ್ರಾಮುಖ್ಯವಾದುದು. ಆದುದರಿಂದ ನಾವು ಈ ಸದನದ ಮೂಲಕ ಕರ್ನಾಟಕ ಜನತೆಗೆ ಉತ್ತರ ಕೊಡಬೇಕಾಗುತ್ತದೆ. 4 ಕೋಟಿ ಜನರಿಗೆ ನಾವು ಉತ್ತರ ಕೊಡಬೇಕಾಗುತ್ತದೆ. ಆದುದರಿಂದ ನಾನು ಕೇಳಿಕೊಳ್ಳುವುದೇನೆಂದರೆ, ಇವತ್ತು ನಿಮಗೆ ನಮ್ಮ ಮೇಲೆ ವೈಮನಸ್ಸು ಇದ್ದರೆ ನಮ್ಮ ನೀತಿಯ ಮೇಲೆ ವಿರೋಧವಿದ್ದರೆ, ಅದನ್ನು ಬೇರೆ ಕಡೆ ಚರ್ಚೆ ಮಾಡಬಹುದೇ ಹೊರತು out of the way ಹೋಗಿ ಮುಖ್ಯಮಂತ್ರಿಗಳವರ ಇಮೇಜಿಗೆ ಟಾರ್ನೀಶ್ ಮಾಡುತ್ತೇವೆಂದು ಹೋದರೆ ಅದು ಆಗುವುದಿಲ್ಲ. ಆ ರೀತಿ ಪ್ರಯತ್ನ ಪಟ್ಟರೂ ಕೂಡ ಮುಖ್ಯಮಂತ್ರಿಗಳವರ ಮೇಲಾಗಲೀ, ಅಥವಾ ಮಂತ್ರಿಮಂಡಲದ ಮೇಲೆ ಅಥವಾ ತಮ್ಮ ಸರ್ಕಾರದ ಮೇಲಾಗಲೀ ಯಾವುದೇ ಪರಿಣಾಮವಾಗುವುದಿಲ್ಲ. ಅದರ ಪರಿಣಾಮ ಕರ್ನಾಟಕದ ಜನತೆಯ ಮೇಲೆ ಆಗುತ್ತದೆ. ಅದಕ್ಕೆ ಕರ್ನಾಟಕದ ಜನತೆಗೆ ಇವತ್ತಲ್ಲ ನಾಳೆ ಉತ್ತರ ಕೊಡಬೇಕಾಗುತ್ತದೆ. ಉತ್ತರ ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಇದೆಲ್ಲವನ್ನೂ ಸಹ ಚುನಾವಣೆ ಸಮಯ ಬಂದಾಗ ನಾವು ನಿಂತು ಹೇಳುವುದಕ್ಕೆ ತಯಾರಾಗಿದ್ದೇವೆ. ಆದುದರಿಂದ ನನ್ನ ಪ್ರಾರ್ಥನೆ ಏನೆಂದರೆ ಅವರು ತತ್ವ, ಮೌಲ್ಯಗಳನ್ನು ಉಳಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಅದಿಲ್ಲದೇ ಅವರು ಇದೇ ರೀತಿ ಬರೆಯುತ್ತಾ ಹೋದರೆ, It is left to the people of Karnataka . Let the people of Karnataka decide tomorrow about the performance and writings of the press. ಅಧ್ಯಕ್ಷರೇ, ಶ್ರೀ ಇಬ್ರಾಹಿಂರವರನ್ನು, ಮಂತ್ರಿಮಂಡಲದಿಂದ ತೆಗೆದು ಹಾಕುವಂಥಾದ್ದು ಬಿಡುವಂಥಾದ್ದು ಮುಖ್ಯಮಂತ್ರಿಗಳಿಗೆ

ಸೇರಿದಂಥ ವಿಷಯ. ಆದುದರಿಂದ ಆ ಒಂದು ವಿಷಯದ ಬಗ್ಗೆ ನಾವು ಧರಣಿ ಕೂತು, ಕೆಲಸ ಕಾರ್ಯಗಳಿಗೆ ಅಡ್ಡಿ ಪಡಿಸುತ್ತೇವೆಂದು ಹೇಳುವುದು ನ್ಯಾಯವಾಗಿರಲಿಲ್ಲ.ಅವರು ನಡೆದುಕೊಂಡ ರೀತಿಯಿಂದ ನಾವು ಕಾನೂನು ರೀತ್ಯಾ ಅವರನ್ನು ಹೊರಗಡೆ ಕಳುಹಿಸಬೇಕಾಯಿತು. ಅವರು ಏನು ತಿಳಿದು ಕೊಂಡಿದ್ದರು ಎಂದರೆ, ನಮ್ಮನ್ನೆಲ್ಲಾ ಹೊರಗಡೆ ಕಳುಹಿಸಿ ಬಿಟ್ಟರೆ ನಾಳೆ ಜನ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಬಿಡುತ್ತಾರೆ ಎಂದು ಜನ ಬಿದ್ದು ಬಿಡುತ್ತಾರೆಂದು ತಿಳಿದುಕೊಂಡಿದ್ದರು. ಆದರೆ ಜನ ನಮಗಿಂತ ಬುದ್ಧಿವಂತರಿದ್ದಾರೆ. ಜನ ಸಹ ಸರ್ಕಾರ ಯಾವ ರೀತಿಯಾಗಿ ನಡೆದುಕೊಳ್ಳತ್ತಿದೆಂಬುದನ್ನು ನೋಡುತ್ತಿದ್ದಾರೆ. ಹಿಂದಿನ ಸರ್ಕಾರ ಈಗಿನ ಸರ್ಕಾರಕ್ಕೂ ವ್ಯತ್ಯಾಸವೇನೆಂಬುದನ್ನು ನೋಡಿ ಪರೀಕ್ಷೆ ಮಾಡುತ್ತಿದ್ದಾರೆ. ಅಧ್ಯಕ್ಷರೇ, ಇವತ್ತು ಈ ಸದನದ ಮೂಲಕ ವಿರೋಧ ಪಕ್ಷದ ನಾಯಕರವರಿಗೆ ಮತ್ತು ಬೇರೆಯವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ವಿರೋಧ ಪಕ್ಷದವರು ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ವ್ಯಕ್ತಿ ದ್ವೇಷವನ್ನಿಟ್ಟುಕೊಂಡು ಭಾಷಣ ಮಾಡುತ್ತಾ ಹೋಗುತ್ತಾ ಇರುವುದರಿಂದ ಅದರ ರಿಜಲ್ಟ್ ಏನಾಗಿದೆ ಎಂದರೆ ಇವತ್ತು ಚುನಾವಣೆಗಳಲ್ಲಿ ಏನಾಗಿದೆ ಎಂದರೆ 1980ನೇ ಇಸವಿಯಲ್ಲಿ ನಡೆದಂಥ ಚುನಾವಣೆಯಲ್ಲಿ 28ಕ್ಕೆ 27 ಸ್ಥಾನವೂ ಕೂಡ ನಮ್ಮ ಪಕ್ಷಕ್ಕೆ ಬಂತು. ಅದೇ ರೀತಿ ನಾಳೆ ವಿಧಾನ ಸಭೆಯ ಚುನಾವಣೆ ನಡೆದರೂ ಸಹ 224 ಸ್ಥಾನಕ್ಕೆ 200 ಸ್ಥಾನಗಳಿಗೂ ಹೆಚ್ಚು ಸ್ಥಾನ ನಮ್ಮ ಪಕ್ಷಕ್ಕೆ ಬರುತ್ತದೆ. ಅದರಲ್ಲಿ ಯಾವ ಅನುಮಾನವೂ ಇಲ್ಲ ಎಂದು ಘಂಟಾಘೋಷವಾಗಿ ಇವತ್ತು ಈ ಸಭೆಯಲ್ಲಿ ಹೇಳುತ್ತೇನೆ. ಅಷ್ಟು ನಂಬಿಕೆ, ವಿಶ್ವಾಸ ನಮ್ಮ ಸರ್ಕಾರದ ಮೇಲಿದೆ.

ಈ ತರಹದ ಒಂದು ನೀತಿಯಲ್ಲಿ ವಿರೋಧ ಪಕ್ಷ ನಮಗೆ ಬೇಕು. We welcome Oppostion we welcome constructive Opposition. We welcome cosntructive criticism. ಇಂಥ ಕಡೆ ತಪ್ಪು ಮಾಡಿದ್ದಾರೆ, ಹೀಗೆ ಕಾರ್ಯ ನಡೆಸಿದ್ದಾರೆ, ಇಂಥದ್ದನ್ನು ಸರಿಪಡಿಸಬೇಕು ಎಂದು ಹೇಳಿ. ದೇಶದ ಹಾಗೂ ರಾಜ್ಯದ ಹಿತದೃಷ್ಟಿಯನ್ನು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡುವ ಹಿತದೃಷ್ಟಿಯನ್ನು ಇಟ್ಟುಕೊಂಡು ಟೀಕೆ ಮಾಡುವುದಕ್ಕೆ ವಿರೋಧ ಪಕ್ಷ ಬೇಕು. ಅದನ್ನು ಬಿಟ್ಟು ಯಾವಾವುದೋ ಕಾರ್ಯಗಳಿಗೆ ದ್ವೇಷಾಸೂಯೆಗಳನ್ನು ಇಟ್ಟುಕೊಂಡು ವಿರೋಧಪಕ್ಷವನ್ನು ಕಟ್ಟುತ್ತೇವೆ ಬೆಳೆಸುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಇವತ್ತು ನಮ್ಮ ದೇಶದಲ್ಲಿ ವಿರೋಧ ಪಕ್ಷದ ಗತಿ ಏನಾಗಿದೆ ಎಂಬುದನ್ನು ನೋಡಿ. ಯಾವ ರಾಜ್ಯದಲ್ಲೂ ವಿರೋಧ ಪಕ್ಷ ಇವತ್ತಿನ ದಿವಸ ಮನ್ನಣೆ ಪಡೆಯುತ್ತಿಲ್ಲ. It is not the fault of the people. It is their own fault and their own omission and commission. ಒಂದು ಒಳ್ಳೆಯ ರಚನಾತ್ಮಕವಾದ ವಿರೋಧ ಪಕ್ಷವನ್ನು ಕಟ್ಟುವುದು ಬಿಟ್ಟು ಈ ರೀತಿ ಯಾವ್ಯಾವುದೋ ನೆಪ ಹೂಡಿಕೊಂಡು ಹೋಗುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ.

ಆದುದರಿಂದ 1982 ಅಥವಾ 1983ರಲ್ಲಿ ಚುನಾವಣೆಯಾದರೂ there will be no recognised opposition in Karnataka. People will never vote for them. It will not be a surprise if they do not get even ten seats. ನಾನು ಆಗ ಮಾನ್ಯ ದೇವರಾಜ ಅರಸುರವರಿಗೆ ಹೇಳುತ್ತಿದ್ದೆ. ನೀವು ಏಕೆ ಇಂದಿರಾಗಾಂಧಿಯವರನ್ನು ಬಿಡುತ್ತೀರಿ. ಬಿಟ್ಟರೆ ನಿಮಗೆ ಒಂದು ಸೀಟನ್ನು ಕೂಡ ಪಡೆಯುವುದಕ್ಕಾಗುವುದಿಲ್ಲ ಎಂದು. ಆದರೂ ಅವರು ನನ್ನ ಮಾತನ್ನು ಕೇಳಲಿಲ್ಲ. ಜನತಾದಳದವರು ಕೂಡ ನಮಗೆ 10-15 ಸೀಟುಗಳು ಬರುತ್ತದೆಂದು ಎಲ್ಲವನ್ನು ಲೆಕ್ಕ ಹಾಕಿದ್ದು ಹಾಕಿದ್ದೆ. ಆಗ ಬಿ.ಜೆ.ಪಿ. ಹಾಗೂ ಲೋಕದಳದವರೆಲ್ಲ ಒಟ್ಟಾಗೀ ಇದ್ದರು ಈಗ ಅದು ಇನ್ನೂ ಅವ್ಯವಸ್ಥೆಯಾಗಿದೆ. ಗ್ರೋವರ್ ಕಮೀಷನ್ ಮುಂದೆ ಹೋದ ದೇವರಾಜ ಅರಸುರವರ ವಿಚಾರ ಏನಾಯಿತು ಎಂದು ಇವತ್ತು ಜನ ಕೇಳುತ್ತಾರೆ. ಅಖಿಲ ಭಾರತ ಜನತಾ ಪಕ್ಷದ ಅಧ್ಯಕ್ಷರಾದ ಮಾನ್ಯ ಅಟಲ್ ಬಿಹಾರ್ ವಾಜಪೇಯಿಯವರು ಹಾಗೂ ರಾಷ್ಟ್ರದ ಹಿರಿಯ ನಾಯಕರಲ್ಲಿ ಒಬ್ಬರಾದ ಮತ್ತು ಪ್ರಧಾನಿಗಳಾಗಿದ್ದ ಶ್ರೀಮಾನ್ ಮೊರಾರ್ಜಿ ದೇಸಾಯಿಯವರು ಬೆಂಗಳೂರಿಗೆ ಬಂದು ಸಾವಿರಾರು ಜನರ ಮುಂದೆ ಕಂಠೀರವ ಸ್ಟೇಡಿಯಂನಲ್ಲಿ ಭಾಷಣ ಮಾಡಿದ್ದು ಇವತ್ತಿಗೂ ಇದೆ. ಆಗ ನಾನೂ ಕೂಡ ದೇವರಾಜ ಅರಸುರವರ ಸರ್ಕಾರದಲ್ಲಿ ಮಂತ್ರಿಯಾಗಿದ್ದೆ. ಈ ಸಂದರ್ಭದಲ್ಲಿ, ಶ್ರೀಮಾನ್ ಮೊರಾರ್ಜಿಯವರು ಹಾಗೂ ಶ್ರೀಮಾನ್ ವಾಜಪೇಯಿಯವರು ಇದು ಇಂಟರ್‌ನ್ಯಾಷನಲ್ ಕರಪ್ಟ್ ಸರ್ಕಾರ ಎಂದರು. ಹೀಗೆ ಇಲ್ಲಿಗೆ ಬಂದು ಇವರನ್ನೆಲ್ಲ ಬೈಯ್ದು ಗ್ರೋವರ್ ಕಮೀಷನ್ ಅನ್ನು ತಂದು ಫೇವರಿಟಿಸಂ ನೆಪೋಟಿಸಂ, ಕರಪ್‌ಷನ್ ಇದೆ ಎಂದೆಲ್ಲ ಚಾರ್ಜ್ ಮಾಡಿದವರನ್ನು ಇವತ್ತು ವೇದಿಕೆ ಮೇಲೆ ಕೂರಿಸಿಕೊಂಡಾಗ ಅವರು ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸುರವರೇ ಅಂದರೆ ಜನ ಏನು ಅನ್ನುತ್ತಾರೆ? They are laughing, I can understand Sri Bommai himself can speak or Sri A.K. Subbaiah himself can speak. ಅವರನ್ನು ಇವರು ಕೂರಿಸಿಕೊಂಡು ಟೌನ್‌ಹಾಲ್‌ನಲ್ಲಿ ಮೈಕ್ ಹಾಕಿ ಜನರಿಗೆಲ್ಲ ತೋರಿಸಿಕೊಟ್ಟು ಚಾರ್ಜ್ ನಂ. 1-2-3-4-5 ಎಂದೆಲ್ಲ ಫ್ರೇಂ ಮಾಡಿ ಮ್ಯಾಜಿಸ್ಟ್ರೇಟು ಮುಂದೆ ಅಫಿಡವಿಟ್ ಅನ್ನು ಹಾಕಿದವರನ್ನೆಲ್ಲಾ ಸೇರಿಸಿಕೊಂಡು ಇವತ್ತು ವಿರೋಧ ಪಕ್ಷವನ್ನು ಕಟ್ಟುತ್ತೇವೆಂದರೆ, if this is the attitude of the Opposition, ther will be no future for Opposition and it is unfortunate for Democracy and unfortunate for the country, if this attitude of the Opposition continue. Let our Opposition Leaders like Sri Vajpayee, Morarji Desai, Charan Singh now understand this and guide the people properly. That is all my request. ಇದು ಎಲ್ಲಾದರೂ ಉಂಟೆ? ಯಾರಾದರೂ ನಂಬುವುದಕ್ಕೆ ಸಾಧ್ಯತೆ ಇದೆಯೇ? ಇವರು ಯಾವ ಮೌಲ್ಯದ ಮೇಲೆ ಮಾತನಾಡುತ್ತಾರೆ? ಇವತ್ತು ಗ್ರೋವರ್ ಕಮೀಷನ್

ಹೋಯಿತು, ಅಫಿಡವಿಟ್ ಹೋಯಿತು ಯಾವುದಕ್ಕೂ ಬೆಲೆ ಇಲ್ಲ, ಆದುದರಿಂದ, ಇವರಿಗೆ ವಿರೋಧ ಪಕ್ಷವನ್ನು ಕಟ್ಟುವುದಕ್ಕೂ ಆಗುವುದಿಲ್ಲ ಮತ್ತು ಇವರು ಚುನಾವಣೆಯಲ್ಲಿ ಗೆಲ್ಲುವುದಕ್ಕೂ ಆಗುವುದಿಲ್ಲ ಅಲ್ಲದೆ ಕೆಲವರು ಠೇವಣಿಯನ್ನು ಕೂಡ ಕಳೆದು ಕೊಳ್ಳುತ್ತಾರೆ. ಮುಂದೆ ಅವರು ಬರುವ ಚಾನ್ಸ್ ಇಲ್ಲವಾದ್ದರಿಂದ ಈಗ ಇರತಕ್ಕ ಅವಕಾಶವನ್ನಾದರೂ ಉಪಯೋಗಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ತಾವು ಕೇಳಿಕೊಂಡ ಮೇಲೆ I am prepared to withdraw my resolution. I pity them. ಕೆಲವರಂತೂ ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಆಗುವುದಿಲ್ಲ. ಈಗ ಇರತಕ್ಕದ್ದೇ ಅವರಿಗೆ ಮೊದಲ ಮತ್ತು ಕೊನೆಯ ಅವಕಾಶ. ಅವರಲ್ಲಿ ಕೆಲವರಿಗೆ ಇಲ್ಲಿಗೆ ಬರುವ ಮನಸ್ಸು ಇದೆ. ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗಳು ಕೂಡಿ ಏನು ತೀರ್ಮಾನ ಮಾಡಿದರು, ಮುಖ್ಯ ಮಂತ್ರಿಗಳು ಏನು ಹೇಳಿದರು ಎಂಬುದನ್ನೆಲ್ಲ ಹೊರಗಡೆಯಿಂದಲೇ ಕೇಳಿ ತಿಳಿದುಕೊಳ್ಳುತ್ತಿದ್ದಾರೆ. ಅವರು ಬರಬೇಕು ಅನ್ನುತ್ತಾರೆ, ಆದರೆ ಹಿರಿಯರು ಅವರನ್ನು ಬಿಡುತ್ತಿಲ್ಲ. ಅವರಿಗೆ ಇಲ್ಲಿ ಭಾಗವಹಿಸಲಿಕ್ಕೆ ಮನಸ್ಸು ಇದೆ. ಆದರೆ ಅವರಿಗೆ ಪಕ್ಷದ ಹಿರಿಯರು ಅವಕಾಶ ಕೊಡುತ್ತಿಲ್ಲ. ಇನ್ನು ಎಷ್ಟು ದಿವಸ ಆಯವ್ಯಯ ಅಧಿವೇಶನ ನಡೆಯುತ್ತದೆ ಇದರ ಜೊತೆಗೆ ಇನ್ನೊಂದು ಆಯವ್ಯಯ ಅಧಿವೇಶನ ಆದಕೂಡಲೇ ಚುನಾವಣೆ ಬರುತ್ತದೆ. ಆದ್ದರಿಂದ, ಈಗಲಾದರೂ ಏಕೆ ಅವಕಾಶ ಕೊಡಬಾರದೆಂದು ಅಂದಕೊಳ್ಳುತ್ತಾರಲ್ಲದೆ ಇವತ್ತೂ ಕಾಂಗ್ರೆಸ್‌ಗೆ ಬರಬೇಕು ಅನ್ನುವವರು ಬೇರೆ ಒಂದು ಕಡೆ ಕಾಯುತ್ತಿದ್ದಾರೆ, ನಾನು ಮುಖ್ಯ ಮಂತ್ರಿಯಾಗಿ ಇಲ್ಲಿಗೆ 18 ತಿಂಗಳುಗಳಾದವು. ಇದುವರೆಗೆ ನಾನು ಮಾಡಿದಂತಹ ಭಾಷಣಗಳು, ಕೊಟ್ಟಂತಹ ಹೇಳಿಕೆಗಳು ಪತ್ರಿಕೆಗಳಲ್ಲಿ ಬಂದಿವೆ. ಅವುಗಳ ಪೈಕಿ ಒಂದೇ ಒಂದು ವಿಷಯ ಸುಳ್ಳಾಗಿದೆ ಎಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ಸದ್ಯದಲ್ಲೇ 2 ಜನ ನಮ್ಮ ಕಡೆ ಬರುವವರಿದ್ದಾರೆ. ಮಾನ್ಯ ಹಾವನೂರ್‌ರವರು ಈಗಾಗಲೇ ತಮ್ಮ ಸದಸ್ಯ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದಾರೆ ವಿರೋಧ ಪಕ್ಷದವರಿಗೆ ಅಸೆಂಬ್ಲಿಗೆ ಬರುವುದಕ್ಕೆ ಆಸೆ ಉಂಟು ಎಂಬುದನ್ನು ತೋರಿಸುವ ಇಂಡಿಕೇಷನ್ ನಮ್ಮ ಕೌನ್ಸಿಲ್ ನಲ್ಲಿದೆ. ಒಂದೇ ಪಕ್ಷ ಅಲ್ಲಿ ಒಂದು ನೀತಿ ತಗೆದುಕೊಳ್ಳುತ್ತದೆ ಇಲ್ಲಿ ಒಂದು ನೀತಿ ತೆಗೆದುಕೊಳ್ಳುತ್ತದೆ ಎಂದರೆ ಏನು ಅರ್ಥ? ಮಾನ್ಯ ಇಬ್ರಾಹಿಂರವರ ವಜಾ ಆಗುವವರೆಗೆ ನಾವು ಸಹಕಾರ ನೀಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಮಾನ್ಯ ಚಂದ್ರೇಗೌಡರು ಸಭೆ ಸೇರಿ ತೀರ್ಮಾನ ಮಾಡಿದ್ದಾರೆಂದರೆ ಇದರ ಅರ್ಥ ಏನು? ಅಲ್ಲಿ ತಪ್ಪು ಮಾಡಿದ್ದಾರೆ. ಇಲ್ಲಿ ಆ ತಪ್ಪು ಮಾಡುವುದು ಬೇಡ. ನಾವು ಇಲ್ಲಿ ಇರುತ್ತೇವೆ. ಅವರು ಅಲ್ಲಿ ಹೋಗಲಿ ಎಂದು ಯೋಚನೆ ಮಾಡಿದ್ದಾರೆ. ಅವರಿಗೆ ಇರುವುದೇ ಒಂದು ವರ್ಷದ ಅವಕಾಶವಾದ್ದರಿಂದ ಅದನ್ನು ತಪ್ಪಿಸುವುದಕ್ಕೆ ನಮಗೂ ಇಷ್ಟವಿಲ್ಲ. ಈಗ ಅವರಿಗೆ ಕರ್ನಾಟಕದ ಜನತೆ ಸರಿಯಾದ ದಾರಿ ತೋರಿಸಿದ್ದಾರೆ. ನಿಮಗೆ ಜನ ಬೆಂಬಲ ಇಲ್ಲ, ವಾಪಸ್ಸು ವಿಧಾನ ಸಭೆಗೆ ಹೋಗಿ, ಇಲ್ಲಿ ಸಾರ್ವಜನಿಕ ಸಭೆ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳಿದ್ದಾರೆ. ಅವತ್ತು ಇಲ್ಲಿ ಧರಣಿ ಮಾಡಿದವರಿಗೆ ಇವತ್ತು

ಅಲ್ಲಿ ಮಾಡುವುದಕ್ಕಾಗುವುದಿಲ್ಲವೇ? ಅಲ್ಲಿ ಮಾಡಿದ್ದು ತಪ್ಪಾಯಿತು. ಆ ತಪ್ಪನ್ನು ಇಲ್ಲಿ ಮಾಡುವುದು ಬೇಡ ಎಂದು ಅರಿತಿದ್ದಾರೆ.

ಅಧ್ಯಕ್ಷರೇ, ತಾವು ಎಲ್ಲರಗಿಂತ ಹಿರಿಯ ಸ್ಥಾನದಲ್ಲಿದ್ದೀರಿ. ಆದುದರಿಂದ, ನಾನು ತಮ್ಮ ಸ್ಥಾನಕ್ಕೆ ಗೌರವ ಕೊಟ್ಟು ತಮ್ಮ ಒಂದು ಆದೇಶ ಏನಿದೆ ಅದರ ಪ್ರಕಾರ ಈ ದೇಶದಲ್ಲಿ ವಿರೋಧ ಪಕ್ಷ ಮಾಡಿದ ತಪ್ಪನ್ನು ಜನತೆ ಈಗಾಗಲೇ ಅವರಿಗೆ ತೋರಿಸಿಕೊಟ್ಟಿದ್ದಾರೆ. ಇನ್ನು ಮೇಲಾದರೂ ಅವರು ಸರಿಯಾದ ಮಾರ್ಗದಲ್ಲಿ ಹೋಗುತ್ತಾರೆಂದು ಆಶಿಸಿ ನಾನು ನಮ್ಮ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಮೊನ್ನೆ ಪತ್ರಿಕೆಯಲ್ಲಿ ಒಂದು ಕಾರ್ಟೂನ್ ಬಂದಿತ್ತು. ಅದರಲ್ಲಿ ನಾನು ರಥ ಹೊಡೆಯುತ್ತಿದ್ದೇನೆ. ಒಂದು ಗಾಲಿ ಆ ಕಡೆ ಹೊರಟಿದೆ. ಒಂದು ಗಾಲಿ ಮೇಲೆ ಹೋಗುತ್ತಿದ್ದೇನೆ ಎಂಬುದು ಇತ್ತು. ಅದನ್ನು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ನಾನು ಈಗ ಸ್ಟೆಪ್ನಿ ಹಾಕಿಕೊಂಡು ಹೋಗುತ್ತಿದ್ದೇನೆ. ಬರ್ಸ್ಟ್ ಆದ ಚಕ್ರವನ್ನು ಹಾಕಿಕೊಂಡು ಹೋದರೆ ನಾನು ಎಲ್ಲಿ ಗುರಿ ತಲುಪುವುದಕ್ಕೆ ಸಾಧ್ಯ? ಆದುದರಿಂದ, ನಾನು ಅದನ್ನು ಬಿಟ್ಟು ಹೋಗುತ್ತಿದ್ದೇನೆ. ಅವರಿಗೆ ಇವತ್ತಿನ ದಿವಸ ಕರ್ನಾಟಕದ ಜನತೆ ಹೆಚ್ಚಿನ ರೀತಿಯಲ್ಲಿ ಜನ ಬೆಂಬಲ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ನಾಲ್ಕು ಕೋಟಿ ಜನರಲ್ಲಿ 11 ಪರ್ಸೆಂಟ್ ಕೂಡ ಅವರಿಗೆ ಬೆಂಬಲ ಇಲ್ಲ. ಗುಂಡೂರಾಯರ ಸರ್ಕಾರಕ್ಕೆ, ಇಂದಿರಾಗಾಂಧಿಯವರ ಸರ್ಕಾರಕ್ಕೆ ಬೆಂಬಲ ಕೊಡುತ್ತೇವೆ ಎಂಬುದನ್ನು ಜನ ತೋರಿಸಿದ್ದಾರೆ. ಯಾವ ರೀತಿ ಎಂದರೆ, ನಮಗೇನು ಅವರು ಪ್ರತ್ಯೇಕವಾಗಿ ಬೆಂಬಲ ಕೊಡಬೇಕಾಗಿಲ್ಲ, ಅವರಿಗೆ ಬೆಂಬಲ ಕೊಡದೆ ಇರುವುದೇ ಇದಕ್ಕೆ ಸಾಕ್ಷಿ ಎಂದು ಹೇಳುತ್ತಾ, ಈ ರಾಜ್ಯದಲ್ಲಿ ನಮ್ಮ ಪಕ್ಷ ಇಷ್ಟು ಬಹುಮತದಲ್ಲಿರಬೇಕಾದರೆ ಅವರು ತಾವು ಮಾಡಿದ ತಪ್ಪನ್ನು ತಿಳಿದುಕೊಂಡು ಬರಬಹುದು. ನಮಗೇನು ಅವರು ಕ್ಷಮೆ ಕೇಳಬೇಕಾಗಿಲ್ಲ. ಅಧ್ಯಕ್ಷರೇ ತಾವು ನನಗೆ ಕೊಟ್ಟ ಕರೆ ಮೇಲೆ ನಾನು ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಮತ್ತು ಅವರು ಇವತ್ತಿನಿಂದಲೇ ಸಭೆಗೆ ಬರಬಹುದು. ಈ ದೇಶದಲ್ಲಿ ಇನ್ನಾದರೂ ಸರ್ಕಾರಕ್ಕೆ ಎಲ್ಲೆಲ್ಲಿ ಸಹಕಾರ ನೀಡಬೇಕು ಅಲ್ಲಲ್ಲಿ ನೀಡಿ. ಎಲ್ಲೆಲ್ಲಿ ರಾಜ್ಯದ ಅಭಿವೃದ್ಧಿ ಸಾಧನೆ ಮಾಡುವುದಕ್ಕೆ ಸಾಧ್ಯವಿದೆ ಅಲ್ಲೆಲ್ಲ ಪ್ರಯತ್ನ ಮಾಡಿ ಅವರು ನಮಗೆ ಪೂರ್ತಿ ಸಹಕಾರ ನೀಡುತ್ತಾರೆಂದು ತಿಳಿದುಕೊಂಡು ನಾನು ತಮ್ಮ ಒಂದು ಆದೇಶದ ಮೇಲೆ ಹಿಂದೆ ಮಂಡಿಸಿದ್ದ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೇನೆ.

Sir, I beg to move the following motion for the consideration and accpetance of this House:

> "This House resolves that the suspension of the following Members of this House on 23rd June and 26th June 1981 respectively be terminated and the Members permitted to attend the sittings of the House."

## ರಾಜಕೀಯ ಗುರುವಿನ ಅಂತಿಮ ನಮನ

8ನೇ ಜೂನ್ 1982 ರಂದು ವಿಧಾನ ಸಭೆ ಸೇರಿದಾಗ ಮೊದಲನೆಯ ಕಾರ್ಯಕ್ರಮ ಮಾಜಿ ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸುವುದಾಗಿತ್ತು. ಮುಖ್ಯ ಮಂತ್ರಿ ಶ್ರೀ. ಆರ್. ಗುಂಡೂರಾವ್ ಅವರು ತಮ್ಮ ರಾಜಕೀಯ ಗುರುವಿಗೆ ಸಲ್ಲಿಸಿದ ಅಂತಿಮ ನಮನ, ಗೌರವ ಅವರ ವಿಶ್ವಾಸ ಮನಸ್ಸಿಗೆ ಕನ್ನಡಿ ಹಿಡಿದಿತ್ತು.

**ಕೆ. ಎಚ್. ರಂಗನಾಥ್ (ಸಭಾಧ್ಯಕ್ಷರು)** : ಸಭಾ ನಾಯಕರೆ, ವಿರೋಧ ಪಕ್ಷದ ನಾಯಕರೆ, ಸನ್ಮಾನ್ಯ ಸದಸ್ಯ ಮಿತ್ರರೇ, ಈ ದಿನದ ಕಾರ್ಯಕ್ರಮ ಪಟ್ಟಿಯಲ್ಲಿ ಮೊದಲನೆಯದು ದುಃಖಮಯವಾದುದು ................ ತಮಗೆಲ್ಲ ತಿಳಿದಿರುವಂತೆ ದಿನಾಂಕ 6-6-1982 ರ ಸಂಜೆ 5-45 ಕ್ಕೆ ನಮ್ಮನ್ನಗಲಿದ ಮಾಜಿ ಮುಖ್ಯಮಂತ್ರಿ, ಈ ಸದನದ ಹಿರಿಯ ಸದಸ್ಯ ಡಿ. ದೇವರಾಜ ಅರಸ್ ರವರ ನಿಧನ ವಾರ್ತೆ. ಈ ವಾರ್ತೆಯನ್ನು ಸದನಕ್ಕೆ ತಿಳಿಸಲು, ಅವರಿಗೆ ಶ್ರದ್ಧಾಂಜಲಿಯನ್ನು ನಿನ್ನೆ ರಾಜ್ಯಕ್ಕೆ ರಜೆ ಕೊಟ್ಟು, ರಾಜ್ಯ ಗೌರವದಿಂದ ಅವರ ಅಂತ್ಯಕ್ರಿಯೆಯನ್ನು ಮಾಡುವ ವ್ಯವಸ್ಥೆಗೊಳಿಸಿ, ರಾಜ್ಯದ ಎಲ್ಲ ಜನ ಪಕ್ಷಾತೀತವಾಗಿ ತಮ್ಮ ಗೌರವವನ್ನು ಅರ್ಪಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದು ಎಲ್ಲರೂ ಮೆಚ್ಚುವಂತಹುದು. ಅವರು ನಮ್ಮನ್ನು ಇಷ್ಟು ಜಾಗ್ರತೆ ಅಗಲುತ್ತಾರೆ. ಅವರ ಮರಣಕ್ಕೆ, ಈ ಸಭೆ ಸಂತಾಪ ವ್ಯಕ್ತಪಡಿಸುವ ನಿರ್ಣಯನ್ನು ಪಾಸು ಮಾಡುವ ದುಃಖದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವ ಪ್ರಸಂಗ ನನ್ನ ಪಾಲಿಗೆ ಬರುತ್ತದೆಂದು ಕನಸಿನಲ್ಲಿಯೂ ನಾನು ಭಾವಿಸಿರಲಿಲ್ಲ. ಅದು ನನ್ನ ಪಾಲಿಗೆ ಬಂದಿದೆ, ಈ ಸಭೆಗೆ ಬಂದಿದೆ. ಮರಣ ಯಾರ ಆಳೂ ಅಲ್ಲ. ಯಾರ ಶಿಫಾರಸ್ಸನ್ನೂ ಕೇಳಲಾರದು. ಚಿಟಿಕೆ ಹೊಡೆದಂತೆ ಅವರು ಭಾನುವಾರ ಸಂಜೆ ನಮ್ಮನ್ನಗಲಿದರು. ಎಲ್ಲರನ್ನು ಅವರು ದುಃಖದಲ್ಲಿ ಬಿಟ್ಟು ಹೋಗಿದ್ದಾರೆ ........... ಈ ಹಿರಿಯ ರಾಜಕಾರಣಿ ಇಲ್ಲವಾಗಿದ್ದಾರೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ.

**ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು)** - ಮಾನ್ಯ ಅಧ್ಯಕ್ಷರೇ ಈ ಮುಂದಿನ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

"ಈ ಸಭೆಯ ಅತ್ಯಂತ ಹಿರಿಯ ಸದಸ್ಯರು, ರಾಜ್ಯದ ಮುಖ್ಯಮಂತ್ರಿಗಳೂ ಆಗಿದ್ದ ಹಿರಿಯ ನಾಯಕ ಶ್ರೀ ಡಿ. ದೇವರಾಜ್ ಅರಸ್ ಅವರು ದಿನಾಂಕ 6-6-1982 ರ ಸಂಜೆ ನಮ್ಮನ್ನು ಅಗಲಿದರು."

ಶ್ರೀ ಡಿ. ದೇವರಾಜ್ ಅರಸ್ ರವರು ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ನಾಲ್ಕು ದಶಕಗಳ ಕಾಲ ಸಲ್ಲಿಸಿದ ಸೇವೆ ಅಮೂಲ್ಯ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ರಾಜಕೀಯ ಜೀವನ ಪ್ರವೇಶಿಸಿದ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ನಂತರ,

---

ವಿ.ಸ.ನ. ದಿನಾಂಕ: 8-6-1982

1952 ರಿಂದ ಈ ಸಭೆಯ ಸದಸ್ಯರಾಗಿ ತಮ್ಮ ನಿಧನದವರೆಗೂ ಅಖಂಡವಾಗಿ ಮೂವತ್ತು ವರ್ಷಗಳ ಕಾಲ ರಾಜ್ಯ ಶಾಸನಸಭೆಯಲ್ಲಿ ಸೇವೆ ಸಲ್ಲಿಸಿದರು. ಕರ್ನಾಟಕದ ಮುಖ್ಯಮಂತ್ರಿಯಾಗಿ 1970ರ ದಶಕದಲ್ಲಿ ಅವರು ರಾಜ್ಯದ ದೀನದಲಿತರು, ಹಿಂದುಳಿದವರು ಮತ್ತು ಬಡವರ ಏಳಿಗೆಗಾಗಿ ಕೈಗೊಂಡ ಕ್ರಮಗಳು, ಈ ವರ್ಗದ ಜನತೆಯ ಪ್ರಗತಿಗೆ ಒಂದು ಹೊಸ ದಿಕ್ಕನ್ನು, ಆಯಾಮವನ್ನು ತಂದು ಕೊಟ್ಟವು. ರಾಜ್ಯದ ರಾಜಕೀಯಕ್ಕೆ ಹೊಸ ತಿರುವನ್ನು ನೀಡಿದ ಅವರು ಒಬ್ಬ ದಕ್ಷ ಆಡಳಿತಗಾರರಾಗಿ ಜನತೆಯ ಸೇವೆ ಸಲ್ಲಿಸಿದ್ದಾರೆ. ಪ್ರಜಾಸತ್ತೆ, ಸಮಾಜವಾದ ಮತ್ತು ಜಾತ್ಯಾತೀತ ತತ್ವಗಳಲ್ಲಿ ಅಚಲ ನಂಬಿಕೆಯನ್ನು ಇಟ್ಟು, ತಮ್ಮ ಜೀವನದುದ್ದಕ್ಕೂ ರಾಜ್ಯದ ರಾಷ್ಟ್ರದ ಹಿತಕ್ಕಾಗಿ ನಿರಂತರವಾಗಿ ಶ್ರಮಿಸಿದ್ದಾರೆ. ಶ್ರೀ ಅರಸ್ ರವರು ಜನ ಹಿತಚಿಂತನೆಗಾಗಿ ಸಲ್ಲಿಸಿದ ಅಪಾರ ಸೇವೆ ರಾಜ್ಯದ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯವಾಗಿ ಉಳಿಯಲಿದೆ. ರಾಜ್ಯದ ಮತ್ತು ರಾಷ್ಟ್ರಕ್ಕೆ ಅಮೋಘ ಸೇವೆ ಸಲ್ಲಿಸಿದ ಶ್ರೀ ಡಿ. ದೇವರಾಜ ಅರಸ್ ಅವರ ಚಿರನೆನಪಿಗೆ ಈ ಸಭೆ ಗೌರವ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತಿದೆ."

ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವರಾಜ ಅರಸ್ ಅವರ ನಿಧನದಿಂದ ಇಡೀ ರಾಷ್ಟ್ರಕ್ಕೆ ಒಬ್ಬ ಅತ್ಯಂತ ಹಿರಿಯ ಮತ್ತು ಮುತ್ಸದ್ದಿ ನಾಯಕನನ್ನು ಕಳೆದುಕೊಂಡಂತಹ ಪರಿಸ್ಥಿತಿ ಉಂಟಾಗಿದೆ. ನನಗೂ ಮತ್ತು ಅವರಿಗೂ ಸುಮಾರು 15 ವರ್ಷಗಳ ಸ್ನೇಹ. 1969 ರಿಂದ 1979ನೇ ಇಸವಿಯವರೆಗೆ ಅಂದರೆ ಸುಮಾರು ಹತ್ತು ವರ್ಷಗಳ ಕಾಲ ಎಲ್ಲ ವಿಷಯಗಳಲ್ಲಿಯೂ ಅವರ ಜೊತೆ ಸೇರಿ ಕೆಲಸ ಮಾಡುವಂತಹ ಒಂದು ಅವಕಾಶ ನನಗೆ ದೊರಕಿತ್ತು. ನನ್ನ ರಾಜಕೀಯ ಜೀವನದ ಬಗ್ಗೆ ಹೇಳಬೇಕೆಂದರೆ, ಬಹುಶಃ ನನ್ನನ್ನು ಕಾಂಗ್ರೆಸ್ಸಿಗೆ 1966ನೇ ಇಸವಿಯಲ್ಲಿ ಸೇರಿಸಿದವರೇ ಅವರು. ಅವರ ಮೇಲೆ ನನಗೆ ಹೆಚ್ಚಿನ ಒಂದು ಗೌರವ ಮತ್ತು ಅವರಿಗೆ ನನ್ನ ಮೇಲೆ ಗೌರವ ಬರುವುದಕ್ಕೆ ಕಾರಣವೇನೆಂದರೆ ನಾನು 1964ರಲ್ಲಿ ಪುರಸಭೆ ಅಧ್ಯಕ್ಷನಾಗಿದ್ದಾಗ ನಾನು ಇನ್ನೂ ಕಾಂಗ್ರೆಸ್ ಸದಸ್ಯನಾಗಿರಲಿಲ್ಲ. ಈ ಸಂದರ್ಭದಲ್ಲಿ ಇವರು ಸಾರಿಗೆ ಮಂತ್ರಿಯಾಗಿದ್ದರು. ನಮ್ಮೂರಿನ ಒಂದು ಸಮಾರಂಭಕ್ಕೆ ನಾನು ಬೆಂಗಳೂರಿಗೆ ಬಂದು ಇವರನ್ನು ಆಹ್ವಾನಿಸಿದಾಗ ಇವರು ಬರುತ್ತೇನೆಂದು ಒಪ್ಪಿದರು. ಆದರೆ ಅಲ್ಲಿನ ಸ್ಥಳೀಯ ಕಾಂಗ್ರೆಸ್‌ನವರು ಇವರು ಬರುವುದನ್ನು ವಿರೋಧ ಮಾಡಿದರು. ಅಲ್ಲಿನ ಸಮಾರಂಭಕ್ಕೆ ಬರಬಾರದೆಂದು ಕೇಳಿಕೊಂಡರು. ಅಲ್ಲಿನ ಕಾಂಗ್ರೆಸ್‌ನವರು ವಿರೋಧ ಮಾಡುತ್ತಿರುವ ಕಾರಣದಿಂದ ಹೋಗುವುದು ಸರಿಯಲ್ಲವೆಂದು ಇವರಿಗೆ ಆಗಿನ ಮುಖ್ಯ ಮಂತ್ರಿಗಳು ಹೇಳಿದರೂ ಸಹ ಇವರು ಮಾತ್ರ ನಾನು ಬರುತ್ತೇನೆಂದು ಅಲ್ಲಿನ ಪುರಸಭೆ ಅಧ್ಯಕ್ಷರಿಗೆ ಕಾಗದ ಬರೆದಿರುವ ಕಾರಣದಿಂದ ಹೋಗದಿದ್ದರೆ ತಪ್ಪಾಗುತ್ತದೆಯೆಂದು ತಿಳಿಸಿದರು. ಈ ಸಂದರ್ಭದಲ್ಲಿ ಇವರು ನಮ್ಮ ಊರಿಗೆ ಬರುವುದು ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಅಲ್ಲಿನ ಆ ಕಾಂಗ್ರೆಸ್ಸಿಗರು ಇವರನ್ನು ಬರಲು ಬಿಡುವುದಿಲ್ಲವೆಂಬ ಮಾತನ್ನು ಹೇಳುತ್ತಿದ್ದರೆ ಮತ್ತೊಂದು ಗುಂಪಿನವರು ಇವರು ಬಂದೇ ಬರುತ್ತಾರೆಂದು ಹೇಳುವಂತಹ ಸಂದರ್ಭದಲ್ಲಿ

ಇವರು ಅಲ್ಲಿಗೆ ಬಂದರು. ಅವರು ಅಲ್ಲಿಗೆ ಬಂದ ಮೇಲೆ ನಾವು ಅವರಿಗೆ ದೊಡ್ಡ ಗೌರವವನ್ನು ಕೊಟ್ಟೆವು. ಆಗ ನನಗೆ ಇನ್ನೂ ಮದುವೆಯಾಗಿರಲಿಲ್ಲ. ನಾನಿನ್ನೂ ಯುವಕನಾಗಿದ್ದೆ. ಅವರು ಅಲ್ಲಿಗೆ ನನಗೆ ಹೇಳಿದ್ದೇನೆಂದರೆ, ನೀವೂ ಸಹ ಏತಕ್ಕೆ ಕಾಂಗ್ರೆಸ್ಸಿಗೆ ಸೇರಬಾರದು ಎಂದು. 1966ನೇ ಇಸವಿಯಲ್ಲಿ ಶ್ರೀಮಾನ್ ಶಿವರುದ್ರಪ್ಪನವರು ವಿಧಾನ ಪರಿಷತ್ತಿಗೆ ಸ್ಪರ್ಧೆ ಮಾಡುವಂತಹ ಸಮಯದಲ್ಲಿ ನಾವೂ ಸಹ ಮತ ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಕೊಡಿ ಎಂದು ಕಾಂಗ್ರೆಸ್‌ನವರು ಯಾರೂ ಸಹ ನನ್ನ ಹತ್ತಿರ ಬಂದು ಕೇಳುವುದಕ್ಕೆ ಭಯ ಪಡುತ್ತಿದ್ದರು. ಆದರೆ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಬೇಕಾದರೆ ಕೊಡವ ಹಾಗೂ ಸೋಮವಾರಪೇಟೆಯ ಮತಗಳು ಅಗತ್ಯವಾಗಿದ್ದವು. ಈ ಕಾರಣದಿಂದ ಮಾನ್ಯ ದೇವರಾಜ ಅರಸ್ ಅವರು ಮತ್ತು ಡಾ. ತಿಮ್ಮೇಗೌಡರು ನನ್ನಲ್ಲಿಗೆ ಬಂದು ನೀವು ಕಾಂಗ್ರೆಸ್ ಪಕ್ಷಕ್ಕೆ ಸೇರಬೇಕು ಮತ್ತು ಶ್ರೀಮಾನ್ ಶಿವರುದ್ರಪ್ಪನವರ ಪರವಾಗಿ ಕೆಲಸ ಮಾಡಬೇಕು ಎಂದು ಕೇಳಿಕೊಂಡರು. ನಾನು ಇದಕ್ಕೆ ಒಪ್ಪಿದಾಗ ಅವರು ನನ್ನನ್ನು 1966ನೇ ಇಸವಿಯಲ್ಲಿ ಕಾಂಗ್ರೆಸ್ಸಿಗೆ ಸೇರಿಸಿಕೊಂಡರು. ಆವೊತ್ತಿನಿಂದ ನನಗೆ ಅವರ ಮೇಲೆ ವೈಯುಕ್ತಿಕವಾಗಿ ಬಹಳ ದೊಡ್ಡ ಅಭಿಮಾನ. 1969ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷ ಇಭ್ಭಾಗವಾದಾಗ ನಾನು ಯುವ ಕಾಂಗ್ರೆಸ್ ಅಧ್ಯಕ್ಷನಾಗಿಯೂ ಮತ್ತು ಇವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿಯೂ ಕೆಲಸ ಮಾಡುವಂತಹ ಒಂದು ಅವಕಾಶ ಸಿಕ್ಕಿತು. ನಾವು 3 ವರ್ಷಗಳ ಕಾಲ ಪಕ್ಷದ ಸಂಘಟನೆಗಾಗಿ ಕೆಲಸ ಮಾಡಿದೆವು. ಅವರ ಒಂದು ಹಿರಿತನದಲ್ಲಿ ಕೆಲಸ ಮಾಡುವಾಗ ಪಕ್ಷದ ಸಂಘಟನೆಗೆ ಎಷ್ಟೇ ಅಡಚಣೆಗಳು ಬಂದರೂ ಸಹ ಅದನ್ನೆಲ್ಲವನ್ನೂ ಎದುರಿಸುವಂತಹ ಒಂದು ಶಕ್ತಿ ಅವರಲ್ಲಿರುವುದನ್ನು ನಾನು ಕಂಡುಕೊಂಡೆ. ಯಾವುದೇ ಸಂದರ್ಭದಲ್ಲಿಯೂ ಧೈರ್ಯಗೆಡಬಾರದು, ಕೆಲಸ ಮಾಡುತ್ತಾ ಹೋಗಬೇಕು. ಅಧಿಕಾರ ಎನ್ನುವುದು ಒಂದು ಸಾಧನೆ ಮಾತ್ರ. ಇದು ಜನರಿಗೆ ಕೆಲವು ಒಂದು ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕೆ ಮಾತ್ರ ಇರುವ ಕಾರಣದಿಂದ ಅಧಿಕಾರಕ್ಕೇ ಯಾವಾಗಲೂ ಅಂಟಿಕೊಂಡಿರುವುದು ಸರಿಯಲ್ಲವೆನ್ನುವ ಮಾತುಗಳನ್ನು ಅವರು ನನಗೆ ಅನೇಕ ಸಂದರ್ಭದಲ್ಲಿ ಹೇಳುತ್ತಿದ್ದರು. ಒಂದು ಸಂದರ್ಭದಲ್ಲಿ ನಾನೂ ಮತ್ತು ಅವರು ಒಂದೇ ರೂಮಿನಲ್ಲಿ ಉಳಿಯಬೇಕಾದಂಥ ಸಂದರ್ಭ ಬಂದಿದ್ದನ್ನು ನಾನು ನೆನ್ನೆ ದಿವಸ ಹುಣಸೂರಿನಲ್ಲಿ ನೆನಪಿಗೆ ತಂದುಕೊಂಡೆ. ಎಲ್ಲ ಸಂದರ್ಭದಲ್ಲಿಯೂ ನಮಗೆ ಅವರು ಅನೇಕ ವಿಚಾರಗಳನ್ನು ಹೇಳುತ್ತಿದ್ದರು. ಇಷ್ಟೊಂದು ಸಂಬಂಧ ನನಗೂ ಅವರಿಗೂ ಇತ್ತು. ಅವರು ಇತ್ತೀಚೆಗೆ ವಿರೋಧ ಪಕ್ಷದಲ್ಲಿದ್ದರೂ ಸಹ 1972ನೇ ಇಸವಿಯಿಂದ ಇಲ್ಲಿಯವರೆಗೆ ನಮ್ಮ ಮತ್ತು ಈಗಿನ ಮಂತ್ರಿಮಂಡಲಕ್ಕೆ ಅವರು ಗುರುವಿನ ರೀತಿಯಲ್ಲಿದ್ದರು. ಪಾಂಡವರಿಗೂ ಮತ್ತು ಕೌರವರಿಗೂ ದ್ರೋಣಾಚಾರ್ಯರು ಯಾವ ರೀತಿ ಗುರುವಾಗಿದ್ದರೋ ಅದೇ ರೀತಿ ಈಗಿನ ಮಂತ್ರಿಮಂಡಲದಲ್ಲಿರುವಂತಹ ಪ್ರತಿಯೊಬ್ಬರೂ ಸಹ ಅವರಿಂದ ಕಲಿತಂತಹ ವಿದ್ಯೆಯಿಂದ ಇವೊತ್ತು ವಿವಿಧ ಹುದ್ದೆಗಳಲ್ಲಿರುವುದಕ್ಕೆ ಅವಕಾಶವಾಗಿದೆ ಎಂದು ಹೇಳುವುದಕ್ಕೆ ನಾನು

ಹಿಂಜರಿಯುವುದಿಲ್ಲ. ಸುಮಾರು ಹತ್ತು ವರ್ಷಗಳ ಕಾಲ ಇಷ್ಟೊಂದು ಪ್ರೀತಿ ಮತ್ತು ಸ್ನೇಹದಿಂದ ಕೆಲಸ ಮಾಡಿದಂಥಹ ನಾವು 1979ರಲ್ಲಿ ರಾಜಕೀಯ ಕಾರಣಗಳಿಂದ ಬೇರೆ ಬೇರೆ ಯಾಗಬೇಕಾಯಿತು. ಆ ಸಂದರ್ಭದಲ್ಲಿ ನಾನು ಮೂರು ಸಲ ಭೇಟಿ ಮಾಡಿದೆ. ಕೊನೆಯ ಸಲದ ಭೇಟಿಯಲ್ಲಿ ನಾನು ಅವರಿಗೆ ಹೇಳಿದ್ದೇನೆಂದರೆ, ರಾಜಕೀಯವಾಗಿ ನಮ್ಮ ನಿಮ್ಮ ನೀತಿಗಳು ಸ್ವಲ್ಪ ಹೆಚ್ಚು ಕಡಿಮೆಯಾಗಿರುವುದರಿಂದ ನಾನು ನಿಮ್ಮ ಜೊತೆಯಲ್ಲಿರುವುದಕ್ಕೆ ಸಾಧ್ಯವಿಲ್ಲವಾದ ಕಾರಣ ನೀವು ನನ್ನನ್ನು ಮಂತ್ರಿಮಂಡಲದಿಂದ ಬಿಟ್ಟುಕೊಡಬೇಕಾಗುತ್ತದೆಂದು ಹೇಳಿದಾಗ ಅವರ ಮನಸ್ಸಿನಲ್ಲಿ ದೊಡ್ಡ ಗೊಂದಲ ಉಂಟಾಯಿತು. ಅವರ ಜೊತೆಯಲ್ಲಿ ಹತ್ತು ವರ್ಷಗಳ ಕಾಲ ಕೆಲಸ ಮಾಡಿದ ಕಾರಣದಿಂದ ಅವರಿಂದ ಬೇರೆಯಾಗಬೇಕಲ್ಲ ಎಂದು ಆ ಸಂದರ್ಭದಲ್ಲಿ ನನಗೂ ಸಹ ಒಂದು ತರಹ ದುಃಖವಾಯಿತು. ನನಗಿಂತ ಅವರಿಗೇ ಹೆಚ್ಚು ದುಃಖವಾಯಿತೆಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಸಹ ನಾವುಗಳು ಆ ಸಂದರ್ಭದಲ್ಲಿ ಬೇರೆ ಬೇರೆಯಾಗಬೇಕಾಯಿತು. ಅಲ್ಲಿಂದೀಚೆಗೆ ನಾವು ರಾಜಕೀಯವಾಗಿ ವಿರೋಧ ವ್ಯಕ್ತಪಡಿಸುತ್ತಿದ್ದರೂ ಸಹ ನಾನು ಅವರನ್ನು ದೆಹಲಿಯಲ್ಲಿ ಇಲ್ಲವೇ ವಿಮಾನದಲ್ಲಿ ಭೇಟಿಯಾದಾಗ ಮೊದಲಿನ ಪ್ರೀತಿ ಮತ್ತು ವಿಶ್ವಾಸಗಳಿಂದಲೇ ಮಾತನಾಡುತ್ತಿದ್ದೆವು. ಅವರು ಅಧಿಕಾರದಲ್ಲಿದ್ದಾಗ ಹಿಂದುಳಿದವರ ವರ್ಗದವರಿಗೆ ಮಾಡಿದ ಸೇವೆ ಏನಿದೆ, ಅದು ಈ ರಾಜ್ಯದ ಒಂದು ರೀತಿಯ ಜನಜಾಗೃತಿಯನ್ನು ಉಂಟುಮಾಡಿದೆ. ಹೇಳ ಹೆಸರಿಲ್ಲದಂಥಹ ಅನೇಕ ಜಾತಿಗಳನ್ನು ಗುರುತಿಸಿ ಅವರಿಗೂ ಸಹ ಈ ಸಮಾಜದಲ್ಲಿ ಒಂದು ಸ್ಥಾನವಿದೆ ಎಂಬುದನ್ನು ತಿಳಿಯಪಡಿಸಿದರು. ಯಾವುದೇ ಜನಾಂಗವೇ ಆಗಲಿ, ರಾಜಕೀಯವಾಗಿ ಜಾಗೃತಿಯಾಗದಿದ್ದರೆ ಸಾಮಾಜಿಕವಾಗಲೀ, ಶೈಕ್ಷಣಿಕವಾಗಲೀ ಈ ದೇಶದಲ್ಲಿ ಅವರುಗಳು ಮುಂದುವರಿಯಲು ಸಾಧ್ಯವಾಗುವುದಿಲ್ಲವೆಂಬ ಅರಿವನ್ನು ಅವರು ಎಲ್ಲರಲ್ಲಿಯೂ ಮೂಡಿಸಿದರು. ಪ್ರತಿಯೊಂದು ಜನಾಂಗದವರೂ ರಾಜಕೀಯ ಆಂದೋಳನದಲ್ಲಿ ಸೇರಿಕೊಂಡು, ಅಧಿಕಾರವನ್ನೂ ಹಂಚಿಕೊಳ್ಳುವಂತಹ ಪರಿಸ್ಥಿತಿ ಬಂದಾಗ ಮಾತ್ರ ಅತ್ಯಂತ ಹಿಂದುಳಿದ ವರ್ಗದವರೂ ಸಹ ಈ ಸಮಾಜದಲ್ಲಿ ಸರಿಸಮಾನವಾದಂಥ ಸ್ಥಾನಕ್ಕೆ ಬರಲು ಸಾಧ್ಯವಾಗುತ್ತದೆಂಬುದನ್ನು ದೂರಾಲೋಚನೆಯಿಂದ ತಿಳಿದುಕೊಂಡಂಥ ವ್ಯಕ್ತಿಯೆಂದರೆ ಶ್ರೀಮಾನ್ ಅರಸ್‌ರು. ನಮ್ಮ ರಾಜ್ಯ ವಿಶಾಲ ಕರ್ನಾಟಕವಾದ ಮೇಲೆ ಬಹಳ ದೊಡ್ಡ ವಿಶಾಲ ಮನೋಭಾವನೆಯಿಂದ ಹಾಗೂ ದೂರದೃಷ್ಟಿಯಿಂದ ಇವರು ವಿಚಾರ ಮಾಡಿ ಇಡೀ ರಾಷ್ಟ್ರದಲ್ಲೇ ಇಲ್ಲದಂಥ ಕೆಲವು ಯೋಜನೆಗಳನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಲು ಮುಂದಾದರು. ಹಿಂದುಳಿದವರ ಅಭಿವೃದ್ಧಿಗಾಗಿ ಮತ್ತು ಎಲ್ಲರಿಗೂ ಅನುಕೂಲವಾಗುವಂತಹ ಕೆಲವಾರು ಕ್ರಾಂತಿಕಾರಕವಾದಂಥಹ ಬದಲಾವಣೆಗಳನ್ನು ಇವರು ತಮ್ಮ ಆಡಳಿತದಲ್ಲಿ ಮಾಡಿದರು. ಅವರಿಂದ ಇವತ್ತು ನನಗಂತೂ ವೈಯುಕ್ತಿಕವಾಗಿ ಆದಂಥಾ ದುಃಖ ಅಷ್ಟಿಷ್ಟಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ನಾನು ತಮಗೆ ಮೊದಲೇ ತಿಳಿಸಿದ ಹಾಗೆ ನನ್ನ ಅವರ ಸಂಬಂಧ ಬೆಳೆದದ್ದು ಆ ರೀತಿ ಇತ್ತು. ನಾನು ಇವೊತ್ತು ಮುಖ್ಯಮಂತ್ರಿಯಾಗಿರಬಹುದು.

ಮುಖ್ಯಮಂತ್ರಿಯಾಗಿ ನನ್ನನ್ನು ಬೆಳೆಸಲಿಕ್ಕೆ ಮುಖ್ಯ ಸೂತ್ರಧಾರಿ ನನ್ನ ಗುರು ಸ್ಥಾನದಲ್ಲಿದ್ದಂಥ ಶ್ರೀಮಾನ್ ದೇವರಾಜ ಅರಸರೇ ಕಾರಣರು. ಅವರು ಈ ವಿಧಾನಸಭೆಯಲ್ಲಿ ಕೂತಿದ್ದರೆ ಸಾಕಾಗಿತ್ತು. ನನಗೆ ಒಂದು ಹೆಚ್ಚಿನ ಶಕ್ತಿ ಬರುತ್ತಿತ್ತು. ಯಾವ ವಿಷಯವನ್ನೇ ಎದುರಿಸುವಂಥಾ ಶಕ್ತಿ ಬರುತ್ತಿತ್ತು. ಅವರು ಇನ್ನೂ ಹೆಚ್ಚು ಕಾಲ ಇದ್ದರೆ ಸಾರ್ಥಕ ಇತ್ತು. ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿತ್ತು. ಆದರೆ ಈ ಮಧ್ಯೆ ರಾಜಕೀಯವಾಗಿ ಸ್ವಲ್ಪ ದೂರ ಇರಬೇಕಾಯಿತು. ವಿಧಿ ಇಲ್ಲ, ರಾಜಕೀಯದಲ್ಲಿ ಅವರ ಕರ್ತವ್ಯ ಅವರು ಮಾಡಬೇಕಾಗುತ್ತದೆ. ನನ್ನ ಕರ್ತವ್ಯ ನಾನು ಮಾಡಬೇಕಾಗುತ್ತದೆ. ರಾಜಕೀಯ ಕಾರಣಗಳಿಗೋಸ್ಕರ ನಾವು ಬೇರೆ ಬೇರೆ ಆದೆವೇ ವಿನಾ ಅವರ ಬಗ್ಗೆ ನಾವು ಮಾತನಾಡುವಾಗ ಒಂದು ದಿವಸವಾದರೂ ಕೂಡ ಅವರನ್ನು, ಏಕವಚನದಲ್ಲಾಗಲೀ ಅಥವಾ ಅವರ ಬಗ್ಗೆ ನೇರವಾದ ಮಾತನ್ನಾಗಲಿ ಯಾರೂ ಮಾತನಾಡಿಲ್ಲ. ಅಂಥಾವರು ಈವೊತ್ತಿನ ದಿವಸ ಈ ವಿಧಾನಸಭೆಯಲ್ಲಿ ಇಲ್ಲದೇ ಇರುವಂಥಾದ್ದು ನಮ್ಮೆಲ್ಲರಿಗೂ ದುಃಖವಾಗುತ್ತದೆ. ಅವರು ಈ ವಿಧಾನಸಭೆಯಲ್ಲಿ ಮಾತನಾಡುವಾಗ ಒಂದು ರೋಷದಿಂದಾಗಲಿ, ಒಂದು ಉದ್ವೇಗದಿಂದಾಗಲಿ ಮಾತನಾಡುತ್ತಿದ್ದುದನ್ನು ನಾವು ಕಾಣುತ್ತಿದ್ದೆವು. ಅಂಥವರು ಇವತ್ತು ಇದ್ದಿದ್ದರೆ ನಮ್ಮ ಮೇಲೆ ಎಷ್ಟೋ ಪರಿಣಾಮಗಳು ಉಂಟಾಗುತ್ತಿತ್ತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಂತಹ ಅನುಭವಿ ರಾಜಕಾರಣಿಗಳು ಅದರಲ್ಲೂ ಈ ವಿಧಾನಸಭೆಯ ಹಿರಿಯ ಸದಸ್ಯರೂ ಆದಂಥಾ ಅರಸ್‌ರವರನ್ನು ಕಳೆದುಕೊಂಡಿರುವುದರಿಂದ ಈ ವಿಧಾನಸಭೆ ಒಂದು ರೀತಿಯಾಗಿ ತಬ್ಬಲಿಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏತಕ್ಕೆಂದರೆ ನಮ್ಮ ಮಂತ್ರಿ ಮಂಡಲದಲ್ಲಿರತಕ್ಕಂಥಾ ಎಲ್ಲಾ ಸದಸ್ಯರೂ ಅವರ ಕೈಕೆಳಗೆ ಬೆಳೆದಿರತಕ್ಕಂಥವರು, ಅವರ ಶಿಷ್ಯರಾಗಿದ್ದಾರೆ. ಅಷ್ಟೇ ಅಲ್ಲ ಅನೇಕ ಶಾಸಕರೂ ಸಹ ಅವರ ಕೈಕೆಳಗೆ ಬೆಳೆದಿದ್ದಾರೆ. ನಾನು ಮುಖ್ಯಮಂತ್ರಿಯಾಗಿರಬಹುದು. ಇನ್ನೂ ಕೆಲವರು ಮುಖ್ಯಮಂತ್ರಿಗಳಾಗಿರಬಹುದು. ನಾವೆಲ್ಲಾ ಅವರ ಅನುಭವವನ್ನು ಪಡೆದಂತಹವರೇ. ಅವರು ಹೇಳಿಕೊಟ್ಟಂಥಾ ದಾರಿಯಲ್ಲೇ ಅವರು ಯಾವ ರೀತಿ ಆಡಳಿತ ನಡೆಸುತ್ತಾ ಇದ್ದರು, ಆ ರೀತಿಯಲ್ಲೇ ನಾವು ನಡೆಯಬೇಕಾಗಿದೆ. ಯಾವ ನಿರ್ಣಯವನ್ನೂ ಕೈಗೊಳ್ಳಬೇಕಾದರೂ ಸಹ ಅವರು ಹೇಳಿಕೊಟ್ಟ ಮಾರ್ಗದಲ್ಲಿ ಹೋಗಬೇಕಾಗಿದೆ. ಏತಕ್ಕೆಂದರೆ ಈ ರೀತಿಯಾಗಿ ನಮ್ಮನ್ನು ಅವರು ಬೆಳೆಸಿದರು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅವರ ಜೊತೆಯಲ್ಲೇ ಪಕ್ಷದ ಕಾರ್ಯದರ್ಶಿಯಾಗಿ, ಮಂತ್ರಿಯಾಗಿ, ಶಾಸಕನಾಗಿ, ಕೆಲಸ ಮಾಡಿರುವುದರಿಂದ ಹೇಳುತ್ತಿದ್ದೇನೆ. ಅದರಲ್ಲೂ ಯೂತ್ ಕಾಂಗ್ರೆಸ್ ಸದಸ್ಯನಾಗಿ ಮಾಡುತ್ತಿದ್ದಾಗ ವೈಯುಕ್ತಿಕವಾಗಿ ನನ್ನ ಅವರ ಬಾಂಧವ್ಯ ಅಷ್ಟು ಬೆಳೆದಿದ್ದರಿಂದ ನಾನು ಅನೇಕ ವಿಷಯಗಳನ್ನು ಅವರಿಂದ ತಿಳಿದುಕೊಂಡಿದ್ದೇನೆ. ಅವರ ಅನುಭವವನ್ನು ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ. ಅವರು ನಮ್ಮ ರಾಜ್ಯ ಒಂದರಲ್ಲೇ ಹೆಸರು ಪಡೆದಿಲ್ಲ. ಹೊರಗಿನ ರಾಜ್ಯದಲ್ಲೂ ರಾಷ್ಟ್ರ ಮಟ್ಟದಲ್ಲೂ ಹೆಸರುವಾಸಿಯಾಗಿದ್ದಾರೆ. ಯಾವುದೇ ರಾಷ್ಟ್ರಕ್ಕೇ

ಹೋದರೂ ಕೂಡ ಹಿಂದುಳಿದ ವರ್ಗದವರು ದೀನದಲಿತರ ಬಗ್ಗೆ ಶ್ರೀಮಾನ್ ಡಿ. ದೇವರಾಜ್ ಅರಸ್‌ರವರು ಏನು ಮಾಡುತ್ತಿದ್ದರು ಎನ್ನುವ ಬಗ್ಗೆ ವಿಷಯಗಳನ್ನು ನಾವು ಅನೇಕ ಸಂದರ್ಭದಲ್ಲಿ ಕೇಳುತ್ತಿದ್ದೇವೆ. ಅವರು ಏನು ಹೇಳುತ್ತಾ ಇದ್ದರು ಎಂದರೆ ಕಮುನಿಸ್ಟೇತರರ ರಾಜ್ಯಗಳಲ್ಲೂ ಈ ಹಿಂದುಳಿದವರ ಹಾಗೂ ಈ ದೀನದಲಿತರ ಏನೊಂದು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರು ಅದಕ್ಕಿಂತಲೂ ಒಂದು ಹೆಚ್ಚಿನ ರೀತಿಯಲ್ಲಿ ನಮ್ಮ ರಾಜ್ಯದಲ್ಲಿ ಬದಲಾವಣೆ ಮಾಡಿ ಕೆಲಸ ಕಾರ್ಯಗಳನ್ನು ಕೈಗೊಂಡಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದರು. ಅಂತಹ ವೈಶಿಷ್ಟ್ಯ ವ್ಯಕ್ತಿ ಇವರಾಗಿದ್ದರು. ವಿರೋಧ ಪಕ್ಷದಲ್ಲಿದ್ದಾಗಲೂ ಅದೇ ಸ್ಥೈರ್ಯದಿಂದ ಕೆಲಸ ಮಾಡುತ್ತಿದ್ದರು. ಅಧಿಕಾರ ಇರಲಿ, ಇಲ್ಲದಿರಲಿ ಅದರ ಬಗ್ಗೆ ಏನೂ ನೋಡದೆ ಬಹಳ ಸ್ಥೈರ್ಯದಿಂದ ಕೆಲಸ ಮಾಡಿಕೊಂಡು ಹೋಗುವಂಥಾ ವ್ಯಕ್ತಿಯಾಗಿದ್ದರು. ಇಂಥಾ ಒಂದು ಸ್ಥಾನವನ್ನು ಇವತ್ತು ತುಂಬುವುದು ಬಹಳ ಕಷ್ಟವಾಗಿದೆ. ತಮಗೆ ಹೇಳಬೇಕಾದರೆ ಈ ವಿರೋಧ ಪಕ್ಷದವರನ್ನೆಲ್ಲಾ ಒಂದು ಸಂಘಟನೆ ಮಾಡಬೇಕೆಂದು ದೇಶಕ್ಕೆ ಒಂದು ಮಾದರಿ ಮಾಡಿಕೊಡಬೇಕೆಂದು ಅವರು ಆಸೆ ಪಟ್ಟುಕೊಂಡಿದ್ದರು. ಮುಂದೆ ಏನಾಗಬಹುದೆಂದು ಚೆನ್ನಾಗಿ ತಿಳಿದಂತಹ ವ್ಯಕ್ತಿ ಇವರಾಗಿದ್ದರು. ಸಾಮಾನ್ಯವಾಗಿ ತಮ್ಮ ಕೈಕೆಳಗಿದ್ದಂತಹವರನ್ನು ಚೆನ್ನಾಗಿ ತರಬೇತಿ ಮಾಡುವ ವ್ಯಕ್ತಿ ಇವರಾಗಿದ್ದರು. ಅಂಥವರು ಈವತ್ತು ನಮ್ಮ ಮುಂದೆ ಇಲ್ಲ. ತಮಗೆಲ್ಲಾ ಹೇಳಬೇಕಾದರೆ ಶ್ರೀಮಾನ್ ಡಿ. ದೇವರಾಜ್ ಅರಸ್ ರವರು ನಮ್ಮ "ಗುರುಗಳಾಗಿದ್ದವರು" ಎಂದು ಹೇಳುತ್ತೇನೆ ಅದಕ್ಕಾಗಿನಾವು ಅವರಿಗೆ ಒಂದು ಗುರು ಕಾಣಿಕೆಯನ್ನು ಸಲ್ಲಿಸಲೇಬೇಕು. ಅವರಿಗೆ ನಾವು ಒಂದು ಗುರು ಕಾಣಿಕೆಯನ್ನು ಸಲ್ಲಿಸದೇ ಹೋದರೆ ನಾವು ಮಂತ್ರಿಗಳಾಗಿರುವುದು, ಸದಸ್ಯರಾಗಿರುವುದು ವ್ಯರ್ಥ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಗುರು ಕಾಣಿಕೆ ಏನೆಂದರೆ "ವಿಧಾನ ಸೌಧದ" ಹತ್ತಿರ ಶ್ರೀಮಾನ್ ಡಿ. ದೇವರಾಜ್ ಅರಸ್ ರವರ ಶಿಲಾ ಮೂರ್ತಿ ಸರಕಾರದ ಪರವಾಗಿ ಕಟ್ಟಿಸುವುದು ಒಂದು. ಎರಡನೆಯದಾಗಿ ಅರಸ್‌ರವರು ಹಿಂದುಳಿದವರ ಬಗ್ಗೆ ಏನು ದುಡಿಯುತ್ತಿದ್ದರು, ಅವರ ಬಗ್ಗೆ ಒಂದು ಪರಿಶೋಧನಾ ಸಂಸ್ಥೆ "ರೀಸರ್ಚ್ ಇನ್ಸ್ಟಿಟ್ಯೂಟ್" ಅಂದರೆ, ಒಂದು ಸಂಶೋಧನಾ ಕೇಂದ್ರವನ್ನು ರಾಷ್ಟ್ರ ಮಟ್ಟದಲ್ಲಿ ಅವರ ಹೆಸರಿನಲ್ಲಿ ನಮ್ಮ ರಾಜ್ಯದಲ್ಲಿ ಅಂದರೆ ಬೆಂಗಳೂರಿನಲ್ಲಿ ಸ್ಥಾಪನೆ ಮಾಡುವುದು. ಈ ಎರಡೂ ಕೆಲಸವನ್ನೂ ಸರ್ಕಾರದ ಪರವಾಗಿ ಮಾಡಬೇಕೆಂದಿದ್ದೇವೆ. ಈ ಹಿಂದುಳಿದವರ ಆರ್ಥಿಕ ಬಗ್ಗೆ ಯಾವ ರೀತಿ ಸುಧಾರಣೆ ಮಾಡಬೇಕು ಎನ್ನುವುದನ್ನು ತಿಳಿದು ರಾಷ್ಟ್ರ ಮಟ್ಟದಲ್ಲಿ ಬೆಂಗಳೂರಿನಲ್ಲಿ ಒಂದು "ರೀಸರ್ಚ್ ಇನ್ಸಿಟ್ಯೂಟ್" ಒಂದನ್ನು ದೇವರಾಜ್ ಅರಸ್ ರವರ ಹೆಸರಿನಲ್ಲಿ ಸ್ಥಾಪನೆ ಮಾಡಿದರೆ ಇದಕ್ಕಿಂತ ಹೆಚ್ಚಿನ ಗುರು ಕಾಣಿಕೆ ಬೇರೆ ಏನೂ ಇಲ್ಲ, ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗಾದರೆ ಅವರ ಆತ್ಮಕ್ಕೆ ದೊಡ್ಡ ಶಾಂತಿ ಸಿಕ್ಕುವುದು. ಅಲ್ಲದೆ ಹಿಂದುಳಿದವರ ಆರ್ಥಿಕ ಸ್ಥಿತಿ ಮತ್ತು ಅವರ ಅಭಿವೃದ್ಧಿ ಬಗ್ಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಂಥಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟ ಪಡುತ್ತೇನೆ. ಇನ್ನೊಂದು

ಮುಖ್ಯವಾದ ವಿಷಯ ಏನೆಂದರೆ ಶ್ರೀಮಾನ್ ಡಿ. ದೇವರಾಜ್ ಅರಸ್ ರವರು ಯಾವಾಗಲೂ ರಾಜ್ಯದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಮನಸ್ಸಿಗೆ ಬಹಳ ಹಚ್ಚಿಕೊಳ್ಳುತ್ತಿದ್ದರು. ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತಿದ್ದರು. ನಾನು ಮುಖ್ಯಮಂತ್ರಿಯಾದ ಮೇಲೂ ಸಹ ಒಂದೆರಡು ಸಲ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದಾಗ ಕಾವೇರಿ ಜಲಾಶಯದ ಬಗ್ಗೆ ಈ ಕೆಲಸವನ್ನು ಬಹಳ ಬೇಗ ಮಾಡಿ ಅಲ್ಲಿಯ ಭೂಮಿಯನ್ನು ಬೇಗ ನೀರಾವರಿ ಮಾಡಬೇಕು ಎಂದು ಹೇಳುತ್ತಿದ್ದರು. ಜೊತೆಗೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚು ಉತ್ಪತ್ತಿ ಮಾಡದೇ ಹೋದರೆ ನಮ್ಮ ರಾಜ್ಯದಲ್ಲಿರುವ ಕೈಗಾರಿಕೆಗಳು ಇತರ ರಾಜ್ಯಗಳಿಗಿಂತ ಬಹಳ ಹಿಂದೆ ಬೀಳುತ್ತದೆ ಎಂದು ಹೇಳುತ್ತಿದ್ದರು. ಅವರು ಹೇಳಿದಂಥಾ ಈ ಮಾತುಗಳನ್ನು ನಾನು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಆ ಜನಗಳ ಅಭಿವದ್ಧಿ ಬಗ್ಗೆ ಕೆಲಸ ಮಾಡಲಿಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳುತ್ತೇನೆ. ಜೊತೆಗೆ ಈ ಎಲ್ಲಾ ಕಾರ್ಯಕ್ರಮಗಳಿಗೂ ಯಾವುದೇ ಪಕ್ಷ ಬೇಧವಿಲ್ಲದೇ ಎಲ್ಲರೂ ಸಹಕಾರ ಕೊಟ್ಟು ಕೆಲಸ ಮಾಡಿದರೆ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ದಾರಿದೀಪವನ್ನು ತಂದುಕೊಟ್ಟಂಥಾಗುತ್ತದೆ. ಅಲ್ಲದೆ ರಾಜ್ಯದಲ್ಲಿ ಕ್ರಾಂತಿಕಾರಕವಾದ ಬದಲಾವಣೆಯಾಗುತ್ತದೆ. ಶ್ರೀಮಾನ್ ದೇವರಾಜ್ ಅರಸ್ ರವರು ಬಹಳ ಹಿರಿಯರು ಅಲ್ಲದೆ ಎಲ್ಲರಿಗೂ ಮಾರ್ಗದರ್ಶಿಗಳಾಗಿದ್ದರು. ಅವರು ಈ ಹಿಂದೆ ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದ ಸುಮಾರು ಹತ್ತು ವರ್ಷಗಳ ಕಾಲ ಅವರ ಮಾರ್ಗದರ್ಶನದಲ್ಲಿ ಈ ರಾಜ್ಯದ ಸೂತ್ರಧಾರಿಗಳಾಗಿದ್ದರು. ಅವರಿಗೆ ಎಲ್ಲರ ಮನಸ್ಸೂ ಚೆನ್ನಾಗಿ ಗೊತ್ತಿತ್ತು. ಅವರು ಎಲ್ಲರ ಜೊತೆಗೂಡಿ ಕೆಲಸ ಮಾಡುತ್ತಿದ್ದರು. ಅಂಥವರನ್ನು ನಾವು ಈವತ್ತು ಕಳೆದುಕೊಂಡಿರುವಂಥಾದ್ದು ದುರ್ದೈವ ಎಂದು ಹೇಳಬಹುದು. ಅವರಿಗೆ ಇಷ್ಟು ಬೇಗ ಸಾವು ಬರುತ್ತದೆ ಎಂದು ನಾವು ಯಾರೂ ನೆನಸಿರಲಿಲ್ಲ. ಅಲ್ಲದೆ ಅವರು ಅನೇಕ ಸಾರಿ ಖಾಯಿಲೆ ಬಿದ್ದ ವ್ಯಕ್ತಿಯೂ ಅಲ್ಲ. ದೃಢಕಾಯರಾಗೆ ಇದ್ದರು ಯಾವಾಗಲೂ ಆರೋಗ್ಯ ಚೆನ್ನಾಗೇ ಇರುತ್ತಿತ್ತು. ಇಂಥಾದರಲ್ಲಿ ಅವರು ಆಕಸ್ಮಿಕವಾಗಿ ಸಾವನ್ನಪ್ಪಿರುವುದು ನಮಗೆಲ್ಲಾ ಒಂದು ರೀತಿ ಕತ್ತಲೆಯಾಗಿದೆ. ಈ ರೀತಿ ದಾರಿ ತಪ್ಪುತ್ತದೆ ಎಂದು ನಾವು ಎಣಿಸಿರಲಿಲ್ಲ. ಆದರೆ ಸಾವು ಅನ್ನುವುದು ನಮ್ಮ ಕೈಯಲ್ಲಿ ಇಲ್ಲ. ಅದು ಭಗವಂತನ ಕೈಯಲ್ಲಿ ಇದೆ. ನಾನು ಮೊದಲೇ ಹೇಳಿದಂತೆ ಅವರು ರಾಜ್ಯಕ್ಕೆ ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ನಡೆದುಕೊಂಡರೆ ನಾನು ಮೊದಲೇ ಹೇಳಿದ ಹಾಗೆ ಎರಡು ಮುಖ್ಯ ಅಂಶಗಳನ್ನು ಮಾಡಿದರೆ, ಬಹುಶಃ ಅವರ ಆತ್ಮಕ್ಕೆ ಸಿಕ್ಕುತ್ತದೆ ಎಂದು ನನ್ನ ನಂಬಿಕೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ತೀರಾ ಹತ್ತಿರವಾಗಿ ಮೊದಲು ನಾನು ಅವರಲ್ಲಿ ಕೆಲಸ ಮಾಡಿದ್ದರಿಂದ ಅವರ ವಿಷಯಗಳೆಲ್ಲವನ್ನೂ ತಿಳಿದುಕೊಂಡಿದ್ದೇನೆ. ಅವರು ನಮಗೆಲ್ಲಾ ದ್ರೋಣಾಚಾರ್ಯ ಇದ್ದ ಹಾಗೆ ಇದ್ದರು. ಅಂಥವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅಂಥಾ ಒಂದು ಸ್ಥಾನವನ್ನು ಈವತ್ತು ಯಾರಿಂದಲೂ ಕೂಡ ತುಂಬುವುದಕ್ಕೆ ಆಗುವುದಿಲ್ಲ. ಅಂಥಾ ಒಂದು ಸ್ಥಾನವನ್ನು ಅವರು ಪಡೆದಿದ್ದರು. ಅಂಥಾ ಒಂದು ಗುರುವನ್ನು ನಾವು ಕಾಣುತ್ತಾ ಇಲ್ಲ.

ಹುಡುಕಿದರೆ ಸಿಕ್ಕುವುದೂ ಇಲ್ಲ. ಇಲ್ಲವೇ ಬೇರೆ ಕಡೆ ಹೋಗಿ ತೆಗೆದುಕೊಂಡು ಬರುವುದಕ್ಕಂತೂ ಆಗುವುದಿಲ್ಲ. ಅವರ ಜೊತೆಯಲ್ಲೇ ಕೆಲಸ ಮಾಡಿ ಅವರ ಆಶೀರ್ವಾದವನ್ನು ಪಡೆದಿರುತ್ತಾರೋ ಅಂಥವರಿಂದ ಆ ಸ್ಥಾನವನ್ನು ತುಂಬುವುದಕ್ಕೆ ಸಾಧ್ಯ. ಬೇರೆ ಯಾರಿಗಂತೂ ಸಾಧ್ಯ ಇಲ್ಲ. ಪರಿಸ್ಥಿತಿ ಹಾಗೆ ಇದೆ. ಆದುದರಿಂದ ನಮ್ಮ ಗುರುಗಳಿಗೆ ಕೊಡಬೇಕಾದ ಕಾಣಿಕೆ ಏನೆಂದರೆ ಅವರ ಮನಸ್ಸಿನಲ್ಲಿ ರಾಜ್ಯದ ಬಗ್ಗೆ ಏನು ಒಂದು ಆತಂಕ ಇತ್ತೋ ಅದನ್ನು ತಿಳಿದುಕೊಂಡು ಮುಂದುವರಿಸಿಕೊಂಡು ಹೋಗುವಂಥಾದ್ದು ಅತ್ಯಂತ ಮುಖ್ಯವಾದುದು. ಪಕ್ಷ ಭೇದವಿಲ್ಲದೇ ಆ ಕೆಲಸಗಳನ್ನು ಸರ್ಕಾರ ಮಾಡಿಕೊಂಡು ಹೋಗುತ್ತದೆ ಎಂದು ಹೇಳುತ್ತೇನೆ. ಹಾಗಾದರೆ ನಮ್ಮ ರಾಜ್ಯದ ಜನತೆ ಶತಮಾನಗಳಾದರೂ ಆ ಕೆಲಸ ಕಾರ್ಯಗಳನ್ನು ನೆನೆಸಿಕೊಂಡು ಹೋಗುತ್ತದೆ ಎಂದು ನನ್ನ ನಂಬಿಕೆ. ಇಷ್ಟು ಹೇಳುತ್ತಾ ದಿವಂಗತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬಕ್ಕೂ ಶಾಂತಿ ನೀಡಲಿ ಎಂದು ಹೇಳುತ್ತೇನೆ. ಅವರಿಗೆ ಇನ್ನೊಂದು ಆಘಾತ ಎಂದರೆ ದುಃಖ ವಿಪರೀತ ಆಗುವುದಕ್ಕೆ ಕಾರಣ, ಕಳೆದ 1 1/2 ವರ್ಷಗಳಲ್ಲಿ ಒಬ್ಬ ಮಗಳು ತೀರಿಕೊಂಡಳು. ಈಗ್ಗೆ 18 ದಿವಸದ ಹಿಂದೆ ಒಬ್ಬ ತಮ್ಮ ತೀರಿ ಹೋದನು. ಯಾವಾಗಲೂ ಈ ಒಂದು ದುಃಖ ಇತ್ತು. ಜೊತೆಗೆ ಈಗ ಈ ಒಂದು ಕತ್ತಲು ಕವಿದಿದೆ. ಈ ಸಂದರ್ಭದಲ್ಲಿ ಅವರ ಕುಟುಂಬದವರಿಗೆ, ಅವರ ಪತ್ನಿಯವರಿಗೆ ಭಗವಂತನು ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥನೆ ಮಾಡಿ ನಾನು ಈಗ ತಂದಿರತಕ್ಕಂಥಾ ನಿರ್ಣಯವನ್ನು ಈ ಸಭೆ ಸರ್ವಾನು ಮತದಿಂದ ಒಪ್ಪಿ ಈ ದಿನದ ಸಭೆಯ ಕಾರ್ಯಕಲಾಪಗಳನ್ನು ಮುಂದೂಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

## ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಮುಖ್ಯಮಂತ್ರಿಯಾಗಿ ನೀಡಿದ ಉತ್ತರ

ಮುಖ್ಯಮಂತ್ರಿಯಾಗಿ ಮೂರನೇ ವರ್ಷಕ್ಕೆ ಕಾಲಿಟ್ಟ ಶ್ರೀ ಆರ್. ಗುಂಡೂರಾವ್ 1982-83ನೇ ಸಾಲಿನ ತಮ್ಮ ಇಲಾಖೆಗಳ ಬೇಡಿಕೆ ಚರ್ಚೆ ಬಗ್ಗೆ 22 ಜುಲೈ 1982ರಂದು ಉತ್ತರಿಸಿದರು. ಅವರ ಭಾಷಣದಲ್ಲಿ ರಾಜಕೀಯ ಪಕ್ಷಾಂತರದ ಜಾತಿ ರಾಜಕೀಯದ ಗೊಂದಲ ಹಾಗೂ ಜನತೆಯ ತೀರ್ಮಾನದ ಬಗ್ಗೆ ಖಚಿತ ಅನಿಸಿಕೆ ಹಾಗೂ ಅನುಭವಗಳು ವ್ಯಕ್ತಗೊಂಡವು.

(Mr. Speaker Sri K.H. Ranganath in the Chair)

Mr. Speaker:- Discussion concluded. The Hon'ble Chief Minister to reply.

**ಶ್ರೀ ಆರ್. ಗುಂಡೂರಾವ್** : ಸನ್ಮಾನ್ಯ ಅಧ್ಯಕ್ಷರೆ.........

**ಶ್ರೀ ಕೆ. ಪ್ರಭಾಕರ್** : ಕೆಲವರಿನ್ನೂ ಮಾತನಾಡಬೇಕಾಗಿತ್ತು.

**ಅಧ್ಯಕ್ಷರು** : 15 ಗಂಟೆ ಚರ್ಚೆಯಾಗಿದೆ. ಇನ್ನೂ ಎಷ್ಟು ಚರ್ಚೆ ಮಾಡಬೇಕು? ಚರ್ಚೆ ಸಾಕು. ಈಗ ಮುಖ್ಯಮಂತ್ರಿಗಳು ಉತ್ತರ ಕೊಡಲಿ. It was made known in the morning itself. That is why we sat half an hour more.

**ಶ್ರೀ ಕೆ. ಪ್ರಭಾಕರ್** : ಈ ಪಟ್ಟಿಯಲ್ಲಿ ......

**ಅಧ್ಯಕ್ಷರು** : ತಾವು ಕುಳಿತುಕೊಳ್ಳಿ, ಡಿಸ್ಟರ್ಬ್ ಮಾಡಬೇಡಿ. ಸುಮಾರು 15-16 ಗಂಟೆಯಷ್ಟು ಚರ್ಚೆಯಾಗಿದೆ. ಚರ್ಚೆ ಮುಗಿಸಬೇಕು ಎಂದೇ ಬೆಳಿಗ್ಗೆ ಅರ್ಧ ಗಂಟೆ ಜಾಸ್ತಿ ಕೂಡ ಕುಳಿತಿದ್ದೇವೆ. ಇನ್ನೂ ಚರ್ಚೆಯಾಗಬೇಕು ಎಂದರೆ ಅದು ಸರಿಯಲ್ಲ. ದಯವಿಟ್ಟು ಕುಳಿತು ಕೊಳ್ಳಿ.

**ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು)** : ಸನ್ಮಾನ್ಯ ಅಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ನನ್ನ ಇಲಾಖೆ ಬೇಡಿಕೆ ಮೇಲೆ ಅನೇಕ ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಸದನ ಪ್ರಥಮವಾಗಿ ಸ್ಥಾಪನೆಯಾದ ಅನೇಕ ವರ್ಷಗಳ ಕಾಲ ನಾನು ಈ ಸಭೆಯ ಸದಸ್ಯನಾಗಿರಲಿಲ್ಲ. ಆದರೆ ಅನೇಕ ಜನ ಹಿರಿಯ ಸದಸ್ಯರು ಮೊದಲಿನಿಂದ ಇದ್ದವರು ಇವತ್ತು ಈ ಸದನದಲ್ಲಿದ್ದಾರೆ. ಈ ಸದನದ ಸಂಪ್ರದಾಯ ಮೊದಲಿನಿಂದ ಏನಿದೆಯೆಂದರೆ ಮುಖ್ಯಮಂತ್ರಿ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಯನ್ನು ಮಂಡಿಸಿದಾಗ ಅದರ ಬಗ್ಗೆ ಚರ್ಚೆಯನ್ನು ಅಧಿಕೃತವಾಗಿ ವಿರೋಧ ಪಕ್ಷದ ನಾಯಕರಾಗಿರತಕ್ಕಂಥವರು ಪ್ರಾರಂಭ ಮಾಡುತ್ತಾರೆ. ಆದರೆ ನಾನು ಮುಖ್ಯಮಂತ್ರಿಯಾದ ಮೇಲೆ ನನ್ನ ಅದೃಷ್ಟವೋ

ಏನೋ ಗೊತ್ತಿಲ್ಲ. ಆ ಸಂಪ್ರದಾಯದ ಪ್ರಕಾರ ನಡೆಯುತ್ತಿಲ್ಲ. 1980ನೇ ಜನವರಿ 12ನೇ ತಾರೀಖು ನಾನು ಮುಖ್ಯಮಂತ್ರಿಯಾದೆ. ಆಗ ವಿರೋಧಪಕ್ಷದ ನಾಯಕರಾಗಿ ಶ್ರೀಮಾನ್ ದೇವರಾಜ್ ಅರಸು ಅವರು ಚರ್ಚೆಯನ್ನು ಪ್ರಾರಂಭ ಮಾಡಬೇಕಾಗಿತ್ತು. ಅವರು ನಾನು ಹತ್ತು ವರ್ಷ ಜೊತೆಯಲ್ಲಿ ಕೆಲಸ ಮಾಡಿದವರು. ಏತಕ್ಕೋಸ್ಕರ ಮುಖ್ಯಮಂತ್ರಿಗಳ ಬೇಡಿಕೆ ಮೇಲೆ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆಂದರೆ ಈ ರಾಜ್ಯದ ಜನತೆಗೆ ಆಡಳಿತ ಪಕ್ಷ ಎಷ್ಟು ಜವಾಬ್ದಾರಿಯುತವಾಗಿದೆಯೋ ಅಷ್ಟೇ ಜವಾಬ್ದಾರಿಕೆಯನ್ನು ವಿರೋಧ ಪಕ್ಷದಿಂದಲೂ ಜನತೆ ನಿರೀಕ್ಷೆ ಮಾಡುತ್ತದೆ . ವಿರೋಧಪಕ್ಷ ಇರುವುದು ಕೇವಲ ವಿಧಾನಸಭೆಗೆ ಬಂದು ಯಾವುದೋ ಕೆಲವು ವೈಯಕ್ತಿಕವಾದ ವಿಷಯಗಳನ್ನು ಅಥವಾ ವೈಯಕ್ತಿಕವಾದ ಟೀಕೆಗಳನ್ನು ಮಾತ್ರ ಮಾಡುವುದಕ್ಕಲ್ಲ. ರಾಜ್ಯಾಂಗವನ್ನು ರಚನೆ ಮಾಡಿದಾಗಲೂ ಆಡಳಿತ ಪಕ್ಷ ಮತ್ತು ವಿರೋಧಪಕ್ಷವನ್ನು ಏತಕ್ಕಾಗಿ ಮಾಡಿದರೆಂದರೆ ರಾಜ್ಯದಲ್ಲಿರುವ ಆಡಳಿತ ಪಕ್ಷ ಲೋಪ ಮಾಡಿದಾಗ ಅದನ್ನು ಕಂಡುಹಿಡಿದು ತಿದ್ದುವುದಕ್ಕಾಗಿ ಮಾಡಿದರು. ರಾಜ್ಯದ ಹಿತದೃಷ್ಟಿಯಿಂದ, ದೇಶದ ಹಿತದೃಷ್ಟಿಯಿಂದ, ಆಡಳಿತ ಪಕ್ಷ ದಾರಿಯನ್ನು ತಪ್ಪಿದಾಗ, ಆಡಳಿತದಲ್ಲಿ ಲೋಪದೋಷಗಳನ್ನು ಉಂಟು ಮಾಡಿದಾಗ ಅದನ್ನು ಕಂಡು ಹಿಡಿದು ಸರಿಯಾದ ದಾರಿಯಲ್ಲಿ ಹೋಗುವಂತೆ ಮಾಡಲು ಸಹಕಾರಿಯಾಗಿರುವುದಕ್ಕೋಸ್ಕರ ವಿರೋಧ ಪಕ್ಷವನ್ನು ರಚನೆ ಮಾಡಿದರು. ಏನಾದರೂ ಆಡಳಿತದಲ್ಲಿ ಲೋಪದೋಷಗಳಾದರೆ ಅದು ರಾಜಕೀಯ ಅಧಿಕಾರವನ್ನು ಹಿಡಿದಂಥ ಪಕ್ಷದಿಂದ ಆಗುತ್ತಿದೆಯೋ, ಅಥವಾ ಇವತ್ತಿನ ಆಡಳಿತ ಪದ್ಧತಿಯಿಂದ ಆಗುತ್ತಿದೆಯೋ ಅಥವಾ ಅಧಿಕಾರಿಗಳ ಮಟ್ಟದಲ್ಲಿ ಆಗುತ್ತಿದೆಯೋ, ಎಂಬುದನ್ನು ಕಂಡುಹಿಡಿದು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ಸಹಾಯಕವಾಗಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ರಾಜ್ಯಾಂಗ ರಚನೆ ಮಾಡಿದವರು ವಿರೋಧಪಕ್ಷ ಇರಬೇಕು ಎಂದು ಮಾಡಿದರು. ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳಿಗೆ, ಜವಾಬ್ದಾರಿಯುತವಾಗಿ ಅಷ್ಟೇ ಅಧಿಕೃತವಾಗಿ ವಿರೋಧ ಪಕ್ಷದ ನಾಯಕರಾದಂಥವರು ಪ್ರಾರಂಭ ಮಾಡಬೇಕು; ಅವರಿಗೂ ಅಷ್ಟೇ ಜವಾಬ್ದಾರಿ ಇದೆ. ಆಕಸ್ಮಿಕವಾಗಿ ವಿರೋಧ ಪಕ್ಷದ ನಾಯಕರಿಗೆ ಅನಾರೋಗ್ಯವಾಗಿದ್ದರೆ ತನ್ನ ಪಕ್ಷದ ಸಭೆಯಲ್ಲಿ ಭಾಗವಹಿಸುವುದಕ್ಕೆ ಡೆಲ್ಲಿಗೆ ಹೋಗಿದ್ದರೆ ತನ್ನ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಬಹುದು. ಕರ್ನಾಟಕದ ಶಾಸನ ಸಭೆಯಾಗಿರಲಿ; ರಾಷ್ಟ್ರದ ಇತರ ರಾಜ್ಯಗಳ ಶಾಸನ ಸಭೆಗಳಾಗಿರಲಿ ಒಂದು ಸಂಪ್ರದಾಯದ ರೀತ್ಯ ವಿರೋಧ ಪಕ್ಷದ ನಾಯಕರೇ ಚರ್ಚೆಯನ್ನು ಪ್ರಾರಂಭ ಮಾಡುತ್ತಾರೆ. ಆದರೆ, ಕರ್ನಾಟಕದಲ್ಲಿ 1980ನೇ ಇಸವಿಯಿಂದ, ನನ್ನ ಅದೃಷ್ಟವೋ ಏನೋ? ದಿವಂಗತ ದೇವರಾಜ ಅರಸು ಅವರು ಚರ್ಚೆಯನ್ನು ಪ್ರಾರಂಭ ಮಾಡಿದ್ದರು; ಅವರು ನ್ಯಾಯವಾಗಿ ಪ್ರಾರಂಭ ಮಾಡಬೇಕಾಗಿರಲಿಲ್ಲ. ನಾನು ಅವರ ಜೊತೆಯಲ್ಲಿಯೇ ಮಂತ್ರಿಯಾಗಿದ್ದವನು; ಆ ಪ್ರಗತಿಪರವಾದ ಕಾರ್ಯಕ್ರಮಗಳಲ್ಲಿ ಜಂಟೀ ಜವಾಬ್ದಾರಿಯಾಗಿದ್ದೆನು. ನಾನು ಮಂತ್ರಿಮಂಡಲವನ್ನು ಬಿಟ್ಟು ಮೂರು ತಿಂಗಳಿಗೆ ನನ್ನ

ಮೇಲೆ ಆಪಾದನೆ ಮಾಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ. ನಮ್ಮ ಮೇಲೆ ಆಪಾದನೆ ಮಾಡುವಂತಿದ್ದರೆ ಮಾನ್ಯ ದೇವೇಗೌಡರು ಮಾಡಬೇಕಾಗಿತ್ತು. ಜೆ.ಹೆಚ್. ಪಟೇಲ್ ರವರು ಮಾಡಬೇಕಾಗಿತ್ತು; ರಾಜಶೇಖರ್‌ರವರು ಮಾಡಬೇಕಾಗಿತ್ತು; ಆರ್ಮುಗಂ ಮತ್ತು ಗಂಗಾಧರನ್‌ರವರು ಮಾಡಬೇಕಾಗಿತ್ತು. ಆದರೆ, ಶ್ರೀಮಾನ್ ಅರಸುರವರು ನನ್ನ ಮೇಲೆ ಆಪಾದನೆ ಮಾಡುವುದಕ್ಕಾಗುವುದಿಲ್ಲ. ಇನ್ನು ಎರಡನೇ ವರ್ಷ ಮಾನ್ಯ ಬಸವಲಿಂಗಪ್ಪನವರು ಚರ್ಚೆಯನ್ನು ಪ್ರಾರಂಭ ಮಾಡಿದರು; ಅದು ನನ್ನ ಅದೃಷ್ಟವೇ. ಅವರು ನನ್ನ ಮೇಲೆ ಏನು ಮಾತನಾಡುವುದಕ್ಕೆ ಸಾಧ್ಯ? ಅವರು ಯಾವತ್ತೂ ಆಡಳಿತ ಪಕ್ಷದಲ್ಲಿದ್ದವರು; ಅದರಲ್ಲಿಯೂ ಹೆಚ್ಚಿಗೆ ಮಂತ್ರಿಗಳಾಗಿಯೇ ಬಂದವರು. ಸ್ವಲ್ಪ ದಿವಸದಲ್ಲಿ ಈ ಕಡೆ ಬರುತ್ತಾರೆಂದು ಹೇಳಿದ್ದೆ; ಈಗ ಬಂದೇ ಬಿಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಸಮಾಜದ ಹಿಂದುಳಿದ ವರ್ಗದವರ, ಪರಿಶಿಷ್ಟ ವರ್ಗದವರ ಬಗ್ಗೆ ನಾವು ಏನು ಹೇಳುತ್ತಿದ್ದೇವೆ. ಇವತ್ತು ಆರ್ಥಿಕ ಬದಲಾವಣೆ, ಸಾಮಾಜಿಕ ಬದಲಾವಣೆಯಾಗಬೇಕು; ರಾಜಕೀಯ ಬದಲಾವಣೆಯಾಗಬೇಕು; ಆಡಳಿತ ಬದಲಾವಣೆಯಾಗಬೇಕೆಂದು ಹೇಳುತ್ತಿದ್ದರೂ ಒಂದು ದಶಕದಲ್ಲಿ ಏತಕ್ಕೆ ಆಗಲಿಲ್ಲ. 3ನೇ ವರ್ಷದಲ್ಲಾದರೂ ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಕಾಂಗ್ರೆಸ್ ಪಕ್ಷದ ತತ್ವಗಳನ್ನು ಒಪ್ಪದೇ ಇರುವಂಥ ಹಿಂದುಳಿದ ವರ್ಗಕ್ಕೆ ಸೇರಿದವರೊಬ್ಬರು ವಿರೋಧ ಪಕ್ಷದ ನಾಯಕರಾಗಿದ್ದಾರೆ; ಸರ್ಕಾರದ ಲೋಪದೋಷಗಳನ್ನು ಎತ್ತಿ ಹಿಡಿಯುತ್ತಾರೆಂದು ತಿಳಿದುಕೊಂಡಿದ್ದೆ. ಅಲ್ಲದೆ, 83ನೇ ಇಸವಿಯಲ್ಲಿ ಚುನಾವಣೆಗೆ ಹೋಗುವವರಿದ್ದೇವೆ; ಆಡಳಿತದಲ್ಲಿ ಆಗಿರುವಂಥ ಲೋಪದೋಷಗಳ ಬಗ್ಗೆ ಒಂದು ಹೊಸ ಬೆಳಕು ಚೆಲ್ಲಿ ರಾಜ್ಯದ ಜನತೆಯ ಮುಂದೆ ಲೋಪದೋಷಗಳನ್ನು ಎತ್ತಿ ಹೇಳುವಂಥ ನೈತಿಕ ಹಾಗೂ ತಾಂತ್ರಿಕ ಹಕ್ಕನ್ನು ಪಡೆದಿದ್ದಾರೆ. ಈ ವರ್ಷವಾದರೂ ರಚನಾತ್ಮಕ ಟೀಕೆಗಳನ್ನು ಕೇಳುತ್ತೇವೆ ಎಂದು ತಿಳಿದುಕೊಂಡಿದ್ದರೆ; ಈ ಸಾರಿ ಬಂಗಾರಪ್ಪನವರು ಪ್ರಾರಂಭ ಮಾಡುತ್ತಾರೆ. ನಾನು ಯೋಚನೆ ಮಾಡಿದೆ, ನನಗಿನ್ನೂ ಅದೃಷ್ಟ ಗಟ್ಟಿ ಇದೆ; ಮಾನ್ಯ ಸಾಗರ್ ರವರೇ ತಾವು ವಿರೋಧ ಪಕ್ಷದ ನಾಯಕರಾದ ದಿನ ನಾನು ಬಹಳ ಸಂತೋಷದಿಂದ ಸ್ವಾಗತ ಮಾಡಿದ್ದೇನೆ. ರಾಜ್ಯದ ಆಗುಹೋಗುಗಳ ಬಗ್ಗೆ ತಮಗೂ ಜವಾಬ್ದಾರಿ ಇದೆ; ಈ ರಾಜ್ಯದ ಜನತೆಗೆ ವಿಧಾನಸೌಧದಲ್ಲಿ ಕೂತುಕೊಂಡು ವಿರೋಧ ಪಕ್ಷದ ನಾಯಕರು ಸರ್ಕಾರದ ಲೋಪದೋಷಗಳ ಬಗ್ಗೆ ಎಷ್ಟರ ಮಟ್ಟಿಗೆ ಬೆಳಕು ಚೆಲ್ಲುತ್ತಾರೆಂದು ಎಲ್ಲರೂ ಕಾಯುತ್ತಿದ್ದಾರೆ. ತಾವು ಜನತೆಗೆ ಮೋಸ ಮಾಡುವುದಕ್ಕಾಗುವುದಿಲ್ಲ. ವಿರೋಧ ಪಕ್ಷದಲ್ಲಿ ನಾಯಕರು ಇರಬೇಕು. ಉಪ ನಾಯಕರು ಇರಬೇಕು. ಆ ಒಂದು ದೃಷ್ಟಿಯಿಂದಲೇ ವಿರೋಧ ಪಕ್ಷಕ್ಕೆ ಮನ್ನಣೆ ಕೊಡುವುದು. ಪರಿಸ್ಥಿತಿ ಹೀಗಿರುವಾಗ ಈ ವರ್ಷ ಪ್ರಾರಂಭ ಮಾಡುವುದಕ್ಕೆ ಯಾರಿಗೆ ಬಿಟ್ಟಿರಿ. 1981ನೇ ಇಸವಿಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ, ನಮ್ಮ ಮಂತ್ರಿ ಮಂಡಲದಲ್ಲಿ ಹನ್ನೊಂದೂವರೆ ತಿಂಗಳು ಸದಸ್ಯರಾಗಿದ್ದಂಥವರಿಗೆ, ಈ ರಾಜ್ಯದ ಜನತೆ ಯಾವ ಪಕ್ಷವನ್ನು ಅಧಿಕಾರಕ್ಕೆ ತಂದರೋ; ಆ ಪಕ್ಷದ ಸದಸ್ಯರಾಗಿದ್ದು, ಶಾಸನ ಸಭೆಯ ಸದಸ್ಯರಾಗಿದ್ದು, ಆ ಪಕ್ಷದ ನೀತಿ

ಮತ್ತು ತತ್ವಗಳಿಗೆ ಒಪ್ಪರಾಗಿದ್ದಂತವರು ಈ ಸಾರಿ ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ವಿರೋಧ ಪಕ್ಷದವರಿಗೆ Technically and legally you are hundred percent right. But morally you have lost. Today, you are there only for technical sake. But you have no moral courage to face the people of Karnataka as a Leader of the opposition. Because you have shirked the responsibility of initiating the debate which was the right of the opposition leader and which was in practice since 1956, if I remember correct, I am subject to correction.

SRI A. LAKSHMI SAGAR - Sir, Your reasoning is not well founded.

Sri R. Gundu Rao : I welcome Mr. Bangarappa's critics of the Government as a member of the legislative assembly or as a leader of particular group. But initiating discussion on budget demands by him shows that there is bankrupcy of leaders in the opposition to-day..... I am not bothered whether I will become the Chief Minister of this State in future also. If the people vote for my party or any other party, the leader of that party will be leader of the House. I don't care for it. That is why, I said that it is not only the Government that is responsible to the people, but the opposition party, leaders and members of the opposition are also responsible.

SRI A. LAKSHISAGAR - We are discharging our duties to the best of our abilities.

SRI R. GUNDU RAO - No, you have failed to discahrge.

MR. SPEAKER- Please do not interrupt unless he yields ......

ಶ್ರೀ ಎಸ್. ಬಂಗಾರಪ್ಪ .- ಮಾನ್ಯ ಮುಖ್ಯಮಂತ್ರಿಗಳು ಒಂದು ನಿಮಿಷ ಈಲ್ಡ್ ಆದರೆ ....

ಶ್ರೀ ಆರ್. ಗುಂಡೂರಾವ್ .- ಆಗಬಹುದು.

ಶ್ರೀ ಎಸ್. ಬಂಗಾರಪ್ಪ .- ಮಾನ್ಯ ಅಧ್ಯಕ್ಷರೇ, ವಿರೋಧಪಕ್ಷದ ನಾಯಕರ ಜವಾಬ್ದಾರಿ ಕುರಿತು ಮಾನ್ಯ ಮುಖ್ಯಮಂತ್ರಿಗಳು ವ್ಯಾಖ್ಯಾನ ಮಾಡುತ್ತಿದ್ದಾರೆ bankruptcy of the leaders in the opposition parties ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದಾರೆ ಅವರು ಮಾಡಲಿ, ಅವರಿಗೆ ಹಕ್ಕಿದೆ. ಅಂತಿಮವಾಗಿ ಜನರು ತೀರ್ಮಾನ ಮಾಡುತ್ತಾರೆಂದು ಅವರು ಹೇಳಿದ್ದಾರೆ. ನಾವು ಸಹ ಅದನ್ನೇ ಹೇಳಿದ್ದೇವೆ. ಈಗ ಮಾನ್ಯ ಮುಖ್ಯಮಂತ್ರಿಗಳು ಹಲವಾರು ಖಾತೆಗಳನ್ನು 1980ನೇ ಇಸವಿಯಿಂದ ಹೊಂದಿದ್ದರೂ ಸಹ ಈ ಖಾತೆಗಳಿಗೆ ಸಂಬಂಧಪಟ್ಟ ಬೇಡಿಕೆಗಳು ಇಲ್ಲಿ ಚರ್ಚೆಗೆ ಬರುವ ಕಾಲದಲ್ಲಿ ಕೆಲವು ಖಾತೆಗಳನ್ನು ಬೇರೆ ಮಂತ್ರಿಗಳಿಗೆ ವಹಿಸಿದ್ದಾರೆ; ಜಂಟಿ ಜವಾಬ್ದಾರಿ ಇದೆ ಎಂಬ ಕಾರಣದಿಂದ ಈ ರೀತಿ ಮಾಡಿದರೂ ಸಹ ನಿಮ್ಮಲ್ಲೂ bankruptcy ಇದೇ ಎಂದು ನಾನೇತಕ್ಕೆ ಕೇಳಬಾರದು.

ಶ್ರೀ ಆರ್. ಗುಂಡೂರಾವ್ .- ಅದನ್ನು ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ .- ವಿರೋಧಪಕ್ಷದವರಿಗೆ ಇರುವಂತಹ ಹಕ್ಕನ್ನು ನಾವು ಹೊಂದಾಣಿಕೆ ಮಾಡಿಕೊಂಡು ಒಬ್ಬೊಬ್ಬರು ಒಂದೊಂದು ವಿಷಯದ ಮೇಲೆ ಮಾತನಾಡಿದ್ದೇವೆ. What is wrong with that?

SRI R. GUNDU RAO - Whatever you want to tell say it afterwords. I have yielded just because you were my collegue till day before yesterday.

SRI S. BANGARAPPA - Thank you.

ಶ್ರೀ ಆರ್. ಗುಂಡೂರಾವ್ .- ಮಾನ್ಯ ಜೆ.ಎಚ್. ಪಟೇಲ್ ಅವರಿಗೆ ಬೇಕಾದರೆ ಚರ್ಚೆ ಪ್ರಾರಂಭ ಮಾಡುವಂತೆ ಹೇಳಬಹುದಾಗಿತ್ತು. ಆದರೆ ನಿಮಗೆ ಹೇಳಿದರು. I know you very well as you know me very well. You were not here when I started.

SRI S. BANGARAPPA - I also know you very well.

ಶ್ರೀ ಜೆ.ಎಚ್. ಪಟೇಲ್ .- ತಾವು ಹೇಳಿದಿರಿ I know you very well ಎಂದು. ಇವರು ಹೇಳಿದರು I also know you very well. ಎಂದು. ಇದೇ ಕಾರಣಕ್ಕಾಗಿ ನಾವು ಇವರನ್ನು ಉಪಯೋಗಿಸಿದ್ದು. ಇನ್ನು ಯಾವುದಕ್ಕೂ ಅಲ್ಲ. ಬಂದೂಕನ್ನು ಯಾವುದಕ್ಕೆ ಉಪಯೋಗಿಸಬೇಕೆಂಬುದು ನಮಗೆ ಗೊತ್ತಿದೆ.

SRI K.H. SRINIVAS - Now the cat is out of the bag.

SRI R. GUNDU RAO - To that extent I am greatful to Mr. J.H. Patel. Suppose the Chief Minister moves important

demands like Secretariat, police, irrigation etc. ಇಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಈ ರಾಜ್ಯದ ಆಡಳಿತದ ಬಗ್ಗೆ ಯಾವ ಹೊಸ ಬೆಳಕನ್ನು ಚೆಲ್ಲುತ್ತಾರೆಂಬುದನ್ನು ಈ ದೇಶದ ಜನರು ನೀರಿಕ್ಷೆ ಮಾಡುತ್ತಿರುತ್ತಾರೆ. ಅದಕ್ಕಾಗಿಯೇ ವಿರೋಧ ಪಕ್ಷದ ನಾಯಕರು ಎಂದು ಮಾನ್ಯತೆ ಮಾಡಿ ಅವರಿಗೆ ಕ್ಯಾಬಿನೆಟ್ ಮಂತ್ರಿಯ ಸ್ಥಾನಮಾನಗಳನ್ನು ಹಾಗೂ ಎಲ್ಲ ಸೌಲಭ್ಯಗಳನ್ನು ಕೊಡುತ್ತಿರುವುದು. It is a convention, and respect for the Constitutional Practices in the whole system. ಅದಕ್ಕೇ ನಾನು ಹೇಳಿದೆ. ಈ ಸಲ ಈ ಒಂದು ಸಂಪ್ರದಾಯ ತಪ್ಪಿಹೋಯಿತು ಎಂದು. 1980ರಲ್ಲಿ ಮಾನ್ಯ ಬಂಗಾರಪ್ಪನವರು ಈ ಕಡೆ ಇದ್ದರು. ಆಗ ಮಾನ್ಯ ದೇವರಾಜ ಅರಸ ಅವರು ಚರ್ಚೆಯನ್ನು ಪ್ರಾರಂಭ ಮಾಡಿದರು. ಆದರೆ ಅವರು ಮತ್ತು ನಾನು 8 ವರ್ಷಗಳ ಕಾಲ ಜೊತೆಯಲ್ಲಿಯೇ ಇದ್ದವರು. 1971ನೇ ಇಸವಿಯಲ್ಲಿ ಈ ರಾಜ್ಯಕ್ಕೆ ರಾಷ್ಟ್ರಪತಿಯವರ ಆಡಳಿತ ಬಂದಾಗಿನಿಂದ ಹಿಡಿದು 1980ನೇ ಇಸವಿ ಜನವರಿ 12ನೇ ತಾರೀಖಿನವರೆಗೆ ಆದಂಥ ಲಾಭ ನಷ್ಟ ಮತ್ತು ಆದಂಥ ಪ್ರಗತಿ ಎಲ್ಲದಕ್ಕೂ ಜವಾಬ್ದಾರರಾದಂಥ ಅವರು ಈ ರಾಜ್ಯದ ಜನತೆಯ ಮೇಲೆ ಹೊಸ ಬೆಳಕನ್ನು ಚೆಲ್ಲಲು ಸಾಧ್ಯವಿಲ್ಲ ಮತ್ತು ಆರೋಪ ಮಾಡುವುದಕ್ಕೂ ಸಹ ಸಾಧ್ಯವಿಲ್ಲ. ಅದು ಕಷ್ಟದ ಕೆಲಸ. ಇಂತಹವರು ಏನಾದರು ಆರೋಪ ಮಾಡಬೇಕಾದರೆ ಒಂದು ವರ್ಷವಾದರೂ ಕಾಯಬೇಕಾಗುತ್ತದೆ. ಇಲ್ಲದಿದ್ದರೆ ಜನರು ನಂಬುವುದಿಲ್ಲ, ಏಕೆಂದರೆ, ಇವರೇ ಇದಕ್ಕೂ ಮೊದಲು ಶ್ರೀಮತಿ ಇಂದಿರಾಗಾಂಧಿಯವರ ಪಕ್ಷದ ಚಿಹ್ನೆಯಾದ 'ಕೈ' ಬಗ್ಗೆ ಪ್ರಚಾರ ಮಾಡಿದವರು ಮತ್ತು ಇವರೇ, ಬಡವರಿಗೆ ದೇವತೆ, ಇವರು ಇಡೀ ಪ್ರಪಂಚಕ್ಕೇ ಬೇಕಾದವರು ಎಂದೆಲ್ಲಾ ಭಾಷಣ ಮಾಡಿ, ಇದ್ದಕ್ಕಿದ್ದಂತೆ ಶ್ರೀಮತಿ ಇಂದಿರಾಗಾಂಧಿ ಅವರು ಸರ್ವಾಧಿಕಾರಿ ಎಂದು ಹೇಳಿದರೆ ಯಾರು ಕೇಳುತ್ತಾರೆ? ಇವರಿಗೆ ಆ ರೀತಿ ಹೇಳಲು ಹಕ್ಕಿದೆ, ಆದರೆ ಅದನ್ನು ಜನರು ಕೇಳಬೇಕಲ್ಲ? ಆದ್ದರಿಂದಲೇ ನಾನು ಇದಕ್ಕೆ ಸ್ವಲ್ಪ ಸಮಯ ಕಾಯಬೇಕಾಗುತ್ತದೆ ಎಂದು ಹೇಳಿದ್ದು. 1969ನೇ ಇಸವಿಯವರೆಗೆ ಶ್ರೀಮಾನ್ ನಿಜಲಿಂಗಪ್ಪನವರು ಸಹ ಇವರ ಜೊತೆಯಲ್ಲಿಯೇ ಇದ್ದರು. ಅನಂತರ ಅವರೂ ಸಹ ಇವರಿಂದ ಬೇರೆಯಾದರು. ಆದರೆ ಅಲ್ಲಿಯವರೆಗೆ ಇವರು ಬೇರೆಬೇರೆ ಸಮಯದಲ್ಲಿ ಇವರ ಪಕ್ಷದ ವತಿಯಿಂದಲೇ ಸುಮಾರು ಹತ್ತು ಹನ್ನೆರಡು ವರ್ಷಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದವರು. ಇದ್ದಕ್ಕಿದಂತೆ ಶ್ರೀಮತಿ ಇಂದಿರಾಗಾಂಧಿ ಅವರು ಶ್ರೀ ಮೊರಾರ್ಜಿ ದೇಸಾಯಿ ಅವರನ್ನು ಅಧಿಕಾರದಿಂದ ತೆಗೆದರೆಂಬ ಕಾರಣದಿಂದ ಶ್ರೀಮತಿ ಇಂದಿರಾಗಾಂಧಿ ಅವರು ಸರ್ವಾಧಿಕಾರಿ ಎಂದು ಹೇಳಿದರು. ಆದರೆ ಜನತೆ ಅದನ್ನು ಒಪ್ಪಲಿಲ್ಲ. ಒಂದು ಪಕ್ಷ ಇಂಥಾದ್ದನ್ನೆಲ್ಲಾ ಹೇಳುವುದಿದ್ದರೆ ಹತ್ತು ವರ್ಷ ಇಲ್ಲವೇ 15 ವರ್ಷಗಳು ಬಿಟ್ಟು ನಂತರ ಹೇಳಬಹುದು. ಇವರ ಬಗ್ಗೆಯೂ ಸಹ ನಾನು ಆಮೇಲೆ ಹೇಳುತ್ತೇನೆ. 1981ನೇ ಇಸವಿಯಲ್ಲಿ ಮಾನ್ಯ ಬೊಮ್ಮಾಯಿ ಅವರು ಚರ್ಚೆ ಪ್ರಾರಂಭ

ಮಾಡಬಹುದೆಂದು ನಾನು ಯೋಚನೆ ಮಾಡಿದ್ದೆ. ಆದರೆ ಉಪನಾಯಕರಾಗಿದ್ದ ಶ್ರೀ ಬಸವಲಿಂಗಪ್ಪನವರು ಚರ್ಚೆ ಪ್ರಾರಂಭ ಮಾಡಿದರು. ಇವರೂ ಸಹ ಸುಮಾರು ಎರಡು ದಶಕಗಳ ಕಾಲ ನಮ್ಮ ಜೊತೆಯಲ್ಲಿಯೇ ಇದ್ದವರು. ಇದರ ಜೊತೆಗೆ ಅವರೂ ನಾನು ಒಂದೆ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದೆವು. ಒಟ್ಟಿನಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತಿತ್ತು. ಏಕೆಂದರೆ It is a joint responsibility. It is the responsibility of the Party and the Cabinet.

ಅವರು ಮುನಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರ್ ಆಗಿದ್ದಾಗ ನಾನು ಮಿನಿಸ್ಟರ್ ಫಾರ್ ಇನ್‌ಫರ್‌ಮೇಷನ್ ಆಗಿದ್ದೆ. ಅವರು ರೆವಿನ್ಯೂ ಮಂತ್ರಿಯಾಗಿದ್ದಾಗ ನಾನು ಟ್ರಾನ್ಸ್‌ಪೋರ್ಟ್ ಮಂತ್ರಿಯಾಗಿದ್ದೆ. ಎಲ್ಲ ಒಂದೇ ಕಡೆ ಕುಳಿತುಕೊಂಡು ಡಿಸ್‌ಕಸ್ ಮಾಡಿ ಒಟ್ಟಾಗಿ ಇನಿಷಿಯೇಟ್ ಹೇಗೆ ಮಾಡಲು ಸಾಧ್ಯ. ಗುಂಡೂರಾಯರ ಮೇಲೆ ಮಾಡುವುದಕ್ಕೆ ಆಗುವುದಿಲ್ಲ, ಮಾಡುತ್ತೇವೆಂದು ಹೇಳಬಹುದು. ಆದರೆ ಹೇಗೆ ಮಾಡುತ್ತಾರೆ ಎಂದು ಕೇಳುತ್ತೇನೆ? ಮುಂದೆ ಮಾಡಬಹುದು, ಅದು ಈಗ ಬೇಕಾಗಿಲ್ಲ.

ಶ್ರೀ ಜೆ.ಎಚ್. ಪಟೇಲ್ - ಇನಿಷಿಯೇಟ್ ಮಾಡಲಿಲ್ಲ. ನೆಗೋಷಿಯೇಟ್ ಮಾಡಿದರು.

ಶ್ರೀ ಆರ್. ಗುಂಡೂರಾವ್ - ನೂರಕ್ಕೆ ನೂರು ಕರೆಕ್ಟ್. ತಾವು ಹೇಳಿದರಲ್ಲ, ನೆಗೋಸಿಯೇಷನ್ ಎಂದು, ಇನ್ನೊಬ್ಬರನ್ನು ತಯಾರು ಮಾಡಬೇಕೆಂದು ಹೇಳಿ ನೆಗೋಸಿಯೇಷನ್ ಮಾಡುತ್ತಿರುವಿರಿ.

ನಾವು ಯಾವುದೇ ಪಕ್ಷದಲ್ಲಿ ಕೆಲಸ ಮಾಡಬೇಕಾದರೂ ಅದರಲ್ಲಿ ಅಂಗರಚನೆ ಇರುತ್ತದೆ. ಅದರಲ್ಲಿ ಜನರಲ್ ಸೆಕ್ರೆಟರಿ ಇರುತ್ತಾರೆ. ಅದನ್ನು ನಾಟಕ ಕಂಪನಿಗೆ ಹೋಲಿಸಿದ್ದಾರೆ. ನಾನು ದೇವೇಗೌಡರ ಕ್ಷೇತ್ರವಾದ ಹೊಳೆನರಸೀಪುರದಲ್ಲಿ ಈ ಮಾತನ್ನು ಹೇಳಿದ್ದೇನೆ. ಗುಬ್ಬಿ ವೀರಣ್ಣನವರ ನಾಟಕ ಕಂಪನಿ ಇತ್ತು. ಅದರಲ್ಲಿ ಅಂದರೆ ನಾಟಕ ಕಂಪನಿಗಳಲ್ಲಿ ಕೆಲವರು ಕೆಲವು ಪಾತ್ರಗಳನ್ನು ಕಟ್ಟುತ್ತಾರೆ. ರಾವಣನ ಪಾತ್ರ ಮಾಡಬಹುದು, ರಾಮನ ಪಾತ್ರ ಮಾಡಬಹುದು, ಪಾರ್ಟ್ ಕಟ್ಟಿದಾಕ್ಷಣ ರಾವಣನ ಪಾತ್ರಕ್ಕೆ ಏನು ನಟನೆ ಮಾಡಬೇಕೋ ಅದನ್ನು ಮಾಡುತ್ತಾನೆ. ಅದೇರೀತಿ ರಾಮನ ಪಾತ್ರಕ್ಕೆ ಏನು ನಟನೆ ಮಾಡಬೇಕೋ ಅದನ್ನು ಮಾಡುತ್ತಾನೆ. ಬಣ್ಣ ತೊಳೆದುಕೊಂಡ ಮೇಲೆ ರಾಮನೂ ಇಲ್ಲ, ರಾವಣನೂ ಇಲ್ಲ. ಅದೇ ರಾಮಣ್ಣ, ಬೋಜಪ್ಪ, "ಇಂದಿರಾಗಾಂಧಿ ಕೃಪಾ ಪೋಷಿತ ನಾಟಕ ಮಂಡಳಿ" ಎಂದು ಹೇಳಿದ್ದನ್ನು ಹೇಳುತ್ತಲೇ ಇರುತ್ತಾರೆ. ಯಾರೇ ಆಗಲಿ ಅವರ ಪಕ್ಷದ ನಿಯಮಗಳ ಪ್ರಕಾರ ನಡೆದುಕೊಳ್ಳಬೇಕಾಗುತ್ತದೆ. It is a party system/ Otherwise I have no place in the party.

Sri Bangarappa has not resigned from the party because of firing that has taken place, in Nargunda and Navalgunda. He has not resigned because of non-implementation of socio-economic policies announced by the Government.

Even when I was Minister I did oppose certain decisions in the Devaraj Urs Cabinet. Today Sri Urs is not with us. Prior to his death he was the Leader of the Opposition. Though he was in that place I had great respect for him. The whole country knows the gesture shown to Sri Urs of his death. So many Leaders of Opposition, eminent men in political field have written letters to me appreciating my gesture. I am not proud of it. I jsut said about it. I have only done my duty because of close friendship I had with late Sri Devaraj Urs. On the other hand I had the courage to argue with Sri Urs also. At one time I told him as long as you are with Smt. Indira Gandhi I will be with you and the moment you part with our Leader Smt Gandhi I will not stay in your Ministry. If you so feel you can dismiss from the Cabinet. I made my stand very clear to him. Even then I was not sent back. In fact I was very well placed I was the minister for Transport. I was the Minister for Tourism, was the Chairman of the KSRTC. I was given all the facilities, was denied nothing. Whereas Sri S. Bangarappa became the President of the KPCC (I) in the list announced by our High Command. That was the first announcement made, in which my name was not there. ಇವರಿಗೂ ಏನೋ ಅಧ್ಯಕ್ಷರನ್ನು ಮಾಡಿದರು ಅಂತಲೋ, ಅಥವಾ ಕಾರ್ಯದರ್ಶಿ ಮಾಡಿದರು ಅಂತಲೋ ಪಾರ್ಟಿ ಬಿಟ್ಟು ಹೋದರು ಎಂದು ನಾವೂ ಹೇಳಬಹುದಿತ್ತಲ್ಲವೆ? ......

When I went to KGF to attend function - Sri Arumugham knows where I was at that time and when I was coming back to Bangalore I came to know that Sri Bangarappa has been appointed to KPCC(I) and he was made adhoc President. Do you know who were all the Members?, about 5 to 7 members were in that

adhoc Committee - no doubt I would have become the leader, but look at the sequence, Sri Bangarappa was made President of KPCC(I) Party because he left the Devaraj Urs. Ministry. When in my case I was not even a member of the KPCC adhoc Committee.

SRI S.R. BOMMAI - You knew that you would become the Chief Minister.

SRI R. GUNDU RAO - It is not like that. It is ony an accident, I never claimed it. I never knew that. People who are thinking of becoming Chief Minsiters might have gone to Delhi and other places..... But so far as I am concerned I never knew that. ಈ ರಾಜ್ಯದಲ್ಲಿ ಮುಖ್ಯ ಮಂತ್ರಿಯಾಗಬೇಕಾದರೆ ಹಿಂದೆ ಒಂದು ತತ್ವ ಇತ್ತು. ಅವರು ಬಹುಮತ ಕೋಮಿಗೆ ಸೇರಿದವರಾಗಿರುತ್ತಿದ್ದರು. ಹಿಂದೆ ಒಂದೇ ಜಾತಿಗೆ ಸೇರಿದವರು ಮುಖ್ಯ ಮಂತ್ರಿಯಾಗಿದ್ದರು. ಅದೂ ನಡೆದು ಹೋಯಿತು. During the time of Nijalingappa's Ministry a no confidence motion was brought and the whole leadership of the party decided to elect Sri Talekere Subramaniam as the Chief Minsiter of the State who was holding the Miunicipal Administration Department. But majority of the members said 'No' and further said if a non-lingayath were to become the Chief Minister let Nijalingappa be continued as Chief Minister. That was the argument placed at that time. It was told by no less a person then Sri B.D. Jatti. I am not boasting. The whole country knows, the whole State knows about that affair. Those were the days. 1971-72 ರಲ್ಲಿ ಸಾಮಾಜಿಕ ಬದಲಾವಣೆ ಆಯಿತು. ನಾನು ಹೇಳುವುದರಲ್ಲಿ ತಪ್ಪಿಲ್ಲ. ಇಲ್ಲಿ ಮಾನ್ಯ ರಾಜ್ಯಪಾಲರ ಮನೆಯಲ್ಲಿ ತೀರ್ಮಾನವಾಯಿತು. ಆಗ ನಾನು ಮುಖ್ಯಮಂತ್ರಿಯಾಗಬೇಕೆಂದು ಆಸೆಯನ್ನು ಇಟ್ಟುಕೊಂಡವನಲ್ಲ, ನಾನು ಲೀಡರ್ ಆಫ್ ದಿ ಹೌಸ್ ಆಗಬೇಕೆಂದು ಹೇಳಿದಾಗ,, ಮಾನ್ಯ ಬಂಗಾರಪ್ಪನವರು, ಮಾನ್ಯ ವೀರಪ್ಪ ಮೊಯ್ಲಿಯವರು, ಅದು ಆಗುವುದಿಲ್ಲವೆಂದು ಹೇಳಿದರು. ಬ್ರಾಹ್ಮಣರನ್ನು ಲೀಡರ್ ಆಗಿ ಮಾಡಿದರೆ ಯಾರೂ ಒಪ್ಪುವುದಿಲ್ಲ. ಆದರೆ ನಾನು ಆಗಬೇಕು ಇಲ್ಲದಿದ್ದರೆ, ನೀವು ಆಗಬೇಕೆಂದು ಏನೇನೋ ಮಾತನಾಡಿಕೊಂಡರು. ಆಗ ನನಗೆ ಜಾಂಡಿಸ್ ಕಾಯಿಲೆ ಕೂಡ ಆಗಿತ್ತು....

ಶ್ರೀ **ಎಸ್. ಬಂಗಾರಪ್ಪ** - ನಿಮ್ಮನ್ನು ಲೀಡರ್ ಆಗಿ ಮಾಡಿಕೊಂಡಾಗ, ಬರಬಹುದಾಗಿದ್ದ ಎಂ.ಎಲ್.ಎ. ಗಳೂ ಮತ್ತೆ ವಾಪಸ್ಸು ಹೋದರು. ನಿಮ್ಮನ್ನು ಕಟ್ಟಿಕೊಂಡು ಅನುಭವಿಸ ಬಾರದ ಕಷ್ಟಗಳನ್ನೆಲ್ಲಾ ಅನುಭವಿಸಿದೆ.

ಶ್ರೀ **ಆರ್. ಗುಂಡೂರಾವ್**.- ಮಾನ್ಯ ಮೊಯ್ಲಿಯವರು ನಮ್ಮ ಸ್ನೇಹಿತರು. ಅವರು ಬೇಡ. ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಹೇಳಿದರೆ ತಾವು ಬಹುಶಃ ಒಪ್ಪಿಕೊಳ್ಳುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ನಾನು ಯಾವುದನ್ನೂ ಹೇಳಿದವನಲ್ಲ. ಆದರೆ ಅವರ ಮನಸ್ಸಿನಲ್ಲಿ ಏನು ಭಯ ಇತ್ತು ಎಂದರೆ ಈ ದೇಶದಲ್ಲಿ ಪಾರ್ಟಿ ಬೆಳೆಯುತ್ತಿದೆ. ಇಬ್ರಾಹಿಂರವರನ್ನು ಲೀಡರ್ ಆಗಿ ಮಾಡಿಕೊಂಡರೆ ನಮಗೆ ಪುನಃ ದೇವರಾಜ ಅರಸ್‌ರೇ ಬೇಕೆಂದು ಜನರು ವಾಪಸ್ಸು ಹೋದರೆ ಆಗ ಪಾರ್ಟಿಯ ಗತಿ ಏನು ಎಂಬುದು ಅವರ ಮನಸ್ಸಿನಲ್ಲಿದ್ದಂಥ ಭಾವನೆ. ಮೊದಲು ನಾವು 6 ಜನ ಇದ್ದೆವು. ನಾವು ಅಲ್ಲಿ ಕುಳಿತುಕೊಂಡು ಕೆಲಸಮಾಡುವಾಗ ಅವರು ನನ್ನನ್ನು ಲೀಡರ್ ಆಗಿ ಮಾಡಿಕೊಂಡಿರಲಿಲ್ಲ.......

ಶ್ರೀ **ಹೆಚ್. ಗಂಗಾಧರನ್**.- ಸ್ವಾಮಿ, 9ನೇ ನಂಬರ್ ಅದೃಷ್ಟದ ನಂಬರ್ ಅಂತ ತಾವೇ ಒಮ್ಮೆ ಹೇಳಿದ್ದೀರಿ.

ಶ್ರೀ **ಆರ್. ಗುಂಡೂರಾವ್**.- ಮಾನ್ಯ ಬಂಗಾರಪ್ಪನವರೂ, ಮಾನ್ಯ ವೀರಪ್ಪ ಮೊಯ್ಲಿಯವರೂ ಒಟ್ಟಿಗೇ ಕೂತು ಈಗ ನಾವು ಏನು ಮಾಡೋಣವೆಂದು ಮಾತನಾಡುತ್ತಾ ಇರುವಾಗ ಅವರು ಸೀನಿಯರ್ ಆಗಿದ್ದಾರೆ ಅವರನ್ನೇ ಮಾಡೋಣರೆಂದು ಯೋಚನೆ ಮಾಡಿದ್ದಾಯಿತು. ಮಂತ್ರಿಮಂಡಲದಿಂದ ನಾವು ಇಬ್ಬರು ಡಿಸ್‌ಮಿಸ್ ಆಗಿದ್ದೆವು. ಅವರು ಮಧ್ಯ ರಾತ್ರಿಯಲ್ಲಿ ಡಿಸ್‌ಮಿಸ್ ಆಗಿದ್ದರೆ, ಬಹುಶಃ ನಾನು 11-30- ಅಥವಾ 12 ಗಂಟೆ ಸಮಯದಲ್ಲಿ ಡಿಸ್‌ಮಿಸ್ ಆದೆ. ಪೋಲೀಸ್‌ನವನ ಕೈಯಲ್ಲಿ ಮಾನ್ಯ ರಾಜ್ಯಪಾಲರು ಒಂದು ಲೆಟರನ್ನು ನನ್ನ ಮನೆಯ ಹತ್ತಿರಕ್ಕೆ ಕಳುಹಿಸಿ ಕೊಟ್ಟರು. ಅವರಿಗೆ ಏನು ಒಕ್ಕಣೆಯನ್ನು ಕಾಗದದಲ್ಲಿ ಬರೆದಿದ್ದರೋ ಅದೇ ಒಕ್ಕಣೆಯನ್ನೇ ನನಗೆ ಬರೆದಿದ್ದರು. ಅವರು ನನ್ನ ರಾಜೀನಾಮೆಯನ್ನು ಕೇಳಿದ್ದರು. ನಮ್ಮ ಕಾಂಗ್ರೆಸ್ ತತ್ವದ ಪ್ರಕಾರ ನಾವು ನಿಮಗೆ ರಾಜೀನಾಮೆಯನ್ನು ಕೊಡಬೇಕಾಗಿಲ್ಲ. ನಮಗೆ ದೆಹಲಿಯಿಂದ ಆದೇಶ ಬರಬೇಕು ಅಲ್ಲಿಂದ ಬಂದರೆ ನಾನು ಕೊಡುತ್ತೇನೆಂದು ಹೇಳಿದೆ. ಆಗ ನಿಮ್ಮನ್ನು ಡಿಸ್‌ಮಿಸ್ ಮಾಡಿದ್ದೇವೆಂದು ನನಗೆ ಕಾಗದ ಬಂತು.

ನಾನು ಹೇಳುತ್ತೇನೆ. ಅಧ್ಯಕ್ಷರೇ ಅವರು ನನಗೂ ಸಹ ಯಾವುದಾದರೂ ಒಂದು ಸ್ಥಾನ ಕೊಡಬೇಕಲ್ಲಾ. ಏನಾದರೂ ಕೊಡದೇ ಹೋದರೆ ನನಗೂ ಕಷ್ಟವಾಗುತ್ತದೆ. ನಾವೇನೂ ಬೇರೆ ಹೇಳಬೇಕಾಗಿಲ್ಲ. ಆಮೇಲೆ ಶ್ರೀ ವೀರಪ್ಪಮೊಯ್ಲಿರವರಿಗೆ ಜನರಲ್ ಸೆಕ್ರೆಟರಿ ಪೋಸ್ಟ್ ಕೊಟ್ಟರು ಆಮೇಲೆ ತಾವು ಒಪ್ಪಿಕೊಂಡಿರಿ. I must pay compliments to them. They have agreed and they made me the leader of opposition.

ಅಧ್ಯಕ್ಷರೇ ನಾನು ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ನಮ್ಮ ಸಿಸ್ಟಂ ಆಫ್ ದಿ ಪಾರ್ಟಿ ಈ ರೀತಿ ಬೆಳೆದುಕೊಂಡು ಬಂದಿರುವುದರಿಂದ ಹೇಳುತ್ತಾ ಇದ್ದೇನೆ. ಇದನ್ನು ಯಾರು ಟೀಕೆ ಮಾಡಬೇಕು ಅನ್ನುವುದು ತಮಗೆ ಗೊತ್ತಿದೆ. ನಮ್ಮ ಜೊತೆಯಲ್ಲಿ ಸಹಪಾಠಿಗಳಾಗಿದ್ದು ಸಡನ್ ಆಗಿ ನಮ್ಮನ್ನು ಬಿಟ್ಟು ಹೋಗಿ ಮಾರನೇ ದಿವಸವೇ ಈ ದೇಶದಲ್ಲಿ ಇದರಿಂದ ಹಾಗಾಗಿದೆ ಹೀಗಾಗಿದೆ ಎಂದರೆ ದೇಶದ ಜನ ಇದನ್ನು ಯಾವ ರೀತಿಯಿಂದಲಾದರೂ ಕೂಡ ಒಪ್ಪಲಿಕ್ಕೆ ಸಾಧ್ಯವೇ? ಸಾಧ್ಯವಿಲ್ಲ ಎಂದು ಹೇಳುತ್ತೇನೆ. ನಾವು ಇಂದಿರಾಗಾಂಧಿಯವರ ಪಕ್ಷದಲ್ಲಿ ಇದ್ದೇವೆ. ಆ ಪಕ್ಷದಿಂದಲೇ ನಾನು ಮುಖ್ಯಮಂತ್ರಿಯಾಗಿದ್ದೇನೆ, ಶ್ರೀ ವೀರಪ್ಪ ಮೋಯ್ಲಿರವರು ಹಣಕಾಸಿನ ಮಂತ್ರಿಯಾಗಿದ್ದಾರೆ. ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ನಾವು ಇದ್ದೇವೆ. ತಾವೆಲ್ಲಾ ಅವೋತ್ತಿನ ದಿವಸ ಪತ್ರಿಕೆಯಲ್ಲಿ ನೋಡಿರಬಹುದು. ನಾನಾ ರೀತಿಯಲ್ಲಿ ನನ್ನ ಬಗ್ಗೆ ಅಭಿಪ್ರಾಯ ಬಂದಿರುವುದು. ಏನೇನು ಬರುತ್ತಿತ್ತು ಎಂದರೆ ಗುಂಡೂರಾಯರು ಮುಖ್ಯಮಂತ್ರಿಗಳಾಗಿ 3-4 ತಿಂಗಳು ಇರಬಹುದು ಅಷ್ಟೆ, ಇನ್ನು ಕೆಲವರು 6 ತಿಂಗಳು ಇರಬಹುದು ಅದರ ಮೇಲೆ ಇರುವುದಿಲ್ಲ ಅಂದಿದ್ದಾರೆ, ಇನ್ನು ಕೆಲವರು ಇನ್ನು ಒಂದು ತಿಂಗಳಲ್ಲೇ ಚುನಾವಣೆ ಬರುತ್ತದೆ ಅವರು ಇರುವುದಿಲ್ಲ ಅಂತ ಅಂದಿದ್ದಾರೆ, ಇನ್ನು ಕೆಲವರು It is only temporary time-gap arragnement ಅಂತ ಹೇಳಿದ್ದಾರೆ. ಈ ಟೈಂಗ್ಯಾಪ್ ಅರೇಂಜ್‌ಮೆಂಟ್ಸ್ ಸಲುವಾಗಿ ಏತಕ್ಕೆ ಮಂತ್ರಿಮಂಡಲ ಮಾಡಬೇಕಾಗಿತ್ತು ಅಂತ ಹೇಳಿದ್ದಾರೆ. ಇದೆಲ್ಲಾ ಹೇಳುವುದು ವಾಸ್ತವಿಕವಾದದ್ದೆ ಏತಕ್ಕೆಂದರೆ ನನ್ನ ಜಾಗದಲ್ಲೇ ಶ್ರೀ ಬಂಗಾರಪ್ಪನವರು ಇದ್ದಿದ್ದರೆ ಅವರೇ ಲೀಡರ್ ಆಫ್ ಅಪೋಸಿಷನ್ ಆಗಿದ್ದರೆ ಅವರೇ ಮಂತ್ರಿಮಂಡಲವನ್ನು ರಚನೆ ಮಾಡುತ್ತಿದ್ದರು. It is not unusual. The Governor has to call. When the Government fails, when the Government loses the majority, the leader of the Opposition will be called to form the Government. ಈಗ ಲಕ್ಷ್ಮೀಸಾಗರ್ ರವರು ಅಧಿಕೃತ ಹೇಗೆ ಅಪೋಸಿಷನ್ ಲೀಡರ್ ಆಗಿದ್ದಾರೋ ಹಾಗೆ ನಾನು ಆಗಿದ್ದುದರಿಂದ ನನ್ನನ್ನು ಕರೆದರು.

ಶ್ರೀ ಎಸ್.ಆರ್. ಬೊಮ್ಮಾಯಿ - ನಮಗಿಂತ ನಿಮ್ಮ ಸಂಖ್ಯೆ ಎರಡು ಜಾಸ್ತಿ ಆಗಿದ್ದುದು ನೀವು ಅಪೋಸಿಷನ್ ಲೀಡರ್ ಆದಿರಿ.

ಶ್ರೀ ಆರ್. ಗುಂಡೂರಾವ್ - ಮತ್ತೆ ಏನಾಯಿತು. ಲೋಕಸಭಾ ಚುನಾವಣೆಯಲ್ಲಿ ಮಾಡಿದಿರಿ. ಆದಾಗ ಏನು ನಡೆಯಿತು ಎಲ್ಲಾ ಗೊತ್ತಿದೆ, ಈಗ ಆ ಮಾತು ಬೇಡ. ನಾನು 1973ರಲ್ಲಿ ನಾನು ಮಂತ್ರಿಯಾಗಿದ್ದೆ. ಶ್ರೀ ಬಂಗಾರಪ್ಪನವರು ಅಪೋಸಿಷನ್ ಬೆಂಚ್‌ನಲ್ಲಿದ್ದರು. ಪಿಎಸಿ ಮೆಂಬರ್ಸ್ ಸಹ ಆಗಿದ್ದರು. ನೀವು ಮತ್ತು ಕಾಗೋಡು ತಿಮ್ಮಪ್ಪನವರು ಒಟ್ಟಿಗೆ ಇದ್ದು ಅಪೋಸಿಷನ್‌ನಲ್ಲಿದ್ದುದರಿಂದ ನಿಮ್ಮ ಅಪೋಸಿಷನ್ ಅನುಭವ ಏನು ಅನ್ನುವುದು ಗೊತ್ತಿದೆ, ನಾನು ಅಪೋಸಿಷನ್‌ನಲ್ಲಿ ಇಲ್ಲದೇ ಇದ್ದದರಿಂದ ನನಗೆ ಅನುಭವ ಗೊತ್ತಿಲ್ಲ. ನಾನು ಪಾರ್ಟಿ ಸೆಕ್ರೆಟರಿಯಾಗಿದ್ದೆ. ಅಲ್ಲಿಂದ ನೇರವಾಗಿ ಮಂತ್ರಿಯಾದೆ, ಅದರಿಂದ ನನಗೆ

ಗೊತ್ತಿಲ್ಲ. ನನಗೆ ಆ ಸಂದರ್ಭದಲ್ಲಿ ಅಪೋಸಿಷನ್ ಸ್ಥಾನ ಸಿಕ್ಕಿದಾಗ ತಮಗೆ ಹೇಳಬೇಕಾದರೆ ನನಗೆ ಅವರ ಅನುಭವ ಗೊತ್ತಿಲ್ಲದೇ, ಇದ್ದುದರಿಂದ ನಾನು ಅಪೋಸಿಷನ್ ಲೀಡರ್ ಆಗಿರುವುದರಿಂದ ಯಾವ ರೀತಿ ಮಾತನಾಡಬೇಕು ಎಂದು ಎಸ್.ಆರ್. ಬೊಮ್ಮಾಯಿನವರನ್ನು ಕೇಳಿ ತಿಳಿಮಕೊಂಡಿದ್ದೇನೆ, ಹಾಗೆ ಮಾಡಿದರೆ ತಪ್ಪೇನೂ ಇಲ್ಲ. ಏತಕ್ಕೆಂದರೆ ನನಗೆ ಏನು ಒಂದು ಭಯವಾಗುವುದು ಎಂದರೆ ಏನಾದರೂ ಮಾತನಾಡುವಾಗ ಒಂದು ಮಾತನಾಡಿದರೆ ಹೆಚ್ಚಾದರೆ ಅಥವಾ ಕಡಿಮೆಯಾದರೆ ಏನು ತಪ್ಪಾದೀತು ಅನ್ನುವ ಭಯ ಇದ್ದುದರಿಂದ ಮಾನ್ಯ ಎಸ್.ಆರ್. ಬೊಮ್ಮಾಯಿ ಅವರ ಮನೆಗೆ ಹೋಗಿ ಪ್ರತಿದಿನವೂ ಇದರ ಬಗ್ಗೆ ಚರ್ಚೆ ಮಾಡುತ್ತಿದ್ದೆ. ಅವರ ಮನೆಗೆ ಹೋದರೆ ಒಳ್ಳೆಯ ತಿಂಡಿ, ಕಾಫಿ ಕೊಡುವರು: ಕೆಲವು ಸಂದರ್ಭದಲ್ಲಿ ಬಂಗಾರಪ್ಪನವರೂ ಕೂಡ ಅಲ್ಲಿ ಇರುತ್ತಿದ್ದರು. ಅವರ ಜೊತೆಯಲ್ಲಿ ವೀರಪ್ಪ ಮೊಯ್ಲಿ ಬರುತ್ತಾ ಇದ್ದರು. ನನಗೂ ಅವರಿಗೂ ಆ ಸಂದರ್ಭದಲ್ಲಿ ಗಂಟು ಬಿತ್ತು. ನಮ್ಮ ಹಿಂದೂ ಶಾಸ್ತ್ರದ ಪ್ರಕಾರ ವಧೂವರರಿಗೆ ಯಾವ ರೀತಿ ಗಂಟು ಹಾಕುತ್ತಾರೋ ಎಲ್ಲೋ ಹೋಗಲಿ ಜೊತೆಯಲ್ಲೇ ಇರಬೇಕು ಎಂದು ಏನು ಗಂಟು ಹಾಕುತ್ತಾರೋ ಹಾಗಾಯಿತು. ಒಟ್ಟಿನಲ್ಲಿ ಮದುವೆ ಶಾಸ್ತ್ರ ಆದ ಹಾಗೆ ಆಯಿತು. ಹಾಗೆಯೇ ಸ್ಪ್ಲಿಟ್ ಆದಮೇಲೂ ಸಹ ಗಂಟು ಹಾಕುವುದಕ್ಕೆ ಶುರು ಮಾಡಿದರು ನಾನು ಸಿಕ್ಕಲಿಲ್ಲಾ.

SRI S. BANGARAPPA - I was the President and he was the General Secretary of the Party. ಆವಾಗ ನೀವು ಸೆಕ್ರೆಟರಿಯಾಗಿರಲಿಲ್ಲ. ನಮ್ಮನ್ನು ಗಂಟು ಹಾಕೋಣ ಎಂದು ಪ್ರಯತ್ನ ಮಾಡಿದಿರಿ, ನಾನು ನಿಮ್ಮ ಕೈಗೆ ಸಿಕ್ಕಲಿಲ್ಲಾ, ಅದೇ ನನ್ನ ಪುಣ್ಯ.

ಶ್ರೀ ಆರ್. ಗುಂಡೂರಾವ್ - ನೀವು ನನ್ನನ್ನು ಗಂಟು ಹಾಕಿಕೊಳ್ಳಬೇಕು, ಅಂತ ಮಾಡಿದಿರಿ ಆದರೆ ನಾನು ಸಿಕ್ಕುತ್ತಿರಲಿಲ್ಲಾ ಅಷ್ಟೆ. ನಾನು ಅದಕ್ಕೇನು ವರಿ ಮಾಡಿಕೊಳ್ಳುವುದಿಲ್ಲ. ಆದರೂ ಸಹ ಅವರನ್ನು ಗಂಟು ಹಾಕಿಕೊಂಡು 11 ತಿಂಗಳು ತಿರುಗಿಸಿದೆ. ಅದು ಬೇರೆ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ - ನಾನು ನಿಮ್ಮ ಕೈಗೆ ಸಿಕ್ಕಲಿಲ್ಲ, ನೀವು ಗಂಟು ಹಾಕಿಕೊಳ್ಳೋಣ ಅಂತ ಪ್ರಯತ್ನಿಸಿದಿರಿ, ಅದು ಆಗಲಿಲ್ಲಾ.

ಶ್ರೀ ಆರ್. ಗುಂಡೂರಾವ್ - ಒಟ್ಟಿನಲ್ಲಿ ಹೇಳುವುದಾದರೆ ಶಾಸ್ತ್ರೀಯವಾಗಿಯಾದರೂ ತಾಳಿ ಕಟ್ಟೆ ಆಯಿತಲ್ಲಾ. ಆ ಮೇಲೆ ಏನೋ ಆಯಿತು. ಡೈವರ್ಸ್ ಆಯಿತು.

ಶ್ರೀ ಎಸ್. ಬಂಗಾರಪ್ಪ - ಇದರಲ್ಲಿ ಡೈವರ್ಸ್ ಅನ್ನುವ ಪ್ರಶ್ನೆಯೇ ಬರುವುದಿಲ್ಲ. ನೀವು ಬಹಳ ಪ್ರಯತ್ನಿಸಿದಿರಿ ನಮ್ಮನ್ನು ಗಂಟು ಹಾಕಿಕೊಳ್ಳಬೇಕು ಎಂದು, ನಾನು ನಿಮ್ಮ ಕೈಗೆ ಸಿಕ್ಕುತ್ತಿರಲಿಲ್ಲಾ. ಕೊನೆಗೂ ಕೂಡ ಸಿಕ್ಕಲಿಲ್ಲ.

ಶ್ರೀ **ಆರ್. ಗುಂಡೂರಾವ್** - ಸ್ವಲ್ಪ ದಿವಸ ಸಿಕ್ಕಿದ್ದಿರಲ್ಲಾ. ಮದುವೆ ಶಾಸ್ತ್ರ ಆದ ಹಾಗೆ ಆಯಿತಲ್ಲಾ. ಇನ್ನು ಬಿಟ್ಟುಬಿಡಿ, ಮತ್ತೆ ಮತ್ತೆ ಏಕೆ ಅದನ್ನೇ ಹೇಳುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ - ಸ್ವಾಮಿ, ಬೆಳಗಿನಿಂದಲೂ ಹೀಗೆಯೇ ಆಗುತ್ತಾ ಇದೆ, ದಯವಿಟ್ಟು ಡಿಮ್ಯಾಂಡ್ ಮೇಲೆ ಹೇಳಿ ಸ್ವಾಮಿ.

ಶ್ರೀ **ಆರ್. ಗುಂಡೂರಾವ್** - ತಾವು ಹೇಳದ್ದೆಲ್ಲಾ ರಿಕಾರ್ಡ್‌ನಲ್ಲಿದೆ. ತೆಗೆದುನೋಡಿ ಗೊತ್ತಾಗುತ್ತದೆ. ತಾವು ಇದರ ಬಗ್ಗೆ 2-3 ಗಂಟೆ ಕಾಲ ಚರ್ಚೆ ಮಾಡಿದೀರಿ. It is the last budget session and that is why the Hon Speaker was also very considerate to all Members. ಅದರಲ್ಲೂ ಕೂಡ ಕರ್ನಾಟಕದ ಚರಿತ್ರೆಯಲ್ಲಿ ಬರುವ ಹಾಗೆ ಮಾಡಿದ್ದೀರಿ. ತಮಗೆ ಹೇಳಬೇಕಾದರೆ ಯಾವ ಬಡ್ಜೆಟ್ ಸೆಷನ್ ನಲ್ಲೂ ಕೂಡ ಇಷ್ಟು ದೀರ್ಘವಾಗಿ ಇಷ್ಟು ಕಾಲ ತೆಗೆದುಕೊಂಡು ಮಾತನಾಡುತ್ತಿರಲಿಲ್ಲ. ನೀವೊಬ್ಬರೇ ಪೊಲಿಟಿಕಲ್ ಪಾರ್ಟಿ ಅಂತ ತಿಳಿದುಕೊಂಡು ನಾವು ಏನೇನು ಸಾಧನೆಗಳನ್ನು ಮಾಡಿದ್ದೇವೆ ಅದರಲ್ಲಿ ಏನು ತಪ್ಪಿವೆ ಅನ್ನುವುದನ್ನು ಹಿಡಿಯುವುದಕ್ಕೆ ಹೋಗುತ್ತೀರಿ. ಈವೊತ್ತು ತಾವು ಈ ಡಿಮ್ಯಾಂಡ್ ಮೇಲೆ ಎಷ್ಟು ಬೇಕಾದರೂ ಮಾತನಾಡಿಕೊಳ್ಳಬಹುದು. ನಾಳೆ ದಿವಸ ಈ ಡಿಮ್ಯಾಂಡ್ ಬರುತ್ತದೆಯೇ, ಬರುವುದಿಲ್ಲ. ತಾವು ಈ ಬಗ್ಗೆ ಇರತಕ್ಕಂಥಾ ನಾರ್ಮ್ಸ್ ಅನ್ನೂ ಸಹ ಒಪ್ಪಿಕೊಳ್ಳಬೇಕು, ನೀವು ಇದರಲ್ಲಿ ಅನುಮಾನ ಪಟ್ಟುಕೊಂಡು ನಾವೇನೂ ಮಾಡಿಯೇ ಇಲ್ಲ, ಹೇಗಾದರೂ ಮಾಡಿ ಇವರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎನ್ನುವುದನ್ನು ಪ್ರಯತ್ನ ಮಾಡುತ್ತೀರಿ. ನಾವೂ ಸಹ ಅಷ್ಟೆ ಎಚ್ಚರಿಕೆಯಿಂದ ಇದ್ದೇವೆ, ನಾವು ಯಾವ ರೀತಿಯಾಗಿಯೂ ಇಕ್ಕಟ್ಟಿಗೆ ಸಿಕ್ಕದೇನೇ ನಿಮ್ಮನ್ನೇ ಸಿಕ್ಕಿಸಬೇಕು ಎನ್ನುವುದನ್ನು ಪ್ರಯತ್ನ ಮಾಡುತ್ತೇವೆ. ಈ ದೃಷ್ಟಿಯಿಂದ ನಾನು ಹೇಳುವುದು, ಅವೊತ್ತಿನ ದಿವಸ ನಾನು ಲೀಡರ್ ಆಗದೇ ಹೋಗಿದ್ದರೆ, ಬಂಗಾರಪ್ಪನವರೇ ಲೀಡರ್ ಆಗಿದ್ದರೆ ಅವರೇ ಚೀಫ್ ಮಿನಿಸ್ಟರ್ ಆಗುತ್ತಿದ್ದರು. ನಾವು ಫ್ರಾಂಕ್ ಆಗೇ ಮಾತನಾಡೋಣ. ಆ ದಿವಸ ನನ್ನನ್ನು ರಾಜ್ಯಪಾಲರು ಮಂತ್ರಿಮಂಡಲ ರಚನೆ ಮಾಡುವುದಕ್ಕೆ ಕರೆದರು. ನನ್ನನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕೋ ಬೇಡವೋ ಅನ್ನುವ ಪ್ರಶ್ನೆ ಬೇರೆ. ಆ ದಿವಸ ಬಂಗಾರಪ್ಪನವರು ಮತ್ತು ವೀರಪ್ಪ ಮೊಯ್ಲಿರವರು ಮಂತ್ರಿಮಂಡಲ ರಚನೆ ಮಾಡುವುದು ಬೇಡ ಅನ್ನುವ ವಾದ ಮಾಡಿದರು. ಮಂತ್ರಿ ಮಂಡಲ ರಚನೆ ಮಾಡುವುದಕ್ಕೆ ನನಗೆ ಏನು ಭಯ ಬಂದಿತ್ತು ಎಂದರೆ ಅದನ್ನು ನಾನು ಈವೊತ್ತು ಹೇಳುತ್ತೇನೆ. ರಾಜ್ಯಪಾಲರು ನನ್ನನ್ನು 10ನೇ ತಾರೀಖಿನ ಒಳಗೆ ಉತ್ತರ ಕೊಡಬೇಕೆಂದು ಪತ್ರ ಬರೆದಿದ್ದಾರೆ. ನಾನು 10ನೇ ತಾರೀಖಿನೊಳಗೆ ಮಂತ್ರಿ ಮಂಡಲ ರಚನೆ ಮಾಡುವುದಕ್ಕೆ ಉತ್ತರವನ್ನು ಕೊಡದೇ ಹೋದರೆ 11 ನೇ ತಾರೀಖು ಎಸ್.ಆರ್. ಬೊಮ್ಮಾಯಿಯವರಿಗೆ ಕಾಗದ ಬರೆಯುತ್ತಾರೆ. Because he is the leader of the largest party in the Assembly. ಆಮೇಲೆ ಇನ್ನೊಂದು ಕಾಗದ ಕಳುಹಿಸಿದರು, ನಾವು 3 ದಿವಸದೊಳಗೆ ಮಂತ್ರಿಮಂಡಲ ರಚನೆ ಮಾಡುತ್ತೀರೋ

ಇಲ್ಲವೋ ಎಂದು ಕಾಗದ ಬರೆದರು. ನಾನು ಆಲೆರ್ರೈಟ್ ಎನ್ನಬೇಕಾಯಿತು. ಏತಕ್ಕೆಂದರೆ ಇಲ್ಲವೇ ಹೋಗಿದ್ದರೆ ಎಸ್. ಆರ್. ಬೊಮ್ಮಾಯಿಯವರು ಮುಖ್ಯಮಂತ್ರಿಯಾಗುತ್ತಿದ್ದರು. ಬಹುಶಃ ಅವರು ಹೋಗಿದ್ದರೆ 4-6 ಜನ ಮಂತ್ರಿಗಳು ಅವರ ಕಡೆಯವರು ಆಗುವುದಕ್ಕೆ ಆಶೆ ಇತ್ತೋ ಏನೋ? ಕೆಲವು ಶಾಸಕರು ನಾವು ಈಗಲೇ ಏತಕ್ಕೆ ಎಲೆಕ್ಷನ್‌ಗೆ ಹೋಗಬೇಕು ಇನ್ನೂ 3 ವರ್ಷ ಇದೆಯೆಲ್ಲಾ ಎಂದು ಅವರ ಕಡೆಯವರೂ ಕೂಡ ಸುಮ್ಮನಾದರು. ಬಹುಶಃ ಬೊಮ್ಮಾಯಿಯವರು ಮುಖ್ಯ ಮಂತ್ರಿಯಾಗಿದ್ದರೆ. Only the question of the position of the party. ಈ ಸಮಸ್ಯೆ ಉದ್ಭವವಾಗುತ್ತಿತ್ತು. ಬಂಗಾರಪ್ಪನವರು ಇಲ್ಲಿ ಪಿ.ಸಿ.ಸಿ. ಅಧ್ಯಕ್ಷರಾಗಿದ್ದರು. ನಾನು ಲೀಡರ್ ಆಗಿದ್ದೆ ಅಷ್ಟೇ, ನಮ್ಮಿಬ್ಬರಿಗೂ ವ್ಯತ್ಯಾಸ.

SRI H.L. THIMMEGOWDA - Narrowly he missed the bus. ಹಾಗಾದರೆ ಎಸ್. ಆರ್. ಬೊಮ್ಮಾಯಿಯವರು ಬರಬಾರದು ಅಂತ ಹೇಳುತ್ತೀರಾ?

**ಶ್ರೀ ಆರ್. ಗುಂಡೂರಾವ್** - ಅದು ನಿಮ್ಮ ಪಾರ್ಟಿ ವಿಷಯ. ಆ ಪೋಲ್ ಹೇಗಾಯಿತೋ ಏನೋ ನನಗೆ ಗೊತ್ತಿಲ್ಲ. ಅವರು ಮಂತ್ರಿಮಂಡಲ ಮಾಡಬೇಕಾಗಿತ್ತು ಏಕೆ ಮಾಡಲಿಲ್ಲಾ ಅನ್ನುವುದನ್ನು ತಾವು ಕೇಳಿ, ಏನೋ ಆಯಿತು ನಾವು ಮಂತ್ರಿಮಂಡಲ ರಚನೆ ಮಾಡಿದೆವು. ಶ್ರೀಮಾನ್ ಎಸ್. ಬಂಗಾರಪ್ಪನವರು ಎರಡನೇ ದರ್ಜೆಯ ಮಂತ್ರಿಯಾದರು. ರೆವಿನ್ಯೂ ಮತ್ತು ಅಗ್ರಿಕಲ್‌ಚರ್ ಮಿನಿಷ್ಟರ್ ಅವರು, ಇನ್ನೊಬ್ಬರು ಫೈನಾನ್ಸ್ ಮಿನಿಸ್ಟರ್ ಆದರು. ಅವೊತ್ತಿನ ದಿವಸ ಈ ಲೀಡರ್‌ಷಿಪ್ ಅನ್ನು ಎಲ್ಲರೂ ಒಪ್ಪಿದರು, ಆವೋತ್ತಿನ ದಿವಸ ಅವರು ಮಂತ್ರಿಮಂಡಲಕ್ಕೆ ಸೇರುವುದಕ್ಕೆ ಇಷ್ಟಪಟ್ಟಿದ್ದು, ಅವರಿಗೆ ಬಿಟ್ಟ ವಿಷಯ. I do not question that propriety and the will. ಅದುವರೆಗೂ ನಮ್ಮ ಪಾರ್ಟಿಯಲ್ಲಿದ್ದರು. Since he belongs to the party, he should obey the leadership. He should accept the leadership and the High Command.

ಇಲ್ಲದೇ ಹೋದರೆ ಅವರು ನಾನು ಮಂತ್ರಿಯಾಗಿರುವುದಿಲ್ಲ ಎಂದು ಹೇಳಬೇಕಾಗಿತ್ತು I do not want to serve with Sri R. Gundu Rao. He is a heavy weight man, he has no knowledge, he has no experience you could have said this.

ಶ್ರೀ ಎಸ್. ಬಂಗಾರಪ್ಪ - ನಾನು ಮಧ್ಯ ಮಧ್ಯ ಹೇಳುವುದಕ್ಕೆ ಹೋಗುವುದಿಲ್ಲ. ಇವರು ಈ ರೀತಿಯಾಗಿ ಹೇಳುತ್ತಾ ಹೋದರೆ ವಿಷಯಗಳು ನೇರವಾಗಿ ನಮ್ಮ ಸಂಪರ್ಕಕ್ಕೆ ಬರುತ್ತವೆ. Let him have his say.

**ಶ್ರೀ ಆರ್. ಗುಂಡೂರಾವ್** - ನಾನು ಯಾವ ರೀತಿಯಲ್ಲಿ ಕೆಲಸ ಮಾಡಿದ್ದೇನೆ ಎಂದು ತಮಗೂ ಗೊತ್ತಿದೆ, ಜನತೆಗೂ ಗೊತ್ತಿದೆ, ತಾವು ಕಾಂಗ್ರೆಸ್ ಕಾರ್ಯಕರ್ತರೇ

ಲಾಲ್‌ಬಾಗಿನ ಸಭೆ ಹೆಚ್ಚಾಗಿ ಬಂದಿದ್ದರು ಎಂದು ಹೇಳಿದ್ದೀರಿ, ಸಂತೋಷ. ತಮ್ಮ ಭಾಷಣದಲ್ಲಿ ಲಾಲ್‌ಬಾಗಿನ ತಮ್ಮ ಸಭೆಗೆ ಪರ್ಮಿಷನ್ ಕೊಡುವುದರ ಬಗ್ಗೆಯೂ ತಾವು ಪ್ರಸ್ತಾಪ ಮಾಡಿದ್ದೀರಿ. ಅದು ಸ್ವಲ್ಪ ಅನುಮಾನದಲ್ಲಿತ್ತು ಎನ್ನುವ ಮಾತನ್ನು ಹೇಳಿದ್ದೀರಿ. ನನ್ನ ಸ್ವಭಾವ ತಮಗೆ ಗೊತ್ತಿದೆ. ನಾನು ಅಂತ ಕೆಲಸವನ್ನು ಎಂದೂ ಮಾಡುವುದಿಲ್ಲ. ಬಿ.ಜೆ.ಪಿ. ಯವರು ಕೇಳಿದರೆ ಇದಕ್ಕೆ ಪರ್ಮಿಷನ್ ಕೊಡುತ್ತೇವೆ. ಯಾವ ಪಕ್ಷದವರು ಕೇಳಿದರೂ ಕೊಡುತ್ತೇವೆ. ಯಾರೋ ನಿಮಗೆ ತಪ್ಪು ರೀತಿಯಲ್ಲಿ ಹೇಳಿರಬಹುದು. ನೀವು ಅದನ್ನು ನಂಬಬಾರದು. You know my nature. I will never do that. the moment the application came to my knowledge I said give it to him. After all, we have to live in the party system.

SRI S. BANGARAPPA - I thank you for that

ಶ್ರೀ ಆರ್. **ಗುಂಡೂರಾವ್** - ಬಿ.ಜೆ.ಪಿ. ಯವರು ಸಭೆಯನ್ನು ಮಾಡುತ್ತೇವೆಂದು ಕೇಳಿದರೆ ನಾವು ಪರ್ಮಿಷನ್ ಕೊಡಲಿಲ್ಲವೇ? ಮಾನ್ಯ ಕಕ್ಕಿಲ್ಲಾಯ ಅವರು ಕೇಳಿದರೂ ಕೊಡುತ್ತೇವೆ.

ಶ್ರೀ ಬಿ. ಮೈಕೇಲ್ ಫರ್ನಾಂಡೀಸ್ - ಗ್ಲಾಸ್ ಹೌಸ್ ಕೊಡುವುದರ ಜೊತೆಯಲ್ಲಿ ತಾವು ಸ್ವಲ್ಪ ಹಣವನ್ನು ಕೊಟ್ಟರೆ ಒಳ್ಳೆಯದು.

ಶ್ರೀ ಆರ್. **ಗುಂಡೂರಾವ್** - ಹಣ ನಿಮಗಿಂತ ನಮಗೆ ಜಾಸ್ತಿ ಸಿಕ್ಕುತ್ತದೆ.In this country people are not so unkind. ರೂಲಿಂಗ್ ಪಾರ್ಟಿಯವರು ಎಂದರೆ ಜನರು ಸ್ವಲ್ಪ ಜಾಸ್ತಿ ಹಣ ಕೊಡುತ್ತಾರೆ. Let us accept that principle. ಹಣ ಇಲ್ಲದೆ ಯಾರೂ ಸಭೆಗಳನ್ನು ನಡೆಸುವುದಕ್ಕಾಗುವುದಿಲ್ಲ. ಇದು ಸಹ ತಮಗೆ ಗೊತ್ತಿರತಕ್ಕ ವಿಷಯವೇ. ಇದನ್ನು ನಾನು ಹೆಚ್ಚಾಗಿ ಹೇಳಬೇಕಾಗಿಲ್ಲ. 79ರಲ್ಲಿ ನಾವು ಅಧಿಕಾರವನ್ನು ಕಳೆದುಕೊಂಡಾಗ ಎಷ್ಟು ಕಷ್ಟಪಟ್ಟಿದ್ದೇವೆಂದು ನಾನು ಹೇಳುವುದಿಲ್ಲ. ಮಾನ್ಯ ದೇವರಾಜ ಅರಸ್ ಅವರು ಕನ್‌ವೆನ್‌ಷನ್ ಮಾಡಿದರು. ಆದರೆ ಇದು ಡಿಗ್ರಿಯಲ್ಲಿ ಸ್ವಲ್ಪ ವ್ಯತ್ಯಾಸ ಇರಬಹುದು ಅಷ್ಟೆ. ಅವರು ಮಾಡಿದಂಥ ಸಮಯದಲ್ಲಿ ಏರ್ ಪೋರ್ಟ್‌ನಿಂದ ಮಹಾತ್ಮಗಾಂಧಿ ಸರ್ಕಲ್‌ವರೆಗೆ, ರಿಚ್‌ಮೆಂಡ್ ಸರ್ಕಲ್, ಟ್ರಿನಿಟಿ ಚರ್ಚ್ ಎಲ್ಲಾ ಸರ್ಕಲ್ ಗಳಲ್ಲಿಯೂ ಮಾಡಿದಂಥ ಡೆಕೋರೇಷನ್ ನೋಡಿದರೆ ತಾವು ಆಶ್ಚರ್ಯಪಡುತ್ತಿದ್ದಿರಿ. ಇದಕ್ಕೆ ನಮ್ಮ ಹಾಜಿ ಅಬ್ದುಲ್ ಸತ್ತಾರ್ ಸೇಟ್ ಅವರು, ಮಾನ್ಯ ಶ್ರೀಕಂಠಯ್ಯನವರು ಇನ್‌ಚಾರ್ಜ್ ಇದ್ದರು. ಆಗ ಬೆಂಗಳೂರು ಸಿಟಿಯೇ ಒಂದು ರೀತಿಯಲ್ಲಿ ಕಲರ್‌ಫುಲ್ ಆಗಿ ಕಾಣುತ್ತಿತ್ತು. ಇಡೀ ನಗರ ಒಂದು ಹಬ್ಬವನ್ನು ಆಚರಿಸಿದಂತೆ ಕಾಣುತ್ತಿತ್ತು. ಕಲರ್‌ಫುಲ್ ಲೈಟ್ಸ್‌ನ್ನು ಎಲ್ಲಾ ಬೀದಿಗಳಲ್ಲಿ ಹಾಕಲಾಗಿತ್ತು. ಈ ತರಹದಲ್ಲಿ ಇದೆಲ್ಲಾ ನಡೆಯುತ್ತದೆ. ತಾವು ತಮ್ಮ ಭಾಷಣದಲ್ಲಿ ತಮ್ಮ ಸಭೆಗೆ ಕಾಂಗ್ರೆಸ್ ಕಾರ್ಯಕರ್ತರೇ ಜಾಸ್ತಿಯಾಗಿ ಬಂದಿದ್ದರು

ಎಂದು ಹೇಳಿದ್ದೀರಿ. ಬಹಳ ಸಂತೋಷ. ನಾನು ಇಲ್ಲಿ ಎಲ್ಲಾ ವಿಚಾರಗಳನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಹೇಳುತ್ತೇನೆ. ನನಗೆ ಇದಕ್ಕಿಂತ ಹೆಚ್ಚಿನ ಅಧಿಕಾರ ಏನು ಕೊಡುವುದಕ್ಕಾಗುತ್ತದೆ ನಾನು ಮುಖ್ಯಮಂತ್ರಿ ಪದವಿಯನ್ನು ಚೆನ್ನಾಗಿ ಅನುಭವಿಸಿದ್ದೇನೆ.I enjoyed the Chief ministersip for $2^{1}/_{2}$ years. I may complete 3 years. Afterwords, it is left to the majority party or whoever, it comes to power ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದರಲ್ಲಿ ಯಾವುದೇ ರೀತಿಯ ಭಾವನೆಯನ್ನು ವ್ಯಕ್ತ ಮಾಡುವುದಕ್ಕೆ ನಾನು ಅವಕಾಶ ಕೊಟ್ಟಿಲ್ಲ. ನಾಳೆಯೂ ಕೊಡುವುದಿಲ್ಲ. ಮಂತ್ರಿಮಂಡಲ ರಚನೆಯಾಯಿತು, ಇವರು ಮಂತ್ರಿಗಳಾದರು, ಮಂತ್ರಿಗಳಾಗಿ ನಮಗೆ ಪೂರ್ತಿಯಾದ ಸಹಕಾರವನ್ನು ಕೊಟ್ಟರು. Let me be very frank, as long as he was within the Ministry he was always giving me the fullest co-operation in the Cabinet ಕೆಲವು ವಿಚಾರಗಳಲ್ಲಿ ನಮಗೂ ಅವರಿಗೂ ಭಿನ್ನಾಭಿಪ್ರಾಯ ಬರುತ್ತಿತ್ತು, ಅದು ರಾಜಕೀಯದಲ್ಲಿ ಸ್ವಾಭಾವಿಕ. Utimately it is a decision of the leader. Too many people cannot take a decision. It is ultimately one person who has to take decision. ಎಲ್ಲಾ ಕಡೆಗಳಲ್ಲಿಯೂ ಇದು ಹೀಗೆ ಆಗುವುದು, ಆದ್ದರಿಂದ ಅವರು ಕೇವಲ 11 ತಿಂಗಳು ನಮ್ಮ ಜೊತೆಯಲ್ಲಿ ಮಂತ್ರಿಗಳಾಗಿದ್ದರು, ನಮಗೂ ಅವರಿಗೂ ಭಿನ್ನಾಭಿಪ್ರಾಯ ಬಂತು, ಅವರು ಮಂತ್ರಿಮಂಡಲ ಬಿಟ್ಟು ಹೋದರು. ಅವರು ಎಲ್ಲಿಯವರೆಗೆ ಇಂದಿರಾಗಾಂಧಿಯವರಲ್ಲಿ ವಿಶ್ವಾಸವಿಟ್ಟಿದ್ದರು ಅಲ್ಲಿಯವರೆಗೆ ನಮ್ಮ ಜೊತೆಯಲ್ಲಿದ್ದರು.

ಮಾನ್ಯ ವಿರೋಧಪಕ್ಷದ ಸದಸ್ಯರಿಂದ ನಾನು ಬಹಳ ನಿರೀಕ್ಷಣೆ ಮಾಡಿದ್ದೆ. ಆದರೆ ನನಗೆ ಬಹಳ ನಿರಾಸೆಯಾಯಿತು. ಏಕೆಂದರೆ, 1980ರಲ್ಲಿ ನಾವು ಯಾವರೀತಿಯ ಚರ್ಚೆಯನ್ನು ಮಾಡಿದ್ದೆವೋ ಅದೇ ರೀತಿಯಲ್ಲಿ ಮಾನ್ಯ ಸದಸ್ಯರುಗಳು ಚರ್ಚೆ ಮಾಡಿದರು ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಮಾನ್ಯ ಸದಸ್ಯರಾದ ಬೊಮ್ಮಾಯಿಯವರು ಕೆಲವು ಸ್ಟ್ಯಾಟಿಸ್ಟಿಕ್ಸ್ ಗಳನ್ನು ಕೊಟ್ಟರು. ಅದರ ಬಗ್ಗೆ ನಾನು ನಂತರ ಹೇಳುತ್ತೇನೆ. ಮಾನ್ಯ ದೇವೇಗೌಡರು, 1967ನೇ ಇಸವಿಯಿಂದ ಹೇಳುವುದಾದರೆ, ಇವರು ಕಾವೇರಿಯ ಬಗ್ಗೆ ಮಾತನಾಡಿದರು. 72ರಲ್ಲಿಯೂ ಇದನ್ನೇ ಮಾತನಾಡಿದರು. 76ರಲ್ಲಿಯೂ ಇದನ್ನೇ ಮಾತನಾಡಿದರು. 80-82ರಲ್ಲಿಯೂ ಇವರು ಕಾವೇರಿಯ ಬಗ್ಗೆಯೇ ಮಾತನಾಡಿದ್ದಾರೆ. ನಾನು ಬಹಳ ಯೋಚನೆ ಮಾಡಿದ್ದೆ. ಇವರು ಹೊಸ ಸಲಹೆಗಳನ್ನು ಏನಾದರೂ ಕೊಡುತ್ತಾರೆಯೇ ಎಂದು. ಅಲ್ಲಿ ಗುಂಡು ಹೊಡೆದರು, ನರಗುಂದದಲ್ಲಿ ಗುಂಡು ಹೊಡೆದರು. ಕೆ.ಜಿ.ಎಫ್ ನಲ್ಲಿ ಹೊಡೆದರು ಎಂದು ಹೇಳಿದರು. ಇದರ ಬಗ್ಗೆ ಮಾನ್ಯ ಸದಸ್ಯರು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು. ಅದಕ್ಕೂ ಉತ್ತರ ಕೊಟ್ಟಿದ್ದೂ ಆಯಿತು. You have to give clear picture of both sides.

ಇನ್ನು, ಚಾರ್ಜಸ್ ಆಫ್ Corruption is there. What is the yardstick for all these things? When corruption was not there, was there a year in which the asembly never discussed about this corruption right from 1956? I have got the Assembly proceedings about what Sri. Shivappa said when he was the leader of the opposition.

**ಶ್ರೀ ಎಸ್. ಆರ್. ಬೊಮ್ಮಾಯಿ** - ನಾನು ನಿಜಲಿಂಗಪ್ಪನವರ ಕಾಲದಲ್ಲಿಯೂ ಹೇಳಿದ್ದೇನೆ.

**ಶ್ರೀ ಆರ್. ಗುಂಡೂರಾವ್** - ಯಾವುದೇ ಸರ್ಕಾರ ಬರಲಿ, ವಿರೋಧಪಕ್ಷದವರು ಬರೀ ಚಾರ್ಜಸ್ ಮಾಡುವುದೇ ಕೆಲಸವಾಗಿದೆ. ಯಾರು ತಪ್ಪು ಮಾಡುತ್ತಿದ್ದಾರೆಂದು ಹುಡುಕುವುದು ಆಗಿದೆ. ಮಾನ್ಯ ಸದಸ್ಯರು ತಮ್ಮ ಆತ್ಮವನ್ನು ಮುಟ್ಟಿಕೊಂಡು ಹೇಳಬೇಕು, ಯಾರ ಮೇಲೆ ಚಾರ್ಜಸ್ ಆಗಿಲ್ಲ? ಮಾನ್ಯ ಶಿವಪ್ಪನವರು ವಿರೋಧಪಕ್ಷದಲ್ಲಿದ್ದಾಗ 84 ಚಾರ್ಜಸ್ ಮಾಡಿದ್ದರು. ಶರಾವತಿ ಪ್ರಕರಣ, ರಾಮಯ್ಯ, ತಳಕಳಲೆ ಪ್ರಕರಣ, ಎಂ.ಐ.ಸಿ.ಬಿ. ಕಂಟ್ರಾಕ್ಟರ್ಸ್ ಪ್ರಕರಣ. ಇಂಡಿಯನ್ ಎಕ್ಸ್‌ಪ್ರೆಸ್ ಜಾಗ ಕೊಟ್ಟ ಪ್ರಕರಣ. ಈ ರೀತಿಯಾಗಿ ಎಲ್ಲಾ ಚಾರ್ಜಸ್‌ಗಳನ್ನು ಮಾಡಿ ಅವರು ಹೊರಟು ಹೋದರು. ಅನುಸರಿಸಿ ಹೋಗೋಣ ಎಂದರೆ ಹೋಗೋಣ. That is my point. There is nothing. ವಿರೋಧ ಪಕ್ಷಕ್ಕೆ ನಾವು ಬಂದಿರುವುದೇ ಟೀಕೆ ಮಾಡುವುದಕ್ಕೆ, ಆಡಳಿತ ಪಕ್ಷದಲ್ಲಿ ನೀವು ಇರುವುದೇ ನಾವು ಟೀಕೆ ಮಾಡಿದ್ದನ್ನೆಲ್ಲಾ ತಳ್ಳಿ ಹಾಕುವುದಕ್ಕೆ ಎಂದರೆ -ಆಗಲಿ; ಅದರಿಂದ ಜನತೆಗೆ ಒಳ್ಳೆಯದು ಆಗುತ್ತದೆಯೇ?

**ಶ್ರೀ ಎಸ್. ಆರ್. ಬೊಮ್ಮಾಯಿ** - ಈ ಸಲ ಮಾತನಾಡಿದವರೆಲ್ಲಾ ಬರೀ ಭ್ರಷ್ಟಾಚಾರದ ಬಗ್ಗೆ ಅಲ್ಲ ಉಳಿದ ಅನೇಕ ವಿಚಾರಗಳನ್ನೂ ನಾವು ಹೇಳಿದ್ದೇವೆ.

**ಶ್ರೀ ಆರ್. ಗುಂಡೂರಾವ್** - ನಾನು ಹೇಳುವುದೇನೆಂದರೆ. It is not the job of Opposition.

SRI S.R. BOMMAI - We have to judge on performance.

**ಶ್ರೀ ಆರ್. ಗುಂಡೂರಾವ್** - ಹಾಗೆ ನೋಡಿದರೆ ನಾವು ಬೇರೆ ಬೇರೆ ಚಾರ್ಜಸ್ಸನ್ನು ಯಾರ ಮೇಲೆ ಮಾಡುವುದಕ್ಕಾಗುವುದಿಲ್ಲ. ಯಾರೋ ಒಬ್ಬರು ಹೇಳುತ್ತಾ ಇದ್ದರು -2 ಕೋಟಿ ರೂಪಾಯಿಗಳನ್ನು ಬಿ.ಡಿ.ಎ.ಯವರು ತೆಗೆದುಕೊಂಡು ಬಿಟ್ಟಿದ್ದಾರೆ. ಎಂದು. ಶ್ರೀ ಬಂಗಾರಪ್ಪನವರು 2 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ ಎಂದು ಹೇಳುತ್ತಾ ಇದ್ದರು. Where is the substance? What is the Charge? It is not correct ಜನತಾ ಪಾರ್ಟಿಯವರು ಅರಮನೆಯಲ್ಲಿ ಕನ್‌ವೆನ್‌ಷನ್ ಮೀಟಿಂಗ್ ಮಾಡಿದರು; ಎಲ್ಲಾ ಕಡೆ ಲೈಟ್ ಹಾಕಿದ್ದರು, ಸಾವಿರಾರು ಜನಕ್ಕೆ ಊಟ ಹಾಕಿದರು, ಲಂಚ

ಹೊಡೆದುಬಿಟ್ಟರು ಎಂದರೆ is it a word to be said? Whether Sri S. R. Bommai or Sri Devegowda are capable of feeding 25,000 people per day form out of their own income? I would ask?

ಶ್ರೀ ಎಸ್. ಆರ್. ಬೊಮ್ಮಾಯಿ - ಜನರ ಹತ್ತಿರ ಅದನ್ನು ಕಲೆಕ್ಟ್ ಮಾಡಿಕೊಳ್ಳುತ್ತೇವೆ.

**ಶ್ರೀ ಆರ್. ಗುಂಡೂರಾವ್** - ನೀವು ಜನರ ಹತ್ತಿರ ಕಲೆಕ್ಟ್ ಮಾಡಿಕೊಳ್ಳುತ್ತೀರಿ. ಅಟ್‌ಲೀಸ್ಟ್ ಪೊಲಿಟಿಕಲ್ ಫೀಲ್ಡ್‌ನಲ್ಲಿರುವವರು ನಾವು now, we should come to understand. ನೀವು ಪೊಲಿಟಿಕಲ್ ಕನ್‌ವೆನ್‌ಷನ್ ಮಾಡಬೇಕಾದರೆ 1 ರೂ. ತೆಗೆದುಕೊಳ್ಳಿರಿ 5 ರೂ. ತೆಗೆದುಕೊಳ್ಳಿರಿ, 10 ರೂಪಾಯಿಗಳನ್ನು ತೆಗೆದುಕೊಳ್ಳಿರಿ. 100 ರೂಪಾಯಿಗಳನ್ನು ತೆಗೆದುಕೊಳ್ಳಿರಿ: ನೀವು ಹಾಗೆ ಮಾಡಬೇಕು; ನಾನು ಅಧಿಕಾರದ ಪಕ್ಷದಲ್ಲಿರತಕ್ಕಂಥವರು. ನೀವು 100 ರೂಪಾಯಿಗಳನ್ನು ತೆಗೆದು ಕೊಂಡರೆ ನಮ್ಮ ಪಕ್ಷಕ್ಕೆ 1000 ರೂಪಾಯಿಗಳನ್ನು ಕೊಡಿ ಎಂದು ಕೇಳಬಹುದು. ನಮಗೆ ಅವರು ಜಾಸ್ತಿ ಕೊಡಬಹುದು. ನಿಮಗೆ ಕೊಡತಕ್ಕಂಥವರು ಹೇಗೆ ಕೊಡುತ್ತಾರೆ ಗೊತ್ತೇ; ಅದರ ಅನುಭವ ಕೂಡ ನಮಗೆ ಆಗಿದೆ. ಮುಂದೆ ಬೈ-ಎಲೆಕ್ಷನ್‌ನಲ್ಲಿ ಯಾರು ಗೆಲ್ಲಬಹುದು, ಜನರ ಮನಸ್ಸು ಯಾವ ತರಹ ಇದೆ, ಇದರಲ್ಲಿ ಹೇಗೆ ಆಗುತ್ತದೆ ಎಂಬುದನ್ನು ಯೋಚನೆ ಮಾಡುತ್ತಾರೆ. ಒಂದು ವೇಳೆ ಶ್ರೀ ಬೊಮ್ಮಾಯಿಯವರೇ ಅಧಿಕಾರಕ್ಕೆ ಬರಬಹುದು ಎಂದರೆ 100 ರೂ. ಏತಕ್ಕೆ ಬೊಮ್ಮಾಯಿ ಯವರೇ 500 ರೂ.. ತೆಗೆದುಕೊಳ್ಳಿ ಇರಲಿ ಪರವಾಗಿಲ್ಲ ಎಂದು ಹೇಳುತ್ತಾರೆ. ನಾವು ನೀವು ಇಲ್ಲಿ ಇದ್ದೀವಲ್ಲ; ನೀವು ನನಗಿಂತ ಅಚ್ಚ ಕಾಂಗ್ರೆಸ್ಸಿಗರು, ಏಕೆಂದರೆ ನೀವು ಖಾದಿ ಬಿಟ್ಟು ಬೇರೆ ಬಟ್ಟೆ ಹಾಕುವುದಿಲ್ಲ ನಾವು ಏನೂ ಅಚ್ಚ ಕಾಂಗ್ರೆಸಿಗ ಅಲ್ಲ; ನಾನು 1967ರ Model Congress. ನೀವು ಪ್ರಿ-ಇಂಡಿಪೆಂಡೆನ್ಸ್‌ನಿಂದ 'ಜಿಂದಾಬಾದ್' ಎಂದು ಹೇಳಿದವರು. ಆದ್ದರಿಂದ ನಾವು ನೀವು ಕಾಂಗ್ರೆಸ್ಸಿಗೆ ಬಂದು ವರ್ಷ ಆಯಿತು. ನಮ್ಮದು ನಿಮ್ಮದು ಏನಪ್ಪ ಎಂದರೆ you are hoping that you will come to power. Our politics is to come to power. ನಮ್ಮದು ಷಾರ್ಟ್ ರೇಂಜ್ ಪಾಲಿಸಿ; ಹೇಗಾದರೂ ಮಂತ್ರಿಮಂಡಲ ಮಾಡಬೇಕು; ಯಾರಾದರೂ ಬರಲಿ. ಯಾರಾದರೂ ಹೋಗಲಿ, ಏನಾದರೂ ಆಗಲೀ, ಏನೇ ಹೋಗಲಿ, ಪ್ರಿನ್ಸಿಪಲ್ ಇರಲಿ ಬಿಡಲಿ. ಮೆಜಾರಿಟಿ ಬರಬೇಕು ಮಂತ್ರಿಮಂಡಲ ಮಾಡಬೇಕು; ನಾವೂ ಆ ರೀತಿ ಮಾಡಿದ್ದೇವೆ, ನೀವೂ ಮಾಡಿದ್ದೀರಿ; ಎಲ್ಲಾ ರೀತಿ ಮಾಡಿದ್ದಾರೆ, ಆದರೆ ಕಮ್ಯುನಿಸ್ಟ್ ನವರದು ಹಾಗಲ್ಲ. ಅವರು 1988ಕ್ಕೆ ಲೆಕ್ಕ ಹಾಕುತ್ತಾ ಇಲ್ಲ; 2003ನೇ ಇಸವಿಗೆ ಈ ರಾಜ್ಯದಲ್ಲಿ ಏನಾಗಬಹುದು, 2010ನೇ ಇಸವಿಗೆ ಈ ರಾಜ್ಯದಲ್ಲಿ ಏನಾಗಬಹುದು ಎಂದು ಅಂತಹ ಒಂದು ಪ್ಲಾನನ್ನು ಇಟ್ಟುಕೊಂಡಿರುತ್ತಾರೆ.

ಒಬ್ಬ ಮಾನ್ಯ ಸದಸ್ಯರು - ನಮ್ಮ ರಾಜ್ಯಮಟ್ಟಿಗೆ ಹೇಳಿ.

SRI R. GUNUD RAO - It may be for our State. ವೆಸ್ಟ್ ಬೆಂಗಾಲ್‌ನಲ್ಲಿ ಮಾರ್ಕ್ಸಿಸ್ಟ್ ಮಂತ್ರಿಮಂಡಲ ಇದೆ. ಅದು ಬೇರೆ ಪ್ರಶ್ನೆ. ಆದರೆ ಕರಪ್‌ಷನ್ ಚಾರ್ಜಸ್ ಮಾಡುವಾಗ ವೇಗ್ ಆಗಿ ಮಾಡಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ - ನಾನು ಇಲ್ಲಿ ಅಪೋಜಿಷನ್ ಲೀಡರ್ ಆಗಿದ್ದಾಗ ಮತ್ತು ಮಾನ್ಯ ದೇವೇಗೌಡರು ಇಲ್ಲಿ ಅಪೋಜಿಷನ್ ಲೀಡರ್ ಆಗಿದ್ದಾಗ ವೇಗ್ ಆಗಿ ಯಾವುದೇ ಕರಪ್‌ಷನ್ ಚಾರ್ಜಸ್ ಮಾಡಿಲ್ಲ; ವಿತ್ ರೆಕಾರ್ಡ್ಸ್ ಅಂಡ್ ಡಾಕ್ಯುಮೆಂಟ್ಸ್ ನಾವು ಕರಪ್‌ಷನ್ ಚಾರ್ಜಸ್ ಮಾಡಿದ್ದೇವೆ.

ಶ್ರೀ ಆರ್. ಗುಂಡೂರಾವ್ - ಹಿಂದೆಯೂ ಮಾಡಿದ್ದೀರಿ, ಈಗಲೂ ಮಾಡುತ್ತಿದ್ದೀರಿ. That's, allright. ನಿಮ್ಮ ದೃಷ್ಟಿಯಲ್ಲಿ ನೀವು ಹೇಳುತ್ತೀರಿ; ನಮ್ಮ ದೃಷ್ಟಿಯಲ್ಲಿ ಅಲ್ಲ ಎಂದು ಹೇಳುತ್ತೇವೆ. ಅದಕ್ಕಾಗಿ ನಾನು ಹೇಳುವುದೇನೆಂದರೆ ಅದನ್ನೆಲ್ಲಾ ಸ್ವಲ್ಪ ಬದಿಗಿಟ್ಟು, ನಾವು ಈ ರಾಜ್ಯದಲ್ಲಿ ಮೆಜಾರಿಟಿಯಿಂದ ಅಧಿಕಾರಕ್ಕೆ ಬಂದಿದ್ದೇವೆ. ನೀವು ಹಿಂದೆ ಅಧಿಕಾರಕ್ಕೆ ಬಂದಿದ್ದೀರಿ. ಆದ್ದರಿಂದ ನಾವು ನಮ್ಮ ರಾಜ್ಯದ ಅಧಿಕಾರಕ್ಕೆ ಬಂದಿದ್ದೇವೆ. ನೀವು ಹಿಂದೆ ಅಧಿಕಾರಕ್ಕೆ ಬಂದಿದ್ದೀರಿ, ಆದ್ದರಿಂದ ನಾವು ನಿಮ್ಮ ರಾಜ್ಯದ ಡೆವಲಪ್‌ಮೆಂಟ್ ಗೋಸ್ಕರ ಕೆಲಸ ಮಾಡುವುದಕ್ಕೆ ಏನೇನು ಮಾರ್ಗವನ್ನು ಅನುಸರಿಸಬೇಕು ಅದು ಅನುಸರಿಸಬೇಕು. ಪೋಲೀಸರು ಎಲ್ಲೋ ಒಂದು ಕಡೆ ಗೋಲೀಬಾರ್ ಮಾಡಿದರು. ಆದರೆ ಗೋಲೀಬಾರ್ ಮಾಡಿದ ತಕ್ಷಣ ಟೀಕೆ ಮಾಡುವುದಕ್ಕೆ ಅವಕಾಶ ಸಿಕ್ಕಿತು ಎಂದು ಹೇಳಿ ಟೀಕೆ ಮಾಡಿರುವುದಿಲ್ಲ ನಾನು ಚೀಫ್ ಮಿನಿಸ್ಟರ್ ಆಗಿದ್ದರೆ, ಇಂತಹ ಒಂದು ಘಟನೆ ನಡೆದಿದ್ದರೆ ನಾನು ಏನು ಮಾಡುತ್ತಾ ಇದ್ದೆ ಎಂಬುದನ್ನು, ನಾವು ಯೋಚನೆ ಮಾಡಬೇಕು. ಈ ಮಧುಗಿರಿ ಪ್ರಕರಣದಲ್ಲಿ ಗೋಲಿಬಾರ್ ಆಯಿತು. ಶ್ರೀಮತಿ ಇಂದಿರಾಗಾಂಧಿಯವರ ಅರೆಸ್ಟ್ ಆದಾಗ ಗೋಲೀಬಾರ್ ಆಯಿತು.

ಹಿಂದೆ ಎಕ್ಸ್‌ಪೋ ಚಳುವಳಿ ಆಯಿತು. ಅದರಲ್ಲಿ ನಾವೆಲ್ಲಾ ಇದ್ದೆವು. ನಮ್ಮನ್ನು ಅರೆಸ್ಟ್ ಮಾಡಲಿಲ್ಲವೆ? ನಮಗೆ ಲಾಠಿ ಚಾರ್ಜ್ ಮಾಡಲಿಲ್ಲವೇ? ಅದರಲ್ಲೂ ನಾನು ಏನಾದರೂ ಚಳುವಳಿಯಲ್ಲಿ ಭಾಗವಹಿಸುವಾಗ ಲಾಠಿ ಏಟು ಮೊದಲು ಬೀಳುವುದು ನನಗೇ: ಏಕೆಂದರೆ ನಾನು ಉದ್ದ ಇದ್ದೇನೆ ನೋಡಿ, ಸಣ್ಣಗಿರುವವರು, ಕುಳ್ಳಗಿರುವವರು ಕೆಲವರು ತಪ್ಪಿಸಿಕೊಂಡು ಹೋಗಿಬಿಡುತ್ತಾರೆ. ಅಂತಹ ಅವಕಾಶ ನಮಗೆ ಸಿಕ್ಕುವುದಿಲ್ಲ. So that is not the argument. ಪೀಪಲ್ ರ್‍ಯಾನ್‌ಸ್ಯಾಕ್ ಮಾಡುತ್ತಾರೆ, ರೈಲ್ವೆ ಸ್ಟೇಷನ್ ಸುಟ್ಟು ಹಾಕುತ್ತಾರೆ, ಪೋಸ್ಟ್ ಆಫೀಸ್ ಸುಟ್ಟು ಹಾಕುತ್ತಾರೆ, ತಹಶೀಲ್ದಾರ್ ಆಫೀಸ್ ಸುಟ್ಟು ಹಾಕುತ್ತಾರೆ. ಆಗ ಏನು ಮಾಡುವುದಕ್ಕಾಗುತ್ತದೆ? Inevitably there is no other go in the present system. ಈಗ ನಾವೂ ನೀವೂ ಚರ್ಚೆ

ಮಾಡುತ್ತೇವೆ, ಮುಂದೆ ನೋಡಿಕೊಳ್ಳೋಣ. ಮುಂದೆ ನಿಮಗೆ ಕಾಣುತ್ತದೆ ಎಂದು ನೀವೂ ಹೇಳುತ್ತೀರಿ. ನಾವೂ ಹೇಳುತ್ತೇವೆ. ಹೀಗೆ ಇಬ್ಬರೂ ಏತಕ್ಕೆ ಅರ್ಗ್ಯೂಮೆಂಟ್ ಮಾಡುತ್ತಿದ್ದೇವೆ? ಅದೆಲ್ಲಾ ಎಲೆಕ್ಷನ್ ಸಲುವಾಗಿ ಹಾಗಾದರೆ ನಾಳೆ ದಿವಸ ನಾನೇ ಪುನಃ ಎಲೆಕ್ಟ್ ಆಗಿ ಬಂದೆ ಎಂದು ಇಟ್ಟು ಕೊಳ್ಳೋಣ, Even though I am unpopular I can become a Member ಅದು ಹೇಗೆ ಆಗುತ್ತದೆ? What is the yardstick you have in the democratic system? The only yard-stick is elections. ಇವರ ಬಗ್ಗೆ ಆರ್ಗ್ಯೂಮೆಂಟ್ ಮಾಡಿದ್ದಾರೆ. An adjournment motion was moved by the hon. Members of the Opposition. We defended. Under those circumstances there was no alternative except to take an un-popular decision. I went there, we defended our action. You all said then including late Sri Devaraj Urs that ryots were against Gundu Rao's Government, they were allergic to the Congress-I, And fortunately or unfortunately there was a bye-election in the same District and the same rural area where 80% voters are ryots. You campaigned elaborately. I asked my friend Sri Bangarappa not to go there because he was not a Minister then. By the time the bye-election came, he was not in the Cabinet. I went there and canvassed for my Party candidate. My party-men canvassed. All the Ministers went and canvassed. And we won that seat with a comfortable majority. The whole election propaganda was with reference to Nargund and Navalgund incident. ನರಗುಂದ ಮತ್ತು ನವಲಗುಂದದಲ್ಲಿ ಇರುವಂತಹ ರೈತರಿಗೆ ನಮ್ಮ ವಿರೋಧ ಪಕ್ಷದ ನಾಯಕರು ಚುನಾವಣಾ ಪ್ರಚಾರ ಭಾಷಣ ಮಾಡಿದಾಗ ಹೇಳಿದ್ದಾರೆ. ಇವರು ನಮ್ಮನ್ನು ಜೈಲಿಗೆ ಕಳುಹಿಸಿದಂತಹವರು, ಅಂತಹವರಿಗೆ ತಾವು ಮತ ಕೊಡಬೇಡಿ, ಎಂದು ಹೇಳಿದರೂ ಕೂಡ ಅವರು ನಮ್ಮ ಪಕ್ಷಕ್ಕೆ ಮತ ಕೊಟ್ಟು ನಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿದ್ದಾರೆ. These are all the speeches made by my very very good friend. Sri Bommai. His leaders Gurupadaswamy and so on made speeches. What is the yard-stick before you ನೀವು ಮತ್ತು ನಿಮ್ಮ ಪಕ್ಷದವರು ಎಷ್ಟೇ ಪ್ರಚಾರ ಭಾಷಣ ಮಾಡಿದರೂ ಕೂಡ ಅವರು ನಮ್ಮ ಪಕ್ಷದ ಮೇಲೆ ಒಂದು ನಂಬಿಕೆ ಇಟ್ಟುಕೊಂಡಿದ್ದಾರೆ, ಅವರಿಗೆ ಗೊತ್ತು ವಿರೋಧಪಕ್ಷದವರು ಎಲ್ಲರೂ ಡಿಫೆಕ್ಟರ್ಸ್ ಎಂದು. ಆದರಿಂದಲೇ ಜನತೆ ನಮ್ಮ ಪಕ್ಷಕ್ಕೆ ಮತ ಕೊಟ್ಟಿದ್ದಾರೆ.

ನಾವು ನೀವು ಜಗಳ ಆಡೋಣ ಆಮೇಲೆ. ಆದರೆ ಪ್ರಜಾಪ್ರಭುತ್ವ ಉಳಿಯದೇ ಹೋದರೆ ನಾವು ಮುಳುಗಿದ ಹಾಗೆಯೇ. ಒಂದು ಕತೆ ಇದೆಯಲ್ಲ ಹಾಗಾಗುತ್ತದೆ. ನಮ್ಮಲ್ಲಿ ಗಂಡ ಸತ್ತರೆ ಹೆಂಗಸು ತಲೆ ಬೋಳಿಸಿಕೊಳ್ಳುತ್ತಾರೆ. ನೋಡಿದ್ದೀರಾ ತಿಮ್ಮೇಗೌಡರೆ, ಆಕೆ ಮದುವೆ ಮನೆಗೆ ಹೋದಾಗ ನೋಡುತ್ತಾಳೆ, ಅಲ್ಲಿ ಮುತ್ತೈದೆಯರು ಎಲ್ಲರೂ ರೇಷ್ಮೆ ಸೀರೆ ಉಟ್ಟುಕೊಂಡು ಹಣೆಗೆ ಕುಂಕುಮ ಇಟ್ಟುಕೊಂಡು ಕೈಬಳೆ ಹಾಕಿಕೊಂಡು ತಿರುಗಾಡುತ್ತಿರುತ್ತಾರೆ. ಆದರೆ, ತಲೆ ಬೋಳಿಸಿಕೊಂಡ ಹೆಂಗಸು ಯಾರ ಜೊತೆಯಲ್ಲೂ ಮಾತನಾಡದೆ ಸುಮ್ಮನೆ ಒಂದು ಕಡೆ ಕುಳಿತುಕೊಂಡಿರುತ್ತಾಳೆ. ಯಾರ ಜೊತೆಯಲ್ಲೂ ಆಕೆ ಮಾತನಾಡುವುದಿಲ್ಲ. ಇನ್ನೊಬ್ಬಳು ಇದೇ ತರಹ ತಲೆ ಬೋಳಿಸಿಕೊಂಡು ಬಂದ ಹೆಂಗಸು ಬಂದ ಮೇಲೆ ಇವಳಿಗೆ ಒಂದು ಜೊತೆ ಸಿಕ್ಕಂತಾಗುತ್ತದೆ. ಆಮೇಲೆ ನೋಡಬೇಕು ಅವರಿಬ್ಬರ ಚರ್ಚೆ, ಅವಳ ಬಟ್ಟೆ, ನೋಡು, ಅವಳ ಸರ ನೋಡು, ಅದು ಇದು ಅಂತ ಆರಾಮವಾಗಿ ಕುಳಿತುಕೊಂಡು ಮಾತನಾಡುತ್ತಾರೆ. ಇಂಥಾ ಕೆಲಸ ಬೇಡ Let us have that clear cut policy from today onwards. ನಾವು ನೀವು ಸೇರಿ ತೀರ್ಮಾನ ಮಾಡೋಣ. ಇವತ್ತು ಬೇರೆ ಪಾರ್ಟಿ ಒಪ್ಪಲಿ ಬಿಡಲಿ, ಇನ್ನು ಮುಂದಿನ ಚುನಾವಣೆಯಲ್ಲಿ ಒಂದು collective declaration ಕೊಡೋಣ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ನಮ್ಮ ಪಕ್ಷದಿಂದ ಆರಿಸಿ ಬಂದವರು ಯಾರೇ ಆಗಲಿ, ಬೇರೆ ಪಕ್ಷಕ್ಕೆ ಬರುವುದಾದರೆ ಅವರ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಪುನಃ ಜನತೆಯ ಅಭಿಪ್ರಾಯ ಪಡೆದು ಪುನಃ ಆರಿಸಿಬರಬೇಕು. ಅಲ್ಲಿಯವರೆಗೆ ನಿಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದಿಲ್ಲ ಎಂಬ ತೀರ್ಮಾನ ಮಾಡೋಣ. ಅದೇ ಪ್ರಕಾರ ನಾವು ತೀರ್ಮಾನ ಮಾಡುತ್ತೇವೆ. ನೀವು ಕೂಡ ಹಾಗೆಯೇ ಮಾಡಿ. Atleast ಇದನ್ನು ನಮ್ಮಲ್ಲಿ ಬೆಳೆಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಪಿ. **ರಾಮದೇವ್** - ಈ ಬಗ್ಗೆ ಕಾಶ್ಮೀರದಲ್ಲಿ ಇರುವ ಹಾಗೆ ಒಂದು ಲೆಜಿಸ್ಲೇಷನ್ ತರೋಣ,

ಶ್ರೀ ಆರ್. **ಗುಂಡೂರಾವ್** - ಕಾಶ್ಮೀರದಲ್ಲಿ ಕಾನ್ಸ್ಟಿಟ್ಯೂಶನ್ ಅಮೆಂಡ್ ಮೆಂಟ್ ಆಗಿಲ್ಲ. It is only by dictating terms, because it is one mans party ಇದನ್ನು ಇಲ್ಲೂ ತರಬಹುದು, ತಪ್ಪೇನಿಲ್ಲ. ನಮ್ಮಲ್ಲಿ ನಾವು ನೀವು ಇದನ್ನು ಮಾಡೋಣ. Nothing wrong.

SRI A. LAKSHMI SAGAR- It is permissile so far as Jammu & Kashmir is concerned. It is not possible here. Why don't you bring a legislation to the election laws. That is, representation of Peoples Act can be amended as suggested by the Election Commission. All this will be of no use if you are not prepared to bring amendment to the Representative of People Act.

SRI R. GUNDU RAO - My dear Leader of the Opposition, I know you are a good lawyer. But I don't know whether we are competent to do that..... ಅದಕ್ಕೆ ಮೊದಲು ಪಾರ್ಲಿಮೆಂಟಿನಲ್ಲಿ ಬರುತ್ತದೋ ಇಲ್ಲವೋ, ಪಾರ್ಲಿಮೆಂಟಿನ ವರೆಗೆ ನಾವು ಹೋಗುವುದಕ್ಕೆ ಆಗುತ್ತದೋ ಬಿಡುತ್ತದೋ, ಅದು ಬೇರೆ ಪ್ರಶ್ನೆ....

SRI A. LAKSHMISAGAR - Sir, Let this House make a recommendation or a request to the Central Govenment that such a pieces of legislation is imperative and essential.

SRI R. GUNDU RAO - The question is, whether we are competent to do that.

SRI A. LAKSHMISAGAR - Sir, we can make a request and other state Legislature may follow the same.

**ಶ್ರೀ ಆರ್. ಗುಂಡೂರಾವ್** - Your corruption charges and other things are baseless: It is only a politically motivated charge. I can say many things for this. ಎಷ್ಟೋ ಸಾರಿ ಸಬ್-ಇನ್ಸ್‌ಪೆಕ್ಟರ್ ಇಂಟರ್‌ವ್ಯೂ ನಡೆಯುತ್ತಾ ಇತ್ತು. ಈ ಅಸೆಂಬ್ಲಿಯೊಳಗಡೆ ಬೇಕಾದಷ್ಟು ಡಿಬೇಟ್ ಆಯಿತು. ಮಾನ್ಯ ದೇವೇಗೌಡರು ವಿರೋಧಪಕ್ಷದ ನಾಯಕರಾಗಿದ್ದರು. ಮೇಲ್ಮನೆಯಲ್ಲಿ ಶ್ರೀಮಾನ್ ಬೊಮ್ಮಾಯಿಯವರು ಇದ್ದರು, ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರೂ ಇದ್ದರು. ಶ್ರೀಮಾನ್ ದೇವರಾಜ ಅರಸ್ ಅವರ ಸರ್ಕಾರದ ಮೇಲೆ ಮಾಡಬಾರದ ಚಾರ್ಜಸ್ಸನ್ನು ಮಾಡಿದರು Overnight, he had become honest man, forgetting all their charges on him. ಇಕ್ಬಾಲ್ ಹುಸೇನ್ ಕಮಿಷನ್ ರಿಜೆಕ್ಟ್ ಮಾಡಿದಾಗ, ಗ್ರೋವರ್ ಕಮಿಷನ್ ಮಾಡಿದಾಗ, What was happened when Mr. Devaraj Urs and myself were in the cabinet? Mr. Bangarappa was also in the cabinet as PWD Minister.

ಶ್ರೀ ಎಸ್. ಆರ್. ಬೊಮ್ಮಾಯಿ - ನೀವು ಮುಖ್ಯಮಂತ್ರಿ ಆದಮೇಲೆ ಮೂರನೇ ಸಲ ಅದೇ ಮಾತನ್ನು ಕೇಳುತ್ತಾ ಇದ್ದೇವೆ.

**ಶ್ರೀ ಆರ್. ಗುಂಡೂರಾವ್** - ನೀವೂ ಅದೇ ಹೇಳುತ್ತಾ ಇದ್ದೀರಿ, ನಾನೂ ಅದನ್ನೇ ಹೇಳುತ್ತಾ ಇದ್ದೇನೆ. ನೀವು ಹೊಸ ಬೆಳಕು ಚೆಲ್ಲಿದ್ದರೆ ನಾನು ಹೊಸ ವಿಚಾರ ಇಡುತ್ತಿದ್ದೆ. ನಿಮ್ಮದೂ ಅದು ಗ್ರಾಮಾಫೋನ್, ಈ ಕಡೆ ಹಾಕಿದಾಗ ನಿಮ್ಮ ಸಂಗೀತ, ಉಲ್ಟ ಹಾಕಿದಾಗ ನನ್ನ ಸಂಗೀತ, ನಾನೇನು ಮಾಡಲಿ, ನೀವು ಹೊಸ ಬೆಳಕನ್ನು ತೋರಿಸಿಕೊಟ್ಟರೆ

ನಾನು ಹೊಸದನ್ನು ಹೇಳುತ್ತಿದ್ದೆ. ಅದೇ ಕರಪ್ಷನ್, ಅದೇ ಚಾರ್ಜ್ "Here is a concrete case." ಅದು ಏನಿಲ್ಲ.ಇಂಜಿನಿಯರ್ ತಿಂದ ಎಂದು ಹೇಳುವುದು, ರೈಡ್ ಮಾಡುವ ವಿಚಾರ. 1956ನೇ ಇಸವಿಯಿಂದ 1980ನೇ ಇಸವಿಯವರೆಗೆ ಎಷ್ಟು ಆಫೀಸರ್ಸ್ ಮನೆಗಳನ್ನು ವಿಜಿಲೆನ್ಸ್ ಕಮಿಷನ್‌ನವರು ರೈಡ್ ಮಾಡಿದರು? I am going to answer that. 5 ಜನರು, 10 ಜನರು, 3 ಲಕ್ಷವು 5 ಲಕ್ಷವೋ ಏನೋ ಆ ಪ್ರಯತ್ನವನ್ನು ಯಾರು ಮಾಡಿದರು. I want to ask to-day.... ಅದರ ಫಲಿತಾಂಶ ಒಳ್ಳೆಯದು ಕೊಟ್ಟಿತ್ತೋ, ಅದರ ಬಗ್ಗೆ ಇವತ್ತಿನವರೆಗೆ ಪ್ರಯೋಗ ಮಾಡಿದವರು ಯಾರು. At least we have taken that venture. Is there any instance in the country that such senior officers were trapped and punished and kept under suspension? Is it not an appreciable thing? ಅದು ಪುನಃ ಅವರನ್ನು ಬಿಟ್ಟರು. ಅವರ ಜಾತಿಯವರನ್ನು ಬಿಟ್ಟರು ಅಂದರೆ. If you go on giving for everything caste, regional or language colour, where will be democracy under which we can argue healthily and under which we can deliver the goods..... i.e., accept that there are loopholes. ನಿನ್ನೆ ಮಾನ್ಯ ಬೊಮ್ಮಾಯಿಯವರು ಒಂದು ಪಟ್ಟಿಯನ್ನು ಓದಿದರು. ಬ್ರಾಹ್ಮಿನ್ಸ್ ಆಫೀಸರ್ಸ್ ಇಷ್ಟು ಜನ ಇದ್ದಾರೆ. ಲಿಂಗಾಯತರು ಇಷ್ಟು ಜನ ಇದ್ದಾರೆ. ಒಕ್ಕಲಿಗರು ಇಷ್ಟು ಜನ ಇದ್ದಾರೆ ಎಂದು. ಆದಕ್ಕೆ ನಾನೇನು ಮಾಡಲಿ. ನಮ್ಮ ಸಿಸ್ಟಂ ಹಾಗೆ ಇದೆ. ಐ.ಎ.ಎಸ್: ಐ.ಪಿ.ಎಸ್. ಎಂದು ಹೇಳುವಂಥಾದ್ದು ಸೆಂಟ್ರಲ್ ಗವರ್ನಮೆಂಟ್‌ಗೆ ಸೇರಿರುವಂಥಾದ್ದು. ಶ್ರೀಮಾನ್ ನಿಜಲಿಂಗಪ್ಪನವರು ಚೀಫ್ ಮಿನಿಸ್ಟರ್ ಇದ್ದಾಗಲೂ ಸಹ ಶ್ರೀಮಾನ್ ಜತ್ತಿಯವರು ಚೀಫ್ ಮಿನಿಸ್ಟರ್ ಇದ್ದಾಗಲೂ ಸಹ ಇದು ಇತ್ತು. ನೀವು ಕೇಳಿದ್ದಕ್ಕೆಲ್ಲಾ ನಾನು ಉತ್ತರ ಇಟ್ಟಿದ್ದೇನೆ. ಐ.ಎ.ಎಸ್: ಐ.ಪಿ.ಎಸ್. ಐ.ಎಫ್.ಎಸ್. ಎಂದು ಹೇಳುವಂಥಾದ್ದು ಕೇಂದ್ರದಿಂದ ಬರುವಂಥ ಯು.ಪಿ.ಎಸ್; ಐ.ಪಿ.ಎಸ್. ಎಂದು ಹೇಳುವಂಥ ಜಾಬು, ದುರಾದೃಷ್ಟಕ್ಕೆ ಲಿಂಗಾಯಿತರು, ಒಕ್ಕಲಿಗರು ಇಂಡಿಯಾ ದೇಶದಲ್ಲಿ ಬೇರೆ ಎಲ್ಲೂ ಇಲ್ಲ, ನನಗೆ ಬಂದಿರುವ ಕಷ್ಟ ಅದು. ಷೆಡ್ಯೂಲ್ಡ್ ಕ್ಯಾಸ್ಟ್ ನವರು ಇಡೀ ಇಂಡಿಯಾ ದೇಶದಲ್ಲಿದ್ದಾರೆ. ಬ್ರಾಹ್ಮಣರು ಇಂಡಿಯಾ ದೇಶದಲ್ಲಿದ್ದಾರೆ, ಮುಸಲ್ಮಾನರು ಇಡೀ ಇಂಡಿಯಾ ದೇಶದಲ್ಲಿದ್ದಾರೆ, ಕುರುಬರು. ಇಂಡಿಯಾ ದೇಶದಲ್ಲಿದ್ದಾರೆ, ಕ್ರಿಶ್ಚಿಯನ್ನರು ಇಂಡಿಯಾ ದೇಶದಲ್ಲಿದ್ದಾರೆ, ಲಿಂಗಾಯಿತ ಮತ್ತು ಒಕ್ಕಲಿಗರು ಇಲ್ಲೇ ಸೇರಿಕೊಂಡುಬಿಟ್ಟಿದ್ದಾರೆ. ಈಗ ಅಡ್ಜಸ್ಟ್‌ಮೆಂಟ್ ಮಾಡುವುದಕ್ಕೆ ನೋಡುತ್ತಾ ಇದ್ದಾರೆ, ಸಂತೋಷ, ಅದು ಒಂದು ಜಾಯಿಂಟ್ ಮೀಟಿಂಗ್ ಆಗಲಿ.

ನಮಗೆ ಸ್ವಾತಂತ್ರ್ಯ ಬಂದು 35 ವರ್ಷಗಳಾಗಿರತಕ್ಕ ಕಾಲದಲ್ಲಿ ಕೇಂದ್ರ ಸರ್ಕಾರದಲ್ಲಿ ಏನಾಗಿದೆ. ಉತ್ತರ ಇಂಡಿಯಾದಲ್ಲಿ ಏನಾಗಿದೆ ಎಂಬುದಕ್ಕಿಂತ ನಮ್ಮ ರಾಜ್ಯದಲ್ಲಿ ಏನಾಗಿದೆ

ಎಂಬುದನ್ನು ನೋಡೋಣ. ನಮ್ಮ ರಾಜ್ಯದಲ್ಲಿ 1956ರವರಗೆ ಒಕ್ಕಲಿಗರು ಮುಖ್ಯಮಂತ್ರಿಗಳಾಗಿದ್ದರು (ಆದರೆ ಐ.ಎ.ಎಸ್. ಅಧಿಕಾರಿಗಳು ಯಾರು ಇರಲಿಲ್ಲ) ಎಲ್ಲೋ 2-3 ಮಂದಿ ಐ.ಎ.ಎಸ್. ಅಧಿಕಾರಿಗಳು ಇದ್ದರು. ಇದನ್ನು ನೋಡಿದ ಮೇಲೆ ಸುಮ್ಮನೆ ಎಲ್ಲದರಲ್ಲೂ ರಾಜಕೀಯ ಮಾಡುವುದಕ್ಕೆ ಹೋಗುವುದು ಸರಿಯಲ್ಲ, ನಾನು ಹೇಳಿದೆ ಹಾಗೆ, ಮುಖ್ಯಮಂತ್ರಿಗಿರಿ ಯಾರ ಸೊತ್ತೂ ಅಲ್ಲ, ಗುತ್ತಿಗೆಯೂ ಅಲ್ಲ. ಗುಂಡೂರಾಯರು-ಬ್ರಾಹ್ಮಣರು ಮುಖ್ಯಮಂತ್ರಿಗಳಾಗಿರುವುದರಿಂದ ಬ್ರಾಹ್ಮಣರನ್ನೇ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆಂದರೆ ತಮ್ಮ ಮಾತಿನ ವೈಖರಿ ನೋಡಿ ಜನರು ನಿಜವಿರಬಹುದೆಂದು ಲೆಕ್ಕ ಹಾಕುತ್ತಾರೆ. ಆದರೆ ಆ ತರಹ ಇಲ್ಲ.

ಶ್ರೀ ಎಸ್. ಬಂಗಾರಪ್ಪ - ಪಟೇಲರು ಹೇಳಿದ ಹಾಗೆ, ಲಿಂಗಾಯಿತರು, ಒಕ್ಕಲಿಗರು ಕರ್ನಾಟಕ ರಾಜ್ಯವನ್ನು ಬಿಟ್ಟರೆ ಅಖಿಲ ಭಾರತ ಮಟ್ಟದಲ್ಲಿ ಹೆಚ್ಚಾಗಿ ಇಲ್ಲ; ಅವರು ಇಲ್ಲಿ ಮಾತ್ರ ಸೀಮಿತಗೊಂಡಿದ್ದಾರೆ. ಐ.ಎ.ಎಸ್. ಪಾಸ್ ಆಗಿ ಬರತಕ್ಕವರು ಅಖಿಲ ಭಾರತ ಮಟ್ಟದಲ್ಲಿ ಜಾಸ್ತಿ, ನಮಗೆ ಗೊತ್ತಿರುವ ಹಾಗೆ ನಾವು ಕೆಲವು ಅಧಿಕಾರಿಗಳಿಗೆ ಅಂದರೆ ರಾಜ್ಯ ಸರ್ಕಾರ ಕೂಡ ಕೆಲವು ಐ.ಎ.ಎಸ್. ಅಧಿಕಾರಿಗಳಿಗೆ ಅವಕಾಶ ಕೊಡಲು ಮಂತ್ರಿಮಂಡಲ ತೀರ್ಮಾನ ಮಾಡುವುದಕ್ಕೆ ಸಾಧ್ಯತೆ ಇದೆ. ಆ ದಿಸೆಯಲ್ಲಿ ಯಾರು ಆ ದರ್ಜೆಯ ಅಧಿಕಾರಿಗಳಿದ್ದಾರೆ ಅವರಿಗೆ ಅವಕಾಶ ನೀಡತಕ್ಕ ತೀರ್ಮಾನವನ್ನು ರಾಜ್ಯ ಸರ್ಕಾರ ಮಾಡಬಹುದು. ಪಟೇಲರ ಮಾತನ್ನು ಒಪ್ಪುವುದಾದರೆ, ಆ ದಿಸೆಯಲ್ಲಿ ರಾಜ್ಯ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದ್ದೇ ಆದರೆ ಈ ರಾಜ್ಯದಲ್ಲಿ ಸೀಮಿತಗೊಂಡಿರತಕ್ಕ ಜನರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವುದಕ್ಕೆ ಸಾಧ್ಯತೆ ಇತ್ತು.

ಶ್ರೀ ಆರ್. ಗುಂಡೂರಾವ್ - ಅದಕ್ಕೆ ನಾನು ಹೇಳುವುದೇನೆಂದರೆ ಐ.ಎ.ಎಸ್. ಐ.ಪಿ.ಎಸ್, ಹುದ್ದೆಗಳಿಗೆ ನೇಮಕಾತಿ ಮಾಡತಕ್ಕದ್ದು ಕೇಂದ್ರ ಮಟ್ಟದಿಂದ ಆಗಬೇಕಾಗಿದೆ. ಮೊದಲು ಕೂಡ ಆ ದಿಕ್ಕಿನಲ್ಲಿ ವಿದ್ಯಾಭ್ಯಾಸ ಮಾಡುವುದಕ್ಕೆ ಹೆಚ್ಚಿನ ಅನುಕೂಲತೆ ಇತ್ತು; ಯಾರು ಹೆಚ್ಚಿಗೆ ಅನುಭವ ಪಡೆದಿದ್ದಾರೋ ಅಂಥವರು ಆ ಕೇಡರ್‌ನಲ್ಲಿ ಬಂದಿದ್ದಾರೆ. ಅರ್ಹತೆ, ಅನುಭವ ಇದ್ದವರು ಯಾರು ಬೇಕಾದರೂ ಬರಬಹುದು, ಈ ಬಗ್ಗೆ ಅಂಕಿ ಅಂಶಗಳನ್ನು ನೋಡುವುದಾದರೆ, 1976ರಲ್ಲಿ ಐ.ಎ.ಎಸ್. ಕೇಡರಿನ ಸೆಕ್ರೆಟರಿ ಮತ್ತು ಸ್ಪೆಷಲ್ ಸೆಕ್ರೆಟರಿಗಳು 10 ಜನ ಬ್ರಾಹ್ಮಣರಿದ್ದರು; 3 ಜನ ಒಕ್ಕಲಿಗರು, ಒಬ್ಬರು ಲಿಂಗಾಯತರು, ಒಬ್ಬರು ಹರಿಜನರು, ಇತರೆ ಜಾತಿಯವರು ಇಬ್ಬರು; ಹೀಗೆ ಒಟ್ಟು 17 ಜನ ಇದ್ದರು. 1977ರಲ್ಲಿ 11 ಜನ ಬ್ರಾಹ್ಮಣರು, 3 ಜನ ಒಕ್ಕಲಿಗರು, ಒಬ್ಬರು ಲಿಂಗಾಯತರು, ಒಬ್ಬರು ಹರಿಜನರು ಇಬ್ಬರು ಇತರೆ ಜಾತಿಯವರು; ಹೀಗೆ ಒಟ್ಟು 18 ಜನರಿದ್ದರು. 1978ರಲ್ಲಿ 11 ಜನ ಬ್ರಾಹ್ಮಣರು, ಇಬ್ಬರು ಒಕ್ಕಲಿಗರು, ಇಬ್ಬರು ಲಿಂಗಾಯತರು, 4 ಜನ ಬೇರೆ ಜಾತಿಯವರು. ಹೀಗೆ ಒಟ್ಟು 19 ಜನರಿದ್ದರು. 1979ರಲ್ಲಿ 7 ಜನ ಬ್ರಾಹ್ಮಣರು ಇಬ್ಬರು ಒಕ್ಕಲಿಗರು ಇಬ್ಬರು ಲಿಂಗಾಯತರು ಒಬ್ಬರು ಹರಿಜನರು, 7 ಮಂದಿ ಬೇರೆ

ಜಾತಿಯವರು ಇದ್ದರು. 1980ರಲ್ಲಿ 8 ಜನ ಬ್ರಾಹ್ಮಣರು ಒಬ್ಬರು ಒಕ್ಕಲಿಗರು, ಒಬ್ಬರು ಲಿಂಗಾಯತರು, 10 ಮಂದಿ ಇತರೆಯವರಿದ್ದರು. 1981ರಲ್ಲಿ 11 ಜನ ಬ್ರಾಹ್ಮಣರು, ಒಬ್ಬರು ಒಕ್ಕಲಿಗರು, ಒಬ್ಬರು ಲಿಂಗಾಯತರು, ಒಬ್ಬರು ಹರಿಜನರು, 10 ಜನ ಬೇರೆಯವರಿದ್ದರು. 1982ರಲ್ಲಿ 12 ಜನ ಬ್ರಾಹ್ಮಣರು, ಒಬ್ಬರು ಒಕ್ಕಲಿಗರು, ಒಬ್ಬರು ಲಿಂಗಾಯಿತರು, 3 ಜನ ಹರಿಜನ-ಗಿರಿಜನರು, 7 ಮಂದಿ ಬೇರೆ ಜಾತಿಯವರು ಇದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ - 1959ರಿಂದ 1969ರವರೆಗೆ ಎಷ್ಟೆಷ್ಟು ಮಂದಿ ಇದ್ದರು ಹೇಳಿ?

ಶ್ರೀ ಆರ್. ಗುಂಡೂರಾವ್ - 1957ರಲ್ಲಿ 28 ಜನ ಬ್ರಾಹ್ಮಣರು. 9 ಜನ ಲಿಂಗಾಯತರು, 5 ಜನ ಒಕ್ಕಲಿಗರು, 4 ಜನ ಹರಿಜನ-ಗಿರಿಜನರು, ಬೇರೆಯವರು 33 ಜನರಿದ್ದರು. 1982ರಲ್ಲಿ ಐ.ಎ.ಎಸ್. ಲಿಸ್ಟ್ ನಲ್ಲಿ ಒಟ್ಟು........

ಶ್ರೀ ಎಸ್.ಆರ್. ಬೊಮ್ಮಾಯಿ - ಕೊಡುವುದಾದರೆ ಫುಲ್ ಪಿಕ್ಚರ್ ಕೊಡಲಿ.

ಶ್ರೀ ಆರ್. ಗುಂಡೂರಾವ್ - 1957ರಲ್ಲಿ ಎಷ್ಟು ಮಂದಿ ಇದ್ದರು ಎಂಬುದನ್ನು ಹೇಳಿದೆ. 1957ರಿಂದ 1972ರವರೆಗ ಒಂದೇ ಜಾತಿಯ ಸರ್ಕಾರ ಇತ್ತು. ಆದರೂ ಸಹ ನೀವು ಭಾಷಣ ಮಾಡಿದ ಹಾಗೆ ಲಿಂಗಾಯತ ಐ.ಎ.ಎಸ್. ಅಥವಾ ಐ.ಪಿ.ಎಸ್. ಅಧಿಕಾರಿಗಳನ್ನು ಜಾಸ್ತಿ ಮಾಡುವುದಕ್ಕೆ ಆಗಿಲ್ಲ. ಯಾವ ಮುಖ್ಯಮಂತ್ರಿಗಳು ಬಂದರೂ ಸಾಧ್ಯವಾಗಿಲ್ಲ. ಇನ್ನು 10 ವರ್ಷ ಕಾಲಕ್ಕೆ ಬ್ರಾಹ್ಮಣರು ಲಿಂಗಾಯತರು, ಒಕ್ಕಲಿಗರು ಇಲ್ಲದೆ ಹೋಗಬಹುದು. ಇಲ್ಲಿ ಆ ಪ್ರಶ್ನೆ ಅಲ್ಲ. ಏತಕ್ಕೆ ಹೇಳುತ್ತಿದ್ದೇನೆಂದರೆ, ಐ.ಎ.ಎಸ್. ಐ.ಪಿ.ಎಸ್.,ಮತ್ತು ಐ.ಎಫ್. ಎಸ್. ಅಧಿಕಾರಿಗಳಿರತಕ್ಕದ್ದು ಅಖಿಲ ಭಾರತ ಮಟ್ಟದಲ್ಲಿ, ಬೇರೆಯವರು ಏತಕ್ಕೆ ಜಾಸ್ತಿ ಬರುತ್ತಾರೆಂದು ಲಿಂಗಾಯಿತರಿಗೆ, ಒಕ್ಕಲಿಗರಿಗೆ ಅಸಮಾಧಾನ ಇರಬಹುದು. ಇಲ್ಲಿ ನಾವು ಜಾತಿ ಪದ್ಧತಿಗೆ ಉತ್ತೇಜನ ನೀಡುವುದಿಲ್ಲ. ಅದು ಒಂದು ರೀತಿಯ ರೂಢಿಯ ಮಾತಾಗಿದೆ. ಹಳ್ಳಿಗೆ ಹೋಗಲಿ, ಊರಿಗೆ ಹೋಗಲಿ, ಮದುವೆ ಮಾಡುವುದಾಗಲಿ (ಅಂತರ್ಜಾತಿಯ ವಿವಾಹ ಬಿಟ್ಟು) ನಿಮ್ಮ ಮನೆ ಮದುವೆ ಆದರೆ ಸುತ್ತೂರು ಮಠ ಗುರುಗಳು, ನಮ್ಮ ಮನೆ ಮದುವೆಯಾದರೆ ಶೃಂಗೇರಿ ಮಠದ ಗುರುಗಳು, ದೇವೇಗೌಡರ ಮಗ ಮದುವೆಯಾದರೆ ಆದಿಚುಂಚನಗಿರಿ ಮಠದ ಗುರುಗಳು ಇರುತ್ತಾರೆ. ಲಕ್ಷ್ಮೀಸಾಗರ್ ಮತ್ತು ರಾಮದೇವ್‌ರವರಿಗೆ ಮದುವೆಯೇ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ - ಜಾತಿ ಗುರುಗಳು ಇಲ್ಲ, ವಿದ್ಯಾಗುರುಗಳಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ - ನಾನು ಹೇಳುವಾಗ ಒಂದೇ ಜಾತಿಯವರು ಇದ್ದರು ಎಂದು ಹೇಳಲಿಲ್ಲ. ಮುಖ್ಯ ಮಂತ್ರಿಗಳು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಸೆಲೆಕ್ಷನ್ ಸಿಸ್ಟಂ ಬದಲಾಗಬೇಕೆಂಬ ದೃಷ್ಟಿಯಿಂದ ಹೇಳಿದ್ದೇನೆಯೇ ಹೊರತು ಅದು

ಇರಕೂಡದು ಎಂದು ಅಲ್ಲ-ಲಿಂಗಾಯತರು ಬಂದರೆ ಒಳ್ಳೆಯದಾಗುತ್ತದೆಂದು ಅಲ್ಲ. ಆ ಸಿಸ್ಟಂನಲ್ಲಿ ಎಲ್ಲರಿಗೂ ಅವಕಾಶ ಇರಬೇಕೆಂಬ ಬದಲಾವಣೆ ಆಗಬೇಕು. ನಿಮ್ಮ ಕಾಲದಲ್ಲಿ ಇದು ಆಗಬೇಕೆಂದು ನಿಮಗೆ ವೈಯಕ್ತಿಕವಾಗಿ ಹೇಳಿದ್ದೇನೆ.

SRI GUNDU RAO- I will tell you, It is O.K. Let me tell General principle. ಆದುದರಿಂದ, ಇಲ್ಲಿ ಏನಾಗಿದೆ ಎಂದರೆ ಲಿಂಗಾಯತರು, ಒಕ್ಕಲಿಗರು ಜಾಸ್ತಿ ಸಂಖ್ಯೆಯಲ್ಲಿ ಬರುವುದಿಲ್ಲವೆಂದರೆ ಈ ರಾಜ್ಯದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಕೋರ್ಸನ್ನು ತೆಗೆದು ಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಡಾಕ್ಟರು, ಇಂಜಿನಿಯರ್ ಆಗಬೇಕೆಂದು ಹೋಗುವವರೇ ಜಾಸ್ತಿ. ಆದರೆ ಬೇರೆ ರಾಜ್ಯಗಳಲ್ಲಿ ಈ ರೀತಿ ಇಲ್ಲ.

**ಶ್ರೀ ಹೆಚ್. ಡಿ. ದೇವೇಗೌಡ** - ನಾನು ಸೆಲೆಕ್ಷನ್ ಸಿಸ್ಟಂನಲ್ಲಿರುವ ದೋಷವನ್ನು ಹೇಳಿದೆ. ಇನ್ನು ಎರಡು ವರ್ಷವಾದರೆ ಬ್ರಾಹ್ಮಣರು ಮನೆಗೆ ಹೋಗುತ್ತಾರೆ ಐಪಿ.ಎಸ್. ಸೆಲೆಕ್ಷನ್‌ನಲ್ಲಿ ಕರ್ನಾಟಕ ರಾಜ್ಯದವರು ಎಷ್ಟು ಜನ ಆಯ್ಕೆಯಾಗಿದ್ದಾರೆಂಬುದನ್ನು ನೋಡಿದರೆ ಹರಿಜನರು ಕೂಡ ಕರ್ನಾಟಕ ರಾಜ್ಯದಿಂದ ಆಯ್ಕೆಯಾಗಿಲ್ಲ.

**ಶ್ರೀ ಎಸ್.ಆರ್. ಬೊಮ್ಮಾಯಿ** - ಕರ್ನಾಟಕದಿಂದ ಬ್ರಾಹ್ಮಣರು ಆಗಿಲ್ಲ.

**ಶ್ರೀ ಹೆಚ್. ಡಿ. ದೇವೇಗೌಡ** - ಲಿಖಿತ ಪರೀಕ್ಷೆಯಲ್ಲಿ ನೂರಕ್ಕೆ 70-80 ಅಂಕಗಳನ್ನು ತೆಗೆದು ಕೊಂಡವರಿಗೆ (ಕರ್ನಾಟಕದವರಿಗೆ) ಮೌಖಿಕ ಪರೀಕ್ಷೆಯಲ್ಲಿ 10-15 ಅಂಕಗಳನ್ನು ಕೊಡುತ್ತಾರೆ. ಲಿಖಿತ ಪರೀಕ್ಷೆಯಲ್ಲಿ 865 ಅಂಕಗಳನ್ನು ಪಡೆದಿರುವವರಿಗೆ ಮೌಖಿಕ ಪರೀಕ್ಷೆಯಲ್ಲಿ 13 ಅಂಕಗಳನ್ನು ಕೊಟ್ಟಿರತಕ್ಕ ನಿದರ್ಶನಗಳು ಇವೆ.

This is the organised way of eliminating Karnataka people at all India level. Whether ultimate responsibility has to be fixed to the Government of India system itself. ಥಿಯರಿಯಲ್ಲಿ 835 ಅಂಕಗಳ ಪಡೆದಂಥ ಹುಡುಗನಿಗೆ ಓರಲ್ ಎಗ್ಸಾಮಿನೇಷನ್‌ನಲ್ಲಿ ಕೇವಲ 13 ಅಂಕಗಳನ್ನು ಕೊಡುತ್ತಾರೆಂದರೆ ಇದೆಂಥ ಅನ್ಯಾಯ? ಇದರ ಬಗ್ಗೆ ಯೋಚನೆ ಮಾಡಿ ಎಂದು ಹೇಳಿದ್ದೇನೆ.

SRI R. GUNDU RAO- I also appreciate your point my dear friend. You also said right from 1975 till to-day there is no representation form Karnataka in the U.P.S.C. That is a very healthy point made by the Hon. Member Sri Deve Gowda. ನಿನ್ನೆ ದಿವಸ ಅವರು ಲಿಸ್ಟ್ ಕೊಟ್ಟಿದ್ದಾರಲ್ಲಾ ಆದ್ದರಿಂದ ನಾನು ಕೆಲವು ವಿವರಗಳನ್ನು ಇವತ್ತು ಕೊಡಬೇಕಾಗಿದೆ. ಗುಂಡೂರಾಯರು ಮುಖ್ಯ ಮಂತ್ರಿಯಾಗಿರುವುದರಿಂದ ಮುಖ್ಯ ಕಾರ್ಯದರ್ಶಿಯವರು ಬ್ರಾಹ್ಮಣರಾಗಿದ್ದಾರೆ. ಅಡಿಷನಲ್ ಮುಖ್ಯ ಕಾರ್ಯದರ್ಶಿಯವರು ಬ್ರಾಹ್ಮಣರಾಗಿದ್ದಾರೆ. ಪ್ಲಾನಿಂಗ್ ಸೆಕ್ರೆಟರಿಯವರು ಬ್ರಾಹ್ಮಣರಾಗಿದ್ದಾರೆ ಎಂದು ಕೆಲವರು

ಭಾಷಣ ಮಾಡಿದ್ದಾರೆ. ನಾನೇ ಅಲ್ಲ, ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿರಲಿ, ದೇವೇಗೌಡರು, ಬಂಗಾರಪ್ಪ, ಆರುಗ್ಗಂ ಯಾರೇ ಆಗಿದ್ದರೂ you cannot make other than these two people as Chief Secretaries. We have no right. If you appoint anybody they will go to Court and they will continue as Chief Secretaries. ಐ.ಜಿ.ಪಿ. ಜಿ.ವಿ. ರಾವ್ ಇದ್ದಾರೆ. ನಾನು ಟ್ರಾನ್ಸ್ ಪೋರ್ಟ್ ಮಿನಿಸ್ಟರ್ ಆದ ಮೇಲೆ ಅವರನ್ನು ನೋಡಿದ್ದು. ಅದಕ್ಕೆ ಮೊದಲು ಅವರು ನನಗೆ ಗೊತ್ತೇ ಇರಲಿಲ್ಲ. This wrong opinion should be taken out from the mind of everybody in the State, if at all anybody is having. 1949 ರಿಂದ 1956ರ ವರೆಗೆ ಹಳೇ ಮೈಸೂರಿದ್ದಾಗ ಆಗಲೂ ಸಹ ಎಷ್ಟು ಐ.ಎ.ಎಸ್. ಮತ್ತು ಐ.ಪಿ.ಎಸ್., ಅಧಿಕಾರಿಗಳಿದ್ದರೆಂದರೆ 5 ಜನ ಇದ್ದರು, ಆಗ ಒಕ್ಕಲಿಗರು ಒಬ್ಬರೂ ಇರಲಿಲ್ಲ. ಶ್ರೀಮಾನ್ ಕೆ.ಸಿ. ರೆಡ್ಡಿಯವರು, ಕೆಂಗಲ್ ಹನುಮಂತಯ್ಯನವರು ಶ್ರೀಮಾನ್ ಕಡಿದಾಳ್ ಮಂಜಪ್ಪನವರು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ not even a Vokkaliga was an IPS Officer. not even a Lingayat was an IPS Officer, not even a SC/ST was an IPS officer, except other communities, Chiristians or somebody totally there were only 8.

**ಶ್ರೀ ಹೆಚ್. ಡಿ. ದೇವೇಗೌಡ** - ಐ.ಪಿ.ಎಸ್. ಕ್ರಿಯೇಟ್ ಆಗಿದ್ದು 1951ರಲ್ಲಿ, ಶ್ರೀ ಗೋವಿಂದ ವಲ್ಲಭಪಂತ್ ಅವರು ಅದನ್ನು ತಂದರು.

SRI R. GUNDU RAO - It is no use unless you go to the root of the matter. There is no point in asking about the caste system. There is no point. It is not our principle. It is not our party principle that becasue of one particular caste Chief Minister is there, he will be there.

**ಶ್ರೀ ಎಸ್. ಆರ್. ಬೊಮ್ಮಾಯಿ** - ತಮ್ಮನ್ನು ನಾನು ನೇರವಾಗಿ ಒಂದು ಪ್ರಶ್ನೆ ಕೇಳುತ್ತೇನೆ, ಡಪ್ಯುಟಿ ಕಮೀಷನರ್ ಆಗುವುದಕ್ಕೆ ಅರ್ಹರಾಗಿರುವವರೂ ಇನ್ನೂ ಏತಕ್ಕಾಗಿಲ್ಲ? ನಿಮ್ಮ ಸೆಕ್ರೆಟರಿಯೇಟ್‌ನಲ್ಲಿ ಇದೆಲ್ಲಾ ನಡೆಯುತ್ತದೆ.

SRI R. GUNDU RAO - That is why I am telling you a Deputy Commissioner may be fit as a Secretary than as a Deputy Commissioner. It must be judicious. In your point he is an unfit man But, in my point he is a fit man. Nobody can question that choice. you can question me in selection, you can question me

in promotion, and you can question me in recruitment. But, once he joined the Government service, it is my pleasure and my choice. 1962ನೇ ಇಸವಿ ಯಲ್ಲಿ ಒಟ್ಟು ಚೀಫ್ ಇಂಜಿನಿಯರ್‌ಗಳು ನಾಲ್ಕು ಜನರಿದ್ದರು. ಬ್ರಾಹ್ಮಣರು ಒಬ್ಬರಿದ್ದರು. ಲಿಂಗಾಯಿತರು, ಒಕ್ಕಲಿಗರು ಒಬ್ಬರೂ ಇಲ್ಲ, ಬೇರೆಯವರು ಮೂರು ಜನರಿದ್ದರು. I do not know whether it is a correct to argue that I have taken. ನಾಲ್ಕು ಜನರಲ್ಲಿ ಬ್ರಾಹ್ಮಣರು ಒಬ್ಬರೇ ಒಬ್ಬರು. ಆಗಲೂ ಕೂಡ ಲಿಂಗಾಯಿತರು. ಒಕ್ಕಲಿಗರು ಯಾರೂ ಚೀಫ್ ಇಂಜಿನಿಯರ್ ಆಗಿ ಇರಲಿಲ್ಲ.
Jsut for information I am giving you.

ನಾನು ಉದಾಹರಣೆ ಕೊಡುತ್ತಿದ್ದೇನೆ ಅಷ್ಟೆ. ಬಂಗಾರಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಕಂದಾಯ ಇಲಾಖೆ ಕಾರ್ಯದರ್ಶಿಯಾಗಿ ಆನಂದಕೃಷ್ಣ ಅವರಿದ್ದರು. Can I say I am Brahmin Minister, I must have a Brahmin Secretary or can I say I am a Brahmin I do not want to have Vokkaliga Secretary? I have no right. 1977ರಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಚೀಫ್ ಇಂಜಿನಿಯರುಗಳು ಬಂದರು. ಆಗ 24 ಚೀಫ್ ಇಂಜಿನಿಯರುಗಳು ಬಂದರು. ಅದರಲ್ಲಿ 12 ಜನ ಬ್ರಾಹ್ಮಣರು, 6 ಜನ ಲಿಂಗಾಯಿತರು, ಇಬ್ಬರು ಒಕ್ಕಲಿಗರು, ಹರಿಜನ ಗಿರಿಜನರು ಇಬ್ಬರು., ಇತರರು ಇಬ್ಬರು. 1978ರಲ್ಲಿ 28 ಜನ ಚೀಫ್ ಇಂಜಿನಿಯರುಗಳಿದ್ದು ಅವರ ಪೈಕಿ 13 ಜನ ಬ್ರಾಹ್ಮಣರು, ಮಾನ್ಯ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ, ಅವರೇನೂ ಬ್ರಾಹ್ಮಣರಲ್ಲವಲ್ಲ? 1980ರಲ್ಲಿ 29 ಜನರ ಪೈಕಿ 15 ಜನ ಬ್ರಾಹ್ಮಣರು. 4 ಜನ ಲಿಂಗಾಯಿತರು. 5 ಜನ ಒಕ್ಕಲಿಗರು, ಹರಿಜನ ಗಿರಿಜನರು ಒಬ್ಬರು ಇದ್ದರು. 1981ರಲ್ಲಿ 32 ಜನ ಚೀಫ್ ಇಂಜಿನಿಯರುಗಳು ಪೈಕಿ 11 ಜನ ಬ್ರಾಹ್ಮಣರು, 7 ಜನ ಲಿಂಗಾಯಿತರು, 4 ಜನ ಒಕ್ಕಲಿಗರು, ಹರಿಜನ ಗಿರಿಜನರು ಮೂವರು, ಬೇರೆಯವರು 7 ಜನರಿದ್ದರು, 1982ರಲ್ಲಿ 31 ಜನ ಚೀಫ್ ಇಂಜಿನಿಯರುಗಳು 7 ಜನ ಬ್ರಾಹ್ಮಣರು. 1980-81ರಲ್ಲಿ ಜಾಸ್ತಿ ಇತ್ತು. ಈಗ ಈ ಸಂಖ್ಯೆ ಕಡಿಮೆಯಾಗಿದೆ. ಲಿಂಗಾಯಿತರು 8 ಜನರು, ಒಕ್ಕಲಿಗರು 4 ಜನರು (ಅದರಲ್ಲಿ ಒಬ್ಬರು ನಿವೃತ್ತರಾಗಿದ್ದು ಈಗ ಮೂವರು ಜನರಿದ್ದಾರೆ), ಹರಿಜನ ಗಿರಿಜನರು 5, ಇತರರು 7 ಇದ್ದಾರೆ. ಇದನ್ನೆಲ್ಲಾ ಏತಕ್ಕೆ ಹೇಳಬೇಕಾಯಿತೆಂದರೆ ........

ಶ್ರೀ ಎಸ್. ಆರ್. ಬೊಮ್ಮಾಯಿ - ಈಗ ಸಿಸ್ಟಂ ಬದಲಾವಣೆಯಾಗಬೇಕೆಂದು ಹೇಳುತ್ತಿದ್ದೇನೆ. 1967ರಲ್ಲಿ ವಿಧಾನಸೌಧದಲ್ಲಿ ಎಲ್ಲಾ ಜಾತಿಯವರೂ ಇದ್ದರು. ಡಿವಿಷನಲ್ ಕಮಿಷನರ್ ಮುಸಲ್ಮಾನರು, ಲಿಂಗಾಯಿತರು ಎಲ್ಲರೂ ಇದ್ದರು, ನಾನು ಹೇಳುವುದೇನೆಂದರೆ ಈ ಪದ್ಧತಿ ಬದಲಾಗಬೇಕು.

SRI R. GUNDU RAO - I agree. There is not even a single Secretary belonging to Muslim community in the Secretariat. I

am telling you this because only one Secretary Sri Jaffer Saifulla was there. He has been taken by the Central Government to the Trade Fair Authority. When he was wanted by the Central Government I refused to send him. But, there was pressure and the Government of India said that he was a very competent man and they have no choice. So, we have given him. Now, not a single Muslim Secretary is there. ಹಿಂದೆ ಇಬ್ಬರು ಚೀಫ್ ಇಂಜಿನಿಯರುಗಳಿದ್ದರು. ಈಗ ಅವರಿಲ್ಲ. ಮಾನ್ಯ ದೇವೇಗೌಡರು ಮಾತನಾಡುತ್ತಾ ಒಕ್ಕಲಿಗರಾದ ಚೀಫ್ ಇಂಜಿನಿಯರುಗಳ ಬಗ್ಗೆ ಹೇಳಿದ್ದಾರೆ. ಹನುಮಂತಯ್ಯನವರ ಕಾಲದಲ್ಲೂ ಒಬ್ಬರೂ ಇರಲಿಲ್ಲ. ಕೆ.ಸಿ. ರೆಡ್ಡಿಯವರ ಕಾಲದಲ್ಲೂ ಒಬ್ಬರೂ ಒಕ್ಕಲಿಗರು ಇರಲಿಲ್ಲ ಎಂದು ಹೇಳಿದ್ದಾರೆ. ಆದರೆ ಕಳೆದ ಎರಡು ಮೂರು ವರ್ಷಗಳಿಂದ ನಾಲ್ಕು ಜನ ಚೀಫ್ ಇಂಜಿನಿಯರುಗಳು ಇದ್ದಾರೆ. ಅದು ನನ್ನ ಕಾಲದಲ್ಲಿ.

Now I come to police department. There are 411 posts of Police Inspectors, out of them 174 are in Eecutive side and 237 are non-executives. In all there are 31 police inspectors belonging to Scheduled Caste. Then there are about 874 posts of Police Sub Inspectors. I am giving you the total figres we have to-day. SC-85, ST-6, Muslim-71, Christians-19, Vokkaligas-81, Lingayats-156, Kodavas-39, Brahamins-77, Kurubas-34, Ediga-6, other communities 268, There are 153 Dy. SPs, out of this 72 are in executive side and 81 are in non-executive. I will give you the caste-wise break-up Lingayaths-16, Brahamins-9, Vokkaliga-10, SC-8, ST-1, Muslim-11, Kodavas-3, Marathas-4, Kurubas-4, other communities-7.

ಶ್ರೀ ಎಸ್. ಆರ್. ಬೊಮ್ಮಾಯಿ - ಪಿಕ್ಚರ್ ಕೊಡುವುದಾದರೆ, ಫುಲ್ ಪಿಕ್ಚರ್ ಕೊಡಿ ಐ.ಜಿ.ಪಿ.ಯವರದ್ದು ಹೇಳಿ.

ಶ್ರೀ **ಆರ್. ಗುಂಡೂರಾವ್** - ಡಿ.ಐ.ಜಿ. ಒಬ್ಬರು ಬ್ರಾಹ್ಮಣರು ಇದ್ದಾರೆ. ಹಿಂದೆ ಡಿ.ಐ.ಜಿ. ಲಿಂಗಾಯಿತರು ಇದ್ದರು. ಆಡಿಷನಲ್ ಐ.ಜಿ. ಬ್ರಾಹ್ಮಣರು ಮತ್ತು ಮುಸ್ಲೀಮರು ಇದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ - ತಾವು, ನಮ್ಮ ಸ್ಪಿರಿಟ್ ಅರ್ಥ ಮಾಡಿಕೊಳ್ಳಲಿಲ್ಲ. ತಾವು ಬರೀ ಐ.ಪಿ.ಎಸ್. ಆಫೀಸರ್ಸ್ ಬಗ್ಗೆ ಹೇಳುತ್ತಿದ್ದೀರಿ.

SRI R. GUNDU RAO - I don't like this sort of narrow out look. Have I said that I am not going to give you the details?

SRI S.R. BOMMAI - I never said that you have refused to divulge the details.

SRI R. GUNDU RAO - I am not at all interested in giving preferance to communities. Whatever may be the a contest my point is there is no need for propaganda. I don't care for communitites. ಗುಂಡೂರಾಯರು ಬಂದ ಮೇಲೆ ಮಾಡಿದ್ದಾರೆಂದು ಹೇಳಿಕೊಳ್ಳಲಿ.

ಶ್ರೀ ಜಿ. ಹೆಚ್. ಪಟೇಲ್ - ಸ್ವಾಮಿ, ಇಲ್ಲಿ ಜಾತಿಗಳ ಬಗ್ಗೆ ಪ್ರಸ್ತಾಪ ನಡೆಯುತ್ತದೆ ಇದಕ್ಕೆ ಒಂದು ಉದಾಹರಣೆ ಕೊಡುತ್ತೇನೆ. ನಮ್ಮ ದೇಶದಲ್ಲಿರತಕ್ಕ ಕೆಲವು ವ್ಯವಸ್ಥೆ ಮತ್ತು ಲಕ್ಷಣಗಳ ಬಗ್ಗೆ ಡಾ. ಲೋಹಿಯಾರವರು ಒಂದು ಸಾರಿ ಹೇಳಿದ್ದಾರೆ. ಪಂಡಿತ್ ಜವಾಹರಲಾಲ್ ರವರ ಪ್ರಧಾನ ಮಂತ್ರಿಗಳಾಗಿದ್ದಾಗ, ಮಾನ್ಯ ಶ್ರೀ ಸಿ. ರಾಜಗೋಪಾಲಾ ಚಾರಿ ಕಮ್ಯೂನಿಸ್ಟ್ ಸಿದ್ಧಾಂತಿ ಡಾಂಗೆ, ಸೋಷಿಲಿಸ್ಟ್ ಪಕ್ಷದ ಎಸ್.ಎಂ. ಜೋಷಿ, ಪಿ.ಎಸ್.ಪಿ. ಪಕ್ಷದ ಗೋರೆಯವರು ಪ್ರಯತ್ನ ಪಟ್ಟರೂ ಇದನ್ನು ಹೋಗಲಾಡಿಸುವುದಕ್ಕೆ ಸಾಧ್ಯವಾಗಲಿಲ್ಲ. ಮೂಲಭೂತ ವ್ಯವಸ್ಥೆಯಲ್ಲಿ ಇದರ ಬದಲಾವಣೆಯಾಗಬೇಕು. ಅಧಿಕಾರಿಗಳ ಮತ್ತು ಪೋಲೀಸ್ ಅಧಿಕಾರಿಗಳ ನೇಮಕ ಮಾಡುವ ಬಗ್ಗೆ, ತಮಿಳುನಾಡಿನಲ್ಲಿರತಕ್ಕ ಒಂದು ವ್ಯವಸ್ಥೆಯನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್ - ಒಂದು ಜಾತೀಯವರ ಮುಖ್ಯಮಂತ್ರಿಗಳಾದರೆ, ಈ ಜಾತಿಯವರ ಜನರಿಗೆ ಬೆಂಬಲ ಕೊಡತ್ತಾರೆ ಎಂದು ಹೇಳುವುದು ಸರಿಯಲ್ಲ.

MR. SPEAKER - Let us leave it at that.

## ಭಾಗ - 3

## ಸಂಸತ್ ಸದಸ್ಯರಾಗಿ ಗುಂಡೂರಾವ್

ಬಹುಮುಖ ವ್ಯಕ್ತಿತ್ವದ ಆರ್. ಗುಂಡೂರಾವ್ ಎರಡು ವರ್ಷಗಳ (1989-1991) ಅವಧಿಗೆ ಬೆಂಗಳೂರು (ದಕ್ಷಿಣ) ಲೋಕಸಭಾ ಕ್ಷೇತ್ರವನ್ನು ಭಾರತದ ಸಂಸತ್‌ನಲ್ಲಿ ಪ್ರತಿ ನಿಧಿಸಿದ್ದರು. ಸಾಂಪ್ರದಾಯಿಕವಾಗಿ ಪ್ರತಿಪಕ್ಷದ ಸೀಟು ಎಂದೇ ಗುರುತಿಸಲಾಗುತ್ತಿದ್ದ ಈ ಕ್ಷೇತ್ರವನ್ನು ಮರಳಿ ಕಾಂಗ್ರೆಸ್ ಪಾಲಿಗೆ ತಂದಿತ್ತವರು ರಾಯರು. ಅದೂ ಕೂಡ ಎರಡೂವರೆ ಲಕ್ಷ ಬಹುಮತದಿಂದ ಅವರು ಗೆದ್ದರು.

ಗುಂಡೂರಾವ್ ಒಮ್ಮೆ ಸಂಸತ್ ಭವನ ಪ್ರವೇಶಿಸಿದರೆಂದರೆ, ನೇರವಾಗಿ ಸೆಂಟ್ರಲ್ ಹಾಲ್ ಕಡೆ ಹೋಗುತ್ತಿದ್ದಂತೆಯೇ, ಅವರ ಹಿಂದೆ ಗೆಳೆಯರ ಹಾಗೂ ಅರ್ಜಿ ಹಿಡಿದವರ ದಂಡೇ ಇರುತ್ತಿತ್ತು. ಸೆಂಟ್ರಲ್ ಹಾಲ್ ಒಳಗೂ ಅವರ ಸುತ್ತ ಗುಂಪು. ತಮಿಳುನಾಡಿನವರು ಸಿಕ್ಕರೆ ತಮಿಳು, ಉತ್ತರ ಭಾರತದವರಾದರೆ ಹಿಂದಿ ಭಾಷೆಯಲ್ಲಿ ಮಾತನಾಡುತ್ತಿದ್ದರು. ಹಾಸ್ಯ ಚಟಾಕಿ ನಗು ಸಭಾಂಗಣದೊಳಗಿದ್ದರೆ, ಅದರ ಕೇಂದ್ರವೇ ಅವರು ಆಗಿದ್ದಾರೆ ಎಂಬಷ್ಟು ಅವರು ಮಿತ್ರಪ್ರಿಯರಾಗಿದ್ದರು.

ಕನ್ನಡದ ಪ್ರಮುಖ ಪತ್ರಿಕೆಯಲ್ಲಿ ಅವರ ಸಂಸತ್ ಚಟುವಟಿಕೆ ಬಗ್ಗೆ ಹೀಗಿದೆ. "ಲೋಕಸಭೆಗೆ ಆಯ್ಕೆಯಾಗಿ ಬಂದ ನಂತರ, ಗುಂಡೂರಾಯರು ಸದನದ ಕಾರ್ಯಕಲಾಪಗಳಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದು ಅಷ್ಟಕಷ್ಟೇ. ಆದರೂ, ರಾಜ್ಯದ ಅಭಿವೃದ್ಧಿ ವಿಚಾರಗಳು ಬಂದಾಗ ತಮ್ಮದೇ ಪ್ರಭಾವ ಬೀರಿ ಕೆಲಸ ಸಾಧಿಸುವ ಛಲ ಅವರದು. ತಾವೊಬ್ಬ 'ಒಂಟಿ ಸಲಗ' ಎನ್ನುವಂತೆ ರಾಜ್ಯದ ಕೆಲವು ಹಳೇ ಯೋಜನೆಗಳಿಗೆ ಒಂದು ದಾರಿ ಕಾಣಿಸಬೇಕು ಎನ್ನುವ ಮಹತ್ವಾಕಾಂಕ್ಷೆ ಅವರದಾಗಿತ್ತು." ಬೆಂಗಳೂರಿಗೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಬೇಕು. ಹುಬ್ಬಳ್ಳಿ-ಬೆಂಗಳೂರು ವಿಮಾನ ಸಂಚಾರ ಪುನರಾರಂಭ ಮಾಡಬೇಕು ಎಂದು ಒತ್ತಡ ಹೇರುತ್ತಿದ್ದರು. ಪ್ರಧಾನಿ ಹಿರಿಯ ಸಚಿವರುಗಳ ಪ್ರಧಾನಿ ನೇರ ಸಖ್ಯವಿದ್ದ ಕಾರಣ ರಾಯರ ಸನಿಹ ಬಯಸುತ್ತಿದ್ದ ಕೇಂದ್ರ, ರಾಜ್ಯ ಮುಖಂಡರುಗಳು ಅನೇಕರು. ಇದರಿಂದಲೇ ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕೆಂಬ ಆಸೆ ಅವರಲ್ಲಿ ಮನೆ ಮಾಡಿತ್ತು ಎನ್ನಬಹುದು. ದೆಹಲಿಯಲ್ಲಿ ರಾಯರ ಕಾರ್ಯಕ್ಷೇತ್ರ ಬಹಳ ವಿಸ್ತಾರವಾಗಿತ್ತು. ರಾಜಕೀಯದ ಒಳಸುಳಿಗಳೆಲ್ಲಾ ತನಗೆ ಗೊತ್ತಿದೆಯೆಂಬ ಎದೆಗಾರಿಕೆ-ಆತ್ಮವಿಶ್ವಾಸ, ಗಾಂಭೀರ್ಯ ಅವರಲ್ಲಿತ್ತು.

ಗುಂಡೂರಾಯರು ನಿಧನರಾದಾಗ ಕರ್ನಾಟಕ ಪ್ರಮುಖ ದಿನಪತ್ರಿಕೆ ಪ್ರಜಾವಾಣಿ ಸಂಪಾದಕೀಯ (ಆಗಸ್ಟ್ 24, 1993 ಮಂಗಳವಾರ) ಹೀಗೆ ಬಂತು. "ನನಗಿನ್ನು ಚಿಕ್ಕ ವಯಸ್ಸು. ಮತ್ತೆ ಮುಖ್ಯಮಂತ್ರಿಯಾಗಿ ಬರಲು ಬೇಕಾದಷ್ಟು ಸಮಯವಿದೆ-ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡ, 83ರ ಚುನಾವಣೆಯಲ್ಲಿ ಪರಾಭವಗೊಂಡ ನಂತರ ಆರ್. ಗುಂಡೂರಾವ್ ಹೇಳುತ್ತಿದ್ದ ಮಾತುಗಳಿವು. ಭಾನುವಾರ ಬೆಳಿಗ್ಗೆ ದೂರದ ಲಂಡನ್ನಿನಲ್ಲಿ ಸಾವು ಗುಂಡೂರಾವ್

ಅವರ ಸಮಯವನ್ನು ಕಸಿದುಕೊಂಡಿತು. 43ನೇ ವಯಸ್ಸಿಗೇ ಮುಖ್ಯ ಮಂತ್ರಿಯಾದ ಗುಂಡೂರಾವ್ ಅವರ ವರ್ಣರಂಜಿತ, ಆಡಂಬರ, ಅಬ್ಬರದ ಶೈಲಿಯ ಹಿಂದೆ ಇದ್ದುದು ಅವರ ಅತೀವ ಆತ್ಮವಿಶ್ವಾಸ. ಈ ಆತ್ಮವಿಶ್ವಾಸ ಹಾಗೂ ನಡುವಯಸ್ಸನ್ನು ತಲುಪಿದ ಮುಖ್ಯಮಂತ್ರಿಯೊಬ್ಬರ ಅತೀವ ಉತ್ಸಾಹದ ಫಲವಾಗಿ ಕೈಗೊಳ್ಳಲಾಗುತ್ತಿದ್ದ ದಿಢೀರ್ ನಿರ್ಧಾರಗಳು ಎಷ್ಟೋ ಬಾರಿ ವಿವಾದದ ಸುಂಟರಗಾಳಿಯನ್ನೇ ಎಬ್ಬಿಸುತ್ತಿದ್ದವು. ಅದು ಗುಂಡೂರಾವ್ ಶೈಲಿ. ಯಾವುದಕ್ಕೂ ಕಾಯವುದಕ್ಕೆ ಸಮಯವಿಲ್ಲ. ಮುಂದೆ ಅದರ ಪರಿಣಾಮ ಏನಾದೀತೆಂಬ ಅಳುಕಿಲ್ಲ. ತತ್‌ಕ್ಷಣ ಕೆಲಸವಾಗಬೇಕೆನ್ನುವ ಹುಮ್ಮಸ್ಸು ಆಡಳಿತಾತ್ಮಕ ತೊಡಕುಗಳನ್ನು ಗಮನಿಸುತ್ತಿರಲಿಲ್ಲ. ಒಂದು ರೀತಿಯಲ್ಲಿ ಅವರನ್ನು 'ವಿವಾದಗ್ರಸ್ತ ಜನಪ್ರಿಯ' ಮುಖ್ಯಮಂತ್ರಿ ಎಂದೂ ವರ್ಣಿಸಬಹುದು.

ರಾಮರಾವ್ ಗುಂಡೂರಾವ್ ಒಬ್ಬ ಪ್ರಬುದ್ಧ ರಾಜಕಾರಣಿಯಾಗಿಲ್ಲದೇ ಇರಬಹುದು. ಆದರೆ ಅವರ ಎಷ್ಟೋ ರಾಜಕೀಯ 'ಕ್ರಿಯೆ'ಗಳ ಹಿಂದೆ ಕುತಂತ್ರವಿರುತ್ತಿತ್ತೆಂದು ಮಾತ್ರ ಅವರ ಬದ್ಧ ಟೀಕಾಕಾರರೂ ಹೇಳಲಾರರು. ಸರಳ, ಪಾರದರ್ಶಕ ಮನಸ್ಸಿನ ಅವರ ಸಾರ್ವಜನಿಕ ಜೀವನದ ಹಲವು ಸಂದರ್ಭಗಳು ಮನರಂಜಕವೂ ಆಗಿರುತ್ತಿದ್ದವು. ವ್ಯಕ್ತಿ ಪತ್ರಿಕೆಗಳಿಗೆ 'ಗುಡ್ ಕಾಪಿ' ಯಾಗುತ್ತಿದ್ದ ರಾಯರು ಪತ್ರಿಕೆಗಳ ಮೇಲೆ ಸಿಡಿದೇಳುತ್ತಿದ್ದರೂ, ಉತ್ತಮ ಸಂಬಂಧ ಇರಿಸಿಕೊಂಡಿದ್ದರು. ಅವರ ಅಧಿಕಾರದ ಅವಧಿಯಲ್ಲಿ ಆಡಳಿತದಲ್ಲಿ ರಾಜಕಾರಣಿಗಳ ಹಸ್ತಕ್ಷೇಪ ಇರಲಿಲ್ಲ ಎಂಬುದು ಗಮನಾರ್ಹ. ವಾರ್ಷಿಕ ವರ್ಗಾವಣೆಗಳಲ್ಲಿ ಯಾರೂ ಮೂಗು ತೂರಿಸುವಂತಿರಲಿಲ್ಲ. ಸರಕಾರದ ಹಣಕಾಸು ಪರಿಸ್ಥಿತಿ ಚೇತರಿಸಿಕೊಂಡಿತ್ತು. ಗುಂಡೂರಾವ್ ಅವರ ವೈಯಕ್ತಿಕ ಸಾಧನೆ ಎಂದರೆ ಸಮಯ ಪರಿಪಾಲನೆ. ಗುಂಡೂರಾವ್ ಸನ್ಮಾನಗಳು ಗದೆ ಗುರಾಣಿಗಳು, ದಿಢೀರ್ ನಿರ್ಧಾರಗಳು ಎಷ್ಟೇ ಟೀಕೆಗೊಳಗಾಗುತ್ತಿದ್ದರೂ ಅವರ ದಿಟ್ಟತನ, ಹುರುಪು, ನೇರನಡೆಗಳು ಅವರಿಗೆ ಅಭಿಮಾನಿಗಳನ್ನು ಗಳಿಸಿಕೊಟ್ಟಿದ್ದವು. ಅವರ ಅಕಾಲ ಮರಣದಿಂದ ವರ್ಣಮಯ ವ್ಯಕ್ತಿಯೊಬ್ಬರನ್ನು ರಾಜಕೀಯ ರಂಗದಿಂದ ಹಠಾತ್ತನೆ ಸೆಳೆದು ಕೊಂಡಂತಾಗಿದೆ."

# ಭಾಗ - 4

# ಗಣ್ಯರ ದೃಷ್ಟಿಯಲ್ಲಿ ಆರ್. ಗುಂಡೂರಾವ್

## ಗಣ್ಯರ ದೃಷ್ಟಿಯಲ್ಲಿ ಆರ್. ಗುಂಡೂರಾವ್

23 ಆಗಸ್ಟ್ 1993 ರಂದು ಕರ್ನಾಟಕ ವಿಧಾನಸಭೆ ಸಮಾವೇಶಗೊಂಡಂತೆಯೇ ಸಭಾಧ್ಯಕ್ಷ ಶ್ರೀ ವಿ.ಎಸ್.ಕೌಜಲಗಿ: "ಶ್ರೀ ಆರ್. ಗುಂಡೂರಾವ್, ಮಾಜಿ ಮುಖ್ಯಮಂತ್ರಿಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಗುಂಡೂರಾವ್ ಅವರು ರಾಯಲ್ ಫ್ರೀ ಆಸ್ಪತ್ರೆ ಲಂಡನ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಸ್ವದೇಶಕ್ಕೆ ಹಿಂತಿರುಗಲು ಸಿದ್ಧತೆಯಲ್ಲಿದ್ದಾಗ ದಿನಾಂಕ 22-8-1993 ರಂದು ಭಾರತೀಯ ಕಾಲಮಾನ ಬೆಳಿಗ್ಗೆ 11-15ಕ್ಕೆ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇನೆ," ಎಂದು ಪ್ರಕಟಿಸಿ, ಅವರ ಜೀವನ ಸಾಧನೆಯನ್ನು ನೆನಪಿಸಿಕೊಂಡರು.

"ಅವರು ಅತ್ಯಂತ ಕಿರಿಯ ವಯಸ್ಸಿನ ಮುಖ್ಯಮಂತ್ರಿ ಎಂದು ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಶ್ರೀಯುತರು ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ 1937 ರಲ್ಲಿ ಶ್ರೀ ರಾಮರಾವ್ ಅವರ ಪುತ್ರರಾಗಿ ಜನಿಸಿ 1965 ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಹತ್ತು ವರ್ಷಗಳ ಕಾಲ ಕುಶಾಲನಗರದಲ್ಲಿ ಪುರಸಭೆಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಸೋಮವಾರಪೇಟೆ ವಿಧಾನಸಭಾ ಕ್ಷೇತ್ರದಿಂದ 1972 ರಲ್ಲಿ ಚುನಾಯಿತರಾಗಿ 1974 ರಲ್ಲಿ ವಾರ್ತಾ ಸಚಿವರಾಗಿ ದೇವರಾಜ ಅರಸು ಅವರ ಸಂಪುಟವನ್ನು ಸೇರಿದ ಅವರು 1975-76 ರಲ್ಲಿ ವಸತಿ ಮತ್ತು ಯುವಜನ ಸೇವೆ ಸಚಿವರಾದರು. 1978ರಲ್ಲಿ ಪುನಃ ಸಾರಿಗೆ ಮತ್ತು ಪ್ರವಾಸೋದ್ಯಮ ಸಚಿವರಾಗಿದ್ದರು. 1979-80ರಲ್ಲಿ ಅಲ್ಪಕಾಲಾವಧಿಗೆ ವಿರೋಧ ಪಕ್ಷದ ನಾಯಕರಾಗಿದ್ದರು. 1980 ಜನವರಿ 12 ರಂದು ರಾಜ್ಯದ ಒಂಬತ್ತನೆ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. 1989 ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಶ್ರೀಯುತರು ಜನಪ್ರಿಯ ಹಾಗು ಧೀಮಂತ ರಾಜಕಾರಣಿಯಾಗಿದ್ದರು. ಶ್ರೀಯುತರ ನಿಧನದಿಂದ ರಾಜ್ಯಕ್ಕೆ ತುಂಬಲಾಗದ ನಷ್ಟ ಉಂಟಾಗಿದೆ."

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು): - ಸನ್ಮಾನ್ಯ ಅಧ್ಯಕ್ಷರೇ ಕಳೆದ ಅಧಿವೇಶನ ನಂತರ ನಾವುಗಳು ಮತ್ತೆ ಇಂದು ಸೇರುತ್ತಿದ್ದೇವೆ. ಈ ಸಂದರ್ಭದಲ್ಲಿ ನಾವು ರಾಷ್ಟ್ರದ ಮತ್ತು ರಾಜ್ಯದ ಕೆಲವು ಉತ್ತಮ ವ್ಯಕ್ತಿಗಳನ್ನು ಕಳೆದುಕೊಂಡು ಅತ್ಯಂತ ದುಃಖದ ಸನ್ನಿವೇಶದಲ್ಲಿ ಸೇರುತ್ತಿದ್ದೇವೆ. ಅಂಥ ವ್ಯಕ್ತಿಗಳಲ್ಲಿ ನಮ್ಮ ಮಾಜಿ ಮುಖ್ಯಮಂತ್ರಿಗಳಾಗಿದ್ದಂಥ ಶ್ರೀಮಾನ್ ಆರ್ ಗುಂಡೂರಾವ್‌ರವರು ಒಬ್ಬರು. ಅವರು ನಮ್ಮೆಲ್ಲರ ಆತ್ಮೀಯ ಗೆಳೆಯರಾಗಿದ್ದರು. ವಿಶೇಷವಾಗಿ ನನ್ನ ಸನಿಹದಲ್ಲಿ ಸದಾ ಇದ್ದಂಥ ಶ್ರೀಮಾನ್ ಗುಂಡೂರಾವ್ ಮರಣ ಹೊಂದಿದ್ದಾರೆ ಎಂಬುದನ್ನು ನಾನು ನಂಬಲು ಸಾಧ್ಯವಾಗಲಿಲ್ಲ. ಬಹುಶಃ ಒಂದೆರಡು ದಿನಗಳ ಹಿಂದೆ ನಾನು ದೂರವಾಣಿಯ ಮುಖಾಂತರ ಅವರನ್ನು ಸಂಪರ್ಕಿಸಿದಾಗ, ಅವರು ನಾನು 26ನೇ ತಾರೀಖು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುತ್ತಿದ್ದೇನೆ, ನಾನು ಸಂಪೂರ್ಣವಾಗಿ ಗುಣಮುಖನಾಗುತ್ತೇನೆ, ಕೆಲವು ದಿನಗಳ ಕಾಲ

ವಿಶ್ರಾಂತಿಯನ್ನು ಪಡೆದು, ನಾನು ಭಾರತಕ್ಕೆ, ಕರ್ನಾಟಕಕ್ಕೆ ಹಿಂದಿರುಗಿ ಬರುತ್ತೇನೆ ಎಂದು ಬಹಳ ಆತ್ಮವಿಶ್ವಾಸದಿಂದ ಮಾತನಾಡಿದರು. ನಾವೆಲ್ಲಾ, ಅವರು 26ನೇ ತಾರೀಖು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಕೆಲವು ದಿನಗಳ ಕಾಲ ವಿಶ್ರಾಂತಿಯನ್ನು ಪಡೆದು ಮತ್ತೆ ಈ ರಾಷ್ಟ್ರದ ಮತ್ತು ರಾಜ್ಯದ ಸಾಮಾಜಿಕ ಕ್ಷೇತ್ರದಲ್ಲಿ ತಮ್ಮದೇ ಆದಂಥಹ ಶೈಲಿ, ದಿಟ್ಟ ನಿಲುವು ಮತ್ತು ವರ್ಚಸ್ಸಿನಿಂದ ಕ್ರಿಯಾಶೀಲರಾಗಿ ಕಾರ್ಯಕ್ರಮವನ್ನು ಪ್ರಾರಂಭ ಮಾಡುತ್ತಾರೆಂದು ನಿರೀಕ್ಷೆಯಿಂದ ಕಾಯುತ್ತಿರುವಾಗ, ಅವರ ಮರಣದ ವರ್ತಮಾನ ಬಂತು, ನಾವೆಲ್ಲರೂ ಸಹ ಬಹಳ ದಿಗ್ಭ್ರಮೆಗೊಂಡೆವು. ಕರ್ನಾಟಕ ರಾಜ್ಯದ ಎಲ್ಲಾ ಜನರಿಗೂ ದಿಗ್ಭ್ರಮೆಯಾಯಿತು. ಗುಂಡೂರಾವ್‌ರವರು, ಶ್ರೀಮತಿ ಮನೋರಮಾ ಮಧ್ವರಾಜ್ ರವರು ಮತ್ತು ನಾನು ಒಟ್ಟಾಗಿಯೇ ಈ ರಾಜ್ಯದ ಸಚಿವರಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದೆವು. ಆದರೆ, ಗುಂಡೂರಾವ್ ರವರು ನಮಗಿಂತ ಮೊದಲೆ ಸಂಜಯಗಾಂಧಿಯವರ ನಾಯಕತ್ವದಲ್ಲಿ ಯುವಕಾಂಗ್ರೆಸ್‌ನಲ್ಲಿ ಅಧ್ಯಕ್ಷರಾಗಿ ಅತ್ಯಂತ ಲವಲವಿಕೆಯಿಂದ ಕಾರ್ಯ ನಿರ್ವಹಿಸಿದ್ದರು. ಅವರು ಇಡೀ ರಾಜ್ಯದಲ್ಲಿಯೇ ಅತ್ಯಂತ ಕ್ರಿಯಾಶೀಲತೆಯಿಂದ, ವರ್ಚಸ್ಸಿನಿಂದ ಯುವ ಕಾಂಗ್ರೆಸಿನ ಅಧ್ಯಕ್ಷರಾಗಿ ಕೆಲಸ ಮಾಡಿದ್ದರೆಂದು ನಾವೆಲ್ಲರೂ ಸಹ ತಿಳಿದುಕೊಂಡಿದ್ದೇವೆ.

ಮಾನ್ಯ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗುವ ಮೊದಲು ಮಾನ್ಯ ವೀರೇಂದ್ರ ಪಾಟೀಲರು ಅತ್ಯಂತ ಕಿರಿಯ ವಯಸ್ಸಿನ ಮುಖ್ಯಮಂತ್ರಿಗಳೆಂದು ದಾಖಲೆ ಇತ್ತು. ಆದರೆ ರಾವ್‌ರವರು ತಮ್ಮ 43ನೆಯ ವಯಸ್ಸಿನಲ್ಲಿಯೇ ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಪದವಿಯನ್ನು ಪಡೆದು, ಅತ್ಯಂತ ಕಿರಿಯ ವಯಸ್ಸಿನ ಮುಖ್ಯಮಂತ್ರಿಯಾಗಿ ಹಿಂದೆ ಇದ್ದ ದಾಖಲೆಯನ್ನು ಮುರಿದರು.

ಅವರದ್ದು ಅಬ್ಬರ ಇತ್ತು. ಲವಲವಿಕೆ ಇತ್ತು. ಆದರೆ ಅವರಲ್ಲಿ ಒಂದು ವಿಶೇಷವಾದ ಪ್ರಾಮಾಣಿಕತನ ಇತ್ತು. ಅಂತಹ ಪ್ರಾಮಾಣಿಕತನದ ಆಡಳಿತವನ್ನು ಅವರು ಕರ್ನಾಟಕ ರಾಜ್ಯದ ಜನರಿಗೆ ಕೊಟ್ಟಿದ್ದು ಎಂದರೆ ಅತಿಶಯೋಕ್ತಿಯಾಗಲಾರದು. ಕಟ್ಟುನಿಟ್ಟಿನ ಆಡಳಿತಗಾರರಾಗಿದ್ದರು ಅವರು. ವಿವಾದಾಸ್ಪದವಾದಂತಹ ಮುಖಂಡರು - ನಾನು ಆ ಒಂದು ಸಂದರ್ಭದಲ್ಲಿ ಹಣಕಾಸು ಸಚಿವನಾಗಿ ಕೆಲಸ ಮಾಡಿದ್ದೆ. ಹಾಗೆಯೇ ಅವರ ಆಡಳಿತದಲ್ಲಿ ಚುರುಕಿತ್ತು. ಆಡಳಿತದಲ್ಲಿ ಕ್ರಿಯಾಶೀಲತೆಯಿತ್ತು. ಆಡಳಿತದಲ್ಲಿ ಪ್ರಾಮಾಣಿಕತೆ ಇತ್ತು. ಕಟ್ಟುನಿಟ್ಟಿನ ಆಡಳಿತ ಸಂಸ್ಕೃತಿಯನ್ನು ಕರ್ನಾಟಕ ರಾಜ್ಯದಲ್ಲಿ ಅವರು ಸ್ಪಷ್ಟವಾಗಿ ಕೊಟ್ಟಿದ್ದಾರೆಂದು ಹೇಳಿದರೆ ಅದು ತಪ್ಪಾಗಲಾರದು. ಇದನ್ನು ಕಂಡು ಅತ್ಯಂತ ಸಮೀಪದಲ್ಲಿರತಕ್ಕಂತಹ ನಾನು ಅಭಿಮಾನ ಪಟ್ಟೆ. ಅನಂತರ ಗುಂಡೂರಾಯರು ಪಾರ್ಲಿಮೆಂಟಿಗೆ ಹೋದರು.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) - ಮಾನ್ಯ ಅಧ್ಯಕ್ಷರೆ ಇಷ್ಟು ಬೇಗನೆ ಮಾನ್ಯ ಗುಂಡೂರಾಯರು ನಮ್ಮಿಂದ ಅಗಲಿ ಹೋಗುತ್ತಾರೆಂದು ನಾವು ನಂಬಿರಲಿಲ್ಲ. ಮುಖ್ಯಮಂತ್ರಿಗಳು ಹೇಳಿದಂತೆ ಕೊಡುಗು ಜಿಲ್ಲೆಯಲ್ಲಿ ಬಹಳ ಬಡ ಕುಟುಂಬದಲ್ಲಿ ಹುಟ್ಟಿ ಅಲ್ಲಿಂದ ಪುರಸಭೆಯ ಅಧ್ಯಕ್ಷರಾಗಿ ತನ್ನ ಛಲದಿಂದ, ಅತ್ಯಂತ ಕಷ್ಟದಿಂದ ಮತ್ತು ಅತಿ ಮುಖ್ಯವಾಗಿ ಶ್ರೀಮತಿ ಇಂದಿರಾಗಾಂಧಿ ಅವರ ಸಹಕಾರದಿಂದ ಅತಿ ಚಿಕ್ಕ ವಯಸ್ಸಿನಲ್ಲಿಯೇ ಈ ರಾಜ್ಯದ ಮುಖ್ಯಮಂತ್ರಿಯಾದರು.

ನಮ್ಮ ದಕ್ಷಿಣ ರಾಜ್ಯದ ಒಂದು ಸಮ್ಮೇಳನ ಇತ್ತು. ಆಗ ನಮ್ಮ ನಾಯಕರಾದ ಶ್ರೀ ಬೊಮ್ಮಾಯಿಯವರು ನಮ್ಮ ರಾಜ್ಯದ ಜನತಾ ಪಕ್ಷದ ಅಧ್ಯಕ್ಷರು ಆಗಿದ್ದರು. ನಾನು ಮತ್ತು ಶ್ರೀ ದೇವೇಗೌಡರು ಗುಂಡೂರಾಯರನ್ನು ಭೇಟಿಯಾಗಲು ಹೋದೆವು. ಆಗ ಅವರು ಮುಖ್ಯಮಂತ್ರಿಗಳು ಆಗಿದ್ದರು. ನಮ್ಮ ಮಹನೀಯರು, ಕಾರ್ಯಕರ್ತರು ಬರುತ್ತಾರೆ. ಅವರಿಗೆ ತೊಂದರೆಯಾಗಬಾರದು, ನೀರಿನ ವ್ಯವಸ್ಥೆಯಾಗಬೇಕು ಎಂದು ಆ ಸಮಯದಲ್ಲಿ ತಕ್ಷಣ ನಗರಾಭಿವೃದ್ಧಿ ಸಚಿವರಾದ ಶ್ರೀ ಧರಂಸಿಂಗ್ ರವರಿಗೆ ಫೋನ್ ಮಾಡಿದರು. ಇವೆಲ್ಲಾ ವ್ಯವಸ್ಥೆಯಾಗಬೇಕೆಂದು ಅವರಿಗೆ ಹೇಳಿದರು. ಸಮ್ಮೇಳನ ಚೆನ್ನಾಗಿ ನಡೆಯಲಿ, ಇನ್ನು ಏನಾದರೂ ಸಹಾಯ ಆಗಬೇಕಾದರೆ ಕೇಳಿ ಎಂದರು. ಇದು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಅವರು ಕಾಂಗ್ರೆಸ್ ಪಕ್ಷದವರಾಗಿದ್ದರೂ ಸಹಾ ಅವರಿಗೆ ಯಾರ ಮೇಲೂ ದ್ವೇಷವಿರಲಿಲ್ಲ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಕ್ಕೂ ಸಹ ಅವರು ಸಾಕಷ್ಟು ಗೌರವ ಕೊಡುತ್ತಿದ್ದರು. ಇವತ್ತು ಅವರು ನಮ್ಮಲ್ಲಿ ಇಲ್ಲ. ಆದರೆ, ಅವರ ಪರ್ಸನಾಲಿಟಿಗೆ ನಾವು ಬರಲು ಸಾಧ್ಯವಿಲ್ಲ. ಅಂತಹ ಒಂದು ಪರ್ಸನಾಲಿಟಿ ನಮ್ಮಲ್ಲಿ ಬಹಳಷ್ಟು ಕಡಿಮೆ ಇದೆ ಎಂದು ನಾನು ಹೇಳುತ್ತೇನೆ. ಎಲ್ಲರ ಜೀವನದಲ್ಲಿ ಲೋಪದೋಷಗಳು ಇವೆ. ನನ್ನ ಜೀವನದಲ್ಲಿ ಲೋಪದೋಷಗಳು ಇವೆ. ಆದರೆ, ಅವರು ಈ ನಾಡಿನ ಅಭಿವೃದ್ಧಿಯ ಸಲುವಾಗಿ ಸಾಕಷ್ಟು ದುಡಿದಿದ್ದಾರೆ. ಸಾಕಷ್ಟು ಪ್ರಾಮಾಣಿಕರಾದ ಅವರು ಅಧಿಕಾರದಲ್ಲಿರಲಿ ಇಲ್ಲದಿರಲಿ ಒಂದು ವಿಶೇಷವಾದ ಪರಿಸ್ಥಿತಿ ಏಕೆಂದರೆ ಅವರ ಆ ಒಂದು ವ್ಯಕ್ತಿತ್ವ ಮತ್ತು ಅವರ ವರ್ಚಸ್ಸು ಎಂದು ಕೂಡಾ ಕಡಿಮೆಯಾಗಿರಲಿಲ್ಲ. ತಮ್ಮದೇ ಆದಂತಹ ವಿಶೇಷವಾದಂತಹ ಅಪಾರವಾದ ಅಭಿಮಾನಿಗಳ ತಂಡವನ್ನು ಅವರು ಹೊಂದಿದ್ದರು. ಎಲ್ಲೇ ಹೋದರು ಕೂಡಾ ಅವರು ಅಭಿಮಾನಿಗಳನ್ನು ಸಂಪಾದನೆ ಮಾಡಿದ್ದರು. ಅದು ಕರ್ನಾಟಕದಲ್ಲಿನ ಯಾವುದೇ ಜಿಲ್ಲೆಯಲ್ಲಿರಬಹುದು ಅಥವಾ ದೆಹಲಿಯಲ್ಲಿ ಇರಬಹುದು. ಅವರು ವಿಶೇಷವಾದಂತಹ ಆಕರ್ಷಣೀಯ ವ್ಯಕ್ತಿಯಾಗಿದ್ದರು. ತನ್ನದೇ ಆದಂತಹ ಸ್ವಂತ ವ್ಯಕ್ತಿತ್ವದಿಂದ ಜನತೆಯನ್ನು ಆಕರ್ಷಣೆ ಮಾಡತಕ್ಕಂತಹ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಂಡು ಉತ್ತಮ ಮುಖಂಡರಾಗಿದ್ದರು. ಅವರಿಗೆ ಇನ್ನೂ ಸಾಯತಕ್ಕಂತಹ ವಯಸ್ಸಾಗಿರಲಿಲ್ಲ. 56 ವರ್ಷ ಅಂದರೆ ಅದು ಏನೂ ಅಲ್ಲ. ಅವರು ತಮ್ಮ ಗೆಳೆಯರೆಂದರೆ ಯಾವ ತ್ಯಾಗಕ್ಕೂ ಸಿದ್ಧವಾಗುವಂತಹ ವ್ಯಕ್ತಿತ್ವವನ್ನು ಹೊಂದಿದ್ದರು. ಅಂತಹ ಒಂದು ನಿಸ್ವಾರ್ಥತೆ ಗುಂಡೂರಾಯರಲ್ಲಿ ಯಾವಾಗಲೂ ಇತ್ತು. ಅಂತಹ ಒಬ್ಬ ಪ್ರಮುಖವಾದಂತಹ

ಕ್ರಿಯಾಶೀಲರಾದಂತಹ ವಿಶೇಷ ಆಕರ್ಷಣೆಯ ವರ್ಚಸ್ಸಿನ ಮುಖಂಡರನ್ನು ಕಳೆದುಕೊಂಡು ನಮ್ಮ ರಾಜ್ಯವೂ ಕೂಡಾ ದೊಡ್ಡ ನಷ್ಟ ಅನುಭವಿಸಿದೆ. ನಮ್ಮ ರಾಜ್ಯದಲ್ಲಿ ಒಬ್ಬ ಕಿಯಾಶೀಲ ವ್ಯಕ್ತಿ ಕಣ್ಮರೆಯಾಗಿದ್ದಾರೆ. ವಿಶೇಷವಾದ ನಷ್ಟ ನಮ್ಮ ರಾಜ್ಯಕ್ಕೆ, ರಾಷ್ಟ್ರದ ಮಟ್ಟಿಗೆ ಆಗಿದೆ ಎಂದು ನಾನು ಬಹಳ ವ್ಯಸನದಿಂದ, ಖೇದದಿಂದ ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಗುಂಡೂರಾಯರು ತೀರಿಕೊಂಡಿದ್ದಾರೆ ಎಂದರೆ ನಂಬಲಿಕ್ಕೇ ಆಗುವುದಿಲ್ಲ. ಅವರಲ್ಲಿ ಯಾವಾಗಲೂ ಇರತಕ್ಕಂತಹ ಉತ್ಸಾಹ, ಲವಲವಿಕೆ ಏನಿತ್ತು, ಅದು ಒಂದು ಪ್ರೇಮಮಯಿ ಸ್ವರೂಪವಾಗಿತ್ತು. ಅದು ಯಾವಾಗಲೂ ನಮ್ಮ ಜೊತೆಯಲ್ಲಿ ಅವರು ಇದ್ದಾರೆಂಬ ಭಾವನೆ ನಮಗಾಗುತ್ತದೆ. ಅವರ ಕುಟುಂಬಕ್ಕೆ ಈ ಸದನದ ಮೂಲಕ ಸಂತಾಪ ವ್ಯಕ್ತಪಡಿಸುತ್ತಿದ್ದೇನೆ. ಈ ಸದನದ ಮೂಲಕ ವಿಶೇಷವಾಗಿ ರಾಜ್ಯದ ಜನತೆಯ ಪರವಾಗಿ ನಾವು ಸಂತಾಪವನ್ನು ಶ್ರದ್ಧಾಂಜಲಿಯನ್ನು ಸಮರ್ಪಿಸಿ ಎರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ, ಅವರು ತನ್ನ ಮನಸ್ಸಿನಲ್ಲಿ ಏನು ಬರುತ್ತದೆಯೋ ಅದನ್ನೆಲ್ಲಾ ಹೇಳಿ ಬಿಡುತ್ತಿದ್ದರು. ನಾನು ಕೋಳಿ ತಿನ್ನುವ ಬ್ರಾಹ್ಮಣ, ಅಂದರೆ ಅದರ ಅರ್ಥವನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅಂದರೆ ನಾನು ಬಡಜನರ ಪರವಾಗಿ ಇದ್ದೇನೆ, ಹಿಂದುಳಿದ ಜನರ ಪರವಾಗಿ ಇದ್ದೇನೆ ಅಂತ. ಈ ತರಹ ಭಾವನೆ ಅವರಲ್ಲಿ ಇತ್ತು. ಅಂತಹ ಒಂದು ನಾಯಕತ್ವವನ್ನು ನಾವು ಕಳೆದುಕೊಂಡಿದ್ದೇವೆ. ಇದರಿಂದ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಹಾನಿಯಾಗಿಲ್ಲ, ಅದಕ್ಕಿಂತ ಹೆಚ್ಚಿನ ಹಾನಿ ರಾಜ್ಯಕ್ಕೆ, ನಮ್ಮ ದೇಶಕ್ಕೆ ಆಗಿದೆ. ಚಿಕ್ಕವಯಸ್ಸಿನ ಸನ್ಮಾನ್ಯ ಗುಂಡೂರಾವ್‌ರವರನ್ನು ಕಳೆದುಕೊಂಡು ನಾವೆಲ್ಲರೂ ತಬ್ಬಲಿಗಳಾಗಿದ್ದೇವೆ.

ಶ್ರೀ ಸಿ. ಭೈರೇಗೌಡ (ವೇಮಗಲ್) ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಈ ಸದನದ ಅತ್ಯಂತ ದುಃಖಕರವಾದ ಸಂದರ್ಭದಲ್ಲಿ ನಾವು ಭಾಗವಹಿಸುತ್ತಿದ್ದೇವೆ. ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಂತಹ ಶ್ರೀ ಗುಂಡೂರಾಯರು ಮರೆಯಾಗಿದ್ದಾರೆ. ಈ ರಾಜಕೀಯದ ಬಿರುಗಾಳಿಯಲ್ಲಿ ಯಾರು ಯಾರು ಎಲ್ಲೆಲ್ಲಿಂದಲೋ ಬಂದು ಸೇರತಕ್ಕ ಅವಕಾಶಗಳನ್ನು ನಮ್ಮ ದೇಶದ ರಾಜಕೀಯದಲ್ಲಿ ಮತ್ತು ಬೇರೆ ದೇಶದ ರಾಜಕೀಯದಲ್ಲೂ ಕಾಣುತ್ತೇವೆ. ಅದೇ ರೀತಿಯಲ್ಲಿ ಶ್ರೀ ಗುಂಡೂರಾಯರು ರಾಜಕೀಯದ ಬಿರುಗಾಳಿಯಲ್ಲಿ ಒಬ್ಬ ಸಾಮಾನ್ಯರಲ್ಲಿ ಸಾಮಾನ್ಯರಾಗಿದ್ದಂತಹವರು, ಒಬ್ಬ ಬಸ್ಸಿನ ಏಜೆಂಟ್‌ರಾಗಿದ್ದಂಥವರು ಇಲ್ಲಿ ಸದನದಲ್ಲಿ ಮುಖ್ಯಮಂತ್ರಿಗಳಾಗಿ ಕುಳಿತುಕೊಳ್ಳತಕ್ಕ ಅವಕಾಶ ಬಹುಶಃ ಬೇರೆ ಕಡೆ ನಡೆದಿರಲಿಕ್ಕೆ ಸಾಧ್ಯವಿಲ್ಲ. ಶ್ರೀ ಗುಂಡೂರಾಯರನ್ನು ನಾನು ಬಹಳ ಹತ್ತಿರದಿಂದ ಬಲ್ಲೆ. 1972 ರಲ್ಲಿ ಪ್ರಥಮವಾಗಿ ಅವರು ಈ ಸಭೆಯ ಸದಸ್ಯರಾಗಿ ಬಂದರು. ನಾನೂ ಸಹ ಅದೇ ಸಂದರ್ಭದಲ್ಲಿ ಈ ಸಭೆಗೆ ಆಯ್ಕೆಯಾಗಿ ಬಂದೆ. ನನಗೂ ಅವರಿಗೂ 3 ವರ್ಷ ವಯಸ್ಸಿನಲ್ಲಿ ವ್ಯತ್ಯಾಸ ಅಷ್ಟೆ. ಸಮಕಾಲೀನರಾಗಿ ಕೆಲಸ ಮಾಡತಕ್ಕ ಅವಕಾಶ ಸಿಕಿತ್ತು. ಅಷ್ಟೇ ಅಲ್ಲದೆ ಅನೇಕ ಸಂದರ್ಭಗಳಲ್ಲಿ ಅವರನ್ನು ನಾನು ವೈಯಕ್ತಿಕವಾಗಿ ಭೇಟಿಯಾಗುವ, ಅವರ ಹತ್ತಿರ ಚರ್ಚೆ ಮಾಡತಕ್ಕ ಮತ್ತು ಮಾತನಾಡತಕ್ಕ ಅವಕಾಶಗಳು ವಿಪುಲವಾಗಿ ದೊರೆತಿದ್ದವು.

ಅವರು ಕಂಡದ್ದನ್ನು ಕಂಡ ಹಾಗೆ ಹೇಳಿಯೇ ತೀರುತ್ತಿದ್ದರು. ಅದಕ್ಕೆ ಸಾಕಷ್ಟು ಉದಾಹರಣೆಗಳು ಇವೆ. ಪತ್ರಿಕಾರಂಗದ ಬಗ್ಗೆ ಅವರು ಹೇಳಿರತಕ್ಕ ಮಾತು, ರಾಜಕೀಯರದಲ್ಲಿರತಕ್ಕವರಿಗೆ ಹೇಳಿದ ಮಾತು, ಹೊನ್ನು, ಹೆಣ್ಣು, ಮಣ್ಣು ಈ ಮೂರರ ಬಗ್ಗೆ ಆಕರ್ಷಿತರಾಗದೆ ಇರತಕ್ಕವರು ಯಾರೂ ಇಲ್ಲ. ಗುಂಡೂರಾಯರು ಎಲ್ಲರ ಬಗ್ಗೆ ಆಕರ್ಷಿತರಾಗಿರತಕ್ಕವರಾಗಿದ್ದರು. ಅವರ ದೊಡ್ಡಸ್ತಿಕೆ ಏನೆಂದರೆ ಅವರೇ ಹೇಳುತ್ತಿದ್ದರು. ಇದನ್ನು ರಾಜಕೀಯದಲ್ಲಿರತಕ್ಕವರು ಅನೇಕ ಜನ ಮಾಡುವುದಿಲ್ಲ. ಅಂಥ ಎದೆಗಾರಿಕೆ, ದಿಟ್ಟತನ ಇರತಕ್ಕದಾಗಿದ್ದರು. ಅವರನ್ನು ಈ ರಾಜ್ಯದ ರೈತರು ಮರೆಯುವುದಕ್ಕೆ ಸಾಧ್ಯವಿಲ್ಲ. ನಮ್ಮ ಕಡೆ ಇವತ್ತು ಯಾವುದೇ ಹಳ್ಳಿಯಲ್ಲಿ ನೀರಾವರಿ ಪಂಪ್ಸುಸೆಟ್ಟುಗಳನ್ನು, ವಿದ್ಯುಚ್ಛಕ್ತಿಯನ್ನು ಉಪಯೋಗಿಸತಕ್ಕ ರೈತರು ಯಾರಿದ್ದಾರೆ ಅವರನ್ನು ಕೇಳಿದರೆ ಗುಂಡೂರಾಯರ ಕಾಲದಲ್ಲಿ ಉಚಿತವಾಗಿ ವಿದ್ಯುಚ್ಛಕ್ತಿ ದೊರಕಿತ್ತು ಎಂದು ಹೇಳುತ್ತಾರೆ. ಈ ಮಾತು ಪ್ರತಿ ಹಳ್ಳಿಹಳ್ಳಿಯಲ್ಲಿ ಜನಜನಿತವಾಗಿದೆ. ಒಂದು ಕಡೆಯ ಚಿತ್ರ ಈ ತರಹ ಇದ್ದರೆ ಇನ್ನೊಂದು ಕಡೆ ಸುಮಾರು 139 ಜನ ರೈತರನ್ನು ಅವರು ಮುಖ್ಯಮಂತ್ರಿಯಾಗಿದ್ದಂತಹ ಕಾಲದಲ್ಲಿ ಅವರ ಗುಂಡಿಗೆ ಆಹುತಿಯಾಗಿರತಕ್ಕಂತಹ ಉದಾಹರಣೆ ಕೂಡ ಇದೆ.

ಈ ರೀತಿಯಾಗಿ ಕಂಡದ್ದನ್ನು ಮಾಡತಕ್ಕಂಥಾದ್ದು, ಮಾಡಿದ್ದನ್ನು ಹೇಳತಕ್ಕಂಥಹ ಎದೆಗಾರಿಕೆಯುಳ್ಳಂತಹ ವ್ಯಕ್ತಿತ್ವ ಅವರದು. ನಿರ್ದಾಕ್ಷಿಣ್ಯರಾಗಿ ಅವರು ಚುನಾವಣೆ ಸಂದರ್ಭದಲ್ಲಿ ಕೆಲವು ಕಡೆ ಹೋಗಿ ಮಾತನಾಡುತ್ತಾ ಚುನಾವಣೆಗೆಲ್ಲಾ ಹಣವನ್ನು ಯಾರು ಕೊಟ್ಟರು ಎಂದು ನೇರವಾಗಿ ಹೇಳುತ್ತಿದ್ದರು. ಈ ತರಹ ನೇರವಾಗಿ ನುಡಿಯತಕ್ಕಂಥವರು ಬಹುಶಃ ಯಾರೂ ಇಲ್ಲ. ಹಣವನ್ನು ಯಾರು ಕೊಡುತ್ತಾರೆ, ಯಾವ ರೀತಿ ಚುನಾವಣೆ ನಡೆಯುತ್ತದೆ ಎನ್ನತಕ್ಕಂಥದ್ದನ್ನು ನೇರವಾಗಿ ಹೇಳತಕ್ಕಂಥವರು ಯಾರನ್ನು ಕೂಡ ನನ್ನ ಕಣ್ಣೆದುರಿಗೆ ನೋಡಿದಂಥಹ ಉದಾಹರಣೆ ಇರಲಿಲ್ಲ. ಇಂತಹ ವೈರುಧ್ಯಗಳಿಗೆ ಹೆಸರಾಗಿದ್ದ ಶ್ರೀ ಗುಂಡೂರಾಯರು ಇವತ್ತಿನ ದಿವಸ ನಮ್ಮ ಕಣ್ಣ ಮುಂದೆ ಇಲ್ಲ. ಅವರ ಒಳ್ಳೆಯತನವನ್ನು ಈ ಜನ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆ. ಅವರು ರೈತರಿಗೆ ಪಂಪುಸೆಟ್ಟಿಗೆ ಉಚಿತವಾಗಿ ವಿದ್ಯುತ್ತನ್ನು ನೀಡಿರತಕ್ಕಂಥಾದ್ದು, ಅವರು ಮಾಡಿರತಕ್ಕಂತ ಕೆಟ್ಟ ಕೆಲಸ ಎಂದರೆ ಅವರ ಕಾಲದಲ್ಲಿ 139 ಜನ ರೈತರನ್ನು ಗುಂಡಿಟ್ಟು ಸಾಯಿಸಿದ್ದನ್ನು ಕೂಡ ರಾಜ್ಯದ ರೈತರು ಜ್ಞಾಪಕದಲ್ಲಿಟ್ಟುಕೊಂಡಿರುತ್ತಾರೆ. ಈ ರೀತಿಯಾಗಿ ಅವರ ವರ್ಣಮಯವಾದಂತಹ ರಾಜಕೀಯ ಜೀವನದಲ್ಲಿ ಅವರು ಮಾಡಿರತಕ್ಕಂತಹ ಅನೇಕ ಒಳ್ಳೆಯ ಕೆಲಸವನ್ನು ಮತ್ತು ಕೆಟ್ಟದ್ದನ್ನು ರಾಜ್ಯದ ಜನತೆ ಬಹಳಷ್ಟು ಕಾಲದಲ್ಲಿ ಜ್ಞಾಪಕದಲ್ಲಿಟ್ಟುಕೊಂಡಿರುತ್ತಾರೆ. ಅಂತಹ ವ್ಯಕ್ತಿ ಇವತ್ತಿನ ದಿವಸ ನಮ್ಮ ಕಣ್ಣ ಮುಂದಿಲ್ಲ, ಸ್ನೇಹಿತರಲ್ಲಿ ಅವರನ್ನೇ ನಂಬಿರತಕ್ಕಂಥವರು ಎಂದರೆ, ಅತ್ಯಂತ ಹತ್ತಿರದ ಸ್ನೇಹಿತರಾಗಿದ್ದರೆ ಅವರು ಎಲ್ಲಾ ಮಟ್ಟಕ್ಕೂ ಹೋಗಿ ಅವರಿಗೆ ಸಹಾಯ ಮಾಡತಕ್ಕಂಥಹ ಒಂದು ವ್ಯಕ್ತಿತ್ವ ಅವರದು. ಅವರಿಗೆ ನಾನು ಶ್ರದ್ಧಾಂಜಲಿಯನ್ನ ಅರ್ಪಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) - ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ರಾಜ್ಯ ಕಗ್ಗತ್ತಲಿನಲ್ಲಿ ಇದೆ, ಮತ್ತು ಇದನ್ನ ಬಹಳ ನೋವಿನಿಂದ ಹೇಳುತ್ತಿದ್ದೇನೆ. ಈ ಶಾಸನಸಭೆ ಪ್ರಾರಂಭವಾದಾಗಿನಿಂದಲೂ ಒಂದೊಂದು ರೀತಿಯ ದುಃಖದ ವಾತಾವರಣದಲ್ಲಿ ನಾವು ಪ್ರಾರಂಭಮಾಡುತ್ತಿದ್ದೇವೆ ..... ಶ್ರೀಮಾನ್ ಗುಂಡೂರಾಯರಿಗೆ ಈ ಸಭೆ ಸಂತಾಪ ಸೂಚಿಸುತ್ತದೆ ಇಷ್ಟು ಬೇಗ ಎಂದು ನಾವು ಯಾರೂ ಅಂದುಕೊಂಡಿರಲಿಲ್ಲ. ಈ ಒಂದು ವ್ಯಕ್ತಿತ್ವದ ಬಗ್ಗೆ ನಾನಂತೂ ಬಹಳ ಹತ್ತಿರದಿಂದ ಸ್ನೇಹಿತನಾಗಿ ನೋಡಿದ್ದೇನೆ. ಅವರ ಸಾವನ್ನು ಅವರೇ ಕಂಡಿದ್ದರೋ ಇಲ್ಲವೋ ಎನ್ನುವಷ್ಟು ನೋವು ಆಗುತ್ತದೆ. ಮಗನನ್ನು ಮತ್ತು ಸೊಸೆ ಆಗುವಾಕೆಯನ್ನು ಕರೆಯಿಸಿ ತಮ್ಮ ಎದುರೇ ಮದುವೆಯಾಗಲಿ ಎಂದು ಇಬ್ಬರನ್ನು ಕೈಹಿಡಿಸಿದ ಆ ಒಂದು ವಾತಾವರಣ ಅವರು ಎಷ್ಟು ಹೃದಯ ಬಿಚ್ಚಿ ಯಾವ ರೀತಿ ಸಾಗುತ್ತಿದ್ದರು ಎನ್ನಿಸುತ್ತದೆ. ಬಹಳ ದಿವಸ ನಾವು ಅವರ ಜೊತೆಯಲ್ಲಿ ಸ್ನೇಹಿತರಾಗಿದ್ದೆವು. ಅವರ ಆ ಒಂದು ವ್ಯಕ್ತಿತ್ವ ಎಲ್ಲಾ ದೃಷ್ಟಿಯಿಂದಲೂ ವರ್ಣಮಯವಾಗಿತ್ತು. ಅವರ ಮುಖ್ಯಮಂತ್ರಿ ಪದವಿ ಮುಗಿದ ನಂತರವೂ, ಅವರು ಯಾವುದೇ ಸಾರ್ವಜನಿಕ ಸಭೆಗೆ ಬಂದರೂ ಅವರದೇ ಆದ ಒಂದು ವಿಶಿಷ್ಟ ಅಧಿಕಾರ ಅವರ ವ್ಯಕ್ತಿತ್ವದಲ್ಲಿ ಎಂದು ಕಾಣುತ್ತಿತ್ತು.

ನೇರವಾದ ಮಾತುಗಾರಿಕೆ ದಿಟ್ಟತನ, ಗತ್ತುಗಾರಿಕೆ. ಅವರು ಮಾತನಾಡುತ್ತಿದ್ದರೆ, ನುಡಿದದ್ದೆಲ್ಲವೂ ಮಾತೇ. ಮಾತನಾಡುವಾಗ ಹಿಂದೆ ಮುಂದೆ ಯೋಚನೆ ಮಾಡಿ ಮಾತನಾಡುತ್ತಿರಲಿಲ್ಲ. ಯೋಚನೆ ಮಾಡಿ ಹೇಳಬೇಕೆನ್ನುವ ಭಾವನೆ ಇರಲಿಲ್ಲ. ನೇರವಾಗಿ ಎಲ್ಲವನ್ನೂ ಹೇಳುತ್ತಿದ್ದರು. ನಾನು ಹೇಳಿದ್ದೇ ಸರಿ ಎಂದು ಹೇಳುತ್ತಿದ್ದರು. ಅವರನ್ನು ನೋಡಬೇಕೆನ್ನುವ ಆಕಾಂಕ್ಷೆಯಿಂದ ಲಂಡನ್‌ಗೂ ಹೋಗಬೇಕೆಂದು ಪ್ರಯತ್ನಪಟ್ಟು ನಾನು ವೆಂಕಟೇಶ್ ಅವರಿಗೆ ಹೇಳಿದೆ. ಪಾಸ್‌ಪೋರ್ಟ್ ಮಾಡೋಣ, ಏನಾದರೂ ಮಾಡಿ ಹೋಗೋಣ ಎಂದು ಹೇಳಿ ನಾನು ಪಾಸ್‌ಪೋರ್ಟ್ ಕಛೇರಿಯಿಂದ ಫಾರಂ ಕೂಡ ತರಿಸಿದೆ. ಧರ್ಮಸಿಂಗ್ ಹಾಗೂ ಖರ್ಗೆಯವರು ಹೋಗುತ್ತಾರೆಂದು ಗೊತ್ತಾದಾಗ, ನನ್ನೊಬ್ಬನನ್ನು ಕರೆದುಕೊಂಡು ಹೋಗಿ ನಾನು ಬರಬೇಕಾಗಿದೆ ಎನ್ನುವಷ್ಟು ವ್ಯಕ್ತಿತ್ವ ಅವರಲ್ಲಿತ್ತು. ಆ ವ್ಯಕ್ತಿತ್ವವನ್ನು ಇನ್ನು ನಾವು ಕಾಣುವುದಕ್ಕೆ ಸಾಧ್ಯವಿಲ್ಲ.

ನಾನು ಮತ್ತು ಅವರು ಭಾಗವಹಿಸಿದ್ದ ಕೊನೆಯ ಸಭೆ ಮಂಡ್ಯದಲ್ಲಿ ಆ ರೈತ ಸಮ್ಮೇಳನ. ಆ ಸಭೆಗೆ ಶಾಸಕರು ಯಾರೂ ಹೋಗಬಾರದು ಎನ್ನುವ ಸನ್ನಿವೇಶ ಇದ್ದಾಗ ಮಾಜೀ ಮುಖ್ಯಮಂತ್ರಿಯಾಗಿ ನಾನು ಬರುತ್ತೇನೆಂದರು. ರೈತ ಚಳವಳಿಗೆ ನನ್ನ ಜೀವ ಕೊಡುವುದಕ್ಕೆ ಸದಾ ಸಿದ್ಧ ಎಂದು ಅವರು ಗುಡುಗಿದ್ದರು. ಆ ಸಭೆಯಲ್ಲಿ ಚಂದ್ರೇಗೌಡರು ಇದ್ದರು; ವಿರೋಧಪಕ್ಷದ ನಾಯಕರೂ ಇದ್ದರು. ಆ ವ್ಯಕ್ತಿತ್ವ, ಸ್ವಚ್ಛಂದ ಹೃದಯ, ಆ ಹೃದಯವಂತಿಕೆ, ಆ ಕರುಣಾಮಯ ಸ್ನೇಹಜೀವಿ ನಾಲ್ಕು ಕೋಟಿ ಜನರ ಮಧ್ಯೆ ನಿಂತಾಗ ಬಹಳ ಎತ್ತರವಾಗಿ ಕಾಣುತ್ತಿದ್ದರು. ಅಂತಹ ಒಬ್ಬ ಧೀಮಂತ ವ್ಯಕ್ತಿತ್ವವುಳ್ಳವರನ್ನು ನಾವು ಕಳೆದುಕೊಂಡಿದ್ದೇವೆ. ಇವತ್ತು ಈ ವಿಧಾನಸೌಧದ ಮುಂದೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆ

ಬರಬೇಕಾದರೆ ಗುಂಡೂರಾಯರೇ ಕಾರಣ: ಇನ್ನು ಯಾರೂ ಅಲ್ಲ. ಅವರನ್ನು ಈ ನಾಡಿಗೆ ನಾಡೇ ನೆನೆಸಿಕೊಳ್ಳಬೇಕಾಗಿದೆ. ಎಂತಹ ನಷ್ಟ ಆಗಿದೆ ಎಂದರೆ ಎಣಿಸಲಾರದಷ್ಟು ಆಗಿದೆ.

ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ತಂದೆ ನನ್ನ ಹತ್ತಿರ ಬಂದು ನೀವಾದರೂ ಹೇಳಿ, ನಾನೊಂದು ವರ್ಗ ಮಾಡಿಸಬೇಕು, ನನ್ನ ಮಾತು ಕೇಳುವುದಿಲ್ಲ, ನನ್ನ ಮಗ ಎಂದು ಹೇಳಿದರು. ನಾನು ಹೇಳುವಾಗಲೇ ಅವರಿಗೆ ಗೊತ್ತಾಯಿತು. ನಮ್ಮ ತಂದೆಯವರು ಹೇಳಿದ್ದಾರಲ್ಲವೆ ನಿಮಗೆ, ಖಂಡಿತಾ ನಮ್ಮ ತಂದೆಯವರು ಹೇಳಿದರೂ ನಾನು ಮಾಡುವುದಿಲ್ಲವೆಂದರು. ನಗುನಗುತ್ತಾ, ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದರು.

ಮತ್ತೆ ಯಾವಾಗಲೂ ಕಾಲು ಕೆರೆದು ಜಗಳ ತೆಗೆದು ಮೈಮೇಲೆ ಹಾಕಿಕೊಳ್ಳತಕ್ಕದ್ದೆ ಅವರ ಸ್ವಭಾವ. ಮಂಗಳೂರಿನಲ್ಲಿ ಭಾಷಣ ಮಾಡಿ, ಪತ್ರಕರ್ತರನ್ನೆಲ್ಲ ಅರಬ್ಬಿ ಸಮುದ್ರಕ್ಕೆ ಹಾಕಬೇಕೆಂದು ಹೇಳಿದರು. ಅಲ್ಲಿಂದ ಪತ್ರಿಕೆಯವರಿಗೂ ಅವರಿಗೂ ಒಂದೇ ಸಮನೆ ಯುದ್ಧ ನಡೆಯಿತು. ನಡೆದು ನಡೆದು ಕೊನೆಗೆ ದೊಡ್ಡ ಯುದ್ಧವೇ ಆಯಿತು. ಕೊನೆಯಲ್ಲಿ ಅವರು ಸೋತಾಗ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ವ್ಯಂಗ್ಯಚಿತ್ರ ಬಂತು. ಅವರ ಹೆಲಿಕಾಪ್ಟರ್ ಒಂದು ಬಂಡೆಗೆ ಹೊಡೆದು ಚೂರುಚೂರಾಗಿರತಕ್ಕ ದೃಶ್ಯ. ಅಂದರೆ ಎಷ್ಟು ಕ್ರೋಧ ಬೆಳೆದಿತ್ತು ಎನ್ನತಕ್ಕ ಮಾತನ್ನು ಇಲ್ಲಿ ನಾನು ನೆನೆಸಿಕೊಳ್ಳುತ್ತಾ ಇದ್ದೇನೆ. ಇಷ್ಟು ಇದ್ದರೂ ಹೃದಯದಲ್ಲಿ ಮಾತ್ರ ಅವರಿಗೆ ಯಾರ ಬಗ್ಗೆಯೂ ವಿರೋಧ ಇರಲಿಲ್ಲ.

ಅವರ ಮಾತಿನಲ್ಲಿ ಇವರು ಬ್ರಾಹ್ಮಣರ ಪರವಾಗಿ ಬಹಳ ದಿಟ್ಟ ನಿರ್ಧಾರ ಮಾಡುತ್ತಾರೆ ಎಂದು ಅನೇಕರು ಇವರನ್ನು ಟೀಕೆ ಮಾಡಬೇಕೆಂದು ಇದ್ದರು. ಅವರು ಖಂಡಿತಾ ಬ್ರಾಹ್ಮಣರೂ ಅಲ್ಲ. ಸುಮ್ಮನೆ ಅವರಿಗೊಂದು ವೇದಿಕೆ ಬೇಕಾಗಿತ್ತು. ಅದು ಬ್ರಾಹ್ಮಣರ ಗುಂಪು, ಅಲ್ಲಿ ಹೋಗಿ ಮಾತನಾಡುತ್ತಿದ್ದರು. ಆ ಬ್ರಾಹ್ಮಣರ ಸಭೆಗೆ ಹೋದರೂ ಅವರನ್ನು ಹೀಯಾಳಿಸುವ ರೀತಿ, ನಾನು ಕೋಳಿ ತಿನ್ನತಕ್ಕ ಬ್ರಾಹ್ಮಣ ಎಂದು ಹೇಳಿದಾಗ ಅದೊಂದು ದೊಡ್ಡ ವಿವಾದಕ್ಕೆ ಎಡೆ ಮಾಡಿತು. ಅನೇಕ ಜನ ವೈದಿಕ ಬ್ರಾಹ್ಮಣರೆಲ್ಲ ಇವರ ಬಗ್ಗೆ ಕೈತೋರಿಸುವ ಹಾಗೆ ಆಯಿತು. ಪ್ರತಿ ವಾಕ್ಯವನ್ನೂ ಸಹ, ಏನು ಈ ತರಹ ಹೇಳುತ್ತಿದ್ದಾರೆ ಎಂದು ಚಿಂತಿಸಬೇಕಾಗಿತ್ತು.

ಅವರು ಮಹದೇಶ್ವರನ ಬೆಟ್ಟಕ್ಕೆ ನನ್ನ ಜೊತೆಯಲ್ಲಿ ಬರುತ್ತಿದ್ದರು. ನನ್ನ ಊರಿಗೆ ಬರುತ್ತಿದ್ದರು. ಅಲ್ಲಿಗೆ ಬಂದು ಹುರುಳಿಕಟ್ಟಿನ ಸಾರಿನಲ್ಲಿ ಊಟ ಮಾಡುತ್ತಿದ್ದರು. ಅಂತಹ ಒಂದು ವಿಶಿಷ್ಟವಾದ ವ್ಯಕ್ತಿತ್ವ. ನಮ್ಮ ಕ್ರಿಕೆಟ್ ಸಂಸ್ಥೆಯ ನಾಗರಾಜ್‌ರವರು ಗುಂಡೂರಾಯರನ್ನು ಲಂಡನ್‌ನಲ್ಲಿ ಹೋಗಿ ನೋಡಿದರಂತೆ. ಅವರನ್ನು ನೋಡಿ ಅವರ ವ್ಯಕ್ತಿತ್ವವನ್ನು ನನಗೆ ಹೇಳಿದರು. ಅವರು ಅಲ್ಲಿ ನಿಂತು ನೋಡಿ ಕಣ್ಣೀರು ಹಾಕಿ ಬಂದರಂತೆ. ನಾನು ಕ್ರಿಕೆಟ್ ಸ್ಟೇಡಿಯಂಗೆ ಕರೆದಾಗ ಗುಂಡುರಾಯರು ಎಂತಹ ಆಜಾನುಬಾಹು ಆಗಿದ್ದಂಥವರು, ಬಂದು ಉದ್ಘಾಟನೆ ಮಾಡಿದ್ದರು. ಆದರೆ, ಲಂಡನ್ನಿನ ಆಸ್ಪತ್ರೆಯಲ್ಲಿ ಒಂದು ಮೂಲೆಯಲ್ಲಿ ಸಣ್ಣ ಶರೀರವಾಗಿ ತಲೆಯ ಕೂದಲೆಲ್ಲ ಹೋಗಿದ್ದನ್ನು ನೋಡಿ ಅದನ್ನು ವರ್ಣನೆ ಮಾಡಿ ನನ್ನ

ಎದುರಿಗೆ ಆ ನಾಗರಾಜ್ ರವರು ಅತ್ತರು. ಅಲ್ಲಿ ನಿಂತು ನೋಡಿ ಗಳಗಳನೆ ಅತ್ತು ಬಂದರಂತೆ. ಅಂತಹ ಒಬ್ಬ ವ್ಯಕ್ತಿ ಇಲ್ಲಿ ಬಂದು ಎಲ್ಲೋ ಬಂದು ಮೂಲೆಯಲ್ಲಿ ಸೊರಗಿದ್ದಾರಲ್ಲ ಎಂದು ಬಹಳ ನೊಂದು ಕೊಂಡರಂತೆ.

ಅವರು ರಾಜ್ಯ ವಾರ್ತಾಮಂತ್ರಿಯಾಗಿದ್ದಾಗ ಅವರ ಭೇಟಿಗೆ ಪತ್ರಕರ್ತರೊಬ್ಬರು ಬಂದು ಸ್ವಾಮಿ ನಾನು ಯಾವುದೋ ಒಂದು ತೊಂದರೆಯಲ್ಲಿದ್ದೇನೆ. ನೀವು ಒಂದು ಒಳ್ಳೆಯ ಜಾಹೀರಾತು ಕೊಡಬೇಕು ನನಗೆ ತುಂಬಾ ಸಹಾಯವಾಗುತ್ತದೆಂದು ಹೇಳಿದರು. ಗುಂಡೂರಾಯರು, ಏನು ಎಷ್ಟು ಸಾವಿರ ರೂಪಾಯಿಗಳ ಜಾಹೀರಾತು ಕೊಡಬೇಕೆಂದು ಕೇಳಿದರು. ಅವರು 5 ಸಾವಿರದ ಜಾಹೀರಾತು ಕೊಡಿ ಎಂದರು. ಅದಕ್ಕೆ ಇವರು 5 ಸಾವಿರ ಅಲ್ಲ 10 ಸಾವಿರದ ಜಾಹೀರಾತು ಕೊಡುತ್ತೇನೆಂದು ಬರೆದಂತಹ ಬರವಣಿಗೆಯ ಧಾಟಿ ಆ ಮನುಷ್ಯನಿಗೆ ಇದ್ದಂತಹ ವಿಶಿಷ್ಟ ವ್ಯಕ್ತಿತ್ವ. ಅವರದೇ ಆದಂತಹ ಒಂದು ವ್ಯಕ್ತಿತ್ವ.

ಎಲ್ಲಾ ಜಿಲ್ಲೆಗಳಲ್ಲಿ ಸಚಿವ ಸಂಪುಟದ ಸಭೆ ಮಾಡಬೇಕೆಂದು ಹೊರಟರು. ಕಡತಗಳ ವಿಲೇವಾರಿಯೆಂದು ಅದೊಂದು. ಅವರ ಪ್ರತಿ ವಿಚಾರದಲ್ಲೂ ನಾವು ಇವತ್ತಿನ ದಿವಸ ನೆನೆಸಿಕೊಳ್ಳುತ್ತಿದ್ದೇವೆ. ಅವರು ಮಾಡಿದಂತಹ ಕೆಲಸಗಳು ಇತಿಹಾಸದಲ್ಲಿ ವಿಲೀನವಾಗುತ್ತಿದೆಯೇ ಹೊರತು ನಮ್ಮ ಕಣ್ಣೆದುರಿಗೆ ಅವರು ಇಲ್ಲ ......... ನಾನು ಪ್ರಾಮಾಣಿಕವಾಗಿ ಹೇಳುವುದಾದರೆ, ನನ್ನ ಮನೆಯಲ್ಲಿ ಯಾರನ್ನಾದರೂ ಕಳೆದುಕೊಂಡರೆ, ನನ್ನ ತಂದೆ ಸತ್ತರೆ ಎಷ್ಟು ದುಃಖವೋ ಅಷ್ಟೇ ದುಃಖವಾಗಿದೆ. ಸಾವನ್ನು ತಡೆಯುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಯಾರಾದರೂ ಹುಟ್ಟಿದ ಮೇಲೆ ಸಾಯಲೇಬೇಕು. ಆದರೆ ಸಾವಿನ ಸಂದರ್ಭವನ್ನು ನೋಡಿದಾಗ ನಮ್ಮೆಲ್ಲರಿಗೂ ಬಹಳ ನೋವಾಗತಕ್ಕ ಪರಿಸ್ಥಿತಿಯಾಗುತ್ತದೆ. ಇವರನ್ನು ಇಷ್ಟೇ ಗುಣಗಾನ ಮಾಡಿ ಇಲ್ಲಿಗೆ ಬಿಡತಕ್ಕದ್ದು ಸರಿಯೋ ಎನ್ನತಕ್ಕದ್ದನ್ನು ನಾವು ನೀವು ಎಲ್ಲಾ ಚಿಂತನೆ ಮಾಡಬೇಕು. ಅವರ ವ್ಯಕ್ತಿತ್ವ ರಾಜ್ಯದ ಮುಂದಿನ ಪೀಳಿಗೆಗೂ ಕಾಣತಕ್ಕ ಚಿತ್ರ ಅವ್ರೊಂದು, ವ್ಯಕ್ತಿತ್ವದ ಬಗ್ಗೆ ತಿಳುವಳಿಕೆ ಇರಬೇಕಾದರೆ ನಾವು ಏನಾದರೊಂದು ಕಾರ್ಯಕ್ರಮ ಮಾಡಲೇಬೇಕು...... ಮಾಜಿ ಮುಖ್ಯಮಂತ್ರಿಗಳು, ಅವರು ಮಾಡಿರತಕ್ಕಂಥ ವ್ಯವಸ್ಥೆಗಳು, ಈ ತರಹ ದಿವಂಗತವಾದವರು ಅವರ ಬಗ್ಗೆ ಒಂದು ವಿಶಿಷ್ಟವಾದ ಸ್ಥಾನ ಉಳಿಯಬೇಕಾದರೆ ನಾವು ಒಂದು ಸ್ಮಾರಕ ರೂಪದಲ್ಲಿ ಮಾಡಬೇಕಾದದ್ದು ನಮ್ಮ ಕರ್ತವ್ಯ.

**ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ):** ಸನ್ಮಾನ್ಯ ಅಧ್ಯಕ್ಷರೇ, ಇದು ಒಂದು ವಿಶೇಷವಾದ ಸಂದರ್ಭ. ತಾವು ವ್ಯಕ್ತ ಪಡಿಸಿದ ಅಭಿಪ್ರಾಯಕ್ಕೂ ಮತ್ತು ಸಭಾನಾಯಕರು ಮತ್ತು ಇನ್ನಿತರರು ವ್ಯಕ್ತ ಮಾಡಿದ ಅಭಿಪ್ರಾಯಕ್ಕೂ ನನ್ನ ಸಹಮತವನ್ನು ಸೂಚನೆ ಮಾಡುತ್ತೇನೆ. ವಿಶೇಷ ಏನೆಂದರೆ ಈ ಶಾಸನಸಭೆಯಲ್ಲಿ ಕೊಡಗಿನ ಅಜ್ಜನಿಗೂ (ಫೀಲ್ಡ್ ಮಾರ್ಶಲ್ ಕೆ.ಎಂ.ಕಾರಿಯಪ್ಪ) ಶ್ರದ್ಧಾಂಜಲಿ, ಮೊಮ್ಮಗನಿಗೂ (ಗುಂಡೂರಾವ್) ಶ್ರದ್ಧಾಂಜಲಿ ಅರ್ಪಿಸುತ್ತಿದ್ದೇವೆ. ಕಳೆದ ಮೂರುವರೆ ತಿಂಗಳಿನಿಂದ ನಿತ್ಯ ನಮಗೆ ಬೆಳಿಗ್ಗೆ ಕೆಲಸ ಇದ್ದದ್ದು

ರಾಯರು ಹೇಗಿದ್ದಾರೆ ಎಂದು ಕಂಡಕಂಡ ಸ್ನೇಹಿತರುಗಳನ್ನು ಕೇಳುವುದಾಗಿತ್ತು. ದಿನಕ್ಕೊಂದು ಸುದ್ದಿ ಬರುತ್ತಿತ್ತು. ಕಟ್ಟಕಡೆಗೆ ನಾವು ಕೆಲವರು ನಿರ್ಣಯ ಮಾಡಿದೆವು. ನಮ್ಮ ತೊಂದರೆಗಳು ಎಷ್ಟೇ ಇರಲಿ ಒಮ್ಮೆಯಾದರೂ ಅಲ್ಲಿಗೆ (ಲಂಡನ್) ಹೋಗಿ ನಮ್ಮ ಜೀವನದ ಕೆಲವು ಸರಿಯಾದ ಸಂದರ್ಭಗಳನ್ನು ಅವರೊಡನೆ ನೆನೆಸಿಕೊಳ್ಳುವುದು ಅಂತ ಹೇಳಿ. ಅದು ಸಾಧ್ಯವಾಗಲಿಲ್ಲ. ಇದು ಒಂದು ರೀತಿಯ ವಿಧಿಯ ವಿಪರ್ಯಾಸ. ಮಾನ್ಯ ಗುಂಡೂರಾಯರು ಮತ್ತು ಅನೇಕ ಜನರು ಈಗ ಕಾಲಗರ್ಭದಲ್ಲಿ ಲೀನವಾಗಿದ್ದಾರೆ. ಅವರಿಗೆಲ್ಲ ನಮ್ಮ ನಮನಗಳನ್ನು ಸಮರ್ಪಣೆ ಮಾಡುತ್ತೇವೆ.

ಶ್ರೀಮಾನ್ ಗುಂಡೂರಾಯರು, ಕರ್ನಾಟಕಕ್ಕೆ ಯುವ ಕಾಂಗ್ರೆಸ್ಸಿನ ಮೊದಲನೆಯ ಅಧ್ಯಕ್ಷರು. ನಾನು ಅವರಿಂದ ಅಧಿಕಾರ ಸ್ವೀಕಾರ ಮಾಡಿದ ಎರಡನೆಯ ಅಧ್ಯಕ್ಷ. ಆಗ, ನಾನು ಅವರಲ್ಲಿ ಕಂಡದ್ದು ಅವರಲ್ಲಿದ್ದಂಥ ಸಂಘಟನಾ ಸಾಮರ್ಥ್ಯ. ಇದು ಒಂದು ದೃಷ್ಟಿಯಿಂದ, ಮುಂದೆ ಯುವ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಒಂದು ಪ್ರೇರಕ ಶಕ್ತಿಯಾಯಿತು. ಇಂದಿನ ಪರಿಸ್ಥಿತಿಯಲ್ಲಿ ಕ್ರೀಡೆಯಾಗಿ ರಾಜಕಾರಣವನ್ನು ನೋಡುತ್ತೇವೆ. ಆದರೆ, ರಾಜಕೀಯವನ್ನು ಕ್ರೀಡೆಯಾಗಿ ಕಂಡ ಒಬ್ಬ ಹಿರಿಯ ರಾಜಕಾರಣಿ ಹಾಗೂ ಒಳ್ಳೆಯ ನಾಯಕ ಅವರ ಮೂರು ವರ್ಷದ ಅಧಿಕಾರದ ಅವಧಿಯಲ್ಲಿ ಭಿನ್ನಮತದ ಶಬ್ದ ಇರಲಿಲ್ಲ. ಯಾರೂ ಎದ್ದು ನಿಂತು ಅವರ ವಿರುದ್ಧ ಹೇಳುವವರು ಇರಲಿಲ್ಲ. ಆದ್ದರಿಂದಲೇ ಅವರು ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಸಾಧ್ಯವಾಯಿತು.

ರಾಯರು ನಮ್ಮ ಗೆಳೆತನ ಬಹಳ ದೀರ್ಘವಾದುದು. ರಾಜಕೀಯದ ಒಳಗೂ ಮತ್ತು ಹೊರಗೂ ಸಮಕಾಲೀನರಾಗಿ ಕೆಲಸ ಮಾಡಿದ್ದೇವೆ. ನಿಷ್ಕಲ್ಮಷ ಹೃದಯ ಮತ್ತು ಸ್ನೇಹಕ್ಕೆ ಮತ್ತೊಂದು ಹೆಸರು ಗುಂಡೂರಾಯರು. ಈ ಕಾರಣದಿಂದ, ಇಡೀ ಸಭೆ ಅವರನ್ನು ನೆನೆಸಿಕೊಳ್ಳುತ್ತಿದೆ. ಈ ರಾಜ್ಯಕ್ಕೆ ಒಳ್ಳೆಯ ಆಡಳಿತವನ್ನು ಕೊಟ್ಟ ಕೀರ್ತಿ ಅವರದು.

ಶ್ರೀ ಎಸ್. ಬಂಗಾರಪ್ಪ (ಸೊರಬ) ಸದನದಲ್ಲಿ ನಮ್ಮ ಜೊತೆ ಕೆಲಸ ಮಾಡಿರತಕ್ಕಂಥಹ ಅನೇಕ ಜನರನ್ನು ನಾವು ಕಳೆದು ಕೊಳ್ಳತಕ್ಕಂಥದ್ದು ವಿಧಿ ನಿಯಮ ಎಂದು ಭಾವಿಸಬೇಕಾಗುತ್ತದೆ. ಈಗಾಗಲೇ ನಮ್ಮ ಮಿತ್ರರು ಗುಂಡೂರಾಯರ ವ್ಯಕ್ತಿತ್ವದ ಚಿತ್ರವನ್ನು ಬಿಡಿಸಿದ ಹಾಗೆ, ವರ್ಣರಂಜಿತ ರಾಜಕಾರಣವನ್ನು ತಮ್ಮದೇ ಆಗಿರತಕ್ಕಂಥ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಮಾಡಿರತಕ್ಕಂಥವರು. ಸದನದ ಹೊರಗಡೆ ಇರಬಹುದು ಅಥವಾ ಒಳಗಡೆಯೇ ಇರಬಹುದು ಬಹಳ ಧೈರ್ಯದಿಂದ ಒಂದು ವಿಚಾರವನ್ನು ಎದುರಿಸತಕ್ಕಂಥ ವ್ಯಕ್ತಿತ್ವ ಅವರಲ್ಲಿತ್ತು. ನಾವು ವಿರೋಧ ಪಕ್ಷದಲ್ಲಿದ್ದಾಗ ಅವರು ಆಳುವ ಪಕ್ಷದಲ್ಲಿದ್ದರು. ಕೆಲವೊಮ್ಮೆ ಒಟ್ಟಿಗೆ ಒಂದೇ ಪಕ್ಷದಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭಗಳು ನನಗೂ ಮತ್ತು ಹಲವಾರು ಮಿತ್ರರಿಗೂ ಸಿಕ್ಕಿತ್ತು .......... ಅವರು ಎಲ್ಲರಿಗೂ ಬೇಕಾಗಿದ್ದಂಥ ವ್ಯಕ್ತಿಯಾಗಿದ್ದರು, ರಾಜಕೀಯವಾಗಿ ನಾವು ಅವರ ಬಗ್ಗೆ ಎಷ್ಟೇ ವಿರೋಧವನ್ನು ಮಾಡಿದರೂ ಕೂಡ ಸ್ನೇಹದ ವಿಚಾರ ಬಂದಾಗ

ಅವರ ಸೆಳೆತಕ್ಕೆ ಒಳಗಾಗುವಂಥ ವ್ಯಕ್ತಿತ್ವವನ್ನು ಹೊಂದಿದ್ದಂಥ ರಾಜಕಾರಣಿ ಅವರು ಆಗಿದ್ದರು. ಅವರ ಅಗಲುವಿಕೆ ಬಹಳ ಬೇಗ ಬಂತು ಎಂದು ಎಲ್ಲರ ಮನಸ್ಸಿನಲ್ಲೂ ಅನಿಸುತ್ತಿದೆ. ಸಹಜವಾಗಿ ಒಬ್ಬ ವ್ಯಕ್ತಿಗೆ ಖಾಯಿಲೆ ಬಂದಾಗ ಅವರು ಗುಣಮುಖರಾಗಿ ಬರುತ್ತಾರೆಂದು ನಿರೀಕ್ಷೆ ಇರುತ್ತದೆ. ಆದರೆ, ಅವರದು ಹಾಗಾಗಲಿಲ್ಲ. ಅವರಿಗೆ ಖಾಯಿಲೆ ಬಂದು ಅವರನ್ನು ಹಾಗೆಯೇ ಸೆಳೆದುಕೊಂಡು ಹೋಯಿತು. ಈ ಆಘಾತದ ಮತ್ತು ದಿಗ್ಭ್ರಮೆಗೊಳ್ಳತಕ್ಕಂಥ ಸುದ್ದಿ ಎಲ್ಲರ ಮನಸ್ಸಿಗೂ ಆಳವಾದ ನೋವನ್ನು ತಂದಿತು. ಅವರಷ್ಟು ಎತ್ತರದ ವ್ಯಕ್ತಿತ್ವವನ್ನು ಹೊಂದಿರುವುದು ಇತ್ತೀಚಿನ ದಿನಗಳಲ್ಲಿ ಅಪರೂಪ. ಅಧಿಕಾರದಲ್ಲಿ ಅಷ್ಟೊಂದು ಎತ್ತರದಲ್ಲಿ ಇದ್ದಂಥವರನ್ನು ನಾನು ನೋಡಿಲ್ಲವೆಂದು ನನ್ನ ಭಾವನೆ, ದೇವರಾಜ ಅರಸ್ ಅವರನ್ನು ಬಿಟ್ಟು, ಅವರು ಎಷ್ಟು ಎತ್ತರ ಇದ್ದರೋ ಅಷ್ಟೇ ಎತ್ತರದಲ್ಲಿ ಅವರ ಧೈರ್ಯವೂ ಇತ್ತು. ಗುಂಡೂರಾಯರು ಹೊರಗಡೆ ಭಾಷಣ ಮಾಡುವಾಗ ಯುವಕ ವರ್ಗ ಅವರಿಗೆ ಹೆಚ್ಚಾಗಿ ಆಕರ್ಷಣೆಗೆ ಒಳಗಾಗುತ್ತಿದ್ದರು. ಎಲ್ಲಿ ಹೋದರೂ ಅವರ ಗುಣಗಾನವನ್ನು ಮಾಡತತಕ್ಕಂಥ ಯುವಕ ವರ್ಗವನ್ನು ನೋಡುತ್ತಿದ್ದೆವು. ಅವರ ಬಗ್ಗೆ ಯುವಕರಲ್ಲಿ "ಗುಂಡೂದಾದಾ" ಎನ್ನತಕ್ಕಂಥ ಮಾತು ಬರೀ ಬಾಯಲ್ಲೇ ಅಲ್ಲ; ಗೋಡೆಗಳ ಮೇಲೂ ವರ್ಷಾನುಗಟ್ಟಲೆ ಕಂಡೆವು. ರಾಜಕಾರಣ ಮಾಡುವಾಗ ಮತ್ತು ಯಾವುದೇ ದಾರಿಯಲ್ಲಿ ಹೋಗತಕ್ಕಂಥ ಸಂದರ್ಭದಲ್ಲಿ ಧೈರ್ಯವಾಗಿ ಹೋಗತಕ್ಕಂಥ ಗುಣವಿಶೇಷಗಳು ಅವರಲ್ಲಿದ್ದವು. ಇಂಥಾ ದಾದಾ ಈಗ ನಮ್ಮಲ್ಲಿಲ್ಲ. ಅವರು ಲೋಕಸಭೆಗೆ ಆಯ್ಕೆಯಾಗಿ ಹೋದಂಥ ಕಾಲದಲ್ಲೂ ಕೂಡ ಅಷ್ಟೇ, ಗುಂಡೂರಾವ್ ಅವರು ಸೆಂಟ್ರಲ್ ಹಾಲಿನಲ್ಲಿ ಕುಳಿತುಕೊಂಡರೆ ಅವರ ಸುತ್ತೂ ಅನೇಕ ಜನ ಕುಳಿತುಕೊಳ್ಳಬೇಕು. ಹಾಗೆ ಆಕರ್ಷಣೆ ಮಾಡತಕ್ಕಂಥ ಶಕ್ತಿ ಅವರಲ್ಲಿತ್ತು............ ದಿವಂಗತರು ಶ್ರೇಷ್ಠ ರಾಜಕಾರಣಿಯಾಗಿ ರಾಜ್ಯಕ್ಕೆ, ರಾಷ್ಟ್ರಕ್ಕೆ ತಮ್ಮದೇ ಆದಂಥ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಸೇವೆಯು ಚಿರಸ್ಮರಣೀಯವಾಗಿರುತ್ತದೆ.

ಶ್ರೀ ಎಂ.ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) ಮಾನ್ಯ ಅಧ್ಯಕ್ಷರೇ ದಿವಂಗತ ಗುಂಡೂರಾಯರ ನಿಧನವು ನಮಗೆಲ್ಲರಿಗೂ ಅಪಾರ ನೋವನ್ನು ತಂದಿದೆಯಲ್ಲದೆ, ರಾಜ್ಯಕ್ಕೆ ತುಂಬಲಾರದ ನಷ್ಟವನ್ನುಂಟು ಮಾಡಿದೆ. ನಾನು 70 ದಿವಸಗಳ ಹಿಂದೆ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ನಾನು ಮತ್ತು ವಾಟಾಳ್‌ರು ನೋಡಲು ಬರುವುದಾಗಿ ತಿಳಿಸಿದಾಗ, ಅವರೊಂದಿಗೂ ಮಾತನಾಡಿದರು. ಆಗಸ್ಟ್ ತಿಂಗಳಲ್ಲಿ ಎರಡನೆಯ ಸುತ್ತಿನ ತಪಾಸಣೆಯು ಮುಗಿದ ಮೇಲೆ 27ನೇ ತಾರೀಖಿನ ನಂತರ ಬನ್ನಿ ಎಂದು ನನಗೆ ತಿಳಿಸಿದರು. ಆದರೆ, ನಿನ್ನೆ ಅವರ ನಿಧನದ ಸುದ್ದಿ ತಿಳಿದಾಗ ನನಗೆ ತುಂಬಾ ಆಘಾತವಾಯಿತು. ಅವರ ಬಗ್ಗೆ ತುಂಬಾ ಅಭಿಮಾನದಿಂದ ಹೇಳುವುದಾದರೆ, ನನ್ನ ರಾಜಕೀಯ ಪ್ರವೇಶಕ್ಕೆ ಅವರೇ ಕಾರಣರಾಗಿದ್ದರು. 1975ನೇ ಇಸವಿಯಲ್ಲಿ ನನ್ನನ್ನು ಮೈಸೂರು ಜಿಲ್ಲೆಯ ಯುವ ಕಾಗ್ರೆಸ್ಸಿನ ಅಧ್ಯಕ್ಷನನ್ನಾಗಿ ಮಾಡಿದ್ದರು ಅಂತಹ ಸಂದರ್ಭದಲ್ಲಿ, ಇಂತಹ ಎದೆಗಾರಿಕೆಯುಳ್ಳ ಗುಂಡೂರಾಯರ ರಾಜಕೀಯ ಬೆಳೆಯಲಿ, ಮಂತ್ರಿ ಇಲ್ಲದಿದ್ದರು ಪರವಾಗಿಲ್ಲ ಎಂದು

ಅವರಿಗೆ ಅವಕಾಶ ಮಾಡಿಕೊಟ್ಟರು ಮತ್ತು ಅವರು ಪಕ್ಷವನ್ನು ಬಿಟ್ಟು ಇಂದಿರಾಗಾಂಧಿ ಕಾಂಗ್ರೆಸ್ ಮಾಡಿದಂತಹ ಸಂದರ್ಭದಲ್ಲಿ ನಾನು ಕರ್ನಾಟಕ ರಾಜ್ಯದ ಪ್ರಧಾನ ಕಾರ್ಯದರ್ಶಿಯಾಗಿ ಜೊತೆಯಲ್ಲಿ ಕೆಲಸ ಮಾಡಿದೆ. ಇವತ್ತು ಕರ್ನಾಟಕ ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ. ನನ್ನನ್ನು ಅವರ ಮಗನಿಗಿಂತ ಹೆಚ್ಚಿನ ರೀತಿಯಲ್ಲಿ ಪ್ರೀತಿ ಮಾಡುತ್ತಾ ಇದ್ದರು. ಇವತ್ತು ಪ್ರಧಾನ ಮಂತ್ರಿಗಳು, ಕೇಂದ್ರದ ನಾಯಕರು ಎಲ್ಲಾ ಅವರು ಮಾಡಿದಂತಹ ಕೆಲಸವನ್ನು ಮೆಚ್ಚುತ್ತಾ ಇದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಪ್ರಾರ್ಥನೆ ಮಾಡುತ್ತೇನೆ. ಅವರ ಹೆಸರು ಸದಾ ಈ ರಾಜ್ಯದಲ್ಲಿ ಉಳಿಯುವುದಕ್ಕೆ ಅವರ ಧರ್ಮಪತ್ನಿಯವರನ್ನು 1994 ರಲ್ಲಿ ಖಾಲಿಯಾಗುವಂತಹ ವಿಧಾನ ಪರಿಷತ್ತಿಗೆ ನಾಮಕರಣ ಮಾಡಿ ಎಲ್ಲರ ಜೊತೆಯಲ್ಲೂ ಅವರು ಬಂದು ನಾವು ಕಣ್ಣಿಂದ ನೋಡುವುದಕ್ಕೆ ಮತ್ತು ಜನರಿಗೂ ಅವರನ್ನು ನೋಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) ಸನ್ಮಾನ್ಯ ಅಧ್ಯಕ್ಷರೇ .......... ನಮ್ಮ ಜೊತೆಯಲ್ಲಿ ಇವತ್ತು ಇಲ್ಲದೇ ಇರುವ ಶ್ರೀಮಾನ್ ಗುಂಡೂರಾಯರ ವ್ಯಕ್ತಿತ್ವ. ಸತ್ತ ಮೇಲೆ ನಾವು ಎಲ್ಲರನ್ನೂ ಹೊಗಳುತ್ತೇವೆ. ಅದು ನಮ್ಮ ಸಂಪ್ರದಾಯ. ಅವರು ಬದುಕಿದ್ದಾಗ ಅನೇಕ ಟೀಕೆಗಳನ್ನು ಮಾಡುತ್ತೇವೆ. ಟೀಕೆ ಮಾಡಿದಾಗ ನಾವ್ಯಾರೂ ಸಹಿತ ಸಹಿಸುವುದಿಲ್ಲ. ಈ ಸಭೆಗೆ ಬರುವ ಮುಂಚೆ ನಮ್ಮ ವಿರೋಧ ಪಕ್ಷದವರ ಸಭೆಯಲ್ಲಿ ನಮ್ಮ ಪಕ್ಷದ ಹಿರಿಯ ಮುಖಂಡರಾದ ಶ್ರೀ ಜೆ.ಎಚ್. ಪಟೇಲರು ವಿಧಾನಸಭೆಯಲ್ಲಿನ ಒಂದು ಘಟನೆಯನ್ನು ನೆನೆಸಿಕೊಂಡರು. ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ದೇವರಾಜ ಅರಸು ಜೊತೆಯಲ್ಲಿ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ ಇಬ್ಬರೂ ಹೊಡೆದಾಟಕ್ಕೆ ಹೋದರು. ಪಟೇಲರು ಗುಂಡೂರಾಯರು. ಆದರೆ ಪಟೇಲರ ಬಗ್ಗೆ ಒಂದು ನಿಮಿಷ ಸಹಿತ ಸದನದ ಹೊರಗೆ ದ್ವೇಷವನ್ನು ಕಾರಿದಂತಹ ವ್ಯಕ್ತಿ ಗುಂಡೂರಾಯರು ಆಗಿರಲಿಲ್ಲ. ತಮ್ಮದೇ ಆದ ಒಂದು ಆಕರ್ಷಕ ವರ್ಣಮಯ ವ್ಯಕ್ತಿತ್ವ ಹೊಂದಿದ್ದ, ಯುವಕರಿಗೆ ವಿಶೇಷವಾದ ಆಕರ್ಷಣೆ ಕೇಂದ್ರವಾಗಿದ್ದ ಗುಂಡೂರಾಯರ ಸ್ನೇಹಪರತೆ ಸಮುದ್ರದ ರೀತಿಯಲ್ಲಿರುತ್ತಿತ್ತು.

ಅವರ ಆಡಳಿತ, ವಿಶೇಷವಾಗಿ ವರ್ಗಾವಣೆ ವಿಚಾರದಲ್ಲಿ ಅವರು ಎಷ್ಟೊಂದು ಬಿಗಿ ನಿಲುವನ್ನು ತಳೆದಿದ್ದರು. ಬಹುಶಃ ಅದರಿಂದಲೇ ಅವರು ಅಧಿಕಾರವನ್ನು ಕಳೆದುಕೊಂಡು, ನಾವು ಅಧಿಕಾರಕ್ಕೆ ಹೋದೆವು ಎಂದು ನನಗೆ ಅನೇಕ ಸಾರಿ ಅನಿಸುತ್ತದೆ. ಅವರು ಯಾರಿಗೂ ಸಹಿತ ಜಗ್ಗುತ್ತಿರಲಿಲ್ಲ. ಅದು ಏನೇ ಇರಲಿ ಅವರು ಜಾತಿಯಲ್ಲಿ ಹೆಸರಿಗೆ ಬ್ರಾಹ್ಮಣರು ಅಷ್ಟೆ. ವಾಟಾಳ್‌ರವರು ಹೇಳಿದ ಹಾಗೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಪುತ್ಥಳಿ ಇಲ್ಲಿಗೆ ಬರಬೇಕಾದರೆ ಅವರೇ ಕಾರಣ. ಮಾನ್ಯ ವೆಂಕಟೇಶ್‌ರವರ ತಂದೆ ಬೀರಣ್ಣನವರು ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ನನಗೆ ಜ್ಞಾಪಕ ಇದೆ. ಅವರ ತೊಂದರೆಯಲ್ಲಿಯೇ ಅವರು ರಾಜಕಾರಣವನ್ನು ಪ್ರಾರಂಭ ಮಾಡಿದರು. ಆವತ್ತಿನಿಂದ ನಾನು ಅವರನ್ನು ನೋಡಿದ್ದೇನೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಬಗ್ಗೆ ವಿಶೇಷವಾದಂತಹ ಅನುಕಂಪವನ್ನು

ಅವರು ಇಟ್ಟು ಕೊಂಡಿದ್ದರು. ವಿಧಾನ ವೀಧಿಗೆ ಅಂಬೇಡ್ಕರ್ ಹೆಸರನ್ನು ಕೊಟ್ಟಿದ್ದು ಸಹ ಗುಂಡೂರಾಯರು, ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ಪರಿಶಿಷ್ಟ ಜಾತಿ, ವರ್ಗದವರು ಮುಂದೆ ಬಂದಾಗ ಈ ಕಡೆ ಆಗ ಸಿ.ಎಂ. ಆರ್ಮುಗ್ರಂ ಇದ್ದರು. ಎಲ್ಲಾ ವಿರೋಧ ಪಕ್ಷದವರನ್ನು ಕರೆಯಿಸಿ, ಅವರಿಗೆ ಒಂದು ಮೆಡಿಕಲ್ ಕಾಲೇಜು ಕೊಡಬೇಕೆಂದು ಹೇಳಿ ಧೈರ್ಯದಿಂದ ಕೊಟ್ಟರು. ಯಾವುದಕ್ಕೂ ಅವರು ಹೆದರುತ್ತಿರಲಿಲ್ಲ. ಅಂತಹ ಧೈರ್ಯ ಕೆಲವು ಸಂದರ್ಭದಲ್ಲಿ ಬೇಕಾಗುತ್ತದೆ. ಅದರಲ್ಲಿಯೂ ಸಹ ಅಧಿಕಾರದಲ್ಲಿದ್ದಂತಹವರಿಗೆ ಅಂತಹ ಧೈರ್ಯ ಬೇಕಾಗುತ್ತದೆ. ನಿನ್ನೆಯ ದಿವಸ ಅವರ ಸಾವಿನ ಸುದ್ದಿ ಬಂದಾಗ ನನಗೆ ತಡೆದು ಕೊಳ್ಳುವುದಕ್ಕೆ ಆಗಲಿಲ್ಲ. ನಾನು ರಾಜಕೀಯದಲ್ಲಿ ಅವರಿಂದ ಪಡೆದಿರತಕ್ಕದ್ದು ಏನೂ ಇಲ್ಲ. ಆದರೆ ಅವರ ಸ್ನೇಹಕ್ಕೆ ಇವತ್ತು ಕೋಟ್ಯಾಂತರ ಜನ ಶರಣಾಗಿದ್ದಾರೆ. ದಿಲ್ಲಿಯಿಂದ ಹಿಡಿದು, ಕಲ್ಕತ್ತಾದಿಂದ ಹಿಡಿದು ಗುಂಡೂ ದಾದಾ ಅಂತ ಕರೆಯುತ್ತಿರತಕ್ಕ ಅವರ ಅನೇಕ ಸ್ನೇಹಿತರಿಗೆ ಗುಂಡೂರಾಯರು ಇಲ್ಲವಾಗಿದ್ದಾರೆ. ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹೇಳುತ್ತೇನೆ.

ಶ್ರೀ **ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್)** ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿಯಾಗಿದ್ದಾಗ ನಾನು ಬಹಳ ಸಮೀಪ ಇದ್ದೆ. ನಿಜವಾಗಿಯೂ ಅವರು ಧೈರ್ಯಶಾಲಿಗಳಾಗಿದ್ದರು. ಒಳ್ಳೆಯ ಗಂಡಸುತನ ಇರತಕ್ಕಂಥ ವ್ಯಕ್ತಿಯಾಗಿದ್ದರು. ನಾನು ಮೊನ್ನೆ ಕಾಂಡ್ಲಾ ಮೀಟಿಂಗ್‌ಗೆ ಹೋದಾಗ ಕೆಲವು ಜನ ಅಲ್ಲಿ 'ತುಮಾರಾ ಗುಂಡೂ ದಾದಾ ಕೈಸಾ ಹೈ' ಎಂದು ಕೇಳುತ್ತಿದ್ದರು. ಅಂಥ ಒಂದು ಪ್ರೀತಿ, ಭಕ್ತಿ, ಅಷ್ಟೊಂದು ಒಳ್ಳೆಯ ಅಭಿಮಾನ ಆ ಜನಗಳಲ್ಲಿತ್ತು. ನಮ್ಮ ಸಹಕಾರಿ ಸಂಸ್ಥೆಗೆ ಮುಖ್ಯಮಂತ್ರಿಯಾಗಿ ಅವರನ್ನು ಕರೆದಿದ್ದೆವು. ಎರಡೆಕರೆ ಜಮೀನು ಬೇಕು ಎಂದು ಕೇಳಿದಾಗ ಅವರು ಈಗಿಂದೀಗಲೇ ಕೊಡುತ್ತೇನೆ ತೆಗೆದುಕೊಳ್ಳಿ ಎಂದು ಹೇಳಿದರು. ಕೆಲವರು, ಮುಖ್ಯ ಕಾರ್ಯದರ್ಶಿಯವರನ್ನು ಕೇಳಬೇಕಾಗಿದೆ ಎಂದು ಹೇಳಿದಾಗ ಅವನು ಹೆಡ್ ಕಾರಕೂನ್, ಏನು ಕೇಳುವುದು, ನಾನು ಮುಖ್ಯಮಂತ್ರಿಯಾಗಿ ಹೇಳುತ್ತಿದ್ದೇನೆ, ನೀವು ತೆಗೆದುಕೊಳ್ಳಿ ಎಂದು ಹೇಳಿದರು. ಅಂಥ ಒಂದು ಶಕ್ತಿ ಧೈರ್ಯ ಅವರಲ್ಲಿತ್ತು. ಅಂಥ ಒಳ್ಳೆಯ ಎದೆಗಾರಿಕೆ ಅವರಲ್ಲಿತ್ತು. ಅಂಥ ಎದೆಗಾರಿಕೆ ಆಡಳಿತ ನಡೆಸತಕ್ಕಂತವರಿಗೆ ಇರಬೇಕು. ಶ್ರೀಮಾನ್ ಗುಂಡೂರಾಯರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಎಲ್ಲರೂ ಅವರನ್ನು ಹೊಗಳಿದ್ದಾರೆ. ಅವರ ನಿಧನದಿಂದ ದೇಶಕ್ಕೆ, ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ.

**ಬಿ.ಎಂ. ಪಾಟೀಲ್ (ಉಗ್ಗಾಂವ್)** ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಗುಂಡೂರಾಯರ ನಿಧನ ದುಃಖಕರ ವಿಚಾರ. ತುಳಿತಕ್ಕೊಳಗಾದ ವರ್ಗಗಳ ಉದ್ಧಾರಕ್ಕೆ ಅವರು ಮಾಡಿದ ಸೇವೆಯನ್ನು ಮರೆಯಲಾಗದು. ನೇರ ನಡೆನುಡಿಯ ಅವರು ದೃಢ ನಿರ್ಧಾರಗಳಿಗೆ ಹೆಸರಾಗಿದ್ದರು. ರಾಜ್ಯದ ಅನೇಕ ಕಗ್ಗಂಟಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವರ ಶ್ರಮ ಗುರುತಿಸುವಂತಾದ್ದು.

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) ಮಾನ್ಯ ಅಧ್ಯಕ್ಷರೇ, ತಾವು ತಂದಂತಹ ಶ್ರೀಮಾನ್ ಗುಂಡೂರಾವ್ ಹಾಗೂ ಇತರ ಹಿರಿಯರು ಏನು ನಿಧನ ಹೊಂದಿದ್ದಾರೆ. ಶ್ರದ್ಧಾಂಜಲಿ ನಿರ್ಣಯಕ್ಕೆ ಬೆಂಬಲಿಸುತ್ತೇನೆ. ನನಗೆ ಕೌನ್ಸಿಲ್‌ನಲ್ಲಿ ಅವರ ಬಗ್ಗೆ ಮಾತನಾಡುವ ಅವಶ್ಯಕತೆ ಇದೆ ಮತ್ತು ಛಾನ್ಸ್ ಇದೆ. ಆ ದೃಷ್ಟಿಯಿಂದ ನಾನು ಸವಿಸ್ತಾರವಾಗಿ ಹೇಳುವುದಿಲ್ಲ. ಒಂದು ಮಾತು ಹೇಳಬಹುದು, ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿಗಳಾದ ಮೇಲೆ ಭಾಲ್ಕಿಯಲ್ಲಿ ಒಂದು ಪ್ರಕರಣ ಆಯಿತು. ಅದು ಒಂದು ಐತಿಹಾಸಿಕ ಪ್ರಕರಣ. ಅದನ್ನು ನಾನು ಈಗ ಹೇಳುವ ಇಚ್ಛೆ ಇಲ್ಲ. ಪ್ರಸಂಗ ಬಂದಾಗ ಕೌನ್ಸಿಲ್‌ನಲ್ಲಿ ಹೇಳುತ್ತೇನೆ........

ಡಾ. ಜೀವರಾಜ ಆಳ್ವ (ಮಲ್ಲೇಶ್ವರ) : ಮಾನ್ಯ ಸಭಾಧ್ಯಕ್ಷರೇ, ಮಿತ್ರತ್ವಕ್ಕೆ ಇನ್ನೊಂದು ಹೆಸರೇ ಗುಂಡೂರಾಯರು. ಇಟ್ ಕುಡ್ ಬಿ ಎ ಸಿನಾನಿಮಸ್ ಫಾರ್ ಫ್ರೆಂಡ್‌ಶಿಪ್ ಎಂದು ಹೇಳುತ್ತಾರೆ. ಮಿತ್ರರಾದ ಬಂಗಾರಪ್ಪನವರು ಹೇಳಿಕೆಗಳನ್ನು ನಾನು ಪುನರುಚ್ಚರಿಸುವುದಕ್ಕೆ ಇಷ್ಟು ಪಡುತ್ತೇನೆ. ಬಹಳ ತೀಕ್ಷ್ಣವಾದ ಭಿನ್ನಾಭಿಪ್ರಾಯಗಳು ರಾಜಕೀಯದಲ್ಲಿ ಬರುತ್ತವೆ, ಅಷ್ಟೇ ಕಟುವಾದ ಟೀಕೆಗಳನ್ನು ನಾವು ವಿಧಾನಸಭೆಯಲ್ಲಿ ಮಾಡುತ್ತೇವೆ. ಆದರೆ, ಇದಕ್ಕೆ ಹೊರತು ಪಡಿಸಿ ಶ್ರೀ ಗುಂಡೂರಾಯರ ಮಿತ್ರತ್ವದ ಸೆಳೆತ ಎಂತಹುದು ಎಂಬುದಕ್ಕೆ ನಮ್ಮಲ್ಲಿರುವ ಬಹಳಷ್ಟು ಜನರು ಕಲಿಯಬೇಕಾಗಿದೆ. ನಾನು ನನ್ನ ಎಲ್ಲಾ ಹಿರಿಯ ರಾಜಕಾರಣಿಗಳಾದ, ಅವರಲ್ಲಿರುವ ಒಂದು ವೈಶಿಷ್ಟಪೂರ್ಣವಾದ ಗುಣಗಳನ್ನು ಅತ್ಯಂತ ಪ್ರಾಮಾಣಿಕವಾಗಿ ಕಲಿತುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಆದರೆ ನನ್ನ ಅನಿಸಿಕೆ ಇಷ್ಟೇ, ಗುಂಡೂರಾಯರಲ್ಲಿದ್ದ ಮಿತ್ರತ್ವದ ಭಾವನೆ ಕುರಿತು ಶ್ರೀ ಸಿಂಧ್ಯರವರು ಒಂದು ಘಟನೆ ಹೇಳಿದರು. ಏನೆಂದರೆ, ನಾವುಗಳು ಒಂದು ಕಡೆ ನಿಂತಿದ್ದೆವು. ಜೆ.ಹೆಚ್. ಪಟೇಲರು ಬಹಳ ಪ್ರಚೋದನಕಾರಿಯಾಗಿ ಭಾಷಣ ಮಾಡುತ್ತಾ, ಕಟುವಾಗಿ ಟೀಕೆ ಮಾಡಿದರು. ಆಗ ಗುಂಡೂರಾಯರು ಅಂಗಿಯ ತೋಳು ಮಡಿಚಿಕೊಂಡು ಇತ್ತ ಕಡೆ ಬಂದರು. ಪಟೇಲರು ಕೂಡ ಇತ್ತ ಕಡೆಯಿಂದ ಹೋದರು. ಇನ್ನೇನು ಗುಂಡೂರಾಯರ ಗದಾ ಪ್ರಹಾರ ಪಟೇಲರ ಮೇಲಾಗುತ್ತದೆ. ಪಟೇಲರನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕಾಗುತ್ತದೆ ಎಂದು ನಾವುಗಳು ಆಲೋಚಿಸುವಷ್ಟರಲ್ಲಿ ಪುನಃ ಇಬ್ಬರೂ ತಮ್ಮ ಸ್ವಸ್ಥಾನಗಳಿಗೆ ಮರಳಿದರು. ಮರುದಿನ ಬೆಳಿಗ್ಗೆ ಗುಂಡೂರಾಯರ ಮನೆಯಲ್ಲಿ ಪಟೇಲರಿಗೆ ಚಹಾ, ಪಾನ, ಮಿತ್ರತ್ವ ಎಂದರೆ ಇದು, ಇದೊಂದು ಮಿತ್ರತ್ವದ ಸೆಳೆತ, ಆಕರ್ಷಣೆ ಇದನ್ನು ನಾವು ಕಲಿಯಬೇಕಾಗಿದೆ. ಏನು ಒಂದು ಮಾತನ್ನು ಹೇಳುತ್ತೇನೆ. ಅದನ್ನು ಯಾರೂ ತಪ್ಪು ತಿಳಿದುಕೊಳ್ಳಬಾರದು. ಇಂದಿನ ಮುಖ್ಯಮಂತ್ರಿಗಳನ್ನೊಳಗೊಂಡಂತೆ ಹಿಂದಿನ ಎಲ್ಲಾ ಮೂವರು ಮುಖ್ಯಮಂತ್ರಿಗಳನ್ನು ಸೇರಿಸಿದರೆ ನಿಮ್ಮ (ಕಾಂಗ್ರೆಸ್) ಮುಖ್ಯಮಂತ್ರಿಯಾಗಿದ್ದಂಥಹ ಶ್ರೀಮಾನ್ ಗುಂಡೂರಾಯರನ್ನೇ ನಾವು ಮೆಚ್ಚಿಕೊಳ್ಳುತ್ತಿರುವುದು. ಲಂಚಗುಳಿತನ, ಭ್ರಷ್ಟತೆ, ಈಡಿಯೊಸಿಂಕ್ರೇಸೀಸ್, 32 ಹೆಲಿಪ್ಯಾಡ್‌ಗಳು, ಇದರ ಬಗ್ಗೆ ನಾನು ಟೀಕೆ ಮಾಡುತ್ತಿಲ್ಲ. ಅವರು ಒಂದು ಮಾತು ಹೇಳುತ್ತಿದ್ದರು. ಅದೇನೆಂದರೆ, ನಾಳೆ ಮಾಡುವುದನ್ನು ಇವತ್ತೇ ಮಾಡೋಣ. ಇವತ್ತು

ಮಾಡುವುದನ್ನು ಇದೇ ನಿಮಿಷದಲ್ಲಿ ಮಾಡೋಣವೆಂದು. ಏನೋ ದಿಢೀರ್ ಘೋಷಣೆ ಮಾಡುತ್ತಾರೆಂದು ಅದಕ್ಕೆ ಟೀಕೆ ಮಾಡುವವರೂ ಸಹ ಇದ್ದರು. ಒಂದು ರೀತಿಯಲ್ಲಿ ಹೇಳಬೇಕಾದರೆ ಅವರಿಗೆ ನನ್ನ ಮೇಲೆ ಸ್ವಲ್ಪ ಕೋಪವಿತ್ತು. ಏಕೆಂದರೆ ತಾನು ಎಷ್ಟೇ ಪ್ರಯತ್ನ ಮಾಡಿದರೂ ಸಹ ಈ ಹುಡುಗನನ್ನು ಕಾಂಗ್ರೆಸ್‌ಗೆ ಸೇರಿಸಿಕೊಳ್ಳಲು ಆಗುತ್ತಿಲ್ಲವೆಂದು. ನನಗೆ ಅವರು ಹೇಳಿದ ಒಂದು ಮಾತು ನೆನಪಿಗೆ ಬರುತ್ತಿದೆ. ಅದೇನೆಂದರೆ ನನ್ನ ಜೇಬಿನಲ್ಲಿ ಮಂತ್ರಿಗಳ ಪೋರ್ಟ್‌ಫೋಲಿಯೋ ಇದೆ, ನಿನಗೆ ಯಾವಾಗ ಬೇಕಾದರೂ ಮಂತ್ರಿ ಪದವಿಯನ್ನು ಕೊಡುತ್ತೇನೆ. ನೀನು ಕಾಂಗ್ರೆಸ್‌ಗೆ ಬಾ ಎಂದು ಕರೆದಿದ್ದರು. ನಾನು ಅವರ ಬಗ್ಗೆ ಅಷ್ಟು ತೀಕ್ಷ್ಣವಾಗಿ ಟೀಕೆ ಮಾಡಿದರೂ ಕೂಡ, ನಮ್ಮ ಕ್ಷೇತ್ರದ ಬಗ್ಗೆ ಏನಾದರೂ ಕೆಲಸ ಮಾಡಿಕೊಡಲೇಬೇಕೆಂದು ಕೇಳಿದಾಗ ಅವರು ಆ ಕ್ಷಣದಲ್ಲಿಯೇ ಅದನ್ನು ಮಾಡಿಕೊಡುತ್ತಿದ್ದರು. ಅಂಥ ದಿಟ್ಟ ವ್ಯಕ್ತಿ ಅವರಾಗಿದ್ದರು. ದಯಮಾಡಿ, ಅಧಿಕಾರದಲ್ಲಿರುವ ತಮಗೆ ಪ್ರಾರ್ಥನೆ ಏನೆಂದರೆ ತಾವುಗಳೆಲ್ಲರೂ ಸಹ, ರಾವ್‌ರವರ ವಿಶೇಷತೆಯನ್ನು, ಗುಣವನ್ನು ಕಲಿತುಕೊಳ್ಳಿ. ಏಕೆಂದರೆ ಅಧಿಕಾರದಲ್ಲಿ ಕುಳಿತು ತಕ್ಷಣ ಏನೋ ನಡೆಸಬೇಕು, ಎಲ್ಲವನ್ನು ತಿಳಿದುಕೊಳ್ಳಬೇಕು, ಅಧಿಕಾರಿಗಳನ್ನು ಕೇಳಬೇಕು ಎಂದು ವಿಳಂಬ ಮಾಡಬೇಡಿ. ಯೂ ವಿಲ್ ನಾಟ್ ಬಿ ಡಿಕ್ಟೇಟಡ್ ಬೈ ಎ ಕೇಸ್ ವರ್ಕರ್, ಆರ್ ಯುವರ್ ಅಂಡರ್ ಸೆಕ್ರೆಟರಿ, ಫಾರ್ ದ್ಯಾಟ್ ಮ್ಯಾಟರ್ ವೆನ್ ದಿ ನೀಡ್ ಆಫ್ ದಿ ಅವರ್ ಇಸ್ ಟು ಫುಲ್‌ಫಿಲ್ ಬೇಸಿಕ್ ಕಮಿಟ್‌ಮೆಂಟ್ ಟು ದಿ ಸೊಸೈಟಿ, ಆ ಕ್ಷಣದಲ್ಲಿ ತೀರ್ಮಾನ ಮಾಡತಕ್ಕ ಕೆಚ್ಚೆದೆಯನ್ನು ನಾವುಗಳು ಉಳಿಸಿಕೊಳ್ಳಬೇಕು .........

ಮಾನ್ಯ ಗುಂಡೂರಾವ್‌ರವರಿಗೆ ಅತ್ಯಂತ ಪ್ರಿಯವಾಗಿದ್ದ ಕ್ರೀಡೆ ಎಂದರೆ ಫುಟ್‌ಬಾಲ್. ಆದ್ದರಿಂದ ಅವರು ಸ್ಥಾಪನೆ ಮಾಡಿದ ಫುಟ್‌ಬಾಲ್ ಅಸೋಸಿಯೇಷನ್ ಪೂರ್ಣಮಾಡಿ. ಅದನ್ನು ಪೂರ್ಣ ಮಾಡುವ ಬಗ್ಗೆ ಸಚಿವ ಸಂಪುಟವನ್ನು ಕರೆದು ಅದಕ್ಕಾಗಿ 10 ಲಕ್ಷ ರೂಪಾಯಿಗಳನ್ನು ನಿಯೋಜನೆ ಮಾಡಿದ್ದೇವೆ ಎಂದು ಹೇಳಿದರೆ ಸಾಕಾಗುವುದಿಲ್ಲ....... ಇವತ್ತು ಈ ಸ್ಟೇಡಿಯಂ ಮುಕ್ತಾಯ ಮಾಡುತ್ತೇವೆ, ಅದಕ್ಕೆ 5,6 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರೆ ಸಾಕಾಗುವುದಿಲ್ಲ. ಅದನ್ನು 6 ತಿಂಗಳೊಳಗೆ ಮುಗಿಸಿಕೊಡುತ್ತೇವೆ ಎಂದು ಹೇಳಿದರೆ ಮಾತ್ರ ಅದು ಗುಂಡೂರಾವ್‌ರವರಿಗೆ ನಿಮ್ಮ ನಿಜವಾದಂಥ ಅಭಿಮಾನದ ಸಂಕೇತವಾಗುತ್ತದೆ. ಏಕೆಂದರೆ ಅವರು ಕ್ರೀಡೆಗೆ ಮತ್ತು ಯುವಶಕ್ತಿಗೆ ಅತ್ಯಂತ ಹೆಚ್ಚಿನ ಬೆಂಬಲವನ್ನು ಕೊಟ್ಟಿದ್ದಂಥವರು. ಒಂದು ಮಾತನ್ನು ಹೇಳುತ್ತೇನೆ. ತಾವು ತಪ್ಪು ತಿಳಿದುಕೊಳ್ಳಬಾರದು. ತಾವು ಅವರ ಪ್ರತಿಮೆಯನ್ನು ಸ್ಥಾಪನೆ ಮಾಡುವ ಬಗ್ಗೆ ಹೇಳಿದ್ದೀರಿ. ಆ ಸಮಯದಲ್ಲಿ ನಾನು ಮದ್ರಾಸ್‌ನಲ್ಲಿದ್ದೆ. ನಾನು ಇಲ್ಲಿ ಯಾರ ಭಾವನೆಯನ್ನು ಕೂಡ ಟೀಕೆ ಮಾಡಲು ಹೋಗುತ್ತಿಲ್ಲ. ಈ ರೀತಿ ಪ್ರತಿಮೆಗಳನ್ನು ಮಾಡಿ ಅದರ ಮೇಲೆ ಕಾಗೆ ಗೂಬೆ ಕುಳಿತುಕೊಂಡು ಬೆಂಗಳೂರನ್ನು ಒಂದು ರೀತಿಯ ಮ್ಯೂಸಿಯಂ ರೀತಿ ಮಾಡಬೇಡಿ. ಆದ್ದರಿಂದ ಪ್ರತಿಮೆಗಳನ್ನು ಮಾಡುವುದು ಅಥವಾ ಯಾವುದಾದರೊಂದು

ಕಟ್ಟಡಕ್ಕೆ ಅವರ ಹೆಸರನ್ನು ಇಡುವುದು ಮಾಡಬೇಡಿ. ಆ ರೀತಿ ಮಾಡಿದರೆ ಒಂದು ರೀತಿಯ ಲೋಪವಾಗುತ್ತದೆ. ಮಾನ್ಯ ಗುಂಡೂರಾಯರಿಗೆ ಫುಟ್‌ಬಾಲ್ ಬಗ್ಗೆ ಅತ್ಯಂತ ಹೆಚ್ಚಿನ ಅಭಿಮಾನವಿತ್ತು. ಆದ್ದರಿಂದ ನಾಳೆ ನಾಡಿದ್ದರೊಳಗೆ ಸಂಪುಟದ ಸಭೆಯನ್ನು ಕರೆದು, ತೀರ್ಮಾನವನ್ನು ತೆಗೆದುಕೊಂಡು ಆ ಸ್ಟೇಡಿಯಂ ಪೂರ್ಣ ಮಾಡಿದರೆ ನಾವುಗಳು ಗುಂಡೂರಾಯರಿಗೆ ಕೊಡತಕ್ಕ ನಮನವಾಗುತ್ತದೆಂದು ಈ ಮೂಲಕ ಹೇಳಬಯಸುತ್ತೇನೆ.

ಶ್ರೀ ಎಂ. **ಮಹದೇವ್(ನಂಜನಗೂಡು)** ಸನ್ಮಾನ್ಯ ಅಧ್ಯಕ್ಷರೇ, ............ ಮಾನ್ಯ ಗುಂಡೂರಾಯರ ನಿಧನದ ಬಗ್ಗೆ ಅತೀವ ದುಃಖವನ್ನು ವ್ಯಕ್ತ ಪಡಿಸುತ್ತಿದ್ದೇನೆ. ಕರ್ನಾಟಕ ರಾಜ್ಯ, ರಾಷ್ಟ್ರ ಒಬ್ಬ ಧೀಮಂತ ವ್ಯಕ್ತಿಯನ್ನು ಕಳೆದುಕೊಂಡಿದೆ. ನನ್ನ ಮತ್ತು ಅವರ ವೈಯಕ್ತಿಕ ಹಾಗೂ ರಾಜಕೀಯ ಸಂಬಂಧವಾಗಿ ಹೇಳುವುದಾದರೆ ನಾವಿಬ್ಬರೂ ಕಷ್ಟ ಸುಖಗಳಲ್ಲಿ ಭಾಗಿಗಳಾಗಿದ್ದೆವು. ಅವರು ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ನಡೆಸಿದ್ದಾರೆ. ಸ್ನೇಹಿತರುಗಳನ್ನು ಗುರುತಿಸಿದ್ದಾರೆ. ಅವರು ಬಹಳ ನಿಷ್ಠುರವಾದಿಗಳು. ಏಕೆಂದರೆ ಸತ್ಯವನ್ನು ಮರೆ ಮಾಡದೆ, ಇದ್ದುದನ್ನು ಇದ್ದ ಹಾಗೆ ಹೇಳಿ ಬಹಳ ಜನರಿಗೆ ಅವರು ವಿರುದ್ಧವಾದಿಗಳಾಗಿದ್ದರು. ಕಾಂಗ್ರೆಸ್ ಪಕ್ಷವನ್ನು ಕಟ್ಟುವಂತಹ ವೇಳೆಯಲ್ಲಿ ಇಂದಿರಾ ಗಾಂಧಿಯವರ ಜೊತೆಯಲ್ಲಿ ಹಗಲಿರುಳು ದುಡಿದರು. ಅವರ ಕಷ್ಟಸುಖದಲ್ಲಿ ಭಾಗಿಗಳಾದರು. ರಾಷ್ಟ್ರಕ್ಕೆ ಒಳ್ಳೆಯ ಭವಿಷ್ಯ ಸಿಗಬೇಕಾದರೆ ನಮ್ಮ ಕಾಂಗ್ರೆಸ್ ಪಕ್ಷ ಬಲಯುತವಾಗಿರಬೇಕು ಇದರಿಂದ ಶ್ರೀಮತಿ ಇಂದಿರಾಗಾಂಧಿಯವರ ಕೈಯನ್ನು ಬಲಪಡಿಸಬೇಕು. ಅದಕ್ಕಾಗಿ ನಾನು ಯಾವಾಗಲೂ ಯಾವುದೇ ತ್ಯಾಗಕ್ಕೂ ಸಿದ್ಧವೆಂದು ಹೇಳುತ್ತಾ ದೇಶಕ್ಕಾಗಿ ದುಡಿದರು. ನಾವು ಸಂಭಾಷಣೆಗೆ ಕುಳಿತಾಗ ರಾಷ್ಟ್ರದ ಚಿಂತನೆಯ, ರಾಜ್ಯದ ಚಿಂತನೆಯ ಬಗ್ಗೆ ಮಾತನಾಡುತ್ತಿದ್ದರು. ನಾವು ತಿಳಿದುಕೊಂಡಿರುವ ಹಾಗೆ ಯಾವತ್ತೂ ಅಧಿಕಾರಕ್ಕೆ ಅಂಟಿದವರು ಅಲ್ಲ. ಸ್ವಚ್ಛವಾಗಿ ಶುದ್ಧವಾದ ಆಡಳಿತವನ್ನು ರಾಜ್ಯಕ್ಕೆ ಕೊಟ್ಟರು. ನಾವು ಏನು ತ್ಯಾಗ ಮಾಡಿ ಈ ಆಡಳಿತವನ್ನು ತೆಗೆದುಕೊಂಡಿದ್ದೇವೆ, ಈ ಆಡಳಿತಾಧಿಕಾರವನ್ನು ದೇಶಪ್ರೇಮವಿಟ್ಟುಕೊಂಡು ಮಾಡಿದರೆ ಮಾತ್ರ ಈ ದೇಶಕ್ಕೆ ಒಳ್ಳೆಯದಾಗುತ್ತದೆಂದು ಪದೇ ಪದೇ ಹೇಳುತ್ತಿದ್ದರು. 1983ರಲ್ಲಿ ಕಾಂಗ್ರೆಸ್ ಪಕ್ಷ ಸೋತಿತು. ಆಗ ಅವರೂ ಸೋತರು. ನಾವಿಲ್ಲಿ ಗೆದ್ದು ಬಂದೆವು, ಆಗ ನಮಗೆಲ್ಲರಿಗೂ ನಮ್ಮ ನಾಯಕ ಸೋತಿದ್ದಾರೆ, ನಮ್ಮ ಪಕ್ಷ ಸೋತಿದೆ ಎಂದು ನೋವಾಯಿತು. ನಾವಿಲ್ಲಿ ವಿಧಾನಸಭೆಯಲ್ಲಿ ಕೆಲಸ ಮಾಡಲಿಕ್ಕಾಗುವುದಿಲ್ಲವೆಂದಾಗ ನಮ್ಮನ್ನೆಲ್ಲಾ ಕರೆಸಿ ಅಧಿಕಾರಕ್ಕೆ ಬಂದರೆ ಮಾತ್ರ ಸುಖವೆಂದು ತಿಳಿದುಕೊಳ್ಳಬೇಡಿ. ವಿರೋಧ ಪಕ್ಷದಲ್ಲಿದ್ದುಕೊಂಡು ರಚನಾತ್ಮಕವಾಗಿ ಕೆಲಸ ಮಾಡಿ ರಾಜ್ಯಕ್ಕೆ ಒಳ್ಳೆ ಹೆಸರು ತನ್ನಿ ಎಂದು ಹೇಳಿದರು. ಅವರ ಸೋಲನ್ನು ಅವರು ಚಿಂತನೆ ಮಾಡಲಿಲ್ಲ. ಜನ ನಮ್ಮನ್ನು, ನಮ್ಮ ತಪ್ಪನ್ನು ಕಂಡು ಬಿಟ್ಟಿರಬಹುದು; ಆದರೆ ನಾವು ನಮ್ಮ ತಪ್ಪನ್ನು ತಿದ್ದಿಕೊಳ್ಳೋಣ. ಈ ದೇಶಕ್ಕೆ ಒಳ್ಳೆಯದು ಮಾಡೋಣವೆಂದು ಹೇಳುತ್ತಿದ್ದರು. ಒಂದು ವರ್ಷವಾದ ನಂತರ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ, ನೀವು ಈ ಸಭೆಗೆ ಸದಸ್ಯರಾಗಿ ಬರಬೇಕು ಎಂದು ನಾನು ಪತ್ರಿಕೆಗಳಲ್ಲಿ ಹೇಳಿಕೆ ನೀಡಿದೆ

......... ಅದು ಡೆಕ್ಕನ್ ಹೆರಾಲ್ಡ್‌ನಲ್ಲಿ ಬಾಕ್ಸ್ ಐಟಂನಲ್ಲಿ ಬಂತು. ನನಗೆ ಫೋನ್ ಮಾಡಿ ಏಕೆ ಈ ನಿಲುವು ತೆಗೆದುಕೊಂಡಿದ್ದೀರಿ, ಬನ್ನಿ ಮಾತನಾಡೋಣವೆಂದು ಹೇಳಿದರು. ಅದಕ್ಕೆ ನಾನು ಇಲ್ಲ, ಬರುವುದಿಲ್ಲ, ಇಲ್ಲಿಯ ಸದಸ್ಯತ್ವ ನನಗೆ ಬೇಕಾಗಿಲ್ಲವೆಂದು ಹೇಳಿದೆ. ಈ ಸಭೆಗೆ ನೀವು ಬರಬೇಕೆಂದು ಹೇಳಿದ ಮೇಲೆ ಮತ್ತೆ ಎರಡನೇ ಬಾರಿ ಫೋನ್ ಮಾಡಿ ನನ್ನನ್ನು ಕರೆಸಿಕೊಂಡರು, ನಿಮ್ಮ ನಿಲುವನ್ನು ಬದಲಾವಣೆ ಮಾಡಿಕೊಳ್ಳಿ ಎಂದು ನನಗೆ ಸಮಾಧಾನ ಮಾಡಿದರು. ಈಗ ನಿಮ್ಮ ಸದಸ್ಯತ್ವ ಹೋಗಿ ನಾನೊಬ್ಬನೇ ಈ ಸಭೆಗೆ ಪ್ರವೇಶ ಮಾಡುವುದರಲ್ಲಿ ಅರ್ಥವಿಲ್ಲ. ಇದ್ದರೆ ಇಬ್ಬರೂ ಸದಸ್ಯರಾಗಿರಬೇಕು ಎಂದು ಹೇಳಿದರು. ಅಂದರೆ ಅವರು ಅಷ್ಟು ಸ್ನೇಹಮಯಿ.

ಅನಂತರ ಅವರು ಆಸ್ಪತ್ರೆಗೆ ಹೋಗುವುದಕ್ಕೆ 4 ತಿಂಗಳ ಮುಂಚೆ ನಮ್ಮನ್ನು ಕರೆಸಿಕೊಂಡು ಮಾತನಾಡಿದ್ದರು. ಈ ರಾಜ್ಯದಲ್ಲಿ ಆಡಳಿತ ಹೇಗೆ ನಡೆಯುತ್ತಿದೆ. ಒಬ್ಬರಿಗೊಬ್ಬರು ಯಾವ ರೀತಿ ಸಹಕರಿಸಿಕೊಂಡು ಹೋಗಬೇಕು, ಯಾವ ರೀತಿ ಪಕ್ಷವನ್ನು ಬಲಪಡಿಸಬೇಕು. ಜನತೆಗೆ ಒಳ್ಳೆಯ ಆಡಳಿತವನ್ನು ಯಾವ ರೀತಿಯಾಗಿ ಕೊಡಬೇಕು, ಯಾವ ರೀತಿ ಜನಸಾಮಾನ್ಯರ ಬಗ್ಗೆ ಚಿಂತನೆ ಮಾಡಬೇಕೆಂದು ಅವರು ಹೇಳಿದರು. ಆಗಲೂ ಕೂಡಾ ನಾನು ಅವರಲ್ಲಿ ಮನವಿ ಮಾಡಿಕೊಂಡು ಎರಡನೇ ನನ್ನ ರಾಜೀನಾಮೆ ಕೊಡುತ್ತೇನೆ, ನೀವು ಬಂದು ಬೇಕಾದರೆ ಸರಿಪಡಿಸಿ, ಆದರೆ ನನಗೆ ಈ ಸದಸ್ಯತ್ವ ಮುಖ್ಯವಲ್ಲ. ನಮ್ಮಲ್ಲಿ ಮಧುರ ಬಾಂಧವ್ಯವನ್ನು ಉಳಿಸಬೇಕಾದರೆ ನೀವು ಒಬ್ಬರೇ ಸಮರ್ಥ ವ್ಯಕ್ತಿ ಎಂದು ಹೇಳಿದೆ. ಅವರಲ್ಲಿ ಗುಂಪುಗಾರಿಕೆ ಇರಲಿಲ್ಲ. ಎಲ್ಲ ಗುಂಪುಗಳನ್ನು ಒಟ್ಟಿಗೇ ಕರೆದುಕೊಂಡು ಹೋಗಿ ಸಮಾಧಾನ ಮಾಡುತ್ತೀರಿ. ಎಲ್ಲರೂ ನಿಮ್ಮಲ್ಲಿ ಅಭಿಮಾನವನ್ನು ಇಟ್ಟುಕೊಂಡಿದ್ದಾರೆಂದು ನಾನು ಹೇಳಿದಾಗ ಅವರು ಹೇಳಿದರು - ಈಗ ಆ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ, ಕಾಲ ಬಂದಾಗ ನೋಡೋಣ ಎಂದು ಹೇಳಿದರು.

ಅವರು ಯಾವಾಗಲೂ ದೀನದಲಿತರ ಬಗ್ಗೆ, ಬಡವರ ಬಗ್ಗೆ ಚಿಂತನೆ ಮಾಡುತ್ತಿದ್ದರು. ಈ ದೇಶದ ದೀನದಲಿತರ ಏಳಿಗೆಯ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಅವರು ಪದೇ ಪದೇ ಒತ್ತಿ ಒತ್ತಿ ಹೇಳುತ್ತಿದ್ದರು. ಆ ಧೀಮಂತ, ಸ್ನೇಹಿಮಯಿ ಇಂದು ನಮ್ಮ ಮುಂದಿಲ್ಲ. ವೈಯಕ್ತಿಕವಾಗಿ ನನಗೆ ಅತೀವ ದುಃಖವಾಗುತ್ತಿದೆ. ಈಗ ಆಗಿರುವ ನಷ್ಟವನ್ನು ಯಾವ ರೀತಿ ತುಂಬಿಕೊಳ್ಳಬೇಕೆಂದು ತೋಚುತ್ತಿಲ್ಲ. ಇದರಿಂದ ನಾವು ಚೇತರಿಸಿಕೊಳ್ಳುವುದೇ ಕಷ್ಟವಾಗಿದೆ. ನಮ್ಮಿಬ್ಬರಲ್ಲಿ ಅಂಥ ಒಂದು ಮಧುರ ಸ್ನೇಹ ಇತ್ತು. ನಾನು ಒಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತೇನೆ. ದೀನದಲಿತರ ಬಗ್ಗೆ, ಬಡವರ ಬಗ್ಗೆ ಯಾವ ಮಹಾನ್ ವ್ಯಕ್ತಿ ಚಿಂತನೆ ಮಾಡುತ್ತಿದ್ದರು, ಆ ಮಹಾನ್ ವ್ಯಕ್ತಿ ಗುಂಡೂರಾಯರ ಹೆಸರಲ್ಲಿ ಬೆಂಗಳೂರಿನಲ್ಲಿ ಒಂದು ಕಲ್ಯಾಣ ಮಂಟಪವನ್ನು ನಿರ್ಮಾಣ ಮಾಡಿಸಬೇಕು. ಏಕೆಂದರೆ, ಈ ಬೆಂಗಳೂರಿನಲ್ಲಿ ಲಕ್ಷಾಂತರ ಜನ ಬಡವರು ವಾಸಿಸುತ್ತಿದ್ದಾರೆ. ಅವರು ಯಾವುದೇ ಶುಭಕಾರ್ಯಗಳನ್ನು

ಮಾಡಲು ಛತ್ರಗಳು ಸಿಕ್ಕುತ್ತಿಲ್ಲ. ಹತ್ತಾರು ಜನ ಕುಳಿತುಕೊಳ್ಳುವಷ್ಟು ಜಾಗವನ್ನು ಅವರಿಗೆ ಯಾರೂ ಕೊಡುವುದಿಲ್ಲ, ಬೀದಿಯಲ್ಲಿ ಇವತ್ತು ಅವರು ಶುಭಕಾರ್ಯಗಳನ್ನು ಮಾಡುತ್ತಿದ್ದಾರೆ ............., ಮಾನ್ಯ ಗುಂಡೂರಾಯರ ಹೆಸರಿನಲ್ಲಿ ಒಂದು ಕಲ್ಯಾಣ ಮಂಟಪವನ್ನು ಸ್ಥಾಪನೆ ಮಾಡಿದರೆ ದಿನನಿತ್ಯ ಸಾವಿರಾರು ಬಡಜನರಿಗೆ, ದೀನದಲಿತರಿಗೆ ಸಹಾಯವಾಗುತ್ತದೆ ಗುಂಡೂರಾಯರನ್ನು ಅವರು ನೆನೆಸಿಕೊಳ್ಳಲು ಅವಕಾಶವಾಗುತ್ತದೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ) ಸನ್ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಗುಂಡೂರಾಯರು ಇಷ್ಟು ಬೇಗ ನಮ್ಮನ್ನು ಅಗಲಿ ಹೋಗುತ್ತಾರೆಂದು ಯಾರೂ ಕೂಡಾ ಅಂದುಕೊಂಡಿರಲಿಲ್ಲ. ಸಾವು ಯಾವ ಸಮಯಕ್ಕೆ ಯಾರಿಗೆ ಬರುತ್ತದೆಂಬುದಕ್ಕೆ ಹೇಳುವುದಕ್ಕಾಗುವುದಿಲ್ಲ. ಗುಂಡೂರಾಯರು ದೃಢಕಾಯ, ಅಂಥ ಆರೋಗ್ಯವಂತ ವ್ಯಕ್ತಿ; ಅತಿ ಚಿಕ್ಕ ವಯಸ್ಸಿನಲ್ಲಿಯೇ ಕರ್ನಾಟಕದ ಮುಖ್ಯಮಂತ್ರಿಯಾಗಿ ಕೆಲಸ ನಿರ್ವಹಿಸಿದ್ದರು. ನಾವು ಎರಡು ರೀತಿ ರಾಜಕಾರಣವನ್ನು ನೋಡಿದ್ದೇವೆ. ಮೊದಲನೆಯದು ನೈಸ್ ಆಗಿ ಮಾತನಾಡಿ ಬೆಣ್ಣೆ ಹಚ್ಚಿ, ತುಪ್ಪ ಸವರಿ ರಾಜಕಾರಣಿಗಳನ್ನು ಪುಸಲಾಯಿಸಿ ಮಾಡತಕ್ಕದ್ದು. ಎರಡನೆಯದು ನೇರವಾಗಿ ಯಾವುದೇ ವಿಷಯವನ್ನಾಗಲಿ; ವಾಸ್ತವಿಕವಾಗಿ ಇದ್ದುದನ್ನು ಇದ್ದ ಹಾಗೇ ಹೇಳಿ ಲೋಕ ನಿಷ್ಠುರವಾಗಿ ಸಮಾಜವನ್ನು, ಜನತೆಯನ್ನು ಎದುರು ಹಾಕಿಕೊಳ್ಳತಕ್ಕದ್ದು. ಗುಂಡೂರಾಯರದು ಎರಡನೇ ರೀತಿ ರಾಜಕಾರಣವಾಗಿತ್ತು. ಅವರು ಬೆಳೆದು ಬಂದ ಪರಿಸರವನ್ನು ಗಮನಿಸಿದರೆ ಒಬ್ಬ ಸಾಮಾನ್ಯ ವ್ಯಕ್ತಿಯಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ, ರಾಷ್ಟ್ರಮಟ್ಟದಲ್ಲಿ ಯುವ ರಾಜಕಾರಣಿಯಾಗಿ ಬೆಳೆಯುವಂಥ ವ್ಯಕ್ತಿತ್ವವುಳ್ಳವರಾಗಿದ್ದರು. ಅವರ ರಾಜಕಾರಣ ಬಹಳ ಒರಟು ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದುದನ್ನು ನಾನು ಕೇಳಿದ್ದೇನೆ. ಆದರೆ, ಅವರ ಹೃದಯ ಶ್ರೀಮಂತಿಕೆ, ಯಾವುದೇ ವಿಚಾರವನ್ನಾಗಲಿ ಇದ್ದುದನ್ನು ಇದ್ದ ಹಾಗೆ ಹೇಳುವಂಥ ವ್ಯಕ್ತಿ. ಅವರು ಮುಖ್ಯಮಂತ್ರಿಯಾಗಿದ್ದಾಗ ನಾನು ವಿದ್ಯಾರ್ಥಿಯಾಗಿ ಪತ್ರಿಕೆ ಓದುತ್ತಿದ್ದೆನು.ನಾನು ವಿದ್ಯಾರ್ಥಿಗಳ ಮುಖಂಡನಾಗಿ ಅವರನ್ನು ಆಹ್ವಾನಿಸಿದ್ದೆವು. ಈ ಸಂದರ್ಭದಲ್ಲಿ ಅವರ ಭಾಷಣವನ್ನು ಕೇಳಿದ್ದೆನು. ಬಹಳ ನೇರವಾಗಿ, ಸರಳವಾದ ರೀತಿಯಲ್ಲಿ ಇದ್ದುದ್ದನ್ನು ಇದ್ದ ಹಾಗೆ ಮಾತನಾಡುವಂತಹ ವ್ಯಕ್ತಿತ್ವ ಅವರದು. ಈಗಿನ ಪೀಳಿಗೆಯವರು ಅವರದು ಒರಟು ರಾಜಕೀಯ ಎಂದು ಹೇಳಿದರೂ ಸಹ, ಅವರ ನೇರವಾದ ರಾಜಕೀಯವನ್ನು ಇವು ಒಪ್ಪುತಕ್ಕಂಥದ್ದು, ಸಮಾಜ ಮತ್ತು ದೇಶ ಕೊನೆಯದಾಗಿ ಅದನ್ನು ಒಪ್ಪುತಕ್ಕಂಥದ್ದು. ಇದು ಸತ್ಯ, ವಸ್ತು ಸ್ಥಿತಿ ಎಂದು ಕೊನೆಯದಾಗಿ ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಗುಂಡೂರಾಯರ ಕಾಲದಲ್ಲಿ ವಿಧಾನಸೌಧ ಮುಂದೆ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರ ಪ್ರತಿಮೆ ಮಾಡಿಸಿದರು. ಅವರು ಹಲವಾರು ಕಾರ್ಯಕ್ರಮಗಳನ್ನು ಮಾಡಲಿಕ್ಕೆ ಹೊರಟಿದ್ದರು. ಮತ್ತೆ ಅವರ ಧೈರ್ಯವನ್ನು ನಾನು ಸ್ಪಷ್ಟ ಹೇಳಬೇಕಾಗುತ್ತದೆ. ನಾವು ಪತ್ರಿಕೆಗಳಲ್ಲಿ ಮಾತನಾಡುವಾಗ ಸ್ವಲ್ಪ ಹಿಂದೆಮುಂದೆ ನೋಡುತ್ತೇವೆ. ಆದರೆ, ಗುಂಡೂರಾವ್ ಪತ್ರಿಕೆಗಳಿಗೆ ನೇರವಾಗಿ ಹೇಳಿಬಿಡುತ್ತಿದ್ದರು.

ಇದರಿಂದ ಏನು ತೋರಿಸುತ್ತದೆ ಎಂದರೆ ಯಾವುದು ಸರಿ ಯಾವುದು ತಪ್ಪು ಎಂದು ವಿಮರ್ಶೆ ಮಾಡುವುದಿಲ್ಲ. ಆದರೆ, ಅವರ ಧೈರ್ಯ ಒಂದು ರೀತಿಯ ಒರಟುತನವನ್ನು ರೂಢಿಸಿಕೊಂಡು ಬಂದಿದ್ದರು. ಮತ್ತು ನೇರವಾಗಿ ಮಾತನಾಡುತ್ತಿದ್ದರು. ಕೆಲವು ವಿಚಾರಗಳಲ್ಲಿ ಹಿಂದೆಮುಂದೆ, ಮುಚ್ಚುಮರೆ ಇಲ್ಲದಂತಹ ರಾಜಕೀಯವನ್ನು ಮಾಡಿ ಬಿಟ್ಟು ಹೋಗಿರತಕ್ಕಂಥಹ ಗುಂಡೂರಾವ್‌ರವರ ವ್ಯಕ್ತಿತ್ವವನ್ನು ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು. ಅವರ ಸವಿ ನೆನಪಿಗಾಗಿ ಅವರ ಕ್ಯಾಬಿನೆಟ್ನಲ್ಲಿ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ವೀರಪ್ಪ ಮೊಯಿಲಿಯವರು ಇವತ್ತು ಮುಖ್ಯಮಂತ್ರಿಗಳಾಗಿದ್ದಾರೆ. ಗುಂಡೂರಾಯರ ಹೆಸರಿನಲ್ಲಿ ಅವರಿಗೆ ಅತ್ಯುತ್ತಮವಾದ ಕಾರ್ಯಕ್ರಮಗಳು ಏನಿವೆಯೋ ಅದನ್ನು ಕಾರ್ಯಗತ ಮಾಡಬೇಕು. ಯುವಕರಾಗಿ ಕೆಲಸ ಮಾಡಿದ್ದಾರೆ, ಕ್ರೀಡೆಯಲ್ಲಿ ಬಹಳ ಆಸಕ್ತಿ ತೆಗೆದುಕೊಂಡಿರತಕ್ಕಂಥವರಾಗಿದ್ದಾರೆ. ಮತ್ತೆ ಅವರು ಕ್ರೀಡೆ, ಸಂಸ್ಕೃತಿ ಇಲಾಖೆಯಲ್ಲಿ ಇದ್ದಾಗ ಸ್ವತಃ ಅವರೇ ನಮ್ಮ ಜೊತೆಗೆ ನೃತ್ಯ ಮಾಡಿದ್ದಾರೆ. ಎನ್.ಸಿ.ಸಿ. ಡೇ ಗೆ ಬಂದಿದ್ದಾಗ ಕೂರ್ಗಿ ಹಾಡನ್ನು ಹಾಡಿ ನಮ್ಮ ಜೊತೆಗೆ ನೃತ್ಯ ಮಾಡಿದ್ದಾರೆ. ನೃತ್ಯ ಮಾಡದೆ ಇರುವವರನ್ನು ನೃತ್ಯ ಮಾಡಿಸಿದ್ದಾರೆ. ಸ್ವಿಮಿಂಗ್ ಪೂಲ್ ಉದ್ಘಾಟನೆ ರೀತಿಯಿಂದ ಬಹಳಷ್ಟು ಕಾಂಟ್ರೋವರ್ಸಿಗೆ ಒಳಗಾದರು ..... ಕ್ರೀಡಾ ಜಗತ್ತು, ಕ್ರೀಡೆ ಅವರ ಹೆಸರಿನಲ್ಲಿ ನಡೆಯಲಿ ಎಂಬ ಸಲಹೆಯನ್ನು ಸರ್ಕಾರದ ಮುಂದೆ ಇಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ ........... ನಾಳೆ ಸುಮಾರು 11 ಗಂಟೆಗೆ ಬ್ರಿಟಿಷ್ ಏರ್‌ವೇಸ್‌ನಲ್ಲಿ ಗುಂಡೂರಾವ್ ರವರ ಮೃತದೇಹ ಬೊಂಬಾಯಿಗೆ ಬರುತ್ತದೆ. ನಾವು ಒಂದು ಸ್ಪೆಶಲ್ ಫ್ಲೈಟ್ ಮಾಡಿದ್ದೇವೆ. ಅದರ ಪ್ರಕಾರ ಸಾಧಾರಣ ಎರಡು, ಎರಡೂವರೆ ಗಂಟೆಗೆ ಅದು ಬೆಂಗಳೂರಿಗೆ ತಲುಪುತ್ತದೆ. ಆಮೇಲೆ ಮುಂದಿನ ಕಾರ್ಯಕ್ರಮದ ಬಗ್ಗೆ ಅವರ ಕುಟುಂಬದ ಸದಸ್ಯರ ಜೊತೆಯಲ್ಲಿ ಸಮಾಲೋಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

**ಅಧ್ಯಕ್ಷರು:** ಈಗ ಎಲ್ಲಾ ಮಹನೀಯರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೋರುತ್ತೇನೆ.

(ಸಭೆಯು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿತು)

**ಅಧ್ಯಕ್ಷರು:** ಇಂದಿನ ಕಾರ್ಯಕ್ರಮಗಳು ಮುಗಿದು, ನಾಳೆ 11 ಗಂಟೆಗೆ ಮತ್ತೆ ಸಭೆ ಸೇರುತ್ತದೆ.

## ವಿಧಾನಪರಿಷತ್ತಿನಲ್ಲಿ ಗಣ್ಯರು ಅರ್ಪಿಸಿದ ಶ್ರದ್ಧಾಂಜಲಿ

26 ಆಗಸ್ಟ್ 1993 ರಂದು ವಿಧಾನ ಪರಿಷತ್ತು ಸಮಾವೇಶಗೊಂಡಿತ್ತು. ಶ್ರೀ ಡಿ. ಬಿ. ಕಲ್ಮಣ್ಕರ್ (ಸಭಾಪತಿಯವರು) ಈಗ ಸಂತಾಪ ಸೂಚನೆಗಳು. ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಗುಂಡೂರಾವ್, ಫೀಲ್ಡ್ ಮಾರ್ಶಲ್ ಕೆ.ಎಂ. ಕಾರಿಯಪ್ಪ ಮತ್ತಿತರು ನಿಧನರಾಗಿರುವುದನ್ನು ವಿಷಾದದಿಂದ ತಿಳಿಸುತ್ತೇನೆ ಎಂದು ಗುಂಡೂರಾಯರ ನಿಧನ ವಾರ್ತೆಯನ್ನು ಪ್ರಕಟಿಸಿದರು.

**ಶ್ರೀ ಭೀಮಣ್ಣ ಖಂಡ್ರೆ (ಸಭಾ ನಾಯಕರು)**: ಸನ್ಮಾನ್ಯ ಸಭಾಪತಿಯವರೆ, ಯಾವುದೇ ದೇಶದಲ್ಲಾಗಲಿ ಗಣ್ಯವ್ಯಕ್ತಿಗಳು ಮೃತ್ಯು ಹೊಂದಿದ ಮೇಲೆ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯ. ಈ ಪ್ರಕಾರವಾಗಿ ಇಂದು ಶ್ರೀ ಕೆ.ಎಂ. ಕಾರಿಯಪ್ಪ ಹಾಗೂ ನಮ್ಮ ಜೊತೆ ಸದಾ ಇದ್ದಂತಹ ನಮ್ಮ ನಾಯಕರಾದ ಮಾನ್ಯ ಗುಂಡೂರಾವ್ ಇವರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿದೆ.

ನನಗೆ ಒಂದು ಮಾತು ನೆನಪಿಗೆ ಬರುತ್ತಿದೆ. ಅದೇನೆಂದರೆ ಧರ್ಮರಾಜನಿಗೆ ಹಲವಾರು ಪ್ರಶ್ನೆಗಳನ್ನು ಯಕ್ಷ ಕೇಳಿದನಂತೆ, ಅದರಲ್ಲಿ ಒಂದು ಪ್ರಶ್ನೆ ಏನೆಂದರೆ ಜಗತ್ತಿನಲ್ಲಿ ಅತಿದೊಡ್ಡ ಆಶ್ಚರ್ಯವೇನು? ಎಂದು. ಅದಕ್ಕೆ ಧರ್ಮರಾಜನು "ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನು ಹುಟ್ಟಿದ ಮೇಲೆ ಸಾಯಲೇ ಬೇಕು" ಎಂದು ಉತ್ತರ ಕೊಟ್ಟನಂತೆ. ಎಲ್ಲ ಮಾತುಗಳು ಸಹ ಅನಿಶ್ಚಿತ, ಆದರೆ ಹುಟ್ಟಿದ ಮನುಷ್ಯ ಸಾಯುವುದು ನಿಶ್ಚಿತ. ಆದರೂ ಕೂಡ ಪ್ರತಿಯೊಬ್ಬ ಮನುಷ್ಯನು ತಾನು ಏನೋ ಸಾವಿರಾರು ವರ್ಷ ಬದುಕುತ್ತೇನೆ ಎಂಬ ಭಾವನೆಯಲ್ಲಿ ಜೀವನವನ್ನು ಮಾಡುತ್ತಾನೆ. ಇದು ಒಂದು ರೀತಿ ಆಶ್ಚರ್ಯಕರವಾಗಿದ್ದರೂ, ಅದು ಸಹಜ. ಹಾಗೆಯೇ ನಮ್ಮ ಗುಂಡೂರಾವ್ ಅವರು "ನನಗ ಇನ್ನೂ ಸ್ವಲ್ಪ ವಯಸ್ಸು, ನಾನು ಇನ್ನು ಎಷ್ಟೋ ಬಾರಿ ಮುಖ್ಯಮಂತ್ರಿಯಾಗಿ ಬರಬಹುದು ಎಂದು ಹೇಳುತ್ತಿದ್ದ ಒಂದು ಮಾತು ನನಗೆ ನೆನಪಿಗೆ ಬರುತ್ತಿದೆ. ಇದು ಎಲ್ಲಾ ಮನುಷ್ಯರಲ್ಲಿಯೂ ಸಹಜವಾಗಿ ಇರುವ ಭಾವನೆಯೇ ಸರಿ. ಆದರೂ ಕೂಡ "ಮ್ಯಾನ್ ಪ್ರೊಪೋಸಸ್ ಗಾಡ್ ಡಿಸ್ಪೋಸಸ್" ಎಂದು ಹೇಳುವ ರೀತಿಯಲ್ಲಿ ನಾವು ಏನೆ ಇಚ್ಛೆ ಪಟ್ಟರೂ ಸಾವು ನಮ್ಮ ಕೈಯಲ್ಲಿಲ್ಲ.

ಸ್ವಾಮಿ ರಾಮದಾಸ್ ಅವರು ಒಂದು ಕವಿತೆಯಲ್ಲಿ ಹೀಗೆ ಹೇಳಿದ್ದಾರೆ "ಮನಿಮಾನಸ್ ಹೀ ರಹತೇ ಚಿಂತಾ ವಹತೇ ಅಕಸ್ಮಾತ್ ಹೋಣಾರು" ಅಂದರೆ ಮನುಷ್ಯ ಎಷ್ಟೋ ವಿಷಯಗಳನ್ನು ಕನಸಿನಂತೆ ತಿಳಿದುಕೊಂಡಿದ್ದಾಗ, ಆಕಸ್ಮಿಕವಾಗಿ ಏನು ಆಗಬೇಕಾಗಿತ್ತೋ ಅದು ಆಗಿಯೇ ತೀರುತ್ತದೆ.

ಹುಟ್ಟುವುದು ಒಂದು ಆಕ್ಸಿಡೆಂಟ್, ಸಾಯುವುದು ಒಂದು ಆಕ್ಸಿಡೆಂಟ್, ಹೀಗೆ ರಾಯರ ಬಗ್ಗೆ ಮೂರು ದಿವಸದಿಂದ ಸತತವಾಗಿ ಇಡೀ ರಾಜ್ಯದ ಮೂಲೆ ಮೂಲೆಯಲ್ಲಿ

ಸಂತಾಪ ಸೂಚನೆ ಮಾಡುತ್ತಿದ್ದೇವೆ. ಇರ್ರೆಸ್ಪೆಕ್ಟೀವ್ ಆಫ್ ಪಾರ್ಟಿ, ಕಾಸ್ಟ್ ಅಂಡ್ ರೇಸ್, ಇದಕ್ಕೆ ಕಾರಣ ಅವರ ನಿಸ್ವಾರ್ಥ ಸೇವೆ. ಒಬ್ಬ ಗುರು ವೇದವೆಲ್ಲಾ ಹೇಳಿದ ನಂತರ ಶಿಷ್ಯ ಕೇಳಿದ. ಇಷ್ಟೆಲ್ಲ ಓದುವುದಕ್ಕೆ ನಮಗೆ ಸಮಯವಿಲ್ಲ. ಎರಡು ಮಾತಿನಲ್ಲಿ ಯಾವುದು ಒಳ್ಳೆಯದು, ಕೆಟ್ಟದ್ದು ಎಂದು ಕೇಳಿದಾಗ ಪರೋಪಕಾರಕ್ಕಿಂತ ಪುಣ್ಯ ಯಾವುದೂ ಇಲ್ಲ, ಪರಪೀಡನೆಯಂತಹ ಪಾಪ ಯಾವುದೂ ಇಲ್ಲ ಎಂದು ಗುರು ಹೇಳಿದನಂತೆ.

ಗುಂಡೂರಾಯರು ರಾಜಕೀಯ ಜೀವನದಲ್ಲಿದ್ದಾಗ ಎಷ್ಟೋ ಜನರು ಅವರಿಗೆ ವಿರೋಧ ಆಗಿರಬಹುದು, ಅವರ ಬಗ್ಗೆ ಎನಿಮಿಟಿ ಇದ್ದಿರಬಹುದು ಅವರ ಬಗ್ಗೆ ಥ್ರೆಟನ್ಸ್ ಇರಬಹುದು. ಆದರೆ, ಅವರು ಯಾರ ಮನಸ್ಸಿಗೂ ನೋಯಿಸಿ ಮಾತನಾಡುತ್ತಿರಲಿಲ್ಲ. ಅಂತಹ ದೊಡ್ಡ ವ್ಯಕ್ತಿತ್ವ ಗುಂಡೂರಾಯರದು. ಯಾರದೇ ಮನಸ್ಸನ್ನು ನೋಯಿಸಿದ್ದರು ಎಂದು ನಾನು ಕೇಳಿಲ್ಲ. ಇಂಥಹ ದೊಡ್ಡ ಗುಣಗಳು ಅವರದು ಎಂದು ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಗುಂಡೂರಾವ್ ಮುಖ್ಯ ಮಂತ್ರಿಯಾದರು.

ನಮ್ಮ ಭಾಲ್ಕಿ ಕ್ಷೇತ್ರದಿಂದ ಅವರದು ಒಂದು ದೈವದ ಡಿಸಿಷನ್ ಇತ್ತು. ಫೇಟ್ ಇತ್ತು. ಅವರು ದೊಡ್ಡವರಾದದ್ದು ನಮ್ಮ ಕ್ಷೇತ್ರದಿಂದ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ. ನಮ್ಮ ಕಾಂಗ್ರೆಸ್ ಸರಕಾರದಲ್ಲಿ ಯಾರು ದೊಡ್ಡವರು ಎಂಬ ಪ್ರಶ್ನೆ ಬಂತು ಅಥವಾ ಯಾರು ಸರ್ಕಾರ ನಡೆಸಬೇಕು, ಯಾರ ಆರ್ಡರ್ ಪಾಲಿಸಬೇಕೆಂಬ ಪ್ರಸಂಗ ಬಂದ ಸಮಯದಲ್ಲಿ ಆಗ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದರು. ಅವರ ಕೆಳಗೆ ಸಂಜಯ್ ಗಾಂಧಿಯವರಿದ್ದರು. ಅವರು ಹೇಳಿದರೆ ಎಷ್ಟೋ ಆಗುತ್ತಿತ್ತು. ಅದನ್ನು ನಾವು ನೋಡಿದ್ದೇವೆ ಹಾಗೆ ಸಂಜಯ್ ಗಾಂಧಿಯವರು ಭಾಲ್ಕಿಗೆ ಬರುವ ಸಮಯದಲ್ಲಿ ಆಗ ಮುಖ್ಯ ಮಂತ್ರಿಗಳಾಗಿದ್ದ ಅರಸರಿಗೂ ಗುಂಡೂರಾಯರಿಗೂ ಸ್ವಲ್ಪ ವೈಮನಸ್ಸಿತ್ತು. ಆಗ ಅವರು ರಾಜ್ಯ ಮಂತ್ರಿಗಳಾಗಿದ್ದರು. ಅವರನ್ನು ತೆಗೆಯಬೇಕೆಂದು ಪ್ರಯತ್ನ ಮಾಡುತ್ತಿರುವಾಗ ಈ ಸಂದರ್ಭ ಬಂತು. ಸಂಜಯ್ ಗಾಂಧಿ ಬಂದಾಗ ಒಂದು ಗವರ್ನಮೆಂಟ್ ಗ್ರೂಪ್ 22 ಮಂದಿ ಮಂತ್ರಿಗಳು ಬೀದರಿನಲ್ಲಿ ಕೂತು ಅದು ಸರಕಾರದ ಒಂದು ಸಮಾರಂಭವೆಂದು ತಿಳಿದುಕೊಂಡು ಒಂದು ಸಾವಿರ ಲಾರಿಗಳಲ್ಲಿ ಜನರನ್ನು ಕರೆತಂದು ಪ್ರೊಸೆಷನ್ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಭಾಲ್ಕಿಯಲ್ಲಿ ನಾವೆಲ್ಲಾ ಪ್ರಯತ್ನ ಮಾಡಿ ಸಂಜಯ್ ಗಾಂಧಿಯವರನ್ನು ಬಾಲ್ಕಿಗೆ ಕರೆತಂದು ಒಳ್ಳೆಯ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಪ್ರಯತ್ನ ಮಾಡಿದೆವು, ಕಾರಣ ಸಂಜಯ್ ಗಾಂಧಿಯವರ 5 ಅಂಶಗಳ ಕಾರ್ಯಕ್ರಮ ಮತ್ತು ಪ್ರಧಾನ ಮಂತ್ರಿಗಳ 20 ಅಂಶಗಳ ಕಾರ್ಯಕ್ರಮಗಳನ್ನು ನಾವು ಭಾಲ್ಕಿಯಲ್ಲಿ ಸಂಪೂರ್ಣವಾಗಿ ಜಾರಿ ಮಾಡಿದ್ದೆವು. 5000 ಕೆಲಸಗಾರರು 10 ಕಿ.ಮೀ ರಸ್ತೆ ಮಾಡಿ ಅದಕ್ಕೆ ಲತಾ ಠಾಕೂರ್ ಎಂದು ಹೆಸರು ಕೊಡಬೇಕೆಂದು ಸಂಜಯ್ ಗಾಂಧಿಯವರನ್ನು ಕರೆಸಿದ್ದೆವು. ಅವರ ಪೈಕಿ ಅವರೂ ಒಬ್ಬರು. ಒಂದು ದಿವಸದಲ್ಲಿ 2000 ಜನರಿಗೆ ಈ ಆಪರೇಶನ್ ಮಾಡಿದ್ದರಿಂದ ಇದು ಜಗಜ್ಜಾಹೀರಾಗಿ ಇಡೀ ಪ್ರಪಂಚದಲ್ಲಿಯೇ ರೆಕಾರ್ಡ್ ಮಾಡಿದ್ದರಿಂದ ಮಾನ್ಯ ಸಂಜಯ್ ಗಾಂಧಿಯವರು

ಬರಬೇಕೆದು ಇನ್ಸ್ಟೆಟ್ ಮಾಡಿದ್ದೆವು. ಅವರು ಬರುವಾಗ ಎಲ್ಲಿ ಯಶಸ್ವಿ ಮಾಡಬೇಕು ಎಂಬ ಪ್ರಸಂಗ ಬಂತು. ಈ ಸಮಯದಲ್ಲಿ ಬೀದರಿನಲ್ಲಿ 25 ಸಾವಿರ ಜನ ಇರಲಿಲ್ಲ, ಭಾಲ್ಕಿಯಲ್ಲಿ 2 ಲಕ್ಷ ಜನ ಇತ್ತು ಮತ್ತು ಕಾರ್ಯವೂ ಕೂಡ ಹಾಗೆಯೇ ಇತ್ತು. ಆ ಸಮಯದಲ್ಲಿ ಸಂಜಯ್ ಗಾಂಧಿಯವರು ಅರಸು ಅವರನ್ನು ಕರೆಸಿ ಹೇಳಿದರು. ನೋಡಿ ಗುಂಡೂರಾವ್ ಅವರನ್ನು ತಗೆಯಬೇಕೆಂದು ಹೇಳುತ್ತಿದ್ದೀರಿ, ಹಾಗಲ್ಲ, ಅವರಿಗೆ ಪ್ರಮೋಷನ್ ಕೊಡಿ ಎಂದು ಹೇಳಿದರು. ಅವರಿಗೆ ಪ್ರಮೋಷನ್ ಕೊಟ್ಟು ಮಂತ್ರಿಗಳಾದನಂತರ ಮತ್ತೆ, ಮುಖ್ಯಮಂತ್ರಿಗಳಾಗುವ ಪ್ರಸಂಗ ಅವರಿಗೆ ಬಂತು. ಅದಕ್ಕಾಗಿ ನಾನು ಈ ಮಾತನ್ನು ಹೆಮ್ಮೆಯಿಂದ ಹೇಳುತ್ತಿದ್ದೇನೆ ಅಷ್ಟೆ. ಅವರು ಮುಖ್ಯಮಂತ್ರಿ ಆದರು. ಅದರ ನಂತರ ಎಫ್ ಎಂ ಖಾನ್ ಅವರು ಅವರ ಬಲಗೈ ಇದ್ದ ಹಾಗೆ ಇದ್ದರು. ಅವರು ನಮಗೂ ಫ್ರೆಂಡ್. ಅವರು ಹೇಳಿದರು, ಗುಂಡೂರಾವ್‌ರನ್ನು ಮುಖ್ಯಮಂತ್ರಿ ಮಾಡಿದ್ದೀರಿ, ಈಗ ಕಿಸಾನ್ ಸಭೆ ಮಾಡಿ ಎಂದು. ಆಗ ನಾನು ಕಿಸಾನ್ ಮೂವ್ಮೆಂಟ್ ಇನ್‌ಚಾರ್ಜ್ ಇದ್ದೆ. ಆಗ ಧೈರ್ಯ ಮಾಡಿ 1980 ರಲ್ಲಿ ಭಾಲ್ಕಿಯಲ್ಲಿ ಕಿಸಾನ್ ಸಭೆ ಮಾಡಿದ್ದೆವು. ಇಡೀ ರಾಜ್ಯದ 1 ಲಕ್ಷ 50 ಸಾವಿರ ಜನ ಸೇರಿದರು. ಆಗ ಡಿಮ್ಯಾಂಡ್ ಇಟ್ಟಾಗ ಗುಂಡೂರಾವ್ ಪ್ರಾಮಿಸ್ ಮಾಡಿದರು. ನಿಮ್ಮದೇನು ಬೇಡಿಕೆ ಇದೆ, ಅದೂ ರೈತರು ಬಹಳ ಕಷ್ಟದಲ್ಲಿದ್ದಾರೆ. ಅದರ ಬಗ್ಗೆ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಜಾರಿಗೆ ಕೊಡುತ್ತೇನೆಂದು ಹೇಳಿದರು. ಮರು ದಿವಸ ಇಲ್ಲೇ ಬಂದು ಡಿಮ್ಯಾಂಡ್ ಪ್ರಕಾರ ಒಂದು ಸಬ್ ಕಮಿಟಿ ಮಾಡಿದರು, ಬಂಗಾರಪ್ಪ ಅದರ ಅಧ್ಯಕ್ಷರಾಗಿದ್ದರು. ಅದರಲ್ಲಿ ನಾನು ಮತ್ತು ಕೆ.ಹೆಚ್. ಪಾಟೀಲರು ಸದಸ್ಯರಾಗಿದ್ದೆವು. ಸಮಿತಿಯವರು ಒಂದು ವರದಿ ಕೊಟ್ಟೆವು. ಆ ವರದಿಯಲ್ಲಿದ್ದಂಥ 20 ಡಿಮ್ಯಾಂಡ್ಸ್ ಪೈಕಿ 16 ಡಿಮ್ಯಾಂಡ್ಸ್ ಪೂರ್ತಿ ಜಾರಿ ಮಾಡಿದರು. ಅದರಲ್ಲಿ ಪಂಪ್‌ಸೆಟ್ಸ್ ವಿಚಾರ ಬರುತ್ತದೆ. ಆಗ ರಾಜ್ಯದಲ್ಲಿ 5 ಲಕ್ಷ ಪಂಪ್‌ಸೆಟ್ಸ್ ಇದ್ದವು. ಈಗ 7.5 ಲಕ್ಷ ಇರಬಹುದು. 5 ಹೆಚ್.ಪಿ. ಇಂದ 10 ಹೆಚ್.ಪಿ. ವರೆಗೆ ಎಷ್ಟು ಬೇಕಾದರೂ ಕರೆಂಟ್ ಉರಿಸಬಹುದು ಅದಕ್ಕೆ ಮೀಟರ್ ಇಲ್ಲ. 1 ಹೆಚ್.ಪಿ.ಗೆ 50 ರೂ. ನಂತೆ ಫಿಕ್ಸ್ ಮಾಡಿದ್ದರು. ಇಡೀ ದಕ್ಷಿಣ ಇಂಡಿಯಾ ರಾಜ್ಯಗಳ ಪೈಕಿ ನಮ್ಮ ರಾಜ್ಯದಲ್ಲೇ ಪ್ರಥಮವಾಗಿ ಈ ರಿಯಾಯಿತಿಯನ್ನು ಕೊಟ್ಟರು ....... ಅಂದರೆ ರೈತರಿಗೆ ಎಷ್ಟು ಸೌಲಭ್ಯಗಳನ್ನು ನಮ್ಮ ಕಡೆಯಿಂದ ಕೊಡಬಹುದಿತ್ತು, ಅಷ್ಟನ್ನೂ ಗುಂಡೂರಾಯರು ಕೊಟ್ಟಿದ್ದರು. ಇವರ ಬಗ್ಗೆ ರಾಜ್ಯದ ರೈತರು ಬಹಳ ಪ್ರಶಂಸೆಯನ್ನೇ ಮಾಡಿದ್ದರು. ಅನಂತರ ನಮ್ಮ ರೈತ ಸಂಘದವರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಇವರನ್ನು ನಾಣ್ಯದಲ್ಲಿ ಕೂಡಾ ತೂಕ ಮಾಡಿದರು. ಅಲ್ಲಿ ಟಗ್ ಆಫ್ ವಾರ್ ಇತ್ತು. ಈ ಪ್ರಕಾರ ನಾವು ಬಹಳ ಹೆಮ್ಮೆಯಿಂದ ಅಭಿಮಾನದಿಂದ ಹೇಳಬೇಕಾಗುತ್ತದೆ. ಮಾನ್ಯ ಗುಂಡೂರಾಯರು ಜನರಿಗೆ ಸಹಾಯ ಮಾಡಿದರು.

ಇನ್ನೊಂದು ವಿಚಾರ ಎಂದರೆ, ಅವರು ಬಹಳ ಓಪನ್ ಮೈಂಡೆಡ್. ತಾವೂ ಕೂಡ ಕೇಳಿರಬಹುದು, ನಾನು ಬ್ರಾಹ್ಮಣ ಅಂದರೆ, ಕುರಿ ತಿನ್ನತಕ್ಕ ಬ್ರಾಹ್ಮಣ ಎಂದು

ಹೇಳಿಕೊಂಡಿರುವುದನ್ನು, ಅಂದರೆ ಅವರಲ್ಲಿ ಹೇಸಿಗೆ ಎಂಬುವುದು ಏನೂ ಇರಲಿಲ್ಲ. ಅಂದರೆ ಅವರಲ್ಲಿ ಒಳಗೂ ಒಂದೇ ಹೊರಗೂ ಒಂದೇ ಒಂದು ಸಾರಿ ಮಾನ್ಯ ಮಾಣಿಕ್ ರಾವ್ ಪಾಟೀಲರು ಮಂತ್ರಿಯಾಗಿದ್ದಾಗ ನಾನು ಕೂಡ ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗೆ ಹೋಗಿದ್ದೆವು. ಆ ಸಂದರ್ಭದಲ್ಲಿ ಅವರ ಮನೆಯಲ್ಲಿ ಕೂತಿದ್ದಾಗ ಖಂಡ್ರೆಯವರೆ, ನೀವು ನನ್ನ ಜೊತೆ ಬರುತ್ತೀರ ಎಂದು ಕೇಳಿದರು. ಕುಡಿಯೋದು, ತಿನ್ನೋದು ನನಗೆ ಅಭ್ಯಾಸವಿಲ್ಲ. ಆದುದರಿಂದ ಬರುವುದಿಲ್ಲ ಎಂದು ಹೇಳಿದಾಗ ನಿಮ್ಮಂತಹ ಜನರು ಎಂದೂ ಮಂತ್ರಿಯಾಗುವುದಿಲ್ಲ ಎಂದು ಅವರು ಹೇಳಿದರು. ನಾನು ಮಂತ್ರಿಯಾಗದಿದ್ದರೂ ಪರವಾಗಿಲ್ಲ, ಕುಡಿದು ಮಂತ್ರಿಯಾಗುವುದು ಬೇಡ ಎಂದು ಹೇಳಿದೆ. ಅಂದರೆ ಅವರ ಸ್ವಭಾವ ಇದ್ದದ್ದನ್ನು ಇದ್ದ ಹಾಗೆ ಹೇಳ ತಕ್ಕಂಥದ್ದು. ಲಂಡನ್‌ನಲ್ಲಿ ಅವರು ನಿಧನರಾದಾಗ ಇಡೀ ಕರ್ನಾಟಕದ ಜನರು ಸಂತಾಪ ಪಟ್ಟರು. ಎಲ್ಲ ಜನರು ಅವರ ನಿಧನಕ್ಕಾಗಿ ಅತ್ತರು. ಅವರ ಅಂತ್ಯಕ್ರಿಯೆ ಬಹಳ ವೈಭವದಿಂದ ನಡೆಯಿತು. ಯಾರು ಸ್ವರ್ಗಕ್ಕೆ ಹೋದರೂ ಯಾರು ನರಕಕ್ಕೆ ಹೋದರು ಎಂದು ಕೇಳುವುದಾದರೆ ಅದನ್ನು ಯಾರಿಗೂ ಕೂಡಾ ಹೇಳುವುದಕ್ಕಾಗುವುದಿಲ್ಲ. ಇಂಥವರು ಸ್ವರ್ಗಕ್ಕೆ ಹೋದರೂ, ಇಂಥವರು ನರಕಕ್ಕೆ ಹೋದರೂ ಎಂದು ಶಾಸ್ತ್ರ ಪುರಾಣದಲ್ಲಿ ಬರೆದರೆ ಹೊರತು ಯಾರೂ ಕೂಡ ಹೋಗಿ ನೋಡಿಲ್ಲ. ಆದರೆ ಒಂದು ಮಾತ್ರ ಸರಿ. ಯಾರ ನಿಧನದ ನಂತರ ಸಾವಿರಾರು ಜನರು ಅವರ ಬಗ್ಗೆ ಅತ್ತು ಸ್ತುತಿ ಮಾಡುತ್ತಾರೆ ಅಂಥವರು ಸ್ವರ್ಗಕ್ಕೆ ಹೋದರು ಎಂದು ತಿಳಿದುಕೊಳ್ಳಬೇಕು. ಯಾರು ಸತ್ತಾಗ ಜನರು ಸಂತಾಪ ಪಡೆಯುವುದಿಲ್ಲ, ಆಗ ಅವರು ನರಕಕ್ಕೆ ಹೋದರು ಎಂದು ತಿಳಿದುಕೊಳ್ಳಬೇಕು. ಕಳೆದ ಮೂರು ದಿನಗಳಿಂದ ನಾನು ಲಕ್ಷಾಂತರ ಜನರನ್ನು ನೋಡಿದ್ದೇನೆ. ಜನರು ಅವರನ್ನು ಯಾವ ರೀತಿ ಹೊಗಳುತ್ತಿದ್ದಾರೆ, ಅವರ ನಿಧನಕ್ಕೆ ಯಾವ ರೀತಿ ಅಳುತ್ತಿದ್ದಾರೆ ಎಂಬುದನ್ನು ನೋಡುತ್ತಿದ್ದೇವೆ.

ಇವತ್ತು ಒಂದು ಮುಖ್ಯ ವಿಚಾರವೆಂದರೆ ಅವರು ನಿಧನರಾದುದ್ದು ಕ್ಯಾನ್ಸರ್ ರೋಗದಿಂದ. ವಾಸ್ತವವಾಗಿ ಅವರ ಬಗ್ಗೆ ಶ್ರದ್ಧಾಂಜಲಿ ಅರ್ಪಿಸಬೇಕಾದರೆ ಈ ದೇಶದಲ್ಲಿ ಕ್ಯಾನ್ಸರ್ ರೋಗ ಏನಿದೆ, ಆ ಬಕಾಸುರ ಎಷ್ಟು ಜನರನ್ನು ಬಲಿ ತೆಗೆದುಕೊಳ್ಳುತ್ತಿದ್ದಾನೆ ಎಂಬುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ನಮ್ಮ ಸರಕಾರ ರೋಗವನ್ನು ನಿರ್ಮೂಲನ ಮಾಡುವ ಪ್ರಯತ್ನ ಮಾಡಬೇಕು. ಮಾಡಿದರೆ ನಿಜವಾಗಿಯೂ ಮಾನ್ಯ ಗುಂಡೂರಾಯರಿಗೆ ಶ್ರದ್ಧಾಂಜಲಿ ಅರ್ಪಿಸಿದಂತಾಗುತ್ತದೆ. ಪ್ರತಿ ವರ್ಷ ಪ್ರತಿಯೊಂದು ಹಳ್ಳಿಯಲ್ಲೂ ಹತ್ತಿಪ್ಪತ್ತು ಜನರು ಈ ರೋಗದಿಂದ ಸಾಯುತ್ತಿದ್ದಾರೆ. ಇದರ ಜೊತೆ ಏಡ್ಸ್ ರೋಗದಿಂದ ಕೂಡ ಸಾಯುತ್ತಿದ್ದಾರೆ. ಮೊದಲು ಪ್ಲೇಗ್, ಕಾಲರಾ, ದೇವಿ ಮುಂತಾದ ಖಾಯಿಲೆಗಳಿದ್ದವು. ಇವತ್ತು ಅದೆಲ್ಲಾ ಹೋಗಿ ಕ್ಯಾನ್ಸರ್, ಏಡ್ಸ್ ಮುಂತಾದ ರೋಗಗಳು ಬರುತ್ತಿವೆ.

ಈ ರೋಗಗಳು ದೇಶದ ಜನರನ್ನು, ದೇಶಭಕ್ತರನ್ನು, ಮಾನವ ಮುಖಂಡರನ್ನು ಬಲಿ ತೆಗೆದುಕೊಳ್ಳುತ್ತಿವೆ. ಆದುದರಿಂದ ನಾವು ಗುಂಡೂರಾಯರಿಗೆ ಶ್ರದ್ಧಾಂಜಲಿಯನ್ನು

ಅರ್ಪಿಸಬೇಕಾದರೆ ನಮ್ಮ ಬೆಂಗಳೂರಿನಲ್ಲಿ ಈ ರೋಗಗಳ ಬಗ್ಗೆ ದೊಡ್ಡ ಆಸ್ಪತ್ರೆಯನ್ನು ತೆರೆದು ದೊಡ್ಡ ದೊಡ್ಡ ವಿಜ್ಞಾನಿಗಳನ್ನು, ವೈದ್ಯರನ್ನು ನೇಮಕ ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಪತಿಗಳೇ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಹಮತ ವ್ಯಕ್ತಪಡಿಸುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಅನುಮತಿ ಕೇಳುತ್ತೇನೆ. ಮಾನ್ಯ ಗುಂಡೂರಾವ್‌ರವರು ನಮ್ಮನ್ನೆಲ್ಲ ಬಿಟ್ಟು ಅಗಲಿದ್ದಾರೆ. ಅವರು ಬದುಕಿದ್ದಾಗ ಮಾಡಿರುವಂಥಹ ಕೆಲಸಗಳನ್ನು, ಅವರ ನಿಧನದ ಸುದ್ದಿ ಬಂದಕೂಡಲೆ ಈ ರಾಜ್ಯದ ಜನತೆ, ರಾಜಕಾರಣಿಗಳು ಬಹಳಷ್ಟು ಜನರು ಒಂದೊಂದಾಗಿ ಅವರ ವಿಚಾರಗಳನ್ನು ಮೆಲುಕು ಹಾಕಲಿಕ್ಕೆ ಮತ್ತು ಅದರ ಬಗ್ಗೆ ವ್ಯಾಖ್ಯಾನ ಮಾಡಲಿಕ್ಕೆ, ಪತ್ರಿಕೆಗಳಿಗೆ ಹೇಳಿಕೆ ಕೊಡುತ್ತಿರುವುದನ್ನು ನಾವೆಲ್ಲಾ ನೋಡಿದ್ದೇವೆ.

ಶ್ರೀ ಗುಂಡೂರಾವ್ ಮತ್ತು ನಾನು ಕಳೆದ 30 ವರ್ಷಗಳಿಂದ ಸ್ನೇಹಿತರು. ಶ್ರೀ ಗುಂಡೂರಾಯರಿಗೆ ರಾಜಕೀಯವಾಗಿ ಬಹಳಷ್ಟು ಜನರು ಬಹಳ ಪಕ್ಕದಿಂದ ಸ್ನೇಹಿತರು ಇದ್ದಿರಲಿಕ್ಕೂ ಸಾಕು, ಅದಕ್ಕೆ ಕಾರಣ ಅವರು ರಾಜಕೀಯದಿಂದ ಅಧಿಕಾರಕ್ಕೆ ಬಂದರು. ಅವರು ಅಧಿಕಾರಕ್ಕೆ ಬಂದ ಮೇಲೆ ಈ ಅಧಿಕಾರವನ್ನು ಕೆಲವು ಸಂದರ್ಭದಲ್ಲಿ ಹಂಚಿಕೆಯಾಗುತ್ತಿರತಕ್ಕಂಥ ಕಾಲದಲ್ಲಿ ಬಹಳಷ್ಟು ಜನರು ಅಧಿಕಾರದಲ್ಲಿರತಕ್ಕಂಥವರ ಹತ್ತಿರ, ಸುತ್ತಮುತ್ತ ಇರತಕ್ಕಂಥವರನ್ನು ನಾವು ರಾಜಕಾರಣದಲ್ಲಿ ನೋಡುತ್ತಿದ್ದೇವೆ. ಇದು ಸರ್ವೆಸಾಮಾನ್ಯವಾಗಿದೆ. ಅದೇ ಜನರು ಇವತ್ತಿನ ಅಧಿಕಾರವನ್ನು ಕಳೆದುಕೊಂಡ ಮೇಲೆ, ಪುನಃ ಯಾರು ಹೊಸದಾಗಿ ಅಧಿಕಾರಕ್ಕೆ ಬರುತ್ತಾರೆ ಅವರ ಹಿಂದೆ ಹೋಗುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಆದುದರಿಂದ ಇವತ್ತು ನಮ್ಮ ರಾಜಕಾರಣದಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಈ ಕ್ಯಾನ್ಸರ್ - ಈ ರಾಜಕಾರಣದ ಭಟ್ಟಂಗಿತನ ಯಾವುದಿದೆ, ಅದನ್ನು ಇಂದು ನಾವು ನೋಡುತ್ತಿದ್ದೇವೆ.

ನಾನು ಶ್ರೀಮಾನ್ ಗುಂಡೂರಾಯರನ್ನು ನೋಡಿರುವಂತಾದ್ದು ಈ ದೃಷ್ಟಿಕೋನದಿಂದಲ್ಲ. 1962-63ನೇ ಇಸವಿಯಲ್ಲಿ ಅವರು ಕುಶಾಲನಗರದ ಪುರಸಭೆಯ ಅಧ್ಯಕ್ಷರಾಗಿದ್ದರು. ಅಂದಿನ ಕಾಂಗ್ರೆಸ್ ಪಕ್ಷದ ವಿರುದ್ಧ ತನ್ನದೇ ಆದಂತಹ ಒಂದು ವೇದಿಕೆಯನ್ನು ನಿರ್ಮಾಣ ಮಾಡಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ತನ್ನ ಗುಂಪನ್ನು ಅಧಿಕಾರಕ್ಕೆ ತಂದು, ಕುಶಾಲನರದ ಪುರಸಭೆ ಅಧ್ಯಕ್ಷರಾಗಿದ್ದು ಬಹುಶಃ ಅದು ಕೊಡಗಿನ ಇತಿಹಾಸದಲ್ಲಿಯೇ ಪ್ರಥಮ. ಆ ಸಂದರ್ಭ ನಾನು ವಕೀಲನಾಗಿ ಕೆಲಸ ಮಾಡುತ್ತಿದ್ದಂತಹ ಕಾಲ. ಗುಂಡೂರಾಯರ ಪುರಸಭೆಗೆ ನಾನು ಒಬ್ಬ ಲೀಗಲ್ ಅಡ್ವೈಸರ್. ನನ್ನ ಗುರುಗಳಾದಂಥಹ ಬೆಳ್ಳಿಯಪ್ಪನವರು ಇವತ್ತು ಶಾಸಕರಾಗಿದ್ದಾರೆ. ಅವರ ಕೈಕೆಳಗೆ ನಾನು ವಕೀಲನಾಗಿ ಕೆಲಸ ಮಾಡಿದ್ದೇನೆ. ನಾನು ಮತ್ತು ಬೆಳ್ಳಿಯಪ್ಪನವರು ಗುಂಡೂರಾಯರ ವಕೀಲರೂ ಕೂಡ ಹೌದು. 1967-68ನೇ ಇಸವಿಯಲ್ಲಿ

ರಾಯರನ್ನು ಕಾಂಗ್ರೆಸಿಗೆ ಸೇರಿಸಬೇಕು, ಬೇಡವೇ ಎನ್ನುವಂಥಹ ಒಂದು ಬಹಳ ದೊಡ್ಡ ವಿವಾದದ ಪ್ರಶ್ನೆ ಕೊಡಗಿನಲ್ಲಿತ್ತು. ರಾಜಕಾರಣದಲ್ಲಿ ಉತ್ತುಂಗದಲ್ಲಿರತಕ್ಕಂಥಹ ಹಿರಿಯರಾದಂಥ ಶ್ರೀಮಾನ್ ಪೂಣಚ್ಚನವರು ಮತ್ತು ಶ್ರೀಮಾನ್ ಕೆಯಂ ಮಲ್ಲಪ್ಪನವರು ಗುಂಡೂರಾಯರನ್ನು ಕಾಂಗ್ರೆಸ್ಸಿಗೆ ಸೇರಿಸಬಾರದು, ಇವರನ್ನು ಕಾಂಗ್ರೆಸ್ಸಿಗೆ ಸ್ವೀಕಾರ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಬಹಳ ವಿರೋಧ ವ್ಯಕ್ತ ಪಡಿಸಿರತಕ್ಕಂಥಹ ಕಾಲ. ಬಹುಶಃ ಇದಕ್ಕೆ ಕಾರಣವೇನೆಂದರೆ ಶ್ರೀಮಾನ್ ಗುಂಡೂರಾಯರು ನೇರವಾಗಿ ಆಡತಕ್ಕಂಥಹ ಮಾತು ಇರಬಹುದು. ಇವರು ಎಲ್ಲಾದರು ಕಾಂಗ್ರೆಸ್ಸಿಗೆ ಸೇರಿದರೆ ನಮಗೆ ಇರತಕ್ಕಂಥಹ ಅಧಿಕಾರದಲ್ಲಿ ಏರುಪೇರು ಆದೀತೇನೋ ಎನ್ನುವಂಥ ಚಿಂತನೆ ಇರಬಹುದು. ಇವೆಲ್ಲಾ ಕಾರಣಗಳು ಕ್ರೋಢೀಕೃತವಾಗಿ ಅವರನ್ನು ಕಾಂಗ್ರೆಸ್ಸಿಗೆ ಸೇರಿಸುವುದಕ್ಕೆ ಬಹಳಷ್ಟು ವಿರೋಧ ವ್ಯಕ್ತಪಡಿಸಿದರೂ ಕೂಡ ಅವರ ಬಹಳ ಆತ್ಮೀಯರಾದಂಥಹ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀಮಾನ್ ಎಸ್.ಎಸ್. ನಾರಾಯಣಮೂರ್ತಿಯವರು ಮಾತ್ರ ಅವರನ್ನು ಸೇರಿಸಲೇಬೇಕೆಂದು ಹಟತೊಟ್ಟ ಪರಿಣಾಮವಾಗಿ ಅವರು ಕಾಂಗ್ರೆಸ್ಸಿಗೆ ಪಾದಾರ್ಪಣೆ ಮಾಡಿದ್ದರು. ಅಲ್ಲಿಂದ ಅವರು ಹಿಂದುಮುಂದು ನೋಡಲಿಲ್ಲ. ಅಲ್ಲಿಂದ ಅವರು ಕರ್ನಾಟಕ ರಾಜ್ಯದಲ್ಲಿ ಬಂದಿರತಕ್ಕಂಥ ಬಿರುಗಾಳಿಗಳನ್ನು, ಸುಂಟರಗಾಳಿಗಳನ್ನು ಎಬ್ಬಿಸಿರತಕ್ಕಂಥಾದನ್ನು ನಾವು ನೋಡಿದ್ದೇವೆ. 1972ನೇ ಇಸವಿಯಲ್ಲಿ ಪ್ರಥಮ ಬಾರಿಗೆ ಅವರು ಸೋಮವಾರಪೇಟೆ ಕ್ಷೇತ್ರದಿಂದ ಗೆದ್ದು ವಿಧಾನ ಸಭೆ ಪಾದರ್ಪಣೆ ಮಾಡಿದ ಕಾಲದಿಂದ ನೋಡಿದ್ದೇವೆ. ಅವರು ಬಹಳ ವರ್ಣರಂಜಿತ ವ್ಯಕ್ತಿ. ಅದರ ಜೊತೆಯಲ್ಲಿ ಬಹಳ ವಿಚಾರಗಳನ್ನು ಕೂಡ ಸ್ಪಷ್ಟ ಮಾಡಿದ್ದಾರೆ, ಸ್ಪಷ್ಟಮಾಡಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಆ ಮನುಷ್ಯನಲ್ಲಿ ಇರತಕ್ಕಂಥಹ ಒಂದು ನೇರವಾದ ಗುಣ ಹೇಳುತ್ತೇನೆ. ರಾಜಕಾರಣದಲ್ಲಿ ಒಬ್ಬ ವ್ಯಕ್ತಿ ಮಾಡುತ್ತಿರುವಂಥ ಕೆಲಸದಲ್ಲಿ ಎಲ್ಲವೂ ಸಹ ಬಹಳ ಒಳ್ಳೆಯ ಕೆಲಸಗಳಾಗಿರುತ್ತವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಒಳ್ಳೆಯ ಕೆಲಸಗಳ ಜೊತೆಗೆ ಬೇಕಾದಷ್ಟು ಕೆಟ್ಟ ಕೆಲಸಗಳು ಆಗುತ್ತಿರುತ್ತವೆ. ಅವರು ಅವರ ಮನಸ್ಸಿಗೆ ತೋಚಿದ್ದನ್ನು, ಮುಂದೆ ಅದರ ಪರಿಣಾಮ ಏನಾಗುತ್ತದೆ ಎಂದು ನೋಡದೇ ಹೇಳಿಕೆಯನ್ನು ಕೊಡುತ್ತಿದ್ದರು. ಹಾಗೂ ಆ ರೀತಿಯ ಮಾತುಗಳನ್ನು ಆಡುತ್ತಿದ್ದರು, ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದರು. ಗುಂಡೂರಾಯರು ಯುವಜನ ಮತ್ತು ವಾರ್ತಾ ಸಚಿವರಾಗಿದ್ದಂತಹ ಕಾಲದಲ್ಲಿ ಜಯನಗರದ ಈಜುಕೊಳ ಉದ್ಘಾಟನಾ ಸಮಾರಂಭವಿತ್ತು.... ಅಲ್ಲಿ ಬಹಳಷ್ಟು ಜನ ಸೇರಿದ್ದರು. ಇವರು ನೇರವಾಗಿ ಈಜುಕೊಳದ ಪಕ್ಕದಲ್ಲಿ ಇರುವಂಥ ಕೋಣೆಗೆ ಹೋಗಿ ಬಟ್ಟೆಯನ್ನು ಕಳಚಿ, ಈಜುಕೊಳದಲ್ಲಿ ಈಜಾಡುವುದನ್ನು ಶುರುಮಾಡಿ, ಕೊಳದ ಮಧ್ಯದಲ್ಲೇ ಈಜುಕೊಳವನ್ನು ಉದ್ಘಾಟನೆ ಮಾಡಿದ್ದೇನೆ ಎಂದು ಉದ್ಗಾರ ಮಾಡಿದ್ದಾಗ ಗೊತ್ತಾಯಿತು ಶ್ರೀಮಾನ್ ಗುಂಡೂರಾಯರು ಅಲ್ಲಿದ್ದಾರೆಂದು. ಇದರ ಬಗ್ಗೆ ಪತ್ರಿಕೆಯಲ್ಲಿ ಬೇಕಾದಷ್ಟು ಬರೆದರು. ಎಂದರೆ ಈ ಮನುಷ್ಯನಲ್ಲಿ ಇರತಕ್ಕಂಥ ಆ ವ್ಯಕ್ತಿತ್ವ ಯಾವುದು? ಆ ವ್ಯಕ್ತಿತ್ವದ ಬಗ್ಗೆ ಊರುಜನ ಏನು ಯೋಚನೆ ಮಾಡುತ್ತಾರೆಂದು ಅವರು ಯೋಚನೆ ಮಾಡಿ,

ಹೌದು ಇವತ್ತು ಈಜುಕೊಳದ ಉದ್ಘಾಟನೆ ಆಗಬೇಕಾಗಿದೆ. ನನಗೆ ಈಜು ಬರುತ್ತದೆ, ಈಜು ಬರುವುದರಿಂದ ನಾನು ಈಜುಕೊಳವನ್ನು ನಿಜವಾಗಿ ಉದ್ಘಾಟನೆ ಮಾಡುತ್ತೇನೆಂದು ಅವರ ಅನುಭವ ಹೇಳುವಂತಿತ್ತು. ಯಾವುದೇ ಒಂದು ಪರಿಸ್ಥಿತಿಗೆ ಅನುಕೂಲ ಆದಂತಹ ಒಂದು ವಾತಾವರಣ ಅದು. ಆ ಒಂದು ಕೆಲಸವನ್ನು ಗುಂಡೂರಾಯರು ಮಾಡಿರತಕ್ಕಂಥದನ್ನು ನಾವು ಇವತ್ತೂ ಕೂಡ ನೆನಪಿಸಿಕೊಳ್ಳುತ್ತೇನೆ.

ಇದು ನೂರು ವರ್ಷಗಳಾದರೂ ಕೂಡ ರಾಯರು ಮಾಡಿರತಕ್ಕಂತಹ ಕೆಲಸ ಇತಿಹಾಸದ ಪುಟದಲ್ಲಿ ಈಗಾಗಲೆ ಹೋಗಿರುವುದರಿಂದ ಇದನ್ನು ಎಲ್ಲರೂ ಕೂಡ ಮೆಚ್ಚಿಕೊಳ್ಳತಕ್ಕಂಥದ್ದಿರುವುದನ್ನು ನಾವು ಈ ಸಂದರ್ಭದಲ್ಲಿ ನೋಡುತ್ತಿದ್ದೇವೆ. ಮಾನ್ಯ ಸಭಾಪತಿಯವರೇ, ಇದಾದ ಮೇಲೆ ಅವರು ಹೇಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಾದರು. ಅಲ್ಲಿಂದ ಹೇಗೆ ಮುಖ್ಯಮಂತ್ರಿಗಳಾದರು ಎಂಬದನ್ನು ಮಾನ್ಯ ಖಂಡ್ರೆಯವರು ಹೇಳಿದರು. ಖಂಡ್ರೆಯವರು ಆ ಕಾಲದಲ್ಲಿ ಮಾನ್ಯ ಸಂಜಯ್ ಗಾಂಧಿಯವರನ್ನು ಕರೆದು 1000 ಜನರಿಗೆ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಹೇಳುವ ದೊಡ್ಡದಾದ ಕಾರ್ಯಕ್ರಮವನ್ನು ಭಾಲ್ಕಿಯಲ್ಲಿ ಹಾಕಿಕೊಂಡರು. ಬಹುಶಃ ಈ ಸಂದರ್ಭದಲ್ಲಿ ಸಂಜಯ್ ಗಾಂಧಿಯವರು ಅಲ್ಲಿಗೆ ಬಂದಿರತಕ್ಕಂಥದ್ದು, ಬಹುಶಃ ಅಲ್ಲಿಂದ ಏನೋ ಮಾತುಕತೆಯಾಗಿರುವುದು, ಅದನ್ನು ಅವರ ಮನಸ್ಸಿನಲ್ಲೆ ಇಟ್ಟುಕೊಂಡಿದ್ದು ಈ ರಾಜ್ಯಕ್ಕೆ ನಾನು ಮುಖ್ಯಮಂತ್ರಿ ಆಗಿಯೇ ಆಗುತ್ತೇನೆಂದು ಹೇಳುತ್ತಿದ್ದರು. ಆ ಒಂದು ವಿಚಾರವನ್ನು ಅವರು ಇಟ್ಟುಕೊಂಡಿದ್ದರು. ನಾನು ಆಗೇ ಆಗುತ್ತೇನೆಂದು ಅವರು ಹೇಳುತ್ತಿದ್ದರು. ನಾವು ಅದನ್ನು ಯೋಚನೆ ಮಾಡುತ್ತಿದ್ದೆವು. ಏನಪ್ಪಾ ಇವರು ಮಿತ್ರರ ಜೊತೆಯಲ್ಲಿ ಈ ರೀತಿ ಹೇಳುತ್ತಿದ್ದಾರಲ್ಲ ಎಂದು. ಅವರ ಮಿತ್ರರಾಗಿರತಕ್ಕಂಥ ಶ್ರೀಮಾನ್ ಖಾನ್‌ರವರು ಹೇಳುತ್ತಿದ್ದರು. "We will see that Mr. Gundurao will become the chief Minister of Karnataka one day."ಎಂದು ಹೇಳುತ್ತಿರತಕ್ಕಂಥ ಮಾತನ್ನು ನನ್ನ ಜೊತೆಯಲ್ಲಿ ಬಹಳ ಹೇಳಿದ್ದಾರೆ... ಅದಾದ ಕೆಲವು ವರ್ಷದಲ್ಲಿ ಅವರು ಮುಖ್ಯಮಂತ್ರಿಗಳಾಗಿಯೇ ಆದರು. 1978ನೇ ಇಸವಿಯಲ್ಲಿ ನಾನು ಕೂಡ ವಿಧಾನಸಭೆಗೆ ಪಾದಾರ್ಪಣೆ ಮಾಡಿದಾಗ ಶ್ರೀಮಾನ್ ಅರಸ್‌ರವರು, ಮುಖ್ಯಮಂತ್ರಿಗಳಾದರು ಅದಾದ ಮೇಲೆ ಲೋಕಸಭಾ ಚುನಾವಣೆಗಳು ಬಂದು ಶ್ರೀಮತಿ ಇಂದಿರಾ ಗಾಂಧಿ ಮತ್ತು ಶ್ರೀಮಾನ್ ಅರಸ್‌ರವರಿಗೆ ಬಂದಿರತಕ್ಕಂತಹ ಭಿನ್ನಾಭಿಪ್ರಾಯಗಳಿಂದ ಪಕ್ಷ ಒಡೆದಾದ ಮೇಲೆ ಗುಂಡೂರಾಯರು ಅರಸರನ್ನು ಬಿಟ್ಟಿದ್ದು ನಿಜ. ಆದರೆ, ಬಿಟ್ಟಾದ ಮೇಲೆಯೂ ವೈರತ್ವವನ್ನು ಸಾಧಿಸಲಿಲ್ಲ. ಅರಸ್‌ರವರನ್ನೇ ನೇರವಾಗಿ ಕೇಳಿದರು "ನಾನು ಶ್ರೀಮತಿ ಗಾಂಧಿಯವರ ಜೊತೆಯಲ್ಲಿಯೇ ಇರಬೇಕಾಗುತ್ತದೆ. ನಿಮ್ಮ ಜೊತೆಯಲ್ಲಿರುವುದಕ್ಕೆ ಆಗುವುದಿಲ್ಲ." ಎಂದು ಆ ಒಂದು ಮಾತನ್ನು ಹೇಳಿ ತನ್ನ ಗುರುವೆಂದು ರಾಜಕೀಯವಾಗಿ ಕರೆದುಕೊಂಡಿದ್ದಂಥ ವ್ಯಕ್ತಿಯನ್ನು ಕೂಡ ದೂರ ಮಾಡಿ ಅವರು ರಾಜಕಾರಣದಲ್ಲಿ ತಮ್ಮದೇ ಆದಂತಹ ವಿಚಾರವನ್ನು ಮಾಡಿ, ಹೊರಗಡೆ ಬಂದಂತಹ ಕಾಲ. ಅದಾದ ಮೇಲೆ

ಗುಂಡೂರಾಯರು ಮುಖ್ಯಮಂತ್ರಿಗಳಾದುದ್ದು ತಮಗೆಲ್ಲ ಗೊತ್ತಿದೆ. ಯಾವ ರೀತಿ ಆದರು, ಎನ್ನತಕ್ಕಂಥದ್ದು. ಇಲ್ಲಿ ಎಷ್ಟು ಜನರು ಇದ್ದಾರೋ ನನಗಂತೂ ಗೊತ್ತಿಲ್ಲ, ಮಾನ್ಯ ಅರಸ್ ಅವರ ಜೊತೆಯಲ್ಲಿದ್ದಂಥವರಲ್ಲಿ ಕೂಡ ಕೆಲವು ಜನ ರಾಜಕೀಯವಾಗಿ ಭಿನ್ನಾಭಿಪ್ರಾಯ ಬಂದು ಬೇರೆ ಬೇರೆಯಾದಾಗ ಶ್ರೀಮಾನ್ ಶ್ರೀಕಂಠಯ್ಯನವರ ನೇತೃತ್ವದಲ್ಲಿ ದೊಡ್ಡದಾದಂಥ ಒಂದು ಬೆಂಬಲವನ್ನು ಗುಂಡೂರಾಯರಿಗೆ ಕೊಡುವುದರ ಮುಖಾಂತರ ಮುಖ್ಯಮಂತ್ರಿಗಳಾದರು ಅಂದರೆ ವಿಧಿಯಂತೆ ಅವರು ಮುಖ್ಯಮಂತ್ರಿಗಳಾಗಲೇಬೇಕೆಂದು ಇತ್ತೋ ಏನೋ....... ಮುಖ್ಯಮಂತ್ರಿಗಳಾದ ಮೂರೇ ವರ್ಷಗಳಲ್ಲಿ ಅವರು ಮಾಡಿದ ಆಡಳಿತವನ್ನು ನಾನು ವಿರೋಧ ಪಕ್ಷದಲ್ಲಿದ್ದೂ ನೋಡಿದ್ದೇನೆ. ಇವತ್ತು ವಿರೋಧ ಪಕ್ಷದ ನಾಯಕನಾಗಿದ್ದೂ ಹೇಳುತ್ತೇನೆ. ನಾನು ಅವರು ಬಹಳ ಆತ್ಮೀಯ ಸ್ನೇಹಿತರು, ರಾಜಕೀಯ ರಹಿತವಾಗಿರತಕ್ಕಂಥ ಸ್ನೇಹಿತರಾಗಿದ್ದೆವು. ಕೊಡಗಿನ ನಮ್ಮ ಒಂದು ಸಂಸ್ಕೃತಿಗೆ ಅನುಗುಣವಾಗಿ ಸ್ನೇಹವನ್ನು ಇಟ್ಟುಕೊಂಡಿದ್ದೆವು. ಬಹಳಷ್ಟು ಜನ ವಿರೋಧಪಕ್ಷದಲ್ಲಿ ಕುಳಿತಂಥವರು ಮುಖ್ಯಮಂತ್ರಿ ಗುಂಡೂರಾಯರ ಕಡೆಗೆ ಹೋದರು. ಒಂದು ಸಲ ಅವರ ಖಾಯಿಲೆ ಬಿದ್ದಿದ್ದಾಗ ನೋಡಲಿಕ್ಕೆ ಹೋಗಿದ್ದೆ. ನನ್ನ ಜೊತೆಯಲ್ಲಿ ಮಾತನಾಡುತ್ತಾ ಅವರು ಹೇಳಿದರು. ನಾಣಯ್ಯ ನೀನು ಏಕೆ ಅಲ್ಲಿರುತ್ತೀಯಾ ? ನಾನು ನೀನು ಇಷ್ಟು ವರ್ಷಗಳಿಂದ ಸ್ನೇಹಿತರು. ನೀನು ಬಾ, ನಿನ್ನನ್ನು ಸಂಪುಟ ದರ್ಜೆ ಮಂತ್ರಿಯಾಗಿ ಮಾಡುತ್ತೇನೆ. ಕೊಡಗಿನ ಸಂಪೂರ್ಣ ಜವಾಬ್ದಾರಿಯನ್ನು ನೀನು ತೆಗೆದುಕೋ ಎಂದು ಬಹಳ ಅಭಿಮಾನದಿಂದ ಹೇಳುತ್ತಿದ್ದರು. ಅವರ ಜೊತೆಯಲ್ಲೇ ಎಫ್ ಎಂ ಖಾನ್‌ರವರು ಕೂಡ ಇದ್ದರು. ನಾನು ಅವರನ್ನು ಬಹಳ ಅಭಿಮಾನದಿಂದ ಗುಂಡಣ್ಣ ಎಂದು ಕರೆಯುತ್ತಿದ್ದೆ, ಮಾತನಾಡುವಾಗ ನಮ್ಮ ಕೊಡಗು ಭಾಷೆಯಲ್ಲೆಯೇ ಮಾತನಾಡುತ್ತಿದ್ದೆ. ನಾನು ಹೇಳಿದೆ, ಗುಂಡಣ್ಣ ನೀವು ಮುಖ್ಯಮಂತ್ರಿಯಾಗಿರತಕ್ಕದ್ದು ನನಗೆ ಬಹಳ ಅಭಿಮಾನ. ಕಾರಣ ನೀವು ಕೊಡಗಿನಿಂದ ಬರುತ್ತಿದ್ದೀರಿ. ಆ ಮಣ್ಣಿನ ಸಂಸ್ಕೃತಿಯನ್ನು ಪಡೆದು ಕೊಂಡಿದ್ದೀರಿ. ಇದು ಬಹಳ ಅಭಿಮಾನ. ಆದರೆ, ರಾಜಕಾರಣದಲ್ಲಿ ಕೆಲವು ಸಂದರ್ಭದಲ್ಲಿ ಏನೋ ಕೆಲವು ಮೌಲ್ಯಗಳನ್ನು, ಎತ್ತಿ ಹಿಡಿದುಕೊಂಡು ಹೋದ ಸಂದರ್ಭದಲ್ಲಿ ನೀವು ಎಷ್ಟು ಅಭಿಮಾನದಿಂದ ನನಗೆ ಆ ಮಂತ್ರಿತನ ಕೊಡಬೇಕೆಂದು ಹೇಳುತ್ತಿದ್ದೀರಿ. ಅಷ್ಟೇ ಅಭಿಮಾನದಿಂದ ನಾನು ಅದನ್ನು ತಿರಸ್ಕರಿಸಬೇಕಾಗುತ್ತದೆ. ಕಾರಣ ನೀವು ಯಾವ ಸಂಸ್ಕೃತಿಯಲ್ಲಿ ಹುಟ್ಟಿ ಬಂದು ಆ ಕೆಲಸ ಮಾಡುತ್ತಿದ್ದೀರಿ, ನಾನು ಅದಕ್ಕೆ ತಿಲಾಂಜಲಿ ಹಾಕಬಾರದು. ಆದುದರಿಂದ ನಾನು ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡುತ್ತೇನೆ. ಯಾವಾಗಲೂ ನೀವು ನಿಮ್ಮ ಕೆಲಸ ಮಾಡಿಕೊಂಡು ಹೋಗತಕ್ಕ ಸಂದರ್ಭದಲ್ಲಿ ನಿಮಗೆ ಬೆಂಬಲ ಕೊಡುತ್ತೇನೆ. ಅದೇ ಬೆಂಬಲ ಕೊಟ್ಟಾಗಲೂ ನಾನು ಅವರನ್ನು ಉಪನಾಯಕನಾಗಿ ಕುಳಿತಾಗ 2-3 ವಿಷಯಗಳ ಬಗ್ಗೆ ತೀಕ್ಷ್ಣವಾಗಿ ಟೀಕೆ ಮಾಡಿದ್ದೇನೆ.

ನಿಮಗೆಲ್ಲ ನೆನಪಿರಬೇಕು. ಈ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ದೊಡ್ಡ ದೊಡ್ಡ ಸಮುಚ್ಚಯಗಳನ್ನು ಕಟ್ಟಲಿಕ್ಕೆ ಇರತಕ್ಕ ಕಾಲ ಇತ್ತು. ಹೈರೈಸ್ ಬಿಲ್ಡಿಂಗ್‌ಗಳನ್ನು 6-7 ಅಂತಸ್ತಿನ ಮನೆಗಳನ್ನು ಕಟ್ಟಲಿಕ್ಕೆ ಆ ಸಂದರ್ಭದಲ್ಲಿ ಸಿಮೆಂಟಿನ ಕೊರತೆ ಇತ್ತು. ಪ್ರತಿಯೊಂದಕ್ಕೂ ಕೇಂದ್ರ ಸರಕಾರದ ಬಿಗಿಯಾದ ನೀತಿ ಹಾಗೂ ಕಂಟ್ರೋಲ್ ಇರತಕ್ಕ ಸಂದರ್ಭದಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ಕೊಡಬೇಕಾದ ಸಿಮೆಂಟನ್ನು ಸಾರ್ವಜನಿಕ ಹಿತಾಸಕ್ತಿಗಳಿಗೆ ಬೇಕಾಗಿರತಕ್ಕ ಕಟ್ಟಡಗಳಿಗೆ ಕೊಡಬೇಕಾಗಿತ್ತು. ಸಿಮೆಂಟ್ ನಿಯಂತ್ರಣ ಆಜ್ಞೆ ಮೇಲೆ ಸರಕಾರಕ್ಕೆ ಬಂದಿರತಕ್ಕ ಸಿಮೆಂಟನ್ನು ಹೈರೈಸ್ ಬಿಲ್ಡರ್ಸ್ ಗೆ ಕೊಟ್ಟಿರತಕ್ಕದ್ದು ಬಹಳ ದೊಡ್ಡ ವಿಷಯವಾಗಿ ವಿಧಾನಸಭೆಯಲ್ಲಿ ಚರ್ಚೆ ಆಯಿತು. ಅದಾದ ಮೇಲೆ ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಹೋಯಿತು. ನಾನು ಕಮಿಟಿಯಲ್ಲಿ ಸದಸ್ಯನಾಗಿದ್ದೆ, ಬೊಮ್ಮಾಯಿ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಅದರ ಬಗ್ಗೆ ವ್ಯಾಪಕವಾಗಿ ಚರ್ಚೆ ಮಾಡಿ ಆದ ಮೇಲೆ ಕಾಂಗ್ರೆಸ್ಸಿನವರು, ವಿರೋಧ ಪಕ್ಷದವರು ಒಟ್ಟಾರೆ ಸೇರಿ ಒಂದು ವರದಿ ಕೊಟ್ಟರು. ಆ ವರದಿಯಲ್ಲಿ ಈ ಸಿಮೆಂಟ್ ರಾಜ್ಯ ಸರಕಾರಕ್ಕೆ ಬಂದಿರತಕ್ಕಂಥದನ್ನು ಯಾವ ಸಾರ್ವಜನಿಕ ಇಲಾಖೆಗಳಿಗೆ ಸಂಬಂಧಪಟ್ಟ ಕಟ್ಟಡಗಳಿಗೆ ಉಪಯೋಗಿಸಬೇಕಾಗಿತ್ತು. ಆ ಸಿಮೆಂಟನ್ನು ಈ ಜನರಿಗೆ ಅಂದರೆ ಕಾಂಟ್ರಾಕ್ಟರಿಗೆ ಕೊಟ್ಟಿರತಕ್ಕದ್ದು ತಪ್ಪು. ಇದರ ಹಿನ್ನಲೆಯಲ್ಲಿ ಯಾವುದೋ ಒಂದು ಆಮಿಷ ಇದೆ. ಔಟ್ ಆಫ್ ಟರ್ನ್ ಅಲೊಟ್ಮೆಂಟ್ ಕೊಟ್ಟಿರತಕ್ಕ ಕಾರಣ ಇದಕ್ಕೆ ಬಹುಶಃ ಕ್ವಿಡ್ ಪ್ರೋಕ್ಯೂ ಎಂಬ ಪದವನ್ನು ನಾವು ಅಲ್ಲಿ ಬಳಸಿದ್ದೆವು. ಅಂದರೆ ಈ ಸಿಮೆಂಟನ್ನು ಕೊಡಬೇಕಾದರೆ ಯಾವುದೇ ಒಂದನ್ನು ಅವರ ಕಡೆಯಿಂದ ಕೇಳಿಕೊಂಡು ಕೊಡಬೇಕಾಗಿತ್ತು ಎಂದು ಆ ಪದವನ್ನು ಬಳಸಿ ಬಹಳ ವ್ಯಾಪಕವಾಗಿ ಚರ್ಚೆ ಆಯಿತು. ರಾಷ್ಟ್ರದಲ್ಲಿರತಕ್ಕ ಎಲ್ಲಾ ಅಗ್ರ ಪತ್ರಿಕೆಗಳಲ್ಲಿ ಇದರ ಬಗ್ಗೆ ಎಡಿಟೋರಿಯಲ್ಸ್ ಬಂತು. ಆ ಒಂದು ರಿಪೋರ್ಟ್ ಬಂದಾಗ, ಅದು ಕೆಳಗಿನ ಮನೆಯಲ್ಲಿ ಚರ್ಚೆ ಆದಾಗ ಗುಂಡೂರಾವ್ ಕೆಂಡ ಕಾರಿದರು. ಪಬ್ಲಿಕ್ ಅಕೌಂಟ್ಸ್ ಕಮಿಟಿ ಕೊಟ್ಟಿರತಕ್ಕ ರಿಪೋರ್ಟ್ ಬಗ್ಗೆ ಚರ್ಚೆ ಮಾಡಿದೆವು. ಆದರೆ ವರದಿಯನ್ನು ತಿರಸ್ಕಾರ ಮಾಡಬಾರದೆಂದು ಅವರ ಮನಸ್ಸಿನಲ್ಲಿ ಇಲ್ಲ, ನಾನು ಮಾಡಿರತಕ್ಕದ್ದು ಸರಿ ಎಂದು ಹೇಳಿ ಇದರ ಬಗ್ಗೆ ಒಂದು ಗಂಟೆ ಚರ್ಚೆ ಮಾಡಿ ಅದಾದಮೇಲೆ ಆ ವರದಿಯನ್ನು ಮತಕ್ಕೆ ಹಾಕಿ ಪಬ್ಲಿಕ್ ಅಕೌಂಟ್ಸ್ ಕಮಿಟೀ ವರದಿಯನ್ನು ಸಂಸದೀಯ ಇತಿಹಾಸದಲ್ಲಿ ಪ್ರಥಮ ಬಾರಿಗೆ ತಿರಸ್ಕಾರ ಮಾಡಿರತಕ್ಕದ್ದು. ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಇದರ ಬಗ್ಗೆ ಬೇಕಾದಷ್ಟು ಅಗ್ರ ಲೇಖನಗಳು ಬಂದವು. ಆದರೆ ಮುಂದೆ ಏನಾಗುತ್ತದೆ ಎಂದು ಹೇಳತಕ್ಕದ್ದನ್ನು ವಿಚಾರ ಮಾಡಲಿಲ್ಲ. ಕಾರಣ ತನ್ನ ಮನಸ್ಸಿಗೆ ಯಾವುದು ಸರಿ ಅಂತ ಕಾಣುತ್ತದೆ ಅದನ್ನು ನೇರವಾಗಿ ಮಾತನಾಡುತ್ತಿದ್ದ ವ್ಯಕ್ತಿ ಗುಂಡೂರಾಯರು. ಅವರ ಕಾಲದಲ್ಲಿ ಆಗಿರತಕ್ಕ ಹಲವಾರು ಘಟನೆಗಳಲ್ಲಿ ಬಹಳ ಪ್ರಾಮುಖ್ಯ ಒಂದು ಅಂಶವನ್ನು ಎತ್ತುತ್ತಿದ್ದೇನೆ. ನೀವು, ನೀವು ಮಂತ್ರಿ ವರ್ಗದವರು ಯಾರಿದ್ದೀರಿ, ಇವತ್ತು ಗುಂಡೂರಾಯರಿಗೆ ಮೂರು ದಿನಗಳ ಶೋಕ ವ್ಯಕ್ತ ಮಾಡಿದ್ದೀರಿ.

ಸಕಲ ರಾಜ್ಯ ಸರಕಾರದ ಗೌರವದೊಂದಿಗೆ ಅಂತಿಮ ಕ್ರಿಯೆಯನ್ನು ನೆರವೇರಿಸಿದ್ದೀರಿ. ಮುಖ್ಯಮಂತ್ರಿ ಮೊಯಿಲಿಯವರು ಅವರ ಬಗ್ಗೆ ವ್ಯಾಪಕವಾದ ವಿಚಾರಗಳನ್ನು ಹೇಳಿ ಅವರು ಒಬ್ಬ ರಾಷ್ಟ್ರ ನಾಯಕರು ಎಂದು ಹೇಳಿ ಅವರ ಆಡಳಿತದ ಬಗ್ಗೆ ಸಮರ್ಥನೆ ಮಾಡಿದ್ದಾರೆ. ಅವರಿಗೆ ಸಲ್ಲಿಸತಕ್ಕ ದೊಡ್ಡ ಶ್ರದ್ಧಾಂಜಲಿ ಎಂದರೆ ಅವರು ಮುಖ್ಯಮಂತ್ರಿಯಾಗಿದ್ದಾಗ ಅನುಸರಿಸಿದ ಒಂದು ನೀತಿಯ ಬಗ್ಗೆ ನೀವು ತೀರ್ಮಾನ ತೆಗೆದುಕೊಂಡು ಜಾರಿಗೆ ತಂದರೆ ಸರಕಾರದ ರೀತಿಯಿಂದ ದೊಡ್ಡದಾದ ಶ್ರದ್ಧಾಂಜಲಿ ಎಂದು ನಾನು ಹೇಳುತ್ತೇನೆ. ಅದು ಯಾವುದು ಗೊತ್ತೇ? ಏಪ್ರಿಲ್, ಮೇ, ಜೂನ್ ತಿಂಗಳುಗಳಲ್ಲಿ ವರ್ಗಾವಣೆ ಎಂಬ ಕಾರ್ಖಾನೆಗಳನ್ನು ತಾವು ನಿರ್ಮಾಣ ಮಾಡಿದ್ದೀರಲ್ಲ. ಆ ಕಾರ್ಖಾನೆಗಳ ಬಗ್ಗೆ ಗುಂಡೂರಾಯರು ಮೂರು ವರ್ಷಗಳ ಅವಧಿಯಲ್ಲಿ ಯಾವ ಹಿತವನ್ನು ಇಟ್ಟುಕೊಂಡು ಕಠಿಣವಾದ ನಿಲುವನ್ನು ತಳೆದಿದ್ದರು. ಆ ನಿಲುವನ್ನು ನೀವು ತಳೆಯುವುದಕ್ಕೆ ಒಂದು ಕ್ರಮ ಜಾರಿಗೆ ತಂದರೆ, ಗುಂಡೂರಾಯರಿಗೆ ಮೊಯ್ಲಿ ಸರಕಾರದ ದೊಡ್ಡ ಶ್ರದ್ಧಾಂಜಲಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ......

ನಾವು ರಾಜಕೀಯ ಅಧಿಕಾರವನ್ನು ಸ್ವೀಕಾರ ಮಾಡಿದ ಮೇಲೆ ಇರುವಷ್ಟು ದಿವಸ ಯಾವ ಕೆಲಸವನ್ನು ಮಾಡಿಬಿಟ್ಟಿದ್ದೇವೆ, ಯಾವ ಹೆಗ್ಗುರುತು ಬಿಟ್ಟಿದ್ದೇವೆ ಎಂದು ಹೇಳುತ್ತಾ ಇರತಕ್ಕದ್ದು ಬಹಳ ಪ್ರಮುಖವಾದದ್ದು. ಈ ದೃಷ್ಟಿಯಲ್ಲಿ ಗುಂಡೂರಾಯರ ಪಾರ್ಥಿವ ಶರೀರಕ್ಕೆ ಅಂತಿಮ ನಮನಗಳನ್ನು ಸಲ್ಲಿಸಲು ಕರ್ನಾಟಕದ ನಾನಾ ಭಾಗಗಳಿಂದ ಬಂದಿರತಕ್ಕ ಸಾವಿರಾರು ಜನರನ್ನು ನಿನ್ನೆ ನಾನು ನೋಡಿದಾಗ ಆ ವ್ಯಕ್ತಿಯ ಬಗ್ಗೆ ಅವರ ವರ್ಣರಂಜಿತ ಜೀವನದ ಬಗ್ಗೆ ಜನರ ಮನಸ್ಸಿನಲ್ಲಿದ್ದಂತಹ ನೂರಾರು ಅನಿಸಿಕೆಗಳನ್ನು ಈ ಜನ ವ್ಯಕ್ತಮಾಡಿದ್ದನ್ನು ನೋಡಿದ್ದೇನೆ. ಅವರ ಎಷ್ಟೋ ರಾಜಕೀಯ ಟೀಕಾಕಾರರು, ಅವರು ಮಾಡಿದ ಕಾರ್ಯಕ್ರಮಗಳಲ್ಲಿ, ತೆಗೆದುಕೊಂಡಿರತಕ್ಕ ಕೆಲವು ಯೋಜನೆಗಳಲ್ಲಿ ಕುತಂತ್ರ ಇದೆ ಎಂದು ಖಂಡಿತಾ ಭಾವಿಸುವುದಿಲ್ಲ. ಏಕೆಂದರೆ ಆ ವ್ಯಕ್ತಿ ಏನಾದರೂ ಒಂದನ್ನು ಮತ್ತು ಮನಸ್ಸಿನಲ್ಲಿ ಏನೋ ಯೋಚನೆ ಮಾಡಿಕೊಂಡು ಬಹಳ ತಂತ್ರಗಾರಿಕೆ ಹೂಡಿ ಕುತಂತ್ರದಿಂದ ಏನೋ ರಾಜಕಾರಣ ಮಾಡಬೇಕೆಂದು ಅವರ ತಲೆಯಲ್ಲಿ ಇರಲಿಲ್ಲ. ಮಾಡುವುದನ್ನು ನೇರವಾಗಿ ಮಾಡಬೇಕು. ಮಾಡಿದ್ದನ್ನು ಜನರು ಒಪ್ಪುತ್ತಾರೋ ಇಲ್ಲವೋ, ಪರಿಣಾಮ ಏನು? ಪತ್ರಿಕೆಯವರು ಏನಾದರೋ ಬರೀತಾರೋ ಏನೋ ಎನ್ನುವ ಭಾವನೆ, ನಿರ್ಬಂಧ ಅವರಲ್ಲಿರಲಿಲ್ಲ. ಮಂಗಳೂರಿನಲ್ಲಿ ಹೋಗಿ ಈ ಅರಬ್ಬೀ ಸಮುದ್ರಕ್ಕೆ ಪತ್ರಕರ್ತರನ್ನು ಬೀಸಾಕಬೇಕು ಎಂದು ಹೇಳಿದ್ದರು. ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿ ಸಮಸ್ಯೆ ಉಂಟಾದರೂ ಕೂಡ ಅವರು ಹೇಳಿದ್ದನ್ನು ಹಿಂತೆಗೆದುಕೊಳ್ಳಲಿಲ್ಲ. ಹೌದು, ಆ ಒಂದು ಪರಿಸ್ಥಿತಿಯಲ್ಲಿ ನಾನು ಹೇಳಿದ್ದು ನಿಜ ಎಂದು ಸಮರ್ಥನೆ ಮಾಡಿದ ವ್ಯಕ್ತಿ, ಅಂತಹ ಒಂದು ವರ್ಣರಂಜಿತ ಜೀವನ ನಡೆಸಿರತಕ್ಕ ನನ್ನ ಮಿತ್ರ ಗುಂಡೂರಾಯರ ಅಗಲುವಿಕೆಯಿಂದ ಕಾಂಗ್ರೆಸ್ ಪಕ್ಷಕ್ಕಂತೂ ನಿಜವಾಗಿ ನಷ್ಟವಾಗಿದೆ. ರಾಜ್ಯದ ರಾಜಕಾರಣದಲ್ಲಿ ಅವರು ತಮ್ಮದೇ

ಆದ ಕೆಲವು ಗುರ್ತುಗಳನ್ನು ಬಿಟ್ಟು ಹೋಗಿದ್ದಾರೆ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ಕೊಡಲಿ.

**ಡಾ|| ಎಂ.ಆರ್. ತಂಗಾ (ಸದಸ್ಯರು)** ....... ಗುಂಡೂರಾಯರ ಬಗ್ಗೆ ನನಗೆ ಸಾಕಷ್ಟು ಪರಿಚಯ ಇಲ್ಲ, ಪತ್ರಿಕೆಯಲ್ಲಿ ಓದುವ ಮುಖಾಂತರ ಅವರ ಪರಿಚಯವಾಗಿದ್ದು. ನಮ್ಮ ಗುಲ್ಬರ್ಗ ಭಾಗಕ್ಕೆ ಸಂಬಂಧಪಟ್ಟಂತೆ ಎರಡು ಘಟನೆಗಳನ್ನು ಹೇಳಿ ಅವರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಗುಲ್ಬರ್ಗಾ ಭಾಗದ ಜನರು ಸನ್ಮಾನ್ಯ ಗುಂಡೂರಾಯರನ್ನು ಏಕೆ ನೆನಪಿಸುತ್ತೇವೆಂದು ಹೇಳಿದರೆ, ಬೆಂಗಳೂರು ಬಿಟ್ಟು ಹೊರಗಡೆ ಮೊದಲನೇ ಬಾರಿ ಸಚಿವಸಂಪುಟದ ಸಭೆ ಆಗಿದ್ದು ನಮ್ಮ ಗುಲ್ಬರ್ಗದಲ್ಲಿ, ಆ ಸಮಯದವರೆಗೆ ಯಾವಾಗಲೂ ಬೆಂಗಳೂರಿನಲ್ಲಿಯೇ ಸಭೆಯಾಗುತ್ತಿತ್ತು. ಮೈಸೂರು ರಾಜಧಾನಿಯಾಗಿದ್ದಾಗ ಮೈಸೂರಿನಲ್ಲಿ ಆಗುತ್ತಿತ್ತು. ರಾಜಧಾನಿ ಬಿಟ್ಟು ಬೇರೆ ಕಡೆ ಸಚಿವಸಂಪುಟ ಸಭೆ ಆಗಿರಲಿಲ್ಲ. ಆದರೆ, ಮೊದಲನೇ ಬಾರಿಗೆ ಗುಲ್ಬರ್ಗಾದಲ್ಲಿ ಆ ಸಭೆ ಆಯಿತು. ಏಕೆಂದರೆ, ಈ ಭಾಗ ಅತಿ ಹಿಂದುಳಿದ ಪ್ರದೇಶ. ಇಲ್ಲಿ ಬಂದು ಸಮಸ್ಯೆಗಳನ್ನು ನೋಡುತ್ತೇನೆ, ಅರಗಿಸಿಕೊಳ್ಳುತ್ತೇನೆ. ಏನಾದರೂ ಸಹಾಯ ಮಾಡುವಂಥ ಪ್ರಯತ್ನವನ್ನು ಮಾಡುತ್ತೇನೆ ಎಂದು ಗುಂಡೂರಾಯರು ಐವಾನ್ ಶಾಹಿಯಲ್ಲಿ ಸಚಿವ ಸಂಪುಟದ ಮೊದಲನೇ ಸಭೆ ಮಾಡಿದರು. ಆ ಸಂದರ್ಭದಲ್ಲಿ ಕೆಲವು ವಿರೋಧ ಪಕ್ಷದವರು ಇವರು ಸುಮ್ಮನೆ ನಾಟಕ ಮಾಡುತ್ತಾರೆ, ಹಾಗೆ ಹೀಗೆ ಎಂದು ಹೇಳಿದರು. ಆದರೂ ಕೂಡ ಸಚಿವ ಸಂಪುಟದ ಸಭೆ ಮಾಡಿ, ಆ ಸಭೆಯಲ್ಲೇ ಒಂದು ತೀರ್ಮಾನವಾಯಿತು. ಶ್ರೀ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿದರು. ಹೈದರಾಬಾದ್ ಕರ್ನಾಟಕ ಪ್ರದೇಶ ಏಕೆ ಹಿಂದುಳಿದಿದೆ ಎಂಬುದನ್ನು ನೋಡುವುದಕ್ಕೋಸ್ಕರ ಈ ಕಮಿಟಿ. ಈ ಕಮಿಟಿಯವರು ಇಡೀ ದೇಶದಲ್ಲಿ ಸಂಚಾರ ಮಾಡಿ, ಒಂದು ರಿಪೋರ್ಟ್ ಕೊಟ್ಟರು. ಆ ವರದಿ ಆಧಾರದ ಮೇಲೆ ಎಚ್.ಕೆ.ಡಿ.ಪಿ. ಆಯಿತು. ಈ ಎಚ್.ಕೆ.ಡಿ.ಪಿ.ಯಿಂದ ಎಷ್ಟು ಲಾಭವಾಗಿದೆ, ಎಷ್ಟು ನಷ್ಟವಾಗಿದೆ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಾ ಇಲ್ಲ. ಗುಂಡೂರಾಯರು ಹಿಂದುಳಿದ ಪ್ರದೇಶವನ್ನು ಮುಂದೆ ತರುವುದಕ್ಕೆ ಅವಕಾಶವಾಗಬೇಕೆಂಬ ಸದ್ಭಾವನೆಯಿಂದ ಅಲ್ಲಿ ಸಚಿವ ಸಂಪುಟದ ಸಭೆ ಮಾಡಿ, ಆ ಭಾಗದಲ್ಲಿ ವೀಕ್ಷಣೆ ಮಾಡಿ, ಆ ಭಾಗಕ್ಕೆ ಸಹಾಯ ಮಾಡುವಂಥ ಪ್ರಯತ್ನ ಮಾಡಿದರು. ಅದಕ್ಕಾಗಿ ಹೈದರಾಬಾದ್ ಕರ್ನಾಟಕದ ಜನರು ಅವರಿಗೆ ಚಿರಋಣಿಯಾಗಿರುತ್ತಾರೆ.

ಗುಂಡೂರಾಯರ ಬಗ್ಗೆ ಏನಾದರೊಂದು ಮೆಮೋರಿಯಲ್ ಮಾಡಬೇಕೆಂದು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಕೆಲವರು ಒಂದು ರಸ್ತೆಗೆ ಅವರ ಹೆಸರನ್ನು ಕೊಡಿ ಎಂದು, ಮತ್ತೆ ಕೆಲವು ಜನರು ಅವರ ಪುತ್ಥಳಿ ಮಾಡಿ ಎಂದು ಹೇಳಿದರು. ಯಾವುದೇ ಮೆಮೋರಿಯಲ್ ಮಾಡಿದರೂ ಇಟ್ ಶುಡ್ ಸರ್ವ್ ಡಬ್ಬಲ್ ಪರ್ಪಸ್, ಒನ್ ಪರ್ಪಸ್ ಈಸ್, ಇಟ್ ಶುಡ್ ಬಿ ಎವರ್‌ಲಾಸ್ಟಿಂಗ್, ಸೆಕೆಂಡ್ಲಿ ಇಟ್ ಶುಡ್ ಬಿ ಯೂಸ್‌ಫುಲ್ ಆಲ್ಸೋ.

ಮಹಾರಾಷ್ಟ್ರದ ಟಾಟಾ ಟ್ರಸ್ಟ್ ನವರು ಲುಕೇಮಿಯಾ ರೀಸರ್ಚ್ ಟ್ರಸ್ಟ್ ಎಂದು ಮಾಡಿದ್ದಾರೆ. ಪ್ರತಿವರ್ಷ ಅಂತಾರಾಷ್ಟ್ರೀಯ ಖ್ಯಾತಿ ವ್ಯಕ್ತಿಗಳು ಯಾರು ಈ ಲುಕೇಮಿಯಾ ರೋಗದ ಬಗ್ಗೆ ಅಭ್ಯಾಸ ಮಾಡುತ್ತಾರೆ, ಒಳ್ಳೆಯ ಪೇಪರ್ಸ್ ಬರೆಯುತ್ತಾರೆ. ಅವರನ್ನು ಕರೆಸಿ ಸನ್ಮಾನ ಮಾಡಿ 1-2 ಲಕ್ಷ ಕೊಡುತ್ತಾರೆ. ಹಾಗೆ ನಮ್ಮ ಕರ್ನಾಟಕ ರಾಜ್ಯದಲ್ಲೂ ಮಾಡಬೇಕು. ನೀವು ಪುತ್ಥಳಿ ನಿಲ್ಲಿಸುವುದಾದರೆ ನಿಲ್ಲಿಸಿ, ನನ್ನದೇನೂ ಅಭ್ಯಂತರ ಇಲ್ಲ. ಆದರೆ, ಕರ್ನಾಟಕ ರಾಜ್ಯದವರು ಪ್ರತಿ ವರ್ಷ ಎರಡು-ಎರಡೂವರೆ ಲಕ್ಷ ಕೊಡುತ್ತೇವೆ. ಸನ್ಮಾನ್ಯ ಗುಂಡೂರಾಯರ ಮೆಮೋರಿಯಲ್ ಲುಕೇಮಿಯಾ ಲೆಕ್ಚರ್ ಅಥವಾ ಫೌಂಡೇಶನ್ ಎಂದು ಮಾಡಿ ಪ್ರತಿವರ್ಷ ಅಂತಾ ರಾಷ್ಟ್ರೀಯ ಖ್ಯಾತಿಯವರನ್ನು ಕರೆಸಬೇಕು. ಗುಂಡೂರಾಯರು ಯಾವ ರೋಗದ ಬಗ್ಗೆ ತೀರಿಕೊಂಡರೋ ಆ ರೋಗದ ಬಗ್ಗೆ ಸಂಶೋಧನೆ ಮಾಡುವಂಥ ವ್ಯಕ್ತಿಗಳನ್ನು ಬೆಂಗಳೂರಿಗೆ ಕರೆಸಿ, ಪ್ರತಿ ವರ್ಷ ಉಪನ್ಯಾಸ ಮಾಡಿಸಬೇಕು... ಇದಕ್ಕೆ ಅವರ ಹೆಸರನ್ನು ಕೊಟ್ಟು, ಇದಕ್ಕೆ ಸರ್ಕಾರದವರು ಹಣಕೊಡಲಿ ಅಥವಾ ಅವರ ಹೆಸರಿನಲ್ಲಿ ಶಾಸಕರಿಂದಾಗಲೀ ಜನರಿಂದಾಗಲೀ ವಂತಿಕೆ ಸಂಗ್ರಹಿಸಿ ಕೊಡುವ ಅವಶ್ಯಕತೆ ಇದ್ದರೆ ಕೊಡೋಣ. ಈ ಕೆಲಸವನ್ನು ಮಾಡಿದರೆ, ಪ್ರತಿ ವರ್ಷ ನಮಗೆ ಮಾನ್ಯ ಗುಂಡೂರಾಯರ ನೆನಪಾಗುತ್ತದೆ. ಈ ಖಾಯಿಲೆ ಚಿಕಿತ್ಸೆ ಮಾಡುವುದಕ್ಕೆ ಏನಾದರೂ ಅವಕಾಶವಾಗುತ್ತದೆ.

ಶ್ರೀ ಕೆ.ಎನ್. ನಾಗೇಗೌಡ (ಸಚಿವರು): ಮಾನ್ಯ ಸಭಾಪತಿಯವರೇ ಸಂತಾಪ ಸೂಚನೆಗೆ ನನ್ನ ಬೆಂಬಲ ಸೂಚಿಸುತ್ತಾ ಮಾನ್ಯ ನಾಣಯ್ಯನವರ ಭಾಷಣವನ್ನು ಕೇಳಿ ಒಂದು ಸ್ಫೂರ್ತಿ ಬಂದು ಮಾನ್ಯ ಗುಂಡೂರಾಯರ ಬಗ್ಗೆ ಮಾತನಾಡಬೇಕೆಂದು ನನ್ನ ಮನಸ್ಸಿಗೆ ಅನಿಸಿತು. ಈ ಸದನಕ್ಕೆ ನಾನು ಬರಬೇಕಾದರೆ, ಗುಂಡೂರಾಯರ ಬೆಂಬಲದಿಂದ ಬಂದೆ. 1969ರಲ್ಲಿ ಗುಂಡೂರಾಯರಿಗೂ ನಮಗೂ ವಿಶೇಷವಾದ ಬಾಂಧವ್ಯ ಬಂದಿತು. ಎಕ್ಸ್‌ಪೋ-70 ಗಲಾಟೆಯಲ್ಲಿ ಗುಂಡೂರಾಯರು ಮತ್ತು ಎಫ್.ಎಂ.ಖಾನ್‌ರವರು ದೇವರಾಜ ಅರಸುರವರ ಮಲ್ಲೇಶ್ವರದ ಮನೆಯಲ್ಲಿ ನಮಗೆ ಪರಿಚಯ ಆಯಿತು. ಅವರು ಕೊನೆಯಲ್ಲಿ ಲಂಡನ್‌ಗೆ ಹೋಗುವಾಗ ನನ್ನ ಮಗಳ ಮನೆಯಲ್ಲಿ ಊಟ ಮಾಡಿದವರೆಗೂ ನನಗೆ ಅವರ ಪರಿಚಯ. ವಿಶೇಷವಾಗಿ ಗುಂಡೂರಾಯರಲ್ಲಿ ಒಂದು ತೆರೆದಂಥ ಹೃದಯ ಇತ್ತು. ನೇರವಾಗಿ ಹೇಳತಕ್ಕಂಥ ಧೈರ್ಯ ಬಹಳ ತುಂಬಿತ್ತು. ಅದಕ್ಕೆ ಕಾರಣ ಅವರು ಬರೀ ಕೊಡಗಿನವರು ಅಲ್ಲ; ಅವರು ಮಂಡ್ಯ ಜಿಲ್ಲೆಯವರು ಸಹ. ಅವರ ಚಿಕ್ಕಪ್ಪ ಹಾಗೂ ಅವರ ಪೂರ್ವಜರು ಇವತ್ತಿಗೂ ಸಹ ಪಾಂಡವಪುರ ತಾಲ್ಲೂಕಿನಲ್ಲಿದ್ದಾರೆ. ಅವರ ಚಿಕ್ಕಪ್ಪಂದಿರೆಲ್ಲಾ ಪೂಜೆ ಮಾಡುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ: ಗುಂಡೂರಾಯರು ಹುಟ್ಟಿದ್ದು ಕೊಡಗಿನ ಮಡಿಕೇರಿಯಲ್ಲಿ...

ಶ್ರೀ ಕೆ.ಎನ್. ನಾಗೇಗೌಡ: ನಾನು ವಂಶ ಅಂತ ಹೇಳಿದೆ. ಗುಂಡೂರಾಯರ ಪೂರ್ವ ವಂಶ. ಅವರದ್ದು ಪಾಂಡವಪುರ ತಾಲ್ಲೂಕು ಅಂತ ಹೇಳಿದೆ. ನಾವು ಅವರಿಗೆ ರಾಜಕೀಯವಾಗಿ ಪರ ಮಾಡಿದ್ದೇವೆ, ವಿರೋಧ ಮಾಡಿದ್ದೇವೆ. ಅವರಲ್ಲಿ ರಾಜಕಾರಣಕ್ಕಿಂತ

ಒಂದು ವಿಶೇಷವಾದ ವ್ಯಕ್ತಿತ್ವ ಇತ್ತು. ವರ್ಣರಂಜಿತ ಅಂತ ಹೇಳಿದರೆ ತಪ್ಪಾಗಲಾರದು. ಏತಕ್ಕೆ ಎಂದು ಹೇಳಿದರೆ ಅವರು ಎಲ್ಲಿಯವರೆಗೂ ಹೋಗಿ ಮುಟ್ಟಿದರು ಅಂತ ಹೇಳಿದರೆ, ನೆಹರು ಮನೆತನದ ಒಬ್ಬ ಪುತ್ರನಂತೆ ರಾಜಕಾರಣವನ್ನು ಮಾಡಿದರು. ಅದು ಅಷ್ಟು ಸಣ್ಣ ವಿಚಾರ ಅಂತ ಯಾರೂ ಭಾವಿಸಿಕೊಳ್ಳುವುದಕ್ಕಾಗುವುದಿಲ್ಲ. ತಮಗೆಲ್ಲಾ ಗೊತ್ತಿದ್ದ ಹಾಗೆ ಲಕ್ಕಪ್ಪನವರ ಮನೆಯಲ್ಲಿ ದೇವರಾಜ ಅರಸುರವರನ್ನು ಬಿಟ್ಟು ಗುಂಡೂರಾಯರು ಜೊತೆಯಲ್ಲಿ ಇಂದಿರಾಗಾಂಧಿಯವರು ಹೊರಟಾಗ ಇವರು ನನ್ನ ಮೂರನೇ ಮಗ ಎನ್ನುವವರೆಗೂ ಇಂದಿರಾಗಾಂಧಿ ಹೊರಟರು. ಅದರ ಅರ್ಥ ಒಬ್ಬ ಮಾಸ್ತರರ ಮನೆಯಲ್ಲಿ ಹುಟ್ಟಿದಂತಹ ಗುಂಡೂರಾಯರು ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ಅತ್ಯಂತ ಎತ್ತರದ ಶ್ರೀಮಂತರ ಮನೆಯ ಪುತ್ರನಾಗಿ ರಾಜಕಾರಣ ಮಾಡಿಕೊಂಡು ಬಂದದ್ದು ಒಂದು ವಿಶೇಷವಾದಂತಹ ಗುಣ ಅಂತ ಹೇಳಿದರೆ ತಪ್ಪಾಗಿ ಭಾವಿಸಬಾರದು. ನಾವು ನೀವು ನೋಡಿದ ಹಾಗೆ ಅವರ ಮನೆಯ ಮುಂದೆ ಎಷ್ಟೋ ಮುಖ್ಯಮಂತ್ರಿಗಳನ್ನು ನೋಡಿದೆವು. ಎಷ್ಟೋ ರಾಜ್ಯದ ಮಂತ್ರಿಗಳನ್ನು ನೋಡಿದೆವು. ಇವತ್ತಿನ ಪ್ರಧಾನಿಗಳನ್ನು ಸೇರಿಸಿಕೊಂಡು, ಅಂದ್ರೆ ಅದರ ಅರ್ಥ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಅತ್ಯಂತ ಎತ್ತರದ ಶಿಖರಕ್ಕೆ ಮುಟ್ಟಿದ್ದು ಅವರ ರಾಜಕಾರಣದಲ್ಲಿ ನಡೆದಂತಹ ದುರಂತ ಅಂತ ನಾನು ಭಾವಿಸುತ್ತೇನೆ.

ಅಧಿಕಾರ ಮನುಷ್ಯನಿಗೆ ವಯಸ್ಸಿಗೆ ತಕ್ಕಂತೆ ಬಂದರೆ ಸರಿ ಎನ್ನತಕ್ಕಂಥಾದ್ದಕ್ಕೆ ಗುಂಡೂರಾಯರು ಉದಾಹರಣೆ ಎಂದು ನನಗೆ ಅನಿಸುತ್ತದೆ. ವಯಸ್ಸಿಗೆ ತಕ್ಕಂತೆ ಅಧಿಕಾರ ಬಾರದೆ ಅದು ತದ್ವಿರುದ್ಧವಾದರೆ, ಅನುಭವಕ್ಕೆ ವಯಸ್ಸಿಗೆ ತದ್ವಿರುದ್ಧವಾದರೆ ಬಹಳ ತಪ್ಪಾಗುತ್ತದೆ ಅಂತ ಅನಿಸುತ್ತದೆ. ಗುಂಡೂರಾಯರಲ್ಲಿ ಕಂಡಂತಹ ದೋಷ ಏನೆಂದರೆ ಅವರು ಬಹಳಷ್ಟು ಕಟುವಾಗಿ ಮಾತನಾಡುತ್ತಿದ್ದರೂ, ಅವರ ಹೃದಯ ಅಷ್ಟೊಂದು ಕಟುವಾಗಿರಲಿಲ್ಲ ...... ಅದು ಏನೆ ಇದ್ದರೂ ಸಹ ಅವರು ಒಂದು ರೀತಿಯಲ್ಲಿ ಪ್ರಜಾಪ್ರಭುತ್ವವಾದಿಯಾಗಿಯೇ ಮುಂದುವರಿದಿದ್ದರು. ಮೊನ್ನೆ ದಿವಸ ಅವರ ಶರೀರವನ್ನು ಯಾವ ಮನೆಯಲ್ಲಿ ಇಟ್ಟಿದ್ದರೋ, ಅಲ್ಲಿ 1984ನೇ ಇಸವಿಯಲ್ಲಿ ನಾವೆಲ್ಲ ಸೇರಿದ್ದೆವು. ಬೇಗಾನೆ ರಾಮಯ್ಯ ಮತ್ತು ಧರ್ಮಸಿಂಗ್ ಅವರೆಲ್ಲರೂ ಇದ್ದರು. ಆಗ ಅವರು ಒಂದು ಮಾತನ್ನು ಹೇಳಿದ್ದರು. ನಾಗೇಗೌಡರೆ, ನಾನು ಸತ್ತರೆ ಈ ದೇಶದಲ್ಲಿ ಸಾಯುವುದಿಲ್ಲ. ಏನಿದ್ದರೂ ಹೊರದೇಶದಲ್ಲಿ ಸಾಯುತ್ತೇನೆಂದು ಹೇಳಿದ್ದರು ........ ಅವರಿಗೆ ಬಿಚ್ಚು ಮನಸ್ಸಿನ ವ್ಯಕ್ತಿತ್ವ ಇತ್ತು. ಆನೆಯಂಥ ಶರೀರ ಇದ್ದರೂ ಸಹಾ ಮಗುವಿನಂಥ ಹೃದಯ ಇತ್ತು. ಸಿಂಹದಂಥ ಘರ್ಜನೆ ಇತ್ತು. ಅವರು ಈ ರಾಜ್ಯಕ್ಕೆ ಒಳ್ಳೆ ಆಡಳಿತ ಕೊಟ್ಟಂಥ ಮುಖ್ಯಮಂತ್ರಿ, ಜನರಿಗೆ ಸೇವೆ ಮಾಡಬೇಕು ಎನ್ನತಕ್ಕಂಥ ಮನೋಭಾವ ಇದ್ದಂಥ ಮುಖ್ಯಮಂತ್ರಿ, ಮುಖಂಡ. ಜೊತೆಗೆ ಸ್ನೇಹಿತರಿಗಂತೂ ಎಂದೆಂದಿಗೂ ದ್ರೋಹ ಮಾಡಿದವರಲ್ಲ. ಅವರು ಯಾವ ಪಕ್ಷದಲ್ಲೇ ಇರಲಿ, ಯಾವ ರೀತಿಯಲ್ಲೇ ಇರಲಿ, ಸ್ನೇಹಿತರ ಜೊತೆ ಬಹಳ ಆತ್ಮೀಯವಾಗಿ ಮಾತನಾಡುವಂಥವರು. ಒಂದು ಸಾರಿ ನನಗೂ ಖಾನ್‌ಗೂ ಬಹಳ ದೊಡ್ಡ ಜಗಳ ನಡೆದಾಗ

ಅವರು ಆಡಿದಂಥ ಮಾತು ಇವತ್ತಿಗೂ ನನಗೆ ಜ್ಞಾಪಕ ಇದೆ. ನಾವು ಒಂದು ಸಾರಿ ಕಾಗೋಡು ತಿಮ್ಮಪ್ಪನವರು ಜೊತೆಯಲ್ಲಿ ಕೂತಾಗ, ಗುಂಡೂರಾಯರನ್ನು ಹಾಳು ಮಾಡಿದವರು ಖಾನ್ ಎಂದು ಹೇಳಿದಾಗ, ಗುಂಡೂರಾಯರು ಒಂದು ಮಾತು ಹೇಳಿದರು. ಯಾವಾಗಲೂ ಅಧಿಕಾರ ಕಳೆದುಕೊಂಡಾಗ ಅರ್ಥ ಮಾಡಿಕೊಳ್ಳುವುದಕ್ಕೆ ಮತ್ತು ಚರ್ಚೆ ಮಾಡುವುದಕ್ಕೆ ಸಾಧ್ಯ ಆಗುತ್ತದೆ. ಆದ್ದರಿಂದ ನಾಗೇಗೌಡರು ಹೇಳಿದ್ದನ್ನು ಕೇಳು ಎಂದು ಖಾನ್ ಅವರಿಗೆ ಹೇಳಿದರು. ಆ ಮನುಷ್ಯನಿಗೆ ಬಹಳ ಬುದ್ಧಿ ಇತ್ತು. ಆದರೆ, ಒಂದೇ ಒಂದು ದೋಷ ಏನಿತ್ತು. ಎಂದರೆ ನಾನು ಎನ್ನತಕ್ಕ ದೋಷ ಅವರಲ್ಲಿದ್ದದ್ದನ್ನು ಬಿಟ್ರೆ ಇನ್ನೇನೂ ಇರಲಿಲ್ಲ. ರಾಜೀವ್ ಗಾಂಧಿಯವರ ಜೊತೆಯಲ್ಲಿ ಅವರಿಗೆ ಭಿನ್ನಾಭಿಪ್ರಾಯ ಬರಬೇಕಾದರೂ ಅದೇ ಕಾರಣ ಆಗಿತ್ತು. ನೀವು ಏನು ಇಂದಿರಾಗಾಂಧಿಯವರ ಮಗ? ನಾನೂ ಇಂದಿರಾಗಾಂಧಿಯವರ ಮಗ ಎಂದು ರಾಜೀವ್ ಗಾಂಧಿಯವರ ಮುಂದೆ ಹೇಳಿದ್ದನ್ನು ನಾನು ಎಷ್ಟೋ ಸಾರಿ ಕೇಳಿದ್ದೇನೆ. ನಿಮಗಿಂತಾ ಇಂದಿರಾಗಾಂಧಿ ನನ್ನ ತಾಯಿ ಎನ್ನತಕ್ಕ ಮಾತನ್ನು ಆಡಿದ್ದನ್ನು ನಾನು ಕೇಳಿದ್ದೇನೆ. ಇಂಥ ಸಣ್ಣಪುಟ್ಟ ದೋಷಗಳು ಬಿಟ್ರೆ ಬೇರೆ ಏನೂ ಇರಲಿಲ್ಲ. ರಾಜಕಾರಣದಲ್ಲಿ ಬೇರೆಯವರಿಗೆ ಕೊಡತಕ್ಕಂಥ ಗೌರವ ಅವರಲ್ಲಿ ಬಹಳ ಇತ್ತು. ಅವರು ಲೋಕಸಭೆಗೆ ನಿಲ್ಲಬೇಕಾದರೆ ನಾನು ಸಹಾ ಅವರನ್ನು ಬಹಳ ಪುಸಲಾಯಿಸಿದೆ. ನಾನು ಎಲ್ಲಿಯವರೆಗೆ ಮಾತನಾಡಿದೆ ಎಂದರೆ, ಇವತ್ತು ದಕ್ಷಿಣ ಭಾರತದಲ್ಲಿ ಒಳ್ಳೆ ಬ್ರಾಹ್ಮಣ ಮುಖಂಡರು ಬೇಕು, ಅದಕ್ಕಾಗಿ ನೀವು ನಿಲ್ಲಬೇಕೆಂದು ಪುಸಲಾಯಿಸಿದವರಲ್ಲಿ ನಾನೂ ಒಬ್ಬ. ಅವರು ಬಹಳ ವರ್ಣರಂಜಿತ ಹಾಗೂ ಯಾರೂ ಮರೆಯದೇ ಇರತಕ್ಕಂಥ ರಾಜಕಾರಣವನ್ನು ಮಾಡಿ ಹೋದರು. ಅದಕ್ಕೆ ಸಾಕ್ಷಿ ನಾವು ನೋಡಿದೆವು. ಯುವಕರ ಅಂತರಾಳದಲ್ಲಿ ಗುಂಡೂರಾಯರು ಬಹಳವಾಗಿ ನೆಲೆಸಿದ್ದರು. ಇತ್ತೀಚೆಗೆ 8-10 ವರ್ಷಗಳಿಂದ ಅವರು ಬಹಳಷ್ಟು ಬದಲಾವಣೆ ಹೊಂದಿದ್ದರು. ಇನ್ನು 5-6 ವರ್ಷ ಹೋಗಿದ್ದರೆ. ಬಹುಶಃ ಇನ್ನು ಉತ್ತಮವಾದ ರಾಜಕಾರಣವನ್ನು ಮಾಡುತ್ತಿದ್ದರು. ಎಂದು ನನಗೆ ಅನ್ನಿಸುತ್ತದೆ. ಅವರಿಗೆ ಎಷ್ಟೋ ಸಾರಿ ಗವರ್ನರ್ ಆಗಬೇಕೆಂದು ಕರೆಬಂದಂಥ ಕಾಲದಲ್ಲೂ ಸಹಾ ಅದನ್ನು ತಿರಸ್ಕಾರ ಮಾಡಿದಂಥ ಮನುಷ್ಯ. ರಾಜಕಾರಣದಲ್ಲಿಯೇ ಇರಬೇಕೆಂದು ಅವರ ಮನಸ್ಸಿನಲ್ಲಿತ್ತು.

ಅವರು ಲಂಡನ್ ಹೋಗುವಾಗ ಕೊನೆಯಲ್ಲಿ ಏರ್‌ಪೋರ್ಟ್‌ನಲ್ಲಿ ಕಣ್ಣೀರು ಹಾಕಿದರೆಂದು ಕೇಳಿ ನನಗೆ ಬಹಳ ದುಃಖವಾಯಿತು. ನಾನು ಸಹಾ ಅವತ್ತು ಲಂಡನ್‌ಗೆ ಫೋನ್ ಮಾಡಿ ಏನು ಸರ್ ಚೆನ್ನಾಗಿದ್ದೀರಾ ಎಂದು ಕೇಳಿದ್ದಕ್ಕೆ ಏನಿಲ್ಲ; ನಾನು ಬರುತ್ತೇನೆ ವಾಪಸ್, ನೀವು ಯೋಚನೆ ಮಾಡಬೇಕಾಗಿಲ್ಲ; ನನ್ನ ಆರೋಗ್ಯ ಸುಧಾರಣೆ ಆಗಿದೆ ಎನ್ನತಕ್ಕಂಥಹ ಮಾತನ್ನು ಅವರು ಹೇಳಿದರು. ಅವರು ಎಷ್ಟು ಹೇಳಿದರೂ, ಅವರ ಸಾವು ಹತ್ತಿರಕ್ಕೆ ಬಂದಿದೆ ಎಂದು ಅವರ ಆತ್ಮೀಯರೆಲ್ಲರಿಗೂ ಗೊತ್ತಿತ್ತು. ಕರ್ನಾಟಕ ರಾಜ್ಯದಲ್ಲಿ ಅವರ ಸೇವೆ ಹಾಗೂ ಅನೇಕ ಕೆಲಸಗಳ ಬಗ್ಗೆ ನೆನೆಸಿಕೊಳ್ಳುತ್ತಿದ್ದಾರೆ. ಅವರು ಕಾಂಟ್ರವರ್ಸಿಯಲ್ಲಿ

ಉಳ್ಳ ಪರ್ಸನಾಲಿಟಿಯಾಗಿದ್ದರು. 1969-70 ರಲ್ಲಿ ಕಾಂಗ್ರೆಸ್ ಆಫೀಸ್‌ನಲ್ಲಿ ಒಂದು ಮಾತನ್ನು ಅವರು ಹೇಳಿದ್ದರು. ಆಗ ಎಂ.ವಿ. ಕೃಷ್ಣಪ್ಪ, ಹನುಮಂತಯ್ಯ ಮತ್ತು ನಾಗರತ್ನಮ್ಮನವರೂ ಇದ್ದರು. ಈ ರಾಜ್ಯಕ್ಕೆ ಒಂದು ದಿನ ನಾನು ಮುಖ್ಯಮಂತ್ರಿ ಆಗುತ್ತೇನೆ ಎಂಬ ಮಾತನ್ನು ಅವರು ಆಗಲೇ ಹೇಳಿದ್ದರು. ನಾವು ಗುಂಡೂರಾಯರ ಜೊಳ್ಳು ಜುಬ್ಬಾ, ಫೈಜಾಮ ನೋಡಿ, ಏನಪ್ಪ ಇಷ್ಟು ದೊಡ್ಡ ಮನುಷ್ಯ ಯುವಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಬಂದಿದ್ದಾರೆ. ಆಗಲೇ ಮುಖ್ಯಮಂತ್ರಿ ಗಾದಿಯ ಮೇಲೆ ಕಣ್ಣು ಹಾಕುತ್ತಿದ್ದಾರಲ್ಲ? ಎಂದು ನಾವೆಲ್ಲರೂ ಅಂದುಕೊಳ್ಳುತ್ತಿದ್ದೆವು. ಅವರಿಗೆ ಕಾಂಗ್ರೆಸ್ ಲೆಜಿಸ್ಲೇಚರ್ ಪಾರ್ಟಿ ಕಾರ್ಯದರ್ಶಿ ಸ್ಥಾನ ದಕ್ಕಿದ್ದು ಅಷ್ಟು ಸಮಾಧಾನ ತಂದಿರಲಿಲ್ಲ. ತಾನು ಈ ರಾಜ್ಯಕ್ಕೆ ಮುಖ್ಯ ಮಂತ್ರಿಯಾಗಬೇಕೆಂಬುದು ಅವರ ಅಂದಿನ ಕನಸು ಆಗಿತ್ತು. ಅಷ್ಟೊಂದು ಹುಮ್ಮಸ್ಸು ಅವರಲ್ಲಿತ್ತು. ಈ ರಾಜ್ಯವನ್ನು, ರಾಷ್ಟ್ರವನ್ನು ಕಟ್ಟಬೇಕು, ತಾನು ಅಧಿಕಾರದಲ್ಲಿದ್ದು ಮುಂದೆಯೂ ರಾಜಕಾರಣ ಮಾಡಬೇಕೆನ್ನುವ ಮನಸ್ಸು ಇದ್ದಂತ ಮನುಷ್ಯನನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಸದನವು ಅವರಿಗೆ ಸಂತಾಪವನ್ನು ಸೂಚಿಸಿದೆ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ.

**ಶ್ರೀ ಟಿ.ಎನ್ ನರಸಿಂಹ ಮೂರ್ತಿ(ಸ್ಥಳೀಯ ಪ್ರಾಧಿಕಾರಗಳ ಕ್ಷೇತ್ರ).** ಮಾನ್ಯ ಸಭಾಪತಿಯವರೆ ..... ಗುಂಡೂರಾಯರ ಬಗ್ಗೆ ವಿಶೇಷವಾಗಿ ಹೇಳಬೇಕಾದಂಥ ಮುಖ್ಯ ಗುಣಗಳು ಎಂದರೆ, ಅವರು ನಿರ್ದಾಕ್ಷಿಣ್ಯವಾಗಿ ಮಾತನಾಡುತ್ತಿದ್ದರು. ಹಾಗೆಯೇ ಅವರಲ್ಲಿ ಜಾತ್ಯಾತೀತವಾದ ಭಾವನೆಗಳಿದ್ದವು ... ಅವರಿಗೆ ದಲಿತರ ಬಗ್ಗೆ ವಿಶೇಷವಾದಂಥ ಕಳಕಳಿ ಇತ್ತು. ಅಲ್ಪ ಸಂಖ್ಯಾತರ ಬಗ್ಗೆ ಅಪಾರ ನಂಬಿಕೆ ಇತ್ತು. ಹಿಂದುಳಿದ ವರ್ಗಗಳ ಅಪಾರ ನಂಬಿಕೆಯನ್ನು ಇಟ್ಟುಕೊಂಡಿದಂತ ವ್ಯಕ್ತಿ, ಅವರಾಗಿದ್ದರು. ಕಾಂಗ್ರೆಸ್ ಪಕ್ಷಕ್ಕೆ ಜಾತಿಯಿಲ್ಲ ಎಂದು ಹೇಳುವ ಹಾಗೆ ಅವರು ನಡೆದುಕೊಂಡಿದ್ದಾರೆ. ಜಾತೀಯತೆಗೆ ಯಾವುದೇ ತರಹದ ಬೆಂಬಲವನ್ನು ಕೊಡಬಾರದು ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದಂತ ಯುವನಾಯಕರಲ್ಲಿ ಗುಂಡೂರಾಯರು ಒಬ್ಬರಾಗಿದ್ದರು .... ಪ್ರತಿಯೊಬ್ಬ ನಾಗರೀಕನೂ ಮೆಚ್ಚುವ ರೀತಿಯಲ್ಲಿ ಅವರು ಅಂಬೇಡ್ಕರ್ ಪ್ರತಿಮೆಯನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿ ಕಟ್ಟುನಿಟ್ಟಾಗಿ ಜಾರಿಗೆ ಕೊಟ್ಟಂಥ ಅವರು ಒಂದು ಇತಿಹಾಸ ನಿರ್ಮಾಣ ಮಾಡಿ ಹೋಗಿದ್ದಾರೆ. ಏಪ್ರಿಲ್ 14 ಅಂಬೇಡ್ಕರ್ ಜನ್ಮದಿನವನ್ನಾಗಿ ಘೋಷಣೆ ಮಾಡಿದ, ವಿಧಾನ ವೀಧಿಯನ್ನು ಅಂಬೇಡ್ಕರ್ ಮಾರ್ಗ ಅಂತ ಮರುನಾಮಕರಣ ಮಾಡಿದಂತಹ ಕೀರ್ತಿ ಅವರಿಗೆ ಸಲ್ಲುತ್ತದೆ. ಗುಂಡೂರಾಯರನ್ನು ಇವತ್ತು ಮರೆಯಲಿಕ್ಕೆ ಸಾಧ್ಯವಿಲ್ಲ ......

**ಸಭಾಪತಿಯವರು:** .... ಈ ಸಂತಾಪ ಸೂಚನೆಯ ಮೇಲೆ ಎಲ್ಲರೂ ಕೂಡ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇವತ್ತು ಇವರೆಲ್ಲರೂ ಏನು ತೀರಿ ಹೋಗಿದ್ದಾರೆ ಅವರಿಗೆ ಮಾರ್ಕ್ಸ್ ಆಫ್ ರೆಸ್ಪೆಕ್ಟ್ ಸೂಚಿಸುವ ಸಲುವಾಗಿ ನಾವುಗಳೆಲ್ಲರೂ ಎರಡು ನಿಮಿಷ ಮೌನ ಆಚರಿಸೋಣ.

Speaker: "I will convey the sentiments and feelings of this house to the members of bereaved family. Now the house stands adjourned to meet tomorrow. at 9-30 Am."

## 2001-2002ನೇ ಸಾಲಿನ ಗ್ರಂಥಾಲಯ ಉಪ ಸಮಿತಿ ಸದಸ್ಯರುಗಳು

ಶ್ರೀಯುತರುಗಳಾದ:

| | | |
|---|---|---|
| 1. | ಬಿ.ಬಿ. ಶಿವಪ್ಪ | ವಿಧಾನಸಭಾ ಸದಸ್ಯರು ಹಾಗೂ ಸಮಿತಿಯ ಅಧ್ಯಕ್ಷರು |
| 2. | ಸುಭಾಷ್ ರುಕ್ಮಯ್ಯ ಗುತ್ತೇದಾರ್ | ವಿಧಾನಸಭಾ ಸದಸ್ಯರು ಹಾಗೂ ಸಮಿತಿಯ ಸದಸ್ಯರು |
| 3. | ಚಂದ್ರಕಾಂತ ಗುರಪ್ಪ ಬೆಲ್ಲದ್ | ,, ,, |
| 4. | ಉಮೇಶ್ ವಿ. ಕತ್ತಿ | ,, ,, |
| 5. | ಕೆ.ಎನ್. ಸುಬ್ಬಾರೆಡ್ಡಿ | ,, ,, |
| 6. | ಡಾ: ಎಲ್. ಹನುಮಂತಯ್ಯ | ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಸಮಿತಿ ಸದಸ್ಯರು |
| 7. | ಕೆ. ನಿರಂಜನ ನಾಯ್ಡು | ,, ,, |
| 8. | ಶ್ರೀಮತಿ ನಿರ್ಮಲಾ ವೆಂಕಟೇಶ್ | ,, ,, |

## 2002-03ನೇ ಸಾಲಿನ ಗ್ರಂಥಾಲಯ ಉಪಸಮಿತಿ ಸದಸ್ಯರುಗಳು

ಶ್ರೀಯುತರುಗಳಾದ:

| | | |
|---|---|---|
| 1. | ಬಿ.ಬಿ. ಶಿವಪ್ಪ | ವಿಧಾನಸಭಾ ಸದಸ್ಯರು ಹಾಗೂ ಸಮಿತಿಯ ಅಧ್ಯಕ್ಷರು |
| 2. | ಪಿ. ರಮೇಶ್ | ವಿಧಾನಸಭಾ ಸದಸ್ಯರು ಹಾಗೂ ಸಮಿತಿಯ ಸದಸ್ಯರು |
| 3. | ಡಾ॥ ಭಾರತಿ ಶಂಕರ್ | ,, ,, |
| 4. | ಡಿ.ಆರ್. ಪಾಟೀಲ್ | ,, ,, |
| 5. | ಕೆ.ಬಿ. ಚಂದ್ರಶೇಖರ್ | ,, ,, |
| 6. | ರಾಮಚಂದ್ರಗೌಡ | ವಿಧಾನ ಪರಿಷತ್ತಿನ ಸದಸ್ಯರು ಹಾಗೂ ಸಮಿತಿಯ ಸದಸ್ಯರು |
| 7. | ಡಾ॥ ಎಂ.ಪಿ. ನಾಡಗೌಡ | ,, ,, |
| 8. | ಎಂ.ಎಸ್. ಸಿದ್ದರಾಜು | ,, ,, |

ಪ್ರತಿಭಾವಂತ ಸಂಸದೀಯ ಪಟುಗಳ ಬದುಕು-ಬರಹಮಾಲಿಕೆ

ಸಂಪಾದಕ ವರ್ಗ

ಶ್ರೀಯುತರುಗಳಾದ:

1. ಟಿ. ರಾಜಣ್ಣ

   ಕಾರ್ಯದರ್ಶಿ

2. ಎಸ್.ಬಿ. ಪಾಟೀಲ್,

   ಅಪರ ಕಾರ್ಯದರ್ಶಿ

3. ಟಿ.ಎನ್. ಧ್ರುವಕುಮಾರ್

   ಜಂಟಿ ಕಾರ್ಯದರ್ಶಿ

4. ಡಾ: ಎಸ್. ಚಂದ್ರಪ್ಪ

   ಸಂಶೋಧನಾಧಿಕಾರಿ

5. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ

   ಶಾಖಾಧಿಕಾರಿ

KARNATAKA LEGISLATURE LIBRARY
BANGALORE
STOCK NO C-6141
DATE 22/08/03